ಟೇಕ್ವಾಂಡೋ ಸ್ಪರ್ಧೆ,ಶ್ರೀ ಜೆ.ಸಿ.ಬಿ.ಎಂ. ಕಾಲೇಜಿಗೆ ಪದಕ



ಚಿಕ್ಕಮಗಳೂರು : ಇಲ್ಲಿನ ಐ.ಡಿ.ಎಸ್.ಜಿ. ಕಾಲೇಜಿನಲ್ಲಿ ಇತ್ತೀಚೆಗೆ ನಡೆದ ಕುವೆಂಪು ವಿಶ್ವವಿದ್ಯಾನಿಲಯದ ಅಂತರಕಾಲೇಜು ಟೇಕ್ವಾಂಡೋ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದ ಶೃಂಗೇರಿ ಶ್ರೀ ಜೆ.ಸಿ.ಬಿ.ಎಂ. ಕಾಲೇಜಿನ ವಿದ್ಯಾರ್ಥಿ ವಿ. ಚರಣ್ 63 ಕೆ.ಜಿ. ವಿಭಾಗದಲ್ಲಿ ಚಿನ್ನದ ಪದಕವನ್ನೂ ಹಾಗೂ ಅಭಿಷೇಕ್ ಎಸ್. ಕುಲಾಲ್ 58 ಕೆ.ಜಿ. ವಿಭಾಗದಲ್ಲಿ ಬೆಳ್ಳಿ ಪದಕವನ್ನು ಗಳಿಸುವಲ್ಲಿ ಯಶಸ್ವಿಯಾಗಿದ್ದಾರೆ. ಚಿತ್ರದಲ್ಲಿ ಕಾಲೇಜಿನ ಪ್ರಾಂಶುಪಾಲ ಡಾ. ಸ್ವಾಮಿ ಹಾಗೂ ಉಪನ್ಯಾಸಕರೊಂದಿಗೆ ಹೆಚ್ಚಿನ ಸಾಧನೆ ತೋರಿದ ವಿದ್ಯಾರ್ಥಿಗಳನ್ನು ಕಾಣಬಹುದಾಗಿದೆ.

Scanned by CamScanner

ಓದುವ ಅಭಿರುಚಿ ಇದ್ದರೆ ಜ್ಞಾನ ವೃದ್ಧಿಯಾಗುತ್ತದೆ

ಕಾಡದೇವರಮಠ್

ಶೃಂಗೇರಿ : ಇಲ್ಲಿನ ಶ್ರೀ.ಜೆ.ಸಿ.ಬಿ.ಎಂ. ಕಾಲೇಜಿನ ಮುಖ್ಯ ಸಭಾಂಗಣದಲ್ಲಿ, ಕಾಲೇಜಿನ ಗ್ರಂಥಾಲಯ ವಿಭಾಗ ಹಾಗೂ ತುಮಕೂರಿನ ರೀಡ್ ಬುಕ್ ಫೌಂಡೇಶನ್ ಇವರ ಸಹಯೋಗ ದೊಂದಿಗೆ "ನನ್ನ ಏಳ್ಗೆಗೆ ನಾನೇ ಶಿಲ್ಪಿ" ಉಪ ನ್ಯಾಸ ಕಾರ್ಯಕ್ರಮವು ಇತ್ತೀಚೆಗೆ ನಡೆಯಿತು.



ಈ ಸಂದರ್ಭದಲ್ಲಿ ಪ್ರಧಾನ ಉಪನ್ಯಾಸ ಮಾಡಿದ ಡಾ.ಎಸ್.ಎಲ್ ಕಾಡದೇವರಮಠ್, ಓದುವ ಅಭಿರುಚಿ ಇದ್ದರೆ ಜ್ಞಾನ ವೃದ್ಧಿಯಾಗುತ್ತದೆ ಜ್ಞಾನ ದಿಂದ ಆತ್ಮ ವಿಶ್ವಾಸದ ಬದುಕು ರೂಪಿಸಿಕೊ ಳ್ಳಲು ಸಾಧ್ಯವಾಗುತ್ತದೆ, ಅಲ್ಲದೆ ಪುಸ್ತಕಗಳನ್ನು ಓದುವುದರ ಮೂಲಕ ನಮಗೆ ಆತ್ಮತೃಪ್ತಿ ಸಿಗು ತ್ತದೆ. ಇಂದಿನ ಯುವಜನತೆ ಗುರಿಗಳನ್ನು ಹೊಂ ದಿದ್ದಲ್ಲಿ ಮಾತ್ರ ಸಾಧನೆಗೆ ಸಾಧ್ಯ ಇಲ್ಲವಾದಲ್ಲಿ ಶೂನ್ಯವಾಗುತ್ತದೆ. ಮಾಹಿತಿ ತಂತ್ರಜ್ಞಾನದಿಂದ ಒಳ್ಳೆಯ ಮತ್ತು ಕೆಟ್ಟ ಸಂದೇಶಗಳನ್ನು ನಾವುಗಳು ನಿರ್ಧರಿಸಬೇಕು ಇದು ವಿದ್ಯಾರ್ಥಿಗಳ ಜೀವನ ರೂಪಿಸಲು ಗುರಿಗಳನ್ನು ಹೊಂದಲು ಸಹಕಾರಿ ಯಾಗುತ್ತದೆ ಎಂದರು. ಕಾಲೇಜಿನ ಪ್ರಾಂಶುಪಾಲ ರಾದ ಡಾ. ಎಂ. ಸ್ವಾಮಿ ಅಧ್ಯಕ್ಷೀಯ ನುಡಿಗಳ ನ್ನಾಡಿ ವಿದ್ಯಾರ್ಥಿಗಳು ಸಾಹಿತ್ಯಾಭಿರುಚಿಗಳನ್ನು ಬೆಳಸಿಕೊಳ್ಳಬೇಕು ಮತ್ತು ಸ್ಪರ್ಧಾತ್ಮಕಯುಗದಲ್ಲಿ ಓದುವ ಹವ್ಯಾಸಗಳು ಪ್ರಮುಖವಾದದ್ದು ಎಂದ ರು. ಕಾಲೇಜಿನ ಪದವಿ ಪೂರ್ವವಿಭಾಗದ ಸಂಚಾಲಕ ಎ.ಜಿ.ಪ್ರಶಾಂತ್ ಮಾತನಾಡಿ, ನಮ್ಮ ಯುವಕರಲ್ಲಿ ಮೊಬೈಲ್ ಹಾವಳಿಯಿಂದ ಓದುವ ಆಸಕ್ತಿ ಕಡಿಮೆಯಾಗುತ್ತಿದೆಯೆಂದು ವಿಷಾದಿಸಿದರು. ಕಾಲೇಜಿನ ಗ್ರಂಥಾಲಯವು ಉತ್ತಮ ಪುಸ್ತಕಗಳನ್ನು ಹೊಂದಿದ್ದು ಅದರ ಸದುಪಯೋಗವನ್ನು ವಿದ್ಯಾ ರ್ಥಿಗಳು ಪಡೆದುಕೊಳ್ಳಬೇಕೆಂದರು. ಪ್ರೋ. ಎಂ.ವಿ. ವಿದ್ಯಾಧರ ಮುಂತಾದವರು ಉಪಸ್ಥಿತರಿದ್ದರು. ಕಾರ್ಯಕ್ರಮಕ್ಕೆ ಸರ್ವರನ್ನು ಗ್ರಂಥಪಾಲಕ ಹೆಚ್.ಇ. ಪ್ರಸನ್ನ ಕುಮಾರ್ ಸ್ವಾಗತಿಸಿದರೆ, ಉಪನ್ಯಾಸಕರಾದ ಬಿ.ಡಿ. ಸಂತೋಷ ನಿರೂಪಿಸಿದರು, ಉಪನ್ಯಾಸಕಿ ಅಂಜನ ಸರ್ವರಿಗೂ ವಂದಿಸಿದರು.

Scanned by CamScanner

ಮಾತು ಸಾಧನೆಯಾಗಬಾರದು. ಸಾಧನೆಗಳು ಮಾತನಾಡಬೇಕು

ಶೃಂಗೇರಿ : ಪಟ್ಟಣದ ಶ್ರೀ ಜೆ.ಸಿ.ಬಿ.ಎಂ. ಕಾಲೇಜಿನ ಮುಖ್ಯ ಸಭಾಂಗಣದಲ್ಲಿ ಶ್ರೀ ಚಂದ್ರ ಶೇಖರ ಭಾರತೀ ಮಹಾಸ್ವಾಮಿಗಳ ಸಂಸ್ಮರಣೆ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭವು ಫೆ. 20 ರಂದು ನಡೆಯಿತು. ಸಮಾರಂಭದ



ಸಾನಿಧ್ಯ ವಹಿಸಿ ಮಾತನಾಡಿದ ಹರಿಹರಪುರ ಮಠಾಧೀಶ ಶ್ರೀ ಶ್ರೀ ಸಚ್ಚಿದಾನಂದ ಸರಸ್ವತಿ ಮಹಾಸ್ವಾಮಿಗಳವರು, ಮಾತು ಸಾಧನೆಯಾಗಬಾರದು. ಸಾಧನೆಗಳು ಮಾತನಾಡಬೇಕು. ನಮ್ಮ ಹಿರಿಯರು ಅಂಥಹ ಬದುಕನ್ನು ನಡೆಸಿ, ಜೀವನವನ್ನು ಸಾರ್ಥಕ್ಯಪಡಿಸಿಕೊಂಡರು ಎಂದು ಹೇಳಿದರು. ಮಲೆನಾಡು ಪ್ರದೇಶದಲ್ಲಿ ಶಿಕ್ಷಣಕ್ಕಾಗಿ ಆರು ದಶಕದ ಹಿಂದೆ ಸ್ಥಾಪಿಸಿದ ಶ್ರೀ ಜೆ.ಸಿ.ಬಿ.ಎಂ. ಕಾಲೇಜಿನಿಂದ ಸಾವಿರಾರು ಜನರು ಪದವಿಧರರಾಗಿ ದೇಶ, ವಿದೇಶದಲ್ಲಿ ಉದ್ಯೋಗ ಪಡೆಯುವಂತಾಗಿದೆ. ಪ್ರಕೃತಿ ನಮಗೆ ಪಾಠವನ್ನು ಹೇಳುತ್ತದೆ. ಕೆಸರಿನಲ್ಲಿ ಹುಟ್ಟಿದ ಕಪ್ಪೆ ಮಟಗುಟ್ಟಿ ಒಂದು ದಿನ ಅಲ್ಲಿಯೇ ಸಾಯುತ್ತದೆ. ಅದೇರೀತಿ ಕಮಲ ಅದೇ ಕೆಸರಿನಲ್ಲಿ ಹುಟ್ಟಿ ಕೆಸರನ್ನು ಅಂಟಿಸಿಕೊಳ್ಳದೇ ಲಕ್ಷ್ಮೀಯ ಕರವನ್ನು ಸೇರುವುದು. ಕಮಲದಂತೆ ನಮ್ಮ ಬಾಳು ಸಾರ್ಥಕತೆಯನ್ನು ಹೊಂದಬೇಕು ಎಂದರು. ಶಾಸಕ ಟಿ.ಡಿ. ರಾಜೇಗೌಡ ಮಾತನಾಡಿ, ಸರ್ಕಾರ ಸಂಪೂರ್ಣ ಸಾಕ್ಷರತೆಯನ್ನು ನೀಡಲು ವಿಫಲವಾಗುತ್ತಿದ್ದ ದಿನದಲ್ಲಿ ಮಠ ಮಾನ್ಯಗಳು ಈ ಕಾರ್ಯವನ್ನು ಶ್ರದ್ಧೆಯಿಂದ ನಡೆಸಿಕೊಂಡು ಬಂದಿದೆ ಎಂದರು. ಶ್ರೀ ಚಂದ್ರಶೇಖರ ಭಾರತೀ ಮಹಾಸ್ವಾಮಿಗಳ ಬಗ್ಗೆ ಉಪನ್ಯಾಸ ನೀಡಿದ ಸಂಸ್ಕೃತ ಪ್ರಾಧ್ಯಾಪಕ ಮಹೇಶ್ ಕಾಕತ್ಕರ್, ಮಾತನಾಡಿ, ಗುರುಗಳು ತೋರಿದ ಬೆಳಕಿನಲ್ಲಿ ನಾವೆಲ್ಲರೂ ಸಾಗಬೇಕಿದೆ. ಬೇಕಾಗಿದ್ದನ್ನು ಪಡೆದುಕೊಂಡು, ಬೇಡವಾದ್ದನ್ನು ಬಿಟ್ಟು ಗುರಿಯ ದಿಕ್ಕಿನತ್ತ ವಿದ್ಯಾರ್ಥಿಗಳು ಸಾಗಬೇಕು ಎಂದರು. ಕಾರ್ಯಕ್ರಮದಲ್ಲಿ ಹೇರೂರು ಅನಂತ ಪದ್ಮನಾಭ ಭಟ್, ಡಾ. ಶ್ರೀನಿವಾಸರಾವ್, ದೇವದಾಸ್, ಪ್ರಾಂಶುಪಾಲ ಡಾ. ಸ್ವಾಮಿ, ವಾಣಿಜ್ಯ, ವಿಜ್ಞಾನ ಮತ್ತು ಕಲಾ ಸಂಘದ ಅಧ್ಯಕ್ಷರಾದ ಶ್ರೀಕರ, ನಿಖಿಲ್, ಮೇಧ ಮುಂತಾದವರು ಹಾಜರಿದ್ದರು.

ಇದೇ ಸಂದರ್ಭದಲ್ಲಿ ನಿವೃತ್ತ ಉಪನ್ಯಾಸಕ ಮುನೀರ್ ಅಹಮದ್ ರವರನ್ನು ಗೌರವಿಸಲಾಯಿತು. ರ್‍ಯಾಂಕ್ ವಿಜೇತರಾದ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಯಿತು. ಶ್ರೀಲಕ್ಷ್ಮಿ ಪ್ರಾರ್ಥಿಸಿದರೆ, ಬಿ.ಡಿ. ಸಂತೋಷ್ ಸ್ವಾಗತಿಸಿದರು.

Scanned by CamScanner

ಮಾನು ಸಾಧನೆಯಾಗಿ ಬಾರದು ಸಾಧನೆಗಳು ಮಾಡಬೇಕು : ಹರಿಹರಪುರ ಶ್ರೀಶ್ರೀಗಳವರು

ಮಾನು ಸಾಧನೆಯಾಗಿ ಬಾರದು ಸಾಧನೆಗಳು ಮಾಡಬೇಕು ನಮ್ಮ ಹಿರಿಯರು ಆಂತಹ ಬದುಕನ್ನು ನಡೆಸಿ ಬದುಕನ್ನು ಸಾರ್ಥಕ್ಯ ಪಡಿಸಿಕೊಂಡರು ಎಂದು ಹರಿಹರಪುರ ಶ್ರೀ ಶಾರದಾ ಲಕ್ಷ್ಮೀನರಸಿಂಹ ಪೀಠಾಧೀಶ್ವರ ಜಗದ್ಗುರು ಶ್ರೀಶ್ರೀ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿಗಳು ತಿಳಿಸಿದರು.

ಅವರು ಶೃಂಗೇರಿ ಜೆಸಿಬಿಎಂ ಕಾಲೇಜಿನ ಆವರಣದಲ್ಲಿ ಆಯೋಜಿಸಲಾಗಿದ್ದ ಜಗದ್ಗುರು ಚಂದ್ರಶೇಖರ ಭಾರತೀ ಮಹಾಸ್ವಾಮಿಗಳ ಸಂಸ್ಮರಣೆ ಕಾಲೇಜು ಸಂಸ್ಥಾಪಕರ ಸಂಸ್ಮರಣೆ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಪ್ರಕೃತಿ ನಮಗೆ ಬಾಹವನ್ನು ಹೇಳುತ್ತದೆ ಕೆಸರಿನಲ್ಲಿ ಹುಟ್ಟಿದ ಕಪ್ಪೆ ಮಟ ಗುಟ್ಟಿ ಒಯ್ದು ದಿವ ಅಲ್ಲೇ ಕೆಸರಲ್ಲೇ ಸಾಯುತ್ತವೆಯೋ ಅದೇ ರೀತಿ ಕಮಲ ಅದೇ ಕೆಸರಿನಲ್ಲಿ ಹುಟ್ಟಿ ಕೆಸರನ್ನು ಅಂಟಿಸಿಕೊಳ್ಳದೆ ಲಕ್ಷ್ಮಿಯ ಕರವನ್ನು ಸೇರುವುದು. ಅದೇ ರೀತಿಯಲ್ಲಿ ಕಮಲದಂತೆ ನಮ್ಮ ಬಾಳು ಸಾರ್ಥಕತೆಯನ್ನು ಹೊಂದಬೇಕು ಎಂದರು. ಕಾಲೇಜು ವಿಶ್ವಸ್ಥ ಮಂಡಳಿಯ ಸದಸ್ಯರಾದ ಶ್ರೀ ಅನಂತ ಪದ್ಮನಾಭ ಭಟ್ ಮಾತನಾಡಿ ಹರಿಹರಪುರ ಮಠಾಧೀಶ ಶ್ರೀ ಶ್ರೀ ರಾಮಾನಂದ ಸರಸ್ವತೀ ಸ್ವಾಮೀಜಿಗಳವರ ಆಶಯ ಹಾಗೂ ಪುಲುಗಾರು ಶ್ರೀ ಚಂದ್ರಮೌಳಿರಾಯರ, ಶ್ರೀ ಟಿಎಂಎ ಪೈಯವರ, ಶ್ರೀ ಮಾಧವ ಪೈಯವರ ಹಾಗೂ ಅಂದಿನ ಶಾಸಕ ಶ್ರೀ ಕೆ.ಎಸ್. ಪುರಪ್ಪಗೌಡರ ಸಹಕಾರವನ್ನು ಸ್ಮರಿಸಿದರು. ಕಾಲೇಜಿನ ಪ್ರಾಂಶುಪಾಲರಾದ ಡಾ. ಎಂ ಸ್ವಾಮಿ ಮಾತನಾಡಿ ಪ್ರಾಚೀನ ಶೈಕ್ಷಣಿಕ ಪರಂಪರೆಯಂತೆ ನೀಡುವ ಕೌಶಲ್ಯ ಅಭಿವೃದ್ಧಿ ಚಟುವಟಿಕೆಗಳ ಮಾಹಿತಿ ನೀಡಿದರು.



ವರದಿಯನ್ನು ಮಂಡಿಸಿದರು. ಶಾಸಕ ಟಿ.ಡಿ. ರಾಜೇಗೌಡ ಮಾತನಾಡಿ ಸರ್ಕಾರಗಳು ಸಂಪೂರ್ಣ ಸಾಕ್ಷರತೆಯನ್ನು ನೀಡಲು ವಿಫಲವಾಗುತ್ತಿದ್ದ ದಿನಗಳಲ್ಲಿ ಮಠಮಾನ್ಯಗಳು ಈ ಕಾರ್ಯವನ್ನು ಶ್ರದ್ಧೆಯಿಂದ ನಡೆಸಿಕೊಂಡು ಬರುತ್ತಿರುವುದನ್ನು ಸ್ಮರಿಸಿದರು. ಜಗದ್ಗುರು ಶ್ರೀ ಶ್ರೀ ಚಂದ್ರಶೇಖರ ಭಾರತಿ ಮಹಾಸ್ವಾಮಿಗಳ ಕುರಿತು ವಿಶೇಷ ಉಪನ್ಯಾಸ ನೀಡಿದ ಡಾ. ಮಂಜೇಶ್ ಎನ್ ಕಾಕ್ಕಿಲ್ ಅವರು ಗುರುಗಳು ತೋರಿದ ಬೆಳಕಿನಲ್ಲಿ ಸಾಗಬೇಕಿದೆ ಎಂದರು. ಬೇಕಾದ್ದನ್ನು ಪಡೆದುಕೊಂಡು ಬೇಡವಾದ ದ್ದನ್ನು ಬಿಟ್ಟು ಗುರಿಯ ಸಾಧನೆಯತ್ತ ಸಾಗುವಂತೆ ವಿದ್ಯಾರ್ಥಿಗಳಿಗೆ ಕರೆ ನೀಡಿದರು. ವೇದಿಕೆಯಲ್ಲಿ ಡಾ ಶ್ರೀನಿವಾಸ್ ರಾವ್ , ದೇವದಾಸ್, ವಾಣಿಜ್ಯ ವಿಚ್ಚಾಸ ಮತ್ತು ಕಲಾ ಸಂಘದ ಅಧ್ಯಕ್ಷರುಗಳಾದ ಶ್ರೀ ಕರ, ನಿಖಿಲ್, ಮೇಧಾ ಉಪಸ್ಥಿತರಿದ್ದರು ಕಾರ್ಯಕ್ರಮದ ಆರಂಭದಲ್ಲಿ ಸಂತೋಷ್ ಬಿ.ಡಿ. ಸ್ವಾಗತಿಸಿ, ಶ್ರೀಲಕ್ಷ್ಮಿ ಪ್ರಾರ್ಥಿಸಿದರು. ವೇದಿಕೆಯಲ್ಲಿ ನಿವೃತ್ತ ಉಪನ್ಯಾಸಕರಾದ ಮುನಿರ್ ಅಹ್ಮದ್ ದಂಪತಿಗಳನ್ನು ಸನ್ಮಾನಿಸಲಾಯಿತು.

ರ್‍ಯಾಂಕ್ ವಿಜೇತರು ಪ್ರತಿಭಾನ್ವಿತರಿಗೆ ಪುರಸ್ಕಾರ

2017–18ನೇ ಸಾಲಿನಲ್ಲಿ ಜೆ.ಸಿ.ಬಿ.ಎಂ. ಕಾಲೇಜಿಗೆ 4 ರ್‍ಯಾಂಕ್‌ಗಳು ಬಂದಿದ್ದು ರ್‍ಯಾಂಕ್ ವಿಜೇತರು ಸೇರಿದಂತೆ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಡಾ। ಟಿ.ಎಂ.ಎ ಪೈ ಸ್ಮಾರಕ ಬಂಗಾರದ ಪದಕ ಪುರಸ್ಕಾರಕ್ಕೆ ಬಿ.ಎಸ್.ಸಿ. (ಸಿ.ಬಿ.ಝಡ್.) ಪಲ್ಲಿ 9 ನೇ ರ್‍ಯಾಂಕ್‌ಗಳಿಸಿದ ಕೊಪ್ಪ ತಾ। ಕಮಲಾಪುರ ಜೆ.ಎ. ಶ್ರೀನಿವಾಸ್ ಮತ್ತು ಹರಿಣಾಕ್ಷಿ ದಂಪತಿಗಳ ಸುಮತ್ರಿ ಕು। ಮಾಧವಿ ಜಿ.ಎಸ್. ಗಾಯಕ್ತ ಶೇಖರ ಶ್ರೀ ಚಂದ್ರಮೌಳಿ ರಾವ್ ಸ್ಮಾರಕ ಬಂಗಾರದ ಪದಕ ಪುರಸ್ಕಾರಕ್ಕೆ ಬಿ.ಕಾಂ.

ಮುಂದಿನ ಪುಟಕ್ಕೆ—

Scanned by CamScanner

ರ್‍ಯಾಂಕ್ ವಿಜೇತರು ಪ್ರತಿಭಾನ್ವಿತರಿಗೆ ಪುರಸ್ಕಾರ

ಮೊದಲ ಪುಟದಿಂದ...

ನಲ್ಲಿ 6ನೇ ರ್‍ಯಾಂಕ್ ಗಳಿಸಿದ ನೆವಾ್ಟರು ಸಸಿ ತೋಟ ಪುರುಷೋತ್ತಮ ಎಸ್.ಎನ್. ಮತ್ತು ಶಶಿಕಲಾ ದಂಪತಿಗಳ ಸುಪುತ್ರಿ ನಮಿತಾ ಎಸ್.ಪಿ., ಶ್ರೀ ಕೆ.ಎ.ನ್. ವೀರಪ್ಪಗೌಡ ಸ್ಮಾರಕ ಬಂಗಾರದ ಪದಕ ಪುರಸ್ಕಾರಕ್ಕೆ ಬಿ.ಎ. ನಲ್ಲಿ 2ನೇ ರ್‍ಯಾಂಕ್ ಗಳಿಸಿದ ಶೃಂಗೇರಿ ನೇರಳಕುಡಿಗೆ ಕವಿಕುಟೀರದ ಡಾ. ಆಗುಂಬೆ ಗಣೇಶ್ ಹೆಗ್ಗಡೆ ಮತ್ತು ಶಾಂತಾ ಹೆಗ್ಗಡೆ ದಂಪತಿಗಳ ಸುಪುತ್ರಿ ಕು॥ ಸಿಂಧು ಹೆಗ್ಗಡೆ, ಹಾಗೂ ಸದ್ಯರು ಸ್ವರ್ಣಪದಕ ಪುರಸ್ಕಾರಕ್ಕೆ ಬಿ.ಎಸ್.ಸಿ. (ಸಿ.ಬಿ.ಝಡ್) ನಲ್ಲಿ 10ನೇ ರ್‍ಯಾಂಕ್ ಗಳಿಸಿದ ಶೃಂಗೇರಿ ತಾ॥ ಕಾವಡಿ ಚಗತೆ ಶ್ರೀಧರ್ ಮತ್ತು ವಿನೋದರವರ ಸುಪುತ್ರಿ ಕು॥ ದಿವ್ಯಾಶ್ರೀ ಸಿ.ಎಸ್. ಬಿ.ಎ. ನಲ್ಲಿ ಶೇ. 83.25 ಅಂಕ ಗಳಿಸಿದ ಕೊಪ್ಪ ತಾ॥ ಕೆಲಕುಳಿ ಸಿದ್ದಮತ ತಿಮ್ಮಪ್ಪ ಗೌಡ ಮತ್ತು ಶಶಿಕಲಾ ಇವರ ಸುಪುತ್ರಿ ಎಂ.ಟಿ. ಪ್ರಣೀತಾ ಹಾಗೂ ಬಿ.ಕಾಂ. ನಲ್ಲಿ ಶೇ. 91.13 ಅಂಕಗಳಿಸಿದ ತ್ಯಾವಣ ಬೆಂಕಿಕುಡಿಗೆ ಬಿ.ವಿ. ಕೃಷ್ಣಮೂರ್ತಿ ಮತ್ತು ಶಾರದಾ ಇವರ ಸುಪುತ್ರ ಅಭಿಷೇಕ್ ಬಿ.ಕೆ. ಪಾತ್ರರಾದರು. ರ್‍ಯಾಂಕ್ ವಿಜೇತರೊಂದಿಗೆ 2017-18ರಲ್ಲಿ ಕಾಲೇಜಿನ ಉತ್ತಮ



ವಿದ್ಯಾರ್ಥಿಗಳಾಗಿ ಹೊರ ಹೊಮ್ಮಿದ ಶಿವಮೊಗ್ಗ ಕಾಚಿನ ಕಟ್ಟೆ ಕೃಷ್ಣಪ್ಪ ಟಿ.ವಿ. ಮತ್ತು ಶಶಿಕಲಾರವರ ಸುಪುತ್ರಿ ಪದವಿ ವಿಭಾಗದಲ್ಲಿ ಬಿ.ಕಾಂ ವಿದ್ಯಾರ್ಥಿ ಕಾವ್ಯ ಕೆ.ಬಿ. ಹಾಗೂ ಭಾರತೀನಗರ ಹೊಸಕೆರೆ ಗಣೇಶ್ ಹೆಚ್.ಎಸ್. ಮತ್ತು ವೀಣಾ ಹೆಚ್.ಬಿ.ರವರ ಸುಪುತ್ರಿ ಕು॥ ಅಶ್ವಿನಿ ಹೆಚ್.ಜಿ. ಪಿಯುಸಿ ವಿಭಾಗದಲ್ಲಿ ಪ್ರತಿಭಾ ಪುರಸ್ಕಾರಕ್ಕೆ ಪಾತ್ರರಾದರು.

Scanned by CamScanner

ಪ್ರತಿ ಮತವೂ ಮಹತ್ವದ್ದು,ತಪ್ಪದೇ ಚಲಾಯಿಸಿ

■ ವಿಕ ಸುದ್ದಿಲೋಕ ಶೃಂಗೇರಿ

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಯೊಂದು ಮತವೂ ಮಹತ್ವದ್ದಾಗಿದೆ ಎಂದು ಶಿಶು ಅಭಿವೃದ್ಧಿ ಅಧಿಕಾರಿ ಮತ್ತು ಚುನಾವಣಾಧಿಕಾರಿ ಟಿ.ಎಲ್. ಉಮೇಶ್ ಹೇಳಿದರು.

ಜೆಸಿಬಿಎಂ ಕಾಲೇಜಿನಲ್ಲಿ ಗುರುವಾರ ರಾಷ್ಟ್ರೀಯ ಸೇವಾ ಯೋಜನೆ ಮತ್ತು ಮತದಾನ ಸಾಕ್ಷರತಾ ಕ್ಲಬ್ ಸಹಯೋಗದಲ್ಲಿ ಏರ್ಪಡಿಸಿದ್ದ ಮತದಾನ ಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿದರು. ಪ್ರತಿಯೊಬ್ಬರೂ ತಪ್ಪದೇ ಮತ ಚಲಾಯಿಸಿ. ದೇಶದ ವ್ಯವಸ್ಥೆಯನ್ನು ಪ್ರಗತಿಯತ್ತ ಕೊಂಡೊಯ್ಯುವಲ್ಲಿ ನಮ್ಮ ಪಾತ್ರ ಏಂದರೆ ಅದು ಮತದಾನ. ಹೊಸ ಮತದಾರರಿಗೆ ಹೇಗೆ ಮತ ಚಲಾಯಿಸ ಬೇಕೆಂಬ ಗೊಂದಲ ಇರುತ್ತದೆ ಹಾಗೂ ಮತ ಯಂತ್ರದ ಬಳಕೆಯ ಬಗ್ಗೆ ಅನುಮಾನಗಳಿರುತ್ತವೆ. ಅವುಗಳನ್ನು ಪರಿಹರಿಸಲೆಂದೇ ಮತದಾನ ಜಾಗೃತಿ ಅಭಿಯಾನವನ್ನು ನಡೆಸಲಾಗುತ್ತದೆ. ಮತ ಯಂತ್ರಗಳ ಬಳಕೆಯಿಂದಾಗಿ ಮತದಾನ ಹಾಗೂ ಮತ ಎಣಿಕೆಯ ಪ್ರಕ್ರಿಯೆ ತ್ವರಿತವಾಗಿ ನಡೆಯಲು ಸಹಾಯಕವಾಗುತ್ತಿದೆ. ಯಾವ ಅಭ್ಯರ್ಥಿಗೆ ಮತ ಚಲಾವಣೆಯಾಗಿದೆ ಎಂಬುದನ್ನು ವಿ.ವಿ. ಪ್ಯಾಟ್ ಯಂತ್ರದ ಮೂಲಕ ಪರೀಕ್ಷಿಸಬಹುದಾಗಿದೆ ಎಂದರು. ಅಧ್ಯಕ್ಷತೆಯನ್ನು ಪ್ರಾಂಶು ಪಾಲ ಡಾ.ಸ್ವಾಮಿ ವಹಿಸಿದ್ದರು.

ಚುನಾವಣೆ ಸಾಕ್ಷರತಾ ಕ್ಲಬ್‌ನ ಸಂಪಾದಕ ಸಂತೋಷ್ ಕುಮಾರ್, ವಿದ್ಯಾರ್ಥಿ ಕ್ಷೇಮಪಾಲನಾಧಿಕಾರಿ ಶ್ರೀನಿವಾಸ್ ರಾವ್ ಉಪಸ್ಥಿತರಿದ್ದರು.



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ಮತದಾನ ಜಾಗೃತಿ ಕಾರ್ಯಕ್ರಮ ನಡೆಯಿತು.

Scanned by CamScanner

ಶುಕ್ರವಾರ • ಮಾರ್ಚ್ 22, 2019 ಪ್ರಜಾವಾಣಿ

ಚುನಾವಣಾಧಿಕಾರಿ ಉಮೇಶ್ ಟಿ.ಎಲ್ ಅಭಿಮತ

ಪ್ರತಿಯೊಂದು ಮತವೂ ಮಹತ್ವದ್ದು

ಪ್ರಜಾವಾಣಿ ವಾರ್ತೆ

ಶೃಂಗೇರಿ: 'ಪ್ರತಿಯೊಂದು ಮತವೂ ಮಹತ್ವದ್ದಾಗಿದ್ದು, ಪ್ರತಿಯೊಬ್ಬರೂ ತಪ್ಪದೇ ಮತ ಚಲಾಯಿಸಬೇಕು. ದೇಶದ ವ್ಯವಸ್ಥೆಯನ್ನು ಪ್ರಗತಿಯತ್ತ ಕೊಂಡೊಯ್ಯುವಲ್ಲಿ ಮತದಾನದ ಪಾತ್ರ ಪ್ರಮುಖವಾಗಿದೆ' ಎಂದು ಶಿಕ ಅಭಿವೃದ್ಧಿ ಅಧಿಕಾರಿ ಮತ್ತು ಚುನಾವಣಾಧಿಕಾರಿ ಉಮೇಶ್ ಟಿ.ಎಲ್. ಹೇಳಿದರು.

ಶೃಂಗೇರಿ ಜೆ.ಸಿ.ಬಿ.ಎಂ. ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾಯೋಜನೆ ಮತ್ತು ಮತದಾನ ಸಾಕ್ಷರತಾ ಕ್ಲಬ್ ಸಹಯೋಗದಲ್ಲಿ ನಡೆದ ಮತದಾನ ಜಾಗೃತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಹೊಸ ಮತದಾರರಿಗೆ ಹೇಗೆ ಮತ ಚಲಾಯಿಸಬೇಕು ಎಂಬುದರ ಕುರಿತು ಗೊಂದಲ ಇರುತ್ತದೆ. ಹಾಗೆಯೇ, ಮತಯಂತ್ರದ ಬಳಕೆಯ ಬಗ್ಗೆಯೂ ಅನುಮಾನಗಳಿರುತ್ತವೆ. ಅವುಗಳನ್ನು ಪರಿಹರಿಸಲೆಂದೇ ಮತದಾನ ಜಾಗೃತಿ ಅಭಿಯಾನ ನಡೆಸಲಾಗುತ್ತಿದೆ' ಎಂದು ತಿಳಿಸಿದರು.

'ಮತಯಂತ್ರಗಳ ಬಳಕೆಯಿಂದಾಗಿ ಮತದಾನ ಹಾಗೂ ಮತ ಎಣಿಕೆಯ ಪ್ರಕ್ರಿಯೆಗಳು ತ್ವರಿತವಾಗಿ ನಡೆಯಲು ಸಾಧ್ಯವಾಗುತ್ತಿದೆ. ಅಲ್ಲದೇ ಯಾವ ಅಭ್ಯರ್ಥಿಗೆ ಮತ ಚಲಾವಣೆಯಾಗಿದೆ ಎಂಬುದನ್ನು ವಿ.ವಿ.ಪ್ಯಾಟ್ ಮೂಲಕ ಪರೀಕ್ಷಿಸಬಹುದಾಗಿದೆ' ಎಂದು ಮಾಹಿತಿ ನೀಡಿ, ಪ್ರಾತ್ಯಕ್ಷಿತೆಯೊಂದಿಗೆ ವಿವರಿಸಿದರು.

ಮುಖ್ಯಾಂಶಗಳು

- ಪ್ರತಿಯೊಬ್ಬರೂ ತಪ್ಪದೇ ಮತ ಚಲಾಯಿಸಿ
- ಚುನಾವಣೆ ಬಗ್ಗೆ ಜಾಗೃತಿ ಮೂಡಿಸಿ
- ಚುನಾವಣೆ ಪ್ರಜಾತಂತ್ರದ ಹಬ್ಬ, ತಪ್ಪದೇ ಸಂಭ್ರಮಿಸಿ



ಶೃಂಗೇರಿ ಜೆ.ಸಿ.ಬಿ.ಎಂ. ಕಾಲೇಜಿನಲ್ಲಿ ನಡೆದ ಮತದಾನ ಜಾಗೃತಿ ಕಾರ್ಯಕ್ರಮದಲ್ಲಿ ಚುನಾವಣಾಧಿಕಾರಿ ಟಿ.ಎಲ್.ಉಮೇಶ್ ವ್ಯಾತ್ಯಕ್ಷಿಕೆ ನೀಡಿದರು.

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಉಪನ್ಯಾಸಕ ಹಾಗೂ ಚುನಾವಣೆ ಸಾಕ್ಷರತಾ ಕ್ಲಬ್‌ನ ಸಂಪಾದಕ ಸಂತೋಷ್ ಕುಮಾರ್ ಮಾತನಾಡಿ, 'ಚುನಾವಣೆ ಪ್ರಜಾತಂತ್ರದ ಹಬ್ಬ. ನೀವು ಮತದಾನ ಮಾಡುವುದರೊಂದಿಗೆ ಇತರರಲ್ಲೂ ಈ ಕುರಿತ ಜಾಗೃತಿ ಮೂಡಿಸಿ. ಮತದಾನದ ದಿನವನ್ನು ಕೇವಲ ರಜಾದಿನವೆಂದು ಪರಿಗಣಿಸದೇ ಪ್ರತಿಯೊಬ್ಬರೂ ತಮ್ಮ ಹಕ್ಕು ಚಲಾಯಿಸಿ' ಎಂದು ತಿಳಿಸಿದರು.

ಪ್ರಾಚಾರ್ಯ ಡಾ. ಎಂ.ಸ್ವಾಮಿ, ವಿದ್ಯಾರ್ಥಿ ಕ್ಷೇಮಪಾಲನಾ ಅಧಿಕಾರಿ ಶ್ರೀನಿವಾಸ್ ರಾವ್ ಉಪಸ್ಥಿತರಿದ್ದರು.

Mangaluru

Scanned by CamScanner

ಕನ್ನಡಪ್ರಭ
ಗುರುವಾರ 21.3.2019

ರಾಷ್ಟ್ರ ಅಭಿವೃದ್ಧಿ ಸಾಧಿಸಲು ವಿಜ್ಞಾನ ಅನಿವಾರ್ಯ: ಪ್ರೊ.ನಾಗರಾಜು

ಕೃಂಗೇರಿ: ಯಾವುದೇ ರಾಷ್ಟ್ರದ ಅಭಿವೃದ್ಧಿಯಲ್ಲಿ ವಿಜ್ಞಾನ ಪಾತ್ರ ಮಹತ್ವದಾಗಿದೆ. ವಿಜ್ಞಾನವಿದೇಕದಪ್ಪಗಿ, ತಾಂತ್ರಿಕ ವ್ಯಗತಿಗೆ ಪೂರಕವಾಗಿದೆ ಎಂದು ಬೆಂಗಳೂರಿನ ಶಿಕ್ಷಣ ತಜ್ಞ ಪ್ರೊ. ಎಂ.ಆರ್. ನಾಗರಾಜು ಹೇಳಿದರು.

ಪಟ್ಟಣದ ಜೆಸಿಬಿಎಂ ಕಾಲೇಜಿನಲ್ಲಿ ಕರ್ನಾಟಕ ವಿಜ್ಞಾನ ಹಾಗೂ ತಂತ್ರಜ್ಞಾನ ಅಕಾಡೆಮಿ ಹಾಗೂ ಶ್ರೀ ಜೆ.ಸಿ.ಬಿ.ಎಂ. ಕಾಲೇಜು, ವಿಜ್ಞಾನ ಸಂಘ ಆಶ್ರಯದಲ್ಲಿ 'ಜನತೆಗಾಗಿ ವಿಜ್ಞಾನ, ವಿಜ್ಞಾನಕ್ಕಾಗಿ ಜನತೆ' ಕೀರ್ಮಿಕೆಯಲ್ಲಿ ನಡೆದ ವಿಜ್ಞಾನ ದಿನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ವಿಜ್ಞಾನವು ಮನುಷ್ಯನ ಜೀವನದಲ್ಲಿ ಹಾಸು ಹೊಕ್ಕಾಗಿದ್ದು, ಮನುಕುಲದ ಉಜ್ವಲ ಭವಿಷ್ಯಕ್ಕಾಗಿ ಎಚ್ಚರಿಕೆಯಿಂದ ಬಳಕೆಯಾಗಬೇಕಿದೆ. ವಿಜ್ಞಾನ ಅಭಿವೃದ್ಧಿಗೇ ಹೊರತು, ವಿನಾಶಕ್ಕೆ ಅಲ್ಲ. ಅಮೆರಿಕ, ಜಪಾನ್, ಚೀನಾ ಮೊದಲಾದ ಮುಂದುವರಿದ ದೇಶಗಳು ಅಭಿವೃದ್ಧಿಯಾಗಲು ವಿಜ್ಞಾನವೇ ಕಾರಣ. ಭಾರತವೂ ಇಂದು ವೈಜ್ಞಾನಿಕವಾಗಿ ಮುನ್ನಡೆಯುತ್ತಿದೆ. ಜಗತ್ತಿನ ಮುಂದುವರಿದ ರಾಷ್ಟ್ರಗಳ ಸಾಲಿಗೆ ಸೇರುತ್ತಿದೆ ಎಂದರು ಹೇಳಿದರು.

ಮೂಢನಂಬಿಕೆಗಳನ್ನು ದೂರವಾಗಿಸಲು ವಿದ್ಯಾರ್ಥಿ ಜೀವನದಲ್ಲಿ ವೈಜ್ಞಾನಿಕ ವಿಮರ್ಶೆಯನ್ನು ವಿದ್ಯಾರ್ಥಿಗಳು ಮೈಗೂಡಿಸಿಕೊಳ್ಳಬೇಕು. ಆ ಮೂಲಕ ಸ್ವಸ್ಥ ಸಮಾಜದ ನಿರ್ಮಾಣಕ್ಕೆ ಸಹಕರಿಸಬೇಕು ಎಂದು ಕರೆ ನೀಡಿದರು.

ಡಾ. ಗೀತಾ ಜೆ. ಪಾಯರ್, ಡಾ. ಬಸವರಾಜ ಕೇಟಿ ಅವರು, 'ಭಾರತದಲ್ಲಿ ಚಿಟ್ಟೆಗಳ ವಿವಿಧ ಪ್ರಭೇದಗಳು ಹಾಗೂ ಸಂರಕ್ಷಣೆ' ಕುರಿತು ಎರಡು ವಿಜ್ಞಾನಗೋಷ್ಠಿ ಕಾರ್ಯಕ್ರಮವನ್ನು ನಡೆಸಿಕೊಟ್ಟರು.

ಸಮಾರಂಭ ನಿಮಿತ್ತ ನಡೆದ ಚಿತ್ರಕಲೆ ಹಾಗೂ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಹಾಗೂ ವಿಜ್ಞಾನ ರಾಷ್ಟ್ರಕ್ಕೆ ಮತ್ತು ವಿಜ್ಞಾನ ರಸ್ತುವಿನ ಪ್ರದರ್ಶನದಲ್ಲಿ ವಿಜೇತರಾದವರಿಗೆ ಬಹುಮಾನ ಹಾಗೂ ಪ್ರಶಸ್ತಿ ಪತ್ರ ಸ್ವಾನಿಸಲಾಯಿತು.

ಕಾರ್ಯಕ್ರಮದಲ್ಲಿ ಎಂಎಸ್ಸಿ, ಪ್ರೊ.ಬಾಗೂಜಾಸ್ ಬಿ.ಆರ್. ಮತ್ತಿತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

Scanned by CamScanner

ಸಾಮಾಜಿಕ ಕಾರ್ಯದಲ್ಲಿ ವಿದ್ಯಾರ್ಥಿ ಸಮೂಹ ತೊಡಗಲಿ

■ ವಿಕ ಸುದ್ದಿಲೋಕ ಶೃಂಗೇರಿ

ರಕ್ತದಾನ ಒಂದು ಶ್ರೇಷ್ಠ ಕಾರ್ಯ. ರಕ್ತ ದಾನ ಮಾಡಿದಾಗ ಆತ್ಮತೃಪ್ತಿ ಉಂಟಾಗು ತ್ತದೆ. ಒಬ್ಬ ವ್ಯಕ್ತಿಯು ರಕ್ತದಾನ ಮಾಡಿ ದಾಗ ಮೂವರ ಜೀವ ವನ್ನು ಉಳಿಸಬಹುದಾಗಿದೆ ಎಂದು ಶ್ರೀ ಶಾರದ ಧನ್ವಂತರಿ ಆಸ್ಪತ್ರೆ ವೈದ್ಯಾ ಧಿಕಾರಿ ಡಾ.ಲಕ್ಷ್ಮೀನಾರಾಯಣ್ ಹೇಳಿದರು.

ಶ್ರೀ ಶಾರದ ಧನ್ವಂತರಿ ರಕ್ತನಿಧಿ ಕೇಂದ್ರ, ಶ್ರೀ ಜೆಸಿಬಿಎಂ ಕಾಲೇಜು, ರಾಷ್ಟ್ರೀಯ ಸೇವಾ ಯೋಜನೆ, ರೆಡ್ ರಿಬ್ಬನ್ ಕ್ಲಬ್, ಯುವರೆಡ್ ಕ್ರಾಸ್ ಘಟಕ, ರೋವರ್ಸ್ ಮತ್ತು ರೇಜರ್ಸ್ ಘಟಕ ಹಾಗೂ ಜೆಸಿಐ ಆಶ್ರಯದಲ್ಲಿ ಜೆಸಿಬಿಎಂ ಕಾಲೇಜಿನಲ್ಲಿ ಶನಿವಾರ ಆಯೋಜಿಸಲಾಗಿದ್ದ ರಕ್ತದಾನ ಶಿಬಿರದಲ್ಲಿ ರಕ್ತದಾನ ಮಹತ್ವದ ಬಗ್ಗೆ ಉಪನ್ಯಾಸ ನೀಡಿದರು.

ಯುವ ಜನತೆ ರಕ್ತದಾನದಂತಹದ ಮಹತ್ವಕಾರ್ಯದಲ್ಲಿಭಾಗಿಗಳಾಗಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಂಶುಪಾಲ ಡಾ.ಎಂ. ಸ್ವಾಮಿ ವಿದ್ಯಾರ್ಥಿಗಳ ಈ ಸಮಾಜ ಮುಖಿ ಕಾರ್ಯಕ್ರಮ ಶ್ಲಾಘ ನೀಯ. ವಿದ್ಯಾರ್ಥಿಗಳು ವಿದ್ಯಾಭ್ಯಾಸದ ಜತೆಗೆ ಇಂತಹ ಸಾಮಾಜಿಕ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕು ಎಂದರು.

ಜೆಸಿಐ ಅಧ್ಯಕ್ಷ ಪ್ರಸಾದ್ ರಕ್ತದಾನ ಶಿಬಿರ ಉದ್ಘಾಟಿಸಿದರು. ಕಾರ್ಯಕ್ರಮ ದಲ್ಲಿ ಐಕ್ಯೂಎಸಿ ಸಂಚಾಲಕ ಕೆ.ದೇವದಾಸ್, ಉಪನ್ಯಾಸಕಿಯರಾದ ಆಶ್ವಿನಿ, ರೇಖಾ ಹಾಗೂ ಜೆಸಿಐ ಸದಸ್ಯರುಗಳಾದ ಕೆ.ಟಿ.ಮಂಜುನಾಥ ಆಶೋಕ ಮತ್ತಿತರರು ಉಪಸ್ಥಿತರಿದ್ದರು. ಕಾಲೇಜಿನ ಎನ್‌ಎಸ್‌ಎಸ್ ಅಧಿಕಾರಿ ಎ.ಜಿ. ಪ್ರಶಾಂತ್ ನಿರೂಪಿಸಿ, ಬಿ.ಡಿ.ಸಂತೋಷ್ ಸ್ವಾಗತಿಸಿದರು. ಶ್ರೀ ದೇವಿ ವಂದಿಸಿದರು.

ಜೆಸಿಐನ ಸದಸ್ಯರು, ಕಾಲೇಜಿನ ವಿದ್ಯಾರ್ಥಿಗಳಿಂದ ಸಂಗ್ರಹಿಸಿದ 40 ಯುನಿಟ್ ರಕ್ತವನ್ನು ಶ್ರೀ ಶಾರದ ರಕ್ತ ನಿಧಿ ಕೇಂದ್ರಕ್ಕೆ ನೀಡಲಾಯಿತು.



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ರಕ್ತದಾನ ಶಿಬಿರ ನಡೆಯಿತು.

Scanned by CamScanner

ಬುಧವಾರ • ಮಾರ್ಚ್ 20, 2019 ಪ್ರಜಾವಾಣಿ



ಶೃಂಗೇರಿಯ ಜೆಸಿಬಿಎಂ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ರಕ್ತದಾನ ಶಿಬಿರದಲ್ಲಿ ಪಾಲ್ಗೊಂಡ ವಿದ್ಯಾರ್ಥಿಗಳು.

'ರಕ್ತದಾನದಿಂದ ಆತ್ಮ ಸಂತೋಷ'

ಶೃಂಗೇರಿ: 'ರಕ್ತದಾನ ಶ್ರೇಷ್ಠ ಕಾರ್ಯ. ರಕ್ತದಾನ ಮಾಡಿದಾಗ ಆತ್ಮತೃಪ್ತಿ ಸಿಗುತ್ತದೆ. ಒಬ್ಬ ವ್ಯಕ್ತಿಯು ರಕ್ತದಾನ ಮಾಡುವುದರಿಂದ ಮೂವರು ವ್ಯಕ್ತಿಗಳ ಜೀವ ಉಳಿಸಬಹುದಾಗಿದೆ' ಎಂದು ಶ್ರೀ ಶಾರದಾ ಧನ್ವಂತರಿ ಆಸ್ಪತ್ರೆಯ ವೈದ್ಯಾಧಿಕಾರಿ ಡಾ. ಲಕ್ಷ್ಮೀನಾರಾಯಣ್ ಹೇಳಿದರು.

ಶಾರದಾ ಧನ್ವಂತರಿ ರಕ್ತನಿಧಿ ಕೇಂದ್ರ, ಜೆಸಿಬಿಎಂ ಕಾಲೇಜು, ರಾಷ್ಟ್ರೀಯ ಸೇವಾ ಯೋಜನೆ, ರೆಡ್‌ರಿಬ್ಬನ್ ಕ್ಲಬ್, ಯುವ ರೆಡ್‌ಕ್ರಾಸ್ ಘಟಕ, ರೋವರ್ಸ್ ಮತ್ತು ರೇಂಜರ್ಸ್ ಘಟಕ ಹಾಗೂ ಜೇಸಿಐ ಶೃಂಗೇರಿ ಸಂಯುಕ್ತ ಆಶ್ರಯದಲ್ಲಿ ಜೆಸಿಬಿಎಂ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ರಕ್ತದಾನ ಶಿಬಿರದಲ್ಲಿ ಅವರು ರಕ್ತದಾನ ಮಹತ್ವ ಕುರಿತು ಮಾತನಾಡಿದರು.

'ರಕ್ತಕ್ಕೆ ಪರ್ಯಾಯವಾದ ವಸ್ತು ಮತ್ತೊಂದಿಲ್ಲ. ರಕ್ತದ ಅವಶ್ಯಕತೆ ಇರುವವರಿಗೆ ದಾನಿಗಳು ಮಾತ್ರ ರಕ್ತ ನೀಡಿ, ಅವರ ಜೀವ ಉಳಿಸಬಹುದಾಗಿದೆ. ಆದುದರಿಂದ ಯುವಜನತೆ ರಕ್ತದಾನದಂತಹ ಮಹತ್ವದ ಕಾರ್ಯದಲ್ಲಿ ಭಾಗಿಗಳಾಗಬೇಕು' ಎಂದು ಹೇಳಿದರು.

'ವ್ಯಕ್ತಿಯು ರಕ್ತದಾನ ಮಾಡಿದ 24 ಗಂಟೆಯೊಳಗೆ ದೇಹದಲ್ಲಿ ರಕ್ತ ಮರು ಉತ್ಪತ್ತಿಯಾಗುತ್ತದೆ. ಆರೋಗ್ಯವಂತ ವ್ಯಕ್ತಿ ಮೂರು ತಿಂಗಳಿಗೊಮ್ಮೆ ರಕ್ತದಾನ ಮಾಡಬಹುದು' ಎಂದು ತಿಳಿಸಿದರು.

ಕಾರ್ಯಕ್ರಮ ಉದ್ಘಾಟಿಸಿದ ಶೃಂಗೇರಿ ಜೇಸಿಐ ಅಧ್ಯಕ್ಷ ಪ್ರಸಾದ್ ಮಾತನಾಡಿ, 'ರಕ್ತದಾನದಂತಹ ಸಮಾಜಮುಖಿ ಕಾರ್ಯದಲ್ಲಿ ಭಾಗವಹಿಸುತ್ತಿರುವುದಕ್ಕೆ ಹೆಮ್ಮೆ ಎನಿಸುತ್ತದೆ. ಜೆಸಿಬಿಎಂ ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿವರ್ಗದವರು ಪ್ರತಿವರ್ಷ ರಕ್ತದಾನ ಶಿಬಿರ ಆಯೋಜಿಸುತ್ತಿರುವುದು ಹೆಮ್ಮೆಯ ವಿಚಾರ' ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಚಾರ್ಯ ಡಾ. ಎಂ.ಸ್ವಾಮಿ ಮಾತನಾಡಿ, 'ಕಾಲೇಜಿನ ವಿದ್ಯಾರ್ಥಿಗಳ ಈ ಸಮಾಜಮುಖಿ ಕಾರ್ಯಕ್ರಮ ಅತ್ಯಂತ ಶ್ಲಾಘನೀಯ. ವಿದ್ಯಾರ್ಥಿಗಳು ವಿದ್ಯಾಭ್ಯಾಸದ ಜೊತೆಗೆ ಇಂತಹ ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಸಿಕೊಂಡಿರುವುದು ಮೆಚ್ಚಿಕೊಳ್ಳುವ ಸಂಗತಿ' ಎಂದರು.

ಕಾಲೇಜಿನ ಎನ್ಎಸ್ಎಸ್ ಅಧಿಕಾರಿ ಎ.ಜಿ.ಪ್ರಶಾಂತ್ ನಿರೂಪಿಸಿದರು. ಸಂತೋಷ್ ಬಿ.ಡಿ. ಸ್ವಾಗತಿಸಿದರು. ಶ್ರೀದೇವಿ ವಂದಿಸಿದರು. ಕಾರ್ಯಕ್ರಮದಲ್ಲಿ ಐಕ್ಯೂಎಸಿ ಸಂಚಾಲಕರಾದ ದೇವದಾಸ್ ಕೆ., ಉಪನ್ಯಾಸಕಿಯರಾದ ಅಶ್ವಿನಿ, ರೇಖಾ ಹಾಗೂ ಜೇಸಿಐ ಸದಸ್ಯರಾದ ಕೆ.ಟಿ. ಮಂಜುನಾಥ, ಅಶೋಕ ಇದ್ದರು.

ಜೇಸಿಐನ ಸದಸ್ಯರು, ಕಾಲೇಜಿನ ವಿದ್ಯಾರ್ಥಿಗಳಿಂದ 40 ಯುನಿಟ್ ರಕ್ತವನ್ನು ಸಂಗ್ರಹಿಸಿ ಶ್ರೀ ಶಾರದಾ ರಕ್ತನಿಧಿ ಕೇಂದ್ರಕ್ಕೆ ನೀಡಿದರು.

Scanned by CamScanner

ವೈಜ್ಞಾನಿಕ ವಿಮರ್ಶೆ ಮೈಗೂಡಿಸಿಕೊಳ್ಳಲು ಸಲಹೆ

■ ವಿಕ ಸುದ್ದಿಲೋಕ ಶೃಂಗೇರಿ

ಮೂಢನಂಬಿಕೆ ದೂರವಾಗಿಸಲು ವಿದ್ಯಾರ್ಥಿ ದಿಸೆಯಲ್ಲಿ ವೈಜ್ಞಾನಿಕ ವಿಮರ್ಶೆ ಮೈಗೂಡಿಸಿಕೊಳ್ಳಬೇಕು ಎಂದು ಬೆಂಗಳೂರಿನ ಶಿಕ್ಷಣ ತಜ್ಞ ಪ್ರೊ. ಎಂ.ಆರ್.ನಾಗರಾಜು ಹೇಳಿದರು.

ಜೆಬಿಎಂ ಕಾಲೇಜಿನಲ್ಲಿ ಇತ್ತೀಚೆಗೆ ಆಯೋಜಿಸಿದ್ದ ಜನತೆಗಾಗಿ ವಿಜ್ಞಾನ, ವಿಜ್ಞಾನಕ್ಕಾಗಿ ಜನತೆ ಎಂಬ ಶಿರ್ಷಿಕೆಯಡಿಯಲ್ಲಿ 'ವಿಜ್ಞಾನ ದಿನ' ಕಾರ್ಯಕ್ರಮದಲ್ಲಿ ಮಾತನಾಡಿದರು. ಸಮಾಜದಲ್ಲಿ ಈಗಲೂ ಮೂಢನಂಬಿಕೆ,ಅಜ್ಞಾನವಿದ್ದು ಶೈಕ್ಷಣಿಕ ಪ್ರಗತಿಯ ನಂತರವಷ್ಟೆ ಇಂಥಹ ಕಂದಾಚಾರದಿಂದ ದೂರ ವಾಗಬಹುದು.ಅನಿಷ್ಠ ಪದ್ಧತಿಗಳನ್ನು ದೂರ ಮಾಡಿ, ಸ್ವಸ್ಥ ಸಮಾಜದ ನಿರ್ಮಾಣಕ್ಕೆ ಸಹಕರಿಸಬೇಕೆಂದರು.

ಐಎನ್ಎಸ್, ಬೆಂಗಳೂರಿನ ಗೀತಾ ಜಿ. ನಾಯರ್ ಹಾಗೂ ಐಸಾ ಬೆಂಗಳೂರಿನ ಡಾ. ಚತುರ್ವೇದ್ ಶೇಟ್ ಭಾರತದಲ್ಲಿ ಚಿಟ್ಟೆಗಳ ವಿವಿಧ ಪ್ರಭೇದಗಳು ಹಾಗೂ ಸಂರಕ್ಷಣೆ ಕುರಿತ ವಿಜ್ಞಾನ ಗೋಷ್ಠಿ ಕಾರ್ಯಕ್ರಮ ನಡೆಸಿಕೊಟ್ಟರು.

ಚಿತ್ರಕಲೆ ಹಾಗೂ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಹಾಗೂ ವಿಜ್ಞಾನ ರಸಪ್ರಶ್ನೆ ಮತ್ತು ವಿಜ್ಞಾನ ವಸ್ತು ಮಾದರಿ ಪ್ರದರ್ಶನದಲ್ಲಿ ವಿಜೇತರಾದವರಿಗೆ ನಗದು ಬಹುಮಾನ ಹಾಗೂ ಪ್ರಶಸ್ತಿ ಯನ್ನು ನೀಡಿ ಸನ್ಮಾನಿಸಲಾಯಿತು. ಪ್ರಾಂಶುಪಾಲ ಎಂ ಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ವಿಜ್ಞಾನ ಮೇಳ ಕಾರ್ಯಕ್ರಮದ ಸಂಯೋಜಕರದ ಭೌತಶಾಸ್ತ್ರ ವಿಭಾಗದಪ್ರೊ.ಬಿ.ಆರ್.ನಾಗಭೂಷಣ್ ಪ್ರಾಸ್ತವಿಕ ಮಾತನಾಡಿದರು. ಶ್ರೀರಕ್ಷಾ,ಸುಮನ ನಿರೂಪಿಸಿದರು.



ಶೃಂಗೇರಿ ಜೆಬಿಎಂ ಕಾಲೇಜಿನಲ್ಲಿ ಜನತೆಗಾಗಿ ವಿಜ್ಞಾನ, ವಿಜ್ಞಾನಕ್ಕಾಗಿ ಜನತೆ ಎಂಬ ಶಿರ್ಷಿಕೆಯಡಿಯಲ್ಲಿ 'ವಿಜ್ಞಾನ ದಿನ' ಕಾರ್ಯಕ್ರಮದಲ್ಲಿ ಎಂ.ಆರ್.ನಾಗರಾಜು ಮಾತನಾಡಿದರು.

Scanned by CamScanner

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » SHIVAMOGGA
ಸೋಮವಾರ 18 ಮಾರ್ಚ್ 2019
18 MARCH 2019

ಜೆಸಿಬಿಎಂ ಕಾಲೇಜಿನಲ್ಲಿ ರಕ್ತದಾನ ಶಿಬಿರ

ರಕ್ತದಾನದಿಂದ ಆತ್ಮ ಸಂತೋಷ



ಶೃಂಗೇರಿಯ ಜೆಸಿಬಿಎಂ ಕಾಲೇಜಿನಲ್ಲಿ ರಕ್ತದಾನ ಶಿಬಿರವನ್ನು ಜೆಸಿಐ ಅಧ್ಯಕ್ಷ ಪ್ರಸಾದ್ ಉದ್ಘಾಟಿಸಿದರು. ಎನ್‌ಎಸ್‌ಎಸ್ ಅಧಿಕಾರಿ ಎ.ಜಿ.ಪ್ರಶಾಂತ್, ಸಂತೋಷ್ ಮತ್ತಿತರಿದ್ದರು.

ಶೃಂಗೇರಿ: ರಕ್ತದಾನ ಒಂದು ಶ್ರೇಷ್ಠ ಕಾರ್ಯ. ರಕ್ತದಾನ ಮಾಡಿದಾಗ ಆತ್ಮತೃಪ್ತಿ, ಸಂತೋಷ ಉಂಟಾಗುತ್ತದೆ ಎಂದು ಶಾರದಾ ಧನ್ವಂತರಿ ಆಸ್ಪತ್ರೆ ವೈದ್ಯ ಡಾ. ಲಕ್ಷ್ಮೀನಾರಾಯಣ್ ಹೇಳಿದರು.

ಶಾರದಾ ಧನ್ವಂತರಿ ರಕ್ತನಿಧಿ ಕೇಂದ್ರ, ಜೆಸಿಬಿಎಂನ ಎನ್‌ಎಸ್‌ಎಸ್ ಘಟಕ, ಜೆಸಿಐನಿಂದ ಜೆಸಿಬಿಎಂ ಕಾಲೇಜಿನಲ್ಲಿ ಭಾನುವಾರ ಆಯೋಜಿಸಿದ್ದ ರಕ್ತದಾನ ಶಿಬಿರದಲ್ಲಿ ಉಪನ್ಯಾಸ ನೀಡಿದರು.

ಒಬ್ಬ ವ್ಯಕ್ತಿ ರಕ್ತದಾನ ಮಾಡಿದರೆ ಮೂವರ ಜೀವ ಉಳಿಸಬಹುದು. ರಕ್ತಕ್ಕೆ ಪರ್ಯಾಯ ವಸ್ತು ಮತ್ತೊಂದಿಲ್ಲ. ರಕ್ತದ ಅವಶ್ಯವಿದ್ದಾಗ ದಾನಿಗಳಿಂದ ಮಾತ್ರ ವ್ಯಕ್ತಿಯ ಜೀವ ಉಳಿಸಬಹುದು. ಹಾಗಾಗಿ ಯುವಜನ ರಕ್ತದಾನದಂಥ ಮಹತ್ವದ ಕಾರ್ಯದಲ್ಲಿ ಭಾಗಿಗಳಾಗಬೇಕು. ವ್ಯಕ್ತಿ ರಕ್ತದಾನ ಮಾಡಿದ 24 ತಾಸಿನೊಳಗೆ ರಕ್ತ ದೇಹದಲ್ಲಿ ಮರು ಉತ್ಪತ್ತಿಯಾಗುತ್ತದೆ. ಆರೋಗ್ಯವಂತ ವ್ಯಕ್ತಿ 3 ತಿಂಗಳಿಗೊಮ್ಮೆ ರಕ್ತದಾನ ಮಾಡಬಹುದು ಎಂದರು.

» ವಿದ್ಯಾರ್ಥಿಗಳು ಶಿಕ್ಷಣದ ಜತೆ ಸಮಾಜಮುಖಿ ಕಾರ್ಯಗಳಲ್ಲಿ ಭಾಗವಹಿಸಬೇಕು

ಶೃಂಗೇರಿ ಜೆಸಿಐ ಅಧ್ಯಕ್ಷ ಪ್ರಸಾದ್ ಮಾತನಾಡಿ, ರಕ್ತದಾನದಲ್ಲಿ ಭಾಗವಹಿಸಲು ಹೆಮ್ಮೆಯಾಗುತ್ತದೆ. ಜೆಸಿಬಿಎಂ ಕಾಲೇಜಿನ ವಿದ್ಯಾರ್ಥಿ ಹಾಗೂ ಸಿಬ್ಬಂದಿ ಶಿಬಿರ ಆಯೋಜಿಸುತ್ತಿರುವುದು ಒಳ್ಳೆಯ ಕಾರ್ಯ ಎಂದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಚಾರ್ಯ ಡಾ. ಎಂ.ಸ್ವಾಮಿ ಮಾತನಾಡಿ, ಶಿಕ್ಷಣದ ಜತೆ ವಿದ್ಯಾರ್ಥಿಗಳು ಸಮಾಜಮುಖಿ ಕಾರ್ಯಗಳಲ್ಲಿ ಭಾಗವಹಿಸಬೇಕು. ವಿದ್ಯಾರ್ಥಿಗಳು ರಕ್ತದಾನ ಮಾಡುತ್ತಿರುವುದು ಅತ್ಯಂತ ಶ್ಲಾಘನೀಯ. ಯುವಪೀಳಿಗೆ ಮಾನವೀಯ ಮೌಲ್ಯಗಳಿಂದ ಸಮಾಜದಲ್ಲಿ ಕಾರ್ಯನಿರ್ವಹಿಸಿದರೆ ದೇಶದ ಉನ್ನತಿ ಸಾಧ್ಯ ಎಂದು ಹೇಳಿದರು.

ಜೆಸಿಐ ಸದಸ್ಯರು, ವಿದ್ಯಾರ್ಥಿಗಳಿಂದ 40 ಯುನಿಟ್ ರಕ್ತವನ್ನು ಶ್ರೀ ಶಾರದಾ ರಕ್ತ ನಿಧಿ ಕೇಂದ್ರದಲ್ಲಿ ಸಂಗ್ರಹಿಸಿಡಲಾಯಿತು. ಎನ್‌ಎಸ್‌ಎಸ್ ಅಧಿಕಾರಿ ಎ.ಜಿ.ಪ್ರಶಾಂತ್, ಸಂತೋಷ್ ಬಿ.ಡಿ., ಶ್ರೀದೇವಿ, ಐಕ್ಯೂಎಸಿ ಸಂಚಾಲಕ ದೇವದಾಸ್ ಕೆ., ಉಪನ್ಯಾಸಕಿಯರಾದ ಅಶ್ವಿನಿ, ರೇಖಾ, ಜೆಸಿಐ ಸದಸ್ಯರಾದ ಕೆ.ಟಿ.ಮಂಜುನಾಥ, ಅಶೋಕ ಇತರರಿದ್ದರು.

Scanned by CamScanner

www.vijaykarnatakaepaper.com ವಿಜಯ ಕರ್ನಾಟಕ

ದೈಹಿಕ, ಮಾನಸಿಕ ಶುದ್ಧತೆಗೆ ಆದ್ಯತೆ ನೀಡಿ

■ ವಿಕ ಸುದ್ದಿಲೋಕ ಶೃಂಗೇರಿ

ಪದಿಹರೆಯದ ಹೆಣ್ಣು ಮಕ್ಕಳು ಪದಿಹರೆಯದಲ್ಲಿ ದೈಹಿಕ ಹಾಗೂ ಮಾನಸಿಕ ಶುದ್ಧತೆಗೆ ಆದ್ಯತೆ ನೀಡಬೇಕು ಎಂದು ಡಾ.ಭುವನೇಶ್ವರಿ ಬಲ್ನಾಡ್ ಹೇಳಿದರು.

ಜೆಸಿಬಿಎಂ ಕಾಲೇಜಿನಲ್ಲಿ ಎನ್ಎಸ್ಎಸ್ ಹಾಗೂ ಆಂತರಿಕ ಗುಣಮಟ್ಟ ಸುಧಾರಣಾ ಘಟಕದ ವತಿಯಿಂದ ಶುಕ್ರವಾರ ಏರ್ಪಡಿಸಿದ್ದ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಪದಿಹರೆಯದ ಮನಸ್ಸು ಹಾಗೂ ಮಹಿಳೆಯರ ಆರೋಗ್ಯ ಬಗ್ಗೆ ಮಾತನಾಡಿದರು.

ಜೆಸಿಬಿಎಂ ಕಾಲೇಜಿನಲ್ಲಿ ಮಹಿಳಾ ದಿನಾಚರಣೆ

ಭ್ರೂಣಹತ್ಯೆಯ ಜಗತ್ತಿನಲ್ಲಿ ಹೆಣ್ಣು ಬದುಕುವ ರೀತಿ ಬದಲಾಗಬೇಕು. ಸ್ವಾತಂತ್ರ್ಯ ಎಂದರೆ ಸ್ವೇಚ್ಛಾಚಾರವಲ್ಲ. ತಮ್ಮ ಸೃಜನಶೀಲತೆಯನ್ನು ವಿವೇಚನಶೀಲರಾಗಿ ಉಪಯೋಗಿಸುವ ತಾಕತ್ತು ಮಹಿಳೆಯರಿಗಿದೆ. ಉತ್ತಮ ಆರೋಗ್ಯಕ್ಕಾಗಿ ಯೋಗ, ಗುಣಮಟ್ಟದ ಆಹಾರ ನಿಯಮಿತವಾಗಿ ಸೇವಿಸಬೇಕು.ನೆಲದ ಸಂಸ್ಕೃತಿಯನ್ನು ಗೌರವಿಸುವ ಮನೋಭಾವ ಪ್ರತಿ ಹೆಣ್ಣುಮಕ್ಕಳಲ್ಲಿ ಮೂಡಿ ಬರಬೇಕು ಎಂದರು.

ಪಪಂ ಉಪಾಧ್ಯಕ್ಷೆ ಶೋಭಾ ಅನಂತಯ್ಯ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಎಲ್ಲ ಕ್ಷೇತ್ರದಲ್ಲಿ ತನ್ನ ಅಸ್ಮಿತೆಯ ಅಸ್ತಿತ್ವವನ್ನು ಆಕೆ ವಿವೇಕದಿಂದ ಅನಾವರಣಗೊಳಿಸುವ ಅಗತ್ಯವಿದೆ. ಸಾಂಪ್ರದಾಯಿಕತೆ ವೈಚಾರಿಕತೆಯ ನಡುವೆ ತಮ್ಮ ವೈಯಕ್ತಿಕ ನೆಲೆಯಲ್ಲಿ ಯುವ ಹೆಣ್ಣು ಮಕ್ಕಳು ಚಿಂತನೆ ಮಾಡುವ ಅಗತ್ಯವಿದೆ.ಆಚರಣೆಗಳು ವಿಚಾರವಾಗಬೇಕು. ಮಹಿಳೆಯರ ಅಸಹಾಯಕತೆಗೆ ಧ್ವನಿ ನೀಡುವ ವೈಶಾಲ್ಯತೆ ಮತ್ತೊಬ್ಬ ಸ್ತ್ರೀಯರಲ್ಲಿ ರಬೇಕು.ಆಗ ಮಹಿಳೆಯರ ಸಾಮಾಜಿಕ ಸ್ಥಿತಿಗತಿಯ ಸುಧಾರಣೆ ಸಾಧ್ಯ ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಕಾಲೇಜಿನ ಉಪನ್ಯಾಸಕಿ ಯಶೋಧಾ, ಸಂಸ್ಕಾರ,ಸಂಸ್ಕೃತಿಯ ಮೌಲ್ಯವನ್ನು ಹೆಣ್ಣು ಗೌರವಿಸಿದ್ದಾಗ ಸಮಾಜ ಸುಸಂಸ್ಕೃತವಾಗುತ್ತದೆ.ಬದುಕಿನ ಏಳುಬೀಳನ್ನು ಮಹಿಳೆ ಸಮ ಚಿತ್ತ ಭಾವದಿಂದ ಸ್ವೀಕರಿಸಬೇಕು.ಹೆಣ್ಣಿನ ಮೌಲ್ಯವನ್ನು ಆಕೆಗೆ ತಾಯಿ ಗುರುವಾಗಿ ಅರಿವು ಮೂಡಿಸಬೇಕು.ಆಗ ಮಾತ್ರ ಆಕೆ ಪರಿಪೂರ್ಣತೆ ಕಡೆ ಸಾಗಲು ಸಾಧ್ಯ ಎಂದರು.ಕಾಲೇಜಿನ ಉಪನ್ಯಾಸಕರಾದ ಆಶ್ವಿನಿ,ಜ್ಯೋತಿ ಕಾಕತ್ಕರ್ ಹಾಜರಿದ್ದರು.



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಪಪಂ ಉಪಾಧ್ಯಕ್ಷೆ ಶೋಭಾ ಅನಂತಯ್ಯ ಉದ್ಘಾಟಿಸಿದರು.

Scanned by CamScanner

ಪ್ರಜಾವಾಣಿ ಮಂಗಳವಾರ • ಫೆಬ್ರುವರಿ 26, 2019

'ಸಂಗೀತ ವಿಶ್ವ ಹೃದಯದ ಭಾಷೆ'



ಶೃಂಗೇರಿ: ವಿದ್ಯಾರ್ಥಿಗಳ ಪ್ರತಿಭಾ ಶೋಧಕ್ಕೆ ಶೃಂಗಸಂಭ್ರಮ ಪ್ರಧಾನ ವೇದಿಕೆಯಾಗಿದ್ದು, ಕಲೆ, ಸಾಹಿತ್ಯ, ಸಂಗೀತಗಳ ತ್ರಿವೇಣಿ ಸಂಗಮವಾಗಿದೆ ಎಂದು ಗಾಯಕ ರಾಘವೇಂದ್ರ ಕಿಗ್ಗಾ ಹೇಳಿದರು.

ಶೃಂಗೇರಿ ಜೆ.ಸಿ.ಬಿ.ಎಂ.ಕಾಲೇಜಿನಲ್ಲಿ ನಡೆದ 'ಶೃಂಗ ಸಂಭ್ರಮ' ಅಂತರ ಕಾಲೇಜು ಸಾಂಸ್ಕೃತಿಕ ಸ್ಪರ್ಧೋತ್ಸವ ಉದ್ಘಾಟಿಸಿ ಮಾತನಾಡಿದರು. ಒಬ್ಬ ವಿದ್ಯಾರ್ಥಿ ಶೈಕ್ಷಣಿಕ ಕ್ಷೇತ್ರದಲ್ಲಿ ಪರಿಪೂರ್ಣವೆನಿಸಿಕೊಳ್ಳಲು ಪಠ್ಯ- ಸಹಪಠ್ಯ ಚಟುವಟಿಕೆಗಳೆರಡೂ ಮುಖ್ಯ. ಸಂಗೀತವು ದೈಹಿಕ ಹಾಗೂ ಮಾನಸಿಕ ಬೆಳವಣಿಗೆಗೆ ಪೂರಕವಾಗಿದ್ದು, ಅದು ವಿಶ್ವದ ಹೃದಯದ ಭಾಷೆಯಾಗಿದೆ ಎಂದರು.

ಸಂಗೀತಕ್ಕೆ ಸಕಲ ಪ್ರಾಣಿಪಕ್ಷಿಗಳೂ ತಲೆದೂಗುತ್ತವೆ. ಕಲಾವಿದನ ಕಲೆ ಸ್ಪರ್ಧೆಗೆ ಮಾತ್ರ ಸೀಮಿತವಾದರೆ, ಕಲೆ ಹಾಗೂ ಕಲಾವಿದ ಇಬ್ಬರೂ ಬೆಳೆಯುವುದಿಲ್ಲ. ನಿರಂತರ ಕಲಿಕೆ, ಅತ್ಮವಿಶ್ವಾಸ ಹಾಗೂ ಸತತ ಪರಿಶ್ರಮಗಳಿಂದಲೇ ಕಲಾವಿದನಾಗಲು ಸಾಧ್ಯ ಎಂದರು.

ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲ ಡಾ.ಎಂ.ಸ್ವಾಮಿ ವಹಿಸಿ ಮಾತನಾಡಿ, 'ಮಲೆನಾಡು, ಬಯಲುಸೀಮೆ ಹಾಗೂ ಕರಾವಳಿ ಭಾಗಗಳ ಕಾಲೇಜುಗಳ ವಿವಿಧ ಸಾಂಸ್ಕೃತಿಕ ತಂಡಗಳು ಈ ಸ್ಪರ್ಧೆಯಲ್ಲಿ ಪಾಲ್ಗೊಳ್ಳುತ್ತಿದ್ದು, ಅತ್ಯುತ್ತಮ ಪ್ರದರ್ಶನಗಳು ಮೂಡಿಬರಲಿ ಹಾಗೂ ಸ್ಪರ್ಧೆಯನ್ನು ಹೊರತುಪಡಿಸಿಯೂ ಪ್ರತಿಭೆಗಳು ಬೆಳೆಯುವಂತಾಗಲಿ' ಎಂದು ಆಶಿಸಿದರು.

ವಿದ್ಯಾರ್ಥಿ ಕ್ಷೇಮಪಾಲನಾಧಿಕಾರಿಗಳಾದ ಡಾ ಶ್ರೀನಿವಾಸರಾವ್, ಕಲಾವಿದ ಡಾ ರಮೇಶ್ ಬೇಗಾರ್, ಎನ್.ಎಸ್.ಎಸ್.ಅಧಿಕಾರಿಗಳಾದ ಪ್ರಶಾಂತ್, ಸಂತೋಷ್, ಐಕ್ಯೂಎಸಿ ಸಂಯೋಜಕರಾದ ಪ್ರೊ.ದೇವದಾಸ್ ಕೆ. ಇದ್ದರು.

Scanned by CamScanner

ಶುಕ್ರವಾರ • ಫೆಬ್ರುವರಿ 22, 2019 ಪ್ರಜಾವಾಣಿ

ಪ್ರತಿಭಾ ಪುರಸ್ಕಾರ- ಸಂಸ್ಮರಣೆಯಲ್ಲಿ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ

ಮನುಷ್ಯರ ಸಾಧನೆಗಳೇ ಮಾತಾಗಲಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಪಠ್ಯದ ಜೊತೆ, ಪಠ್ಯೇತರ ಚಟುವಟಿಕೆ ಅಗತ್ಯ
- ಪ್ರಕೃತಿ ನಮಗೆ ಪಾಠವನ್ನು ಹೇಳುತ್ತದೆ
- ಚಂದ್ರಶೇಖರ ಭಾರತೀ ಸ್ವಾಮೀಜಿಗಳ ಸಂಸ್ಮರಣೆ

ಶೃಂಗೇರಿ: ಮಾತು ಸಾಧನೆಯಾಗಬಾರದು. ಸಾಧನೆಗಳು ಮಾತನಾಡಬೇಕು. ನಮ್ಮ ಹಿರಿಯರು ಅಂತಹ ಬದುಕನ್ನು ನಡೆಸಿ, ಸಾರ್ಥಕತೆ ಪಡೆದರು ಎಂದು ಹರಿಹರಪುರ ಮಠದ ಗುರುಗಳಾದ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ ಹೇಳಿದರು.

ಶೃಂಗೇರಿ ಜೆ.ಸಿ.ಬಿ.ಎಂ ಕಾಲೇಜಿನಲ್ಲಿ ಏರ್ಪಡಿಸಿದ್ದ ಚಂದ್ರಶೇಖರ ಭಾರತೀ ಸ್ವಾಮೀಜಿಗಳ ಸಂಸ್ಮರಣೆ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಮಲೆನಾಡು ಪ್ರದೇಶದಲ್ಲಿ ಶಿಕ್ಷಣಕ್ಕಾಗಿ ಆರು ದಶಕದ ಹಿಂದೆ ಸ್ಥಾಪಿಸಿದ ಪದವಿ ಕಾಲೇಜಿನಿಂದ ಸಾವಿರಾರು ಜನರು ಪದವೀಧರರಾಗಿ ದೇಶ, ವಿದೇಶದಲ್ಲಿ ಉದ್ಯೋಗ ಪಡೆಯುವಂತಾಗಿದೆ. ಪ್ರಕೃತಿ ನಮಗೆ ಪಾಠವನ್ನು ಹೇಳುತ್ತದೆ. ಕೆಸರಿನಲ್ಲಿ ಹುಟ್ಟಿದ ಕಪ್ಪೆ ವಟಗುಟ್ಟಿ ಒಂದು ದಿನ ಅಲ್ಲಿಯೇ ಸಾಯುತ್ತದೆ. ಅದೇ ರೀತಿ ಕಮಲ ಅದೇ ಕೆಸರಿನಲ್ಲಿ ಹುಟ್ಟಿ ಕೆಸರನ್ನು ಅಂಟಿಸಿಕೊಳ್ಳದೇ ಲಕ್ಷ್ಮಿಯ ಕರವನ್ನು ಸೇರುವುದು. ಕಮಲದಂತೆ ನಮ್ಮ ಬಾಳು ಸಾರ್ಥಕತೆಯನ್ನು ಹೊಂದಬೇಕು ಎಂದರು.

ಮಲೆನಾಡು ಅಭಿವೃದ್ಧಿ ಮಂಡಳಿ ಅಧ್ಯಕ್ಷ ಹಾಗೂ ಶಾಸಕ ಟಿ.ಡಿ. ರಾಜೇಗೌಡ ಮಾತನಾಡಿ, 'ಸರ್ಕಾರ ಸಂಪೂರ್ಣ ಸಾಕ್ಷರತೆಯನ್ನು ನೀಡಲು ವಿಫಲವಾಗುತ್ತಿದ್ದ ದಿನದಲ್ಲಿ ಮಠ ಮಾನ್ಯಗಳು ಈ ಕಾರ್ಯವನ್ನು ಶ್ರದ್ಧೆಯಿಂದ ನಡೆಸಿಕೊಂಡು ಬಂದಿವೆ' ಎಂದರು.

ಚಂದ್ರಶೇಖರ ಭಾರತೀ ಸ್ವಾಮೀಜಿಗಳ ಬಗ್ಗೆ ಉಪನ್ಯಾಸ ನೀಡಿದ ಸಂಸ್ಕೃತ ಉಪನ್ಯಾಸಕ ಮಹೇಶ್ ಕಾಕತ್ಕರ್ ಮಾತನಾಡಿ, ' ಗುರುಗಳು ತೋರಿದ ಬೆಳಕಿನಲ್ಲಿ ನಾವೆಲ್ಲರೂ ಸಾಗಬೇಕಿದೆ. ಬೇಕಾಗಿದ್ದನ್ನು ಪಡೆದು ಕೊಂಡು, ಬೇಡವಾದ್ದನ್ನು ಬಿಟ್ಟು ಗುರಿಯ ಸಾಧನೆಯತ್ತ ವಿದ್ಯಾರ್ಥಿಗಳು ಸಾಗಬೇಕು' ಎಂದರು.



ಶೃಂಗೇರಿ ಜೆ.ಸಿ.ಬಿ.ಎಂ ಕಾಲೇಜಿನಲ್ಲಿ ಚಂದ್ರಶೇಖರ ಭಾರತೀ ಸ್ವಾಮೀಜಿಗಳ ಸಂಸ್ಮರಣೆ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಹರಿಹರಪುರ ಮಠದ ಗುರುಗಳಾದ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿಯವರು ವಿದ್ಯಾರ್ಥಿಗಳನ್ನು ಆಶೀರ್ವದಿಸಿದರು.

ಅನಂತ ಪದ್ಮನಾಭಭಟ್, ಡಾ.ಶ್ರೀನಿವಾಸರಾವ್, ದೇವದಾಸ್, ಪ್ರಾಂಶುಪಾಲ ಡಾ.ಸ್ವಾಮಿ, ವಾಣಿಜ್ಯ, ವಿಜ್ಞಾನ ಮತ್ತು ಕಲಾ ಸಂಘದ ಅಧ್ಯಕ್ಷರಾದ ಶ್ರೀಕರ, ನಿಖಿಲ್, ಮೇಧ ಇದ್ದರು. ಇದೇ ಸಂದರ್ಭದಲ್ಲಿ ನಿವೃತ್ತ ಉಪನ್ಯಾಸಕ ಮುನೀರ್ ಅಹಮದ್ ದಂಪತಿಯನ್ನು ಗೌರವಿಸಲಾಯಿತು. ರ್‍ಯಾಂಕ್ ವಿಜೇತರಾದ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಯಿತು. ಶ್ರೀಲಕ್ಷ್ಮಿ ಪ್ರಾರ್ಥಿಸಿದರು. ಬಿ.ಡಿ.ಸಂತೋಷ್ ಸ್ವಾಗತಿಸಿದರು.

Mangaluru

Scanned by CamScanner

ನಿಸ್ವಾರ್ಥ ಸೇವೆಯಿಂದ ಜೀವನ ಸಾರ್ಥಕ

ಶೃಂಗೇರಿ: ಮಾತು ಸಾಧನೆಯಾಗಬಾರದು. ಸಾಧನೆಗಳೇ ಮಾತನಾಡಬೇಕು. ಸೇವೆ ಮೂಲಕ ಸಮುದಾಯಕ್ಕೆ ನಿಸ್ವಾರ್ಥ ಭಾವದಿಂದ ಕಾರ್ಯನಿರ್ವಹಿಸಬೇಕು. ಆಗ ಜೀವನ ಸಾರ್ಥಕವಾಗುತ್ತದೆ ಎಂದು ಹರಿಹರಪುರ ಮಠದ ಶ್ರೀ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ ಹೇಳಿದರು.

ಜೆಸಿಬಿಎಂ ಕಾಲೇಜಿನಲ್ಲಿ ಆಯೋಜಿಸಿದ್ದ ಶ್ರೀ ಚಂದ್ರಶೇಖರ ಭಾರತೀ ಸ್ವಾಮೀಜಿ ಸಂಸ್ಮರಣೆ, ಕಾಲೇಜು ಸಂಸ್ಥಾಪಕರ ಸ್ಮರಣೆ ಹಾಗೂ ಪ್ರತಿಭಾ ಪುರಸ್ಕಾರ ವಿತರಣೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಶಾಸಕ ಟಿ.ಡಿ.ರಾಜೇಗೌಡ ಮಾತನಾಡಿ, ಸರ್ಕಾರ ಸರ್ವರಿಗೂ ಶಿಕ್ಷಣ ನೀಡುವಲ್ಲಿ ವಿಫಲವಾಗುತ್ತಿದ್ದ ಸಮಯದಲ್ಲಿ ಮಠಗಳು ನೀಡಿದ ಪ್ರೋತ್ಸಾಹ ಅನುಕರಣೀಯ ಎಂದರು. ನಿವೃತ್ತ ಉಪನ್ಯಾಸಕರಾದ ಮುನೀರ್ ಅಹಮದ್ ದಂಪತಿ ಹಾಗೂ ಕಾಲೇಜಿನ ರ್‍ಯಾಂಕ್ ವಿಜೇತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಶ್ರೀ ಚಂದ್ರಶೇಖರ ಭಾರತೀ ಸ್ವಾಮೀಜಿ ಕುರಿತು ಡಾ. ಮಹೇಶ್ ಕಾಕತ್ಕರ್ ಉಪನ್ಯಾಸ ನೀಡಿದರು. ಡಾ. ದೇವಿದಾಸ್ ನಾಯಕ್, ಶ್ರೀನಿವಾಸ್ ರಾವ್ ಇತರರಿದ್ದರು.



ವಿಜಯವಾಣಿ ಚಿತ್ರ

ರ್‍ಯಾಂಕ್ ವಿಜೇತ ವಿದ್ಯಾರ್ಥಿಗೆ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿಯಿಂದ ಪುರಸ್ಕಾರ.

ಹಿರಿಯರು ನಮಗೆ ಸಂಸ್ಕೃತಿ ಮತ್ತು ಸಂಸ್ಕಾರದ ಮೌಲ್ಯಗಳನ್ನು ನೀಡಿದ್ದರು. ಅದರ ಅರಿವಿನ ಪ್ರಖರತೆ ವಿಸ್ತೃತವಾಗಿ ಹರಡಬೇಕು. ಪ್ರಕೃತಿ ನಮಗೆ ಪರಿಸರ ಪಾಠ ಹೇಳುತ್ತದೆ. ಕೆಸರಲ್ಲಿ ಹುಟ್ಟುವ ಕಮಲ ಕೆಸರನ್ನು ಅಂಟಿಸಿಕೊಳ್ಳದೆಯೆ ಲಕ್ಷ್ಮೀ ಕರವನ್ನು ಸೇರುತ್ತದೆ. ಅದೇ ರೀತಿ ಮಾನವ ಸ್ವಾರ್ಥ ಚಿಂತನೆ ಬದಿಗಿಟ್ಟು ಸೇವೆ ಸಲ್ಲಿಸಿದರೆ ಭಗವಂತನ ಪ್ರೀತಿಗೆ ಪಾತ್ರನಾಗುತ್ತಾನೆ.

| ಶ್ರೀ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ

ಕಾಲೇಜಿನ ಅಭಿವೃದ್ಧಿಗೆ ಹರಿಹರಪುರ ಮಠದ, ಹುಲಗಾರು ಚಂದ್ರಮೌಳಿ ರಾವ್, ಟಿಎಂಎ ಪೈ, ಅಂದಿನ ಶಾಸಕ ವೀರಪ್ಪ ಗೌಡ ಅವರ ಅವಿರತ ಶ್ರಮದಿಂದ ಗ್ರಾಮೀಣ ಪ್ರದೇಶದಲ್ಲಿ ಅತ್ಯುನ್ನತ ಕಾಲೇಜು ಆರಂಭಗೊಂಡಿತು. ಇಲ್ಲಿ ಶಿಕ್ಷಣ ಪಡೆದವರು ಉನ್ನತ ಸ್ಥಾನದಲ್ಲಿದ್ದಾರೆ. ಇಂತಹ ಕಾಲೇಜಿನಲ್ಲಿ ಪ್ರಸ್ತುತ ವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿಗಳು ಸಾಧನೆಯ ಮಾರ್ಗದಲ್ಲಿ ಮುನ್ನಡೆಯಬೇಕು.

| ಆತ್ಮಪದ್ಮನಾಭ ಭಟ್
ಕಾಲೇಜಿನ ವಿಶ್ವಸ್ತ ಮಂಡಳಿ ಸದಸ್ಯ

4
ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
• VIJAYAVANI » SHIVAMOGGA
ಶುಕ್ರವಾರ 22 ಫೆಬ್ರವರಿ 2019
22 FEBRUARY 2019

Scanned by CamScanner

ಗುರುವಾರ,24 ಜನವರಿ 2019 ಶಿವಮೊಗ್ಗ ನಮ್ಮ ಚಿಕ್ಕಮಗಳೂರು

ಜೀವನ ದುಬಾರಿ ಮಾಡಿದ ತೈಲ ದರ

■ ವಿಕ ಸುದ್ದಿಲೋಕ ಶೃಂಗೇರಿ

ತೈಲ ಬೆಲೆ ಸ್ಥಿರವಾಗದಿರುವುದರಿಂದ ಸಾಮಾನ್ಯ ಜನ ಜೀವನದ ಆರ್ಥಿಕ ಸ್ಥಿತಿಯ ಮೇಲೆ ತೀವ್ರ ಪರಿಣಾಮ ಬೀರುತ್ತದೆ ಎಂದು ಶಿವಮೊಗ್ಗದ ಜವಾಹರ್‌ಲಾಲ್ ನೆಹರು ರಾಷ್ಟ್ರೀಯ ತಾಂತ್ರಿಕ ವಿದ್ಯಾಲಯದ ಡಾ.ಬಿ.ವಿ.ಶ್ರೀನಿವಾಸಮೂರ್ತಿ ಹೇಳಿದರು.

ಶ್ರೀ ಜೆಸಿಬಿಎಂ ಕಾಲೇಜಿನಲ್ಲಿ ಬುಧವಾರ ಅರ್ಥಶಾಸ್ತ್ರ ವೇದಿಕೆ ಮತಿಯಿಂದ ಏರ್ಪಡಿಸಿದ್ದ ತೈಲಬಿಕ್ಕಟ್ಟು ಒಂದು ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದರು. ಪೆಟ್ರೋಲಿಯಂ ಉತ್ಪನ್ನ ಎಲ್ಲರಿಗೂ ಅನಿವಾರ್ಯವಾಗಿದೆ.

ನಮ್ಮ ದೇಶಕ್ಕೆ ಶೇ.80ರಷ್ಟು ಕಚ್ಚಾ ತೈಲವನ್ನು ಆಮದು ಮಾಡಿಕೊಳ್ಳಲಾಗುತ್ತಿದೆ. ಆದರೆ, ತೈಲ ದರ ಏರಿಕೆಯಾಗುತ್ತಿದ್ದು, ಇದರಿಂದ ಸಂಚಾರ, ಸಂಪರ್ಕದ ವೆಚ್ಚ ಹೆಚ್ಚಾಗುತ್ತದೆ. ಪ್ರತಿ ದಿನ ಬಳಸುವ ವಸ್ತುಗಳ ಬೆಲೆ ಏರಿಕೆಯಾಗುತ್ತದೆ. ತೈಲವನ್ನು ಸಾಧ್ಯವಾದಷ್ಟು ಮಿತವಾಗಿ ಬಳಸುವುದು ಅಗತ್ಯ ಮತ್ತು ಅನಿವಾರ್ಯವಾಗಿದೆ.

ತೈಲ ಬಳಕೆಯ ಪರ್ಯಾಯ ಕ್ರಮದ ಬಗ್ಗೆ ಸಂಶೋಧನೆ ನಡೆಯುತ್ತಿದ್ದರೂ, ಇನ್ನಷ್ಟು ಸಂಶೋಧನೆ ಅಗತ್ಯವಾಗಿದೆ. ತೈಲ ಬೆಲೆ ಸ್ಥಿರತೆಗೆ ಜಿಎಸ್‌ಟಿ ವ್ಯಾಪ್ತಿಗೆ ತರುವುದು ಏಕೈಕ ಪರಿಹಾರವಾಗಿದೆ ಎಂದರು.

ವಾಣಿಜ್ಯ ವಿಭಾಗದ ಮುಖ್ಯಸ್ಥ ನಾಗರಾಜ ನಾಯಕ್ ಅಧ್ಯಕ್ಷತೆ ವಹಿಸಿದ್ದರು. ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥ ಎಂ.ವಿ. ವಿದ್ಯಾಧರ ಐ. ಕ್ಯೂಎಸಿ ಸಂಯೋಜಕ ದೇವದಾಸ್ ಉಪಸ್ಥಿತರಿದ್ದರು.

ಶೈಲಜಾ ಪ್ರಾರ್ಥಿಸಿದರು. ಅರ್ಪಿತ ಸ್ವಾಗತಿಸಿ, ಶ್ರೀನಿಧಿ ವಂದಿಸಿದರು. ಸಿಂಚನ ನಿರೂಪಿಸಿದರು.



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ತೈಲಬಿಕ್ಕಟ್ಟು ಒಂದು ಸಂವಾದ ಕಾರ್ಯಕ್ರಮದಲ್ಲಿ ನಾಗರಾಜ ನಾಯಕ್ ಮಾತನಾಡಿದರು.

Scanned by CamScanner

ನಮ್ಮ ಚಿಕ್ಕಮಗಳೂರು ಗುರುವಾರ,21 ಫೆಬ್ರವರಿ 2019 ಶಿವಮೊಗ್ಗ

ಸಾಧನೆಯೇ ಮಾತಾಗಲಿ: ಶ್ರೀ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ

■ ವಿಕ ಸುದ್ದಿಲೋಕ ಶೃಂಗೇರಿ

ಮಲೆನಾಡು ಪ್ರದೇಶದಲ್ಲಿ ಶಿಕ್ಷಣಕ್ಕಾಗಿ ಆರು ದಶಕದ ಹಿಂದೆ ಸ್ಥಾಪಿಸಿದ ಪದವಿ ಕಾಲೇಜಿನಿಂದ ಸಾವಿರಾರು ಜನರು ಪದವಿಧರರಾಗಿ ದೇಶ,ವಿದೇಶದಲ್ಲಿ ಉದ್ಯೋಗ ಪಡೆಯುವಂತಾಗಿದೆ ಎಂದು ಹರಿಹರಪುರ ಮಠಾಧೀಶ ಶ್ರೀ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ ಹೇಳಿದರು.

ಜೆಸಿಬಿಎಂ ಕಾಲೇಜಿನಲ್ಲಿ ಬುಧವಾರ ಏರ್ಪಡಿಸಿದ್ದ ಶ್ರೀ ಚಂದ್ರಶೇಖರ ಭಾರತೀ ಸ್ವಾಮೀಜಿ ಸಂಸ್ಮರಣೆ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭದ ಸಾನಿಧ್ಯ ವಹಿಸಿ ಮಾತನಾಡಿ, ಮಾತು ಸಾಧನೆಯಾಗಬಾರದು.ಸಾಧನೆಗಳು ಮಾತನಾಡಬೇಕು ಎಂದರು.

ಶಾಸಕ ಟಿ.ಡಿ.ರಾಜೇಗೌಡ ಮಾತನಾಡಿ,ಸರಕಾರ ಸಂಪೂರ್ಣ ಸಾಕ್ಷರತೆ ನೀಡಲು ವಿಫಲವಾಗುತ್ತಿದ್ದ ವಿದ್ಯಾರ್ಥಿಗಳಿಂದ ಮಾನ್ಯಗಳು ಮಾಡುತ್ತಿವೆ ಎಂದರು.

ಶ್ರೀ ಚಂದ್ರಶೇಖರ ಭಾರತೀ ಸ್ವಾಮೀಜಿಗಳ ಬಗ್ಗೆ ಉಪನ್ಯಾಸ ನೀಡಿದ ಸಂಸ್ಕೃತ ಉಪನ್ಯಾಸಕ ಮಹೇಶ್ ಕಾಕತ್ಕರ್ ಮಾತನಾಡಿ,ಗುರುಗಳು



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ಶ್ರೀ ಚಂದ್ರಶೇಖರ ಭಾರತೀ ಸ್ವಾಮೀಜಿಗಳ ಸಂಸ್ಮರಣೆ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಹರಿಹರಪುರ ಸ್ವಾಮೀಜಿ ವಿದ್ಯಾರ್ಥಿಗಳನ್ನು ಆಶೀರ್ವದಿಸಿದರು.

ತೋರಿದ ಬೆಳಕಿನಲ್ಲಿ ನಾವೆಲ್ಲರೂ ಸಾಗಬೇಕಿದೆ. ಬೇಕಾಗಿದ್ದನ್ನು ಪಡೆದುಕೊಂಡು,ಬೇಡವದ್ದನ್ನು ಬಿಟ್ಟು ಗುರಿಯ ಸಾಧನೆಯತ್ತ ವಿದ್ಯಾರ್ಥಿಗಳು ಸಾಗಬೇಕು ಎಂದರು.

ಅನಂತಪದ್ಮನಾಭಭಟ್, ಡಾ. ಶ್ರೀನಿವಾಸರಾವ್, ದೇವದಾಸ್, ಪ್ರಾಂಶುಪಾಲ ಡಾ.ಸ್ವಾಮಿ, ವಾಣಿಜ್ಯ, ವಿಜ್ಞಾನ ಮತ್ತು ಕಲಾ ಸಂಘದ ಅಧ್ಯಕ್ಷರಾದ ಶ್ರೀಕರ, ನಿಖಿಲ್, ಮೇಧ ಇದ್ದರು. ನಿವೃತ್ತ ಉಪನ್ಯಾಸಕ ಮುನೀರ್ ಅಹಮದ್ ದಂಪತಿಯನ್ನು ಗೌರವಿಸಲಾಯಿತು. ರ‍್ಯಾಂಕ್ ವಿಜೇತರಾದ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಯಿತು. ಶ್ರೀಲಕ್ಷ್ಮಿ ಪ್ರಾರ್ಥಿಸಿದರು. ಬಿ.ಡಿ.ಸಂತೋಷ್ ಸ್ವಾಗತಿಸಿದರು.

Scanned by CamScanner

ಜ್ಞಾನದಿಂದ ಆತ್ಮ ವಿಶ್ವಾಸದ ಬದುಕು ಸಾಧ್ಯ



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ನನ್ನ ಏಳ್ಗೆಗೆ ನಾನೇ ಶಿಲ್ಪಿ ಕಾರ್ಯಕ್ರಮವನ್ನು ಡಾ.ಎಸ್.ಎಲ್ ಕಾಡದೇವರ ಮಠ ಉದ್ಘಾಟಿಸಿದರು.

■ **ವಿಕ ಸುದ್ದಿಲೋಕ** ಶೃಂಗೇರಿ

ಓದುವ ಅಭಿರುಚಿ ಇದ್ದರೆ ಜ್ಞಾನ ವೃದ್ಧಿಯಾಗುತ್ತದೆ, ಜ್ಞಾನದಿಂದ ಆತ್ಮ ವಿಶ್ವಾಸದ ಬದುಕು ರೂಪಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದು ಡಾ.ಎಸ್. ಎಲ್ ಕಾಡದೇವರಮಠ ಹೇಳಿದರು.

ಜೆಸಿಬಿಎಂ ಕಾಲೇಜಿನಲ್ಲಿ ಗ್ರಂಥಾಲಯ ವಿಭಾಗ ಹಾಗೂ ತುಮಕೂರು ರೀಡ್ ಬುಕ್ ಫೌಂಡೇಶನ್ ಜಂಟಿ ಆಶ್ರಯದಲ್ಲಿ ಉಪನ್ಯಾಸ ಕಾರ್ಯಕ್ರಮ ನನ್ನ ಏಳ್ಗೆಗೆ ನಾನೇ ಶಿಲ್ಪಿ ಕಾರ್ಯಕ್ರಮದಲ್ಲಿ ಮಾತನಾಡಿದರು. ಪುಸ್ತಕವನ್ನು ಓದುವುದರ ಮೂಲಕ ನಮ್ಮ ಆತ್ಮತೃಪ್ತಿ ಸಿಗುತ್ತದೆ. ಇಂದಿನ ಯುವಜನತೆ ಗುರಿ ಹೊಂದಿದ್ದಲ್ಲಿ ಮಾತ್ರ ಸಾಧನೆಗೆ ಸಾಧ್ಯ ಇಲ್ಲವಾದಲ್ಲಿ ಶೂನ್ಯವಾಗುತ್ತದೆ. ಮಾಹಿತಿ ತಂತ್ರಜ್ಞಾನದಿಂದ ಒಳ್ಳೆಯ ಮತ್ತು ಕೆಟ್ಟ ಸಂದೇಶಗಳನ್ನು ನಾವುಗಳು ನಿರ್ಧರಿಸಬೇಕು ಎಂದರು.

ಪ್ರಾಂಶುಪಾಲ ಡಾ. ಎಂ. ಸ್ವಾಮಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಪಠ್ಯ ಕ್ರಮದೊಂದಿಗೆ ವಿದ್ಯಾರ್ಥಿಗಳು ಸಾಹಿತ್ಯಾಭಿರುಚಿ ಬೆಳೆಸಿಕೊಳ್ಳಬೇಕು ಮತ್ತು ಸ್ಪರ್ಧಾತ್ಮಕಯುಗದಲ್ಲಿ ಓದುವ ಹವ್ಯಾಸಗಳು ಪ್ರಮುಖವಾದದ್ದು ಎಂದರು.ಎನ್ನೆಸ್ಸೆಸ್ ಅಧಿಕಾರಿ ಎ.ಜಿ.ಪ್ರಶಾಂತ್ ಮಾತನಾಡಿ, ಯುವ ಕರಲ್ಲಿ ಮೊಬೈಲ್ ಹಾವಳಿ ಯಿಂದ ಓದುವ ಆಸಕ್ತಿ ಕಡಿಮೆಯಾಗುತ್ತಿದೆ. ನಮ್ಮ ಕಾಲೇಜಿನ ಗ್ರಂಥಾಲಯವು ಉತ್ತಮ ಪುಸ್ತಕವನ್ನು ಹೊಂದಿದ್ದು ಅದರ ಸದುಪಯೋಗ ಪಡೆದು ಕೊಳ್ಳಬೇಕೆಂದರು. ಪ್ರೊ.ಎಂ.ವಿ. ವಿದ್ಯಾಧರ ಉಪಸ್ಥಿತರಿದ್ದರು.ಗ್ರಂಥ ಪಾಲಕ ಎಚ್.ಇ.ಪ್ರಸನ್ನಕುಮಾರ್ ಸ್ವಾಗತಿಸಿದರು.

Scanned by CamScanner

ಕನ್ನಡಪ್ರಭ
ಬುಧವಾರ 13.2.2019

ನಮ್ಮ ಸುದ್ದಿ

ಜ್ಞಾನದಿಂದ ಆತ್ಮವಿಶ್ವಾಸದ ಬದುಕು ಸಾಧ್ಯ

ಶೃಂಗೇರಿ: ಓದುವ ಅಭಿರುಚಿ ಇದ್ದರೆ ಜ್ಞಾನವೃದ್ಧಿ ಆಗುತ್ತದೆ. ಜ್ಞಾನದಿಂದ ಆತ್ಮಶ್ವಾಸದ ಬದುಕು ರೂಪಿಸಿಕೊಳ್ಳಲು ಸಾಧ್ಯ ಎಂದು ತುಮಕೂರು ರೀಡ್ ಬುಕ್ ಫೌಂಡೇಶನ್‌ನ ಡಾ. ಎಸ್.ಎಲ್. ಕಾಡದೇವರಮಠ ಹೇಳಿದರು. ಪಟ್ಟಣದ ಜೆಸಿಬಿಎಂ ಕಾಲೇಜಿನಲ್ಲಿ ಕಾಲೇಜು ಗ್ರಂಥಾಲಯ ವಿಭಾಗ ಹಾಗೂ ತುಮಕೂರಿನ ರೀಡ್ ಬುಕ್ ಫೌಂಡೇಶನ್ ಸಹಯೋಗದೊಂದಿಗೆ ಆಯೋಜಿಸಲಾಗಿದ್ದ 'ನನ್ನ ಏಳ್ಗೆಗೆ ನಾನೇ ಶಿಲ್ಪಿ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಪುಸ್ತಕಗಳನ್ನು ಓದುವುದರ ಮೂಲಕ ನಮ್ಮ ಆತ್ಮತೃಪ್ತಿ ಸಿಗುತ್ತದೆ. ಜ್ಞಾನವೃದ್ಧಿಸುತ್ತದೆ. ಇಂದಿನ ಯುವಜನತೆ ಗುರಿಗಳನ್ನು ಹೊಂದಿದ್ದಲ್ಲಿ ಮಾತ್ರ ಸಾಧನೆಗೆ ಸಾಧ್ಯ ಇಲ್ಲವಾದಲ್ಲಿ ಶೂನ್ಯವಾಗುತ್ತದೆ. ಮಾಹಿತಿ ತಂತ್ರಜ್ಞಾನದಿಂದ ಒಳ್ಳೆಯ ಮತ್ತು ಕೆಟ್ಟ ಸಂದೇಶಗಳನ್ನು ಯಾವುದೆಂದು ಸರಿಯಾಗಿ ನಾವುಗಳು ನಿರ್ಧರಿಸಬೇಕು. ಇದು ವಿದ್ಯಾರ್ಥಿಗಳ ಜೀವನ ರೂಪಿಸಲು ಗುರಿಗಳನ್ನು ಹೊಂದಲು ಸಹಕಾರಿಯಾಗುತ್ತದೆ. ವಿದ್ಯಾರ್ಥಿಗಳು ಸಾತ್ಯಾಭಿರುಚಿ ಬೆಳೆಸಿಕೊಳ್ಳಬೇಕು ಮತ್ತು ಸ್ಪರ್ಧಾತ್ಮಕ ಯುಗದಲ್ಲಿ ಓದುವ ಹವ್ಯಾಸಗಳು ಪ್ರಮುಖವಾಪವೆ ಎಂದರು. ಕಾರ್ಯಕ್ರಮದಲ್ಲಿ ಪ್ರಾಚಾರ್ಯ ಸ್ವಾಮಿ, ಪ್ರಶಾಂತ್ ಮತ್ತಿತರರು ಇದ್ದರು. ಪ್ರಸನ್ನಕುಮಾರ್ ಎಚ್.ಇ. ಸ್ವಾಗತಿಸಿ, ಸಂತೋಷ ಬಿ.ಡಿ. ನಿರೂಪಿಸಿದರು. ಉಪನ್ಯಾಸಕಿ ಕು.ಅಂಜನ ವಂದಿಸಿದರು.

Scanned by CamScanner



ಟೇಕ್ವಾಂಡೋ: ಚರಣ್ ಚಿನ್ನ, ಅಭಿಷೇಕ್‌ಗೆ ಬೆಳ್ಳಿಪದಕ

ಶೃಂಗೇರಿ: ಚಿಕ್ಕಮಗಳೂರಿನ ಐಡಿಎಸ್‌ಜಿ ಕಾಲೇಜಿನಲ್ಲಿ ನಡೆದ ಕುವೆಂಪು ವಿಶ್ವವಿದ್ಯಾನಿಲಯದ ಅಂತರ ಕಾಲೇಜು ಟೇಕ್ವಾಂಡೋ ಸ್ಪರ್ಧೆಯಲ್ಲಿ ಜೆಸಿಬಿಎಂ ಕಾಲೇಜಿನ ಚರಣ್ 63 ಕೆ.ಜಿ. ವಿಭಾಗದಲ್ಲಿ ಚಿನ್ನದ ಪದಕವನ್ನೂ ಹಾಗೂ ಅಭಿಷೇಕ್ ಎಸ್. ಕುಲಾಲ್ 58 ಕೆಜಿ ಭಾಗದಲ್ಲಿ ಬೆಳ್ಳಿ ಪದಕವನ್ನು ಗಳಿಸಿದ್ದಾರೆ. ಕಾಲೇಜು ಆಡಳಿತ ಮಂಡಳಿ, ಬೋಧಕ, ಬೋಧಕೇತರ ಸಿಬ್ಬಂದಿ ಅಭಿನಂದಿಸಿದ್ದಾರೆ.

Scanned by CamScanner

ಚಿಕ್ಕಮಗಳೂರು ಬುಧವಾರ,23 ಜನವರಿ 2019

ಸಮತಾ ತತ್ವ ಪ್ರತಿಪಾದಕರು



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ರಾಷ್ಟ್ರೀಯ ಯುವ ಸಪ್ತಾಹದ ಸಮಾರೋಪ ಸಮಾರಂಭದಲ್ಲಿ ಪ್ರೊ.ನಂದನ್ ಪ್ರಭು ಮಾತನಾಡಿದರು.

■ **ವಿಕ ಸುದ್ದಿಲೋಕ** ಶೃಂಗೇರಿ

ಸ್ವಾಮಿ ವಿವೇಕಾನಂದರು ಸಮಾಜದ ಕೆಳವರ್ಗಗಳ ಕುರಿತು ವಿಶೇಷ ಕಾಳಜಿ ಹೊಂದಿದ್ದು, ಎಲ್ಲಾ ವರ್ಗದ ಜನರು ಸಮಾನರು ಎಂಬ ಸಮತಾ ತತ್ವವನ್ನು ಸದಾ ತಮ್ಮ ನುಡಿ-ಕೃತಿಯಲ್ಲಿ ಪ್ರತಿಬಿಂಬಿಸುತ್ತಿದ್ದರು ಎಂದು ಮಣಿಪಾಲ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ನ ಸಹಾಯಕ ಪ್ರಾಧ್ಯಾಪಕ ಪ್ರೊ ನಂದನ್ ಪ್ರಭು ಹೇಳಿದರು.

ಜೆಸಿಬಿಎಂ ಕಾಲೇಜಿನಲ್ಲಿ ಸೋಮವಾರ ರಾಷ್ಟ್ರೀಯ ಸೇವಾ ಯೋಜನೆ, ನೈತಿಕ ಆಧ್ಯಾತ್ಮಿಕ ವೇದಿಕೆ, ಯುವಜನ ಕ್ರೀಡಾ ಇಲಾಖೆ,ನೆಹರೂ ಯುವ ಕೇಂದ್ರದ ಸಂಯುಕ್ತಾಶ್ರಯದಲ್ಲಿ ನಡೆದ ರಾಷ್ಟ್ರೀಯ ಯುವ ಸಪ್ತಾಹದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು.ಅನೇಕ ವಿಷಯದ ಬಗ್ಗೆ ಅತ್ಯುತ್ತಮ ಪಾಂಡಿತ್ಯ ಉಳ್ಳವರಾಗಿದ್ದರು.ಸನ್ಯಾಸಿಗಳೊಂದಿಗೆ ಅಧ್ಯಾತ್ಮ ಚಿಂತಕರಾಗಿ, ಯುವಕರಲ್ಲಿ ರಾಷ್ಟ್ರೀಯತೆಯ ಕುರಿತು, ಉದ್ಯಮಿಗಳಿಗೆ ಉದ್ಯಮದ ಬೆಳವಣಿಗೆ ಅವಕಾಶದ ಕುರಿತು ಮಾತನಾಡುವ ಮಾರ್ಗದರ್ಶನ ನೀಡುವ ವಿಶಿಷ್ಟ ವ್ಯಕ್ತಿಯಾಗಿದ್ದರು ಎಂದರು.

ಕಡೂರು ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರದೀಪ್ ಮಾತನಾಡಿ ಸಮಾಜದಲ್ಲಿ ಎಲ್ಲರ ಬಗ್ಗೆ ಗೌರವವನ್ನು ಹೊಂದಿರಬೇಕು. ತಂದೆ ತಾಯಿಯರ ಬಗ್ಗೆ ಕಾಳಜಿ ಹಾಗೂ ಧನ್ಯತಾ ಭಾವವಿರಬೇಕು ಎಂದರು. ಕಾಲೇಜಿನ ಪ್ರಾಂಶುಪಾಲ ಡಾ ಎಂ ಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ರಾ.ಸೇ.ಯೋ ಅಧಿಕಾರಿ ಎ.ಜಿ.ಪ್ರಶಾಂತ್ ಇತಿಹಾಸ ವಿಭಾಗದ ಮುಖ್ಯಸ್ಥರಾದ ಕೆ.ಪಿ.ಪ್ರಕಾಶ್ ಉಪಸ್ಥಿತರಿದ್ದರು.

Scanned by CamScanner

ಪ್ರಜಾವಾಣಿ ಭಾನುವಾರ • ಜನವರಿ 20, 2019



ಶೃಂಗೇರಿ ಜೆ.ಸಿ.ಬಿ.ಎಂ.ಕಾಲೇಜಿನಲ್ಲಿ ನಡೆದ ಸ್ವಾಮಿ ವಿವೇಕಾನಂದ ಜಯಂತೋತ್ಸವ ಮತ್ತು ಯುವ ಸಪ್ತಾಹ ಕಾರ್ಯಕ್ರಮದಲ್ಲಿ ಹರಿಹರಪುರದ ನಿವೃತ್ತ ಪ್ರಾಚಾರ್ಯರಾದ ರಾಮಪ್ರಸಾದ್ ಮಾತನಾಡಿದರು.

'ಭಾರತೀಯ ಸಾಂಸ್ಕೃತಿಕ ಮಹತ್ವ ಎತ್ತಿಹಿಡಿದವರು ವಿವೇಕಾನಂದರು'

ಶೃಂಗೇರಿ: ಸ್ವಾಮಿ ವಿವೇಕನಂದರ ನುಡಿಗಳು ಯುವಕರಿಗೆ ಸದಾ ಸ್ಫೂರ್ತಿದಾಯಕ ಹಾಗೂ ಮಾರ್ಗದರ್ಶಿಯಾಗಿದೆ. ಯುವ ಶಕ್ತಿಯಿಂದಲೇ ದೇಶದ ಉನ್ನತಿ ಸಾಧ್ಯ ಎಂದು ಗಾಢವಾಗಿ ನಂಬಿದ್ದ ಅವರು, ಯುವಜನತೆಯ ಮಾನಸಿಕ ಹಾಗೂ ದೈಹಿಕವಾಗಿ ಸದೃಢರಾಗಿ, ಬಲಿಷ್ಠ ಭಾರತವನ್ನು ನಿರ್ಮಿಸಬೇಕು ಎಂಬ ಆಶಯವನ್ನು ಹೊಂದಿದ್ದರು ಎಂದು ಅಭಿನವ ರಾಮಾನಂದ ಪದವಿ ಪೂರ್ವ ಕಾಲೇಜು, ಹರಿಹರಪುರದ ನಿವೃತ್ತ ಪ್ರಾಚಾರ್ಯ ರಾಮಪ್ರಸಾದ್ ಹೇಳಿದರು.

ಶೃಂಗೇರಿ ಜೆ.ಸಿ.ಬಿ.ಎಂ.ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾ ಯೋಜನೆ, ಆಧ್ಯಾತ್ಮಿಕ ಮತ್ತು ನೈತಿಕ ವೇದಿಕೆಯ ಸಹಯೋಗದಲ್ಲಿ ನಡೆದ ಸ್ವಾಮಿ ವಿವೇಕಾನಂದ ಜಯಂತೋತ್ಸವ ಮತ್ತು ಯುವ ಸಪ್ತಾಹ ಕಾರ್ಯಕ್ರಮದಲ್ಲಿ ಉದ್ಘಾಟಿಸಿ ಅವರು ಮಾತನಾಡಿದರು.

'ವಿಶ್ವಮಟ್ಟದಲ್ಲಿ ಭಾರತೀಯ ಸಾಂಸ್ಕೃತಿಕ ಮಹತ್ವವನ್ನು ಎತ್ತಿಹಿಡಿದ ಕೀರ್ತಿ ವಿವೇಕಾನಂದರಿಗೆ ಸಲ್ಲುತ್ತದೆ. ಅವರ ನುಡಿಗಳಿಂದ ಪ್ರಭಾವಿತರಾದ ಸಿಸ್ಟರ್ ನಿವೇದಿತಾ ಭಾರತೀಯರಿಗೆ ಉಚಿತ ಶಿಕ್ಷಣವನ್ನು ನೀಡಲು ಮುಂದಾದರು. ಹೀಗೆ ದೇಶ ವಿದೇಶದ ಪ್ರತಿಭಾವಂತ ಯುವ ಮನಸ್ಸುಗಳು ಭಾರತದತ್ತ ಆಕರ್ಷಿತವಾದವು' ಎಂದರು.

ಜೆ.ಸಿ.ಬಿ.ಎಂ.ಕಾಲೇಜಿನ ವಾಣಿಜ್ಯ ವಿಭಾಗದ ಮುಖ್ಯಸ್ಥ ಎಚ್.ಜಿ.ನಾಗರಾಜ ನಾಯಕ್ ಅಧ್ಯಕ್ಷತೆಯನ್ನು ವಹಿಸಿದ್ದರು. ಇತಿಹಾಸ ವಿಭಾಗದ ಮುಖ್ಯಸ್ಥರು ಹಾಗೂ ನೈತಿಕ ಆಧ್ಯಾತ್ಮಿಕ ವೇದಿಕೆಯ ಸಂಚಾಲಕ ಡಾ.ಪ್ರಕಾಶ್, ಎನ್.ಎಸ್.ಎಸ್. ಕಾರ್ಯಕ್ರಮಾಧಿಕಾರಿಗಳಾದ ಎ.ಜಿ.ಪ್ರಶಾಂತ್ ಹಾಗೂ ಸಂತೋಷ್ ಬಿ.ಡಿ. ಉಪಸ್ಥಿತರಿದ್ದರು.

26ರಿಂದ ಬ್ರಾಹ್ಮಣ ಅನ್ವೇಷಣಾ ಸಮಾ

ಚಿಕ್ಕಮಗಳೂರು: ಬ್ರಾಹ್ಮಣ ಮಹಾಸಭಾ, ಬ್ರಾಹ್ಮಣ ಸ್ವಯಂ ಸೇವಕ ಸಂಘ, ಸಪ್ತಪದಿ ಫೌಂಡೇಷನ್, ಮಂಗಳ ಸೂತ್ರ ಪತ್ರಿಕೆಯ ಸಹಯೋಗದಲ್ಲಿ ಇದೇ 26 ಮತ್ತು 27ರಂದು ನಗರದ ಬ್ರಹ್ಮಸಮುದ್ರ ರಂಗಣ್ಣ ಕಲ್ಯಾಣಮಂಟಪ ದಲ್ಲಿ 'ಬ್ರಾಹ್ಮಣ ವಧು-ವರರ ಅನ್ವೇಷಣಾ ಸಮಾವೇಶ' ಆಯೋಜಿಸಲಾಗಿದೆ ಎಂದು ಬ್ರಾಹ್ಮಣ

Scanned by CamScanner

ಕನ್ನಡಪ್ರಭ
ಗುರುವಾರ 10.1.2019

ವಿದ್ಯಾರ್ಥಿಗಳು ಆತ್ಮವಿಶ್ವಾಸದಿಂದ ಪರೀಕ್ಷೆ ಎದುರಿಸಬೇಕು: ಬಿಇಒ ರಾಘವೇಂದ್ರ

ಶೃಂಗೇರಿ: ಪರೀಕ್ಷೆ ವಿದ್ಯಾರ್ಥಿಗಳ ಜೀವನದಲ್ಲಿ ಮಹತ್ತರ ಘಟ್ಟ, ಪರೀಕ್ಷೆ ಯೆಂದರೆ ಭಯ ಬೇಡ. ವಿದ್ಯಾರ್ಥಿಗಳು ಪರೀಕ್ಷೆಗಳನ್ನು ಆತ್ಮವಿಶ್ವಾಸದಿಂದ ಧೈರ್ಯವಾಗಿ ಎದುರಿಸಬೇಕು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ರಾಘವೇಂದ್ರ ಹೇಳಿದರು.

ಪಟ್ಟಣದ ಜೆಸಿಬಿಎಂ ಕಾಲೇಜಿನಲ್ಲಿ ನಡೆ ಕಾಲೇಜು ವಾರ್ಷಿಕೋತ್ಸವ ಸಮಾರಂಭದಲ್ಲಿ ಮಾತನಾಡಿದ ಅವರು, ಪರೀಕ್ಷೆ ಸಮಯದಲ್ಲಿ ಯಾವುದೇ ರೀತಿಯ ಭಯ, ಆತಂಕಕ್ಕೆ ಒಳಗಾಗಬಾರದು. ಶೈಕ್ಷಣಿಕ ವರ್ಷದ ಆರಂಭದಿಂದಲೇ ಅಂದಿನ ಪಾಠಗಳನ್ನು ಅಂದೇ ಓದಬೇಕು. ಪರೀಕ್ಷೆಗೆ ಸಾಕಷ್ಟು ಪೂರ್ವ ತಯಾರಿಕೆ ಮಾಡಿಕೊಳ್ಳಬೇಕು. ಪರೀಕ್ಷೆ ಸಮಯದಲ್ಲಿ ಓದುವುದಲ್ಲ, ಮೊದಲೇ ಸಿದ್ಧತೆ ಮಾಡಿಕೊಳ್ಳಬೇಕು ಎಂದರು.

ವಿದ್ಯಾರ್ಥಿಗಳು ಪಠ್ಯ ವಿಷಯಗಳ ಜೊತೆಗೆ ಪಠ್ಯೇತರ ವಿಷಯಗಳ ಬಗ್ಗೆಯೂ ಆಸಕ್ತಿ ವಹಿಸಬೇಕು. ಸಾಹಿತ್ಯ, ಸಂಗೀತ, ಕ್ರೀಡೆ ಇತ್ಯಾದಿ ವಿಷಯಗಳ ಬಗ್ಗೆ ಆಸಕ್ತಿ ಮೂಡಿಸಿ ಕೊಂಡು ತೊಡಗಿಸಿಕೊಳ್ಳಬೇಕು ಎಂದರು.



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ನಡೆದ ವಾರ್ಷಿಕೋತ್ಸವ ಸಮಾರಂಭದಲ್ಲಿ ರಾಘವೇಂದ್ರ ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಕಾಲೇಜು ವಿಶ್ವಸ್ಥ ಮಂಡಳಿಯ ಅನಂತಪದ್ಮನಾಭ ಭಟ್ ಮಾತನಾಡಿ, ವಿದ್ಯಾರ್ಥಿಗಳು ಕನ್ನಡ ಭಾಷೆಯನ್ನು ಹೆಚ್ಚು ಹೆಚ್ಚು ಬಳಸಲು ಕನ್ನಡ ಭಾಷೆ, ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಕೆಲಸದಲ್ಲಿ ತೊಡಗಿಸಿಕೊಳ್ಳಬೇಕು ಎಂದರು.

ಇದೇ ಸಂದರ್ಭದಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಗೌರವಧನ ನೀಡಿ ಪ್ರೋತ್ಸಾಹಿಸಲಾಯಿತು. ಕಾಲೇಜಿನ ಪ್ರಾಚಾರ್ಯ ಸ್ವಾಮಿ ಎಂ. ಅಧ್ಯಕ್ಷತೆ ವಹಿಸಿದ್ದರು. ಪ್ರಶಾಂತ್, ವಿಶ್ವಸ್ಥ ಮಂಡಳಿಯ ಸದಸ್ಯರಾದ ಟಿ.ಟಿ. ಕಳಸಪ್ಪ, ಟಿ.ಕೆ. ಪರಾಶರ, ರಶ್ಮಿ ಸುರೇಶ್ ಮತ್ತಿತರರು ಉಪಸ್ಥಿತರಿದ್ದರು.

Scanned by CamScanner

ಪತಿಯೂ ಪತ್ನಿಗೆ ಇಷ್ಟವಾಗದ ಕೆಲಸ ಮಾಡುವುದು ಸಹ ಅಪರಾಧ

ಜಸ್ಟೀಸ್ ಹೆಚ್.ಟಿ. ನರೇಂದ್ರಪ್ರಸಾದ್



ಶೃಂಗೇರಿ : ಇಲ್ಲಿನ ಶ್ರೀ ಜೆ.ಸಿ.ಬಿ.ಎಂ ಕಾಲೇಜಿನ ಮುಖ್ಯ ಸಭಾಂಗಣದಲ್ಲಿ ವ್ಯಕ್ತಿತ್ವ ವಿಕಸನ; ಕಾನೂನು ಅರಿವು ನೆರವು ಕಾರ್ಯಕ್ರಮವು ಇತ್ತೀಚೆಗೆ ನಡೆಯಿತು. ಹಿರಿಯ ವಿದ್ಯಾರ್ಥಿಗಳ ಸಂಘ ಮತ್ತು ರಾಷ್ಟ್ರೀಯ ಸ್ವಯಂ ಸೇವಾ ಯೋಜನೆ ಜಂಟಿ ಆಶ್ರಯದಲ್ಲಿ ನಡೆದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಹೈಕೋರ್ಟ್ ನ್ಯಾಯಾಧೀಶ ಜಸ್ಟೀಸ್ ಹೆಚ್.ಟಿ. ನರೇಂದ್ರಪ್ರಸಾದ್, ಮಹಿಳೆಯರ ರಕ್ಷಣೆಗಾಗಿ ಅನೇಕ ಕಾನೂನುಗಳಿದ್ದರೂ, ಕಾನೂನಿನ ಅರಿವಿನ ಕೊರತೆಯಿಂದ ಅಪರಾಧ ಸಂಖ್ಯೆ ಹೆಚ್ಚುತ್ತಿದೆ. ಆದರೆ ಇತ್ತೀಚಿನ ವರ್ಷದಲ್ಲಿ ಮತ್ತಷ್ಟು ಹೊಸ ಕಾನೂನುಗಳು ಮಹಿಳೆಯರ ರಕ್ಷಣೆಗಾಗಿ ರೂಪಿತವಾಗಿದ್ದು, ಅಪರಾಧಿಗಳಿಗೆ ಕಠಿಣ ಶಿಕ್ಷೆ ನೀಡಲಾಗುತ್ತಿದೆ. 18 ವರ್ಷದ ಒಳಗಿನ ಮಕ್ಕಳಿಗೆ ಲೈಂಗಿಕ ಕಿರುಕುಳ ನೀಡುವುದು ಹಾಗೂ ಅಪರಾಧ ನಡೆದಿರುವುದೂ ಗೊತ್ತಾಗಿಯೂ..ಅದರ ಕುರಿತು ಪೊಲೀಸ್ ಇಲಾಖೆಗೆ ದೂರು ನೀಡದಿರುವುದು ಅಪರಾಧವಾಗುತ್ತದೆ. ಪ್ರತಿ ವರ್ಷ ಇಂಥಹ ಹಲವು ಪ್ರಕರಣಗಳು ದಾಖಲಾಗುತ್ತಿವೆಯಾದರೂ, ಇಂತಹ ಅನೇಕ ಪ್ರಕರಣಗಳ ಕುರಿತು ದೂರು ದಾಖಲಾಗದೇ ಹೋಗುವುದು ವಿಪರ್ಯಾಸದ ಸಂಗತಿಯಾಗಿದೆ. ಪತಿಯೂ ಪತ್ನಿಗೆ ಇಷ್ಟವಾಗದ ಕೆಲಸ ಮಾಡುವುದು ಸಹ ಅಪರಾಧ ಎನಿಸುತ್ತದೆ ಎಂದರು. ಮಲೆನಾಡಿನ ಶೃಂಗೇರಿಯಲ್ಲಿ 50 ವರ್ಷದ ಹಿಂದೇ ಸ್ಥಾಪಿಸಿದ ಶ್ರೀ ಜೆ.ಸಿ.ಬಿ.ಎಂ ಕಾಲೇಜಿನಿಂದ ಸಾವಿರಾರು ಜನರಿಗೆ ಜೀವನದ ದಿಕ್ಕು ಲಭಿಸಿದೆ. ನಾನು ಸಹ ಈ ಕಾಲೇಜಿನ ವಿದ್ಯಾರ್ಥಿಯಾಗಿ ಜೀವನದಲ್ಲಿ ಯಶಸ್ಸು ಕಂಡುಕೊಂಡಿದ್ದೇನೆ. ಕಾಲೇಜಿನ ಸ್ಥಾಪಕರು ಯಾವುದೇ ಲಾಭದ ಆಸೆಗೆ ಸಂಸ್ಥೆಯನ್ನು ಬಳಸಿಕೊಳ್ಳದೆ, ಈ ಭಾಗಕ್ಕೆ ಉತ್ತಮ ಶಿಕ್ಷಣ ಸಂಸ್ಥೆಯನ್ನು ನೀಡಿದ್ದಾರೆ. ಕಾಲೇಜಿನ ಹಿರಿಯ ವಿದ್ಯಾರ್ಥಿ ಸಂಘವು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳ ಶೈಕ್ಷಣಿಕ ಜೀವನಕ್ಕೆ ನೆರವಾಗುತ್ತಿರುವುದು ಪ್ರಶಂಸನೀಯ ವಿಚಾರವಾಗಿದೆ ಎಂದ ಅವರು ಸಂಘಕ್ಕೆ ಒಂದು ಲಕ್ಷ ರೂ ದೇಣಿಗೆಯನ್ನು ನೀಡುವುದಾಗಿ ಘೋಷಿಸಿದರು. ಹಿರಿಯ ವಿದ್ಯಾರ್ಥಿ ಸಂಘದ ಅಧ್ಯಕ್ಷ ಉಮೇಶ್ ಕೆ. ಪುದುವಾಳ್ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಕಾಲೇಜಿನ ಪ್ರಾಂಶುಪಾಲ ಡಾ. ಸ್ವಾಮಿ, ಆಡಳಿತ ಮಂಡಳಿಯ ಸದಸ್ಯ ಸುಂಕುರ್ಡಿ ನಾಗೇಶ್‌ರಾವ್, ಎ.ಜಿ. ಪ್ರಶಾಂತ್, ವಕೀಲರಾದ ರಾಜೇಶ್ವರಿ, ಹೆಚ್.ಆರ್. ಉಮೇಶ್ ಹೆಗ್ಡೆ ಉಪಸ್ಥಿತರಿದ್ದರು.

Scanned by CamScanner

ಕಾನೂನು ಅರಿವು ಕೊರತೆಯಿಂದ ಅಪರಾಧ ಅಧಿಕ

■ ವಿಕ ಸುದ್ದಿಲೋಕ ಶೃಂಗೇರಿ

ಮಹಿಳೆಯರ ರಕ್ಷಣೆಗಾಗಿ ಅನೇಕ ಕಾನೂನು ಗಳಿದ್ದರೂ,ಕಾನೂನಿನ ಅರಿವಿನ ಕೊರತೆ ಯಿಂದ ಅಪರಾಧ ಸಂಖ್ಯೆ ಹೆಚ್ಚುತ್ತಿದೆ ಎಂದು ಹೈಕೋರ್ಟ್ ನ್ಯಾಯಾಧೀಶ ಜಸ್ಟಿಸ್ ಎಚ್.ಟಿ.ನರೇಂದ್ರಪ್ರಸಾದ್ ಹೇಳಿದರು.

ಜೆಸಿಬಿಎಂ ಕಾಲೇಜಿನಲ್ಲಿ ಹಿರಿಯ ವಿದ್ಯಾರ್ಥಿಗಳ ಸಂಘ ಮತ್ತು ರಾಷ್ಟ್ರೀಯ ಸ್ವಯಂ ಸೇವಾ ಯೋಜನೆ ಜಂಟಿ ಆಶ್ರಯದಲ್ಲಿ ಶುಕ್ರವಾರ ಏರ್ಪಡಿಸಿದ್ದ ವ್ಯಕ್ತಿತ್ವ ವಿಕಸನ,ಕಾನೂನು ಅರಿವು ನೆರವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಇತ್ತೀಚಿನ ವರ್ಷದಲ್ಲಿ ಮತ್ತಷ್ಟು ಹೊಸ ಕಾನೂನುಗಳು ಮಹಿಳೆಯರ ರಕ್ಷಣೆಗಾಗಿ ರೂಪಿತವಾಗಿದ್ದು,ಅಪರಾಧಿಗಳಿಗೆ ಕಠಿಣ ಶಿಕ್ಷೆ ನೀಡಲಾಗುತ್ತಿದೆ. 18 ವರ್ಷದ ಒಳಗಿನ ಮಕ್ಕಳಿಗೆ ಲೈಂಗಿಕ ಕಿರುಕುಳ ನೀಡುವುದು ಹಾಗೂ ಅಪರಾಧ ಗೊತ್ತಿದ್ದರೂ ಅದನ್ನು ಪೊಲೀಸ್ ಇಲಾಖೆಗೆ ದೂರು ನೀಡದಿರುವುದು ಅಪರಾಧವಾಗುತ್ತದೆ.ಪ್ರತಿ ವರ್ಷ ಇಂಥಹ ಪ್ರಕರಣಗಳು ದಾಖಲಾಗುತ್ತಿದ್ದು,ಅನೇಕ ಪ್ರಕರಣಗಳು ದೂರು ದಾಖಲಾಗುವುದೇ ಇಲ್ಲ.ವಿವಾಹವಾದ ಪುರುಷನೂ ಆಕೆಗೆ ಇಷ್ಟವಾಗದ ಕೆಲಸ ಮಾಡುವುದು ಅಪರಾಧ ಎನಿಸುತ್ತದೆ ಎಂದರು.



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ವ್ಯಕ್ತಿತ್ವ ವಿಕಸನ,ಕಾನೂನು ಅರಿವು ನೆರವು ಕಾರ್ಯಕ್ರಮವನ್ನು ನ್ಯಾಯಾಧೀಶ ಎಚ್.ಟಿ.ನರೇಂದ್ರಪ್ರಸಾದ್ ಉದ್ಘಾಟಿಸಿದರು.

ಮಲೆನಾಡಿನಲ್ಲಿ 50 ವರ್ಷದ ಹಿಂದೇ ಸ್ಥಾಪಿಸಿದ ಪದವಿ ಕಾಲೇಜಿನಿಂದ ಸಾವಿರಾರು ಜನರಿಗೆ ಜೀವನದ ದಿಕ್ಕು ಕಲ್ಪಿಸಿದೆ.ನಾನು ಸಹ ಈ ಕಾಲೇಜಿನ ವಿದ್ಯಾರ್ಥಿಯಾಗಿ ಜೀವನದಲ್ಲಿ ಯಶಸ್ಸು ಕಂಡುಕೊಂಡಿದ್ದೇನೆ. ಕಾಲೇಜಿನ ಸ್ಥಾಪಕರು ಯಾವುದೇ ಲಾಭದ ಆಸೆಗೆ ಸಂಸ್ಥೆಯನ್ನು ಸ್ಥಾಪಿಸದೆ. ಈ ಭಾಗಕ್ಕೆ ಉತ್ತಮ ಶಿಕ್ಷಣ ಸಂಸ್ಥೆಯನ್ನು ನೀಡಿದ್ದಾರೆ. ಹಿರಿಯ ವಿದ್ಯಾರ್ಥಿ ಸಂಘವು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳ ಶೈಕ್ಷಣಿಕ ಜೀವನಕ್ಕೆ ನೆರವಾಗುತ್ತಿದ್ದು,ಅದಕ್ಕೆ ಒಂದು ಲಕ್ಷ ರೂ. ಚೆಕ್ಕನ್ನು ಹಸ್ತಾಂತರಿಸಿದರು.

»IV

Scanned by CamScanner

ಪ್ರಜಾವಾಣಿ ಶುಕ್ರವಾರ • ಡಿಸೆಂಬರ್ 14, 2018

ಸೇವೆ, ರಾಷ್ಟ್ರಧರ್ಮ ಎನ್ನೆಸ್ಸೆಸ್‌ನ ಮೂಲ ಧ್ಯೇಯ

ಅನ್ನಪೂರ್ಣೇಶ್ವರಿ ದೇವಾಲಯದ ಧರ್ಮದರ್ಶಿ ಭೀಮೇಶ್ವರ ಜೋಷಿ

ಪ್ರಜಾವಾಣಿ ವಾರ್ತೆ

ಶೃಂಗೇರಿ: 'ರಾಷ್ಟ್ರೀಯ ಸೇವಾ ಯೋಜನೆಯು ವಿದ್ಯಾರ್ಥಿಗಳಲ್ಲಿ ಸೇವಾ ಮನೋಭಾವ ಹಾಗೂ ರಾಷ್ಟ್ರೀಯತೆ ಬೆಳೆಸಿ ಸಮಾಜದ ಅಭಿವೃದ್ಧಿಗೆ ಶ್ರಮಿಸುತ್ತಿದೆ. ರಾಷ್ಟ್ರೀಯತೆಯ ಇತಿಹಾಸದ ಕುರಿತಾದ ಅವಲೋಕನ ಹಾಗೂ ಅಲೋಚನೆಗಳೇ ರೋಮಾಂಚನಕಾರಿಯಾದವು' ಎಂದು ಹೊರನಾಡಿನ ಅನ್ನಪೂರ್ಣೇಶ್ವರಿ ದೇವಾಲಯದ ಧರ್ಮದರ್ಶಿ ಭೀಮೇಶ್ವರ ಜೋಷಿ ತಿಳಿಸಿದರು.

ಶೃಂಗೇರಿ ತಾಲ್ಲೂಕಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ತಕ್ಕೂರಿನಲ್ಲಿ ಆರಂಭಗೊಂಡ ಜೆ.ಸಿ.ಬಿ.ಎಂ.ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

'ರಾಷ್ಟ್ರದ ಸಾರ್ವಭೌಮತೆಯ ಮುಂದೆ ನನ್ನದು ಎಂಬುದು ಗೌಣವೆಂದು ಭಾವಿಸಬೇಕು. ಸಾಮಾಜಿಕ, ಧಾರ್ಮಿಕ, ಸಾಂಸಾರಿಕ ಧರ್ಮ ಹಾಗೂ ರಾಷ್ಟ್ರಧರ್ಮವನ್ನು ಪಾಲಿಸುವುದು ಪ್ರತಿಯೊಬ್ಬರ ಕರ್ತವ್ಯ. ಸಮಾಜ ಉತ್ತಮಗೊಳ್ಳಲು ಎನ್ನೆಸ್ಸೆಸ್ ಶಿಬಿರಗಳು ಮಕ್ಕಳಿಗೆ ದಾರಿ ತೋರುತ್ತವೆ. ಮಕ್ಕಳಿಗೆ ನೀಡಿದ ಕರಬೇತಿ ಕುರಿತು ಹಿರಿಯರೂ ಅವರಿಂದ ಕೇಳಿ ಕಲಿತು ಬದುಕನ್ನು ಸೃಜನಶೀಲಗೊಳಿಸಿಕೊಳ್ಳಬೇಕು. ಸಮಾಜದ ಸುಸ್ಥಿತಿಯನ್ನು ಕಾಪಾಡಲು ವಿದ್ಯಾರ್ಥಿಗಳು ಹಾಗೂ ಎನ್ನೆಸ್ಸೆಸ್ ಪೂರಕ-ಪ್ರೇರಕ ಶಕ್ತಿಯಾಗಲಿ' ಎಂದು ಹಾರೈಸಿದರು.



ಶೃಂಗೇರಿ ತಾಲ್ಲೂಕು ತಕ್ಕೂರಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆರಂಭಗೊಂಡ ಜೆ.ಸಿ.ಬಿ.ಎಂ.ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರವನ್ನು ಹೊರನಾಡಿನ ಅನ್ನಪೂರ್ಣೇಶ್ವರಿ ದೇವಾಲಯದ ಧರ್ಮದರ್ಶಿಗಳಾದ ಭೀಮೇಶ್ವರ ಜೋಷಿ ಉದ್ಘಾಟಿಸಿದರು.

ಮುಖ್ಯಾಂಶಗಳು

- ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೆ ಶಿಬಿರಗಳು ನೆರವು
- ಎನ್ನೆಸ್ಸೆಸ್‌ನಿಂದ ಜೀವನದ ಸತ್ಯ ಅರಿಯಲು ಸಾಧ್ಯ
- ಸ್ವಯಂಸೇವಕರು ಸ್ವಚ್ಛತೆಯ ಪ್ರಾಮುಖ್ಯತೆ ಅರಿಯಬೇಕು

ಮಲೆನಾಡು ಗಾಂಧಿ ಪ್ರತಿಷ್ಠಾನದ ಅಧ್ಯಕ್ಷ ವೆಂಕಟೇಶ್ ಎಚ್.ಜಿ. ಮಾತನಾಡಿ, 'ಗಾಂಧೀಜಿಯವರ ಜನ್ಮ ಶತಮಾನೋತ್ಸವದ ನೆನಪಿಗಾಗಿ ಸರ್ವೋದಯ ಯೋಜನೆಯಡಿ ಆರಂಭವಾದ ಎನ್ನೆಸ್ಸೆಸ್ ತನ್ನ ಸುವರ್ಣ ಮಹೋತ್ಸವ ಆಚರಿಸುತ್ತಿದ್ದು, ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕಾಗಿ ಶಿಬಿರಗಳನ್ನು ನಡೆಸುತ್ತಿದೆ. ಇದು ಕೇವಲ ಸ್ವಚ್ಛತೆಗಷ್ಟೇ ಸೀಮಿತವಾಗಿರದೇ ಸಹಬಾಳ್ವೆ, ಸಮಯಪಾಲನೆಯ ಮೌಲ್ಯಗಳನ್ನು ತಿಳಿಸಿಕೊಡುವ ಮೂಲಕ ಜೀವನದ ಸತ್ಯವನ್ನು ಅರಿಯಲು ಅಗತ್ಯವಾಗಿದೆ' ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಡಾ. ಎಂ.ಸ್ವಾಮಿ - ಮಾತನಾಡಿ, 'ಗಾಂಧೀಜಿಯವರು ಸ್ವತಃ ಸ್ವಚ್ಛತಾ ಕಾರ್ಯಗಳಲ್ಲಿ ತೊಡಗಿಕೊಳ್ಳುತ್ತಿದ್ದರು. ಬಡವರು ರೋಗಿಗಳ ಸೇವೆಯಲ್ಲಿ ತೊಡಗುತ್ತಿದ್ದರು. ಅವರ ಕನಸನ್ನೇ ಧ್ಯೇಯವಾಗಿರಿಸಿಕೊಂಡಿರುವ ಎನ್ನೆಸ್ಸೆಸ್ ಸೇವೆಯನ್ನೇ ಧ್ಯೇಯವಾಗಿರಿಸಿಕೊಂಡಿದೆ. ಇಲ್ಲಿ ಸ್ವಯಂ ಸೇವಕರು ಸ್ವಚ್ಛತೆಯ ಪ್ರಾಮುಖ್ಯತೆ ಅರಿತು, ದೇಶವನ್ನು ನಿರ್ಮಲಗೊಳಿಸಲು ನೆರವಾಗಬೇಕು' ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯಿತಿ ಸದಸ್ಯ ಶಿವಶಂಕರ್, ತಾಲ್ಲೂಕು ಪಂಚಾಯಿತಿ ಸದಸ್ಯ ಜಯಶೀಲಾ ಚಂದ್ರಶೇಖರ್, ಜೆ.ಸಿ.ಬಿ.ಎಂ.ಕಾಲೇಜು ವಿಶ್ವಸ್ಥ ಮಂಡಳಿ ಸದಸ್ಯ ಕಳಸಪ್ಪ ಟಿ.ಟಿ. ಇದ್ದರು.

Scanned by CamScanner

ಸಂಯುಕ್ತ ಕರ್ನಾಟಕ
14 ಡಿಸೆಂಬರ್, 2019,
ಶುಕ್ರವಾರ, ದಾವಣಗೆರೆ.

ದೇಶಕ್ಕಾಗಿ ಸಮರ್ಪಣಾ ಭಾವದಿಂದ ದುಡಿಯುವುದೇ ಸೇವೆ

ಸಂ.ಕ.ಸಮಾಚಾರ ಕೃಷ್ಣೇರಿ

ದಾವಣಗೆರೆ ಅಧ್ಯಯನಕ್ಕೆ ನಿಸ್ವಾರ್ಥ ಮನೋಭಾವದಿಂದ ದುಡಿಯುವುದೇ ಸೇವೆಯಾಗುವುದಿಲ್ಲ ನಮ್ಮಿಂದ ಸೇವೆಯನ್ನು ಪಡೆದ ವ್ಯಕ್ತಿ ಸಂತೃಪ್ತಿ ಪ್ರಕಟಿಸಿದಲ್ಲಿ ಆ ಕಾರ್ಯಕ್ಕೆ ಸಾರ್ಥಕತೆ ದೊರೆತಂತಾಗುತ್ತದೆ ಎಂದು ಮೊದಲಾಡಿಯ ಶ್ರೀ ಅನ್ನಪೂರ್ಣೇಶ್ವರಿ ಕ್ಷೇತ್ರದ ಧರ್ಮದರ್ಶಿ ಡಾ.ಪೀಮೇಶ್ವರ ಜೋಷಿ ತಿಳಿಸಿದರು.

ತೆಕ್ಕೂರಿನಲ್ಲಿರುವ ಶ್ರೀ ಅನ್ನಪೂರ್ಣೇಶ್ವರಿ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಶ್ರೀ ಜೆ.ಸಿ.ಐ.ಎಂ.ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ರಾಷ್ಟ್ರೀಯ ಸೇವಾ ಯೋಜನೆಯು ಸೇವಾ ಮನೋಭಾವ ಹಾಗೂ ರಾಷ್ಟ್ರೀಯತೆಯನ್ನು ವಿದ್ಯಾರ್ಥಿಗಳಲ್ಲಿ ಬೆಳೆಸಿ ಶಿಬಿರದನ್ನೂ ಅವರ ಕೊಂಡಿಯಾಗಿಸುವ ಮೂಲಕ ಸಮಾಜದ ಅಭಿವೃದ್ಧಿಗೆ ಶ್ರಮಿಸುತ್ತಿದೆ. ರಾಷ್ಟ್ರೀಯತೆ, ಇತಿಹಾಸದ ಕುರಿತಾದ ಅವಲೋಕನ ಹಾಗೂ ಆಲೋಚನೆಗಳೇ ದೇಶಾಭಿಮಾನವನ್ನುಂಟುಮಾಡುತ್ತವೆ. ಉತ್ತಮ ಸಾರ್ವಭೌಮತೆಯ ಮುಂದೆ ನಮ್ಮೆಲ್ಲ ಏಳಿಗೆಯು ಶೂನ್ಯ ಎಂಬ ಸಂಗತಿಯನ್ನು ಅರಿತುಕೊಳ್ಳಬೇಕು ಎಂದು ಹೇಳಿದರು.



ಕೃಷ್ಣೇರಿಯ ತೆಕ್ಕೂರಿನ ಶ್ರೀ ಅನ್ನಪೂರ್ಣೇಶ್ವರಿ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಶ್ರೀ ಜೆ.ಸಿ.ಐ.ಎಂ.ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ವಾರ್ಷಿಕ ವಿಶೇಷ ಶಿಬಿರವನ್ನು ಡಾ.ಪೀಮೇಶ್ವರ ಜೋಷಿ ಉದ್ಘಾಟಿಸಿದರು.

ವಿದ್ಯಾರ್ಥಿ ಜೀವನದ ಸಮಯ ಅತ್ಯಮೂಲ್ಯವಾದದ್ದು. ಹೀಗಾಗಿ ಭಾವನಾತ್ಮಕ, ಸಾಮಾಜಿಕ, ರಾಷ್ಟ್ರೀಯ ಸಾಂಸಾರಿಕ ಧರ್ಮವು ಜೊತೆಯಲ್ಲಿ ರಾಷ್ಟ್ರಧರ್ಮವನ್ನು ಬೆಳೆಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ. ಎನ್.ಎಸ್.ಎಸ್. ಶಿಬಿರಗಳು ವಿದ್ಯಾರ್ಥಿಗಳಿಗೆ ಸಮಾಜ ಉತ್ತಮಗೊಳಿಸಲು ದಾರಿ ತೋರಿ ತಪ್ಪಲೇಕಿ ನೀಡುತ್ತವೆ. ಶಿಬಿರದಿಂದ ಶಿಬಿರಾರ್ಥಿಗಳಿಗೆ ಬದುಕನ್ನು ಸೃಜನಶೀಲ ಗೊಳಿಸಿಕೊಳ್ಳಬೇಕು. ಸಮಾಜದ ಸುಸ್ಥಿತಿ ಕಾಪಾಡಲು ವಿದ್ಯಾರ್ಥಿಗಳಿಗೆ ಎನ್.ಎಸ್.ಎಸ್. ಶ್ರೇಷ್ಠ ಶಕ್ತಿಯಾಗಬೇಕು ಎಂದು ಆವರು ಹಾರೈಸಿದರು.

ಮುಖ್ಯ ಅತಿಥಿಗಳಾಗಿದ್ದ ಮೊಲಾಡಿ ಗ್ರಾಂಥಿ ಪ್ರತಿಷ್ಠಾನದ ಅಧ್ಯಕ್ಷ ವೆಂಕಟೇಶ್ ಹೆಚ್.ಜಿ ಮಾತನಾಡಿ, ಗಾಂಧೀಜಿಯವರ ಜನ್ಮ ಸಹಸ್ರಾಬ್ದೋತ್ಸವದ ನೆನಪಿಗಾಗಿ ಸರ್ವೋದಯ ಯೋಜನೆಯಡಿ ಆರಂಭವಾದ ಎನ್.ಎಸ್.ಎಸ್. ತನ್ನ ಸುವರ್ಣ ಮಹೋತ್ಸವ ಆಚರಿಸುತ್ತಿದೆ. ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕಾಗಿ ಶಿಬಿರಗಳನ್ನು ನಡೆಸುತ್ತಿದೆ. ಇದು ಕೇವಲ ಪ್ರಚೆಗೆಷ್ಟೇ ಸೀಮಿತವಾಗಿರದೇ ಸಮಾಜಕ್ಕೆ ಸಮಯದಾಲನೆಯ ಮೌಲ್ಯಗಳನ್ನು ತಿಳಿಸಿಕೊಡುವ ಮೂಲಕ ಜೀವನದ ಸತ್ವವನ್ನು ಅರಿಯಲು ಅನುವಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಡಾ.ಎಂ.ಸ್ವಾಮಿ ಮಾತನಾಡಿ, ಗಾಂಧೀಜಿಯವರು ಸ್ವತಃ ಸ್ವಚ್ಛತಾ ಕಾರ್ಯಗಳಲ್ಲಿ ಹಾಗೂ ಬಡವರು, ರೋಗಿಗಳ ಸೇವೆಯಲ್ಲಿ ತೊಡಗಿಕೊಳ್ಳುತ್ತಿದ್ದರು. ಎನ್.ಎಸ್.ಎಸ್. ಅವರ ಕನಸನ್ನೇ ತನ್ನ ಧ್ಯೇಯವಾಗಿ ಇಟ್ಟುಕೊಂಡಿದೆ. ಸ್ವಯಂಸೇವಕರು ಸ್ವಚ್ಛತೆಯ ಪ್ರಾಮುಖ್ಯತೆಯನ್ನು ಅರಿತು ದೇಶವನ್ನು ನಿರ್ಮಲಗೊಳಿಸಬೇಕು ಎಂದು ಹೇಳಿದರು.

ಬಲ್ಲಾ ಪಂಚಾಯ್ತಿ ಸದಸ್ಯ ಶಿವಪ್ರಕಾಶ್, ಕಾಲೂಕು ಪಂಚಾಯಿತಿ ಸದಸ್ಯೆ ಜಯಮೀಲಾ ಪಿಂಟೋ ಡಿಸೋಜ, ಜೆ.ಸಿ.ಐ.ಎಂ.ಕಾಲೇಜು ವಿಶೇಷ ಅಧಿಕಾರಿ ಸುಧಾಕರ ಕಲಸಪ್ಪ ಆಚಿ, ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

Scanned by CamScanner

ವಿವಾಹಗಳಲ್ಲಿ ಜಾನಪದ ಮರೆ

■ ವಿಕ ಸುದ್ದಿಲೋಕ ಶೃಂಗೇರಿ

ಮಲೆನಾಡಿನ ಸಾಂಪ್ರದಾಯಿಕ ಆಚರಣೆಯಾದ ವಿವಾಹ ಮಹೋತ್ಸವಗಳಲ್ಲಿ ಕೂಡ ಜಾನಪದೀಯ ಅಂಶಗಳಿದ್ದು, ಆಧುನಿಕ ಜನಾಂಗ ಇವುಗಳನ್ನು ಮರೆಯುತ್ತಿದೆ ಎಂದು ರಂಗ ಕಲಾವಿದ ಗುತ್ತಳಿಕೆ ಕೇಶವ ಹೇಳಿದರು.

ಶ್ರೀ ಭಾರತೀತೀರ್ಥ ಕಲ್ಚರಲ್ ಟ್ರಸ್ಟ್, ಜೆಸಿಬಿಎಂ ಕಾಲೇಜಿನಲ್ಲಿ ಶನಿವಾರ ಎನ್.ಎಸ್.ಎಸ್ ಘಟಕದೊಂದಿಗೆ ಹಮ್ಮಿಕೊಂಡಿದ್ದ ಮಲೆನಾಡಿನ ಜಾನಪದ ಕಲೆಗಳ ಕುರಿತಾದ ಕಾರ್ಯಕ್ರಮದಲ್ಲಿ ಮಾತನಾಡಿದರು. ಬದಲಾದ ಕಾಲ ಘಟ್ಟದ ಬದುಕಿನ ಕ್ರಮ ಇಂತಹ ಜಾನಪದ ಸೊಗಡನ್ನು ದೂರಮಾಡುತ್ತಿರುವುದು ಆತಂಕದ ವಿಷಯ. ಮಲೆನಾಡಿನ ಜಾನಪದ ಲೋಕದ ಹೆಗ್ಗುರುತಾದ ಅಂಟಿಕೆ-ಪಿಂಟಿಕೆಯು ಮನುಷ್ಯನ ಸೌಹಾರ್ದತೆಯ ಭಾವನೆಗಳನ್ನು ದೀಪದ ಮೂಲಕ ಬಿಂಬಿಸುವ ಒಂದು ವಿಶೇಷ ಕಲೆಯಾಗಿದೆ. ದೀಪ ಮತ್ತು ಬೆಂಕಿ ಒಂದೇ ಪ್ರಕಾರವಾದರೂ ಅದು ಹೊರಸೂಚಿಸುವ ಭಾವಾರ್ಥ ಭಿನ್ನವಾಗಿರುತ್ತದೆ.

ದೀಪವು ಕಟ್ಟುವ ಕೆಲಸಮಾಡಿದರೆ ಬೆಂಕಿಯು ನಂದಿಸುವ ಕೆಲಸ ಮಾಡುತ್ತದೆ ಎಂದರು.ಅಧ್ಯಕ್ಷತೆಯನ್ನು ಪ್ರಾಂಶುಪಾಲ ಡಾ.ಸ್ವಾಮಿ ವಹಿಸಿದ್ದರು. ಎನ್.ಎಸ್.ಎಸ್ ಅಧಿಕಾರಿ ಎ.ಜಿ ಪ್ರಶಾಂತ್, ಸಂತೋಷ್ ಮತ್ತು ಸಂಘಟಕ ರಮೇಶ್ ಬೇಗಾರ್ ಉಪಸ್ಥಿತರಿದ್ದರು.



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ಮಲೆನಾಡಿನ ಜಾನಪದ ಕಲೆಗಳ ಕುರಿತಾದ ಕಾರ್ಯಕ್ರಮದಲ್ಲಿ ಕೇಶವ ಮಾತನಾಡಿದರು.

Scanned by CamScanner

ಪ್ರಾದೇಶಿಕ ವಾರ್ತೆಗಳು





ಉಡುಪಿ: ಮಣಿಪಾಲದ ಅಕಾಡೆಮಿ ಆಫ್ ಜನರಲ್ ಎಜುಕೇಶನ್ ಅಮೃತೋತ್ಸವ ವರ್ಷದ ಅಂಗವಾಗಿ ಅಕಾಡೆಮಿ ಅಧೀನದ ವಿದ್ಯಾಸಂಸ್ಥೆಗಳ ವಿದ್ಯಾರ್ಥಿಗಳಿಗೆ ಮಣಿಪಾಲದಲ್ಲಿ ನಡೆದ ಕ್ರೀಡಾ ಸ್ಪರ್ಧೆಗಳ ಬಹುಮಾನ ವಿತರಣೆಯಲ್ಲಿ ಉಡುಪಿ ಯುಪಿಎಂಸಿ ಕಾಲೇಜಿನ ವಿದ್ಯಾರ್ಥಿಗಳು ವಿವಿಧ ಸ್ಪರ್ಧೆಗಳಲ್ಲಿ ಬಹುಮಾನ ಸ್ವೀಕರಿಸಿದರು. ಮಾಹೆ ಟ್ರಸ್ಟ್‌ನ ಟ್ರಸ್ಟಿ ವಸಂತಿ ಆರ್. ಪೈ, ಮಾಹೆ ವಿ.ವಿ. ಸಹಕುಲಾಧಿಪತಿ ಡಾ।ಎಚ್.ಎಸ್.ಬಲ್ಲಾಳ್, ಕುಲಪತಿ ಡಾ।ಎಚ್.ವಿನೋದ ಭಟ್, ಮಣಿಪಾಲ್ ಮೀಡಿಯ ನೆಟ್‌ವರ್ಕ್ ಲಿ. ಆಡಳಿತ ನಿರ್ದೇಶಕ ಟಿ.ಸತೀಶ್ ಯು. ಪೈ, ಮಾಹೆ ಸಹಕುಲಪತಿಗಳಾದ ಡಾ। ಪೂರ್ಣಿಮಾ ಬಾಳಿಗಾ, ಡಾ। ಪಿಎಲ್ ಎನ್‌ಜಿ ರಾವ್, ಕುಲಸಚಿವ ಡಾ। ನಾರಾಯಣ ಸಭಾಹಿತ್, ಅಕಾಡೆಮಿ ಕಾರ್ಯದರ್ಶಿ ಡಾ। ಎಚ್.ಶಾಂತಾರಾಮ್ ಮೊದಲಾದವರು ಬಹುಮಾನ ವಿತರಿಸಿದರು.

Scanned by CamScanner

ವಿಶ್ವವಾಣಿ
ದಾವಣಗೆರೆ
vishwavani.news
23.11.2018 ಶುಕ್ರವಾರ

ಪ್ಲಾಸ್ಟಿಕ್ ಮುಕ್ತವಾಗಿಸಲು ನಮ್ಮೆಲ್ಲರ ಪ್ರಯತ್ನ ಅಗತ್ಯ



ಶೃಂಗೇರಿ ಜಯಪುರ ರಸ್ತೆಯ ತುಂಗಾನದಿ ಸೇತುವೆಯಿಂದ ಶಿಡ್ಲೆ ಗಣಪತಿ ದೇವಸ್ಥಾನದವರೆಗಿನ ರಸ್ತೆಯ ಬದಿ ಬಿದ್ದಿದ್ದ ಪ್ಲಾಸ್ಟಿಕ್ ತ್ಯಾಜ್ಯವನ್ನು ಸಂಗ್ರಹಿಸಲಾಯಿತು.

ವಿಶ್ವವಾಣಿ ಸುದ್ದಿಮನೆ ಶೃಂಗೇರಿ

ಪರಿಸರದ ಸಂರಕ್ಷಣೆಗಾಗಿ ಸರ್ವರೂ ಒಗ್ಗೂಡಿ ಕಾರ್ಯನಿರ್ವಹಿಸಬೇಕಿದೆ. ನಮ್ಮ ಊರಿನ ರಸ್ತೆಯನ್ನು ಪ್ಲಾಸ್ಟಿಕ್ ಮುಕ್ತವಾಗಿಸಲು ನಮ್ಮೆಲ್ಲರ ಪ್ರಯತ್ನ ಅಗತ್ಯವಿದೆ ಎಂದು ತಾಪಂ ಸದಸ್ಯ ಕೆ.ಎಸ್. ರಮೇಶ್ ಹೇಳಿದರು.

ಮೆಣಸೆ ಗ್ರಾಪಂ ಮತ್ತು ಜೆಸಿಬಿಎಂ ಕಾಲೇಜಿನ ಎನ್‌ಎಸ್‌ಎಸ್‌ನಿಂದ ವಿಶ್ವಶೌಚಾಲಯ ದಿನದ ನಿಮಿತ್ತ ಶೃಂಗೇರಿ ಜಯಪುರ ರಸ್ತೆಯ ತುಂಗಾನದಿ ಸೇತುವೆಯಿಂದ ಶಿಡ್ಲೆ ಗಣಪತಿ ದೇವಸ್ಥಾನದವರೆಗಿನ ರಸ್ತೆಯ ಬದಿ ಬಿದ್ದಿದ್ದ ಪ್ಲಾಸ್ಟಿಕ್ ತ್ಯಾಜ್ಯವನ್ನು ಸಂಗ್ರಹಿಸುವ ಕಾರ್ಯಕ್ರಮದಲ್ಲಿ ಮಾತನಾಡಿ, ಪ್ಲಾಸ್ಟಿಕ್ ಸುಡುವುದರಿಂದ ಹೈಡ್ರೋಕ್ಲೋರಿನ್ ಅಮ್ಲ, ಡಯಾಕ್ಸಿನ್ ಹೀಗೆ ಹಲವು ಜೀವ ಮಾರಕ ರಾಸಾಯನಿಕಗಳು ಬಿಡುಗಡೆಗೊಳ್ಳುತ್ತದೆ. ಇದರಿಂದ ಶ್ವಾಸ ಸಂಬಂಧಿ ಖಾಯಿಲೆಗಳು ಉದ್ಭವವಾಗುತ್ತದೆ. ಈ ರಸ್ತೆಯ ಮೂಲಕ ಪ್ರವಾಸಿಗರು ಬರುತ್ತಿದ್ದು, ನೀರಿನ ಬಾಟಲಿ, ಪ್ಲಾಸ್ಟಿಕ್ ವಸ್ತುವನ್ನು ಎಸೆಯುತ್ತಿದ್ದಾರೆ. ಇದರಿಂದ ರಸ್ತೆಯ ಬದಿಯಲ್ಲಿ ಭಾರಿ ಪ್ರಮಾಣದ ತ್ಯಾಜ್ಯ ಸಂಗ್ರಹವಾಗುತ್ತಿದೆ. ಊರಿನ ಸ್ವಚ್ಛತೆ ದೃಷ್ಟಿಯಿಂದ ತ್ಯಾಜ್ಯವನ್ನು ವಿಲೇವಾರಿ ಮಾಡಬೇಕಿದೆ ಎಂದರು.

ಜೆಸಿಬಿಎಂ ಕಾಲೇಜಿನ ಪ್ರಾಂಶುಪಾಲ ಡಾ.ಸ್ವಾಮಿ ಮಾತನಾಡಿ, ಪರಿಸರಕ್ಕೆ ಮಾರಕವಾಗಿರುವ ಪ್ಲಾಸ್ಟಿಕ್‌ನಿಂದ ನಾನಾ ಸಮಸ್ಯೆ ಉದ್ಭವಿಸುತ್ತಿದೆ. ಆದರೂ ಪ್ಲಾಸ್ಟಿಕ್ ಬಳಕೆ ಹೆಚ್ಚುತ್ತಿದ್ದು, ಪ್ಲಾಸ್ಟಿಕ್ ಬಳಕೆ ವಿರುದ್ಧ ಜನ ಜಾಗೃತಿ ಮೂಡಿಸಬೇಕಾಗಿದೆ. ಮನೆಯ ಹಾಗೂ ಅಂಗಡಿಗಳ ತ್ಯಾಜ್ಯವನ್ನು ಒಟ್ಟುಗೂಡಿಸಿ ಸಂಬಂಧಪಟ್ಟ ಪಂಚಾಯಿತಿ ವಾಹನಗಳಿಗೆ ನೀಡಬೇಕಿದೆ. ಗಂಗಾ ಸ್ನಾನಂ ತುಂಗಾ ಪಾನಂ ಎಂಬಂತೆ ಪರಿಶುದ್ಧವಾಗಿರುವ ತುಂಗಾನದಿಯ ನೀರನ್ನು ಮಲಿನಗೊಳಿಸದಂತೆ ನಾಗರೀಕರು ಸಹಕರಿಸಬೇಕು ಎಂದರು. ಮೆಣಸೆ ಗ್ರಾಪಂ ಅಧ್ಯಕ್ಷೆ ಸುನಂದ, ಉಪಾಧ್ಯಕ್ಷೆ ಪದ್ಮಾವತಿ, ಸದಸ್ಯರಾದ ಶ್ವೇತಾ, ಸುಮಂಗಲ, ಪಿಳ್ಳಲ, ಜೆಸಿಬಿಎಂ ಕಾಲೇಜಿನ ಎನ್‌ಎಸ್‌ಎಸ್ ಅಧಿಕಾರಿ ಎ.ಜಿ.ಪ್ರಶಾಂತ್, ಮೆಣಸೆ ಗ್ರಾಪಂ ಪಿಡಿಒ ಗೋಪಾಲಹಾಂಡ ಇದ್ದರು.

Scanned by CamScanner

ಪ್ರಜಾವಾಣಿ ಶುಕ್ರವಾರ • ನವೆಂಬರ್ 23, 2018

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ: ಕೆ.ಎಸ್. ರಮೇಶ್ ಸಲಹೆ

ಶೃಂಗೇರಿ: 'ನಮ್ಮ ಊರಿನ ರಸ್ತೆ ಬದಿಗಳನ್ನು ಪ್ಲಾಸ್ಟಿಕ್ ಮುಕ್ತವಾಗಿಸಲು ನಮ್ಮೆಲ್ಲರ ಪ್ರಾಮಾಣಿಕ ಪ್ರಯತ್ನ ಆಗತ್ಯ' ಎಂದು ತಾಲ್ಲೂಕು ಪಂಚಾಯಿತಿ ಸದಸ್ಯ ಕೆ.ಎಸ್.ರಮೇಶ್ ಹೇಳಿದರು.

ಶೃಂಗೇರಿಯ ಮಣಸೆ ಗ್ರಾಮ ಪಂಚಾಯಿತಿ ಮತ್ತು ಜೆಸಿಬಿಎಂ ಕಾಲೇಜಿನ ಎನ್ನೆಸ್ಸೆಸ್ ಘಟಕದ ವತಿಯಿಂದ ವಿಶ್ವ ಶೌಚಾಲಯ ದಿನದ ಅಂಗವಾಗಿ ಶೃಂಗೇರಿ ಜಯಪುರ ರಸ್ತೆಯ ತುಂಗಾ ನದಿ ಸೇತುವೆಯಿಂದ ಶಿಡ್ಲೆ ಗಣಪತಿ ದೇವಸ್ಥಾನದವರೆಗಿನ ರಸ್ತೆಯ ಬದಿ ಬಿದ್ದಿದ್ದ ಪ್ಲಾಸ್ಟಿಕ್ ತ್ಯಾಜ್ಯವನ್ನು ಸಂಗ್ರಹಿಸುವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಈ ರಸ್ತೆಯ ಮೂಲಕವೇ ಪ್ರವಾಸಿಗರು ಶೃಂಗೇರಿಗೆ ಬರುತ್ತಿದ್ದು, ನೀರಿನ ಬಾಟಲಿ, ಪ್ಲಾಸ್ಟಿಕ್ ವಸ್ತುವನ್ನು ಎಲ್ಲೆಂದರಲ್ಲಿ ಎಸೆಯುತ್ತಿದ್ದಾರೆ. ಇದರಿಂದ ರಸ್ತೆಯ ಬದಿಯಲ್ಲಿ ಭಾರಿ ಪ್ರಮಾಣದ ಪ್ಲಾಸ್ಟಿಕ್ ತ್ಯಾಜ್ಯ ಸಂಗ್ರಹವಾಗುತ್ತಿದೆ. ನಮ್ಮ ಊರಿನ ಸ್ವಚ್ಛತೆ ದೃಷ್ಟಿಯಿಂದ ತ್ಯಾಜ್ಯವನ್ನು ವಿಲೇವಾರಿ ಮಾಡಬೇಕಿದೆ' ಎಂದರು.

ಜೆಸಿಬಿಎಂ ಕಾಲೇಜಿನ ಪ್ರಾಂಶುಪಾಲ ಡಾ.ಸ್ವಾಮಿ ಮಾತನಾಡಿ, 'ಪರಿಸರಕ್ಕೆ ಮಾರಕವಾಗಿರುವ ಪ್ಲಾಸ್ಟಿಕ್‌ನಿಂದ ಅನೇಕ ಸಮಸ್ಯೆಗಳು ಉದ್ಭವಿಸುತ್ತಿವೆ. ಅದರೂ ಪ್ಲಾಸ್ಟಿಕ್ ಬಳಕೆ ಹೆಚ್ಚುತ್ತಿದ್ದು, ಇದರ ಬಳಕೆ ವಿರುದ್ಧ ಜನ ಜಾಗೃತಿ ಮೂಡಿಸಬೇಕಾಗಿದೆ' ಎಂದರು.



ಶೃಂಗೇರಿ ಜಯಪುರ ರಸ್ತೆಯ ತುಂಗಾ ನದಿ ಸೇತುವೆಯಿಂದ ಶಿಡ್ಲೆ ಗಣಪತಿ ದೇವಸ್ಥಾನದವರೆಗಿನ ರಸ್ತೆಯ ಬದಿ ಬಿದ್ದಿದ್ದ ಪ್ಲಾಸ್ಟಿಕ್ ತ್ಯಾಜ್ಯವನ್ನು ಸಂಗ್ರಹಿಸಲಾಯಿತು.

ಮಣಸೆ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಸುನಂದಾ, ಉಪಾಧ್ಯಕ್ಷೆ ಪದ್ಮಾವತಿ, ಸದಸ್ಯರಾದ ಶ್ವೇತಾ, ಸುಮಂಗಲ, ವಿಠ್ಠಲ, ಜೆಸಿಬಿಎಂ ಕಾಲೇಜಿನ ಎನ್ನೆಸ್ಸೆಸ್ ಅಧಿಕಾರಿ ಎ.ಜಿ.ಪ್ರಶಾಂತ್, ಮಣಸೆ ಗ್ರಾಮ ಪಂಚಾಯಿತಿ ಪಿಡಿಒ ಗೋಪಾಲ ಹಾಂಡ ಇದ್ದರು.

ವಿಜ್ಞಾನ ಶಿಬಿರ

ಮಂಗಳೂರು: ಕೇಂದ್ರ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗದ ಪ್ರಾಯೋಜಕತ್ವದಲ್ಲಿ ಮಂಗಳೂರಿನ ವಿಶ್ವವಿದ್ಯಾಲಯ ಕಾಲೇಜಿನ ಸೂಕ್ಷ್ಮ ಜೀವವಿಜ್ಞಾನ ವಿಭಾಗ, 'ಡಿಎಸ್‌ಟಿ- ಇನ್‌ಸ್ಪೈರ್ (ವಿಜ್ಞಾನದಲ್ಲಿ ನಾವೀನ್ಯತೆಗೆ ಪ್ರೇರಿತ ಸಂಶೋಧನೆಗಳ ಅನ್ವೇಷಣೆ) ತರಬೇತಿ ಶಿಬಿರ-2018' ಅನ್ನು ಪಿಲಿಕುಳದ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ಇದೇ 25 ರಿಂದ 29 ರವರೆಗೆ ಆಯೋಜಿಸಲಿದೆ.

Scanned by CamScanner

ಪ್ರಜಾವಾಣಿ ಸೋಮವಾರ • ಅಕ್ಟೋಬರ್ 8, 2018

ಶೃಂಗೇರಿಯಿಂದ ಕಿಗ್ಗಾ ಸಿರಿಮನೆ ಜಲಪಾತದವರೆಗೆ ಸ್ವಚ್ಛತೆ

ಶೃಂಗೇರಿ: ವಿದ್ಯಾರ್ಥಿಗಳಲ್ಲಿ ಸ್ವಚ್ಛತಾ ಮನೋಭಾವವನ್ನು ಜಾಗೃತಗೊಳಿಸಬೇಕು. ಪರಿಸರವನ್ನು ತ್ಯಾಜ್ಯಮುಕ್ತವಾಗಿಸುವಲ್ಲಿ ಅವರ ಪಾತ್ರ ಮುಖ್ಯ ಎಂದು ಶೃಂಗೇರಿ ಪಟ್ಟಣ ಪಂಚಾಯ್ತಿಯ ಸದಸ್ಯರಾದ ನಾಗೇಶ್ ಕಾಮತ್ ಹೇಳಿದರು.

ಶೃಂಗೇರಿಯ ಜೆ.ಸಿ.ಬಿ.ಎಂ. ಕಾಲೇಜು, ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ, ಮರ್ಕಲ್ ಗ್ರಾಮ ಪಂಚಾಯಿತಿ, ಹಾಗೂ ಗ್ರಾಮ ಅರಣ್ಯ ಸಮಿತಿಯ ಆಶ್ರಯದಲ್ಲಿ ಸ್ವಚ್ಛತಾ ಹೀ ಸೇವಾ ಕಾರ್ಯಕ್ರಮದ ಅಂಗವಾಗಿ ನಡೆದ ಶೃಂಗೇರಿಯಿಂದ ಕಿಗ್ಗಾ ಸಿರಿಮನೆ ಜಲಪಾತದವರೆಗೆ ರಸ್ತೆ ಬದಿಯ ಘನತ್ಯಾಜ್ಯ ವಸ್ತುಗಳ ಸ್ವಚ್ಛತಾ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಜೆ.ಸಿ.ಬಿ.ಎಂ. ಕಾಲೇಜಿನ ಪ್ರಾಚಾರ್ಯ ಡಾ.ಎಂ.ಸ್ವಾಮಿ, 'ನಗರಗಳಲ್ಲಿ ಸ್ವಚ್ಛತಾ ಕಾರ್ಯಗಳು ನಡೆಯುತ್ತಿದ್ದರೂ, ದೇಶ ಸ್ವಚ್ಛತೆಯಡೆಗೆ ವಾಲದಿರುವುದು ವಿಷಾದನೀಯ. ಪ್ರತಿಯೊಬ್ಬರಲ್ಲಿಯೂ ಜಾಗೃತಿ ಮೂಡಿಸುವ ಕಾರ್ಯದೊಂದಿಗೆ ಸಮಾಜದ ಸ್ವಾಸ್ಥ್ಯ ಕಾಪಾಡುವ ಮಹತ್ಕಾರ್ಯವನ್ನು ಸ್ವಯಂ ಸೇವಕರಾಗಿ ಎಲ್ಲರೂ ಮಾಡಬೇಕು' ಎಂದು ಅವರು ನುಡಿದರು. ಇದೇ ವೇಳೆ ಕಿಗ್ಗಾದಲ್ಲಿ ನಡೆದ ಸ್ವಚ್ಛತಾ-ಜಾಗೃತಿ ಅಭಿಯಾನವನ್ನು ಉದ್ಘಾಟಿಸಿದರು.

ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ಸುದೀಂದ್ರ ಬೆಟ್ಟಗದ್ದೆ, 'ಪ್ರವಾಸಿ ತಾಣವಾದ ಕಿಗ್ಗಾ ಮತ್ತು ಸಿರಿಮನೆ ಜಲಪಾತದ ನಡುವೆ ಬಿದ್ದಿರುವ ಪ್ಲಾಸ್ಟಿಕ್ ಅನ್ನು ನಿರ್ಮೂಲನೆ ಮಾಡುತ್ತಿದ್ದೇವೆ. ಪ್ರವಾಸಿಗರು ತ್ಯಾಜ್ಯ ವಸ್ತುಗಳನ್ನು ಪರಿಸರಕ್ಕೆ ಎಸೆಯದೆ ಸೂಕ್ತ ರೀತಿಯಲ್ಲಿ ಸಂಗ್ರಹಿಸಿ ಪರಿಸರ ಸಂರಕ್ಷಣೆಯಲ್ಲಿ ಕೈ ಜೋಡಿಸಬೇಕು' ಎಂದು ಮನವಿ ಮಾಡಿದರು.

ಮರ್ಕಲ್ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಆಶಾ ಶೃಂಗೇಶ್ವರ್ ಮಾತನಾಡಿ, ವಿದ್ಯಾರ್ಥಿಗಳು ಸಮಾಜ ಮುಖಿ ಕಾರ್ಯದಲ್ಲಿ ಇಂದು ತೊಡಗಿಸಿಕೊಂಡಿರುವುದು ಬಹಳ ಅರ್ಥಪೂರ್ಣ ಎಂದರು.

ಮರ್ಕಲ್ ಗ್ರಾಮ ಪಂಚಾಯಿತಿಯ ಸದಸ್ಯರಾದ ಶೋಭಾ, ಸುನಂದ, ಶಾರದಮ್ಮ ಪಂಚಾಯಿತಿ ಅಧಿಕಾರಿಗಳಾದ ನಾಗಭೂಷಣ, ಕಾಲೇಜುಗಳ ಎನ್.ಎಸ್.ಎಸ್. ಅಧಿಕಾರಿಗಳಾದ ಎ.ಜಿ.ಪ್ರಶಾಂತ್, ಮಂಜುನಾಥ್, ಸಂತೋಷ್ ಬಿ.ಡಿ ಉಪಸ್ಥಿತರಿದ್ದರು.



ತ್ಯಾಜ್ಯ ವಸ್ತುಗಳನ್ನು ಚೀಲಗಳಲ್ಲಿ ಸಂಗ್ರಹಿಸುತ್ತಿರುವ ಕಾಲೇಜಿನ ಎನ್.ಎಸ್.ಎಸ್ ಸ್ವಯಂ ಸೇವಕರು

Scanned by CamScanner

ಲವಲVK ಬುಧವಾರ, 31 ಅಕ್ಟೋಬರ್ 2018

ವಿಜಯ ಕರ್ನಾಟಕ facebook.com/v

ಜೆಸಿಬಿಎಂ ಕಾಲೇಜಿಗೆ ನಾಲ್ಕು ರ್‍ಯಾಂಕ್

■ ವಿಕ ಸುದ್ದಿಲೋಕ ಶೃಂಗೇರಿ

ಕುವೆಂಪು ವಿಶ್ವವಿದ್ಯಾ ನಿಯಲವು ನಡೆಸಿದ ಅಂತಿಮ ಪದವಿ ಪರೀಕ್ಷೆ ಯಲ್ಲಿ ಜೆಸಿಬಿಎಂ ಕಾಲೇಜಿಗೆ ನಾಲ್ಕು ರ್‍ಯಾಂಕ್ ಲಭಿಸಿದೆ.



ಸಿಂಧು ಹೆಗ್ಗಡೆ



ಎಸ್.ಪಿ.ನಮಿತಾ



ಜಿ.ಎಸ್.ಮಾಧವಿ



ಸಿ.ಎಸ್.ದಿವ್ಯಾಶ್ರೀ

ಬಿ ಎ ತರಗತಿಯಲ್ಲಿ ಸಿಂಧು ಹೆಗ್ಗಡೆ, ಕವಿಕುಟೀರ, ಇವರು 1200 ಅಂಕಗಳಿಗೆ 1062 (ಶೇ.88.50) ಗಳಿಸಿ 2ನೇ ರ್‍ಯಾಂಕ್ ಗಳಿಸಿದ್ದಾರೆ. ಬಿ ಕಾಂ ತರಗತಿಯಲ್ಲಿ ಎಸ್.ಪಿ. ನಮಿತಾ ಬಿನ್ ಪುರುಷೋತ್ತಮ, ಸಸಿತೋಟ, ನೆಮ್ಮಾರ್ 1500 ಅಂಕಗಳಿಗೆ 1419 (ಶೇ.94.60) ಗಳಿಸಿ 6ನೇ ರ್‍ಯಾಂಕ್ ಗಳಿಸಿದ್ದಾರೆ.

ಬಿ ಎಸ್ಸಿ ತರಗತಿಯಲ್ಲಿ ಜಿ.ಎಸ್. ಮಾಧವಿ ,ಯಡಗೆರೆ 1200 ಅಂಕಗಳಿಗೆ 1126 (ಶೇ. 93.83) ಅಂಕಗಳಿಸಿ 9ನೇ ರ್‍ಯಾಂಕ್ ಗಳಿಸಿದ್ದಾರೆ, ಸಿ.ಎಸ್. ದಿವ್ಯ ಶ್ರೀ , ಚಿಗತೆ, ಕಾವಡಿ 1200 ಅಂಕಗಳಿಗೆ 1125 ಅಂಕಗಳಿಸಿ (ಶೇ. 93.75) 10ನೇ ರ್‍ಯಾಂಕ್ ಗಳಿಸಿದ್ದಾರೆ. ರ್‍ಯಾಂಕ್ ಗಳಿಸಿದ ವಿದ್ಯಾರ್ಥಿಗಳನ್ನು ಪ್ರಾಂಶುಪಾಲ ಡಾ.ಸ್ವಾಮಿ ಮತ್ತು ಸಿಬ್ಬಂದಿ ವರ್ಗ ಅಭಿನಂದಿಸಿದ್ದಾರೆ.

Scanned by CamScanner

VIJAYAVANI » SHIVAMOGGA
ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
ಸೋಮವಾರ 15 ಅಕ್ಟೋಬರ್ 2018 • 15 OCTOBER 2018

ರೋಟರಿ ಸಂಸ್ಥೆಗಿದೆ ಶತಮಾನದ ಇತಿಹಾಸ | ಆರೋಗ್ಯ, ಶಿಕ್ಷಣ ಕ್ಷೇತ್ರದಲ್ಲಿ ಸೇವೆ

ಸ್ವಾರ್ಥರಹಿತ ಸೇವೆಯಿಂದ ಹೆಚ್ಚಿನ ನೆಮ್ಮದಿ

■ ವಿಜಯವಾಣಿ ಸುದ್ದಿಜಾಲ ಶೃಂಗೇರಿ

ಸಮಾಜದ ಉನ್ನತಿಗಾಗಿ ನಾವು ಶ್ರಮಿಸಿದಾಗ ಮಾತ್ರ ಆತ್ಮ ಸಂತೋಷ ಪಡೆಯಲು ಸಾಧ್ಯ ಎಂದು ರೋಟರಿ ತರಬೇತುದಾರ ಎಚ್.ಎಸ್.ಸಿದ್ದಪ್ಪ ತಿಳಿಸಿದರು.

ಜೆಸಿಬಿಎಂ ಕಾಲೇಜಿನಲ್ಲಿ ರೋಟ್ಯಾರಾಕ್ಟ್ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿ, ವಿದ್ಯಾರ್ಥಿಗಳು ಈಗಿನಿಂದಲೇ ಸ್ವಾರ್ಥರಹಿತ ಸೇವೆ ಆರಂಭಿಸಬೇಕು. ದೇಶದ ಉಜ್ವಲ ಭವಿಷ್ಯಕ್ಕೆ ಉತ್ತಮ ಕೊಡುಗೆ ನೀಡಬೇಕು ಎಂದರು.

ರೋಟರಿ ಅಂತಾರಾಷ್ಟ್ರೀಯ ಸಂಸ್ಥೆಗೆ ಶತಮಾನದ ಇತಿಹಾಸವಿದೆ. ಆರೋಗ್ಯ, ಶಿಕ್ಷಣ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸುವ ಮೂಲಕ ರೋಟರಿ ಜನಮಾನಸದಲ್ಲಿ ಶಾಶ್ವತ ಸ್ಥಾನಗಳಿಸಿದೆ. ಪ್ರಸ್ತುತ 220 ರಾಷ್ಟ್ರಗಳಲ್ಲಿ 35 ಸಾವಿರ ಕ್ಲಬ್‌ಗಳು ವಿಶ್ವದ ಅಗತ್ಯ, ತುರ್ತು ಸೇವೆಗಳಲ್ಲಿ ತೊಡಗಿಕೊಂಡಿವೆ ಎಂದರು.



ವಿಜಯವಾಣಿ ಚಿತ್ರ

ಜೆಸಿಬಿಎಂ ಕಾಲೇಜಿನ ರೋಟರ್ಯಾಕ್ಟ್ ಕ್ಲಬ್‌ನ ನೂತನ ಅಧ್ಯಕ್ಷ ಕೆ.ಜಿ.ಸ್ವಾತಿಕ್ ಉದ್ಘಾಟಿಸಿದರು.

ಕಾಲೇಜಿನ ಪ್ರಾಚಾರ್ಯ ಡಾ. ಎಂ.ಸ್ವಾಮಿ ಮಾತನಾಡಿ, ಸೇವೆ ಮೂಲಕ ಸಮಾಜದ ಅಭಿವೃದ್ಧಿಗೆ ಶ್ರಮಿಸಬೇಕು ಎಂದು ಹೇಳಿದರು.

ರೋಟರಿ ಅಧ್ಯಕ್ಷ ವೇಣುಮಾಧವ ನಾಯಕ್ ಮಾತನಾಡಿ, ಸಮಾಜ ಬದಲಾವಣೆ ನಮ್ಮಿಂದ ಆರಂಭವಾದಾಗ ಮಾತ್ರ ಸಮುದಾಯದಲ್ಲಿ ಉತ್ತಮ ಸಂಘಟನೆ ಕಾಣಲು ಸಾಧ್ಯ. ಎಂದರು.

ರೋಟರಿ ಮಾಜಿ ಅಧ್ಯಕ್ಷ ಡಾ. ಎಚ್.ಸಿ.ವೀರಪ್ಪ ಗೌಡ ನೂತನ, ಪದಾಧಿಕಾರಿಗಳಿಗೆ ಪ್ರತಿಜ್ಞಾವಿಧಿ ಬೋಧಿಸಿದರು. ರೋಟ್ಯಾರಾಕ್ಟ್ ಕ್ಲಬ್ ನೂತನ ಅಧ್ಯಕ್ಷರಾಗಿ ಕೆ.ಜಿ.ಸ್ವಾತಿಕ್, ಉಪಾಧ್ಯಕ್ಷರಾಗಿ ಸುಮಂತ್ ಆರ್.ಭಟ್ ಅವರನ್ನು ಆಯ್ಕೆ ಮಾಡಲಾಯಿತು. ಪ್ರಾಧ್ಯಾಪಕ ಎ.ಜಿ.ಪ್ರಶಾಂತ್, ರೋಟರಿ ಕಾರ್ಯದರ್ಶಿ ಮಂಜುನಾಥ ಗೌಡ ಉಪಸ್ಥಿತರಿದ್ದರು.

ದಾಹ 12 ಗಂಟೆಗೆ ಸಮುದಾಯ ಭವನದ ಕಚೇರಿಯಲಿ ಚುನಾವಣೆ ನಡೆಯಲಿದೆ.

Scanned by CamScanner

ಪ್ರಜಾವಾಣಿ ಬುಧವಾರ • ಅಕ್ಟೋಬರ್ 10, 2018

ಥಾಲ್ ಸೈನಿಕ್ ಕ್ಯಾಂಪ್‌ನಲ್ಲಿ ನಿರೀಕ್ಷಿತ್‌ಗೆ ಪ್ರಶಸ್ತಿ

ಶೃಂಗೇರಿ: ನವದೆಹಲಿಯಲ್ಲಿ ನಡೆದ ಥಾಲ್ ಸೈನಿಕ್ ಕ್ಯಾಂಪ್‌ನಲ್ಲಿ ಭಾಗವಹಿಸಿದ್ದ ಶೃಂಗೇರಿಯ ಜೆ.ಸಿ.ಬಿ. ಎಂ ಕಾಲೇಜಿನ ಕೆಡೆಟ್ ನಿರೀಕ್ಷಿತ್ ಎಸ್. ಅತ್ಯುತ್ತಮ ಸಾಧನೆಯ ಪ್ರಶಸ್ತಿ ಪಡೆದಿದ್ದಾರೆ.



ನಿರೀಕ್ಷಿತ್

ಕಾಲೇಜಿನ ದ್ವಿತೀಯ ಬಿ.ಎಸ್ಸಿ ವಿದ್ಯಾರ್ಥಿ ಆಗಿರುವ ಇವರು ಉಡುಪಿ ಎನ್.ಸಿ.ಸಿ. ಬೆಟಾಲಿಯನ್ 5ಎ/ 21ರ ರಾಷ್ಟ್ರೀಯ ಯುವ ಸೈನಿಕ ದಳದಿಂದ ಈ ಶಿಬಿರದಲ್ಲಿ ಭಾಗವಹಿಸಿದ್ದರು. ನಿರೀಕ್ಷಿತ್ ಅವರನ್ನು ಕಾಲೇಜು ಪ್ರಾಂಶುಪಾಲರು, ಎನ್.ಸಿ.ಸಿ. ಅಧಿಕಾರಿಗಳು ಹಾಗೂ ಆಡಳಿತ ಮಂಡಳಿ ಸದಸ್ಯರು ಅಭಿನಂದಿಸಿದ್ದಾರೆ.

Scanned by CamScanner

ನಿಸ್ವಾರ್ಥ ಸೇವೆಯಿಂದ ಅಂತರಂಗ ಶುದ್ಧಿ

■ ವಿಕ ಸುದ್ದಿಲೋಕ ಶೃಂಗೇರಿ

ದೇಹವನ್ನು ಶುಭ್ರಗೊಳಿಸಲು ಹಲವು ವಿಧಾನಗಳಿರುವಂತೆಯೇ, ಮನಸ್ಸನ್ನು ಶುದ್ಧಗೊಳಿಸಲು ಹಲವು ವಿಧಾನಗಳಿದ್ದು, ಅವುಗಳಲ್ಲಿ ಸರಳ ಹಾಗೂ ಸುಲಭ ವಿಧಾನವೆಂದರೆ ಸೇವೆ, ಸ್ವಚ್ಛತೆ, ಸಮಯಪಾಲನೆ ಎಂದು ಶ್ರೀ ಶಾರದಾ ಪೀಠದ ಅಧಿಕಾರಿ ಶ್ರೀ ಪಾದರಾವ್ ಹೇಳಿದರು.

ಶ್ರೀ ಜೆಸಿಬಿಎಂ ಕಾಲೇಜಿನಲ್ಲಿ ನಡೆದ ರಾಷ್ಟ್ರೀಯ ಸೇವಾ ಯೋಜನೆಯ ಸುವರ್ಣ ಮಹೋತ್ಸವ ವರ್ಷಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು. ಗಾಂಧೀಜಿಯವರ ತತ್ವಗಳೂ ಇವೇ ಆಗಿದ್ದು, ಅವುಗಳನ್ನೇ ಉದ್ದೇಶವಾಗಿರಿಸಿಕೊಂಡಿರುವ ಎನ್ ಎಸ್ಎಸ್ ಯುವ ಜನರು ಸನ್ಮಾರ್ಗ ಅನುಸರಿಸಲು ಪ್ರೇರೇಪಿಸುತ್ತದೆ. 50ನೇ ವರ್ಷದ ಸಂಭ್ರಮಾಚರಣೆಯು ಸಂಸ್ಥೆಯ ಸಾಧನೆಯ ಸಾರ್ಥಕತೆಯನ್ನು ತೋರಿಸುತ್ತದೆ. ಸಮಾಜದ ಎಲ್ಲಾ ಸ್ತರವನ್ನು ಸಮಾನವಾಗಿ ಕಂಡು ಸ್ವಹಿತವನ್ನು ಮೀರಿ ಮಾಡುವ ಕಾರ್ಯಗಳು ಸೇವೆ ಎನಿಸಿಕೊಳ್ಳುತ್ತದೆ. ಇಂತಹ ಪ್ರತಿಫಲಾಪೇಕ್ಷೆ ರಹಿತ ಸೇವೆಯಿಂದ ಸಂತೃಪ್ತಿ ಲಭಿಸುತ್ತದೆ. ಯುವಕರು ಏನನ್ನಾದರೂ ಸಾಧಿಸಬಲ್ಲರು ಅದಕ್ಕೆ ಉತ್ತಮ ಮಾರ್ಗದರ್ಶನ ಅಗತ್ಯ. ಹೀಗಾಗಿ ಯುವ ಜನರನ್ನು ಸೇವೆಯತ್ತ, ಉನ್ನತ ವಿಚಾರಗಳತ್ತ ಪ್ರೇರೇಪಿಸಿ, ವಿದ್ಯಾರ್ಥಿಗಳನ್ನು ಸಮಾಜದ ಜವಾಬ್ದಾರಿಯುತ ಪ್ರಜೆಗಳಾಗಿ ತನ್ಮೂಲಕ ಸಮಾಜದ ಆಸ್ತಿಯನ್ನಾಗಿ ಮಾಡುವ ಅತ್ಯುನ್ನತ ಕಾರ್ಯವನ್ನು ಎನ್ಎಸ್ಎಸ್ ಮಾಡುತ್ತಿದೆ ಎಂದರು.



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ನಡೆದ ರಾಷ್ಟ್ರೀಯ ಸೇವಾ ಯೋಜನೆಯ ಸುವರ್ಣ ಮಹೋತ್ಸವ ವರ್ಷಾಚರಣೆಯನ್ನು ಶ್ರೀ ಪಾದರಾವ್ ಉದ್ಘಾಟಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಂಶುಪಾಲ ಡಾ.ಎಂ.ಸ್ವಾಮಿ, ಸೇವೆ ಅತ್ಯುನ್ನತ ಧರ್ಮ. ಸೇವೆ ಬದುಕಿನ ಭಾಗವಾದಾಗ ಜೀವನದಲ್ಲಿ ಸಾರ್ಥಕತೆ ಹೊಂದಬಹುದು. ಗಾಂಧೀಜಿ ಅವರ ಕನಸಿನ ಸಾಕಾರವಾದ ರಾಷ್ಟ್ರೀಯ ಸೇವಾ ಯೋಜನೆಯು ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೆ ಉತ್ತಮ ವೇದಿಕೆ ಒದಗಿಸುತ್ತದೆ. ಸೇವೆ ಹಾಗೂ ಅದರೊಂದಿಗಿನ ನೆನಪುಗಳು ಸದಾ ಸ್ಫೂರ್ತಿದಾಯಕವಾಗಿರುತ್ತವೆ ಎಂದರು.

ನಿವೃತ್ತ ಪ್ರಾಂಶುಪಾಲ ಡಾ.ವೀರಪ್ಪ ಗೌಡ, ಎನ್ಎಸ್ಎಸ್ ಅಧಿಕಾರಿಗಳಾದ ಎ.ಜಿ ಪ್ರಶಾಂತ್, ಬಿ.ಡಿ.ಸಂತೋಷ್, ಎನ್.ಎಚ್.ಲಕ್ಷ್ಮೀ ನಾರಾಯಣ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

Scanned by CamScanner

ಶೃಂಗೇರಿಯಿಂದ ಸಿರಿಮನೆ ಜಲಪಾತದವರೆಗೆ ಎನ್‌ಎಸ್‌ಎಸ್ ಸ್ವಯಂ ಸೇವಕರಿಂದ ಸ್ವಚ್ಛತಾ ಕಾರ್ಯಕ್ರಮ

ಗಾಂಧೀಜಿ ಕನಸುಗಳನ್ನೇ ಧ್ಯೇಯವಾಗಿರಿಸಿಕೊಳ್ಳಿ

ವಿಕ್ರಾಂತ್ ಮಲ್ಲಿಪುರ ಶೃಂಗೇರಿ

ಇಂದಿನ ವಿದ್ಯಮಾನಗಳಲ್ಲಿ, ಸ್ವಚ್ಛತಾ ಮತ್ತು ಸೌಹಾರ್ದತೆ ಪ್ರಯತ್ನಾವಾಗಲಿ. ಸಾಮಾಜಿಕ ಕಳಕಳಿಯೊಂದಿಗೆ ಶಾಲಾ ವಿದ್ಯಾರ್ಥಿಗಳಲ್ಲಿ ಪ್ರಜ್ಞೆಯು ಮಾತ್ರ ಪರಿಪೂರ್ಣತೆ ಎಂದು ಶೃಂಗೇರಿ ಪಟ್ಟಣ ಸಂಚಾಲ ಇಂಗಿತ ವ್ಯಕ್ತಪಡಿಸಿದರು.

ಶಾಸ್ತ್ರೀಯ ಕಲಾ ಯೋಜನೆ, ಕೆ.ಸಿ.ಟಿ.ಯ ಕಾರ್ಯಾಲಯ, ಸರಸ್ವತಿ ಪ್ರಥಮ ದರ್ಜೆ ಕಾಲೇಜು, ಶೃಂಗೇರಿ, ಮಹಾಲ ಸ್ವಾಮಿ ಕೆಸ್ತ ಪಾಠಕ ಗ್ರಾಮ ಅರಣ್ಯ ಸಮಿತಿ, ಸಿರಿಮನೆ ಜಲಪಾತಪ್ರದೇಶ ಸ್ವಚ್ಛತಾ ಹೀ ಸೇವಾ ಕಾರ್ಯಕ್ರಮದ ಸಮಾರೋಪದ ಪ್ರಯುಕ್ತ ಸಿರಿಮನೆ ಜಲಪಾತದಿಂದ ಕೆಸ್ತ ಸಿರಿಮನೆ ಜಲಪಾತದವರೆಗೆ ಏರ್ಪ ಏರಿಂದ ಕಾಲ್ನಡಿಗೆಯಲ್ಲಿ ಸಾಗಿ ಸ್ವಚ್ಛತಾ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಪ್ರಸ್ತುತ ಸಂದರ್ಭದಲ್ಲಿ ಸಾಮಾಜಿಕ ಸಾಮರಸ್ಯವು ಮಹತ್ವವಾಗಿ, ಸ್ವಚ್ಛ ಭಾರತ ಅಭಿಯಾನದಲ್ಲಿ ಹಾಗೂ ಗ್ರಾಮ, ಪಟ್ಟಣ, ನಗರಗಳಲ್ಲಿ ಸ್ವಚ್ಛತಾ ಕಾರ್ಯಗಳು ಸಾರ್ವಜನಿಕರಲ್ಲಿ ಶೌಚ ಸ್ವಚ್ಛತೆಯಿಂದ ಮಾತ್ರ ಪರಿಪೂರ್ಣವಾಗಿ ಬದಲಾವಣೆ ಎಂದರು. ಕೆಸ್ತದಲ್ಲಿ ನಡೆದ ಸ್ವಚ್ಛತಾ-ಜಾಗೃತಿ ಅಭಿಯಾನವನ್ನು ಸರಳಾ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಭಾಸ್ಕರ ಕಾಮತ್ ಉದ್ಘಾಟಿಸಿದರು. ಸಂಸ್ಥೆಯ ಸಂಯೋಜಕ ಎನ್.ಎಸ್.ಎಸ್ ಸಂಸ್ಥಾಧಿಕಾರಿಗಳಾದ ಪ್ರೊ. ಸುಧಾಕರ ಕೆ.ಎಸ್, ಪ್ರೊ. ಸುಮಾ, ಶಾಲೆ, ಕಾಲೇಜು ವಿದ್ಯಾರ್ಥಿಗಳು ಸೇರಿ ಸುಮಾರು 150ಕ್ಕೂ ಹೆಚ್ಚು ಮಂದಿ ಸ್ವಚ್ಛತಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.





ಸ್ವಚ್ಛತಾ ಹೀ ಸೇವಾ ಕಾರ್ಯಕ್ರಮದ ನಿಮಿತ್ತ ಶೃಂಗೇರಿ ಯಿಂದ ಕೆಸ್ತ ಸಿರಿಮನೆ ಜಲಪಾತದವರೆಗೆ ನಡೆದ ಬೃಹತ್ ಸ್ವಚ್ಛತಾ ಕಾರ್ಯ ನಡೆಯಿತು.

> ಪ್ರವಾಸಿ ತಾಣವಾದ ಕೆಸ್ತ ಮತ್ತು ಸಿರಿಮನೆ ಜಲಪಾತದ ಸಮೀಪ ಬರೆದಿರುವ ಪ್ಲಾಸ್ಟಿಕ್‌ಗಳನ್ನು ನಿರ್ಮೂಲನೆ ಮಾಡುವುದಕ್ಕೆ ಪ್ರವಾಸಿಗರು ಮತ್ತು ಸ್ಥಳೀಯರ ಪರಿಸರದ ಕುರಿತ ಜಾಗೃತಿ ಮೂಡಿಸಿದ ಸಂಘಟಕರ ಕಾರ್ಯಕ್ಕೆ ಸಂಸ್ಥೆಯ ಪರವಾಗಿ ಅಭಿನಂದನೆ.
> **- ಮಹೇಂದ್ರ ಬೆಳಗದ್ದೆ**, ಗ್ರಾಮ ಅರಣ್ಯ ಸಮಿತಿ ಅಧ್ಯಕ್ಷ

> ವಿದ್ಯಾರ್ಥಿಗಳು ಉತ್ತಮವಾದ ಸಮಾಜಮುಖಿ ಕಾರ್ಯಗಳಲ್ಲಿ ಇಂದು ತೊಡಗಿಕೊಂಡಿರುವುದು ಬಹಳ ಅಭಿನಂದನೀಯ. ಇಂತಹ ಕಾರ್ಯಕ್ರಮಗಳು ನಿರಂತರವಾಗಿ ನಡೆಯಲಿ.
> **-ಆರತಿ ಶೃಂಗೇಶ್ವರ್,** ಕೆಸ್ತ ಗ್ರಾಮ ಪಂಚಾಯ್ತಿ ಅಧ್ಯಕ್ಷೆ

ಕೆಸ್ತದಲ್ಲಿ ಕಾರ್ಯಾಲಯ ಎನ್.ಎಸ್.ಎಸ್ ಅಧಿಕಾರಿಗಳಾದ ಎಚ್.ಜಿ.ಮಂಜಪ್ಪ, ಸುಮಾರಾಣಿ ಎಚ್.ಜಿ, ಸರಸ್ವತಿ ಪ್ರಥಮ ದರ್ಜೆ ಕಾಲೇಜಿನ ಎನ್.ಎಸ್.ಎಸ್ ಅಧಿಕಾರಿಗಳಾದ ಪ್ರೊ. ಸುಧಾಕರ ಕೆ.ಎಸ್, ಪ್ರೊ. ಸುಮಾ ಮತ್ತಿತರರಿದ್ದರು.

Scanned by CamScanner

ಸಂಯುಕ್ತ ಕರ್ನಾಟಕ
07 ಅಕ್ಟೋಬರ್, 2018,
ಭಾನುವಾರ, ದಾವಣಗೆರೆ.

ವಿದ್ಯಾರ್ಥಿಗಳಲ್ಲಿ ಸ್ವಚ್ಛತಾ ಮನೋಭಾವ ಬೆಳೆಯಲಿ



ಶ್ರಮದಾನದಲ್ಲಿ ತೊಡಗಿದ್ದ ಕಾಲೇಜಿನ ವಿದ್ಯಾರ್ಥಿಗಳು

ಸಂ.ಕ.ಸಮಾಚಾರ ಶ್ರಮದಾನದಲ್ಲಿ ತೊಡಗಿದ್ದ ಕಾಲೇಜಿನ ವಿದ್ಯಾರ್ಥಿಗಳು ಗಾಂಧೀಜಯಂತಿಯಂದು ಸ್ವಚ್ಛತಾ ಸೇವಾ ಅಭಿಯಾನಕ್ಕಾಗಿ ಶ್ರಮದಾನ ಮಾಡಿದರು.

ಜನಮನದಲ್ಲಿ ಗಾಂಧೀಜಿ ಶಾಶ್ವತ



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ಇತ್ತೀಚೆಗೆ ಆಯೋಜಿಸಿದ್ದ ಮಹಾತ್ಮ ಗಾಂಧೀಜಿ ಹಾಗೂ ಲಾಲ್ ಬಹುದ್ದೂರ್ ಶಾಸ್ತ್ರಿಯವರ ಜಯಂತಿ ಕಾರ್ಯಕ್ರಮದಲ್ಲಿ ಎಂ.ಎನ್.ಲಿಂಗರಾಜು ಮಾತನಾಡಿದರು.

■ **ವಿಕ ಸುದ್ದಿಲೋಕ** ಶೃಂಗೇರಿ

ಐರೋಪ್ಯ ರಾಷ್ಟ್ರಗಳ ವಸಾಯತು ಶಾಹಿತ್ವವನ್ನು ಅಂತ್ಯಗೊಳಿಸಿ ಶತಮಾನದ ವ್ಯಕ್ತಿಯಾಗಿ ಜನರ ಮನದಲ್ಲಿ ಶಾಶ್ವತವಾಗಿ ನೆಲೆಸಿದವರು ಗಾಂಧೀಜಿ ಎಂದು ಮಂಡ್ಯದ ಸಹಾಯಕ ಪ್ರಾಧ್ಯಾಪಕ ಎಂ.ಎನ್.ಲಿಂಗರಾಜು ಹೇಳಿದರು.

ಪಟ್ಟಣದ ಜೆಸಿಬಿಎಂ ಕಾಲೇಜಿನಲ್ಲಿ ಇತ್ತೀಚೆಗೆ ಆಯೋಜಿಸಿದ್ದ ಮಹಾತ್ಮ ಗಾಂಧೀಜಿ ಹಾಗೂ ಲಾಲ್ ಬಹುದ್ದೂರ್ ಶಾಸ್ತ್ರಿಯವರ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ಅಹಿಂಸಾ ಮಾರ್ಗ ಮತ್ತು ನೈತಿಕತೆಯ ತಳಹದಿಯ ಮೇಲೆ ಹೋರಾಟವನ್ನು ಭಾರತ ಮತ್ತು ದಕ್ಷಿಣ ಆಫ್ರಿಕಾಗಳಲ್ಲಿ ಪ್ರಾರಂಭಿಸಿದ್ದರು ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಂಶುಪಾಲ ಡಾ. ಎಂ ಸ್ವಾಮಿ, ಗಾಂಧೀಜಿ ಹಾಗೂ ಶಾಸ್ತ್ರಿಯವರಂತಹ ಮಹಾನ್ ವ್ಯಕ್ತಿಗಳನ್ನು ದೇಶದ ಯುವ ಪೀಳಿಗೆ ಗೌರವಿಸಬೇಕು ಹಾಗೂ ಆದರ್ಶರನ್ನಾಗಿ ಸ್ವೀಕರಿಸಬೇಕು ಎಂದರು.

ರಾಷ್ಟ್ರೀಯ ಸೇವಾ ಯೋಜನಾಧಿಕಾರಿಗಳಾದ ಎ ಜಿ ಪ್ರಶಾಂತ್, ಬಿ.ಡಿ.ಸಂತೋಷ, ರೇಂಜರ್ಸ್ ಅಂಡ್ ರೋವರ್ಸ್ ಘಟಕದ ಅಧಿಕಾರಿಗಳಾದ ಸಂತೋಷ್ ಕುಮಾರ್ ಹಾಗೂ ರೇಖಾ, ಐಕ್ಯೂಎಸಿ ಸಂಯೋಜಕರಾದ ದೇವದಾಸ್ ಕೆ, ನೈತಿಕ ಅಧ್ಯಾತ್ಮಿಕ ವೇದಿಕೆಯ ಸಂಚಾಲಕರಾದ ಡಾ ಪ್ರಕಾಶ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

Scanned by CamScanner

ಜನಮನದಲ್ಲಿ ಗಾಂಧೀಜಿ ಶಾಶ್ವತ



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ಇತ್ತೀಚೆಗೆ ಆಯೋಜಿಸಿದ್ದ ಮಹಾತ್ಮ ಗಾಂಧೀಜಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿಯವರ ಜಯಂತಿ ಕಾರ್ಯಕ್ರಮದಲ್ಲಿ ಎಂ.ಎನ್.ಲಿಂಗರಾಜು ಮಾತನಾಡಿದರು.

■ ವಿಕ ಸುದ್ದಿಲೋಕ ಶೃಂಗೇರಿ

ಐರೋಪ್ಯ ರಾಷ್ಟ್ರಗಳ ವಸಾಯತು ಶಾಹಿತ್ವವನ್ನು ಅಂತ್ಯಗೊಳಿಸಿ ಶತಮಾನದ ವ್ಯಕ್ತಿಯಾಗಿ ಜನರ ಮನದಲ್ಲಿ ಶಾಶ್ವತವಾಗಿ ನೆಲೆಸಿದವರು ಗಾಂಧೀಜಿ ಎಂದು ಮಂಡ್ಯದ ಸಹಾಯಕ ಪ್ರಾಧ್ಯಾಪಕ ಎಂ.ಎನ್.ಲಿಂಗರಾಜು ಹೇಳಿದರು.

ಪಟ್ಟಣದ ಜೆಸಿಬಿಎಂ ಕಾಲೇಜಿನಲ್ಲಿ ಇತ್ತೀಚೆಗೆ ಆಯೋಜಿಸಿದ್ದ ಮಹಾತ್ಮ ಗಾಂಧೀಜಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿಯವರ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ಅಹಿಂಸಾ ಮಾರ್ಗ ಮತ್ತು ನೈತಿಕತೆಯ ತಳಹದಿಯ ಮೇಲೆ ಹೋರಾಟವನ್ನು ಭಾರತ ಮತ್ತು ದಕ್ಷಿಣ ಆಫ್ರಿಕಾಗಳಲ್ಲಿ ಪ್ರಾರಂಭಿಸಿದ್ದರು ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಂಶುಪಾಲ ಡಾ. ಎಂ ಸ್ವಾಮಿ, ಗಾಂಧೀಜಿ ಹಾಗೂ ಶಾಸ್ತ್ರಿಯವರಂತಹ ಮಹಾನ್ ವ್ಯಕ್ತಿಗಳನ್ನು ದೇಶದ ಯುವ ಪೀಳಿಗೆ ಗೌರವಿಸಬೇಕು ಹಾಗೂ ಆದರ್ಶರನ್ನಾಗಿ ಸ್ವೀಕರಿಸಬೇಕು ಎಂದರು.

ರಾಷ್ಟ್ರೀಯ ಸೇವಾ ಯೋಜನಾಧಿಕಾರಿಗಳಾದ ಎ ಜಿ ಪ್ರಶಾಂತ್, ಬಿ.ಡಿ.ಸಂತೋಷ, ರೇಂಜರ್ಸ್ ಅಂಡ್ ರೋವರ್ಸ್ ಘಟಕದ ಅಧಿಕಾರಿಗಳಾದ ಸಂತೋಷ್ ಕುಮಾರ್ ಹಾಗೂ ರೇಪಾ, ಐಕ್ಯೂಎಸಿ ಸಂಯೋಜಕರಾದ ದೇವದಾಸ್ ಕೆ, ನೈತಿಕ ಅಧ್ಯಾತ್ಮಿಕ ವೇದಿಕೆಯ ಸಂಚಾಲಕರಾದ ಡಾ ಪ್ರಕಾಶ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

Scanned by CamScanner

ಸೋಮವಾರ 1 ಅಕ್ಟೋಬರ್ 2018 ● 1 OCTOBER 2018

ಸಂ. 1 ಕನ್ನಡ ದಿನಪತ್ರಿಕೆ

ವಿಜಯವಾಣಿ

ಭಾವೈಕ್ಯದ ಕೊಂಡಿ ಹಿಂದಿ

ನಿವೃತ್ತ ಹಿಂದಿ ಶಿಕ್ಷಕ ಶಾಮಯ್ಯ ಹೇಳಿಕೆ

■ ವಿಜಯವಾಣಿ ಸುದ್ದಿಜಾಲ ಶೃಂಗೇರಿ

ಭಾರತೀಯ ಸಂಸ್ಕೃತಿ ಜತೆಗೆ ಬೆಸೆದುಕೊಂಡಿರುವ ಭಾಷೆ ಹಿಂದಿ. ಇದು ಭವ್ಯ ಭಾರತದ ಭಾವೈಕ್ಯತೆ ಬೆಸೆಯುವ ಕೊಂಡಿ ಎಂದು ನಿವೃತ್ತ ಹಿಂದಿ ಶಿಕ್ಷಕ ಶಾಮಯ್ಯ ಹೇಳಿದರು. ಜೆಸಿಬಿಎಂ ಕಾಲೇಜಿನಲ್ಲಿ ಹಿಂದಿ ವಿಭಾಗದಿಂದ ಆಯೋಜಿಸಿದ್ದ 'ಹಿಂದಿ ದಿವಸ್' ಕಾರ್ಯಕ್ರಮದಲ್ಲಿ ಮಾತನಾಡಿದರು.

ಆಧುನಿಕತೆಯ ಭರಾಟೆಯಲ್ಲಿ ಆಂಗ್ಲ ಭಾಷೆ ವ್ಯಾಮೋಹ ಹೆಚ್ಚುತ್ತಿದೆ. ಸಂಸ್ಕೃತಿಗೆ ಪೂರಕವಾಗಿರುವ ಹಿಂದಿ, ಸಂಸ್ಕೃತ ಭಾಷೆಗಳನ್ನು ನಾವು ಮರೆಯುತ್ತಿದ್ದೇವೆ. ಮಾತನಾಡುವ ಭಾಷೆ ಸರಳ ಹಾಗೂ ಸುಂದರವಾಗಿರಬೇಕು. ಅದು ಮತ್ತೊಬ್ಬರ ಮನಸ್ಸು ಮುಟ್ಟಬೇಕು. ಇಂತಹ ಅನನ್ಯ ಶಕ್ತಿ ಹಿಂದಿ ಭಾಷೆಗಿದೆ ಎಂದರು.

ಈ ಭಾಷೆಯಲ್ಲಿ ಅಪಾರ ಗ್ರಂಥ ಭಂಡಾರಗಳಿವೆ. ತ್ರಿಭಾಷಾ ಸೂತ್ರದನ್ವಯ ಎಲ್ಲರೂ ಹಿಂದಿ ಭಾಷೆ ಅಧ್ಯಯನ ಮಾಡಬೇಕು. ಹಿಂದಿ ಭಾಷೆಯ ಪ್ರಸಾರ ಕಾರ್ಯದಲ್ಲಿ ದಕ್ಷಿಣಭಾರತ ಹಿಂದಿ ಪ್ರಚಾರ ಸಭಾ ಕೊಡುಗೆ ಅಪಾರ ಎಂದು ಹೇಳಿದರು.

ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನಗದು ಪುರಸ್ಕಾರ ನೀಡಲಾಯಿತು. ಕಾಲೇಜಿನ ಪ್ರಾಚಾರ್ಯ ಡಾ. ಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಪಿಯುಸಿ ವಿಭಾಗದ ಸಂಯೋಜಕ ಪ್ರಶಾಂತ್, ಹಿಂದಿ ವಿಭಾಗದ ಉಪನ್ಯಾಸಕಿ ಜ್ಯೋತಿ ಕಾಕತ್ಕರ್, ವಿದ್ಯಾರ್ಥಿಗಳಾದ ಸ್ವಾತಿ, ಸುಮಯ್ಯಾ ಭಾನು, ಐಶ್ವರ್ಯಾ, ಆಯಿಷಾ, ವಿದ್ಯಾ ಇತರರಿದ್ದರು.

Scanned by CamScanner

ಪ್ರಜಾವಾಣಿ ಭಾನುವಾರ • ಸೆಪ್ಟೆಂಬರ್ 30, 2018

ಸೇನೆಯ ಕಾರ್ಯಕ್ಷಮತೆಗೆ ಸಾಕ್ಷಿ

'ಸರ್ಜಿಕಲ್ ಸ್ಟ್ರೈಕ್' ದ್ವಿತೀಯ ವರ್ಷಾಚರಣೆಯಲ್ಲಿ ಎನ್.ಎ. ಗೋಪಾಲ್ ಬಣ್ಣನೆ

ಪ್ರಜಾವಾಣಿ ವಾರ್ತೆ

ಶೃಂಗೇರಿ: ದೇಶದ ಗಡಿಭಾಗದಲ್ಲಿ ಅಡಗಿ ಕುಳಿತಿದ್ದ ಭಯೋತ್ಪಾದಕರನ್ನು ಮತ್ತು ಅವರ ಶಿಬಿರವನ್ನು ಸರ್ಜಿಕಲ್ ಸ್ಟ್ರೈಕ್ ಮೂಲಕ ನಾಶ ಮಾಡಿರುವುದು ಭಾರತೀಯ ಸೇನೆಯ ಅತ್ಯುತ್ತಮ ಕಾರ್ಯ ಕ್ಷಮತೆಗೆ ಸಾಕ್ಷಿಯಾಗಿದೆ ಎಂದು ಮಾಜಿ ಸೈನಿಕರ ಸಂಘದ ಶೃಂಗೇರಿ ತಾಲ್ಲೂಕು ಅಧ್ಯಕ್ಷ ಕ್ಯಾಪ್ಟನ್ ಎನ್.ಎ.ಗೋಪಾಲ್ ಕೊಂಡಾಡಿದರು.

ಶೃಂಗೇರಿ ಪಟ್ಟಣದ ಗೌರೀಶಂಕರ ಸಭಾಂಗಣದಲ್ಲಿ ಶನಿವಾರ ಆಯೋಜಿಸಲಾಗಿದ್ದ ಸರ್ಜಿಕಲ್ ಸ್ಟ್ರೈಕ್‌ನ ದ್ವಿತೀಯ ವರ್ಷಾಚರಣೆಯ ಶೌರ್ಯದಿನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'1971 ಮತ್ತು 1974ರಲ್ಲಿ ನಮ್ಮ ಸೈನ್ಯ ಬಹಳಷ್ಟು ಕಾರ್ಯಾಚರಣೆ ನಡೆಸಿ ಪಾಕ್ ಸೈನ್ಯವನ್ನು ಸದೆಬಡಿದಿತ್ತು. ಆದರೆ, 2016ರಲ್ಲಿ ನಡೆದ ಸರ್ಜಿಕಲ್ ಸ್ಟ್ರೈಕ್ ವಿಶೇಷವಾದುದು. ಒಂದಿನಿತು ಸುಳಿವು ಸಿಗದಂತೆ ನಮ್ಮ ಸೈನಿಕರು ಪಾಕ್ ನೆಲಕ್ಕೆ ಹೋಗಿ, ಶತ್ರು ದೇಶದ ಬಂಕರ್‌ಗಳನ್ನು ನಾಶ ಮಾಡಿ, ಸುರಕ್ಷಿತವಾಗಿ ವಾಪಸ್ ಬಂದಿರುವುದು ಹೆಮ್ಮೆಯ ಸಂಗತಿ' ಎಂದು ಹೇಳಿದರು.

ಇಂದಿನ ಶೌರ್ಯ ದಿನದ ಆಚರಣೆಯ ಕಾರ್ಯಕ್ರಮದಲ್ಲಿ ಕೇವಲ ಮಾಜಿ ಸೈನಿಕರು ಮತ್ತು ಎನ್.ಸಿ.ಸಿ. ಕೆಡೆಟ್‌ಗಳ ಪಾಲ್ಗೊಳ್ಳುವಿಕೆ ಕಾಣುತ್ತಿದ್ದು, ಸಾರ್ವಜನಿಕರು ಭಾಗವಹಿಸದಿರುವುದು ಬೇಸರದ ಸಂಗತಿ ಎಂದು ಹೇಳಿದರು.

ಪೊಲೀಸ್ ಇನ್‌ಸ್ಪೆಕ್ಟರ್ ಪ್ರಮೋದ್‌ಕುಮಾರ್ ಮಾತನಾಡಿ, 'ಗಡಿಯಲ್ಲಿನ ನಮ್ಮ ಯೋಧರ ದೇಶ ರಕ್ಷಣೆಯ ಕಾರ್ಯಾಚರಣೆಗಳು ನಮಗೆ ಸ್ಫೂರ್ತಿ ತರಬೇಕು. ವಿದ್ಯಾರ್ಥಿ ದಿನದಲ್ಲಿ ಎನ್.ಸಿ.ಸಿ. ಯಲ್ಲಿ ಸೇರ್ಪಡೆಗೊಂಡಿದ್ದರಿಂದ ತನ್ನ ರಕ್ತದಲ್ಲಿ ದೇಶಪ್ರೇಮ, ಶಿಸ್ತುಪಾಲನೆ ಮತ್ತು ಕರ್ತವ್ಯ ವಿಷಯ ಅಂಶ ಅಡಗಿದೆ. ಇಂದಿನ ಕೆಡೆಟ್‌ಗಳು ಭವಿಷ್ಯದಲ್ಲಿ ಭಾರತೀಯ ಸೇನೆಗೆ ಸೇರ್ಪಡೆಗೊಳ್ಳಬೇಕು' ಎಂದು ಸಲಹೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಜೆ.ಸಿ.ಬಿ.ಎಂ ಕಾಲೇಜಿನ ಪ್ರಾಚಾರ್ಯ ಡಾ.ಸ್ವಾಮಿ ಮಾತನಾಡಿ, ವಿಶ್ವವಿದ್ಯಾಲಯದ ಅನುದಾನ ಆಯೋಗದಿಂದ ಬಂದಿರುವ ನಿರ್ದೇಶನದ ಮೇರೆಗೆ ಇಂದು ಶೌರ್ಯದಿನಾಚರಣೆ ನಡೆಸಲಾಗುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಎನ್.ಸಿ.ಸಿ. ಅಧಿಕಾರಿ ಕುಮಾರಸ್ವಾಮಿ ಉಡುಪ, ಪದವಿಪೂರ್ವ ಕಾಲೇಜು ಸಂಯೋಜಕ ಎ.ಜಿ.ಪ್ರಶಾಂತ್, ಪಟ್ಟಣ ಪಂಚಾಯಿತಿ ಅಧ್ಯಕ್ಷೆ ಶಾರದಾ ಗೋಪಾಲ್, ಗೃಹರಕ್ಷಕ ದಳದ ಹಿರಿಯ ಅಧಿಕಾರಿ ನಟೇಶ್ ಭಾಗವಹಿಸಿದ್ದರು.ಪಟ್ಟಣದ ಪುರ ದ್ವಾರದಿಂದ ಸಭಾಂಗಣದ ವರೆಗೆ ಎನ್.ಸಿ.ಸಿ. ಕೆಡೆಟ್‌ಗಳು ಹಾಗೂ ಮಾಜಿ ಸೈನಿಕರು ಪಥಸಂಚಲನ ನಡೆಸಿದರು.



ಸರ್ಜಿಕಲ್ ಸ್ಟ್ರೈಕ್‌ನ ದ್ವಿತೀಯ ವರ್ಷಾಚರಣೆ ಆಂಗವಾಗಿ ಮಾಜಿ ಸೈನಿಕರು ಹಾಗೂ ಎನ್.ಸಿ.ಸಿ. ಕೆಡೆಟ್‌ಗಳು ಶೃಂಗೇರಿ ಪಟ್ಟಣದಲ್ಲಿ ಪಥಸಂಚಲನ ನಡೆಸಿದರು.

ಮುಖ್ಯಾಂಶಗಳು

- ಹಲವು ಬಾರಿ ಪಾಕ್ ಸೈನ್ಯವನ್ನು ಭಾರತ ಸದೆಬಡಿದಿದೆ
- 2016ರಲ್ಲಿ ನಡೆದ ಸರ್ಜಿಕಲ್ ಸ್ಟ್ರೈಕ್ ವಿಶೇಷವಾದುದು
- ಸುರಕ್ಷಿತವಾಗಿ ವಾಪಸ್ ಬಂದಿರುವುದು ಹೆಮ್ಮೆಯ ಸಂಗತಿ

Scanned by CamScanner



ಚಿಕ್ಕಮಗಳೂರಿನಲ್ಲಿ ನಡೆದ ಪದವಿ ಪೂರ್ವ ಕಾಲೇಜುಗಳ ಬಿಲ್ಲಾಮಟ್ಟದ ಕ್ರೀಡಾಕೂಟದಲ್ಲಿ ಬ್ಯಾಡ್ಮಿಂಟನ್ ಮತ್ತು ಟೇಬಲ್ ಟೆನ್ನಿಸ್ ಪ್ರಥಮ ಸ್ಥಾನ ಹಾಗೂ ಬಾಲ್ ಬ್ಯಾಡ್ಮಿಂಟನ್ ಮತ್ತು ಟೆನಿಕಾಯ್ಟ್‌ನಲ್ಲಿ ದ್ವೀತಿಯ ಸ್ಥಾನ ಗಳಿಸಿದ ರಾಜ್ಯ ಮಟ್ಟಕ್ಕೆ ಆಯ್ಕೆಯಾದ ಶೃಂಗೇರಿ ಜೆಸಿಬಿಎಂ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು.

Scanned by CamScanner

ಕನ್ನಡಪ್ರಭ
ಶುಕ್ರವಾರ 28.9.2018

ಕಾನೂನು ಅರಿವು ನೆರವು ಕಾರ್ಯಕ್ರಮ ಉದ್ಘಾಟಿಸಿದ ನ್ಯಾ.ಸೂರ್ಯನಾರಾಯಣ

ಕಾನೂನು ಅರಿವಿನಿಂದ ಅಪರಾಧ ನಿಯಂತ್ರಣ

ಶೃಂಗೇರಿ: ಕಾನೂನು ಅರಿವಿನಿಂದ ಅಪರಾಧ ನಿಯಂತ್ರಣ ಸಾಧ್ಯ ಎಂದು ಶೃಂಗೇರಿ ಜೆಎಂಎಫ್‌ಸಿ, ಸಿವಿಲ್ ನ್ಯಾಯಾಲಯದ ನ್ಯಾಯಾಧೀಶ ಎಸ್.ಸೂರ್ಯನಾರಾಯಣ ಹೇಳಿದರು.

ಪಟ್ಟಣದ ಜೆಸಿಬಿಎಂ ಕಾಲೇಜಿನಲ್ಲಿ ತಾಲೂಕು ಕಾನೂನುಸೇವಾಸಮಿತಿ, ನ್ಯಾಯವಾದಿಗಳ ಸಂಘದ ಆಶ್ರಯದಲ್ಲಿ ನಡೆದ ಕಾನೂನು ಅರಿವು ನೆರವು ಕಾರ್ಯಕ್ರಮ ಉದ್ಘಾಟಿಸಿ, ಮನುಷ್ಯನ ಹುಟ್ಟಿನಿಂದ ಸಾವಿನವರೆಗೂ ಕಾನೂನುಗಳಿವೆ. ಕಾನೂನಿನ ವ್ಯಾಪ್ತಿ ವಿಶಾಲವಾದುದು. ಕಾನೂನು ಕಾಯ್ದೆ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಕೆಲಸ ನಡೆಯಬೇಕಿದೆ. ಇದು ಜನಸಾಮಾನ್ಯರಿಗೆ ತಲುಪಬೇಕು ಎಂದರು.

ಕಾನೂನು ಕಾಯ್ದೆಗಳು ಸದೃಳಕೆಯಾಗಬೇಕು. ಕಾನೂನು ಸೇವಾ ಸಮಿತಿ ಉಚಿತ ಕಾನೂನು ಅರಿವು ನೆರವು ಕಾರ್ಯಕ್ರಮಗಳ ಮೂಲಕ ದುರ್ಬಲರಿಗೆ, ಬಡವರಿಗೆ ಉಚಿತ ಕಾನೂನು ನೆರವು ನೀಡುತ್ತಿದೆ. ಜನತಾ ನ್ಯಾಯಾಲಯಗಳಿರುವುದು ಜನಸಾಮಾನ್ಯರಿಗೆ ಎಂದು ತಿಳಿಸಿದರು.

ಮೂಲಭೂತಹಕ್ಕುಗಳಜೊತೆಗೆಮೂಲಭೂತ ಕರ್ತವ್ಯಗಳನ್ನು ಪಾಲಿಸಬೇಕು. ನಮ್ಮ ಸಂವಿಧಾನ, ಕಾನೂನಿಗೆ ಬದ್ಧರಾಗಿ ನಡೆದುಕೊಳ್ಳಬೇಕು. ವಿದ್ಯಾರ್ಥಿಗಳು ಕಾನೂನಿನ ಬಗ್ಗೆ ಅರಿವು ಮೂಡಿಸಿಕೊಳ್ಳಬೇಕು. ಕಾನೂನಿನ ಅಜ್ಞಾನ ಕ್ಷಮಾರ್ಹವಲ್ಲ. ಜನಸಾಮಾನ್ಯರು ಕಾನೂನು ಕಾಯ್ದೆಗಳ ಸದುಪಯೋಗ ಪಡೆದುಕೊಳ್ಳಬೇಕು ಎಂದರು.



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ನಡೆದ ಕಾನೂನು ಅರಿವು ನೆರವು ಕಾರ್ಯಕ್ರಮದಲ್ಲಿ ನ್ಯಾ. ಸೂರ್ಯನಾರಾಯಣ ಮಾತನಾಡಿದರು.

ತಾಲೂಕು ವಕೀಲರ ಸಂಘದ ಅಧ್ಯಕ್ಷ ಕೆ.ಆರ್.ಸುರೇಶ್ ಅಧ್ಯಕ್ಷತೆವಹಿಸಿದ್ದರು. ನ್ಯಾಯವಾದಿ ಎಂ.ನಾಗೇಂದ್ರ ಪ್ರಸಾದ್, ಪೊಲೀಸ್ ದೂರು ಪ್ರಾಧಿಕಾರದ ಅಸ್ತಿತ್ವ ಕರ್ತವ್ಯಗಳು ಮತ್ತು ಸಂತ್ರಸ್ತರ ಪರಿಹಾರ ಯೋಜನೆಗಳು ಕುರಿತು, ನೆಮ್ಮಾರ್ ಅಬೂಬಕರ್ ಸಾಮಾನ್ಯ ಕಾನೂನುಗಳ ಕುರಿತು ಉಪನ್ಯಾಸ ನೀಡಿದರು.

ಮುಖ್ಯ ಅತಿಥಿಗಳಾಗಿ ಕಾಲೇಜಿನ ಪ್ರಾಚಾರ್ಯ ಡಾ.ಎಂ.ಸ್ವಾಮಿ, ತಾಲೂಕು ದಂಡಾಧಿಕಾರಿ ನಾರಾಯಣ ಕನಕರೆಡ್ಡಿ ಮತ್ತಿತರರು ಉಪಸ್ಥಿತರಿದ್ದರು. ಪ್ರಶಾಂತ್ ನಿರೂಪಿಸಿದರು.

Scanned by CamScanner

ಪ್ರತಿಯೊಬ್ಬರಿಗೂ ಕಾನೂನು ಅರಿವು ಅಗತ್ಯ

ಶೃಂಗೇರಿ: ಪ್ರತಿಯೊಬ್ಬರೂ ಕಾನೂನು ಜ್ಞಾನ ಹೊಂದಿ, ಪ್ರಜ್ಞಾವಂತರಾಗಿರಬೇಕು ಎಂದು ತಾಲೂಕು ಕಾನೂನು ಸೇವಾ ಸಮಿತಿ ಸದಸ್ಯ ಹಾಗೂ ನ್ಯಾಯ ದೀಶ ಎಸ್. ಸೂರ್ಯನಾರಾಯಣ ಹೇಳಿದರು.

ಜೆಸಿಬಿಎಂ ಕಾಲೇಜಿನಲ್ಲಿ ತಾಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ, ಎನ್ಎಸ್ಎಸ್ ಆಶ್ರಯದಲ್ಲಿ ನ್ಯಾಯ ಸಂಯೋಗ ಮತ್ತು ಸಂತ್ರಸ್ತ ಪರಿಹಾರ ಯೋಜನೆಯ ಬಗ್ಗೆ ಗುರುವಾರ ಏರ್ಪಡಿಸಿದ್ದ ಕಾನೂನು ಅರಿವು ನೆರವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಸಂವಿಧಾನ ನೀಡಿರುವ ಹಕ್ಕನ್ನು ಪಡೆಯಬೇಕಾದರೆ ನಮ್ಮ ಕರ್ತವ್ಯವನ್ನು ಪಾಲಿಸಬೇಕು.ನಾವು ಸಾಮಾನ್ಯ ಕಾನೂನಿನ ಜ್ಞಾನ ಹೊಂದಿ ಅಶಕ್ತರಿಗೆ,ಆನಕ್ಷರಸ್ಥರಿಗೆ ಸೂಕ್ತ ನೆರವು,ಸಹಾಯ ನೀಡಬೇಕು ಎಂದರು.

ತಹಸೀಲ್ದಾರ್ ನಾರಾಯಣರಡ್ಡಿ ಕನಕರಡ್ಡಿ ಮಾತನಾಡಿ,ವಿದ್ಯಾರ್ಥಿಗಳು ತಮ್ಮ ಉಜ್ವಲ ಭವಿಷ್ಯಕ್ಕಾಗಿ ಕೇವಲ ಪಠ್ಯ ಪುಸ್ತಕಗಳಿಗೆ ಸೀಮಿತವಾಗಬಾರದು. ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ಸಿದ್ಧತೆ ಮಾಡಿಕೊಳ್ಳಬೇಕು. ಇದಕ್ಕಾಗಿ ಪ್ರತಿ ದಿನವೂ ಕನಷ್ಠ ಒಂದು ವೃತ್ತ ಪತ್ರಿಕೆಯನ್ನು ಅಮೂಲಾಗ್ರವಾಗಿ ಓದಬೇಕು.



ಶೃಂಗೇರಿ ಶ್ರೀ ಜೆಸಿಬಿಎಂ ಕಾಲೇಜಿನಲ್ಲಿ ಏರ್ಪಡಿಸಿದ್ದ ಕಾನೂನು ಅರಿವು ನೆರವು ಕಾರ್ಯಕ್ರಮ ಉದ್ಘಾಟಿಸಿ ನ್ಯಾಯಾಧೀಶ ಎಸ್.ಸೂರ್ಯ ನಾರಾಯಣ ಮಾತನಾಡಿದರು.

ಇದಕ್ಕಾಗಿ ಪದವಿ ಮುಗಿಯವರೆಗೆ ಕಾಯದೇ, ತಮ್ಮ ವಿದ್ಯಾರ್ಥಿ ಜೀವನದಿಂದ ಸಾಮಾನ್ಯ ಜ್ಞಾನ ಪಡೆಯಬೇಕು. ಈಗಿನಿಂದಲೇ ವಿವಿಧ ಇಲಾಖೆಗಳ ಪರಿಚಯ ಮಾಡಿಕೊಂಡು ಪೋಷಕರಿಗೆ ಅಗತ್ಯವಾಗಿರುವ ದಾಖಲೆ ಪಡೆಯಲು ಅರ್ಜಿ ಬರೆಯುವುದನ್ನು ಅಭ್ಯಾಸ ಮಾಡಿಕೊಳ್ಳಬೇಕು. ಸಾಮಾನ್ಯ ಜ್ಞಾನ ಪಡೆಯಲು ಅಗತ್ಯ ಮಾಹಿತಿ ಹೊಂದಿರಬೇಕು ಎಂದರು.

ವಕೀಲರ ಸಂಘದ ಅಧ್ಯಕ್ಷ ಕೆ.ಆರ್.ಸುರೇಶ್ ಅಧ್ಯಕ್ಷತೆ ವಹಿಸಿದ್ದರು.

ಪೊಲೀಸ್ ದೂರು ಪ್ರಾಧಿಕಾರದ ಅಸ್ತಿತ್ವ ಕರ್ತವ್ಯ ಮತ್ತು ಸಂತ್ರಸ್ತ ಪರಿಹಾರ ಯೋಜನೆ ಬಗ್ಗೆ ಆಬೂಬಕ್ಕರ್ ಸಾಮಾನ್ಯ ಕಾನೂನಿನ ಬಗ್ಗೆ ಉಪನ್ಯಾನ ನೀಡಿದರು.

ಪ್ರಾಂಶುಪಾಲ ಡಾ.ಸ್ವಾಮಿ, ಎನ್ಎಸ್ಎಸ್ ಅಧಿಕಾರಿ ಎ.ಜಿ.ಪ್ರಶಾಂತ್ ಇದ್ದರು.

Scanned by CamScanner

ಸಮಾಜಮುಖಿ ಕಾರ್ಯ ಕೈಗೊಳ್ಳಲು ಸಲಹೆ

■ ವಿಕ ಸುದ್ದಿಲೋಕ ಶೃಂಗೇರಿ

ವಿದ್ಯಾರ್ಥಿ ಜೀವನದಲ್ಲಿ ಶಿಕ್ಷಣದೊಂದಿಗೆ ಸಮಾಜಮುಖಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಸಮಾಜದ ಉನ್ನತಿಗೆ ಶ್ರಮಿಸಬೇಕು ಎಂದು ಭಾರತೀ ವಿದ್ಯಾಸಂಸ್ಥೆಯ ಕೋಶಾಧಿಕಾರಿ ವೇಣು ಮಾಧವ ನಾಯಕ್ ಹೇಳಿದರು.

ಜೆಬಿಎಂ ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಸ್ಥಾಪನಾ ದಿನಾಚರಣೆಯ ಕಾರ್ಯಕ್ರಮದಲ್ಲಿ ಮಾತನಾಡಿದರು. ಕಳವರ್ಗದ ಸಮಾಜವನ್ನೂ ತಲುಪಿ ಜನ ಜೀವನವನ್ನು ಅರಿತು ಸಮಾಜದಲ್ಲಿ ಧನಾತ್ಮಕ ಬದಲಾವಣೆ ತರುವ ಕಾರ್ಯವನ್ನು ರಾಷ್ಟ್ರೀಯ ಸೇವಾ ಯೋಜನೆ ನಡೆಸುತ್ತಾ ಬಂದಿದೆ. ಹಾಗೂ ಜೀವನಕ್ಕೆ ಅಗತ್ಯವಿರುವ ಮೌಲ್ಯ ಶಿಕ್ಷಣ ಒದಗಿಸುತ್ತ ಉತ್ತಮ ಭವಿಷ್ಯ ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ ಎಂದರು.

ಜಿಪಂ ಸದಸ್ಯೆ ಶಿಲ್ಪಾ ಮಾತನಾಡಿ, ಮುಂದುವರಿದ ದೇಶಗಳಲ್ಲಿ ಜನರು ಸ್ವಪ್ರೇರಣೆಯಿಂದ ಸ್ವಚ್ಛತಾ ಕ್ರಮಗಳನ್ನು ಅನುಸರಿಸುವುದರಿಂದಲೇ ಶುಚಿತ್ವ ಕ್ಷೇತ್ರದಲ್ಲಿ ಮುಂದಿದ್ದಾರೆ. ಹಾಗೇಯೇ ನಿತ್ಯ ಜೀವನದಲ್ಲಿ ಸ್ವಚ್ಛತೆ ಅಳವಡಿಸಿಕೊಂಡಾಗ ಮಾತ್ರವೇ ದೇಶ ಶುಚಿಯಾಗಿಡಲು ಸಾಧ್ಯವೇ ಹೊರತು ಭಾಷಣಗಳಿಂದಲ್ಲ ಎಂದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಡಾ ಎಂ ಸ್ವಾಮಿ ಮಾತನಾಡಿ, ಸ್ವಚ್ಛತಾ ಮನೋಭಾವವನ್ನು ಜನರಲ್ಲಿ ಮೂಡಿಸುವಲ್ಲಿ ಎನ್.ಎಸ್.ಎಸ್.ನ ಪಾತ್ರ ಪ್ರಶಂಸನಾರ್ಹವಾದುದು. ಸ್ವಯಂಸೇವಕರಾಗಿ ಉತ್ತಮ ಗುಣಗಳನ್ನು ರೂಢಿಸಿಕೊಂಡು ಸಮಾಜಕ್ಕೆ ಆದರ್ಶವಾಗಿ ಎಂದರು.ಇದೇ ಸಂದರ್ಭದಲ್ಲಿ ಸ.ಪಿ.ಪ್ರಾ.ಶಾಲೆ ವಿದ್ಯಾನಗರ ಹಾಗೂ ಜೆ.ಸಿ.ಬಿ.ಎಂ.ಕಾಲೇಜಿಗೆ ಎನ್.ಎಸ್.ಎಸ್.ವತಿಯಿಂದ ಕಸ ಸಂಗ್ರಹಣಾ ಬುಟ್ಟಿಗಳನ್ನು ವಿತರಿಸಲಾಯಿತು.ಎನ್.ಎಸ್.ಎಸ್ ಅಧಿಕಾರಿಗಳಾದ ಎ.ಜಿ.ಪ್ರಶಾಂತ್, ಬಿ.ಡಿ. ಸಂತೋಷ್ ಮತ್ತಿತರರು ಹಾಜರಿದ್ದರು.



ಶೃಂಗೇರಿ ಜೆಬಿಎಂ ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಸ್ಥಾಪನಾ ದಿನಾಚರಣೆಯ ಕಾರ್ಯಕ್ರಮದಲ್ಲಿ ಜಿಪಂ ಸದಸ್ಯೆ ಶಿಲ್ಪಾ ಮಾತನಾಡಿದರು.

Scanned by CamScanner

ವಿಶ್ವವಾಣಿ
ದಾವಣಗೆರೆ
• vishwavani.news
26.09.2018 ಬುಧವಾರ

ಶಿಕ್ಷಣದೊಂದಿಗೆ, ಸಮಾಜಮುಖಿ ಕಾರ್ಯಕ್ರಮದಲ್ಲಿ ಭಾಗವಹಿಸಿ | ವೇಣು ಮಾಧವ ನಾಯಕ್ ಅಭಿಮತ

ವಿದ್ಯಾರ್ಥಿಯ ವ್ಯಕ್ತಿತ್ವ ವಿಕಸನಕ್ಕೆ ಎನ್‌ಎಸ್‌ಎಸ್ ಸಹಕಾರಿ

ವಿಶ್ವವಾಣಿ ಸುದ್ದಿಮನೆ ಶೃಂಗೇರಿ

ವಿದ್ಯಾರ್ಥಿಯ ಸಂಪೂರ್ಣ ವ್ಯಕ್ತಿತ್ವ ವಿಕಸನಕ್ಕೆ ಎನ್‌ಎಸ್‌ಎಸ್‌ನಲ್ಲಿ ಭಾಗವಹಿಸಿವುದು ಅತ್ಯಂತ ಸಹಕಾರಿಯಾಗಿದೆ ಎಂದು ಎಂದು ರೋಟರಿ ಕ್ಲಬ್ ಅಧ್ಯಕ್ಷ ವೇಣು ಮಾಧವ ನಾಯಕ್ ಹೇಳಿದರು.

ಜೆಸಿಬಿಎಂ ಕಾಲೇಜಿನಲ್ಲಿ ನಡೆದ ರಾಷ್ಟ್ರೀಯ ಸೇವಾ ಯೋಜನೆಯ ಸ್ಥಾಪನಾ ದಿನಾಚರಣೆಯ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿದ ಅವರು, ವಿದ್ಯಾರ್ಥಿ ಜೀವನದಲ್ಲಿ ಶಿಕ್ಷಣ ದೊಂದಿಗೆ ಪರೋಕ್ಷವಾಗಿ ಸಮಾಜಮುಖಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಸಮಾಜದ ಉನ್ನತಿಗೆ ಶ್ರಮಿಸಬೇಕು. ಕೆಳವರ್ಗದ ಸಮಾಜವನ್ನು ತಲುಪಿ ಜನ ಜೀವನವನ್ನು ಅರಿತು ಸಮಾಜದಲ್ಲಿ ಧನಾತ್ಮಕ ಬದಲಾವಣೆಯನ್ನು ತರುವ ಕಾರ್ಯವನ್ನು ರಾಷ್ಟ್ರೀಯ ಸೇವಾ ಯೋಜನೆ ನಡೆಸುತ್ತಾ ಬಂದಿದೆ. ಹಾಗೂ ಜೀವನಕ್ಕೆ ಆಗತ್ಯವಿರುವ



ಜೆಸಿಬಿಎಂ ಕಾಲೇಜಿನಲ್ಲಿ ನಡೆದ ರಾಷ್ಟ್ರೀಯ ಸೇವಾ ಯೋಜನೆಯ ಸ್ಥಾಪನಾ ದಿನಾಚರಣೆಯ ಕಾರ್ಯಕ್ರಮದಲ್ಲಿ ಭಾಗವಹಿಸಿ ರೋಟರಿ ಅಧ್ಯಕ್ಷ ವೇಣು ಮಾಧವ ನಾಯಕ್ ಮಾತನಾಡಿದರು.

ಮೌಲ್ಯ ಶಿಕ್ಷಣವನ್ನು ಕಲಿಸುತ್ತಾ ಉತ್ತಮ ಭವಿಷ್ಯವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ ಎಂದರು.

ಕಾಲೇಜಿನ ಪ್ರಾಂಶುಪಾಲ ಡಾ.ಎಂ. ಸ್ವಾಮಿ ಅವರು ಮಾತನಾಡಿ, ಸ್ವಚ್ಛತಾ ಮನೋಭಾವವನ್ನು ಜನರಲ್ಲಿ ಮೂಡಿಸುವಲ್ಲಿ ಎನ್‌ಎಸ್‌ಎಸ್‌ನ ಪಾತ್ರ ಪ್ರಶಂಸನಾರ್ಹವಾದುದು. ಸ್ವಯಂಸೇವಕರಾಗಿ ಉತ್ತಮ ಗುಣಗಳನ್ನು ರೂಢಿಸಿಕೊಂಡು ವಿದ್ಯಾರ್ಥಿಗಳು ಸಮಾಜಕ್ಕೆ ಆದರ್ಶವಾ

> ಅಭಿವೃದ್ಧಿಯಾದ ದೇಶಗಳಲ್ಲಿ ಜನರು ಸ್ವಪ್ರೇರಣೆಯಿಂದ ಸ್ವಚ್ಛತಾ ಕ್ರಮಗಳನ್ನು ಅನುಸರಿಸುವುದರಿಂದಲೇ ಉಚಿತ್ತ ಕ್ಷೇತ್ರದಲ್ಲಿ ಮುಂದಿದ್ದಾರೆ. ಹಾಗೆಯೇ ನಮ್ಮ ನಿತ್ಯ ಜೀವನದಲ್ಲಿ ಸ್ವಚ್ಛತೆ ಅಳವಡಿಸಿಕೊಂಡಾಗ ಪರಿಸರವನ್ನು ಸ್ವಚ್ಛವಾಗಿಡಲು ಸಾಧ್ಯ. ಎನ್‌ಎಸ್‌ಎಸ್‌ನ ಸ್ವಯಂಸೇವಕರಾಗಿ ಸಾಧ್ಯವಾದಷ್ಟು ಸಮಾಜದಲ್ಲಿ ಸ್ವಚ್ಛತೆಯನ್ನು ತರಲು ಪ್ರಯತ್ನಿಸಬೇಕು.
>
> - ಶಿಲ್ಪಾರವಿ, ಜಿಪಂ ಸದಸ್ಯೆ

ಗಬೇಕು. ವೈಕ್ತಿಕ ಪ್ರಗತಿಯ ಜೊತೆ ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಂಡರೆ ಜೀವನ ಸಾರ್ಥಕವಾಗುತ್ತದೆ ಎಂದರು.

ವಿದ್ಯಾನಗರ ಸ.ಹಿ.ಪ್ರಾ.ಶಾಲೆ ಹಾಗೂ ಜೆಸಿಬಿಎಂ ಕಾಲೇಜಿಗೆ ಎನ್‌ಎಸ್‌ಎಸ್‌ನಿಂದ ಕಸ ಸಂಗ್ರಹಣಾ ಬುಟ್ಟಿಗಳನ್ನು ವಿತರಿಸಲಾಯಿತು.ಕಾರ್ಯಕ್ರಮದಲ್ಲಿ ಎನ್.ಎಸ್.ಎಸ್. ಅಧಿಕಾರಿಗಳಾದ ಎ.ಜಿ.ಪ್ರಶಾಂತ್, ಬಿ.ಡಿ.ಸಂತೋಷ್ ಇದ್ದರು.

Scanned by CamScanner

ಮಂಗಳವಾರ • ಸೆಪ್ಟೆಂಬರ್ 25, 2018 ಪ್ರಜಾವಾಣಿ

ವ್ಯಕ್ತಿತ್ವ ವಿಕಸನಕ್ಕೆ ಎನ್.ಎಸ್.ಎಸ್ ಸಹಕಾರಿ: ನಾಯಕ್

ಶೃಂಗೇರಿ: ವಿದ್ಯಾರ್ಥಿ ಸಂಪೂರ್ಣ ವ್ಯಕ್ತಿತ್ವ ವಿಕಸನಕ್ಕೆ ಎನ್.ಎಸ್.ಎಸ್. ನಲ್ಲಿ ತೊಡಗಿಸಿಕೊಳ್ಳುವುದು ಸಹಕಾರಿ. ವಿದ್ಯಾರ್ಥಿ ಜೀವನದಲ್ಲಿ ಶಿಕ್ಷಣದ ಜತಗೆ ಪಠ್ಯೇತರವಾಗಿ ಸಮಾಜಮುಖಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಸಮಾಜದ ಉನ್ನತಿಗೆ ಶ್ರಮಿಸಬೇಕು ಎಂದು ರೋಟರಿ ಕ್ಲಬ್ ಅಧ್ಯಕ್ಷರು ಹಾಗೂ ಭಾರತೀ ವಿದ್ಯಾಸಂಸ್ಥೆಯ ಕೋಶಾಧಿಕಾರಿ ವೇಣು ಮಾಧವ ನಾಯಕ್ ಹೇಳಿದರು.

ಶೃಂಗೇರಿ ಜೆ.ಸಿ.ಬಿ.ಎಂ. ಕಾಲೇಜಿನಲ್ಲಿ ನಡೆದ ರಾಷ್ಟ್ರೀಯ ಸೇವಾ ಯೋಜನೆಯ ಸ್ಥಾಪನಾ ದಿನಾಚರಣೆಯ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಅವರು ಮಾತನಾಡಿದರು.



ಜೆ.ಸಿ.ಬಿ.ಎಂ.ಕಾಲೇಜಿನಲ್ಲಿ ನಡೆದ ಎನ್‌ಎಸ್‌ಎಸ್ ಸ್ಥಾಪನಾ ದಿನಾಚರಣೆಯ ಕಾರ್ಯಕ್ರಮದಲ್ಲಿ ವೇಣು ಮಾಧವ ನಾಯಕ್ ಮಾತನಾಡಿದರು.

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಜಿಲ್ಲಾ ಪಂಚಾಯಿತಿ ಸದಸ್ಯ ಶಿಲ್ಪಾರವಿ ಮಾತನಾಡಿ "ಮುಂದುವರಿದ ದೇಶಗಳಲ್ಲಿ ಜನರು ಸ್ವಪ್ರೇರಣೆಯಿಂದ ಸ್ವಚ್ಛತಾ ಕ್ರಮಗಳನ್ನು ಅನುಸರಿಸುವುದರಿಂದಲೇ ಶುಚಿತ್ವ ಕ್ಷೇತ್ರದಲ್ಲಿ ಮುಂದಿದ್ದಾರೆ. ಹಾಗೆಯೇ ನಮ್ಮ ನಿತ್ಯ ಜೀವನದಲ್ಲಿ ಸ್ವಚ್ಛತೆಯನ್ನು ಅಳವಡಿಸಿಕೊಂಡಾಗ ಮಾತ್ರವೇ ದೇಶವನ್ನು ಶುಚಿಯಾಗಿಡಲು ಸಾಧ್ಯ ಎಂದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಡಾ ಎಂ ಸ್ವಾಮಿ ಮಾತನಾಡಿ, ಸ್ವಚ್ಛತಾ ಮನೋಭಾವವನ್ನು ಜನರಲ್ಲಿ ಮೂಡಿಸುವಲ್ಲಿ ಎನ್.ಎಸ್.ಎಸ್.ನ ಪಾತ್ರ ಪ್ರಶಂಸನಾರ್ಹ ಎಂದು ಅವರು ಹೇಳಿದರು. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ವಿದ್ಯಾನಗರ ಹಾಗೂ ಜೆ.ಸಿ.ಬಿ.ಎಂ.ಕಾಲೇಜಿಗೆ ಎನ್.ಎಸ್.ಎಸ್.ವತಿಯಿಂದ ಕಸ ಸಂಗ್ರಹಣಾ ಬುಟ್ಟಿಗಳನ್ನು ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಎನ್.ಎಸ್.ಎಸ್. ಕಾರ್ಯಕ್ರಮಾಧಿಕಾರಿ ಎ.ಜಿ.ಪ್ರಶಾಂತ್, ಬಿ.ಡಿ.ಸಂತೋಷ್ ಮತ್ತಿತರರು ಹಾಜರಿದ್ದರು.

Scanned by CamScanner

ಸಂಯುಕ್ತ ಕರ್ನಾಟಕ
31 ಆಗಸ್ಟ್, 2018,
ಶುಕ್ರವಾರ, ದಾವಣಗೆರೆ.

ಸೆ.5ರಂದು ಗುರುನಮನ-ಉಪನ್ಯಾಸ

ಸಂ.ಕ ಸಮಾಚಾರ ಚಿಕ್ಕಮಗಳೂರು

ಶೃಂಗೇರಿಯ ಜೆಸಿಬಿಎಂ ಕಾಲೇಜಿನ ಹಳೆ ವಿದ್ಯಾರ್ಥಿ ಸಂಘದಿಂದ ಗುರುನಮನ ಹಾಗೂ ಡಾ.ಕೆ.ಬಿ ರಾಮಕೃಷ್ಣರಾವ್ ದತ್ತಿ ಉಪನ್ಯಾಸ ಕಾರ್ಯಕ್ರಮ ಸೆ.5ರಂದು ಕಾಲೇಜಿನಲ್ಲಿ ಆಯೋಜಿಸಲಾಗಿದೆ ಎಂದು ಸಂಘದ ಅಧ್ಯಕ್ಷ ದಿನೇಶ್.ಎ.ಶೆಟ್ಟಿ ಹೇಳಿದರು.

ಕಾಲೇಜಿನಲ್ಲಿ ಬುಧವಾರ ಹಳೇ ವಿದ್ಯಾರ್ಥಿ ಸಂಘದ ಕಾರ್ಯಕಾರಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಪ್ರತಿ ವರ್ಷ ಹಳೇ ವಿದ್ಯಾರ್ಥಿ ಸಂಘದಿಂದ ಕಾಲೇಜು ವಿದ್ಯಾಭ್ಯಾಸಕ್ಕೆ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿ ವರ್ಷ ಪ್ರೋತ್ಸಾಹ ಧನ ನೀಡಲಾಗುತ್ತಿದೆ. ಸಂಘ ಆರಂಭಗೊಂಡು 28 ವರ್ಷವಾಗಿದ್ದು, ಇದುವರೆಗೆ 300ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಶಿಕ್ಷಣಕ್ಕೆ ನೆರವು ನೀಡಲಾಗಿದೆ.

ಎಸ್‌ಎಸ್‌ಎಲ್‌ಸಿ ನಂತರ ಪದವಿ ಮುಗಿಸುವರೆಗೂ ಶಿಕ್ಷಣಕ್ಕೆ ನೆರವು ನೀಡಲಾಗುತ್ತಿದೆ.ಇದಲ್ಲದೇ ಕಾಲೇಜಿನಿಂದ ಪದವಿ ಪಡೆದು ಸ್ನಾತಕೊತ್ತರ ಪದವಿ ಪಡೆಯುವ ವಿದ್ಯಾರ್ಥಿಗಳಿಗೆ ನೆರವು ನೀಡಲಾಗಿದೆ ಎಂದರು.

ಕಾರ್ಯದರ್ಶಿ ಎಚ್.ಟಿ.ರಮೇಶ್ ಮಾತನಾಡಿ, ಈ ಸಾಲಿನ ದತ್ತಿ ಉಪನ್ಯಾಸವನ್ನು ಮಂಗಳೂರಿನ ಕವಿತಾ ಶಾಸ್ತ್ರೀ ನೀಡಲಿದ್ದು, ಸಂಘದ ಸ್ಥಾಪಕ ಅಧ್ಯಕ್ಷ ಕೆವಿಆರ್ ಟ್ಯಾಗೂರ್ ಹಾಗೂ ಕಾಲೇಜಿನ ಹಳೇ ವಿದ್ಯಾರ್ಥಿ ಬೆಂಗಳೂರಿನ ಆಚಾರ್ಯ ಸ್ಕೂಲ್ ನಿರ್ದೇಶಕ ಎಚ್.ಆರ್.ವೆಂಕಟೇಶ್ ಉಪಸ್ಥಿತರಿರಲಿದ್ದಾರೆ.ಅದೇ ದಿನ ಮಧ್ಯಾಹ್ನ ಸಂಘದ ಸರ್ವ ಸದಸ್ಯರ ಸಭೆ ಮಧ್ಯಾಹ್ನ 3 ಕ್ಕೆ ನಡೆಯಲಿದ್ದು, ಸದಸ್ಯರು ಸಭೆಯಲ್ಲಿ ಭಾಗವಹಿಸುವಂತೆ ವಿನಂತಿಸಿದರು. ಸಭೆಯಲ್ಲಿ ಕೆ.ಎಂ.ಶ್ರೀನಿವಾಸ್, ಎಚ್.ಜಿ ದೇವೇಂದ್ರ, ಟಿ.ಟಿ ಕಳಸಪ್ಪ, ಎಚ್.ಎ ಶ್ರೀನಿವಾಸ್ ಇದ್ದರು.

Scanned by CamScanner

ಪ್ರಜಾವಾಣಿ ಶುಕ್ರವಾರ • ಆಗಸ್ಟ್ 31, 2018



ಶೃಂಗೇರಿ ತಾಲ್ಲೂಕಿನ ಜೆ.ಸಿ.ಬಿ.ಎಂ. ಕಾಲೇಜಿನ ಅರ್ಥಶಾಸ್ತ್ರ ವೇದಿಕೆಯನ್ನು ನಿವೃತ್ತ ಪ್ರಾಂಶುಪಾಲ ಪ್ರೊ.ಹೆಚ್.ವಿ. ರಾಮಪ್ಪಗೌಡ ಉದ್ಘಾಟಿಸಿ ಮಾತನಾಡಿದರು.

ಶೃಂಗೇರಿ: ಅರ್ಥಶಾಸ್ತ್ರ ವೇದಿಕೆ ಉದ್ಘಾಟನೆ

ಶೃಂಗೇರಿ: 'ಅರ್ಥಶಾಸ್ತ್ರವು ಎಲ್ಲ ಜ್ಞಾನ ಶಾಖೆಗಳಿಗೆ ಆಧಾರವಾಗಿದ್ದು, ಸಮಾಜದ ಪ್ರತಿಯೊಬ್ಬ ವ್ಯಕ್ತಿಗೂ ಅರ್ಥಶಾಸ್ತ್ರದ ಜ್ಞಾನ ಅಗತ್ಯ' ಎಂದು ಶಿವಮೊಗ್ಗ ಕಮಲಾ ನೆಹರೂ ಸ್ಮಾರಕ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಪ್ರೊ.ಎಚ್.ವಿ. ರಾಮಪ್ಪ ಗೌಡ ಪ್ರತಿಪಾದಿಸಿದರು.

ತಾಲ್ಲೂಕಿನ ಜೆ.ಸಿ.ಬಿ.ಎಂ. ಕಾಲೇಜಿನ ಅರ್ಥಶಾಸ್ತ್ರ ವಿಭಾಗದ ವತಿಯಿಂದ ಸಂಘಟಿಸಿದ್ದ ಅರ್ಥಶಾಸ್ತ್ರ ವೇದಿಕೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಾಂಶುಪಾಲ ಡಾ.ಎಂ. ಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ.ಎಂ.ಪಿ. ವಿದ್ಯಾಧರ, ವಿದ್ಯಾರ್ಥಿ ಕ್ಷೇಮಪಾಲನಾಧಿಕಾರಿ ಡಾ.ಎ.ಶ್ರೀನಿವಾಸ ರಾವ್, ಬಕ್ಕೊಮಿ ಸಂಯೋಜಕ ಪ್ರೊ.ಕೆ.ದೇವದಾಸ, ಕಲಾ ಸಂಘದ ಅಧ್ಯಕ್ಷ ಮೇಧಾ, ಪದವಿಪೂರ್ವ ಕಾಲೇಜಿನ ಸಂಯೋಜಕ ಪ್ರೊ.ಎ.ಜಿ. ಪ್ರಶಾಂತ ಉಪಸ್ಥಿತರಿದ್ದರು.

Scanned by CamScanner

ನಂ. 1 ಕನ್ನಡ ದಿನಪತ್ರಿಕೆ

ವಿಜಯವಾಣಿ

ದಿನದ ಚಿತ್ರ



ವಿಜಯವಾಣಿ ಚಿತ್ರ

ಜೆಸಿಬಿಎಂ ಕಾಲೇಜು ಪ್ರಥಮ

ಸಾಗರದ ಇಂದಿರಾ ಗಾಂಧಿ ಮಹಿಳಾ ಕಾಲೇಜಿನಲ್ಲಿ ನಡೆದ ಕುವೆಂಪು ವಿವಿ ಅಂತರ ಕಾಲೇಜು ಮಟ್ಟದ ಟೇಬಲ್ ಟೆನಿಸ್ ಸ್ಪರ್ಧೆಯಲ್ಲಿ ಶೃಂಗೇರಿಯ ಜೆಸಿಬಿಎಂ ಕಾಲೇಜಿನ ಅಭಿಷೇಕ್, ಅಖಿಲೇಶ್, ನಿಖಿಲ್, ಶಿವಕುಮಾರ್, ಪ್ರಜ್ವಲ್ ಪ್ರಥಮ ಸ್ಥಾನ ಗಳಿಸಿದರು. ವಿಜೇತ ವಿದ್ಯಾರ್ಥಿಗಳೊಂದಿಗೆ ಕಾಲೇಜಿನ ಪ್ರಾಚಾರ್ಯ ಡಾ. ಸ್ವಾಮಿ ಹಾಗೂ ಆಡಳಿತ ಮಂಡಳಿ.

Scanned by CamScanner

VIJAYAVANI » SHIVAMOGGA
ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ

ಕಾರ್ಗಿಲ್ ವಿಜಯ್ ದಿವಸ್ ಕಾರ್ಯಕ್ರಮ

ಯೋಧರ ನೆನಪಿಗೆ ರಕ್ತದಾನ ಶಿಬಿರ

ಶೃಂಗೇರಿ: ದೇಶದ ಹಿತಕ್ಕಾಗಿ ಯೋಧರು 19 ವರ್ಷಗಳ ಹಿಂದೆ ತಮ್ಮ ಪ್ರಾಣ ನೀಡಿದ್ದಾರೆ. ಅಂತಹ ಸೈನಿಕರ ನೆನಪಿಗಾಗಿ ಜೇಸಿ ಸಂಸ್ಥೆ ರಕ್ತದಾನ ಶಿಬಿರ ಏರ್ಪಡಿಸಿದ್ದು ಶ್ಲಾಘನೀಯ ಎಂದು ಶ್ರೀ ಶಾರದಾ ಧನ್ವಂತರಿ ಆಸ್ಪತ್ರೆ ವೈದ್ಯ ಡಾ. ಲಕ್ಷ್ಮೀನಾರಾಯಣ್ ತಿಳಿಸಿದರು. ಪಟ್ಟಣದ ಜೆಸಿಬಿಎಂ ಕಾಲೇಜಿನಲ್ಲಿ ಜೇಸಿಸ್ ವಿವಿಧ ಸಂಘಟನೆಯೊಂದಿಗೆ ಕಾರ್ಗಿಲ್ ವಿಜಯ ದಿವಸ್ ಅಂಗವಾಗಿ ಆಯೋಜಿಸಿದ್ದ ರಕ್ತದಾನ ಶಿಬಿರ ಉದ್ಘಾಟಿಸಿ ಮಾತನಾಡಿ, ನಾವು ಮಾಡುವ ಸೇವೆ, ದಾನಗಳು ಕಷ್ಟ ಕಾಲದಲ್ಲಿ ಸಮುದಾಯವನ್ನು ತಲುಪಬೇಕು ಎಂದರು. ಜೇಸಿ ಅಧ್ಯಕ್ಷ ಕೆ.ಟಿ. ಮಂಜುನಾಥ್, ಪ್ರಾಚಾರ್ಯ ಡಾ. ಸ್ವಾಮಿ, ಸಹ ಪ್ರಾಧ್ಯಾಪಕರು ಹಾಜರಿದ್ದರು. ವಿದ್ಯಾರ್ಥಿಗಳು ರಕ್ತದಾನ ಮಾಡಿದರು.



ಕಾರ್ಗಿಲ್ ವಿಜಯದಿವಸ್ ಅಂಗವಾಗಿ ಶೃಂಗೇರಿಯಲ್ಲಿ ಏರ್ಪಡಿಸಿದ್ದ ರಕ್ತದಾನ ಶಿಬಿರವನ್ನು ಡಾ. ಲಕ್ಷ್ಮೀನಾರಾಯಣ್ ಉದ್ಘಾಟಿಸಿದರು.

Scanned by CamScanner

ಸಂಯುಕ್ತ ಕರ್ನಾಟಕ

31, ಆಗಸ್ಟ್ 2018, ಶುಕ್ರವಾರ

ದಾವಣಗೆರೆ



ಸಾಗರದ ಇಂದಿರಾ ಗಾಂಧಿ ಮಹಿಳಾ ಕಾಲೇಜಿನಲ್ಲಿ ನಡೆದ ಕುವೆಂಪು ವಿಶ್ವವಿದ್ಯಾಲಯ ಮಟ್ಟದ ಅಂತರ ಕಾಲೇಜು ಮಟ್ಟದ ಟೇಬಲ್ ಟೆನಿಸ್ ಸ್ಪರ್ಧೆಯಲ್ಲಿ ಶೃಂಗೇರಿಯ ಶ್ರೀಜೆ,ಸಿ,ಬಿ,ಎಂ.ಕಾಲೇಜಿನ ಅಭಿಷೇಕ್, ಅಖಿಲೇಶ್, ನಿಖಿಲ್, ಶಿವಕುಮಾರ್, ಪ್ರಜ್ವಲ್, ಪ್ರಥಮ ಸ್ಥಾನವನ್ನು ಗಳಿಸಿ ಉತ್ತಮ ಸಾಧನೆ ಗೈದಿದ್ದಾರೆ. ಇವರಿಗೆ ಕಾಲೇಜಿನ ಪ್ರಾಚಾರ್ಯರು, ವಿಶ್ವಸ್ಥ ಮಂಡಳಿ ಹಾಗೂ ಅಧ್ಯಾಪಕ ವೃಂದದವರು ಅಭಿನಂದಿಸಿದ್ದಾರೆ.

Scanned by CamScanner

VIJAYAVANI » SHIVAMOGGA
ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
ಸೋಮವಾರ 27 ಆಗಸ್ಟ್ 2018 • 27 AUGUST 2018

ಉದ್ಯೋಗ ಗಳಿಸಲು ಕೌಶಲ್ಯ ಮುಖ್ಯ

ಜೆಸಿಬಿಎಂನಲ್ಲಿ ಎನ್‌ಎಸ್‌ಎಸ್, ಯುವ ರೆಡ್‌ಕ್ರಾಸ್ ಘಟಕ ಉದ್ಘಾಟನೆ

■ ವಿಜಯವಾಣಿ ಸುದ್ದಿಜಾಲ ಶೃಂಗೇರಿ

ಸ್ಪರ್ಧಾತ್ಮಕ ಜಗತ್ತಿನಲ್ಲಿ ಹಣ, ವಿಷಯ ಸಂಗ್ರಹಣೆ, ಪದವಿಗಿಂತಲೂ ಕೌಶಲ್ಯಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ ಎಂದು ಸಾಂಸ್ಕೃತಿಕ ಚಿಂತಕ ಡಾ. ಸಿ.ವಿ.ಗಿರಿಧರಶಾಸ್ತ್ರಿ ಹೇಳಿದರು.

ಜೆಸಿಬಿಎಂ ಕಾಲೇಜಿನಲ್ಲಿ ಆಯೋಜಿಸಿದ್ದ ಎನ್‌ಎಸ್‌ಎಸ್, ಯುವ ರೆಡ್‌ಕ್ರಾಸ್ ಘಟಕ ಹಾಗೂ ರೋವರ್ಸ್ ಮತ್ತು ರೇಂಜರ್ಸ್ ಘಟಕಗಳ ಉದ್ಘಾಟನೆ ನೆರವೇರಿಸಿ ಮಾತನಾಡಿದರು.

ನಾಯಕತ್ವ ಗುಣ, ಸಂಭಾಷಣೆ ಸಾಮರ್ಥ್ಯ, ಮಾನವೀಯತೆ ಹಾಗೂ ಸೌಹಾರ್ದ ಭಾವನೆ ಹೊಂದಿರುವ ವ್ಯಕ್ತಿಗೆ ಉತ್ತಮ ಅವಕಾಶಗಳು ದೊರೆಯುತ್ತವೆ ಎಂದರು.

ಜಿಪಂ ಸದಸ್ಯ ಬಿ.ಶಿವಶಂಕರ್ ಮಾತನಾಡಿ, ಎರಡನೇ ಮಹಾಯುದ್ಧ ನಂತರ ಆರಂಭವಾದ ರೆಡ್‌ಕ್ರಾಸ್ ಸಂಸ್ಥೆ ಪ್ರಕೃತಿ ವಿಕೋಪ ಮತ್ತಿತರೆ ದುರಂತಗಳ ಸಂದರ್ಭ ಸೇವಾ ಕಾರ್ಯದಲ್ಲಿ ತೊಡಗುತ್ತದೆ. ಹಾಗೆಯೇ ಎನ್‌ಎಸ್‌ಎಸ್ ಎಲ್ಲರೊಂದಿಗೆ ಬೆರೆತು ಕೆಲಸ ಮಾಡುವುದನ್ನು ಕಲಿಸುತ್ತದೆ. ಗ್ರಾಮೀಣ ಶಿಬಿರಗಳಿಂದ ಜನಸಾಮಾನ್ಯರ ಜೀವನ ಅರಿಯಲು ನೆರವಾಗುತ್ತದೆ ಎಂದರು.

ಕಾಲೇಜಿನ ಪ್ರಾಚಾರ್ಯ ಡಾ. ಎಂ.ಸ್ವಾಮಿ ಮಾತನಾಡಿ, ಮಹಾತ್ಮ ಗಾಂಧೀಜಿ ಅವರ ಗ್ರಾಮ ಸ್ವರಾಜ್ಯದ ಕನಸು ಸಾಕಾರಗೊಳಿಸುವ ಉದ್ದೇಶದಿಂದ ಸೇವಾ ಭಾವ ಧ್ಯೇಯವಾಗಿಟ್ಟುಕೊಂಡು ಎನ್‌ಎಸ್‌ಎಸ್, ರೋವರ್ಸ್ ಆ್ಯಂಡ್ ರೇಂಜರ್ಸ್ ಘಟಕಗಳು ಶಿಸ್ತು ಪಾಲನೆ ಗುರಿಯಾಗಿಸಿಕೊಂಡು ಕಾರ್ಯ ನಿರ್ವಹಿಸುತ್ತಿವೆ. ಯುವ ರೆಡ್‌ಕ್ರಾಸ್ ಘಟಕ ರಕ್ತದಾನ ಶಿಬಿರ ಮತ್ತಿತರೆ ಕಾರ್ಯಕ್ರಮ ನಡೆಸುತ್ತ ಬಂದಿದೆ ಎಂದು ಹೇಳಿದರು.

ಕಾಲೇಜಿನ ವಿಶ್ವಸ್ಥ ಮಂಡಳಿ ಸದಸ್ಯರಾದ ಟಿ.ಕೆ.ಪರಾಶರ, ಟಿ.ಕಳಸಪ್ಪ, ಎನ್‌ಎಸ್‌ಎಸ್ ಅಧಿಕಾರಿಗಳಾದ ಎ.ಜಿ.ಪ್ರಶಾಂತ್, ಬಿ.ಡಿ.ಸಂತೋಷ್, ರೋವರ್ಸ್ ಆ್ಯಂಡ್ ರೇಂಜರ್ಸ್ ಘಟಕಗಳ ಅಧಿಕಾರಿಗಳಾದ ರೇಖಾ ಎಚ್.ಎಸ್., ಕೆ.ಎಸ್.ಸಂತೋಷಕುಮಾರ್, ಐಕ್ಯೂಎಸಿ ಸಂಚಾಲಕ ದೇವದಾಸ್, ರೆಡ್‌ಕ್ರಾಸ್ ಮುಖ್ಯಸ್ಥ ಎಂ.ವಿ. ಲೋಕೇಶ್ ಇತರರಿದ್ದರು.



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ಎನ್‌ಎಸ್‌ಎಸ್, ಯುವ ರೆಡ್‌ಕ್ರಾಸ್ ಘಟಕ, ರೋವರ್ಸ್ ಮತ್ತು ರೇಂಜರ್ಸ್ ಘಟಕಗಳನ್ನು ಸಾಂಸ್ಕೃತಿಕ ಚಿಂತಕ ಡಾ. ಸಿ.ವಿ.ಗಿರಿಧರ್ ಶಾಸ್ತ್ರಿ ಉದ್ಘಾಟಿಸಿದರು.

ದೊರೆತ
ಅವಕಾಶಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು. ಧನಾತ್ಮಕ ಚಿಂತನೆ ಶ್ರದ್ಧೆಯಿಂದ ಕೆಲಸ ನಿರ್ವಹಿಸಬೇಕು. ನಕಾರಾತ್ಮಕ ಪ್ರಭಾವಕ್ಕೆ ಒಳಗಾಗದೆ ದೇಶದ ನಿಜವಾದ ಸಾಮರ್ಥ್ಯ ಅರಿತು ದೇಶಾಭಿಮಾನ ಬೆಳೆಸಿಕೊಳ್ಳಬೇಕು.

ಡಾ. ಸಿ.ವಿ.ಗಿರಿಧರಶಾಸ್ತ್ರಿ
ಸಾಂಸ್ಕೃತಿಕ ಚಿಂತಕ

Scanned by CamScanner

ವಿಜಯ ಕರ್ನಾಟಕ

ಸೋಮವಾರ,27 ಆಗಸ್ಟ್ 2018, ಶಿವಮೊಗ್ಗ ನಮ್ಮ ಚಿಕ್ಕಮಗಳೂರು | III

ಮಾನವ ಕೌಶಲಗಳಿಗೆ ಹೆಚ್ಚಿನ ಆದ್ಯತೆ



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ಶುಕ್ರವಾರ ರಾಷ್ಟ್ರೀಯ ಸೇವಾ ಯೋಜನೆ, ಯುವ ರೆಡ್ ಕ್ರಾಸ್ ಘಟಕ ಹಾಗೂ ರೋವರ್ಸ್ ಮತ್ತು ರೇಂಜರ್ಸ್ ವಾರ್ಷಿಕ ಚಟುವಟಿಕೆಯನ್ನು ಡಾ.ಸಿ.ವಿ.ಗಿರಿಧರಶಾಸ್ತ್ರಿ ಉದ್ಘಾಟಿಸಿದರು.

■ ವಿಕ ಸುದ್ದಿಲೋಕ ಶೃಂಗೇರಿ

ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಹಣ, ವಿಷಯ ಸಂಗ್ರಹಣೆ, ಪದವಿಗಳಿಗಿಂತಲೂ ಮಾನವ ಕೌಶಲ್ಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ ಎಂದು ಡಾ ಸಿ.ವಿ.ಗಿರಿಧರಶಾಸ್ತ್ರಿ ಹೇಳಿದರು.

ಪಟ್ಟಣದ ಜೆಸಿಬಿಎಂ ಕಾಲೇಜಿನಲ್ಲಿ ಶುಕ್ರವಾರ ರಾಷ್ಟ್ರೀಯ ಸೇವಾ ಯೋಜನೆ, ಯುವ ರೆಡ್ ಕ್ರಾಸ್ ಘಟಕ ಹಾಗೂ ರೋವರ್ಸ್ ಮತ್ತು ರೇಂಜರ್ಸ್ ಘಟಕ ವಾರ್ಷಿಕ ಚಟುವಟಿಕೆ ಉದ್ಘಾಟನೆ ನೆರವೇರಿಸಿ ಮಾತನಾಡಿದರು. ನಾಯಕತ್ವ ಗುಣ, ಸಂಭಾಷಣಾ ಸಾಮರ್ಥ್ಯ, ಮಾನವೀಯ ಸಂಬಂಧ ಹಾಗೂ ಸೌಹಾರ್ದತೆಯ ಮನೋಭಾವವನ್ನು ಹೊಂದಿರುವ ವ್ಯಕ್ತಿಗೆ ಉತ್ತಮ ಅವಕಾಶಗಳು ದೊರೆಯುತ್ತದೆ ಎಂದರು.

ಜಿಪಂ ಸದಸ್ಯ ಬಿ.ಶಿವಶಂಕರ್ ಮಾತನಾಡಿ, ಎರಡನೇ ಮಹಾಯುದ್ಧ ನಂತರ ಪ್ರಾರಂಭವಾದ ರೆಡ್‌ಕ್ರಾಸ್ ಸಂಘಟನೆಯು ಪ್ರಕೃತಿ ವಿಕೋಪಗಳನ್ನೊಳಗೊಂಡಂತೆ ದುರಂತದ ಸಂದರ್ಭ ಸೇವಾ ಕಾರ್ಯದಲ್ಲಿ ತೊಡಗುವ ಅಂತಾರಾಷ್ಟ್ರೀಯ ಸಂಸ್ಥೆಯಾಗಿದೆ ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಕಾಲೇಜಿನ ಪ್ರಾಂಶುಪಾಲ ಡಾ ಎಂ ಸ್ವಾಮಿ ಮಾತನಾಡಿ, ಮಹಾತ್ಮಗಾಂಧಿಯವರ ಗ್ರಾಮ ಸ್ವರಾಜ್ಯದ ಕನಸನ್ನು ಸಾಕಾರಗೊಳಿಸುವ ಉದ್ದೇಶದಿಂದ ಸೇವಾ ಮನೋಭಾವವನ್ನೇ ಧ್ಯೇಯವಾಗಿರಿಸಿಕೊಂಡು ರಾಷ್ಟ್ರೀಯ ಸೇವಾ ಯೋಜನೆಯು ಪ್ರಾರಂಭವಾಯಿತು ಎಂದರು.

ಕಾಲೇಜಿನ ವಿಶೇಷ ಮಂಡಳಿಯ ಸದಸ್ಯರಾದ ಟಿ.ಕೆ.ಪರಾಶರ, ಟಿ ಕಳಸಪ್ಪ ರಾಷ್ಟ್ರೀಯ ಸೇವಾ ಯೋಜನೆಯ ಅಧಿಕಾರಿಗಳಾದ ಎ.ಜಿ.ಪ್ರಶಾಂತ್, ಬಿ.ಡಿ. ಸಂತೋಷ್, ರೋವರ್ಸ್ ಅಂಡ್ ರೇಂಜರ್ ಘಟಕಗಳ ಅಧಿಕಾರಿಗಳಾದ ಎಚ್.ಎಸ್.ರೇಶಾ, ಕೆ.ಎಸ್.ಸಂತೋಷ ಕುಮಾರ್, ರೆಡ್ ಕ್ರಾಸ್ ಮುಖ್ಯಸ್ಥ ಎಂ.ವಿ.ಲೋಕೇಶ್ ಹಾಗೂ ಐ.ಕ್ಯೂ.ಎ.ಸಿ. ಸಂಚಾಲಕ ಕೆ.ದೇವದಾಸ್ ಮತ್ತಿತರರು ಉಪಸ್ಥಿತರಿದ್ದರು.

Scanned by CamScanner

ಸಂಯುಕ್ತ ಕರ್ನಾಟಕ
27, ಆಗಸ್ಟ್ 2018, ಸೋಮವಾರ
ದಾವಣಗೆರೆ

ಸೌಹಾರ್ದತೆಯ ಮನೋಭಾವವಿರುವ ವ್ಯಕ್ತಿಗೆ ಉತ್ತಮ ಅವಕಾಶ



ಸಂ.ಕ. ಸಮಾಚಾರ ಶೃಂಗೇರಿ

ಸ್ಪರ್ಧಾತ್ಮಕ ಜಗತ್ತಿನಲ್ಲಿ ಹಣ, ವಿಷಯ ಸಂಗ್ರಹಣೆ, ಪಡವಿಗಳಿಗಿಂತಲೂ ಮಾನವ ಕೌಶಲ್ಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದ್ದು, ಮಾನವೀಯ ಸಂಬಂಧ ಹಾಗೂ ಸೌಹಾರ್ದತೆಯ ಮನೋಭಾವವನ್ನು ಹೊಂದಿರುವ ವ್ಯಕ್ತಿಗೆ ಉತ್ತಮ ಅವಕಾಶಗಳು ದೊರೆಯುತ್ತವೆ ಎಂದು ಡಾ ಸಿ.ವಿ.ಗಿರಿಧರಶಾಸ್ತ್ರಿರವರು ನುಡಿದರು.

ಪಟ್ಟಣದ ಶ್ರೀ ಜೆ.ಸಿ.ಬಿ.ಎಂ.ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ, ಯುವ ರೆಡ್- ಕ್ರಾಸ್ ಘಟಕ ಹಾಗೂ ರೋವರ್ಸ್ ಮತ್ತು ರೇಂಜರ್ಸ್ ಘಟಕಗಳನ್ನು ಉದ್ಘಾಟಿಸಿಮಾತನಾಡಿದ ಅವರು,

ದೊರೆತ ಅವಕಾಶಗಳನ್ನು ಉತ್ತಮವಾಗಿ ಉಪಯೋಗಿಸಿಕೊಂಡು ಸದಾ ಧನಾತ್ಮಕ ಚಿಂತನೆಗಳೊಂದಿಗೆ ತಮ್ಮ ತಮ್ಮ ಕೆಲಸಗಳಲ್ಲಿ ಶ್ರದ್ಧೆಯಿಂದ ಮುನ್ನಡೆಯುವಂತಹ ಕೌಶಲ್ಯಯುತರಿಗೆ ಸದಾ ಅವಕಾಶಗಳು ಲಭ್ಯವಿರುತ್ತವೆ. ಮಾಧ್ಯಮಗಳ ನಕಾರಾತ್ಮಕ ಪ್ರಭಾವಕ್ಕೆ ಒಳಗಾಗದೇ, ದೇಶದ ನಿಜವಾದ ಶಕ್ತಿ ಸಾಮರ್ಥ್ಯಗಳನ್ನು ಅರಿತು ದೇಶದ ಬಗ್ಗೆ ಅಭಿಮಾನ ಬೆಳಸಿಕೊಳ್ಳಬೇಕು ಎಂದು ಹೇಳಿದರು.

ಜಿಲ್ಲಾ ಪಂಚಾಯ್ತಿ ಸದಸ್ಯ ಬಿ.ಶಿವಶಂಕರ್ ಮಾತನಾಡಿ, ಎರಡನೇ ಮಹಾಯುದ್ಧ ನಂತರ ಪ್ರಾರಂಭವಾದ ರೆಡ್‌ಕ್ರಾಸ್ ಸಂಘಟನೆಯು ಪ್ರಕೃತಿ ವಿಕೋಪಗಳನ್ನೂ ಒಳಗೊಂಡಂತೆ ದುರಂತಗಳ ಸಂದರ್ಭಗಳ ಸೇವಾ ಕಾರ್ಯದಲ್ಲಿ ತೊಡಗುವ ಅಂತರಾಷ್ಟ್ರೀಯ ಸಂಸ್ಥೆಯಾಗಿದೆ. ಎನ್‌ಎಸ್‌ಎಸ್ ಎಲ್ಲರೊಂದಿಗೆ ಬೆರೆತು ಕೆಲಸ ಮಾಡುವುದನ್ನು ಕಲಿಸುತ್ತಿದ್ದು ಇದರ ಗ್ರಾಮೀಣ ಶಿಬಿರಗಳ ಚಟುವಟಿಕೆಗಳಿಂದ ಸಾಮಾನ್ಯರ ಜನಜೀವನವನ್ನು ಅರಿಯಲು ನೆರವಾಗುತ್ತದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲ ಡಾ. ಎಂ.ಸ್ವಾಮಿ ಮಾತನಾಡಿ, ಮಹಾತ್ಮ ಗಾಂಧಿಜಿಯವರ ಗ್ರಾಮ ಸ್ವರಾಜ್ಯದ ಕನಸನ್ನು ಸಾಕಾರಗೊಳಿಸುವ ಉದ್ದೇಶದಿಂದ ಸೇವಾ ಮನೋಭಾವವನ್ನೇ ಧ್ಯೇಯವಾಗಿರಿಸಿಕೊಂಡು ರಾಷ್ಟ್ರೀಯ ಸೇವಾ ಯೋಜನೆಯು ಪ್ರಾರಂಭವಾಯಿತು.

ಶಿಸ್ತುಪಾಲನೆಯನ್ನು ರೋವರ್ಸ್ ಅಂಡ್ ರೇಂಜರ್ ಘಟಕಗಳು ಗುರಿಯಾಗಿಸಿಕೊಂಡು ಕಾರ್ಯ ನಿರ್ವಹಿಸುತ್ತಿದ್ದು, ಯುವರೆಡ್‌ಕ್ರಾಸ್ ಘಟಕವು ರಕ್ತದಾನ ಶಿಬಿರ, ಆರೋಗ್ಯ ಮಾಹಿತಿ ಕಾರ್ಯಾಗಾರಗಳಂತಹ ಸಾಮಾಜಿಕ ಅರಿವು ಮೂಡಿಸುತ್ತಾ ಬಂದಿದೆ ಎಂದು ತಿಳಿಸಿದರು.

ಕಾಲೇಜಿನ ವಿಶ್ವಸ್ತ ಮಂಡಳಿಯ ಸದಸ್ಯರಾದ ಟಿ.ಕೆ ಪರಾಶರ, ಟಿ.ಟಿ ಕಳಸಪ್ಪ, ಎನ್‌ಎಸ್‌ಎಸ್ ಅಧಿಕಾರಿಗಳಾದ ಎ.ಜಿ.ಪ್ರಶಾಂತ್, ಬಿ.ಡಿ.ಸಂತೋಷ್, ರೋವರ್ಸ್ ಅಂಡ್ ರೇಂಜರ್ ಘಟಕಗಳ ಅಧಿಕಾರಿಗಳಾದ ರೇಖಾ ಹೆಚ್.ಎಸ್., ಕೆ.ಎಸ್ ಸಂತೋಷಕುಮಾರ್, ರೆಡ್‌ಕ್ರಾಸ್ ಮುಖ್ಯಸ್ಥ ಎಂ.ವಿ.ಲೋಕೇಶ್ ಹಾಗೂ ಐಕ್ಯೂಎಸಿ ಸಂಚಾಲಕ ದೇವದಾಸ್ ಕೆ. ಇದ್ದರು.

Scanned by CamScanner

ದಾವಣಗೆರೆ ಉದಯವಾಣಿ
ಭಾನುವಾರ, ಆಗಸ್ಟ್ 26, 2018

ಸ್ಪರ್ಧಾತ್ಮಕ ಯುಗದಲ್ಲಿ ಕೌಶಲ್ಯಗಳಿಗೆ ಹೆಚ್ಚಿನ ಆದ್ಯತೆ



ಶೃಂಗೇರಿ: ಜೆಸಿಬಿಎಂ ಕಾಲೇಜಿನಲ್ಲಿ ನಡೆದ ವಾರ್ಷಿಕ ಚಟುವಟಿಕೆಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಟಿ.ಕೆ.ಪರಾಶರ ಮಾತನಾಡಿದರು.

ಶೃಂಗೇರಿ: ನಾಯಕತ್ವ ಗುಣ, ಸಂಭಾಷಣಾ ಸಾಮರ್ಥ್ಯ, ಮಾನವೀಯ ಸಂಬಂಧ ಹಾಗೂ ಸೌಹಾರ್ದತೆಯ ಮನೋಭಾವವನ್ನು ಹೊಂದಿರುವ ವ್ಯಕ್ತಿಗೆ ಉತ್ತಮ ಅವಕಾಶಗಳು ಮೂರೆಯುತ್ತವೆ ಎಂದು ಡಾ। ಸಿ.ವಿ.ಗಿರಿಧರಶಾಸ್ತ್ರಿ ಹೇಳಿದರು.

ಪಟ್ಟಣದ ಜೆಸಿಬಿಎಂ ಕಾಲೇಜಿನಲ್ಲಿ ಶುಕ್ರವಾರ ರಾಷ್ಟ್ರೀಯ ಸೇವಾ ಯೋಜನೆ, ಯುವ ರೆಡ್ ಕ್ರಾಸ್ ಘಟಕ ಹಾಗೂ ರೋವರ್ಸ್ ಮತ್ತು ರೇಂಜರ್ಸ್ ಘಟಕ ವಾರ್ಷಿಕ ಚಟುವಟಿಕೆ ಉದ್ಘಾಟನೆ ನೆರವೇರಿಸಿ ಮಾತನಾಡಿದರು.

ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಹಣ, ವಿಷಯ ಸಂಗ್ರಹಣೆ, ಪದವಿಗಳಿಗಿಂತಲೂ ಮಾನವ ಕೌಶಲ್ಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ. ನಾಯಕತ್ವ ಗುಣದೊಂದಿಗೆ ವ್ಯಕ್ತಿತ್ವ ವಿಕಸನವನ್ನೂ ಎನ್.ಎಸ್.ಎಸ್.ನಲ್ಲಿ ಹಂತ ಹಂತವಾಗಿ ಬೆಳೆಸಿಕೊಡುತ್ತದೆ. ದೊರೆತ ಅವಕಾಶವನ್ನು ಉತ್ತಮವಾಗಿ ಉಪಯೋಗಿಸಿ ಕೊಳ್ಳಬೇಕು. ತಮ್ಮ ಕೆಲಸದಲ್ಲಿ ಶ್ರದ್ಧೆಯಿಂದ ಮುನ್ನಡೆಯುವಂತಹ ಕೌಶಲ್ಯಯುತರಿಗೆ ಸದಾ ಅವಕಾಶಗಳು ಲಭ್ಯವಿರುತ್ತವೆ. ಮಾಧ್ಯಮದ ನಕಾರಾತ್ಮಕ ಪ್ರಭಾವಕ್ಕೆ ಒಳಗಾಗದೇ, ದೇಶದ ನಿಜವಾದ ಶಕ್ತಿ ಸಾಮರ್ಥ್ಯಗಳನ್ನು ಅರಿತು ದೇಶದ ಬಗ್ಗೆ ಅಭಿಮಾನ ಬೆಳೆಸಿಕೊಳ್ಳಬೇಕು ಎಂದರು.

ಜಪಂ ಸದಸ್ಯ ಬಿ. ಶಿವಶಂಕರ್ ಮಾತನಾಡಿ, ಎರಡನೇ ಮಹಾಯುದ್ಧ ನಂತರ ಪ್ರಾರಂಭವಾದ ರೆಡ್ ಕ್ರಾಸ್ ಸಂಘಟನೆಯು ಪ್ರಕೃತಿ ವಿಕೋಪಗಳನ್ನೊಳಗೊಂಡಂತೆ ದುರಂತದ ಸಂದರ್ಭದಲ್ಲಿ ಸೇವಾ ಕಾರ್ಯದಲ್ಲಿ ತೊಡಗುವ ಅಂತಾರಾಷ್ಟ್ರೀಯ ಸಂಸ್ಥೆಯಾಗಿದೆ ಎಂದರು.

ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಕಾಲೇಜಿನ ಪ್ರಾಂಶುಪಾಲ ಡಾ। ಎಂ. ಸ್ವಾಮಿ ಮಾತನಾಡಿ, ಮಹಾತ್ಮ ಗಾಂಧಿಯವರ ಗ್ರಾಮ ಸ್ವರಾಜ್ಯದ ಕನಸನ್ನು ಸಾಕಾರಗೊಳಿಸುವ ಉದ್ದೇಶದಿಂದ ಸೇವಾ ಮನೋಭಾವವನ್ನೇ ಧ್ಯೇಯವಾಗಿರಿಸಿಕೊಂಡು ರಾಷ್ಟ್ರೀಯ ಸೇವಾ ಯೋಜನೆಯು ಪ್ರಾರಂಭವಾಯಿತು ಎಂದರು.

ಕಾಲೇಜಿನ ವಿಶ್ವಸ್ಥ ಮಂಡಳಿಯ ಸದಸ್ಯರಾದ ಟಿ.ಕೆ.ಪರಾಶರ, ಟಿ ಕಳಸಪ್ಪ ರಾಷ್ಟ್ರೀಯ ಸೇವಾ ಯೋಜನೆಯ ಅಧಿಕಾರಿಗಳಾದ ಎ. ಜೆ.ಪ್ರಶಾಂತ್, ಬಿ.ಡಿ.ಸಂತೋಷ್, ರೋವರ್ಸ್ ಅಂಡ್ ರೇಂಜರ್ ಘಟಕಗಳ ಅಧಿಕಾರಿಗಳಾದ ಎಚ್.ಎಸ್.ರೇಖಾ, ಕೆ.ಎಸ್. ಸಂತೋಷಕುಮಾರ್, ಎಂ.ಪಿ.ಲೋಕೇಶ್ ಉಪಸ್ಥಿತರಿದ್ದರು.

Scanned by CamScanner

ಕನ್ನಡಪ್ರಭ
ಶನಿವಾರ 25.8.2018

ಮಾನವೀಯ ಮೌಲ್ಯಗಳಿಗೆ ಆದ್ಯತೆ

ಯುವರೆಡ್ ಕ್ರಾಸ್, ರೋವರ್ಸ್ ಘಟಕ ಉದ್ಘಾಟಿಸಿದ ಡಾ.ಸಿ.ವಿ.ಗಿರಿಧರಶಾಸ್ತ್ರಿ

• ಕನ್ನಡಪ್ರಭ ವಾರ್ತೆ ಶೃಂಗೇರಿ

ಇಂದಿನಸ್ಪರ್ಧಾತ್ಮಕಜಗತ್ತಿನಲ್ಲಿಹಣ, ವಿಷಯ ಸಂಗ್ರಹಣೆ, ಪದವಿಗಳಿಗಿಂತಲೂಮಾನವೀಯ ಕೌಶಲ್ಯಗಳಿಗೆ ಹೆಚ್ಚಿನ ಆದ್ಯತೆ ನೀಡುತ್ತಿದ್ದು, ಇಂತಹಗುಣಗಳೊಂದಿಗೆವ್ಯಕ್ತಿತ್ವವಿಕಸನವನ್ನೂ ಎನ್‌ಎಸ್‌ಎಸ್‌ನಲ್ಲಿ ಹಂತ ಹಂತವಾಗಿ ಬೆಳೆಸಿಕೊಳ್ಳಬಹುದು ಎಂದು ಡಾ.ಸಿ.ವಿ.ಗಿರಿಧರಶಾಸ್ತ್ರಿ ಹೇಳಿದರು.

ಇಲ್ಲಿನ ಜೆಸಿಬಿಎಂ ಕಾಲೇಜಿನಲ್ಲಿ ನಡೆದ ರಾಷ್ಟ್ರೀಯ ಸೇವಾ ಯೋಜನೆ, ಯುವ ರೆಡ್ ಕ್ರಾಸ್ ಘಟಕಹಾಗೂರೋವರ್ಸ್, ರೇಂಜರ್ಸ್ ಘಟಕಗಳನ್ನು ಉದ್ಘಾಟಿಸಿ ಮಾತನಾಡಿದ ಅವರು, ಇದರೊಂದಿಗೆನಾಯಕತ್ವಗುಣಗಳು, ಸಂಭಾಷಣಾ ಸಾಮರ್ಥ್ಯ, ಮಾನವೀಯ ಸಂಬಂಧಗಳು ಹಾಗೂ ಸೌಹಾರ್ದತೆಯ ಮನೋಭಾವ ಹೊಂದಿರುವ ವ್ಯಕ್ತಿಗೆ ಉತ್ತಮ ಅವಕಾಶಗಳು ದೊರೆಯುತ್ತದೆ ಹಾಗೂ ದೊರೆತ ಅವಕಾಶಗಳನ್ನು ಉಪಯೋಗಿಸಿಕೊಂಡು ಧನಾತ್ಮಕ ಚಿಂತನೆಗಳೊಂದಿಗೆ ಶ್ರದ್ಧೆಯಿಂದ ಮುನ್ನಡೆಯಬೇಕು. ಮಾಧ್ಯಮಗಳ ನಕಾರಾತ್ಮಕ ಪ್ರಭಾವಕ್ಕೆ ಒಳಗಾಗದೆ, ದೇಶದ ನಿಜವಾದ ಶಕ್ತಿ ಸಾಮರ್ಥ್ಯಗಳನ್ನು ಅರಿತು ದೇಶದ ಬಗ್ಗೆ ಅಭಿಮಾನ ಬೆಳೆಸಿಕೊಳ್ಳಬೇಕು ಎಂದರು.

ಜಿಪಂ ಸದಸ್ಯ ಶಿವಶಂಕರ್ ಮಾತನಾಡಿ, 2ನೇಮಹಾಯುದ್ಧದನಂತರಪ್ರಾರಂಭವಾದ ರೆಡ್‌ಕ್ರಾಸ್ ಸಂಘಟನೆಯು ಪ್ರಕೃತಿವಿಕೋಪ ಒಳಗೊಂಡಂತೆ ದುರಂತಗಳ ಸಂದರ್ಭಗಳಲ್ಲಿ ಸೇವಾ ಕಾರ್ಯದಲ್ಲಿ ತೊಡಗುವ ಅಂತಾರಾಷ್ಟ್ರೀಯ ಸಂಸ್ಥೆಯಾಗಿದೆ.



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ನಡೆದ ವಿವಿಧ ಘಟಕಗಳ ಉದ್ಘಾಟನಾ ಸಮಾರಂಭದಲ್ಲಿ ಡಾ.ಸಿ.ವಿ.ಗಿರಿಧರ ಶಾಸ್ತ್ರಿ ಮಾತನಾಡಿದರು.

- ಮಾಧ್ಯಮಗಳ ನಕಾರಾತ್ಮಕ ಪ್ರಭಾವಕ್ಕೆ ಒಳಗಾಗದೆ, ದೇಶದ ನಿಜವಾದ ಶಕ್ತಿ ಸಾಮರ್ಥ್ಯಗಳನ್ನು ಅರಿತು ದೇಶದ ಬಗ್ಗೆ ಅಭಿಮಾನ ಬೆಳೆಸಿಕೊಳ್ಳಬೇಕು.
- ಎನ್‌ಎಸ್‌ಎಸ್ ಎಲ್ಲರೊಂದಿಗೆ ಬೆರೆತು ಕೆಲಸ ಮಾಡುವುದನ್ನು ಕಲಿಸುತ್ತದೆ ಹಾಗೂ ಗ್ರಾಮೀಣ ಶಿಬಿರಗಳಿಂದ ಸಾಮಾನ್ಯರ ಜೀವನ ಅರಿಯಲು ನೆರವಾಗುತ್ತದೆ

ಎನ್‌ಎಸ್‌ಎಸ್ ಎಲ್ಲರೊಂದಿಗೆ ಬೆರೆತು ಕೆಲಸ ಮಾಡುವುದನ್ನು ಕಲಿಸುತ್ತದೆ ಹಾಗೂ ಗ್ರಾಮೀಣ ಶಿಬಿರಗಳಂತಹ ಚಟುವಟಿಕೆಗಳಿಂದ ಸಾಮಾನ್ಯರ ಜನಜೀವನ ಅರಿಯಲು ನೆರವಾಗುತ್ತದೆ ಎಂದರು.

ಕಾಲೇಜಿನ ಎಂ.ಸ್ವಾಮಿ, ಟಿ.ಕೆ.ಪರಾಶರ, ಟಿ.ಕಳಸಪ್ಪ, ಬಿ.ಡಿ.ಸಂತೋಷ್, ರೋವರ್ಸ್ ಅಂಡ್ ರೇಂಜರ್ ಘಟಕಗಳ ರೇಖಾ ಎಚ್.ಎಸ್, ಕೆ.ಎಸ್.ಸಂತೋಷ್‌ಕುಮಾರ್, ರೆಡ್‌ಕ್ರಾಸ್ ಮುಖ್ಯಸ್ಥ ಎಂ.ವಿ.ಲೋಕೇಶ್ ಹಾಗೂ ಐಕ್ಯೂಎಸಿ ದೇವದಾಸ್ ಇತರರು ಇದ್ದರು.

Scanned by CamScanner

ಭಾರತದ ಪ್ರಜಾಪ್ರಭುತ್ವ ವಿಶ್ವದಲ್ಲೇ ಸದೃಢ

■ ವಿಶ ಸುದ್ದಿಲೋಕ ಕೃಂಗೇರಿ

ವಿಶ್ವದ ಸದೃಢ ಪ್ರಜಾಪ್ರಭುತ್ವದ ಪ್ರಜೆಗಳಾದ ನಾವು ಇಂದಿಗೂ ನಾನು ನಮ್ಮವರೆಂಬ ಸಂಕುಚಿತ ಭಾವನೆಯೊಂದಿಗೆ ನಮ್ಮ ಬುದ್ಧಿಮತ್ತನ್ನು ಸ್ಥಿಮಿತಗೊಳಿಸಿಕೊಳ್ಳುತ್ತಿದ್ದೇವೆ ಎಂದು ರಂಗ ಕಲಾವಿದ ರಮೇಶ್ ಬೇಣಾರ ವಿಷಾದಿಸಿದರು.

ಶೇಷಮ್ಮ ಕಾಲೇಜಿನಲ್ಲಿ ಇತ್ತೀಚೆಗೆ ರಾಷ್ಟ್ರೀಯ ಸೇವಾ ಯೋಜನೆ ಆಯೋಜಿಸಿದ್ದ ಸಮ್ಮಾನಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ವಿಶ್ವದಲ್ಲಿ ನಮ್ಮ ದೇಶದಲ್ಲಿರುವ ಪ್ರಜಾಪ್ರಭುತ್ವ ವ್ಯವಸ್ಥೆ ಉತ್ತಮವಾಗಿದೆ. ನಾವು ಇಂದಿಗೂ ನಾನು ನಮ್ಮವರೆಂಬ ಸಂಕುಚಿತ ಭಾವನೆಯೊಂದಿಗೆ ನಮ್ಮ ಬುದ್ಧಿಮತ್ತನ್ನು ಸ್ಥಿಮಿತಗೊಳಿಸಿಕೊಳ್ಳುತ್ತಿದ್ದೇವೆ. ಆದರೆ ಇಂತಹ ಪೂರ್ವಾಗ್ರಹ ಕೈಬಿಟ್ಟು ಮಾನವೀಯ ಗುಣಗಳನ್ನು ಬೆಳೆಸಿಕೊಳ್ಳುವುದು ಇಂದಿನ ಅಗತ್ಯವಾಗಿದೆ ಎಂದರು.

ಎನ್.ಎಸ್.ಎಸ್ ಅಧಿಕಾರಿ ಎ.ಜಿ. ಪ್ರಶಾಂತ್ ಮಾತನಾಡಿ, ಮಾಜಿ ಪ್ರಧಾನಮಂತ್ರಿ ರಾಜೀವಗಾಂಧಿ 74ನೇ ಜನ್ಮದಿನವನ್ನು ಅರ್ಥಪೂರ್ಣವಾಗಿ ಆಚರಿಸುತ್ತಿದ್ದು ಉತ್ತಮ ಕಾರ್ಯಗಳನ್ನು ಮಾಡಿದ ಮಹನೀಯರನ್ನು ನೆನೆಯುವುದು ನಮ್ಮ ಕರ್ತವ್ಯವಾಗಿದೆ ಎಂದರು.

ಕಾಲೇಜಿನ ಪ್ರಾಂಶುಪಾಲ ಪಾಸ್ಕಾಮಿ ಅಧ್ಯಕ್ಷತೆ ವಹಿಸಿದ್ದರು.

ಸಮ್ಮಾನಾ ಪ್ರತಿಜ್ಞಾ ವಿಧಿಯನ್ನು ರಾಷ್ಟ್ರೀಯ ಸೇವಾ ಯೋಜನೆಯ ಅಧಿಕಾರಿ ಸಂತೋಷ್ ಭೋದಿಸಿದರು. ಸ್ವಾತಿ ನಿರೂಪಿಸಿ, ಪ್ರೀತೇಶ ಸ್ವಾಗತಿಸಿ, ಸ್ಪೂರ್ತಿ ವಂದಿಸಿದರು.



ಕೃಂಗೇರಿ ಶೇಷಮ್ಮ ಕಾಲೇಜಿನಲ್ಲಿ ಸಮ್ಮಾನಾ ದಿನಾಚರಣೆ ಕಾರ್ಯಕ್ರಮದಲ್ಲಿ ರಮೇಶ್ ಬೇಣಾರ ಮಾತನಾಡಿದರು.

Scanned by CamScanner

ಸಂಯುಕ್ತ ಕರ್ನಾಟಕ
24 ಆಗಸ್ಟ್, 2018,
ಶುಕ್ರವಾರ , ದಾವಣಗೆರೆ.

ಸೋಲು, ಟೀಕೆಗೆ ಅಂಜದೆ ನಡೆದಾಗ ಯಶಸ್ಸು



ಸಂ.ಕ. ಸಮಾಚಾರ ಶೃಂಗೇರಿ

ಸಫಲ ಸಾಧಕರನೇಕರು ಕಷ್ಟ, ಬಡತನಗಳನ್ನು ಎದುರಿಸಿ ಬಂದಿದ್ದು, ದೃಢ ಸಂಕಲ್ಪ ಹಾಗೂ ಪರಿಶ್ರಮಗಳಿಂದಲೇ ತಮ್ಮ ಕನಸುಗಳನ್ನು ಸಾಕಾರ ಮಾಡಿಕೊಂಡವರು ಆಗಿದ್ದಾರೆ ಎಂದು ಜೆಸೀಸ್ ರಾಷ್ಟ್ರೀಯ ಉಪಾಧ್ಯಕ್ಷ ನವೀನ್ ಲಾಯ್ಡ್ ಮಿಸ್ಕತ್ ತಿಳಿಸಿದರು.

ಇಲ್ಲಿನ ಜೆ.ಸಿ.ಬಿ.ಎರ್. ಕಾಲೇಜಿನಲ್ಲಿ ಜೆ.ಸಿ.ಐ ಹಾಗೂ ರಾಷ್ಟ್ರೀಯ ಸೇವಾ ಯೋಜನೆಯ ಸಂಯು ಆಶ್ರಯದಲ್ಲಿ ನಡೆದ ಯುವ ಸಬಲೀಕರಣ ತರಬೇತಿ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

ಪ್ರತಿಯೊಬ್ಬರಲ್ಲೂ ವಿಭಿನ್ನವಾದ ಪ್ರತಿಭೆಗಳಿದ್ದು ಅವುಗಳನ್ನು ಗುರುತಿಸಿ ಬೆಳೆಸಿದಾಗ ಅವರು ಅತ್ಯುತ್ತಮ ವ್ಯಕ್ತಿಗಳಾಗುತ್ತಾರೆ. ಸೋಲು, ಟೀಕೆಗಳಿಗೆ ಹಿಂಜರಿಯದೇ ಆತ್ಮವಿಶ್ವಾಸದೊಂದಿಗೆ ಮುನ್ನಡೆದಾಗ ಮಾತ್ರ ಯಶಸ್ಸು ಸಾಧ್ಯವಾಗುತ್ತದೆ.

ಸಾಧನೆ ಮಾಡಲು ಗುರಿ ಅತ್ಯಗತ್ಯ. ಉತ್ತಮ ಮಾರ್ಗದರ್ಶನ, ಧನಾತ್ಮಕ ಚಿಂತನೆಗಳು ಮತ್ತು ನಿರಂತರ ಪ್ರಯತ್ನಗಳಿಂದ ವ್ಯಕ್ತಿ ಉನ್ನತ ಸ್ಥಾನಕ್ಕೆ ಏರಬಹುದು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಜೆ.ಸಿ.ಐ. ಅಧ್ಯಕ್ಷ ಕೆ.ಟಿ.ಮಂಜುನಾಥ್ ಮಾತನಾಡಿ, ಇಂದಿನ ಯುವಜನರಲ್ಲಿ ಮಾನವೀಯ ಸಂಬಂಧಗಳ ಹಾಗೂ ಸಾಮಾಜಿಕ ಮೌಲ್ಯಗಳ ಕೊರತೆ ಇದೆ. ಜೇಸೀಸ್ ಸಂಸ್ಥೆಯು ವ್ಯಕ್ತಿತ್ವ ವಿಕಸನದ ತರಬೇತಿಯನ್ನು ನೀಡಿ ಅವರಲ್ಲಿ ಆತ್ಮವಿಶ್ವಾಸವನ್ನು ವೃದ್ಧಿಸುತ್ತಿದೆ. ಯಶಸ್ಸಿನ ಮಾರ್ಗದರ್ಶನ ವ್ಯಾಪ್ತಿಯೊಂದಿಗೆ ಸದೃಢ ಸಮಾಜ ನಿರ್ಮಿಸುವ ಕಾರ್ಯವನ್ನು ಜೇಸೀಸ್ ಅಂತರಾಷ್ಟ್ರೀಯ ಮಟ್ಟದಲ್ಲಿ ನಡೆಸುತ್ತಿದೆ ಎಂದರು.

ಪ್ರಾಂಶುಪಾಲ ಡಾ. ಎಂ.ಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಜೆಸೀಸ್ ಸದಸ್ಯ ರಮೇಶ್, ರಾ.ಸೇ.ಯೋ. ಅಧಿಕಾರಿಗಳಾದ ಮಂಜುನಾಥ್, ಸಂತೋಷ್, ಪ್ರಶಾಂತ್ ಉಪಸ್ಥಿತರಿದ್ದರು.

Scanned by CamScanner

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
ಶುಕ್ರವಾರ 24 ಆಗಸ್ಟ್ 2018 • 24 AUGUST 20

ಸೌಹಾರ್ದದಿಂದ ಬಲಿಷ್ಠವಾಗಲಿ ಸಂಬಂಧ

ಶೃಂಗೇರಿ: ಸಮಾಜದಲ್ಲಿ ಪರಸ್ಪರ ಪ್ರೀತಿ, ಸೌಹಾರ್ದತೆಯಿಂದ ಭಾವನಾತ್ಮಕ ಸಂಬಂಧ ಬೆಳೆಸಿಕೊಳ್ಳುವುದೇ ಸದ್ಭಾವನೆ ಎಂದು ರಂಗ ಕಲಾವಿದ ರಮೇಶ್ ಬೇಗಾರ್ ಹೇಳಿದರು.



ಜಿಸಿಬಿಎಂ ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾ ಯೋಜನೆ ವತಿಯಿಂದ ಏರ್ಪಡಿಸಿದ್ದ ಸದ್ಭಾವನಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ನಾನು ನಮ್ಮವರೆಂಬ ಸಂಕುಚಿತ ಭಾವನೆಯಿಂದ ಸೀಮಿತಗೊಳ್ಳುತ್ತಿದ್ದೇವೆ. ಮಾನವೀಯ ಗುಣ ಬೆಳೆಸಿಕೊಳ್ಳುವುದು ಅತ್ಯಗತ್ಯ. ಕಾಲೇಜಿನ ಎನ್‌ಎಸ್‌ಎಸ್ ಉತ್ತಮ ಕಾರ್ಯಗಳಲ್ಲಿ ತೊಡಗಿದೆ ಹಾಗೂ ಯುವಜನರಲ್ಲಿ ಸಮಾನತೆ ಚಿಂತನೆಗಳನ್ನು ಬೆಳೆಸಿಕೊಳ್ಳಲು ಪ್ರೇರಣೆಯಾಗಿದೆ ಎಂದು ಹೇಳಿದರು.

ಎನ್‌ಎಸ್‌ಎಸ್ ಅಧಿಕಾರಿ ಪ್ರಶಾಂತ್ ಮಾತನಾಡಿ, ಮಾಜಿ ಪ್ರಧಾನಮಂತ್ರಿ ದಿ. ರಾಜೀವಗಾಂಧಿ ಅವರ 74ನೇ ಜನ್ಮದಿನ ಆಚರಿಸುತ್ತಿದ್ದೇವೆ. ಜನರಲ್ಲಿ ಸೌಹಾರ್ದತೆ ಅರಿವು ಮೂಡಿಸುವುದು ಹಾಗೂ ಸಮಸ್ಯೆಗಳನ್ನು ಸಂವಿಧಾನಾತ್ಮಕವಾಗಿ ಮಾತುಕತೆಯಿಂದ ಬಗೆಹರಿಸಿಕೊಳ್ಳುವಂತೆ ಪ್ರೇರೇಪಿಸುವುದು ಸದ್ಭಾವನಾ ದಿನದ ಆಚರಣೆ ಮೂಲ ಉದ್ದೇಶ ಎಂದರು. ಕಾಲೇಜಿನ ಪ್ರಾಚಾರ್ಯ ಡಾ. ಎಂ. ಸ್ವಾಮಿ ಮಾತನಾಡಿ, ನಾವೆಲ್ಲರೂ ಒಂದೇ ಎಂಬ ಭಾವನೆ ಮೂಡಿಸುವುದು ಸದ್ಭಾವನಾ ದಿನದ ಮೂಲ ಉದ್ದೇಶ ಎಂದರು.

ಸದ್ಭಾವನಾ ಪ್ರತಿಜ್ಞಾ ವಿಧಿಯನ್ನು ಎನ್‌ಎಸ್‌ಎಸ್ ಅಧಿಕಾರಿಗಳಾದ ಸಂತೋಷ್ ಸ್ವಯಂ ಸೇವಕರುಗಳಿಗೆ ಬೋಧಿಸಿದರು. ಸ್ವಾತಿ, ಶ್ರೀದೇವಿ, ಸ್ವಪ್ನಾ ಇತರರಿದ್ದರು.

Scanned by CamScanner

ಶುಕ್ರವಾರ • ಆಗಸ್ಟ್ 24, 2018 ಪ್ರಜಾ ವಾಣಿ



ಜೆ.ಸಿ.ಬಿ.ಎಂ.ಕಾಲೇಜಿನಲ್ಲಿ ಜೆ.ಸಿ.ಐ ಹಾಗೂ ರಾಷ್ಟ್ರೀಯ ಸೇವಾ ಯೋಜನೆಯ ಸಂಯುಕ್ತಾಶ್ರಯದಲ್ಲಿ ನಡೆದ ಯುವ ಸಬಲೀಕರಣ ತರಬೇತಿ ಕಾರ್ಯಾಗಾರದಲ್ಲಿ ಸಂಪನ್ಮೂಲವ್ಯಕ್ತಿಗಳಾಗಿ ಜೇಸೀಸ್ ರಾಷ್ಟ್ರೀಯ ಉಪಾಧ್ಯಕ್ಷರಾದ ನವೀನ್ ಲಾಯ್ಡ್ ಮಿಸ್ಕತ್ ಮಾತನಾಡಿದರು.

ಉತ್ತಮ ಗುರಿ ಇದ್ದಾಗ ಮಾತ್ರ ಸಾಧನೆ ಸಾಧ್ಯ - ನವೀನ್ ಲಾಯ್ಡ್ ಮಿಸ್ಕತ್

ಪ್ರಜಾವಾಣಿ ವಾರ್ತೆ

ಶೃಂಗೇರಿ: ವಿದ್ಯಾರ್ಥಿಗಳು ಸಾಧನೆ ಮಾಡಲು ಗುರಿ ಅತ್ಯಗತ್ಯ. ಉತ್ತಮ ಮಾರ್ಗದರ್ಶನ, ಧನಾತ್ಮಕ ಚಿಂತನೆಗಳು ಮತ್ತು ನಿರಂತರ ಪ್ರಯತ್ನದಿಂದ ಮಾತ್ರವೇ ವ್ಯಕ್ತಿ ಉನ್ನತ ಸ್ಥಾನಕ್ಕೇರಬಹುದು ಎಂದು ಜೇಸಿಸ್ ರಾಷ್ಟ್ರೀಯ ಉಪಾಧ್ಯಕ್ಷ ನವೀನ್ ಲಾಯ್ಡ್ ಮಿಸ್ಕತ್ ತಿಳಿಸಿದರು.

ಜೆ.ಸಿ.ಬಿ.ಎಂ. ಕಾಲೇಜಿನಲ್ಲಿ ಜೇಸಿಐ ಹಾಗೂ ರಾಷ್ಟ್ರೀಯ ಸೇವಾ ಯೋಜನೆಯ ಸಂಯುಕ್ತಾಶ್ರಯದಲ್ಲಿ ನಡೆದ ಯುವ ಸಬಲೀಕರಣ ತರಬೇತಿ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಅವರು ಮಾತನಾಡಿದರು.

ಹಲವು ಸಾಧಕರು ಕಷ್ಟ ಬಡತನಗಳನ್ನು ಎದುರಿಸಿ ಬಂದವರೇ ಆಗಿದ್ದು, ದೃಢಸಂಕಲ್ಪ ಹಾಗೂ ಪರಿಶ್ರಮಗಳಿಂದ ತಮ್ಮ ಕನಸುಗಳನ್ನು ಸಾಕಾರಗೊಳಿಸಿಕೊಂಡಿದ್ದಾರೆ. ಪ್ರತಿಯೊಬ್ಬರಲ್ಲೂ ವಿಭಿನ್ನವಾದ ಪ್ರತಿಭೆಗಳಿದ್ದು ಅವುಗಳನ್ನು ಗುರುತಿಸಿ ಬೆಳೆಸಿದಾಗ ಅವರು ಅತ್ಯುತ್ತಮ ವ್ಯಕ್ತಿಗಳಾಗುತ್ತಾರೆ. ಸೋಲು, ಟೀಕೆಗಳಿಗೆ ಅಂಜದೇ ಆತ್ಮವಿಶ್ವಾಸದೊಂದಿಗೆ ಮುನ್ನಡೆದಾಗ ಯಶಸ್ಸು ಲಭಿಸುತ್ತದೆ ಎಂದರು.

ಶೃಂಗೇರಿ ಜೇಸಿಐ ಅಧ್ಯಕ್ಷರಾದ ಕೆ.ಟಿ. ಮಂಜುನಾಥ್ ಮಾತನಾಡಿ, ಇಂದಿನ ಯುವಜನತೆಯಲ್ಲಿ ಮಾನವೀಯ ಸಂಬಂಧಗಳು, ಸಾಮಾಜಿಕ ಮೌಲ್ಯಗಳ ಕೊರತೆ ಇದೆ. ಜೇಸಿಸ್ ಸಂಸ್ಥೆಯು ವ್ಯಕ್ತಿತ್ವ ವಿಕಸನದಂತಹ ತರಬೇತಿಗಳನ್ನು ನೀಡಿ ಅವರಲ್ಲಿ ಆತ್ಮವಿಶ್ವಾಸವನ್ನು ವೃದ್ಧಿಸಿ ಯಶಸ್ಸಿನೆಡೆಗೆ ಕೊಂಡೊಯ್ಯುವುದರ ಜತೆಗೆ ಸದೃಢ ಸಮಾಜ ನಿರ್ಮಿಸುವ ಕಾರ್ಯವನ್ನು ಅಂತರ ರಾಷ್ಟ್ರೀಯ ಮಟ್ಟದಲ್ಲಿ ನಡೆಸುತ್ತಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಡಾ. ಎಂ.ಸ್ವಾಮಿ ಮಾತನಾಡಿ, ಶೈಕ್ಷಣಿಕ ಅಂಕಗಳಿಗಿಂತಲೂ ಕೌಶಲಗಳು ಹಾಗೂ ಮಾನವೀಯ ಮೌಲ್ಯಗಳ ಇಂದಿನ ಅಗತ್ಯವಾಗಿದೆ. ಕೌಶಲಯುತ ಯುವ ಶಕ್ತಿಯಿಂದಲೇ ಸದೃಢ ಭಾರತ ನಿರ್ಮಾಣ ಸಾಧ್ಯ ಎಂದು ನುಡಿದರು.

ಕಾರ್ಯಕ್ರಮದಲ್ಲಿ ಜೇಸಿಸ್ ಶೃಂಗೇರಿ ಸದಸ್ಯರಾದ ರಮೇಶ್, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಎನ್ಎಸ್ಎಸ್ ಯೋಜನಾಧಿಕಾರಿಗಳಾದ ಮಂಜುನಾಥ್, ಸಂತೋಷ್, ಪ್ರಶಾಂತ್ ಇದ್ದರು.

Scanned by CamScanner

ಕನ್ನಡಪ್ರಭ
ಭಾನುವಾರ 19.8.2018



ಶೃಂಗೇರಿ ಜೆಸಿಬಿಎಂ ಕಾಲೇಜಿಗೆ ವಿವಿ ಮಟ್ಟದ ಬ್ಯಾಡ್ಮಿಂಟನ್ ಪ್ರಶಸ್ತಿ

ಶೃಂಗೇರಿ: ಶಿವಮೊಗ್ಗ ಶಂಕರಘಟ್ಟ ಜ್ಞಾನಸಹ್ಯಾದ್ರಿಯಲ್ಲಿ ಇತ್ತೀಚೆಗೆ ನಡೆದ ಕುವೆಂಪು ವಿಶ್ವವಿದ್ಯಾನಿಲಯ ಮಟ್ಟದ ಅಂತರ್ ವಿಶ್ವವಿದ್ಯಾನಿಲಯ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಶೃಂಗೇರಿ ಜೆಸಿಬಿಎಂ ಕಾಲೇಜಿನ ವಿದ್ಯಾರ್ಥಿಗಳಾದ ಪುರುಷರ ವಿಭಾಗದಲ್ಲಿ ಜಿ. ಸಂಪತ್‌ಕುಮಾರ್, ಸೂರ್ಯಕುಮಾರ್, ಆರ್. ಅಖಿಲೇಶ್, ಎಸ್.ಮಂಜುನಾಥ್, ಟಿ.ಎಸ್. ಸುಚಿನ್, ಮಹಿಳೆಯರ ವಿಭಾಗದಲ್ಲಿ ಎನ್. ಗ್ರೀಷ್ಮ, ಪದ್ಮಾವತಿ ಆರ್. ರಾವ್, ಕೆ. ಜ್ಯೋತಿ, ಎಚ್.ಎನ್. ಇಂಚರ ಅವರನ್ನು ಕಾಲೇಜಿನ ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ಅಭಿನಂದಿಸಿದ್ದಾರೆ.

Scanned by CamScanner

ಪತ್ರಿಕೋದ್ಯಮದಲ್ಲಿ ವಿಫುಲ ಅವಕಾಶ

■ ವಿಕ ಸುದ್ದಿಲೋಕ ಶೃಂಗೇರಿ

ಉದ್ಯೋಗವಾಗಿ ಪತ್ರಿಕೋದ್ಯಮದಲ್ಲಿ ವಿಫುಲ ಅವಕಾಶವಿದ್ದುವಿದ್ಯಾರ್ಥಿಗಳು ಹವ್ಯಾಸವಾಗಿಯೂ ಪತ್ರಿಕೆಗಳಿಗೆ ಬರೆಯಬಹುದಾಗಿದೆ ಎಂದು ಜೆಸಿಬಿಎಂ ಕಾಲೇಜಿನ ಪ್ರಾಂಶುಪಾಲ ಡಾ.ಸ್ವಾಮಿ ಹೇಳಿದರು.

ಜೆಸಿಬಿಎಂ ಕಾಲೇಜಿನಲ್ಲಿ ಹಳೇ ವಿದ್ಯಾರ್ಥಿ ಸಂಘ ಗುರುವಾರ ಏರ್ಪಡಿಸಿದ್ದ ಪತ್ರಿಕೆಗಳಿಗೆ ವರದಿ ಮಾಡುವುದು ಹೇಗೆ ಎಂಬ ಮಾಹಿತಿ ಕಾರ್ಯಗಾರ ಉದ್ಘಾಟಿಸಿ ಮಾತನಾಡಿದರು.ಬರವಣಿಗೆ, ಓದುವುದು ಅಗತ್ಯವಾಗಿದ್ದು ಇತ್ತೀಚಿನ ದಿನದಲ್ಲಿ ಬರವಣಿಗೆಯ ಪ್ರಮಾಣ ತೀವ್ರ ಕುಸಿತವಾಗಿದೆ.ವಿದ್ಯಾರ್ಥಿಗಳು ಹವ್ಯಾಸವಾಗಿ ಬರವಣಿಗೆಯನ್ನು ಅಭ್ಯಾಸ ಮಾಡಿಕೊಂಡರೆ, ಆರ್ಥಿಕ ಸಂಪನ್ಮೂಲವೂ ಉಂಟಾಗುತ್ತದೆ. ನಿಮ್ಮ ಊರಿನಲ್ಲಿರುವ ಸಮಸ್ಯೆಯ ಬಗ್ಗೆ ಸರಕಾರದ ಅಥವಾ ಜನಪ್ರತಿನಿಧಿಗಳ ಗಮನ ಸೆಳೆಯಬಹುದಾಗಿದೆ ಎಂದರು.



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ಏರ್ಪಡಿಸಿದ್ದ ಪತ್ರಿಕೆಗಳಿಗೆ ವರದಿ ಮಾಡುವುದು ಹೇಗೆ ಎಂಬ ಮಾಹಿತಿ ಕಾರ್ಯಗಾರ ಉದ್ಘಾಟಿಸಿ ಡಾ.ಸ್ವಾಮಿ ಮಾತನಾಡಿದರು.

ವರದಿಗಾರಿಕೆ ಬಗ್ಗೆ ಮಾತನಾಡಿದ ಪತ್ರಕರ್ತೆ ಶೋಭಾಅನಂತಯ್ಯ,ವರದಿ ಮಾಡುವುದು ಒಂದು ಕಲೆಯಾಗಿದ್ದು ಪತ್ರಿಕೆಗಳಿಗೆ ವರದಿ ಮಾಡಲು ಪತ್ರಿಕೋದ್ಯಮದಲ್ಲಿ ಪದವಿ ಪಡೆದಿರಬೇಕೆಂಬ ಕಡ್ಡಾಯವಿಲ್ಲ,ಆಸಕ್ತಿ ಹಾಗೂ ಕೌಶಲ್ಯದಿಂದ ಪತ್ರಿಕೋದ್ಯಮದಲ್ಲಿ ತೊಡಗಿಸಿಕೊಳ್ಳಬಹುದಾಗಿದೆ ಎಂದರು.ಪತ್ರಕರ್ತ ಶೃಂಗೇರಿ ಸುಬ್ಬಣ್ಣ ಮಾತನಾಡಿ,ಪ್ರತಿದಿನವೂ ಪತ್ರಿಕೆಯನ್ನು ಓದುವುದರಿಂದ ಸಾಮಾನ್ಯ ಜ್ಞಾನ ವೃದ್ಧಿಯಾಗುತ್ತದೆ ಎಂದರು.

ಹಳೇ ವಿದ್ಯಾರ್ಥಿ ಸಂಘದ ಅಧ್ಯಕ್ಷ ದಿನೇಶ್ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಜೆಸಿಬಿಎಂ ಕಾಲೇಜು,ಬಿಜಿಎಸ್ ಶಿಕ್ಷಣ ಸಂಸ್ಥೆಸರಕಾರಿ ಪದವಿ ಕಾಲೇಜಿನ ವಿದ್ಯಾರ್ಥಿಗಳು ಕಾರ್ಯಗಾರದಲ್ಲಿ ಪಾಲ್ಗೊಂಡಿದ್ದರು.

Scanned by CamScanner

ಶುಕ್ರವಾರ, ಆಗಸ್ಟ್ 3, 2018



ಶೃಂಗೇರಿ: ಜೆಸಿಬಿಎಂ ಕಾಲೇಜಿನಲ್ಲಿ ಏರ್ಪಡಿಸಿದ್ದ ಪತ್ರಿಕೆಗಳಿಗೆ ವರದಿ ಮಾಡುವುದು ಹೇಗೆ ಎಂಬ ಮಾಹಿತಿ ಕಾರ್ಯಾಗಾರದಲ್ಲಿ ಡಾ। ಸ್ವಾಮಿ ಮಾತನಾಡಿದರು.

ಪತ್ರಿಕೋದ್ಯಮದಲ್ಲಿ ವಿಪುಲ ಅವಕಾಶ: ಡಾ। ಸ್ವಾಮಿ

ಶೃಂಗೇರಿ: ನಿಮ್ಮ ಊರಿನಲ್ಲಿರುವ ಸಮಸ್ಯೆ ಬಗ್ಗೆ ಸರ್ಕಾರ ಅಥವಾ ಜನಪ್ರತಿನಿಧಿಗಳ ಗಮನ ಸೆಳೆಯಲು ಪತ್ರಿಕೋದ್ಯಮ ಸಹಾಯಕವಾಗಿದೆ ಎಂದು ಜೆಸಿಬಿಎಂ ಕಾಲೇಜಿನ ಪ್ರಾಂಶುಪಾಲ ಡಾ। ಸ್ವಾಮಿ ಹೇಳಿದರು.

ಶ್ರೀ ಜೆಸಿಬಿಎಂ ಕಾಲೇಜಿನಲ್ಲಿ ಹಳೇ ವಿದ್ಯಾರ್ಥಿ ಸಂಘ ಗುರುವಾರ ಏರ್ಪಡಿಸಿದ್ದ ಪತ್ರಿಕೆಗಳಿಗೆ ವರದಿ ಮಾಡುವುದು ಹೇಗೆ ಎಂಬ ಮಾಹಿತಿ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು. 'ಉದ್ಯೋಗವಾಗಿ ಪತ್ರಿಕೋದ್ಯಮದಲ್ಲಿ ವಿಪುಲ ಅವಕಾಶವಿದ್ದು, ವಿದ್ಯಾರ್ಥಿಗಳು ಹವ್ಯಾಸವಾಗಿಯೂ ಪತ್ರಿಕೆಗಳಿಗೆ ಬರೆಯಬಹುದಾಗಿದೆ.

ಬರವಣಿಗೆ, ಓದುವುದು ಆಗತ್ಯವಾಗಿದ್ದು, ಇತ್ತೀಚಿನ ದಿನದಲ್ಲಿ ಬರವಣಿಗೆಯ ಪ್ರಮಾಣ ತೀವ್ರ ಕುಸಿತವಾಗಿದೆ. ವಿದ್ಯಾರ್ಥಿಗಳು ಬರವಣಿಗೆಯನ್ನು ಅಭ್ಯಾಸ ಮಾಡಿಕೊಂಡರೆ, ಆರ್ಥಿಕ ಸಂಪನ್ಮೂಲವೂ ಉಂಟಾಗುತ್ತದೆ ಎಂದರು.

ವರದಿಗಾರಿಕೆ ಬಗ್ಗೆ ಮಾತನಾಡಿದ ಪತ್ರಕರ್ತೆ ಶೋಭಾ ಅನಂತಯ್ಯ, ವರದಿ ಮಾಡುವುದು ಒಂದು ಕಲೆಯಾಗಿದ್ದು, ಪತ್ರಿಕೆಗಳಿಗೆ ವರದಿ ಮಾಡಲು ಪತ್ರಿಕೋದ್ಯಮದಲ್ಲಿ ಪದವಿ ಪಡೆದಿರಬೇಕೆಂಬ ಕಡ್ಡಾಯವಿಲ್ಲ, ಆಸಕ್ತಿ ಹಾಗೂ ಕೌಶಲ್ಯದಿಂದ ಪತ್ರಿಕೋದ್ಯಮದಲ್ಲಿ ತೊಡಗಿಸಿಕೊಳ್ಳಬಹುದಾಗಿದೆ ಎಂದರು.

ಪತ್ರಕರ್ತ ಶೃಂಗೇರಿ ಸುಬ್ಬಣ್ಣ ಮಾತನಾಡಿ, ಪ್ರತಿ ದಿನವೂ ಪತ್ರಿಕೆಯನ್ನು ಓದುವುದರಿಂದ ಸಾಮಾನ್ಯ ಜ್ಞಾನ ವೃದ್ಧಿಯಾಗುತ್ತದೆ. ಎಂದರು.

ಹಳೇ ವಿದ್ಯಾರ್ಥಿ ಸಂಘದ ಅಧ್ಯಕ್ಷ ದಿನೇಶ್ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಜೆಸಿಬಿಎಂ ಕಾಲೇಜು, ಬಿಜಿಎಸ್ ಶಿಕ್ಷಣ ಸಂಸ್ಥೆ ಸರ್ಕಾರಿ ಪದವಿ ಕಾಲೇಜಿನ ವಿದ್ಯಾರ್ಥಿಗಳು ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು.

Scanned by CamScanner

ವಿಜಯ ಕರ್ನಾಟಕ

IV ನಮ್ಮ ಚಿಕ್ಕಮಗಳೂರು ಶುಕ್ರವಾರ,27 ಜುಲೈ 2018, ಶಿವಮೊಗ್ಗ



ಶೃಂಗೇರಿ ಬಿಬಿಎಂ ಕಾಲೇಜಿನ ಎನ್‌ಸಿಸಿ ವಿದ್ಯಾರ್ಥಿಗಳು ಕಾರ್ಗಿಲ್ ವಿಜಯೋತ್ಸವ ಅಂಗವಾಗಿ ಪಟ್ಟಣದ ಪ್ರಮುಖ ರಸ್ತೆಯಲ್ಲಿ ಮೆರವಣಿಗೆ ನಡೆಸಿದರು.

ಶೃಂಗೇರಿಯಲ್ಲಿ ಕಾರ್ಗಿಲ್ ವಿಜಯೋತ್ಸವ

■ ವಿಕ ಸುದ್ದಿಲೋಕ ಶೃಂಗೇರಿ

ದೇಶದ ಪ್ರತಿಯೊಬ್ಬರು ರಾಷ್ಟ್ರ ಪ್ರೇಮವನ್ನು ಬೆಳೆಸಿಕೊಳ್ಳುವುದರ ಜತೆಗೆ ಭಾರತಾಂಬೆಯನ್ನು ಗೌರವಿಸಬೇಕು ಎಂದು ಎಬಿವಿಪಿ ಮುಖಂಡ ಮಂಜು ನಾಥ್ ಹೇಳಿದರು.

ಅವರು ಗುರುವಾರ ವಿದ್ಯಾನಗರ ಶಾಲೆಯಲ್ಲಿ ಕಾರ್ಗಿಲ್ ವಿಜಯೋತ್ಸವ ದಿನದ ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದರು. ರಾಷ್ಟ್ರದ ಭದ್ರತೆ ಮತ್ತು ರಕ್ಷಣೆಗಾಗಿ ಶತ್ರುಗಳನ್ನು ಕಾರ್ಗಿಲ್‌ನಲ್ಲಿ ಸೋಲಿಸಿ ನಮ್ಮ ಯೋಧರು ದೇಶಕ್ಕೆ ವಿಜಯ ದೊರಕಿಸಿಕೊಟ್ಟ ದಿನ ಇದಾಗಿದೆ ಎಂದರು.

ಇದಕ್ಕೂ ಮೊದಲು ಭಾರತಾಂಬೆ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು. ಪರಿಷತ್ ಸದಸ್ಯರು ಹಾಜರಿದ್ದರು.

Scanned by CamScanner

ಪ್ರಜಾವಾಣಿ ಶುಕ್ರವಾರ • ಜುಲೈ 27, 2018

ಕಾರ್ಗಿಲ್ ವಿಜಯ ದಿವಸದ ಅಂಗವಾಗಿ ನಡೆದ ರಕ್ತದಾನ ಶಿಬಿರ

ರಕ್ತದಾನದಿಂದ ಆತ್ಮತೃಪ್ತಿ- ಡಾ. ಲಕ್ಷ್ಮೀನಾರಾಯಣ

ಪ್ರಜಾವಾಣಿ ವಾರ್ತೆ

ಶೃಂಗೇರಿ: 'ರಕ್ತದಾನ ಇತರೆಲ್ಲಾ ದಾನಗಳಿಗಿಂತ ಮಹತ್ವದ್ದಾಗಿದೆ' ಎಂದು ಶಾರದಾ ಧನ್ವಂತರಿ ಆಸ್ಪತ್ರೆ ವೈದ್ಯಾಧಿಕಾರಿ ಡಾ.ಲಕ್ಷ್ಮೀನಾರಾಯಣ ಹೇಳಿದರು.

ಶೃಂಗೇರಿ ತಾಲ್ಲೂಕಿನ ಜೆಸಿಬಿಎಂ ಕಾಲೇಜಿನಲ್ಲಿ ಜೇಸಿಐ ಸಂಸ್ಥೆ ಮತ್ತು ಎನ್ನೆಸ್ಸೆಸ್ ಘಟಕದ ವತಿಯಿಂದ ಗುರುವಾರ ನಡೆದ ಕಾರ್ಗಿಲ್ ವಿಜಯ ದಿವಸದ ಅಂಗವಾಗಿ ನಡೆದ ರಕ್ತದಾನ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

'ಆರೋಗ್ಯವಂತರಾಗಿರುವ ಪ್ರತಿಯೊಬ್ಬರೂ ರಕ್ತದಾನ ಮಾಡಬಹುದು. ರಕ್ತದಾನದ ಬಗ್ಗೆ ಜನರಲ್ಲಿ ತಪ್ಪು ತಿಳಿವಳಿಕೆ ಇದ್ದು, ಈ ಬಗ್ಗೆ ಜನ ಜಾಗೃತಿ ಮೂಡಿಸುವ ಅಗತ್ಯವಿದೆ. ರಕ್ತದಾನ ಮಾಡುವಲ್ಲಿ ಯಾವುದೇ ಆಂಜಿಕೆ ಬೇಡ. ರಕ್ತ ನೀಡುವುದರಿಂದ ಆರೋಗ್ಯದ ಮೇಲೆ ಯಾವುದೇ ಕೆಟ್ಟ ಪರಿಣಾಮ ಉಂಟಾಗುವುದಿಲ್ಲ. ರಕ್ತದಾನ ಮಾಡಿದಾಗ ಸಮಾಜಕ್ಕೆ ಕೊಡುಗೆ ನೀಡಿದ ಆತ್ಮತೃಪ್ತಿ ಲಭಿಸುತ್ತದೆ' ಎಂದರು.

ಮುಖ್ಯಾಂಶಗಳು

- ಯುವಪೀಳಿಗೆ ದೇಶಪ್ರೇಮ ಬೆಳೆಸಿಕೊಳ್ಳಬೇಕು
- ಉದ್ಯೋಗದ ಜತೆ ದೇಶಕ್ಕಾಗಿ ತುಡಿಯುವ ಮನಸ್ಸಿರಬೇಕು
- ಜೇಸಿಐ ಸದಸ್ಯರು ಮತ್ತು ವಿದ್ಯಾರ್ಥಿಗಳಿಂದ ರಕ್ತದಾನ

ಜೇಸಿಐ ಸಂಸ್ಥೆ ಅಧ್ಯಕ್ಷ ಕೆ.ಟಿ. ಮಂಜುನಾಥ್ ಮಾತನಾಡಿ, 'ನಾವು ಮಾಡುವ ಸೇವೆ, ದಾನಗಳು ಕ್ಷಿಪ್ರಕಾಲದಲ್ಲಿ ಸಮುದಾಯವನ್ನು ತಲುಪಬೇಕು. ಒಬ್ಬ ವ್ಯಕ್ತಿಯ ಪ್ರಾಣ ಉಳಿಸಲು ರಕ್ತ ಅತ್ಯಂತ ಸಹಕಾರಿ. ಹಾಗಾಗಿ ಕಾಲೇಜಿನ ವಿದ್ಯಾರ್ಥಿಗಳು ಸ್ವಯಂಪ್ರೇರಿತರಾಗಿ ರಕ್ತದಾನ ಮಾಡುತ್ತಿರುವುದು ಸಂತಸದ ಸಂಗತಿ. ಯುವಪೀಳಿಗೆ ದೇಶದ ಬಗ್ಗೆ ಮಹತ್ತರವಾದ ಚಿಂತನೆಗಳನ್ನು ಅಳವಡಿಸಿಕೊಳ್ಳಬೇಕು. ಉದ್ಯೋಗದ ಜತೆ ದೇಶಕ್ಕಾಗಿ ತುಡಿಯುವ ಮನಸ್ಸಿರಬೇಕು. ಆಗ ಮಾತ್ರ ದೇಶದ ಉನ್ನತಿ ಸಾಧ್ಯ' ಎಂದರು.



ಶೃಂಗೇರಿ ತಾಲ್ಲೂಕಿನ ಜೆಸಿಬಿಎಂ ಕಾಲೇಜಿನಲ್ಲಿ ಜೇಸಿಐ ಸಂಸ್ಥೆ ಮತ್ತು ಎನ್ನೆಸ್ಸೆಸ್ ಘಟಕ ಗುರುವಾರ ನಡೆದ ಕಾರ್ಗಿಲ್ ವಿಜಯ ದಿವಸ ಅಂಗವಾಗಿ ಆಯೋಜಿಸಿದ್ದ ರಕ್ತದಾನ ಶಿಬಿರದಲ್ಲಿ ಜೇಸಿಐ ಸದಸ್ಯರು ಮತ್ತು ವಿದ್ಯಾರ್ಥಿಗಳು ರಕ್ತದಾನ ಮಾಡಿದರು.

ಕಾಲೇಜಿನ ಪ್ರಾಚಾರ್ಯ ಡಾ.ಸ್ವಾಮಿ, ಎ.ಪಿ.ಪ್ರಶಾಂತ್ ಹಾಗೂ ಸಹ ಪ್ರಾಧ್ಯಾಪಕರು, ಜೇಸಿಐನ ಸದಸ್ಯರು ಹಾಜರಿದ್ದರು.

Scanned by CamScanner

ಶುಕ್ರವಾರ,22 ಜೂನ್ 2018, ಶಿವಮೊಗ್ಗ
ವಿಜಯ ಕರ್ನಾಟಕ

ಜನಜಾಗೃತಿ ಜಾಥಾ ಬಿ.ಜಿ.ಎಸ್.ಪ್ರೌಢಶಾಲೆಯಿಂದ ಹೊರಟು ಗಾಂಧಿ ಬಜಾರ್‌ನಲ್ಲಿ ಸಮಾರೋಪ ಗೊಂಡಿತು.

ದೇಹ ದಂಡಿಸಿ ಆರೋಗ್ಯ ವೃದ್ಧಿಸಿ

ಶೃಂಗೇರಿ: ದೇಹ ಮತ್ತು ಮನಸ್ಸಿನ ಆರೋಗ್ಯ ವೃದ್ಧಿಗೆ ಯೋಗವು ಪೂರಕವಾಗಿದೆ. ನಿತ್ಯವೂ ಯೋಗ ಅಭ್ಯಾಸ ಮಾಡುವುದು ಅತ್ಯಗತ್ಯ ಎಂದು ಧರ್ಮಸ್ಥಳದ ಶಾಂತಿವನ ಟ್ರಸ್ಟ್‌ನ ಡಾ.ರೂಪ ಹೇಳಿದರು.

ಜೆಸಿಬಿಎಂ ಕಾಲೇಜಿನಲ್ಲಿ ಗುರುವಾರ ಆಯುಷ್ ಇಲಾಖೆ, ಪತಂಜಲಿ ಯೋಗ ಶಿಕ್ಷಣ ಸಮಿತಿ, ರಾಷ್ಟ್ರೀಯ ಯುವ ದಳ, ಎನ್ಸೆಸ್ ,ಲಯನ್ಸ್ ಕ್ಲಬ್, ರೋಟರಿ ಕ್ಲಬ್, ಧರ್ಮಸ್ಥಳದ ಶಾಂತಿವನ ಟ್ರಸ್ಟ್ ಆಯೋಜಿಸಿದ್ದ ವಿಶ್ವಯೋಗ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.ದೇಹವನ್ನು ದಂಡಿಸಿದಾಗ ಆರೋಗ್ಯ ಸದೃಢವಾಗಿರುತ್ತದೆ ಎಂದರು. ಸರಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ನಾಗರಾಜ್ ಮಾತನಾಡಿ, ಆರೋಗ್ಯಯುತ ಜೀವನಕ್ಕೆ ನಮ್ಮ ಪೂರ್ವಜರು ಹಾಕಿ ಕೊಟ್ಟ ಯೋಗ ಜೀವನವನ್ನು ನಡೆಸುವುದು ಅತ್ಯಗತ್ಯ ಎಂದರು. ಪ್ರಾಚಾರ್ಯ ಡಾ ಎಂ ಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ನಾಗೇಶ್ ಕಾಮತ್, ಡಾ ಅನಿತ್ ಕುಮಾರ್, ಡಾ ಕುಮಾರ ಸ್ವಾಮಿ ಉಡುಪ, ಎ. ಜಿ ಪ್ರಶಾಂತ್, ಎಂ.ವಿ.ಲೋಕೇಶ್,ಬಿ.ಡಿ. ಸಂತೋಷ್ ಪಾಲ್ಗೊಂಡಿದ್ದರು. ಪತಂಜಲಿ ಯೋಗ ಶಿಕ್ಷಣ ಸಮಿತಿಯ ಅಧ್ಯಕ್ಷ ಡಾ. ಎಚ್.ಸಿ.ವೀರಪ್ಪಗೌಡ ಪ್ರಾಸ್ತಾವಿಕ ಮಾತನಾಡಿದರು.

ಯೋಗ ನಡಿಗೆ ಜಾಥಾವನ್ನು ಹಮ್ಮಿಕೊಳ್ಳಲಾಗಿತ್ತು.



ಶೃಂಗೇರಿ ಶ್ರೀ ಜೆಸಿಬಿಎಂ ಕಾಲೇಜಿನಲ್ಲಿ ವಿಶ್ವಯೋಗ ದಿನಾಚರಣೆ ಕಾರ್ಯಕ್ರಮ ನಡೆಯಿತು.

Scanned by CamScanner

ಪ್ರಜಾವಾಣಿ ಶುಕ್ರವಾರ • ಜೂನ್ 22, 2018

'ಆರೋಗ್ಯ ವೃದ್ಧಿಗೆ ಯೋಗ ಪೂರಕ'

ಶೃಂಗೇರಿ: ದೇಹ ಮತ್ತು ಮನಸ್ಸಿನ ಆರೋಗ್ಯ ವೃದ್ಧಿಗೆ ಯೋಗವು ಪೂರಕವಾಗಿದ್ದು, ಪ್ರತಿನಿತ್ಯವೂ ಯೋಗ ಅಭ್ಯಾಸ ಮಾಡುವುದು ಅಗತ್ಯ ಎಂದು ಡಾ ರೂಪ ತಿಳಿಸಿದರು.

ಶೃಂಗೇರಿ ತಾಲ್ಲೂಕಿನ ಜೆಸಿಬಿಎಂ ಕಾಲೇಜಿನಲ್ಲಿ ಆಯುಷ್ ಇಲಾಖೆ, ಪತಂಜಲಿ ಯೋಗ ಶಿಕ್ಷಣ ಸಮಿತಿ, ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ, ರಾಷ್ಟ್ರೀಯ ಯುವ ದಳ, ರೋಟರಿ ಕ್ಲಬ್ ಹಾಗೂ ಧರ್ಮಸ್ಥಳದ ಶಾಂತಿವನ ಟ್ರಸ್ಟ್ ಸಂಯುಕ್ತಾಶ್ರಯದಲ್ಲಿ ನಡೆದ ವಿಶ್ವಯೋಗ ದಿನವನ್ನು ಉದ್ಘಾಟಿಸಿ ಮಾತನಾಡಿದರು

ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಅನುಮೋದನೆಯಿಂದ ಜಗತ್ತಿನ ಇನ್ನೂರಕ್ಕೂ ಹೆಚ್ಚು ದೇಶಗಳಲ್ಲಿ ಕಳೆದ ನಾಲ್ಕು ವರ್ಷಗಳಿಂದ ಜೂನ್ 21ರಂದು ಯೋಗ ದಿನಾಚರಣೆ ಆಚರಿಸಲಾಗುತ್ತಿದೆ ಎಂದರು.

ಸಾಮೂಹಿಕ ಪ್ರಾರ್ಥನೆಯ ನಂತರ ಸರ್ಕಾರಿ ಪ.ಪೂ. ಕಾಲೇಜು ಪ್ರಾಂಶುಪಾಲ ನಾಗರಾಜ್ ವಿದ್ಯಾರ್ಥಿಗಳಿಗೆ ವಿವಿಧ ಆಸನಗಳನ್ನು ಹೇಳಿಕೊಟ್ಟರು. ಆರೋಗ್ಯಯುತ ಜೀವನಕ್ಕೆ ನಮ್ಮ ಪೂರ್ವಜರು ಹಾಕಿ ಕೊಟ್ಟ ಯೋಗ ಜೀವನವನ್ನು ನಡೆಸುವುದು ಅತ್ಯಗತ್ಯ. ಯೋಗವು ದೈಹಿಕ ಆರೋಗ್ಯವನ್ನು ನೀಡುವುದರ ಜೊತೆಗೆ ಮಾನಸಿಕ ನೆಮ್ಮದಿಯನ್ನು ನೀಡುತ್ತದೆ. ಯೋಗದ ಜೊತೆಗೆ ಪ್ರಾಣಾಯಾಮವು ಉಲ್ಲಾಸವನ್ನು ನೀಡುತ್ತದೆ ಎಂದರು.



ಶೃಂಗೇರಿ ತಾಲ್ಲೂಕಿನ ಜೆಸಿಬಿಎಂ ಕಾಲೇಜಿನಲ್ಲಿ ವಿಶ್ವಯೋಗ ದಿನವನ್ನು ಆಚರಿಸಲಾಯಿತು.

ಪತಂಜಲಿ ಯೋಗ ಶಿಕ್ಷಣ ಸಮಿತಿ ಅಧ್ಯಕ್ಷ ಡಾ ಹೆಚ್.ಸಿ.ವೀರಪ್ಪಗೌಡ ಪ್ರಸ್ತಾವಿಕ ನುಡಿಗೈದರು. ಪ್ರಾಚಾರ್ಯ ಡಾ.ಎಂ.ಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ನಾಗೇಶಕಾಮತ್, ಡಾ.ಅಮಿತ್ ಕುಮಾರ್, ಡಾ.ಕುಮಾರ ಸ್ವಾಮಿ ಉಡುಪ, ಎ.ಜಿ. ಪ್ರಶಾಂತ್, ಎಂ.ವಿ. ಲೋಕೇಶ್, ಸಂತೋಷ್ ಬಿ.ಡಿ, ಮೊದಲಾದವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಯೋಗದ ಜನಜಾಗೃತಿಗಾಗಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಯೋಗ ನಡಿಗೆ ಜಾಥಾ ಹಮ್ಮಿಕೊಳ್ಳಲಾಗಿತ್ತು.

Scanned by CamScanner

ಪ್ರಜಾವಾಣಿ ಶನಿವಾರ • ಜೂನ್ 9, 2018

'ಒತ್ತಡ ನಿವಾರಣೆಗೆ ಯೋಗ ಸಹಾಯಕ'



ಶೃಂಗೇರಿ: ಆಧುನಿಕ ಜೀವನದಲ್ಲಿ ಪ್ರತಿಯೊಬ್ಬರೂ ಒತ್ತಡದ ಜೀವನ ಎದುರಿಸುತ್ತಿದ್ದು, ಒತ್ತಡ ನಿವಾರಣೆಗೆ ಯೋಗ ಸಹಾಯಕವಾಗಲಿದೆ ಎಂದು ಉಜಿರೆಯ ಧರ್ಮಸ್ಥಳ ಮಂಜುನಾಥೇಶ್ವರ ನ್ಯಾಚುರೋಪಥಿ ಮತ್ತು ಯೋಗ ವಿಜ್ಞಾನ ಕಾಲೇಜಿನ ನೇಹಾ ಪಾಟೀಲ್ ಹೇಳಿದರು.

ಶೃಂಗೇರಿ ತಾಲ್ಲೂಕಿನ ಜೆಸಿಬಿಎಂ ಕಾಲೇಜಿನಲ್ಲಿ ಇತ್ತೀಚೆಗೆ ವಿಶ್ವ ಯೋಗ ದಿನಾಚರಣೆ ಕಾರ್ಯಕ್ರಮದ ಅಂಗವಾಗಿ ಉಚಿತ ಯೋಗ ಶಿಬಿರದಲ್ಲಿ ಅವರು ಮಾತನಾಡಿದರು.

ಯೋಗದಿಂದ ಮಾನಸಿಕ, ದೈಹಿಕ ಆರೋಗ್ಯ ಕಾಪಾಡಿಕೊಳ್ಳ ಬಹುದಾಗಿದೆ. ವಿದ್ಯಾರ್ಥಿ ಜೀವನದಿಂದಲೇ ಯೋಗವನ್ನು ಪ್ರತಿ ದಿನವೂ ಮಾಡುವುದರಿಂದ ಶಿಕ್ಷಣದಲ್ಲಿ ಏಕಾಗ್ರತೆ ಸಾಧಿಸಬಹುದು. ವಿಶ್ವದ ಬೇರೆ ದೇಶದಲ್ಲಿಯೂ ಇದೀಗ ಯೋಗದ ಬಗ್ಗೆ ಜಾಗೃತಿ ಮೂಡುತ್ತಿದ್ದು, ಜನಸಾಮಾನ್ಯರಿಗೆ ಈ ಬಗ್ಗೆ ಅರಿವು ಮೂಡಿಸಲು ಶಿಬಿರ ಏರ್ಪಡಿಸಲಾಗಿದೆ ಎಂದರು.

ಕೇಂದ್ರ ಸರ್ಕಾರದ ಆಯುಷ್ ಸಚಿವಾಲಯದ ಸೆಂಟ್ರಲ್ ಕೌನ್ಸಿಲ್ ಆಫ್ ರಿಸರ್ಚ್ ಇನ್ ಯೋಗ, ನ್ಯಾಚುರೋಪಥಿ, ಜೆ.ಸಿ.ಬಿ.ಎಂ ಕಾಲೇಜು, ಧರ್ಮಸ್ಥಳ ಮಂಜುನಾಥೇಶ್ವರ ನ್ಯಾಚುರೋಪಥಿ ಮತ್ತು ಯೋಗ ವಿಜ್ಞಾನ ಕಾಲೇಜು ಆಶ್ರಯದಲ್ಲಿ ಶಿಬಿರ ಆಯೋಜಿಸಲಾಗಿತ್ತು.

ಶಿಬಿರದ ಮೇಲ್ವಿಚಾರಕಿ ನೇಹಾ, ಜೆಸಿಬಿಎಂ ಕಾಲೇಜಿನ ಪ್ರಾಂಶುಪಾಲ ಡಾ.ಸ್ವಾಮಿ, ಡಾ.ವೀರಪ್ಪಗೌಡ, ಎ.ಜಿ.ಪ್ರಶಾಂತ್ ಇದ್ದರು.

Scanned by CamScanner

ಪ್ರಜಾವಾಣಿ ಮಂಗಳವಾರ • ಮೇ 1, 2018

ಜೆಸಿಬಿಎಂ ಕಾಲೇಜಿಗೆ ಉತ್ತಮ ಫಲಿತಾಂಶ

ಶೃಂಗೇರಿ: ದ್ವಿತೀಯ ಪಿಯು ಪರೀಕ್ಷೆಯಲ್ಲಿ ಇಲ್ಲಿನ ಜೆ.ಸಿ.ಬಿ.ಎಂ. ಕಾಲೇಜಿನ ಪದವಿಪೂರ್ವ ವಿಭಾಗ ಶೇಕಡ 92 ಫಲಿತಾಂಶ ಪಡೆದಿದೆ.

ಒಟ್ಟು 273 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು 251 ವಿದ್ಯಾರ್ಥಿಗಳು ತೇರ್ಗಡೆ ಹೊಂದಿರುತ್ತಾರೆ. ಅತ್ಯುತ್ತಮ ಶ್ರೇಣಿಯಲ್ಲಿ 54 ವಿದ್ಯಾರ್ಥಿಗಳು, ಪ್ರಥಮ ದರ್ಜೆಯಲ್ಲಿ 152 ವಿದ್ಯಾರ್ಥಿಗಳು, ದ್ವಿತೀಯ ದರ್ಜೆಯಲ್ಲಿ 45 ವಿದ್ಯಾರ್ಥಿಗಳು ತೇರ್ಗಡೆಯಾಗಿರುತ್ತಾರೆ.



ಅಶ್ವಿನಿ

ಕಾಲೇಜಿನ ವಾಣಿಜ್ಯ ವಿಭಾಗದ ವಿದ್ಯಾರ್ಥಿನಿ ಅಶ್ವಿನಿ ಎಚ್.ಜಿ, ಶೇ 97 (581 ಅಂಕ), ವಿಜ್ಞಾನ ವಿಭಾಗದಲ್ಲಿ ಸುಪ್ರೀತ ಬಿ.ಎಸ್. ಶೇ 95 (568 ಅಂಕ), ವಾಣಿಜ್ಯ ವಿಭಾಗದ ಶಶಾಂಕ್ ಕೆ.ಎಸ್. ಶೇ 94 ಅಂಕ ಪಡೆದಿದ್ದಾರೆ.

Scanned by CamScanner

ಪ್ರಜಾವಾಣಿ
ಶನಿವಾರ • ಮೇ 12, 2018

ಉಚಿತ ವಿದ್ಯಾಭ್ಯಾಸಕ್ಕಾಗಿ ಅರ್ಜಿ ಆಹ್ವಾನ

ಶೃಂಗೇರಿ: 2017-18ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ 85ಕ್ಕಿಂತ ಹೆಚ್ಚಿನ ಅಂಕ ಪಡೆದ, ಆರ್ಥಿಕವಾಗಿ ಹಿಂದುಳಿದ ಪ್ರತಿಭಾವಂತ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಶೃಂಗೇರಿಯ ಜೆ.ಸಿ.ಬಿ.ಎಂ ಕಾಲೇಜಿನಲ್ಲಿ ಉಚಿತ ವಿದ್ಯಾಭ್ಯಾಸಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

Scanned by CamScanner

ಹೊಸ ದಿಗಂತ
ಗುರುವಾರ
05 ಏಪ್ರಿಲ್ 2018

ಜೆ.ಸಿ.ಬಿ.ಎಂ. ಕಾಲೇಜಿನ ಪ್ರಾಂಶುಪಾಲ ಡಾ.ಎಂ. ಸ್ವಾಮಿ

ವಿದ್ಯಾರ್ಥಿಗಳ ವಿಕಾಸಕ್ಕೆ ರಾಷ್ಟ್ರೀಯ ಸೇವಾ ಯೋಜನೆ ಸಹಕಾರಿ

ಶೃಂಗೇರಿ: ರಾಷ್ಟ್ರೀಯ ಸೇವಾ ಯೋಜನೆಯು ವಿದ್ಯಾರ್ಥಿಗಳ ಸರ್ವತೋಮುಖ ವಿಕಾಸಕ್ಕೆ ಉತ್ತಮ ವೇದಿಕೆ ಒದಗಿಸುತ್ತದೆ ಎಂದು ಜೆ.ಸಿ.ಬಿ.ಎಂ. ಕಾಲೇಜಿನ ಪ್ರಾಂಶುಪಾಲ ಡಾ.ಎಂ. ಸ್ವಾಮಿ ಹೇಳಿದರು.

ಅವರು ಜೆ.ಸಿ.ಬಿ.ಎಂ. ಕಾಲೇಜಿನಲ್ಲಿ ಇತ್ತೀಚೆಗೆ ಆಯೋಜಿಸಿದ್ದ ರಾಷ್ಟ್ರೀಯ ಸೇವಾ ಯೋಜನೆ ಯುವ ರೆಡ್ ಕ್ರಾಸ್ ಘಟಕ ಹಾಗೂ ರೆಡ್ ರಿಬ್ಬನ್ ಕ್ಲಬ್‌ಗಳ ದೈನಂದಿನ ಚಟುವಟಿಕೆಗಳ ಸಮಾರೋಪ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕ್ಯಾನ್ಸರ್ ತಪಾಸಣೆ, ರಕ್ತದಾನ ಶಿಬಿರ, ದಂತ ಚಿಕಿತ್ಸಾ ಶಿಬಿರದಂತಹ ಸಾಮಾಜಿಕ ಕಾರ್ಯಕ್ರಮವನ್ನು ನಿರಂತರವಾಗಿ ಆಯೋಜಿಸಿದೆ. ವ್ಯಕ್ತಿತ್ವ ವಿಕಸನ, ಸ್ಪರ್ಧಾತ್ಮಕ ಪರೀಕ್ಷೆ ವಿದ್ಯಾರ್ಥಿಗಳ ವೈಯಕ್ತಿಕ ಬೆಳವಣಿಗೆಗೆ ಪೂರಕ ವಾಗಿದೆ. ಸ್ವಯಂಸೇವಕರು ವಿವಿಧ ವಿಭಾಗಗಳಲ್ಲಿ ವಿಶ್ವವಿದ್ಯಾನಿಲಯ ಹಾಗೂ ರಾಜ್ಯ ಮಟ್ಟಗಳಲ್ಲಿ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಹಾಗೂ ವಿವಿಧ ಶಿಬಿರದಲ್ಲಿ ಭಾಗವಹಿಸಿ ಕಾಲೇಜಿಗೆ ಕೀರ್ತಿ ತಂದಿರುತ್ತಾರೆ. ಕ್ರಿಯಾಶೀಲ ಸ್ವಯಂ ಸೇವಕರು ಹಾಗೂ ಅತ್ಯುತ್ತಮ ಕಾರ್ಯಕ್ರಮದೊಂದಿಗೆ ಕಾಲೇಜಿನ ಎನ್.ಎಸ್.ಎಸ್. ಘಟಕವು ಮಾದರಿ ಘಟಕವಾಗಿದೆ ಎಂದರು.



ಜೆಸಿಬಿಎಂ ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾ ಯೋಜನೆಯುವ ರೆಡ್ ಕ್ರಾಸ್ ಘಟಕ ಹಾಗೂ ರೆಡ್ ರಿಬ್ಬನ್ ಕ್ಲಬ್‌ನಿಂದ ಕ್ಯಾನ್ಸರ್ ತಪಾಸಣೆ, ರಕ್ತದಾನ ಶಿಬಿರ, ದಂತ ಚಿಕಿತ್ಸಾ ಶಿಬಿರ ದಂತ ಹ ಸಾಮಾಜಿಕ ಕಾರ್ಯಕ್ರಮ ನಿರಂತರವಾಗಿ ಆಯೋಜಿಸಿದೆ.

ವಿದ್ಯಾರ್ಥಿ ಕ್ಷೇಮ ಪಾಲನಾ ಅಧಿಕಾರಿ ಮುನೀರ್ ಅಹಮದ್ ಖಾನ್ ಮಾತನಾಡಿ, ಶೈಕ್ಷಣಿಕ, ಸಾಂಸ್ಕೃತಿಕ, ಸಮಾಜಮುಖಿ ಕಾರ್ಯ ಚಟುವಟಿಕೆಗಳಲ್ಲಿ ಸ್ವಯಂಸೇವಕರು ಭಾಗವಹಿಸಿದ್ದಾರೆ.

ರೆಡ್ ರಿಬ್ಬನ್ ವತಿಯಿಂದ ರಕ್ತದಾನದ ಮಹತ್ವದ ಬಗ್ಗೆ ನಡೆದ ಪ್ರಬಂಧ ಹಾಗೂ ಏಡ್ಸ್ ಕುರಿತು ಘೋಷವಾಕ್ಯ ರಚನಾ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ನೀಡಲಾಯಿತು. ಯುವರೆಡ್ ಕ್ರಾಸ್ ಘಟಕದ ಅಧಿಕಾರಿ ಎಂ.ವಿ. ಲೋಕೇಶ್, ಎನ್.ಎಸ್.ಎಸ್. ಅಧಿಕಾರಿ ಎ.ಜಿ. ಪ್ರಶಾಂತ್ ಉಪಸ್ಥಿತರಿದ್ದರು.

Scanned by CamScanner

ಕನ್ನಡಪ್ರಭ
ಸೋಮವಾರ 12.3.2018

ಕಿವಿಮಾತು ಕಾರ್ಪೋರೇಷನ್ ಬ್ಯಾಂಕ್ ವ್ಯವಸ್ಥಾಪಕ ನಿರ್ದೇಶಕ ರವಿಕಿರಣ ಉಡುಪ

ಸಮಯದ ಸದ್ಬಳಕೆ ಮಾಡಿಕೊಳ್ಳಿ

• ಕನ್ನಡಪ್ರಭ ವಾರ್ತೆ ಶೃಂಗೇರಿ

ವಿದ್ಯಾರ್ಥಿ ಜೀವನವು ಜೀವನದ ಮಹತ್ತರ ಘಟ್ಟವಾಗಿದ್ದು ವಿದ್ಯಾರ್ಥಿ ಜೀವನದ ಅತ್ಯಮೂಲ್ಯ ಕ್ಷಣಗಳನ್ನು ಯಾವುದೇ ರೀತಿಯಲ್ಲಿ ವ್ಯರ್ಥಗೊಳಿಸದೇ ಸಮರ್ಪಕವಾಗಿ ಸದ್ಬಳಕೆ ಮಾಡಿಕೊಂಡ ಯಶಸ್ಸಿನ ಗುರಿ ಸಾಧಿಸಲು ಪ್ರಯತ್ನಿಸಬೇಕು ಎಂದು ಶೃಂಗೇರಿ ಕಾರ್ಪೋರೇಷನ್ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ರವಿಕಿರಣ ಉಡುಪ ಸಲಹೆ ನೀಡಿದರು.

ಪಟ್ಟಣದ ಜೆಸಿಬಿಎಂ ಕಾಲೇಜಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಕಾರ್ಪೋರೇಷನ್ ಬ್ಯಾಂಕ್‌ನಿಂದ ಕಾಲೇಜಿಗೆ ಕಲರ್ ಪ್ರಿಂಟರ್ ವಿತರಣೆ ಮಾಡಿ ಮಾತನಾಡಿದರು.

ಆವರು ಇಂದಿನ ಮುಂದುವರೆದ ಸ್ಪರ್ಧಾತ್ಮಕ ಪ್ರಪಂಚದಲ್ಲಿ ಶಿಕ್ಷಣ ಅಗತ್ಯವಾಗಿದೆ. ಸರ್ಕಾರಗಳು ಶೈಕ್ಷಣಿಕ ಕ್ಷೇತ್ರಕ್ಕೆ ಹೆಚ್ಚಿನ ಮಹತ್ವ ನೀಡುತ್ತಿದೆ. ವಿದ್ಯಾರ್ಥಿಗಳು ಸಿಗುವ ಸೌಲಭ್ಯಗಳನ್ನು ಸರಿಯಾಗಿ ಸದ್ಬಳಕೆ ಮಾಡಿಕೊಳ್ಳಬೇಕು. ಕಲಿಕೆಯ ದಿನಗಳಲ್ಲಿ ಸಮಯವನ್ನು ವ್ಯರ್ಥಗೊಳಿಸದೇ ಸತತ ಅಧ್ಯಯನದತ್ತ ಗಮನ ಹರಿಸಿ ಉತ್ತಮ ಫಲಿತಾಂಶಗಳಿಸಿ ಉಜ್ವಲ ಭವಿಷ್ಯ ರೂಪಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ವಲಯ ಮುಖ್ಯಸ್ಥ ಡಿ.ಎ.ಡಯಾಸ್ ಮಾತನಾಡಿದರು. ಕಾಲೇಜು ಆಡಳಿತ ಟ್ರಸ್ಟಿ ಮಂಡಳಿಯ ಅನಂತ ಪದ್ಮನಾಭ ಭಟ್, ಪ್ರಾಚಾರ್ಯ ಸಚ್ಚಿದಾನಂದ ಉಡುಪ ಇದ್ದರು.



ಶೃಂಗೇರಿ ಜೆಸಿಬಿಎಂ ಕಾಲೇಜಿಗೆ ಕಾರ್ಪೋರೇಶನ್ ಬ್ಯಾಂಕ್ ವತಿಯಿಂದ ಕಲರ್ ಪ್ರಿಂಟರ್ ವಿತರಿಸಲಾಯಿತು.

Scanned by CamScanner

ಗುರುವಾರ • ಮಾರ್ಚ್ 8, 2018 ಪ್ರಜಾವಾಣಿ

ಎನ್‌ಎಸ್‌ಎಸ್ ಶಿಬಿರ ಸಮಾರೋಪ ಸಮಾರಂಭ

'ದೇಶದ ಸೇವೆಯಿಂದ ಜೀವನ ಸಾರ್ಥಕ'

ಪ್ರಜಾವಾಣಿ ವಾರ್ತೆ



ಶೃಂಗೇರಿ ಜೆ.ಸಿ.ಬಿ.ಎಂ ಕಾಲೇಜಿನಲ್ಲಿ ನಡೆದ ಎನ್‌ಎಸ್‌ಎಸ್ ಜಿಲ್ಲಾ ಮಟ್ಟದ ಶಿಬಿರದ ಸಮಾರೋಪ ಸಮಾರಂಭದಲ್ಲಿ ಪ್ರೊ.ಎ.ಪಿ.ಸಚ್ಚಿದಾನಂದ ಅವರು ಮಾತನಾಡಿದರು.

ಶೃಂಗೇರಿ: ದೇಶದ ಪ್ರಗತಿಗೆ. ಯಾರು ಸೇವೆ ಮಾಡುತ್ತಾರೆಯೋ ಅವರ ಜೀವನ ಶ್ರೇಷ್ಠ. ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ ಪರರ ಹಿತಕ್ಕಾಗಿ ಕೆಲಸ ಮಾಡುವುದೇ ನಿಜವಾದ ಸೇವೆ ಎಂದು ರಾಷ್ಟ್ರೀಯ ಸಂಸ್ಕೃತ ಸಂಸ್ಥಾನ ರಾಜೀವಗಾಂಧಿ ಪರಿಸರದ ಶೃಂಗೇರಿಯ ಪ್ರಾಚಾರ್ಯ ಪ್ರೊ.ಎ.ಪಿ.ಸಚ್ಚಿದಾನಂದ ಅಭಿಪ್ರಾಯಪಟ್ಟರು.

ಶೃಂಗೇರಿ ಜೆ.ಸಿ.ಬಿ.ಎಂ ಕಾಲೇಜಿನಲ್ಲಿ ಕುವೆಂಪು ವಿಶ್ವವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆಯ ಚಿಕ್ಕಮಗಳೂರು ಜಿಲ್ಲಾ ಮಟ್ಟದ ಶಿಬಿರದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ಗಾಂಧೀಜಿಯವರು ನಿಸ್ವಾರ್ಥ ಸೇವೆಯಲ್ಲಿ ಸದಾ ತೊಡಗಿಸಿಕೊಂಡಿದ್ದು, ಅವರ ಸೇವೆಯನ್ನು ಧ್ಯೇಯವಾಗಿರಿಸಿ ಕೊಂಡಿರುವ ರಾಷ್ಟ್ರಮಟ್ಟದ ಸಂಸ್ಥೆಯನ್ನು ಸ್ಥಾಪಿಸುವ ಅವರ ಕಲ್ಪನೆಯ ಸಾಕಾರವೇ ರಾಷ್ಟ್ರೀಯ ಸೇವಾ ಯೋಜನೆ ಎಂದರು.

'ದೇಶದಲ್ಲಿ ಹಲವು ಸ್ವಯಂಸೇವಕ ಸಂಘಗಳಿದ್ದರೂ ಎನ್.ಎಸ್.ಎಸ್ ಅವುಗಳಲ್ಲಿ ಭಿನ್ನವಾಗಿ ನಿಲ್ಲಲ್ಲಿದ್ದು, ವಿದ್ಯಾರ್ಥಿಗಳಲ್ಲಿ ಸೇವಾ ಮನೋಭಾವವನ್ನು ಬೆಳೆಸಿ ಸಮಾಜದಲ್ಲಿ ಉತ್ತಮ ವ್ಯಕ್ತಿಗಳಾಗಿ ರೂಪುಗೊಳ್ಳಲು ಸಹಕಾರಿಯಾಗಿದೆ' ಎಂದರು.

ಕಾಲೇಜು ವಿಶ್ವಸ್ಥ ಮಂಡಳಿ ಸದಸ್ಯ ಅನಂತ ಪದ್ಮನಾಭ ಭಟ್ ಮಾತನಾಡಿ, 'ಶೃಂಗೇರಿಯ ಪರಿಸರದಲ್ಲಿ 5 ದಶಕಗಳ ಹಿಂದೆ ಆರಂಭವಾದ ಈ ಕಾಲೇಜು ಶೈಕ್ಷಣಿಕ, ಸಾಂಸ್ಕೃತಿಕ, ವೈಜ್ಞಾನಿಕ ಕ್ಷೇತ್ರದಲ್ಲಿ ರಾಷ್ಟ್ರಮಟ್ಟದಲ್ಲಿ ತನ್ನದೇ ಆದ ಛಾಪು ಮೂಡಿಸಿದ್ದು, ಕಾಲೇಜಿನ ಎನ್.ಎಸ್.ಎಸ್ ಘಟಕಕ್ಕೆ ರಾಜ್ಯಮಟ್ಟದ 'ಉತ್ತಮ ಘಟಕ ಪ್ರಶಸ್ತಿ' ಹಾಗೂ ಅಧಿಕಾರಿಗಳಿಗೆ 'ಉತ್ತಮ ಎನ್.ಎಸ್.ಎಸ್ ಅಧಿಕಾರಿ' ಪ್ರಶಸ್ತಿ ದೊರೆತಿರುವುದು ಕಾಲೇಜಿಗೆ ಸಂದ ಗೌರವ ಎಂದರು.

ಕಾಲೇಜಿನ ಪ್ರಾಚಾರ್ಯ ಡಾ.ಸ್ವಾಮಿ ಮಾತನಾಡಿ 'ವಿದ್ಯಾರ್ಥಿಗಳ ಪ್ರತಿಭೆಗೆ ಎನ್.ಎಸ್.ಎಸ್ ಉತ್ತಮ ವೇದಿಕೆ ಒದಗಿಸುತ್ತಿದ್ದು, ಪ್ರತಿಯೊಬ್ಬರೂ ಇದರ ಪ್ರಯೋಜನ ಪಡೆದುಕೊಳ್ಳಬೇಕು. ಶಿಬಿರದಲ್ಲಿ ಋಣಾತ್ಮಕ ಅಂಶಗಳನ್ನು ತ್ಯಜಿಸಿ ಧನಾತ್ಮಕ ಅಂಶಗಳನ್ನು ಅನುಸರಿಸಿ' ಎಂದು ಅವರು ಹೇಳಿದರು.

ಸೇವಾ ಯೋಜನೆ ಅಧಿಕಾರಿಗಳಾದ ಎ.ಜಿ.ಪ್ರಶಾಂತ್, ಸಂತೋಷ್ ಬಿ.ಡಿ, ಸಹ ಶಿಬಿರಾಧಿಕಾರಿಗಳು ಇದ್ದರು.

Scanned by CamScanner

ಪ್ರಜಾವಾಣಿ ಭಾನುವಾರ • ಮಾರ್ಚ್ 4, 2018

ಯಶಸ್ವಿ ವ್ಯಕ್ತಿಗಳಾಗಲು ಧನಾತ್ಮಕ ಚಿಂತನೆ ಅಗತ್ಯ

ಪ್ರಜಾವಾಣಿ ವಾರ್ತೆ

ಶೃಂಗೇರಿ: ಜೀವನದಲ್ಲಿ ಯಶಸ್ಸು ಪಡೆಯುವುದು ಪ್ರತಿಯೊಬ್ಬರ ಗುರಿಯಾಗಬೇಕು. ಸಿಟ್ಟು, ಅಹಂಕಾರ ಅಸೂಯೆ ಹಾಗೂ ಟೀಕೆಗಳು ಯಶಸ್ಸಿಗೆ ಅಡ್ಡಿಯಾಗಿದ್ದು, ಇವು ಮನಃಶಾಂತಿಯನ್ನು ಕದಡುತ್ತವೆ ಎಂದು ಜೆಸಿಐ ಇಂಡಿಯಾದ ರಾಷ್ಟ್ರೀಯ ಕಾರ್ಯ ನಿರ್ವಾಹಕ ಉಪಾಧ್ಯಕ್ಷ ನವೀನ್ ಲಾಯ್ಡ್ ಮಿಸ್ಕಿತ್ ಅಭಿಪ್ರಾಯಪಟ್ಟರು.

ಶೃಂಗೇರಿಯ ಜೆಸಿಬಿಎಂ ಕಾಲೇಜಿನಲ್ಲಿ ಜಿಲ್ಲಾ ಮಟ್ಟದ ರಾಷ್ಟ್ರೀಯ ಸೇವಾ ಯೋಜನೆಯ ಶಿಬಿರದಲ್ಲಿ ಮಾನವೀಯ ಸಂಬಂಧ ಕುರಿತ ಗೋಷ್ಠಿಯಲ್ಲಿ ಅವರು ಮಾತನಾಡಿ, 'ಶಾಂತಿ, ತಾಳ್ಮೆ ಸಹಕಾರ ಮನೋಭಾವ ಹಾಗೂ ಧನಾತ್ಮಕ ಚಿಂತನೆಗಳನ್ನು ಬೆಳೆಸಿಕೊಳ್ಳುವುದರಿಂದ ಸಾಧನೆ ಸಾಧ್ಯ. ನಾವೆಲ್ಲ ಒಂದೇ ಎಂಬ ಭಾವನೆ, ಸ್ನೇಹಿತರ ಉತ್ತಮ ಕಾರ್ಯಗಳಿಗೆ ಬೆಂಬಲ ನೀಡುವುದರಿಂದ ಉತ್ತಮ ನಾಯಕರಾಗಿ ಬೆಳೆಯಬಹುದು' ಎಂದರು.



ಶೃಂಗೇರಿ ಜೆ.ಸಿ.ಬಿ.ಎಂ ಕಾಲೇಜಿನಲ್ಲಿ ಜಿಲ್ಲಾ ಮಟ್ಟದ ರಾಷ್ಟೀಯ ಸೇವಾ ಯೋಜನೆಯ ಶಿಬಿರದಲ್ಲಿ ಮಾನವೀಯ ಸಂಬಂಧ ಕುರಿತ ಗೋಷ್ಠಿಯಲ್ಲಿ ನವೀನ್ ಲಾಯ್ಡ್ ಮಿಸ್ಕಿತ್ ಮಾತನಾಡಿದರು.

ಜೆ.ಸಿ.ಐ ಇಂಡಿಯಾದ ರಾಷ್ಟ್ರೀಯ ತರಬೇತುದಾರ ವಿಜಯ್‌ಕುಮಾರ್ ಎನ್.ಕೆ. ಸಂಪನ್ಮೂಲ ವ್ಯಕ್ತಿಯಾಗಿ ಮಾತನಾಡಿ, ಮಾನವೀಯ ಸಂಬಂಧಗಳಲ್ಲಿ ಕೌಟುಂಬಿಕ, ವ್ಯಾವಹಾರಿಕ ಹಾಗೂ ಸಾಮಾಜಿಕ ಸಂಬಂಧಗಳು ಮುಖ್ಯ. ಮನೆಯಲ್ಲಿ ಉತ್ತಮ ಸಂಬಂಧವನ್ನು ರೂಢಿಸಿಕೊಂಡಾಗ ಸಮಾಜಕ್ಕೆ ಸ್ಪಂದಿಸುವಂತಹ ಗುಣ ಮೂಡುತ್ತದೆ' ಎಂದರು.

ಎನ್.ಎಸ್.ಎಸ್. ರಾಷ್ಟ್ರಪ್ರಶಸ್ತಿ ಪುರಸ್ಕೃತ ಡಾ.ಕುಂದನ್ ಬಸವರಾಜ್ ಅಧ್ಯಕ್ಷತೆ ವಹಿಸಿದ್ದರು. ಜೆಸಿಐ ಶೃಂಗೇರಿಯ ಅಧ್ಯಕ್ಷ ಕೆ.ಟಿ. ಮಂಜುನಾಥ್, ರಾಷ್ಟ್ರೀಯ ಸೇವಾ ಯೋಜನೆಯ ಅಧಿಕಾರಿಗಳಾದ ಎ.ಜಿ. ಪ್ರಶಾಂತ್ ಇದ್ದರು.

Scanned by CamScanner

ವಿಜಯ ಕರ್ನಾಟಕ VK ಶುಕ್ರವಾರ, 2 ಮಾರ್ಚ್ 2018, ಶಿವಮೊಗ್ಗ

ಮುಂಗಡಪತ್ರದ ಮಾಹಿತಿ ಎಲ್ಲರಿಗೂ ಅಗತ್ಯ



ಶೃಂಗೇರಿ ಜಿಬಿಎಂ ಕಾಲೇಜಿನಲ್ಲಿ ಕುವೆಂಪು ವಿವಿಯ ಜಿಲ್ಲಾ ಮಟ್ಟದ ರಾಷ್ಟ್ರೀಯ ಯೋಜನಾ ಶಿಬಿರದಲ್ಲಿ ಮುಂಗಡ ಪತ್ರದ ಬಗ್ಗೆ ಎಂ.ವಿ. ವಿದ್ಯಾಧರ ಮಾತನಾಡಿದರು.

■ **ವಿಕ ಸುದ್ದಿಲೋಕ** ಶೃಂಗೇರಿ

ವರ್ಷದ ಆದಾಯ, ವೆಚ್ಚಗಳ ಮುನ್ನೋಟ ವಾದ ಮುಂಗಡ ಪತ್ರವು ಅಡಳಿತ ದೃಷ್ಟಿಯಿಂದ ಅತ್ಯಗತ್ಯವಾಗಿದೆ. ಇದರ ಬಗೆಗಿನ ಅರಿವು ಪ್ರತಿಯೊಬ್ಬರಲ್ಲೂ ಮೂಡಬೇಕು ಎಂದು ಅರ್ಥಶಾಸ್ತ್ರ ಪ್ರಾಧ್ಯಾಪಕ ಎಂ.ವಿ.ವಿದ್ಯಾಧರ ಹೇಳಿದರು.

.ಇಲ್ಲಿನ ಜಿಬಿಎಂ ಕಾಲೇಜಿನಲ್ಲಿ ಇತ್ತೀಚೆಗೆ ಏರ್ಪಡಿಸಲಾಗಿದ್ದ ಕುವೆಂಪು ವಿವಿ ಜಿಲ್ಲಾ ಮಟ್ಟದ ರಾಷ್ಟ್ರೀಯ ಯೋಜನಾ ಶಿಬಿರದಲ್ಲಿ ಮುಂಗಡ ಪತ್ರದ ಬಗ್ಗೆ ಮಾತನಾಡಿದರು.

ಹಣಕಾಸಿನ ಪರಿಸ್ಥಿತಿ ಹೇಗೇ ಇದ್ದರೂ ಪ್ರತಿಯೊಬ್ಬರೂ ದೇಶದ ಆರ್ಥಿಕತೆಯ ಬಗ್ಗೆ ತಿಳಿಯಲು ಅರ್ಹರು. ಮುಂಗಡಪತ್ರದ ಬಗ್ಗೆ ಆರ್ಥಿಕ ತಜ್ಞರು ಮಾತ್ರ ಗಮನ ಹರಿಸಬೇಕು ಎಂಬುದು ತಪ್ಪು ಅಭಿಪ್ರಾಯವಾಗಿದೆ. ದೇಶದ ಹಿತದೃಷ್ಟಿಯಿಂದ ಮುಂಗಡಪತ್ರದ ಬಗ್ಗೆ ಪ್ರತಿಯೊಬ್ಬರೂ ತಿಳಿದಿರಬೇಕು ಎಂದರು.

ಸಸ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕ ರಾಘವೇಂದ್ರ ವಿದ್ಯುನ್ಮಾನ ನಗದು ಪಾವಶಿ ಬಗ್ಗೆ ಮಾತನಾಡಿ, ವಿದ್ಯುನ್ಮಾನ ನಗದು ಪಾವತಿ ವಿಧಾನವು ಅತ್ಯಂತ ಸುಲಭ ಹಾಗೂ ಸೊಕ್ಕವಾಗಿದೆ. ಕೆಲವರು ತೆರಿಗೆ ವಂಚನೆಗಾಗಿ ನಗದು ವ್ಯವಹಾರವನ್ನು ನಡೆಸುತ್ತಾರೆ. ನಗದು ರೂಪದ ಹಣದ ನಿರ್ವಹಣೆ, ತಯಾರಿಕೆ ಹಾಗೂ ಸುರಕ್ಷತೆಗಳು ಕಷ್ಟಕರವಾಗಿವೆ. ಯುವಜನತೆ ವಿದ್ಯುನ್ಮಾನ ಪಾವತಿಯನ್ನು ಬಳಸುವ ಮೂಲಕ ಪ್ರೋತ್ಸಾಹ ನೀಡುವುದು ಅಗತ್ಯ ಎಂದರು.

ಲಯನ್ಸ್ ಕ್ಲಬ್ ಅಧ್ಯಕ್ಷ ದಿನೇಶ್ ಹೆಗ್ಡೆ ಅಧ್ಯಕ್ಷತೆ ವಹಿಸಿದ್ದರು. ಹಳೆ ವಿದ್ಯಾರ್ಥಿಗಳ ಸಂಘದ ಟಿ.ಟಿ.ಕಳಸಪ್ಪ, ಎ ಅಧಿಕಾರಿಗಳಾದ ಎ.ಬಿ.ಪ್ರಶಾ ಬಿ.ಡಿ.ಸಂತೋಷ್, ಪಿ.ಶಂ ಇದ್ದರು.

Scanned by CamScanner

ಕನ್ನಡಪ್ರಭ
ಸೋಮವಾರ 26.2.2018

ಕಲೆಗಳಿಂದ ನೈತಿಕ ಮೌಲ್ಯಗಳ ಪರಿಚಯ

ಯುವ ಮಲೆನಾಡು ಕಾರ್ಯಕ್ರಮ ಉದ್ಘಾಟಿಸಿ ಕಲಾವಿದ ರಮೇಶ್ ಬೇಗಾರ್ ಅಭಿಮತ

• **ಕನ್ನಡಪ್ರಭ ವಾರ್ತೆ** ಶೃಂಗೇರಿ

ಭಾರತೀಯ ನೆಲದಲ್ಲಿ ಹುಟ್ಟಿದ ಕಲೆಗಳು ಮನುಷ್ಯ ಜೀವನಕ್ಕೆ, ಆದರಲ್ಲೂ ಮುಖ್ಯವಾಗಿ ಯುವಜನತೆಗೆ ನೈತಿಕ ಮೌಲ್ಯದ ಪರಿಚಯವನ್ನು ಮಾಡಿಕೊಡುವಲ್ಲಿ ಪ್ರಧಾನ ಪಾತ್ರ ವಹಿಸುತ್ತದೆ ಎಂದು ಕಲಾವಿದ ರಮೇಶ್ ಬೇಗಾರ್ ಹೇಳಿದರು.

ಪಟ್ಟಣದ ಶ್ರೀ ಚೆಸಿಬಿಎಂ ಕಾಲೇಜಿನಲ್ಲಿ ಏರ್ಪಡಿಸಿದ್ದ ಯುವ ಮಲೆನಾಡು ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇಂದು ಶರವೇಗದಲ್ಲಿ ಬೆಳೆಯುತ್ತಿರುವ ಸಾಮಾಜಿಕ ಜಾಲತಾಣಗಳು ಅನುಕೂಲದ ಜೊತೆಗೆ ವ್ಯತಿರಿಕ್ತ ಪರಿಣಾಮವನ್ನೂ ಬೀರುತ್ತಿದ್ದು, ಇವುಗಳ ನಡುವಿನ ಅಂತರವನ್ನು ಮೀರಲು ಸಾಂಸ್ಕೃತಿಕ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದು ಯುವ ವಿದ್ಯಾರ್ಥಿಗಳಿಗೆ ಹೇಳಿದರು.

ಹಳ್ಳಿಗಾಡಿನ ಜಾನಪದ ಸಿರಿ ಸಂಪತ್ತು ಜಾಗತೀಕರಣದ ನಾಗಲೋಟದಲ್ಲಿ ನೇಪಥ್ಯಕ್ಕೆ ಸರಿಯುತ್ತಿದೆ. ಇಂದು ಸೆಲೆಬ್ರಿಟಿ ಎಂಬ ಅರ್ಥದ ವ್ಯಾಖ್ಯಾನಗಳು ಬದಲಾಗಿವೆ. ನಿಜಪಾದ ಅರ್ಥದಲ್ಲಿ ಪ್ರತಿಭಾವಂತರಾದ ಹಳ್ಳಿಯ ಕಲಾವಿದರಿಗೆ ಸಲ್ಲಬೇಕಾದ ನ್ಯಾಯ ಮತ್ತು ಪ್ರಚಾರಗಳು ದೊರೆಯುತ್ತಿಲ್ಲ. ಯುವಜನತೆ ಹೆಚ್ಚುಹೆಚ್ಚು ಕಲೆಯಲ್ಲಿ ತೊಡಗಿಸಿಕೊಳ್ಳುವುದರಿಂದ ಸ್ಥಳೀಯವಾದ ಸಾಂಸ್ಕೃತಿಕ ವಾತಾವರಣವನ್ನು ಹೆಚ್ಚು ಬಲಿಷ್ಠವಾಗಿ ಕಟ್ಟಬಹುದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಎಂ.ಸ್ವಾಮಿ, ಪ್ರಶಾಂತ್, ಸಂತೋಷ್ ಮತ್ತಿತರರು ಇದ್ದರು.

ಮನರಂಜಿಸಿದ ಮೇಳ: ಸಮಾರಂಭದ ನಂತರ



ಶೃಂಗೇರಿ ಚೆಸಿಬಿಎಂ ಕಾಲೇಜಿನಲ್ಲಿ ಏರ್ಪಡಿಸಿದ್ದ ಯುವ ಮಲೆನಾಡು ಕಾರ್ಯಕ್ರಮದಲ್ಲಿ ಗಮನ ಸೆಳೆದ ಮರಗಾಲು ನೃತ್ಯ.

■ ದೀಪ್ತಿ ಮತ್ತು ಸಂಗಡಿಗರು ಪ್ರಸ್ತುತ ಪಡಿಸಿದ ಮರಗಾಲು ನೃತ್ಯ ಕಲೆ ಪ್ರಸ್ತುತಪಡಿಸಿದ ವಿದ್ಯಾರ್ಥಿನಿಯರು

ವಿವಿಧ ಯುವ ತಂಡಗಳು ಸಾಂಸ್ಕೃತಿಕ ಕಲೆಗಳನ್ನು ಉತ್ಸಾಹದಿಂದ ಪ್ರಸ್ತುತಪಡಿಸಿದವು. ಕರ್ನಾಟಕದ ವೈವಿಧ್ಯಮಯ ಕಲೆಗಳಿಗೆ ವೇದಿಕೆ ಸಾಕ್ಷಿ ಒದಗಿಸಿತು. ಪ್ರಣೀತಾ ಗೌಡ ಪ್ರಸ್ತುತಪಡಿಸಿದ ಈಶ್ವರನ ಕುರಿತಾದ ಭರತನಾಟ್ಯದೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಪ್ರತಾಪ್ ಅವರು ಸಿ. ಅಶ್ವತ್ಥ್ ಅವರ ಜನಪ್ರಿಯ ಗೀತೆ 'ಕಾಣದಾ ಕಡಲಿಗೆ' ಹಾಡಿದಾಗ ವಿದ್ಯಾರ್ಥಿಗಳು ಚಪ್ಪಾಳೆ ತಾಳ ಹಾಕುತ್ತ ಪ್ರೋತ್ಸಾಹಿಸಿದರು. ಜಾನಪದ ಗೀತೆ ಹಳ್ಳಿಯ ಸೊಗಡನ್ನು ಹೊಂದಿತ್ತು. ಬಿಳಿಗಿರಿ ರಂಗನ ಬೆಟ್ಟದ ಮೂಲ ಧಾಟಿಯ ಜಾನಪದ ಗೀತೆಯನ್ನು ಮಂಜುನಾಥ್ ಮತ್ತು ಸಂಗಡಿಗರು ಹಾಡಿದಾಗ ವಿದ್ಯಾರ್ಥಿ ಪ್ರೇಕ್ಷಕರು ಹರ್ಷಗೊಂಡರು.

ಇಡೀ ಕಾರ್ಯಕ್ರಮಕ್ಕೆ ಕಲಶವಿಟ್ಟದ್ದು ದೀಪ್ತಿ ಮತ್ತು ಸಂಗಡಿಗರು ಪ್ರಸ್ತುತ ಪಡಿಸಿದ ಮರಗಾಲು ನೃತ್ಯ. ಅತ್ಯಂತ ಕಷ್ಟಕರವಾದ ಈ ಜಾನಪದ ಕಲೆಯನ್ನು ವಿದ್ಯಾರ್ಥಿನಿಯರು ಪ್ರಸ್ತುತಪಡಿಸಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದರು. ಸುಮಾರು 16 ಕಲಾಪ್ರಕಾರಗಳು ಸೇರಿದ್ದ ವಿದ್ಯಾರ್ಥಿ ಸಮೂಹವನ್ನು ಅದ್ಭುತವಾಗಿ ರಂಜಿಸಿತು.

Scanned by CamScanner

ವಿಜಯ ಕರ್ನಾಟಕ VK

ಭಾನುವಾರ, 25 ಫೆಬ್ರವರಿ 2018, ಶಿವಮೊಗ್ಗ

ಎನ್ನೆಸ್ಸೆಸ್‌ನಿಂದ ಸೇವಾ ಮನೋಭಾವ



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ನಡೆದ ಎನ್‌ಎಸ್‌ಎಸ್ ಶಿಬಿರದಲ್ಲಿ ಡಾ.ಶಾಂತಾರಾಂ ಮಾತನಾಡಿದರು.

ಶೃಂಗೇರಿ: ವ್ಯಕ್ತಿಯೊಬ್ಬ ಸ್ವಯಂ ನಿರ್ಧಾರದಿಂದ ಸಮಾಜಕ್ಕಾಗಿ ಕಾರ್ಯವೆಸಗುವ ಕ್ರಿಯೆ ಸೇವೆಯಾಗಿದ್ದು ಇದನ್ನು ಬಾಲ್ಯದಿಂದಲೇ ಬೆಳೆಸಿಕೊಳ್ಳಬೇಕು. ಎನ್‌ಎಸ್‌ಎಸ್ ಸೇವಾ ಮನೋಭಾವ ಬೆಳೆಸುವ ಅತ್ಯುತ್ತಮ ವೇದಿಕೆ ಎಂದು ಮಣಿಪಾಲದ ಅಕಾಡೆಮಿ ಆಫ್ ಜನರಲ್ ಎಜುಕೇಶನ್‌ನ ಆಡಳಿತಾಧಿಕಾರಿ ಡಾ.ಎಚ್.ಶಾಂತಾರಾಮ್ ತಿಳಿಸಿದರು.

ಜೆಸಿಬಿಎಂ ಕಾಲೇಜಿನಲ್ಲಿ ನಡೆದ ಎನ್ನೆಸ್ಸೆಸ್ ಜಿಲ್ಲಾ ಮಟ್ಟದ ಶಿಬಿರ ಉದ್ಘಾಟಿಸಿ, ಕಾಲೇಜಿನಲ್ಲಿ ಅಸಂಖ್ಯಾತ ವಿದ್ಯಾರ್ಥಿಗಳು ಇದ್ದರೂ ಕೇವಲ ನಿಮಗೆ ಮಾತ್ರ ಈ ಶಿಬಿರದಲ್ಲಿ ಭಾಗವಹಿಸುವ ಅವಕಾಶ ಸಿಕ್ಕಿರುವುದರಿಂದ ನೀವು ಇತರರಿಗಿಂತ ಒಂದು ಮಟ್ಟಿಲು ಮೇಲೆ ಇದ್ದೀರಿ ಎಂದರು.

ಒಂದು ಪ್ರದೇಶದ ಸಮಸ್ಯೆಯನ್ನು ಅರಿತು ಅದನ್ನು ಪರಿಹರಿಸಲು ಮುಂದಾಗುವುದು ಸೇವೆ ಆಗುತ್ತದೆ. ಮಾಡಿದ ಸೇವೆಗಾಗಿ ನಾವು ಬೀಗಬಾರದು. ಇದಕ್ಕಾಗಿ ನಮಗೆ ಅವಕಾಶ ಮಾಡಿಕೊಟ್ಟವರು ಮಾತ್ರ ಮಾತನಾಡಬಹುದು. ಸೇವಾರ್ಥಿ ಜಾಗೃತನಾಗಿದ್ದಲ್ಲಿ ಆ ಸೇವೆಗೆ ಒಳ್ಳೆಯ ಅರ್ಥ ಬಂದು ಸಮಾಜದ ಮನ್ನಣೆ ಸಹ ದೊರಕುತ್ತದೆ ಎಂದು ತಿಳಿಸಿದರು.

ಡಾ.ಗಿರಿಧರ್, ಜಿಪಂ ಸದಸ್ಯೆ ಶಿಲ್ಪಾರವಿ, ಮಠದ ಅಧಿಕಾರಿ ಶ್ರೀಪಾದರಾವ್, ಡಾ.ಎಂ.ಸ್ವಾಮಿ, ಪ್ರಶಾಂತ್ ಇದ್ದರು. ದೇವದಾಸ್ ಸ್ವಾಗತಿಸಿದರು

Scanned by CamScanner

ಶುಕ್ರವಾರ • ಫೆಬ್ರವರಿ 23, 2018 ಪ್ರಜಾವಾಣಿ

ರಾಷ್ಟ್ರೀಯ ಸೇವಾ ಯೋಜನೆಯ ಜಿಲ್ಲಾ ಮಟ್ಟದ ಶಿಬಿರಕ್ಕೆ ಚಾಲನೆ ನೀಡಿದ ಡಾ.ಶಾಂತಾರಾಮ್

ಯುವಜನರ ಕೈಯಲ್ಲಿ ದೇಶದ ಭವಿಷ್ಯ

ಪ್ರಜಾವಾಣಿ ವಾರ್ತೆ

ಶೃಂಗೇರಿ: ವ್ಯಕ್ತಿಯೊಬ್ಬ ಸ್ವಯಂ ನಿರ್ಧಾರದಿಂದ ಸಮಾಜಕ್ಕಾಗಿ ಕಾರ್ಯ ಮೆಸಗುವ ಕ್ರಿಯೆಯು ಸೇವೆಯಾಗಿದ್ದು, ಇದನ್ನು ಎಳೆಯ ಪ್ರಾಯದಲ್ಲೇ ಬೆಳೆಸಿಕೊಳ್ಳಬೇಕು. ರಾಷ್ಟ್ರೀಯ ಸೇವಾ ಯೋಜನೆಯು ಈ ಮನೋಭಾವವನ್ನು ಬೆಳೆಸುವ ಅತ್ಯುತ್ತಮ ವೇದಿಕೆಯಾಗಿದ ಎಂದು ಮಣಿಪಾಲದ ಅಕಾಡೆಮಿ ಆಫ್ ಜನರಲ್ ಎಜುಕೇಶನ್‌ನ ಆಡಳಿತಾಧಿಕಾರಿ ಡಾ.ಎಚ್.ಶಾಂತಾರಾಮ್ ತಿಳಿಸಿದರು.

ಶೃಂಗೇರಿಯ ಬಿಜಿಬಿಎಂ ಕಾಲೇಜಿನಲ್ಲಿ ಬುಧವಾರ ಆರಂಭಗೊಂಡ ರಾಷ್ಟ್ರೀಯ ಸೇವಾ ಯೋಜನೆಯ ಜಿಲ್ಲಾ ಮಟ್ಟದ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಕಾಲೇಜಿನಲ್ಲಿ ಆಸಂಖ್ಯಾತ ವಿದ್ಯಾರ್ಥಿಗಳು ಇದ್ದರೂ ಕೇವಲ ನಿಮಗೆ ಮಾತ್ರ ಈ ಶಿಬಿರದಲ್ಲಿ ಭಾಗವಹಿಸುವ ಅವಕಾಶ ಸಿಕ್ಕಿರುವುದರಿಂದ ನೀವು ಇತರರಿಗಿಂತ ಒಂದು ಮೆಟ್ಟಿಲು ಮೇಲೆ ಇದ್ದೀರಿ ಎಂದರ್ಥ' ಎಂದರು.

'ವಿದ್ಯಾರ್ಥಿಗಳು ತಮಗೆ ತಿಳಿದಿರುವ ವಿಷಯದ ಮೇಲೆ ಗಮನ ಇಟ್ಟುಕೊಂಡು ಅದನ್ನು ಕ್ರಿಯಾತ್ಮಕ ರೂಪಕ್ಕಳಿಸುವುದೇ ಸೇವೆ ಆಗಿದೆ. ಒಂದು ಪ್ರದೇಶದ ಸಮಸ್ಯೆಯನ್ನು ಅರಿತು ಅದನ್ನು ಪರಿಹರಿಸಲು ಮುಂದಾಗುವುದು ಸಹ ಸೇವೆ ಆಗುತ್ತದೆ. ಮಾಡಿದ ಸೇವೆಗಾಗಿ ನಾವು ದೀಗಬಾರದು. ಇದಕ್ಕಾಗಿ ನಮಗೆ ಅವಕಾಶ ಮಾಡಿಕೊಟ್ಟವರು ಮಾತ್ರ ಮಾತನಾಡಬಹುದು. ಸೇವಾರ್ಥಿಯು ಜಾಗೃತನಾಗಿದ್ದಲ್ಲಿ ಆ ಸೇವೆಗೆ ಒಳ್ಳೆಯ ಅರ್ಥ ಬರುವು ಸಮಾಜದ ಮನ್ನಣೆಯು



ಶೃಂಗೇರಿಯ ಬಿಜಿಬಿಎಂ ಕಾಲೇಜಿನಲ್ಲಿ ಆರಂಭಗೊಂಡ ರಾಷ್ಟ್ರೀಯ ಸೇವಾ ಯೋಜನೆ ಜಿಲ್ಲಾ ಮಟ್ಟದ ಶಿಬಿರವನ್ನು ಮಣಿಪಾಲದ ಅಕಾಡೆಮಿ ಆಫ್ ಜನರಲ್ ಎಜುಕೇಷನ್‌ನ ಆಡಳಿತಾಧಿಕಾರಿ ಡಾ.ಎಚ್.ಶಾಂತಾರಾಮ್ ಉದ್ಘಾಟಿಸಿ ಮಾತನಾಡಿದರು. .

ಸಹ ದೊರಕುತ್ತದೆ' ಎಂದರು.

ಭಾರತವು ವಿಶ್ವದಲ್ಲೇ ಅತಿ ಹೆಚ್ಚಿನ ಸಂಖ್ಯೆಯ ಯುವಜನರು ಇರುವ ದೇಶವಾಗಿದ್ದು, ಇದನ್ನು ಬಳಸಿಕೊಂಡು ಸಶಕ್ತ ಮತ್ತು ಸದೃಢ ಭಾರತವನ್ನು ನಿರ್ಮಿಸುವಲ್ಲಿ ನೀವುಗಳು ಕಾರಣರಾಗಬೇಕು ಎಂದು ಸ್ವಯಂ ಸೇವಕರನ್ನು ಅವರು ಹುರಿದುಂಬಿಸಿದರು.

ಶಾರದಾ ಮಠದ ಅಧಿಕಾರಿ ಶ್ರೀಪಾದರಾವ್ ಮಾಕನಾಡಿ, 'ಶಿಕ್ಷಣ ಎಂದರೆ ಕೇವಲ ನಾಲ್ಕು ಗೋಡೆಗಳ ಮಧ್ಯೆ ಪಡೆಯುವುದಲ್ಲ. ವಿಪವಾದ ಶಿಕ್ಷಣ ಸಮಾಜ ಹಾಗೂ ಪ್ರಕೃತಿಯಿಂದ ಪಡೆದುಕೊಳ್ಳಬೇಕು. ಸಮಾಜದ ಕಳಕಳಿಯನ್ನು ಬೆಳಸಿಕೊಂಡು ನಾವು ಜೀವಿಸುವ ಪರಿಸರವನ್ನು ಉರ್ಜಿತ ಗೊಳಿಸಿದರೆ, ಮಹಾತ್ಮ ಗಾಂಧಿ ಕಂಡ ಕನಸು ರಾಮ ರಾಜ್ಯವಾಗುತ್ತದೆ. ನಮ್ಮ ದೇಶದಂತಹ ಆತ್ಯುತ್ತಮ ನಾಡು ವಿಶ್ವದಲ್ಲಿ ಎಲ್ಲೂ ಇಲ್ಲ. ದೇಶದಲ್ಲಿರುವ ಯುವ ಶಕ್ತಿ ವಿಶ್ವದ ಯಾವ ದೇಶದಲ್ಲಿ ಇಲ್ಲ. ಭಾರತೀಯ ಸಂಸ್ಕೃತಿಯನ್ನು ಯುವ ಜನತೆ ಎತ್ತಿ ಹಿಡಿದು ದೇಶದ ಗೌರವವನ್ನು ಕಾಪಾಡಬೇಕು' ಎಂದರು.

ಜಾತಿ, ಮತ, ಮೇಲು, ಕೀಳು ಇಲ್ಲದಿರುವ ಈ ಶಿಬಿರದಲ್ಲಿ ಸಹ ಜೀವನ, ಜೀವನ ಕೌಶಲ ದೊರಕುತ್ತದೆ. ಸೇವೆಗಾಗಿ ಒಮ್ಮೆ ವ್ಯಕ್ತಿ ಕನ್ನದೇ ನಿರ್ಧಾರದಿಂದ ಮುಂದೆ ಬಂದು ಸಮಾಜ ಸೇವೆ ಮಾಡುವ ಮನೋಭಾವ ಬೆಳಸಿಕೊಳ್ಳಬೇಕು. ಸೇವೆಯ ನಿಪವಾದ ಅರ್ಥ ಸಮಸ್ಯೆಯನ್ನು ಅರಿತು ಅದಕ್ಕೆ ಪರಿಹಾರ ನೀಡಬೇಕು. ಸೇವೆ ಮಾಡಿದ ನಂತರ ನಾವು ಅಹಂಕಾರ ಪಡದೆ, ಸೇವೆ ನಮ್ಮ ಕರ್ತವ್ಯ ಎಂದು ಭಾವಿಸಬೇಕು ಎಂದರು.

ಕುವೆಂಪು ವಿಶ್ವ ವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆಯ ಸಂಯೋಜನಾಧಿಕಾರಿ ಡಾ.ಗಿರಿಧರ್ ಮಾತನಾಡಿ, 'ವಿದ್ಯಾಕ್ಷೇತ್ರ ರಾಗ ಪದವೀಧರರನ್ನು ನಿರ್ಮಾಣ ಮಾಡುವ ಕಾರ್ಖಾನೆಯಾಗಿದೆ. ಶಿಬಿರದಲ್ಲಿ ವಿದ್ಯಾರ್ಥಿಗಳಲ್ಲಿ ಜೀವನ ಕೌಶಲ, ವ್ಯಕ್ತಿತ್ವ ವಿಕಸನ, ಸಾಮಾಜಿಕ ಕಳಕಳಿ ಹಾಗೂ ಸಮಾಜದ ಸೇವೆಯಲ್ಲಿ ತೊಡಗಿಸಿಕೊಳ್ಳಲು ಸಹಾಯಕವಾಗಿದೆ. ಶಿಬಿರದಲ್ಲಿ ಸಕ್ರಿಯವಾಗಿ ತೊಡಗಿಸಿ ಕೊಳ್ಳುವುದರಿಂದ ನೀವು ಬೆಳದು, ನಿಮ್ಮ ವ್ಯಕ್ತಿತ್ವ ಉಜ್ವಲವಾಗುತ್ತದೆ. ಶಿಬಿರದಲ್ಲಿ ಉತ್ತಮ ಶಿಬಿರಾರ್ಥಿಯಾದಾಗ ನಿಮಗೆ ಇನ್ನೂ ಹೆಚ್ಚಿನ ಅವಕಾಶ ದೊರಕುತ್ತದೆ' ಎಂದರು.

ಇದೇ 27ರ ವರೆಗೆ ನಡೆಯುವ ಈ ಶಿಬಿರದಲ್ಲಿ ಚಿಕ್ಕಮಗಳೂರು ಜಿಲ್ಲೆಯ 22 ಕಾಲೇಜುಗಳ 150 ಕ್ಕೂ ಅಧಿಕ ವಿದ್ಯಾರ್ಥಿಗಳು ಪಾಲ್ಗೊಂಡಿದ್ದಾರೆ. 22ರಿಂದ ಉಪನ್ಯಾಸ, ನಾಯಕತ್ವ ನಿರ್ಮಾಣ ಕಾರ್ಯಾಗಾರ, ಸೇವಾ ಚಟುವಟಿಕೆ, ಸಾಂಸ್ಕೃತಿಕ ಕಾರ್ಯಕ್ರಮ, ರಕ್ತದಾನ, ಆರೋಗ್ಯ ಚಿಕಿತ್ಸಾ ಶಿಬಿರ, ಸ್ವಚ್ಛತಾ ಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ.

ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಕ್ರಮ ಸಂಯೋಜನಾಧಿಕಾರಿ ಡಾ.ಗಿರಿಧರ್, ಜಿಲ್ಲಾ ಪಂಚಾಯಿತಿ ಸದಸ್ಯೆ ವಿಲ್ಮಾರವಿ, ಡಾ.ಎಚ್.ಸಿ.ವೀರಪ್ಪ ಗೌಡ, ಪ್ರಾಂಶುಪಾಲ ಡಾ.ಎಂ.ಸ್ವಾಮಿ, ಎ.ಜಿ.ಪ್ರಕಾಶ್ ಉಪಸ್ಥಿತರಿದ್ದರು

ಮುಖ್ಯಾಂಶಗಳು

- ಶಿಬಿರದಲ್ಲಿ ವಿದ್ಯಾರ್ಥಿಗಳಿಗೆ ಜೀವನ ಕೌಶಲ, ವ್ಯಕ್ತಿತ್ವದ ಅಭ್ಯಾಸ
- ಶಿಬಿರದಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವುದರಿಂದ ಭವಿಷ್ಯ ಉಜ್ವಲ
- 22 ಕಾಲೇಜುಗಳ 150 ಕ್ಕೂ ಅಧಿಕ ವಿದ್ಯಾರ್ಥಿಗಳು ಭಾಗಿ

> ವಿದ್ಯಾರ್ಥಿ ಜೀವನದಲ್ಲಿ ಸಿಕ್ಕಿದ ಅವಕಾಶವನ್ನು ಉಪಯೋಗಿಸಿಕೊಂಡು ವ್ಯಕ್ತಿತ್ವಕ್ಕೆ ಮೆರುಗು ತಂದುಕೊಳ್ಳಬೇಕು ಎಂಬುದೇ ಈ ಶಿಬಿರದ ಹಿಂದಿನ ಉದ್ದೇಶ.
> **ಡಾ.ಎಚ್.ಶಾಂತಾರಾಮ್,**
> ಆಡಳಿತಾಧಿಕಾರಿ ಮಣಿಪಾಲ ಅಕಾಡೆಮಿ ಆಫ್ ಜನರಲ್ ಎಜುಕೇಷನ್

Scanned by CamScanner

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ

ದಿನದ ಚಿತ್ರ



ವಿಜಯವಾಣಿ ಚಿತ್ರ

ಮರಗಾಲು ಜಾನಪದ ನೃತ್ಯ

ಶೃಂಗೇರಿಯ ಜೆಸಿಬಿಎಂ ಕಾಲೇಜಿನಲ್ಲಿ ಏರ್ಪಡಿಸಿದ್ದ ಯುವ ಮಲೆನಾಡು ಕಾರ್ಯಕ್ರಮದಲ್ಲಿ ಕಾಲೇಜು ವಿದ್ಯಾರ್ಥಿಗಳು ಪ್ರಸ್ತುತಪಡಿಸಿದ ಮರಗಾಲು ಜಾನಪದ ನೃತ್ಯ.

Scanned by CamScanner

5
ದಾವಣಗೆರೆ ಉದಯವಾಣಿ
ಬುಧವಾರ, ಫೆಬ್ರವರಿ 21, 2018

ಸಾಧಿಸುವ ಛಲವಿದ್ದರೆ ಗುರಿ ಸುಲಭ

ಶೃಂಗೇರಿ: ಸಾಧಿಸುವ ಛಲ ಇದ್ದರೆ ಜೀವನದಲ್ಲಿ ಮಹತ್ವದ ಗುರಿ ತಲುಪಬಹುದಾಗಿದೆ ಎಂದು ತೀರ್ಥಹಳ್ಳಿ ತುಂಗಾ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ। ಬಿ.ಗಣಪತಿ ಉತ್ತುಂಗ ಹೇಳಿದರು.

ಜೆಸಿಬಿಎಂ ಕಾಲೇಜಿನ ಕಲಾ ಸಂಘದ ಕಲಾಕುಸುರಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವ್ಯಕ್ತಿಯ ವ್ಯಕ್ತಿತ್ವವೇ ಆತನ ಪ್ರಥಮ ಆದ್ಯತೆಯಾಗಿರಬೇಕು. ಸ್ವಾಮಿ ವಿವೇಕಾನಂದರ ಜೀವನ ಆದರ್ಶ ಮೈಗೂಡಿಸಿಕೊಳ್ಳಬೇಕು. ಸಾಮಾನ್ಯರನ್ನು ಕತ್ತಲಲ್ಲಿ ಇಡುವ ಸಂಸ್ಕೃತಿ ಬಿಡಬೇಕಾಗಿದೆ. ಕೀಳರಿಮೆ, ನಕಾರಾತ್ಮಕ ಆಲೋಚನೆಯು ಮನುಷ್ಯನನ್ನು ಮೂಲೆಗುಂಪಾಗಿ ಮಾಡುತ್ತದೆ. ಆತ್ಮವಿಶ್ವಾಸ ಜೀವನದಲ್ಲಿ ಮುಖ್ಯವಾಗಿದ್ದರೆ, ಯಾವ ಕೆಲಸವನ್ನು ಸುಲಭವಾಗಿ ಮಾಡಬಹುದಾಗಿದೆ ಎಂದರು.

ಪ್ರಾಂಶುಪಾಲ ಡಾ। ಎಂ.ಸ್ವಾಮಿ ಅಧ್ಯಕ್ಷತೆವಹಿಸಿದ್ದರು. ಪ್ರಾಧ್ಯಾಪಕರಾದ ದೇವದಾಸ್, ವಿದ್ಯಾಧರ್, ಮುನೀರ್ ಅಹಮದ್‌ಖಾನ್, ಡಾ। ಅನಿತಾ ಹೆಗ್ಗೋಡು, ಕಲಾ ಸಂಘದ ಅಧ್ಯಕ್ಷ ಸೃಜನ್ ಇದ್ದರು.



ಶೃಂಗೇರಿ: ಜೆಸಿಬಿಎಂ ಕಾಲೇಜಿನಲ್ಲಿ ಆಯೋಜಿಸಿದ್ದ ಕಲಾಕುಸುರಿ ಕಾರ್ಯಕ್ರಮವನ್ನು ಡಾ। ಬಿ.ಗಣಪತಿ ಉತ್ತುಂಗ ಉದ್ಘಾಟಿಸಿದರು.

Scanned by CamScanner

ಸೋಮವಾರ, 29 ಜನವರಿ 2018, ಶಿವಮೊಗ್ಗ ವಿಜಯ ಕರ್ನಾಟಕ VK

ಪ್ರಥಮ ಚಿಕಿತ್ಸೆ ಬಗ್ಗೆ ಅರಿವು ಅಗತ್ಯ

■ ವಿಕ ಸುದ್ದಿಲೋಕ ಶೃಂಗೇರಿ

ಪ್ರಥಮ ಚಿಕಿತ್ಸೆಯ ಬಗ್ಗೆ ಮಾಹಿತಿ ಹೊಂದಿದ್ದರೆ ಅವಶ್ಯ ಸಂದರ್ಭದಲ್ಲಿವ್ಯಕ್ತಿಯ ಜೀವ ಉಳಿಸಲು ನೆರವಾಗುತ್ತದೆ ಎಂದು ಸಿಪಿಐ ಪ್ರಮೋದ್ ಕುಮಾರ್ ಹೇಳಿದರು.

ಇಲ್ಲಿನ ಶ್ರೀ ಜೆಸಿಬಿಎಂ ಕಾಲೇಜಿನಲ್ಲಿ ಯುವ ರೆಡ್ ಕ್ರಾಸ್ ಘಟಕ, ರಾಷ್ಟ್ರೀಯ ಸೇವಾ ಯೋಜನೆ ಹಾಗೂ ಆಟೊ ಚಾಲಕರ ಮತ್ತು ವಾಹನ ಚಾಲಕರ ಸಂಘ ಇತ್ತೀಚೆಗೆ ಏರ್ಪಡಿಸಿದ್ದ 'ಪ್ರಥಮ ಚಿಕಿತ್ಸೆ ಮತ್ತು ಸಂಚಾರಿ ನಿಯಮಗಳು' ಕುರಿತ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ತುರ್ತು ಸಂದರ್ಭದಲ್ಲಿ ಚಿಕಿತ್ಸೆ ಬಗ್ಗೆ ಎಲ್ಲರೂ ತಿಳಿದಿರಬೇಕು. ಅಪಘಾತ ಸಂದರ್ಭದಲ್ಲಿ ಚಿಕಿತ್ಸೆಯ ಬಗ್ಗೆ ಅರಿವು ಇಲ್ಲದೆ ಅನಾಹುತಗಳು ಸಂಭವಿಸುತ್ತದೆ. ಸಂಚಾರಿ ನಿಯಮ ಸರಿಯಾಗಿ ಪಾಲಿಸದಿರುವುದರಿಂದ ಹೆಚ್ಚಿನ ಅಪಘಾತಗಳಾಗುತ್ತವೆ. ವೇಗದ ಚಾಲನೆ ಸಂದರ್ಭ ಮೊಬೈಲ್ ಬಳಕೆ, ಮದ್ಯಪಾನ ಮಾಡಿ ಚಾಲನೆ ಮಾಡುವುದು ಹೆಚ್ಚಿನ ಅಪಘಾತಕ್ಕೆ ಕಾರಣವಾಗುತ್ತಿದೆ. ಹಾಗಾಗಿ ಪ್ರತಿಯೊಬ್ಬರು ರಸ್ತೆ ನಿಯಮ ತಿಳಿದುಕೊಂಡು ವಾಹನ ಚಲಾಯಿಸಬೇಕು ಎಂದರು.

ಶಿವಮೊಗ್ಗ ರೆಡ್‌ಕ್ರಾಸ್ ಸಂಸ್ಥೆಯ ಡಾ.ವಿ.ಎಲ್. ಎಸ್.ಕುಮಾರ್ ಮಾತನಾಡಿ, ದೇಶದಲ್ಲಿ ಅತಿ ಹೆಚ್ಚು ಜನರು ರಸ್ತೆ ಅಪಘಾತದಲ್ಲಿ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ರಸ್ತೆ ಸಂಚಾರಿ ನಿಯಮದ ಸರಿಯದ ತಿಳಿವಳಿಕೆ ಇಲ್ಲದಿರುವುದು, ನಿಯಮ ಪಾಲನೆಯಲ್ಲಿ ನಿರ್ಲಕ್ಷ್ಯ ವಹಿಸುತ್ತಿರುವುದರಿಂದ ಅಪಘಾತ ಹೆಚ್ಚುತ್ತಿದೆ. ಸಂಚಾರಿ ನಿಯಮದ ಬಗ್ಗೆ ಅಭಿಯಾನ ಹಮ್ಮಿಕೊಂಡಲ್ಲಿ ರಸ್ತೆ ಅಪಘಾತ ಕಡಿಮೆ ಮಾಡಲು ಸಾಧ್ಯ ಎಂದರು.



ಶೃಂಗೇರಿ ಶ್ರೀ ಜೆಸಿಬಿಎಂ ಕಾಲೇಜಿನಲ್ಲಿ 'ಪ್ರಥಮ ಚಿಕಿತ್ಸೆ ಮತ್ತು ಸಂಚಾರಿ ನಿಯಮಗಳು' ಕುರಿತ ಕಾರ್ಯಾಗಾರವನ್ನು ಸಿಪಿಐ ಪ್ರಮೋದ್‌ಕುಮಾರ್ ಉದ್ಘಾಟಿಸಿದರು.

ಪ್ರಾಂಶುಪಾಲ ಡಾ.ಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಆಟೊ ಚಾಲಕರ ಸಂಘದ ಅಧ್ಯಕ್ಷ ಅಜೀಜ್ ರೆಹಮಾನ್, ಶಾರದಾ ಧನ್ವಂತರಿ ಆಸ್ಪತ್ರೆ ವೈದ್ಯಾಧಿಕಾರಿ ಡಾ. ಲಕ್ಷ್ಮೀನಾರಾಯಣ, ಪಿಡಬ್ಲ್ಯೂಡಿ ಮಂಡಳಿ ಸದಸ್ಯ ಅನಂತಪದ್ಮನಾಭ ಭಟ್ ಉಪಸ್ಥಿತರಿದ್ದರು.

ಪ್ರಶಾಂತ್ ಸ್ವಾಗತಿಸಿ, ಸಂತೋಷ್ ನಿರೂಪಿಸಿ, ಯುವ ರೆಡ್‌ಕ್ರಾಸ್ ಘಟಕದ ಅಧಿಕಾರಿ ಲೋಕೇಶ್ ವಂದಿಸಿದರು. ಸಂಪನ್ಮೂಲ ವ್ಯಕ್ತಿ ಡಾ.ವಿ.ಎಲ್.ಎಸ್. ಕುಮಾರ್ ಪ್ರಥಮ ಚಿಕಿತ್ಸೆ ಹಾಗೂ ಸಂಚಾರಿ ನಿಯಮದ ಕುರಿತು ಪ್ರಾತ್ಯಕ್ಷಿಕೆ ಸಹಿತ ಮಾರ್ಗದರ್ಶನ ನೀಡಿದರು.

Scanned by CamScanner

ಕನ್ನಡಪ್ರಭ
ಶುಕ್ರವಾರ 26.1.2018



ಶೃಂಗೇರಿ ಜೆಸಿಬಿಎಂ ಕಾಲೇಜಿನ ಡಾ. ಟಿ.ಎಂ.ಎ. ಪೈ ಸಭಾಂಗಣದಲ್ಲಿ ವಿಜ್ಞಾನ ಮೇಳ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ದೇಶ ಪ್ರಗತಿಗೆ ವಿಜ್ಞಾನ, ತಂತ್ರಜ್ಞಾನ ಅನಿವಾರ್ಯ

• ಕನ್ನಡಪ್ರಭ ವಾರ್ತೆ ಶೃಂಗೇರಿ

ಪ್ರತಿಯೊಂದು ದೇಶದ ಅಭಿವೃದ್ಧಿಯಲ್ಲಿ ವಿಜ್ಞಾನ, ತಂತ್ರಜ್ಞಾನಗಳು ಮಹತ್ತರ ಪಾತ್ರ ವಹಿಸುತ್ತಿವೆ. ಇವುಗಳು ದೇಶದ ಅಭಿವೃದ್ಧಿಗೆ ಪೂರಕವಾಗಿವೆ ಎಂದು ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ಡಾ. ಸಿ.ಶಿವಕುಮಾರ್ ಹೇಳಿದರು.

ಪಟ್ಟಣದ ಜೆಸಿಬಿಎಂ ಕಾಲೇಜಿನ ಡಾ. ಟಿ.ಎಂ.ಎ. ಪೈ ಸಭಾಂಗಣದಲ್ಲಿ ನಡೆದ ವಿಜ್ಞಾನ ಮೇಳ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ವಿಜ್ಞಾನ ಮನುಷ್ಯನ ನಿತ್ಯ ಜೀವನದ ಬದುಕಿನಲ್ಲಿ ಹಾಸುಹೊಕ್ಕಾಗಿದೆ. ರಾಷ್ಟ್ರದ ಪ್ರಗತಿಗೆ ವಿಜ್ಞಾನ ಪೂರಕವಾಗಿರಬೇಕು. ವಿಜ್ಞಾನವನ್ನು ಮನುಕುಲದ ಒಳಿತಿಗಾಗಿ ಬಳಸಬೇಕೇ ಹೊರತು, ಮನುಕುಲದ ವಿನಾಶಕ್ಕೆ ಬಳಸಬಾರದು ಎಂದು ತಿಳಿಸಿದರು. ವಿದ್ಯಾರ್ಥಿಗಳು ವಿಜ್ಞಾನದ ಬಗ್ಗೆ ಆಸಕ್ತಿ ಬೆಳೆಸಿಕೊಳ್ಳಬೇಕು. ಭಾರತ ವಿಜ್ಞಾನ ಕ್ಷೇತ್ರದಲ್ಲಿ ಮುನ್ನಡೆ ಸಾಧಿಸುತ್ತಿದ್ದು, ಸಾಧನೆಯ ಹಾದಿಯಲ್ಲಿದೆ. ವಿಜ್ಞಾನ ಕ್ಷೇತ್ರದಲ್ಲಿ ಜಗತ್ತಿಗೆ ಕೊಡುಗೆ ನೀಡಿದೆ. ವಿಜ್ಞಾನಿಗಳು ನಮಗೆ ಆದರ್ಶಪ್ರಾಯರಾಗಬೇಕು ಎಂದರು. ಪ್ರಾಚಾರ್ಯ ಎಂ.ಸ್ವಾಮಿ ಅಧ್ಯಕ್ಷತೆವಹಿಸಿದ್ದರು. ಚೆನ್ನೈನ ವಿಜ್ಞಾನಸಂಸ್ಥೆಯ ಡಾ.ರಮೇಶ್, ಪ್ರೊ.ಮುನೀರ್ ಅಹ್ಮದ್, ದೇವದಾಸ್ ಉಪಸ್ಥಿತರಿದ್ದರು. ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ಧೆ, ರಸಪ್ರಶ್ನೆ ಹಾಗೂ ವಿಜ್ಞಾನ ಮಾದರಿ ಪ್ರದರ್ಶನ ಆಯೋಜಿಸಲಾಗಿತ್ತು. ವಿಜೇತರಿಗೆ ಬಹುಮಾನ ವಿತರಿಸಲಾಯಿತು. ರಕ್ಷಿತ ಸ್ವಾಗತಿಸಿ, ನಿರೂಪಿಸಿದರು. ಮಹೇಶ್ ವಂದಿಸಿದರು.

Scanned by CamScanner

24ಕ್ಕೆ ಜಿಲ್ಲಾ ವಿಜ್ಞಾನ ಮೇಳ

ಶೃಂಗೇರಿ: ಕರ್ನಾಟಕ ಸರಕಾರ, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಬೆಂಗಳೂರು ಮತ್ತು ಶ್ರೀ ಜೆಸಿಬಿಎಂ ಕಾಲೇಜು ಮೇಳ ವತಿಯಿಂದ ಶ್ರೀ ಜೆಸಿಬಿಎಂ ಕಾಲೇಜಿನಲ್ಲಿ ಜ.24ರಂದು ವಿಜ್ಞಾನ ಪದವಿ ವಿದ್ಯಾರ್ಥಿಗಳಿಗೆ ಜಿಲ್ಲಾ ವಿಜ್ಞಾನ ಮೇಳ ಕಾರ್ಯಕ್ರಮ ಏರ್ಪಡಿಸಲಾಗಿದೆ.

ವಿಜ್ಞಾನ ಮಾದರಿ ಪ್ರದರ್ಶನ, ರಸಪ್ರಶ್ನೆ ಹಾಗೂ ನ್ಯಾನೋ ತಂತ್ರಜ್ಞಾನದ ಇಂದಿನ ಅವಿಷ್ಕಾರ ಮತ್ತು ಉಪಯೋಗ ಕುರಿತು ವಿಜ್ಞಾನ ವಿಶೇಷ ಉಪನ್ಯಾಸ ಆಯೋಜಿಸಲಾಗಿದೆ ಎಂದು ಪ್ರಾಂಶುಪಾಲ ಡಾ. ಎಂ.ಸ್ವಾಮಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Scanned by CamScanner

ಕಿವಿಮಾತು ಜೆಸಿಬಿಎಂ ಕಾಲೇಜಿನಲ್ಲಿ ಸ್ವಾಮಿ ವಿವೇಕಾನಂದ ಜಯಂತಿ ಕಾರ್ಯಕ್ರಮ ಉದ್ಘಾಟನೆ

ಜ್ಞಾನ, ನೈಪುಣ್ಯತೆಗಳಿಂದ ಜೀವನದಲ್ಲಿ ಯಶಸ್ಸು: ಶ್ರೀಕಂಠಭಟ್

ಶೃಂಗೇರಿ: ಪ್ರತಿಯೊಂದು ಯಶಸ್ಸು ಸಾಧನೆಯ ಹಿಂದೆ ಗುರಿ, ಛಲ ಇರುತ್ತದೆ. ಜ್ಞಾನ ಹಾಗೂ ನೈಪುಣ್ಯತೆಗಳಿಂದ ಜೀವನದಲ್ಲಿ ಯಶಸ್ಸು ಸಾಧ್ಯ ಎಂಬ ವಿದ್ವಾನ್ ಶ್ರೀಕಂಠ ಭಟ್ ಹೇಳಿದರು. ಪಟ್ಟಣದ ಜೆಸಿಬಿಎಂ ಕಾಲೇಜಿನಲ್ಲಿ ಗುರುವಾರ ಸ್ವಾಮಿ ವಿವೇಕಾನಂದ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಯಾವುದೇ ಕ್ಷೇತ್ರದಲ್ಲಿ ಅತ್ಯುತ್ತಮ ಸಾಧನೆ ಮಾಡಲು ಆಸಕ್ತಿಯ ಬಗ್ಗೆ ಕುತೂಹಲ ಮೂಡಿಸಿಕೊಳ್ಳಬೇಕು. ಗುರಿ ಮುಟ್ಟುವ ದೃಢಗೊಳಿಸಿಕೊಳ್ಳಬೇಕು ಹಾಗೂ ಅದನ್ನೆಲ್ಲ ನೈಪುಣ್ಯತೆ ಗಳಿಸಿಕೊಳ್ಳಬೇಕು. ಜಗತ್ತಿನ ಎಲ್ಲಾ ರಂಗದಲ್ಲಿ ಭಾರತೀಯರು ಮಾರ್ಗದರ್ಶಕರಾಗಿ ಭಾರತವನ್ನು ವಿಶ್ವ ಗುರುವಾಗಿಸಬೇಕಾಗಿದೆ. ಸ್ವಾಮಿ ವಿವೇಕಾನಂದರ ಮುಖ ದಾಸೆಯಾಗಿತ್ತು. ವಿವೇಕಾನಂದರ ಸಂದೇಶ ಮನದಲ್ಲಿಟ್ಟುಕೊಂಡು ಭಾರತದ ಜ್ಞಾನ ಗಂಗೆ ಯನ್ನು ವಿಶ್ವಾದ್ಯಂತ ಹರಿಸಬೇಕು ಎಂದು ತಿಳಿಸಿದರು.



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಸ್ವಾಮಿ ವಿವೇಕಾನಂದ ಜಯಂತಿ ಕಾರ್ಯಕ್ರಮವನ್ನು ವಿದ್ವಾನ್ ಶ್ರೀ ಕಂಠಭಟ್ ಉದ್ಘಾಟಿಸಿ ಮಾತನಾಡಿದರು.

ಭಾರತ ಜಗತ್ತಿನಲ್ಲಿ ಜ್ಞಾನದಿಂದ, ಮಾನವ ಸಂಪನ್ಮೂಲ ಹಾಗೂ ಶ್ರೀಮಂತ ನೈಸರ್ಗಿಕ ಸಂಪನ್ಮೂಲಗಳಿಂದ ಅತ್ಯುತ್ತಮ ದೇಶ ಎನಿಸಿದೆ. ಆದರಿಂದ ಭಾರತೀಯರೆಂಬ ಗರ್ವ ಪ್ರತಿಯೊಬ್ಬರಲ್ಲಿಯೂ ಮೂಡಬೇಕು. ಭಾರತೀಯರ ಬಗ್ಗೆ ಜಗತ್ತು ಹೆಮ್ಮೆಪಡುವಂತೆ ನೈಪುಣ್ಯತೆಗಳನ್ನು ಸ್ವಾಭಿಮಾನದ ಗರ್ವದೊಂದಿಗೆ ಭಾರತವನ್ನು ಜಗದ್ಗುರು ಆಗಿಸುವುದು ದೇಶದಲ್ಲಿ ಜನಿಸಿದ ಪ್ರತಿಯೊಬ್ಬರ ಜವಾಬ್ದಾರಿ. ವಿವೇಕಾನಂದರ ನುಡಿಗಳು ಸರ್ವಕಾಲಕ್ಕೂ ಅವಶ್ಯವಾಗಿದೆ ಎಂದು ಹೇಳಿದರು.

ಅಧ್ಯಕ್ಷತೆವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಡಾ.ಸ್ವಾಮಿ ಮಾತನಾಡಿ, ವಿವೇಕಾನಂದರು ಭಾರತದ ಆಧ್ಯಾತ್ಮಿಕ ರಾಯಭಾರಿ, ಶ್ರೇಷ್ಠ ಮಾನವತಾವಾದಿ, ಭಾರತದ ಭವಿಷ್ಯವನ್ನು ಜಗತ್ತಿನಮುಂದೆ ಎತ್ತಿ ಹಿಡಿದ ಮಹಾನ್ ವ್ಯಕ್ತಿ ಹಾಗೂ. ಹಿಂದೂ ಧರ್ಮ ಹಾಗೂ ಸಂಭಾಗಳ ಬಗ್ಗೆ ಅಳವಾದ ಜ್ಞಾನ ಹೊಂದಿದ್ದರು. ದೇಶದ ಆಧಿ ವ್ಯವಸ್ಥೆಯ ಬಗ್ಗೆ ಉನ್ನತ ಆಲೋಚನೆ ಹೊಂದಿದ್ದರು. ಇಂದಿನ ಯುವಜನತೆ ಯುವಶಕ್ತಿ ಎಂದು ತಿಳಿಸಿದರು.

ರೋಟರಿ ಕ್ಲಬ್ ಪದಾಧಿಕಾರಿ ಮುಖ್ಯ ಶಿಕ್ಷಕರಾದ ಸುರೇಶ್ ಕುಮಾರ್, ರೇಖಾ, ಸ್ವಾಮಿ ವಿವೇಕಾನಂದ ಆಧ್ಯಯನ ಕೇಂದ್ರದ ಮುಖ್ಯ ಸ್ಥಾನದ ವಿದ್ಯಾರ್ಥಿ ರಾಷ್ಟ್ರೀಯ ಸೇವಾಯೋಜನೆಯ ಅಧಿಕಾರಿ ಸುರೇಶ್ ಬಿ.ಡಿ. ಪ್ರವೀಣ್ ಎ.ಜಿ. ರೆಡ್ ಕ್ರಾಸ್ ಅಧ್ಯಕ್ಷ ರೋಹಿತ್ ಇತರರು ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ರಾಷ್ಟ್ರೀಯ ಮಟ್ಟದ ವಿಜ್ಞಾನಗೀತೆಯ ಅಭಿನಯಕ್ಕೆ ಸಮಾ ಪಾಲ್ಗೊಂಡ ಪ್ರಾಥಮಿಕ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ, ಭಾಷಣ, ರಸಪ್ರಶ್ನೆ ಸ್ಪರ್ಧೆಗಳನ್ನು ಏರ್ಪಡಿಸಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.

Scanned by CamScanner

ಪ್ರಜಾವಾಣಿ ಸೋಮವಾರ • ಡಿಸೆಂಬರ್ 18, 2017



ಶೃಂಗೇರಿಯ ಜೆಸಿಬಿಎಂ ಕಾಲೇಜಿನಲ್ಲಿ ಆಯೋಜಿಸಲಾದ ಕ್ಯಾನ್ಸರ್ ಜನ ಜಾಗೃತಿ, ತಪಾಸಣೆ ಕಾರ್ಯಾಗಾರವನ್ನು ಜೆಸಿಬಿಎಂ ಕಾಲೇಜಿನ ವಿಶ್ವಸ್ತ ಮಂಡಳಿ ಸದಸ್ಯ ಟಿ.ಕೆ. ಪರಾಶರ ಉದ್ಘಾಟಿಸಿದರು.

'ಆನುವಂಶಿಕ ಕಾಯಿಲೆ; ಎಚ್ಚರ ಅಗತ್ಯ'

ಶೃಂಗೇರಿ: ದಿನನಿತ್ಯದ ನಮ್ಮ ಆಹಾರ ಪದ್ಧತಿಯಲ್ಲಿ ಬದಲಾವಣೆ ಮಾಡಿಕೊಂಡು ಆರೋಗ್ಯ ಕಾಯ್ದಿರಿಸಿ ಕೊಳ್ಳಬೇಕು. ಕಡಿಮೆ ಬೆಲೆಗೆ ಸಿಗುವ ನವೀನ ಆಹಾರ ಪದಾರ್ಥಗಳ ಸೇವನೆ ಯಿಂದ ಯುವ ಜನತೆಯ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಈ ಬಗ್ಗೆ ಯುವ ಜನತೆ ಎಚ್ಚರಿಕೆ ವಹಿಸಬೇಕು ಎಂದು ಜೆಸಿಬಿಎಂ ಕಾಲೇಜಿನ ವಿಶ್ವಸ್ತ ಮಂಡಳಿ ಸದಸ್ಯ ಟಿ.ಕೆ. ಪರಾಶರ ಸಲಹೆ ನೀಡಿದರು.

ಶೃಂಗೇರಿಯ ಜೆಸಿಬಿಎಂ ಕಾಲೇಜಿನಲ್ಲಿ ಪಟ್ಟಣ ಪಂಚಾಯಿತಿ ಸಹಕಾರದಲ್ಲಿ ಕಿದ್ವಾಯಿ ಕ್ಯಾನ್ಸರ್ ಸಂಸ್ಥೆ, ಬೆಂಗಳೂರು ತಜ್ಞ ವೈದ್ಯರಾದ ತಂಡದಿಂದ ಆಯೋಜಿಸಲಾದ ಕ್ಯಾನ್ಸರ್ ಜನ ಜಾಗೃತಿ, ತಪಾಸಣೆ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು. ನಮ್ಮ ಪೂರ್ವಜರು ನಮಗೆ ಕಾಲಕಾಲಕ್ಕೆ ನೀಡಿರುವ ಸಾಂಪ್ರದಾಯಿಕ ಆಹಾರ ಪದ್ಧತಿಯನ್ನು ಅಳವಡಿಸಿಕೊಂಡು ಆರೋಗ್ಯಯುತ ಜೀವನ ಸಾಗಿಸಬೇಕೆಂದು ತಿಳಿಸಿದರು.

ಪಟ್ಟಣ ಪಂಚಾಯಿತಿ ಅಧ್ಯಕ್ಷರಾದ ಡಾ. ಲಕ್ಷ್ಮೀ ಪ್ರಸಾದ್ ಅಧ್ಯಕ್ಷತೆ ವಹಿಸಿದ್ದರು.

ಸಂಪನ್ಮೂಲ ವ್ಯಕ್ತಿ ಡಾ.ಕವಿತ ಮಾತನಾಡಿ, 'ಆನುವಂಶಿಕವಾಗಿ ಬರುವ ಕಾಯಿಲೆಗಳ ಬಗ್ಗೆ ಎಚ್ಚರವಹಿಸಬೇಕು. ವಿದ್ಯಾರ್ಥಿನಿಯರು, ಯುವಕರು ಉತ್ತಮ ಆಹಾರ ಸೇವನೆಯಿಂದ ಕಾಯಿಲೆಗಳನ್ನು ದೂರವಹಿಸಬಹುದು' ಎಂದು ತಿಳಿಸಿದರು.

ಕ್ಯಾನ್ಸರ್ ರೋಗದ ಕುರಿತು ಡಾ.ವಿಜಯ್ ಹಾಗೂ ಡಾ.ಸತ್ಯ ನಾರಾಯಣಭಟ್ ಮಾಹಿತಿ ನೀಡಿದರು.

Scanned by CamScanner

ಸಂಯುಕ್ತ ಕರ್ನಾಟಕ

ಕನ್ನಡಪ್ರಭ

ಬುಧವಾರ 13.12.2017

ವಿದ್ಯಾರ್ಥಿಗಳು ಸ್ಪಷ್ಟ ಗುರಿ ಹೊಂದಿದಾಗ ಯಶಸ್ಸು ಸಾಧ್ಯ: ವೆಂಕಟೇಶ್ ಪ್ರಸನ್ನ

ಶೃಂಗೇರಿ: ಜೀವನದಲ್ಲಿ ಸ್ಪಷ್ಟ ಗುರಿ ಇರಲಿ ಮತ್ತು ಅದನ್ನು ಸಣ್ಣ ಸಣ್ಣ ಹಂತಗಳನ್ನಾಗಿಸಿ ಗುರುಗಳ ಮಾರ್ಗದರ್ಶನದೊಂದಿಗೆ ಅವುಗಳನ್ನು ಸಾಧಿಸಿ, ಸಾಧನೆ ಮಾಡಿದ ಹಿರಿಯರೆಲ್ಲರೂ ಸ್ವಪ್ರಯತ್ನದಿಂದಲೇ ಸಾಧಕರಾಗಿದ್ದಾರೆ. ವಿದ್ಯಾರ್ಥಿಗಳು ಜೀವನದಲ್ಲಿ ಸ್ಪಷ್ಟ ಗುರಿ ಹೊಂದಿದಾಗ ಯಶಸ್ಸು ಸಾಧ್ಯ ಎಂದು ಬೆಂಗಳೂರಿನ ಡಿವೈಎಸ್‌ಪಿ ವೆಂಕಟೇಶ್ ಪ್ರಸನ್ನ ಹೇಳಿದರು.

ತಾಲೂಕಿನ ಮರ್ಕಲ್ ಪಂಚಾಯಿತಿ ಕಿಗ್ಗಾದಲ್ಲಿ ನಡೆದ ಜೆಸಿಬಿಎಂ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ಏಳು ದಿನಗಳ ವಾರ್ಷಿಕ ವಿಶೇಷ ಶಿಬಿರದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು. ಶ್ರಮವಹಿಸಿ ಆತ್ಮವಿಶ್ವಾಸದಿಂದ ದುಡಿಯುವುದರಿಂದ ಸಾಧನೆ ಸಾಧ್ಯ. ನಿಮ್ಮ ಶಕ್ತಿ ಸಾಮರ್ಥ್ಯಗಳ ಅರಿವಿರಲಿ ಹಾಗೂ ಮನಸ್ಸನ್ನು ಸ್ಥಿರವಾಗಿರಿಸಿ ಫಲದೊಂದಿಗೆ ಕೆಲಸ ಮಾಡಿ, ಜೀವನದಲ್ಲಿ ಗುರಿ ಇಲ್ಲದವರು ಅಂಗವಿಕಲರೇ ಹೊರತು ಮಹೋನ್ನತ ಗುರಿಗಳನ್ನು ಹೊಂದಿರುವವರಲ್ಲ ಎಂದರು.

ಮುಖ್ಯ ಅತಿಥಿ ಹರಿಹರಪುರ ಮಠದ ಆಡಳಿತಾಧಿಕಾರಿ ರವಿಶಂಕರ್ ಮಾತನಾಡಿ, ಒಬ್ಬ ಮನುಷ್ಯ ವ್ಯಕ್ತಿಯಾಗಿ ಹುಟ್ಟಿ ವ್ಯಕ್ತಿತ್ವ ರೂಪಿಸಿಕೊಳ್ಳುತ್ತಾನೆ, ಸಂಸ್ಕಾರಯುತ ಜೀವನದಿಂದ ಮಾತ್ರವೇ ವ್ಯಕ್ತಿಯ ವ್ಯಕ್ತಿತ್ವ ಸಂಪೂರ್ಣ ಗೊಳ್ಳುತ್ತದೆ. ಪ್ರತಿಯೊಬ್ಬರಿಗೂ ಆವರದೇ ಆದ ಗುರಿ ದಾರಿಗಳಿವೆ. ಅಂತಹ ಗುರಿಗಳನ್ನು ತಲುಪಲು ಕೀಳರಿಮೆ ಬಿಟ್ಟು ನಾನೂ ಸಾಧಿಸಬಲ್ಲೆ ಎಂಬ ಭಾವನೆ ಬರಬೇಕು. ಇಂತಹ ಆತ್ಮಶಕ್ತಿಯನ್ನು ಎನ್‌ಎಸ್‌ಎಸ್ ಕುಂಬುತ್ತದೆ. ವಿದ್ಯಾರ್ಥಿಗಳ ಆಸಕ್ತಿಗೆ ಅನುಗುಣವಾಗಿ ಗುರುಗಳು ದೊರೆತಾಗ ವ್ಯಕ್ತಿಯ ವ್ಯಕ್ತಿತ್ವ ವಿಕಸನಗೊಳ್ಳುತ್ತದೆ. ಎಲ್ಲರನ್ನು ಗೌರವಿಸಿ ಮತ್ತು ವೃತ್ತಿಯಲ್ಲಿ ಹಣಗಳಿಸುವುದಕ್ಕಿಂತ ಸ್ನೇಹವೇ ಮೊದಲಾದ ಮಾನವೀಯ ಸಂಪತ್ತುಗಳಿಸಿ, ನೀವು ಯಾವುದೇ ಪದವಿಗೆ ಏರಿದರೂ ತಂದೆತಾಯಿಗಳನ್ನು ಗೌರವಿಸಿ ಎಂದು ತಿಳಿಸಿದರು.

ಕಾಲೇಜಿನ ಪ್ರಾಚಾರ್ಯ ಡಾ. ಎಂ.ಸ್ವಾಮಿ ಮಾತನಾಡಿ ಎನ್‌ಎಸ್‌ಎಸ್ ಬಯಲು ವಿಶ್ವವಿದ್ಯಾನಿಲಯವಿದ್ದಂತೆ. ಇದು ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೆ ರಹದಾರಿ. ಕ್ರೀಡೆ, ವಿವಿಧ ವಿಷಯಗಳ ವಿಚಾರಗೋಷ್ಠಿ, ಶ್ರಮದಾನಗಳು, ಸಾಂಸ್ಕೃತಿಕ ಕಾರ್ಯಕ್ರಮಗಳಿಂದ ವಿದ್ಯಾರ್ಥಿಗಳಲ್ಲಿ ವ್ಯಕ್ತಿತ್ವ ವಿಕಸನವಾಗುತ್ತದೆ. ಇಂತಹ ಶಿಬಿರಗಳಲ್ಲಿ ವಿದ್ಯಾರ್ಥಿಗಳು ಪಾಲ್ಗೊಂಡು ಭವ್ಯ ಭವಿಷ್ಯ ರೂಪಿಸಿ ಕೊಳ್ಳಬೇಕು ಎಂದು ಹೇಳಿದರು. ಅಧ್ಯಕ್ಷತೆ ವಹಿಸಿದ್ದ ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಹುಲುಗಾರು ರಾಜೇಂದ್ರ ರಾವ್ ಅವರು, 'ಜೀವನದಲ್ಲಿ ಸಾಧನೆ ಮಾಡಲು ಸಮಯಕ್ಕೆ ಆದ್ಯತೆ ನೀಡಬೇಕು. ಸಾಧಕರ ಸಾಧನೆಯ ಹಿಂದೆ ಅಷ್ಟೇ ಪರಿಶ್ರಮ, ಸಮಯ ಪ್ರಜ್ಞೆಗಳಿರುತ್ತದೆ. ಇವುಗಳನ್ನು ನೀವೂ ರೂಢಿಸಿಕೊಂಡು ಇತರರಿಗೆ ಸ್ಫೂರ್ತಿಯಾಗಬೇಕು ಎಂದರು. ಜಿಪಂ ಸದಸ್ಯ ರಾದಶಿಲ್ಪಾ ರವಿ, ಗ್ರಾಪಂ ಮರ್ಕಲ್ ಸದಸ್ಯ ಸುಧೀಂದ್ರ ಬೆಟ್ಟಗದ್ದೆ, ಪ್ರವೀಣ ನಾಯ್ಕ, ತಾಪಂ ಸಾಮಾಜಿಕ ಸ್ಥಾಯಿ ಸಮಿತಿ ಅಧ್ಯಕ್ಷ ರಾಮಕೃಷ್ಣ ಅಂಬ್ಲೂರು ಉಪಸ್ಥಿತರಿದ್ದರು.



ಶೃಂಗೇರಿ ಕಿಗ್ಗಾದಲ್ಲಿ ನಡೆದ ಜೆಸಿಬಿಎಂ ಕಾಲೇಜಿನ ಎನ್‌ಎಸ್‌ಎಸ್ ಶಿಬಿರ ಸಮಾರೋಪದಲ್ಲಿ ಬೆಂಗಳೂರಿನ ಡಿವೈಎಸ್‌ಪಿ ವೆಂಕಟೇಶ್ ಪ್ರಸನ್ನ ಮಾತನಾಡಿದರು.

Scanned by CamScanner

ಬುಧವಾರ • ಡಿಸೆಂಬರ್ 13, 2017 ಪ್ರಜಾವಾಣಿ

ಜೀವನದಲ್ಲಿ ಸ್ಪಷ್ಟ ಗುರಿ ಇರಲಿ: ವೆಂಕಟೇಶ್

ಶೃಂಗೇರಿ: ಜೀವನದಲ್ಲಿ ಸ್ಪಷ್ಟ ಗುರಿ ಇಟ್ಟುಕೊಂಡು ಗುರುಗಳ ಮಾರ್ಗದರ್ಶನದೊಂದಿಗೆ ಅವುಗಳನ್ನು ಸಾಧಿಸಲು ಪ್ರಯತ್ನಿಸಬೇಕು ಎಂದು ಡಿವೈಎಸ್‌ಪಿ ವೆಂಕಟೇಶ್ ಪ್ರಸನ್ನ ಸಲಹೆ ನೀಡಿದರು.

ಕಿಗ್ಗಾದ ಅಭಿನವ ರಮಾನಂದ ಪ್ರೌಢಶಾಲೆಯಲ್ಲಿ ನಡೆದ ಜೆಸಿಬಿಎಂ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ಏಳು ದಿನಗಳ ವಾರ್ಷಿಕ ವಿಶೇಷ ಶಿಬಿರದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ನಿಮ್ಮ ಶಕ್ತಿ ಸಾಮರ್ಥ್ಯಗಳನ್ನು ಅರಿತುಕೊಂಡು ಮನಸ್ಸನ್ನು ಸ್ಥಿರವಾಗಿರಿಸಿ ಛಲದೊಂದಿಗೆ ಕೆಲಸ ಮಾಡಿದಾಗ ಗುರಿ ತಲುಪಲು ಸಾಧ್ಯ. ಜೀವನದಲ್ಲಿ ಗುರಿ ಇಲ್ಲದವರು ಅಂಗವಿಕಲರೇ ಹೊರತು ಮಹೋನ್ನತ ಗುರಿಗಳನ್ನು ಹೊಂದಿರುವವರಲ್ಲ ಎಂದರು.

ಹರಿಹರಪುರ ಮಠದ ಆಡಳಿತಾಧಿಕಾರಿಗಳಾದ ರವಿಶಂಕರ್ ಮಾತನಾಡಿ, ಒಬ್ಬ ಮನುಷ್ಯ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುತ್ತಾನೆ. ಸಂಸ್ಕಾರಯುತ ಜೀವನದಿಂದ ಮಾತ್ರವೇ ವ್ಯಕ್ತಿಯ ವ್ಯಕ್ತಿತ್ವ ಸಂಪೂರ್ಣಗೊಳ್ಳುತ್ತದೆ. ಪ್ರತಿಯೊಬ್ಬರಿಗೂ ಅವರದೇ ಆದ ಗುರಿ ಇದ್ದು, ಅಂತಹ ಗುರಿಗಳನ್ನು ತಲುಪಲು ಕೀಳರಿಮೆ ಬಿಟ್ಟು ನಾನೂ ಸಾಧಿಸಬಲ್ಲೆ ಎಂಬ ಭಾವನೆ ಬರಬೇಕು. ಇಂತಹ ಆತ್ಮಶಕ್ತಿಯನ್ನು ರಾಷ್ಟ್ರೀಯ ಸೇವಾ ಯೋಜನೆ ತುಂಬುತ್ತದೆ' ಎಂದರು



ಕಿಗ್ಗಾದಲ್ಲಿ ನಡೆದ ಜೆಸಿಬಿಎಂ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ಏಳು ದಿನಗಳ ವಾರ್ಷಿಕ ವಿಶೇಷ ಶಿಬಿರದ ಸಮಾರೋಪ ಸಮಾರಂಭದಲ್ಲಿ ಡಿವೈಎಸ್‌ಪಿ ವೆಂಕಟೇಶ್ ಪ್ರಸನ್ನ ಮಾತನಾಡಿದರು.

ಕಾಲೇಜಿನ ನಿವೃತ್ತ ಪ್ರಾಂಶುಪಾಲ ಡಾ.ವೀರಪ್ಪಗೌಡ ಮಾತನಾಡಿ, 'ಸಮಾಜದಲ್ಲಿ ಪ್ರತೀ ವೃತ್ತಿಯೂ ಮುಖ್ಯ. ಅದರಲ್ಲಿ ಮೇಲು-ಕೀಳು ಇಲ್ಲ. ನಿಮ್ಮಲ್ಲಿ ಏನನ್ನಾದರೂ ಸಾಧಿಸುವ ಶಕ್ತಿ ಬೆಲಗಳಿವೆ. ವೃತ್ತಿಗಳ ಬಗೆಗಿನ ಋಣಾತ್ಮಕ ಭಾವನೆಗಳನ್ನು ದೂರಮಾಡಿ ಎಲ್ಲರನ್ನು ಗೌರವಿಸಿ ಮತ್ತು ವೃತ್ತಿಯಲ್ಲಿ ಹಣಗಳಿಸುವುದಕ್ಕಿಂತ ಸ್ನೇಹವೇ ಮೊದಲಾದ ಮಾನವೀಯ ಸಂಪತ್ತುಗಳಿಸಿ, ನೀವು ಯಾವುದೇ ಪದವಿಗೆ ಏರಿದರೂ ತಂದೆ ತಾಯಿಗಳನ್ನು ಗೌರವಿಸಿ ಎಂದು ಕಿವಿಮಾತು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷ ಹುಲುಗಾರು ರಾಜೇಂದ್ರರಾವ್ ಮಾತನಾಡಿ 'ಜೀವನದಲ್ಲಿ ಸಾಧನೆ ಮಾಡಲು ಸಮಯಕ್ಕೆ ಆದ್ಯತೆ ನೀಡಬೇಕು. ಸಾಧಕರ ಸಾಧನೆಯ ಹಿಂದೆ ಅಷ್ಟೇ ಪರಿಶ್ರಮ, ಸಮಯ ಪ್ರಜ್ಞೆಗಳಿರುತ್ತವೆ. ಇವುಗಳನ್ನು ನೀವೂ ರೂಢಿಸಿಕೊಂಡು ಇತರರಿಗೆ ಸ್ಫೂರ್ತಿಯಾಗಬೇಕು ಎಂದರು.

ಜಿಲ್ಲಾ ಪಂಚಾಯಿತಿ ಸದಸ್ಯರಾದ ಶಿಲ್ಪಾರವಿ, ಗ್ರಾಮ ಪಂಚಾಯಿತಿ ಮರ್ಕಲ್ ಸದಸ್ಯರಾದ ಸುಧೀಂದ್ರ ಬೆಟ್ಟಗದ್ದೆ, ಪ್ರವೀಣ ನಾಯ್ಕ, ತಾಲ್ಲೂಕು ಪಂಚಾಯ್ತಿ ಸಾಮಾಜಿಕ ಸ್ಥಾಯಿ ಸಮಿತಿಯ ಅಧ್ಯಕ್ಷ ರಾಮಕೃಷ್ಣ ಅಂಬ್ಲೂರು ಇದ್ದರು.

Scanned by CamScanner

ಸಂಯುಕ್ತ ಕರ್ನಾಟಕ
13, ಡಿಸೆಂಬರ್, 2017, ಬುಧವಾರ
ದಾವಣಗೆರೆ

ಗುರುಗಳ ಮಾರ್ಗದರ್ಶನ ಅಗತ್ಯ

ಶೃಂಗೇರಿ: ಸಾಧನೆಗಾಗಿ ಸಣ್ಣ ಸಣ್ಣ ಹಂತಗಳನ್ನು ರೂಪಿಸಿಕೊಂಡು, ಗುರುಗಳ ಮಾರ್ಗದರ್ಶನದ ಮೂಲಕ ಸಾಧಿಸಿ ತೋರಬೇಕು ಎಂದು ಬೆಂಗಳೂರು ಪೊಲೀಸ್ ಇಲಾಖೆಯ ಡಿವೈಎಸ್‌ಪಿ ಹಾಗೂ ಕಿಗ್ಗಾ ಪ್ರೌಢಶಾಲೆ ಹಿರಿಯ ವಿದ್ಯಾರ್ಥಿ ವೆಂಕಟೇಶ ಪ್ರಸನ್ನ ಹೇಳಿದರು.

ಅವರು ಕಿಗ್ಗಾದ ರಾಮಾನಂದ ಪ್ರೌಢಶಾಲೆಯಲ್ಲಿ ಜೆಸಿಬಿಎಂ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ವಾರ್ಷಿಕ ವಿಶೇಷ ಶಿಬಿರದ ಸಮಾರೋಪ ಸಮಾರಂಭದಲ್ಲಿ ಉಪನ್ಯಾಸ ನೀಡಿದರು.

ಮನಸ್ಸನ್ನು ಸ್ಥಿರವಾಗಿರಿಸಿಕೊಂಡು ಫಲದೊಂದಿಗೆ ಕೆಲಸ ಮಾಡಬೇಕು. ಜೀವನದಲ್ಲಿ ಗುರಿ ಇಲ್ಲದವರು ಯಾವುದೇ ಸಾಧನೆ ಮಾಡುವುದು ಅಸಾಧ್ಯ ಎಂದು ತಿಳಿಸಿದರು.

ಮುಖ್ಯ ಅತಿಥಿ ಹರಿಹರಮಠ ಮಠದ ಆಡಳಿತಾಧಿಕಾರಿ ರವಿಶಂಕರ್ ಮಾತನಾಡಿ, ಸಂಸ್ಕಾರಯುತ ಜೀವನದಿಂದ ಮಾತ್ರ ವ್ಯಕ್ತಿತ್ವ ಸಂಪೂರ್ಣಗೊಳ್ಳುತ್ತದೆ. ಪ್ರತಿಯೊಬ್ಬರಲ್ಲೂ ತಮ್ಮದೇ ಆದ ಗುರಿ, ದಾರಿಗಳು ಇರುತ್ತವೆ. ಅದನ್ನು ತಲುಪುವಲ್ಲಿ ಕೀಳರಿಮೆಯನ್ನು ಬಿಟ್ಟು, ನಾನೂ ಸಾಧಿಸಬಲ್ಲೇ ಎಂಬ ಭಾವನೆ ಬರಬೇಕು ಎಂದರು.

ನಿವೃತ್ತ ಪ್ರಾಂಶುಪಾಲ ಡಾ.ಹೆಚ್.ಸಿ.ವೀರಪ್ಪಗೌಡರು ಮಾತನಾಡಿ, ವೃತ್ತಿಗಳ ಕುರಿತಾದ ಋಣಾತ್ಮಕ ಭಾವನೆಗಳನ್ನು ದೂರಮಾಡಿ ಸಾಧನೆಯ ದಿಕ್ಕಿನೆಡೆಗೆ ಶಕ್ತಿಯನ್ನು ಹರಿಸಬೇಕು. ವೃತ್ತಿಪ್ರಗತಿಯ, ಹಣಗಳಿಕೆಯ ಸಂದರ್ಭದಲ್ಲಿ ಮಾನವೀಯ ಗುಣಗಳನ್ನು ಮರೆಯಬಾರದು ಎಂದು ಹೇಳಿದರು. ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಹುಲುಗಾರು ರಾಜೇಂದ್ರರಾವ್ ಅಧ್ಯಕ್ಷತೆ ವಹಿಸಿ ಮಾತನಾಡಿ, ಸಮಯಕ್ಕೆ ಆದ್ಯತೆ ನೀಡಬೇಕು. ಸಾಧನೆಯ ಹಿಂದಿನ ಪರಿಶ್ರಮ ಮತ್ತು ಸಮಯಪ್ರಜ್ಞೆಯನ್ನು ಇತರರಿಗೂ ಸ್ಫೂರ್ತಿಮೂಲವಾಗಿ ತಿಳಿಸಿಕೊಡಬೇಕು ಎಂದರು.

ಜಿ.ಪಂ.ಸದಸ್ಯೆ ಶಿಲ್ಪಾರವಿ, ಗ್ರಾ.ಪಂ. ಸದಸ್ಯ ಸುಧೀಂದ್ರ ಬೆಟ್ಟಗದ್ದೆ, ಪ್ರವೀಣ್ ನಾಯ್ಕ, ತಾ.ಪಂ. ಸಾಮಾಜಿಕ ಸ್ಥಾಯಿ ಸಮಿತಿ ಅಧ್ಯಕ್ಷ ಅಂಬ್ಲೂರು ರಾಮಕೃಷ್ಣ ಉಪಸ್ಥಿತರಿದ್ದರು.



ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರದ ಸಮಾರೋಪ ಸಮಾರಂಭದಲ್ಲಿ ಪ್ರೌಢಶಾಲೆಯ ಹಿರಿಯ ವಿದ್ಯಾರ್ಥಿ ವೆಂಕಟೇಶ್ ಪ್ರಸನ್ನ ಮಾತನಾಡಿದರು.

Scanned by CamScanner

ವಿಜಯ ಕರ್ನಾಟಕ VK ಶನಿವಾರ, 9 ಡಿಸೆಂಬರ್ 2017, ಶಿವಮೊಗ್ಗ

ಎನ್‌ಎಸ್‌ಎಸ್‌ನಿಂದ ಮಾನವೀಯ ಮೌಲ್ಯಗಳ ಪರಿಚಯ

ಕೃಷಿಗೆ ಭವಿಷ್ಯದಲ್ಲಿ ಬೇಡಿಕೆ

■ ವಿಕ ಸುದ್ದಿಲೋಕ ಶೃಂಗೇರಿ

ಕೃಷಿಯ ಬಗ್ಗೆ ಯುವಜನಾಂಗ ಹೆಚ್ಚು ಆಕರ್ಷಿತರಾಗಬೇಕಿದ್ದು ಕೃಷಿಗೆ ಮುಂದಿನ ದಿನಗಳಲ್ಲಿ ಭಾರಿ ಬೇಡಿಕೆ ಬರಲಿದೆ ಎಂದು ಯುವ ಕೃಷಿಕ ಮನೋಜ್ ಹೆಗ್ಡೆ ಹೇಳಿದರು.

ಅವರು ಗುರುವಾರ ಕಿಗ್ಗಾದ ಶ್ರೀ ಅಭಿನವರಾಮಾನಂದ ಪ್ರೌಢಶಾಲೆಯಲ್ಲಿ ನಡೆಯುತ್ತಿರುವ ಜೆಸಿಬಿಎಂ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ಶಿಬಿರದಲ್ಲಿ ಕಾಳು ಮೆಣಸು ಬೆಳೆಯ ಬಗ್ಗೆ ಮಾತನಾಡಿದರು.

ಉಪ ಬೆಳೆಯಾಗಿ ಪರಿಚಯವಾದ ಕಾಳು ಮೆಣಸು ಈಗ ಮುಖ್ಯ ಬೆಳೆಯಾಗುತ್ತಿದೆ. ಅಡಕೆಗೆ ವ್ಯಾಪಕ ರೋಗ ಹರಡುತ್ತಿರುವುದರಿಂದ ರೈತರು ಬದಲಿ ಕೃಷಿಯಾಗಿ ಕಾಫಿ, ಕಾಳು ಮೆಣಸನ್ನು ಬೆಳೆಯಬೇಕಾಗಿದೆ. ಮಲೆನಾಡು ಕಾಳು ಮೆಣಸಿಗೆ ಸೂಕ್ತ ವಾತಾವರಣ ಕಲ್ಪಿಸಿದೆ. ನಮಗೆ ಕೃಷಿಯ ಬಗ್ಗೆ ತಿಳಿದಿದ್ದರೂ, ಆಧುನಿಕ ಕೃಷಿ ಪದ್ಧತಿ ತಿಳಿಯಲು ಯಶಸ್ವಿ ರೈತರ ತೋಟಗಳಿಗೆ ಭೇಟಿ ನೀಡುವುದರಿಂದ ಕೃಷಿಯಲ್ಲಿ ಸಾಧನೆ ಸಾಧ್ಯ ಎಂದರು.

ಕೃಷಿಗೆ ಮುಂದಿನ ದಿನಗಳಲ್ಲಿ ಭಾರಿ ಬೇಡಿಕೆ ಬರಲಿದ್ದು ಯುವ ಕೃಷಿಕರ ಆಗತ್ಯತೆ ಇದೆ. ಕೃಷಿಯ ಬಗೆಗಿನ ತಿರಸ್ಕಾರದ ಮಾತುಗಳನ್ನು ಕಡೆಗಣಿಸಿ ಸಾಧನೆಗೆ ಸ್ಫೂರ್ತಿಯಾಗಿ ತೆಗೆದುಕೊಳ್ಳಿ ಎಂದು ಸಲಹೆ ನೀಡಿದರು.

ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ದಿನೇಶ್ ಹೆಗ್ಡೆ ಮಾತನಾಡಿ, ಸಾಕ್ಷರರಾದ ಇಂದಿನ ಯುವ ಪೀಳಿಗೆ ಕೇವಲ ಹಣದ ಆಕಾಂಕ್ಷೆಗಳಾಗಿ ನಗರಪಥ ತೆರಳದೇ ಕೃಷಿಯತ್ತ ಮುಖ ಮಾಡಬೇಕು ಎಂದರು.

ಸೂರ್ಯೋದು ದಿವಾಕರ ಆಚಾರ್, ತಲಗಾರು ನಾಗೇಶ್ ಉಪಸ್ಥಿತರಿದ್ದರು.

ಕಾಲೇಜಿನ ಯುವ ರೆಡ್‌ಕ್ರಾಸ್ ಘಟಕದ ಆಶ್ರಯದಲ್ಲಿ ಪ್ರಥಮ ಚಿಕಿತ್ಸೆ ಪ್ರಾತ್ಯಕ್ಷಿಕೆ ಕಾರ್ಯಕ್ರಮ ನಡೆಯಿತು. ಸರಕಾರಿ ಪ್ರಾಥಮಿಕ ಆಸ್ಪತ್ರೆ ನೆಮ್ಮಾರಿನ ವೈದ್ಯರಾದ ಡಾ. ಅನಿತ್‌ಕುಮಾರ್ ಪ್ರಾಥಮಿಕ ಚಿಕಿತ್ಸೆಗಳ ಕುರಿತು ಮಾಹಿತಿ ನೀಡಿದರು. ಪ್ರಯೋಗಶಾಲೆ ತಂತ್ರಜ್ಞ ನಾಗರಾಜ ಅವರು ಎಚ್‌ಐವಿ ಬಗ್ಗೆ ಮಾತನಾಡಿದರು. ತಾಲೂಕು ಆರೋಗ್ಯ ಸಹಾಯಕರಾದ ಯಷ್ಕಶೃಂಗೇಶ್ವರ ಸಾಮಾಜಿಕ ಆರೋಗ್ಯದ ಬಗ್ಗೆ ಮಾತನಾಡಿದರು.



ಶೃಂಗೇರಿ ತಾಲೂಕಿನ ಕಿಗ್ಗಾದಲ್ಲಿ ನಡೆಯುತ್ತಿರುವ ಜೆ.ಸಿ.ಬಿ.ಎಂ.ಕಾಲೇಜಿನ ಎನ್ನೆಸ್ಸೆಸ್ ಶಿಬಿರದಲ್ಲಿ ಕಾಳು ಮೆಣಸು ಬೆಳೆಯ ಬಗ್ಗೆ ಮನೋಜ್ ಹೆಗ್ಡೆ ಮಾತನಾಡಿದರು.

ಎನ್ನೆಸ್ಸೆಸ್‌ನಿಂದ ಮೌಲ್ಯಗಳ ಪರಿಚಯ

ಶೃಂಗೇರಿ: ಎನ್‌ಎಸ್‌ಎಸ್ ಶಿಬಿರದಿಂದ ಗ್ರಾಮೀಣ ಜೀವನದ ಪರಿಚಯವಾಗುತ್ತದೆ, ಮಾನವೀಯ ಮೌಲ್ಯಗಳನ್ನು ಕಟ್ಟಿಕೊಳ್ಳಲು ಸಹಾಯಕವಾಗುತ್ತದೆ ಎಂದು ಜೆಎಂಎಫ್‌ಸಿ ನ್ಯಾಯಾಧೀಶ ಎಸ್.ಸೂರ್ಯನಾರಾಯಣ ಹೇಳಿದರು.

ಅವರು ಇತ್ತೀಚೆಗೆ ಕಿಗ್ಗಾದ ಶ್ರೀ ಅಭಿನವ ರಾಮಾನಂದ ಪ್ರೌಢಶಾಲೆಯಲ್ಲಿ ನಡೆಯುತ್ತಿರುವ ಜೆಸಿಬಿಎಂ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ಶಿಬಿರದಲ್ಲಿ ಕಾನೂನು ಅರಿವು ನೆರವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ವಿದ್ಯಾರ್ಥಿಗಳು ಉತ್ತಮ ಭವಿಷ್ಯವನ್ನು ರೂಪಿಸಿಕೊಳ್ಳುವುದರೊಂದಿಗೆ ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಿ ಎಂದು ಸಲಹೆ ನೀಡಿದರು.

ವಕೀಲರಾದ ಕೆ.ಆರ್.ಸುರೇಶ್, ಜಿ.ಎಂ.ಪತೀಶ್, ಕೆ.ಸಿ.ಚರಣ್ ವಿವಿಧ ವಿಷಯಗಳ ಬಗ್ಗೆ ಉಪನ್ಯಾಸ ನೀಡಿದರು. ಎಚ್.ಟಿ.ಸದಾಶಿವ, ರವೀಂದ್ರ, ಚಂದ್ರಶೇಖರ ಹೆಬ್ಬಾರ್, ಶೃಂಗೇಶ್ವರ ಕಿಸಗೋಡು, ಪ್ರದೀಪ ಇದ್ದರು. ಪ್ರಾರ್ಥನೆ ನಿರೂಪಿಸಿ, ಪೂಜಾ ಸ್ವಾಗತಿಸಿ ತನುಶ್ರೀ ವಂದಿಸಿದರು.



ಶೃಂಗೇರಿ ತಾಲೂಕಿನ ಕಿಗ್ಗಾದಲ್ಲಿ ನಡೆಯುತ್ತಿರುವ ಜೆಸಿಬಿಎಂ ಕಾಲೇಜಿನ ಎನ್ನೆಸ್ಸೆಸ್ ಶಿಬಿರದಲ್ಲಿ ನ್ಯಾಯಾಧೀಶ ಎಸ್.ಸೂರ್ಯನಾರಾಯಣ ಮಾತನಾಡಿದರು.

Scanned by CamScanner

ಕನ್ನಡಪ್ರಭ
ಶುಕ್ರವಾರ 8.12.2017

ಧಾರ್ಮಿಕ ಪ್ರಜ್ಞೆ

ಕಿಗ್ಗಾದಲ್ಲಿ ಜೆಸಿಬಿಎಂ ಕಾಲೇಜಿನ ಎನ್ಸೆಸ್ಸೆಸ್ ವಾರ್ಷಿಕ ಶಿಬಿರ ಕಾರ್ಯಕ್ರಮದಲ್ಲಿ ಡಾ.ಶ್ರೀಪತಿ ಹಳಗುಂದ

ದೇವರು, ಧರ್ಮ ವಿರೋಧವೇ ವೈಚಾರಿಕತೆ ಅಲ್ಲ

• ಕನ್ನಡಪ್ರಭ ವಾರ್ತೆ ಶೃಂಗೇರಿ

ಕುವೆಂಪು ಅವರು ತಮ್ಮ ಪುಸ್ತಕಗಳಿಂದ ಓದುಗರ ಬುದ್ಧಿ, ಆತ್ಮ, ಮನಸ್ಸುಗಳೊಂದಿಗೆ ಮಾತನಾಡಬಲ್ಲರು. ಅವರ ಒಂದೊಂದು ಪುಸ್ತಕಗಳೂ ಒಂದೊಂದು ರೀತಿಯ ಜೀವನವನ್ನು ದರ್ಶಿಸುವ ಸಾಮರ್ಥ್ಯವನ್ನು ಹೊಂದಿವೆ. ಕುವೆಂಪು ಕನ್ನಡ ಸಾಹಿತ್ಯ ಲೋಕ ಕಂಡ ಶ್ರೇಷ್ಠ ಕವಿ ಎಂದು ರಿಪ್ಪನ್‌ಪೇಟೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕನ್ನಡ ಭಾಗದ ಮುಖ್ಯಸ್ಥ ಡಾ. ಕೆ.ಶ್ರೀಪತಿ ಹಳಗುಂದ ಹೇಳಿದರು.

ತಾಲೂಕಿನ ಕಿಗ್ಗಾ ಶ್ರೀ ಅಭಿನವರಮಾನಂದ ವ್ಯಾಧಶಾಲೆಯಲ್ಲಿ ನಡೆಯುತ್ತಿರುವ ಶ್ರೀ ಜೆಸಿಬಿಎಂ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ 7 ದಿನಗಳ ವಾರ್ಷಿಕ ವಿಶೇಷ ಶಿಬಿರದಲ್ಲಿ ಶೃಂಗೇರಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ನಡೆದ 'ಕುವೆಂಪು ಸಾಹಿತ್ಯದಲ್ಲಿ ರಾಮಾಯಣ ದರ್ಶನಂ, ಮಲೆನಾಡು ವೈಚಾರಿಕತೆ ಮತ್ತು ಆಧ್ಯಾತ್ಮ' ಕುರಿತಾದ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.



ಶೃಂಗೇರಿ ಕಿಗ್ಗಾದಲ್ಲಿ ನಡೆದ ಕುವೆಂಪು ಸಾಹಿತ್ಯದಲ್ಲಿ ರಾಮಾಯಣ ದರ್ಶನಂ, ಮಲೆನಾಡು ವೈಚಾರಿಕತೆ ಮತ್ತು ಆಧ್ಯಾತ್ಮ' ಕುರಿತಾದ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಡಾ.ಶ್ರೀಪತಿ ಮಾತನಾಡಿದರು.

ದಾರ್ಶನಿಕ ಕವಿಯಾದ ಕುವೆಂಪು ಅವರ ಜೀವನವು ಒಂದು ಅದ್ಭುತಯಾನ. ವೈಚಾರಿಕತೆ ಎಂದರೆ ದೇವರು ಧರ್ಮವನ್ನು ಪ್ರತಿಭಟಿಸುವುದಲ್ಲ. ಅದರ ಹೆಸರಿನಲ್ಲಿ ನಡೆಯುವ ಕೂಪಮಂಡೂಕತೆಯ ವಿರುದ್ಧ ದನಿ ಎತ್ತುವುದು; ವೈಚಾರಿಕತೆಯಲ್ಲಿಯೇ ಒದುಕು ಇದೆ ಎಂಬುದು ಕುವೆಂಪುರವರ ದೃಷ್ಟಿಕೋನವಾಗಿತ್ತು. ಇಂತಹ ವೈಚಾರಿಕತೆಯನ್ನು ಬದುಕಿನಲ್ಲಿ ರೂಢಿಸಿಕೊಳ್ಳಿ ಎಂದು ಸಲಹೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಪೂರ್ಣಿಮಾ ಸಿದ್ದಪ್ಪ ಮಾತನಾಡಿ, ಇಂದಿನ ವಿದ್ಯಾರ್ಥಿಗಳಲ್ಲಿ ಓದುವ ಗೀಳು ಕಡಿಮೆಯಾಗಿದೆ. ಪುಸ್ತಕಗಳನ್ನು ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು. ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ನಾಡು ನುಡಿಯ ಉಳಿವಿನಲ್ಲಿ ತನ್ನದೇ ಆದ ಛಾಪನ್ನು ಮೂಡಿಸಿದೆ. ಕನ್ನಡದ ಬಗ್ಗೆ ಕೀಳರಿಮೆ ಬೇಡ; ಎಲ್ಲರೂ ಒಟ್ಟಾಗಿ ಕನ್ನಡ ಉಳಿವಾಗಿ ಶ್ರಮಿಸೋಣ ಎಂದು ಅವರು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಸಮಾಜ ಅಧ್ಯಕ್ಷರಾದ ಕ್ರೀನಿವಾಸ ಕಿಗ್ಗಾ, ದತ್ತು ದಾನಿಗಳಾದ ರಾಜಶೇಖರ ಹುಲ್ಕ, ರಾಷ್ಟ್ರೀಯ ಸೇವಾ ಯೋಜನೆ ಅಧಿಕಾರಿಗಳಾದ ಎ.ಜೆ. ಪ್ರಶಾಂತ, ಸಂತೋಷ್ ಬಿ.ಡಿ. ಇನ್ನಿತರರು ಉಪಸ್ಥಿತರಿದ್ದರು.

Scanned by CamScanner

ಪ್ರಜಾವಾಣಿ ಶುಕ್ರವಾರ • ಡಿಸೆಂಬರ್ 8, 2017

ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಡಾ.ಕೆ.ಶ್ರೀಪತಿ ಹಳಗುಂದ ಸಲಹೆ

ವೈಚಾರಿಕತೆ ಬದುಕಿನಲ್ಲಿ ರೂಢಿಸಿಕೊಳ್ಳಿ

ಪ್ರಜಾವಾಣಿ ವಾರ್ತೆ

ಶೃಂಗೇರಿ: 'ಕುವೆಂಪು ಅವರು ತಮ್ಮ ಪುಸ್ತಕಗಳಿಂದ ಓದುಗರ ಬುದ್ಧಿ, ಆತ್ಮ, ಮನಸ್ಸುಗಳೊಂದಿಗೆ ಮಾತನಾಡಬಲ್ಲರು. ಅವರ ಒಂದೊಂದು ಪುಸ್ತಕಗಳೂ ಒಂದೊಂದು ರೀತಿಯ ಜೀವನವನ್ನು ರೂಪಿಸುವ ಸಾಮರ್ಥ್ಯವನ್ನು ಹೊಂದಿವೆ. ದಾರ್ಶನಿಕ ಕವಿಯಾದ ಕುವೆಂಪು ಅವರ ಜೀವನವು ಒಂದು ಅದ್ಭುತಯಾನ' ಎಂದು ರಿಪ್ಪನ್‌ಪೇಟೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಡಾ.ಕೆ. ಶ್ರೀಪತಿ ಹಳಗುಂದ ಹೇಳಿದರು.

ತಾಲ್ಲೂಕಿನ ಕಿಗ್ಗಾದ ಅಭಿನವ ರಮಾನಂದ ಪ್ರೌಢಶಾಲೆಯಲ್ಲಿ ನಡೆಯುತ್ತಿರುವ ಜೆಸಿಬಿಎಂ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರದಲ್ಲಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ನಡೆದ 'ಕುವೆಂಪು ಸಾಹಿತ್ಯದಲ್ಲಿ ರಾಮಾಯಣ ದರ್ಶನಂ, ಮಲೆನಾಡು ವೈಚಾರಿಕತೆ ಮತ್ತು ಅಧ್ಯಾತ್ಮ' ಕುರಿತಾದ ದತ್ತಿ ಉಪನ್ಯಾಸದಲ್ಲಿ ಮಾತನಾಡಿದರು.



ಶೃಂಗೇರಿ ತಾಲ್ಲೂಕಿನ ಕಿಗ್ಗಾದ ಅಭಿನವ ರಮಾನಂದ ಪ್ರೌಢಶಾಲೆಯಲ್ಲಿ ನಡೆಯುತ್ತಿರುವ ಜೆಸಿಬಿಎಂ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ವಿಶೇಷ ಶಿಬಿರದಲ್ಲಿ ನಡೆದ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಡಾ.ಕೆ.ಶ್ರೀಪತಿ ಹಳಗುಂದ ಉಪನ್ಯಾಸ ನೀಡಿದರು.

'ಅಣಬೆ ಕೃಷಿ' ಕಾರ್ಯಾಗಾರ

ಅದೇ ದಿನ ನಡೆದ 'ಅಣಬೆ ಕೃಷಿ' ಮಾಹಿತಿ ಕಾರ್ಯಾಗಾರದಲ್ಲಿ ತೋಟಗಾರಿಕಾ ಇಲಾಖೆಯ ಸಹಾಯಕ ನಿರ್ದೇಶಕ ಶ್ರೀಕೃಷ್ಣ ಮಾತನಾಡಿ, 'ಹಾಲು ಪರಿಪೂರ್ಣ ಆಹಾರವಾಗಿದ್ದು, ಅಣಬೆ ಹಾಲಿಗೆ ಒಂದು ಉತ್ತಮ ಪರ್ಯಾಯ ಪೌಷ್ಟಿಕ ಆಹಾರವಾಗಿದೆ. ಇದೇ ಕಾರಣದಿಂದಾಗಿ ಸರ್ಕಾರವು ಅಣಬೆ ಕೃಷಿಯನ್ನು ಪ್ರೋತ್ಸಾಹಿಸುತ್ತಿದೆ. ರಕ್ತಹೀನತೆ, ಪೋಷಕಾಂಶ ಕೊರತೆಯಂತಹ ಹೊಂದರೆಗಳನ್ನು ನಿವಾರಿಸುವುದಕ್ಕೆ ಪ್ರಯತ್ನಿಸುತ್ತಿದೆ' ಎಂದರು.

ವೈಚಾರಿಕತೆ ಎಂದರೆ ದೇವರು ಧರ್ಮವನ್ನು ಪ್ರತಿಭಟಿಸುವುದಲ್ಲ. ಆದರ ಹೆಸರಿನಲ್ಲಿ ನಡೆಯುವ ಶೋಷಣೆಯ ವಿರುದ್ಧ ದನಿ ಎತ್ತುವುದು, ವೈಚಾರಿಕತೆಯಲ್ಲಿಯೇ ಬದುಕು ಇದೆ ಎಂಬುದು ಕುವೆಂಪು ಅವರ ದೃಷ್ಟಿಕೋನವಾಗಿತ್ತು. ಇಂತಹ ವೈಚಾರಿಕತೆಯನ್ನು ಬದುಕಿನಲ್ಲಿ ರೂಢಿಸಿಕೊಳ್ಳಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷೆ ಪೂರ್ಣಿಮಾ ಸಿದ್ಧಪ್ಪ ಮಾತನಾಡಿ, 'ಇಂದಿನ ವಿದ್ಯಾರ್ಥಿಗಳಲ್ಲಿ ಓದುವ ಗೀಳು ಕಡಿಮೆಯಾಗಿದೆ. ಪುಸ್ತಕಗಳನ್ನು ಓದುವ ಹವ್ಯಾಸ ಬೆಳಸಿಕೊಳ್ಳಬೇಕು. ಕನ್ನಡದ ಬಗ್ಗೆ ಕೀಳರಿಮೆ ಬೇಡ. ಎಲ್ಲರೂ ಒಟ್ಟಾಗಿ ಕನ್ನಡ ಉಳಿವಾಗಿ ಶ್ರಮಿಸೋಣ' ಎಂದರು.

ಪರಿಷತ್ತಿನ ಮಾಜಿ ಅಧ್ಯಕ್ಷರಾದ ಶ್ರೀನಿವಾಸ ಕಿಗ್ಗಾ, ದತ್ತು ದಾನಿಗಳಾದ ರಾಜಶೇಖರ ಹುಲ್ಕೆ, ಎನ್.ಎಸ್.ಎಸ್ ಅಧಿಕಾರಿಗಳಾದ ಎ.ಜಿ. ಪ್ರಶಾಂತ, ಸಂತೋಷ್ ಬಿ.ಡಿ. ಉಪಸ್ಥಿತರಿದ್ದರು.

Scanned by CamScanner

ವಿಜಯ ಕರ್ನಾಟಕ VK
vijaykarnataka.com ಶುಕ್ರವಾರ, 8 ಡಿಸೆಂಬರ್ 2017, ಶಿವಮೊಗ್ಗ
ನಮ್ಮ ಚಿಕ್ಕಮಗಳೂರು III

ವೈಚಾರಿಕತೆ ಶೋಷಣೆ ವಿರುದ್ಧದ ಧ್ವನಿ

ವಿಕ ಸುದ್ದಿಲೋಕ ಶೃಂಗೇರಿ

ವೈಚಾರಿಕತೆ ಎಂದರೆ ದೇವರು ಧರ್ಮವನ್ನು ಪ್ರತಿಭಟಿಸುವುದಲ್ಲ, ಅದರ ಹೆಸರಿನಲ್ಲಿ ನಡೆಯುವ ಶೋಷಣೆ ವಿರುದ್ಧ ಧ್ವನಿ ಎತ್ತುವುದಾಗಿದೆ ಎಂದು ರಿಪ್ಪನ್‌ಪೇಟೆಯ ಸರಕಾರಿ ಪ್ರಥಮ ದರ್ಜೆ ಕಾಲೇಜು ಕನ್ನಡ ವಿಭಾಗದ ಮುಖ್ಯಸ್ಥ ಕೆ. ಶ್ರೀಪತಿ ಹಳಗುಂದ ಹೇಳಿದರು.

ಅವರು ಬುಧವಾರ ಶ್ರೀ ಅಭಿನವ ರಮಾನಂದ ಪ್ರೌಢಶಾಲೆಯಲ್ಲಿ ನಡೆಯುತ್ತಿರುವ ಶ್ರೀ ಜೆಸಿಬಿಎಂ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಶಿಬಿರದಲ್ಲಿ ಕನಾಪ ಆಶ್ರಯದಲ್ಲಿ ಕುವೆಂಪು ಸಾಹಿತ್ಯದಲ್ಲಿ ರಾಮಾಯಣ ದರ್ಶನಂ, ಮಲೆನಾಡು ವೈಚಾರಿಕತೆ ಮತ್ತು ಆಧ್ಯಾತ್ಮ ವಿಷಯ ಕುರಿತು ಮಾತನಾಡಿದರು.

ವೈಚಾರಿಕತೆಯಲ್ಲಿಯೇ ಬದುಕು ಇದೆ ಎಂಬುದು ಕುವೆಂಪು ಅವರ ದೃಷ್ಟಿಕೋನವಾಗಿತ್ತು. ಇಂತಹ ವೈಚಾರಿಕತೆ ಬದುಕಿನಲ್ಲಿ ರೂಢಿಸಿಕೊಳ್ಳಬೇಕು ಎಂದರು.

ಆಣಬೆ ಕೃಷಿ ಬಗ್ಗೆ ನಡೆದ ಕಾರ್ಯಾಗಾರದಲ್ಲಿ ತೋಟಗಾರಿಕೆ ಇಲಾಖೆಯ ಸಹಾಯಕ ನಿರ್ದೇಶಕ ಶ್ರೀಕೃಷ್ಣ ಮಾತನಾಡಿ, ಪರಿಪೂರ್ಣ ಆಹಾರವಾಗಿರುವ ಹಾಲಿಗೆ ಆಣಬೆ ಒಂದು ಉತ್ತಮ ಪರ್ಯಾಯ ಪೌಷ್ಟಿಕ ಆಹಾರವಾಗಿದೆ ಎಂದರು.

ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಬೇಗಾರ್ ರಮೇಶ್ ನಿರ್ದೇಶನದ ಗುಡುಗು ಹೇಳಿದ್ದೇನು ನಾಟಕ ಪ್ರದರ್ಶನಗೊಂಡಿತು.



ಶೃಂಗೇರಿ ತಾಲೂಕಿನ ಕಿಗ್ಗಾದಲ್ಲಿ ಶ್ರೀ ಜೆಸಿಬಿಎಂ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ಶಿಬಿರದಲ್ಲಿ ಕೆ. ಶ್ರೀಪತಿ ಹಳಗುಂದ ಮಾತನಾಡಿದರು.

Scanned by CamScanner

ಹಣ, ಆಸ್ತಿ ಇದ್ದೂ ಆರೋಗ್ಯ ಇಲ್ಲದಿದ್ದರೆ ಪ್ರಯೋಜನವಿಲ್ಲ

ಸಾಂಪ್ರದಾಯಿಕ ಆಹಾರ ಪದ್ಧತಿ ಕಾರ್ಯಕ್ರಮದಲ್ಲಿ ಡಾ.ಸತ್ಯನಾರಾಯಣ



ಶೃಂಗೇರಿ ಕಿಗ್ಗಾದಲ್ಲಿ ಎಸ್‌ಎಸ್‌ಎಸ್ ಶಿಬಿರದಲ್ಲಿ ಅಂಗವಾಗಿ ನಡೆದ ಕಾರ್ಯಾಗಾರ ಡಾ.ಲಕ್ಷ್ಮೀ ಪ್ರಸಾದ್ ಉದ್ಘಾಟಿಸಿದರು.

• **ಕನ್ನಡಪ್ರಭ ವಾರ್ತೆ** ಶೃಂಗೇರಿ

ಹಣ, ಆಸ್ತಿ, ಅಂತಸ್ತು ಎಲ್ಲವೂ ಇದ್ದೂ ಆರೋಗ್ಯ ಸರಿಯಿಲ್ಲದಿದ್ದರೆ ಏನೂ ಪ್ರಯೋಜನವಿಲ್ಲ. ಆದ್ದರಿಂದ ಪ್ರತಿಯೊಬ್ಬರು ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು ಎಂದು ಕಿದ್ವಾಯಿ ಸಂಸ್ಥೆಯ ವೈದ್ಯ ಡಾ.ಸತ್ಯನಾರಾಯಣ ಹೇಳಿದರು.

ತಾಲೂಕಿನಮರ್ಕಲ್‌ಪಂಚಾಯಿತಿ ಕಿಗ್ಗಾ ಅಭಿನವ ರಮಾನಂದ ಪ್ರೌಢ ಶಾಲೆಯಲ್ಲಿ ನಡೆದ ಜೆಸಿಬಿಎಂ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಶಿಬಿರದಲ್ಲಿವಿಜ್ಞಾನಹಾಗೂವೈಜ್ಞಾನಿಕ ಮನೋಧರ್ಮಕ್ಕಾಗಿ ಯುವಜನತೆ ಹಾಗೂಕ್ಯಾನ್ಸರ್ ತಡೆಗಟ್ಟುವಲ್ಲಿಸಾವಯವ ಕೃಷಿಯ ಪಾತ್ರ ಮತ್ತು ಸಾಂಪ್ರದಾಯಿಕ ಆಹಾರ ಪದ್ಧತಿಯ ಪಾತ್ರ ಕುರಿತ ಮಾಹಿತಿ ಕಾರ್ಯಕ್ರಮದಲ್ಲಿ ಅವರು ಉಪನ್ಯಾಸ ನೀಡಿದರು.

■ ಕೃಷಿಕರು ಹೆಚ್ಚಿನ ರಾಸಾಯನಿಕ ಗೊಬ್ಬರ ಬಳಸುತ್ತಿರುವುದರಿಂದ ಕ್ಯಾನ್ಸರ್‌ಕಾರಕ ಸೇರ್ಪಡೆ

ಬೆಂಗಳೂರು ಕಿದ್ವಾಯಿ ಕ್ಯಾನ್ಸರ್ ಸಂಸ್ಥೆಯ ಎಪಿಡಮಾಲಜಿ ವಿಭಾಗದ ಸಹಾಯಕ ಪ್ರಾಧ್ಯಾಪಕ ವಿಜಯ್ ಕ್ಯಾನ್ಸರ್ ಬಗ್ಗೆಮಾಹಿತಿಕಾರ್ಯಕ್ರಮ ನಡೆಸಿಕೊಟ್ಟರು. ಇಂದಿನ ದಿನಗಳಲ್ಲಿ ಕೃಷಿಕರುಹೆಚ್ಚಿನಪ್ರಮಾಣದಲ್ಲಿರಾಸಾಯನಿಕ ಗೊಬ್ಬರ ಬಳಸುತ್ತಿರುವುದರಿಂದ ಕ್ಯಾನ್ಸರ್‌ಕಾರಕಗಳು ಆಹಾರದ ಮೂಲಕ ದೇಹ ಸೇರುತ್ತಿದೆ. ಪ್ರಾಥಮಿಕ ಹಂತದಲ್ಲೇ ಕ್ಯಾನ್ಸರ್‌ನ್ನು ಗುರುತಿಸಿ ಚಿಕಿತ್ಸೆ ಪಡೆದುಕೊಂಡರೆ ಗುಣಮುಖಿರಾಗಬಹುದು ಎಂದು ತಿಳಿಸಿದರು.

ಕಾರ್ಯಕ್ರಮಉದ್ಘಾಟಿಸಿದಪಪಂ ಅಧ್ಯಕ್ಷೆ ಡಾ.ಲಕ್ಷ್ಮಿ ಎನ್. ಪ್ರಸಾದ್ ಅವರು, ಕ್ಯಾನ್ಸರ್ ಮುಕ್ತ ಸಮಾಜ ನಿರ್ಮಾಣಕ್ಕೆ ಎಲ್ಲರೂ ಸಹಕರಿಸಬೇಕೆಂದರು. ಜೆಸಿಬಿಎಂ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನಾ ಘಟಕವು ಅನೇಕ ಸಮಾಜ ಪರ ಕೆಲಸಗಳನ್ನು ನಿರ್ವಹಿಸಿ ಒಂದು ಮಾದರಿ ಘಟಕವಾಗಿ ರೂಪುಗೊಂಡಿದೆ. ಇದು ಶೃಂಗೇರಿ ಜನತೆಗೆ ಸಂತಸದ ಸುದ್ದಿ ಎಂದು ಹೇಳಿದರು.

ಪ್ರಾಚಾರ್ಯ ಡಾ.ಎಂ.ಸ್ವಾಮಿ, ವಾಣಿ ರವೀಂದ್ರ, ಪ್ರವೀಣ್, ರಾಷ್ಟ್ರೀಯಸೇವಾಯೋಜನೆಅಧಿಕಾರಿಗಳಾದ ಎ.ಜೆ.ಪ್ರಶಾಂತ್‌ಇತರರುಉಪಸ್ಥಿತರಿದ್ದರು. ಗುರುಮೂರ್ತಿ ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ತೊರೆಹಡ್ಲು, ಸುಬ್ರಹ್ಮಣ್ಯ ಇವರಿಂದ ಹಾಸ್ಯ ಲಾಸ್ಯ ಕಾರ್ಯಕ್ರಮ ನಡೆಯಿತು.

Scanned by CamScanner

ವಿಜಯ ಕರ್ನಾಟಕ VK

ಗುರುವಾರ, 7 ಡಿಸೆಂಬರ್ 2017, ಶಿವಮೊಗ್ಗ

ಬುದ್ಧಿವಂತಿಕೆ, ಜ್ಞಾಪಕಶಕ್ತಿ ದೇಶದ ಆಕರ್ಷಣೆ

■ ವಿಕ ಸುದ್ದಿಲೋಕ ಶೃಂಗೇರಿ

ಜಗತ್ತಿನ ಸರ್ವಶ್ರೇಷ್ಠ ವ್ಯಕ್ತಿಗಳಲ್ಲಿ ಹಲವರು ಭಾರತೀಯರಿದ್ದಾರೆ. ಇಲ್ಲಿಯವರ ಜ್ಞಾನಶಕ್ತಿ, ಬುದ್ಧಿವಂತಿಕೆ ವಿಶ್ವದ ಜನರನ್ನು ಭಾರತದೆಡೆಗೆ ಆಕರ್ಷಿಸುತ್ತಿದೆ ಎಂದು ವಿದ್ವಾನ್ ಶ್ರೀಕಂಠಭಟ್ ಹೇಳಿದರು.

ಅವರು ಮಂಗಳವಾರ ಕಿಗ್ಗಾದ ಶ್ರೀ ಅಭಿನವ ರಮಾನಂದ ಪ್ರೌಢಶಾಲೆಯಲ್ಲಿ ಶ್ರೀ ಜೆಸಿಬಿಎಂ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರದಲ್ಲಿ ರಾಷ್ಟ್ರಭಕ್ತಿ - ಯುವಶಕ್ತಿ ವಿಷಯದ ಬಗ್ಗೆ ಮಾತನಾಡಿದರು.

ವಿಶೇಷವಾದ ಗುಣವನ್ನು ಹೊಂದಿರುವ ಒಂದು ಪ್ರಾಂತ್ಯವನ್ನು ರಾಷ್ಟ್ರ ಎಂದು ವ್ಯಾಖ್ಯಾನಿಸಬಹುದು. ಪ್ರತಿಯೊಂದು ರಾಷ್ಟ್ರಕ್ಕೂ ಒಂದು ವಿಶೇಷ ಗುಣವಿರುವಂತೆ ಭಾರತಕ್ಕೆ ವಿಶ್ವಗುರುವಿನ ಸ್ಥಾನದಲ್ಲಿ ನಿಂತು ಕಲಿಸುವ ಗುಣವಿದೆ. ಒಂದು ದೇಶದ ಜನಸಂಖ್ಯಾ ಬಲಕ್ಕಿಂತ, ಮಾನವ ಸಂಪನ್ಮೂಲದ ಮೌಲ್ಯವು ಅಧಿಕವಾಗಿದ್ದು, ಅಂತಹ ಶ್ರೇಷ್ಠ ಮಾನವ ಸಂಪನ್ಮೂಲವನ್ನು ಭಾರತವು ಹೊಂದಿದೆ. ಉತ್ತಮರನ್ನು ಆದರ್ಶವಾಗಿರಿಸಿಕೊಂಡು, ಅಸಕ್ತಿ ಹಾಗೂ ಆತ್ಮಸ್ಥೈರ್ಯಗಳಿಂದ, ಗುರುಗಳ ಮಾರ್ಗದರ್ಶನದೊಂದಿಗೆ ಕಾರ್ಯವನ್ನು ಮಾಡಿದಾಗ ಮಾತ್ರ ಗುರಿಯ ಸಾರ್ಥಕತೆ ಪಡೆಯಬಹುದು ಎಂದರು.



ಶೃಂಗೇರಿ ತಾಲೂಕಿನ ಕಿಗ್ಗಾದಲ್ಲಿ ನಡೆಯುತ್ತಿರುವ ಎನ್ನೆಸ್ಸ್ ಶಿಬಿರದಲ್ಲಿ ವಿದ್ವಾನ್ ಶ್ರೀಕಂಠಭಟ್ ಮಾತನಾಡಿದರು.

ಪಿ.ಪಂ.ಸದಸ್ಯ ರಂಗನಾಥ್ ಮಾತನಾಡಿ, ಏಕಾಗ್ರತೆಯಿಂದ ಉನ್ನತ ಸಾಧನೆ ಸಾಧ್ಯ. ಸಮಯ ಪಾಲನೆ ಹಾಗೂ ಉನ್ನತ ಗುರಿಯಿಂದ ಜೀವನದಲ್ಲಿ ಸಫಲತೆಯನ್ನು ಕಾಣಬಹುದು ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಸೂರ್ಯೋದು ಕೃಷ್ಣಮೂರ್ತಿ, ವಿಶ್ವವು ಇಂದು ಭಾರತದೆಡೆಗೆ ನೋಡುತ್ತಿರುವುದು ಸಂಸ್ಕೃತಿಗಾಗಿಯೇ ಹೊರತು ಸಂಪತ್ತಿಗಲ್ಲ. ಇಂತಹ ಉನ್ನತ ಸಂಸ್ಕೃತಿಯನ್ನು ಉಳಿಸುವ ಕರ್ತವ್ಯ ನಿಮ್ಮದು ಎಂದರು. ಗೋಪಾಲ ಹೆಗ್ಡೆ ನಾಗರಾಜ ಹಂದಿಗದ್ದೆ ರಾಷ್ಟ್ರೀಯ ಸೇವಾ ಯೋಜನೆಯ ಅಧಿಕಾರಿಗಳಾದ ಎ.ಜಿ. ಪ್ರಶಾಂತ್, ಬಿ.ಡಿ.ಸಂತೋಷ್ ಉಪಸ್ಥಿತರಿದ್ದರು. ಭವ್ಯ ನಿರೂಪಿಸಿ, ಸುಮಂಗಲಿ ಸ್ವಾಗತಿಸಿ ಅರ್ಚನ ವಂದಿಸಿದರು.

Scanned by CamScanner

ಕನ್ನಡಪ್ರಭ
ಗುರುವಾರ 7.12.2017



ಶೃಂಗೇರಿ ತಾಲೂಕಿನ ಕಿಗ್ಗಾ ಪ್ರೌಢ ಶಾಲಾ ಸಭಾಂಗಣದಲ್ಲಿ ಅಂತಾರಾಷ್ಟ್ರೀಯ ಏಡ್ಸ್ ಪೀಡಿತರ ಹಾಗೂ ಅಂತಾರಾಷ್ಟ್ರೀಯ ಅಂಗವಿಕಲರ ದಿನಾಚರಣೆ ಅಂಗವಾಗಿ ನಡೆದ ಕಾನೂನು ಅರಿವು ನೆರವು ಕಾರ್ಯ ಕ್ರಮದಲ್ಲಿ ನ್ಯಾಯವಾದಿ ಕೆ.ಆರ್.ಸುರೇಶ್ ಸಾಮಾನ್ಯ ಕಾನೂನು ಕುರಿತು ಉಪನ್ಯಾಸ ನೀಡಿದರು.

Scanned by CamScanner

ಗುರುವಾರ • ಡಿಸೆಂಬರ್ 7, 2017 ಪ್ರಜಾವಾಣಿ

ರಾಷ್ಟ್ರೀಯ ಸೇವಾ ಯೋಜನೆ ಶಿಬಿರ

ಮೌಲ್ಯದ ಪಾಠವೇ ದಾರಿದೀಪ

ಪ್ರಜಾವಾಣಿ ವಾರ್ತೆ



ಶೃಂಗೇರಿ ತಾಲ್ಲೂಕಿನ ಕಿಗ್ಗಾದ ಅಭಿನವ ರಮಾನಂದ ಪ್ರೌಢಶಾಲೆಯಲ್ಲಿ ಜೆಸಿಬಿಎಂ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರವನ್ನು ಶಾರದಾ ಮಠದ ಆಡಳಿತಾಧಿಕಾರಿ ಡಾ.ವಿ.ಆರ್. ಗೌರಿಶಂಕರ್ ಉದ್ಘಾಟಿಸಿದರು.

ಶೃಂಗೇರಿ: ವಿದ್ಯಾರ್ಥಿಗಳ ಪುಸ್ತಕದ ಕಲಿಕೆಗಿಂತ ಜೀವನ ಮೌಲ್ಯದ ಪಾಠವೇ ಬದುಕಿಗೆ ದಾರಿದೀಪ. ಇದನ್ನು ರಾಷ್ಟ್ರೀಯ ಸೇವಾ ಯೋಜನೆ ಶಿಬಿರಗಳು ಕಲಿಸುತ್ತವೆ. ನಮ್ಮ ಗ್ರಾಮದ ಉದ್ಧಾರ ನಮ್ಮಿಂದಲೇ ಸಾಧ್ಯ. ಅದು ನಮ್ಮಿಂದಲೇ ಆಗಬೇಕು. ಬೇರೆಯವರ ಬಳಿ ಕೈಚಾಚುವುದಕ್ಕಿಂತ ನಾವೆಲ್ಲಾ ಕೈ ಜೋಡಿಸಬೇಕು ಎಂದು ಶಾರದಾ ಮಠದ ಆಡಳಿತಾಧಿಕಾರಿ ಡಾ.ವಿ.ಆರ್. ಗೌರಿಶಂಕರ್ ಹೇಳಿದರು.

ಶೃಂಗೇರಿ ತಾಲ್ಲೂಕಿನ ಕಿಗ್ಗಾದ ಅಭಿನವ ರಮಾನಂದ ಪ್ರೌಢಶಾಲೆಯಲ್ಲಿ ಜೆಸಿಬಿಎಂ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ 7 ದಿನಗಳ ವಾರ್ಷಿಕ ವಿಶೇಷ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ರಾಷ್ಟ್ರೀಯ ಸೇವಾ ಯೋಜನೆಯ ಶಿಬಿರವು ಒಟ್ಟಿಗೆ ಬಾಳುವುದನ್ನು ಕಲಿಸಲಿದ್ದು, ಇದನ್ನು ಯಾವ ಕಾಲೇಜು ಶಿಕ್ಷಣವೂ ನೀಡಲಾರದು.

ಜನರ ಜೀವನ ಶೈಲಿಯ ವ್ಯತ್ಯಾಸಗಳು, ಸುಖ ದುಃಖಗಳ ಪರಿಚಯವಾಗಿ ಸೇವಾ ಪ್ರವೃತ್ತಿಯನ್ನು ಬೆಳೆಸಿಕೊಳ್ಳುವ ಮನೋಭಾವ ಬೆಳೆಯುತ್ತದೆ ಎಂದು ಅಭಿಪ್ರಾಯಪಟ್ಟರು.

ಶಾಸಕ ಡಿ.ಎನ್. ಜೀವರಾಜ್ ಮಾತನಾಡಿ, 'ಗ್ರಾಮಸ್ಥರೊಂದಿಗೆ ಶಿಬಿರಾರ್ಥಿಗಳು ಉತ್ತಮ ಬಾಂಧವ್ಯವನ್ನು ಬೆಳೆಸಿಕೊಳ್ಳಬೇಕು. ಕೆಲಸ ದೊಂದಿಗೆ ಸೌಹಾರ್ದವನ್ನು ಕಲಿಸುವ ಏಕತೆಯ ಪ್ರತಿರೂಪವಾಗಲಿ' ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಡಾ.ಎಂ. ಸ್ವಾಮಿ ಮಾತನಾಡಿ, 'ಸೇವೆ ಎಂದರೆ ಯುದ್ಧ ಭೂಮಿಯಲ್ಲಿ ಮಾತ್ರವಲ್ಲ. ಮನೆ, ಮನಸ್ಸುಗಳ ಕೈಂಕರ್ಯ. ಯುಪಶಕ್ತಿಯಿಂದ ಸದೃಢ ದೇಶದ ನಿರ್ಮಾಣ ಸಾಧ್ಯ ಎಂದರು.

ಹಿರಿಯ ಸ್ವಯಂ ಸೇವಕರಾದ ನಾಗರಾಜ ಕೂವೆಯವರ 'ನನ್ನಯ ಹಕ್ಕಿ ಬಿಟ್ಟೆ ಬಿಟ್ಟೆ.... ಹರೆಯದ ಪಿಸುಮಾತು' ಪುಸ್ತಕ ಬಿಡುಗಡೆಗೊಳಿಸಲಾಯಿತು. ಕ್ರೀಡಾ ಕ್ಷೇತ್ರದಲ್ಲಿ ಸಾಧನೆ ಮಾಡಿದ ಅಂಕಿತಾ ಅವರನ್ನು ಈ ವೇಳೆ ಸನ್ಮಾನಿಸಲಾಯಿತು.

ಕಾಲೇಜು ಆಡಳಿತ ಮಂಡಳಿಯ ಶೇಖರ್‌ರಾವ್, ರಾಜೇಂದ್ರರಾವ್, ರೈತಪರ ಚಿಂತಕರಾದ ಸಚಿನ್ ಮೀಗ, ಜಿಲ್ಲಾ ಪಂಚಾಯಿತಿ ಸದಸ್ಯರಾದ ಬಿ. ಶಿವಶಂಕರ್, ತಾಲ್ಲೂಕು ಪಂಚಾಯಿತಿ ಅಧ್ಯಕ್ಷೆ ಜಯಶೀಲ ಚಂದ್ರಶೇಖರ್, ಅಭಿನವ ರಮಾನಂದ ಪ್ರೌಢಶಾಲೆಯ ಮುಖ್ಯ ಶಿಕ್ಷಕಿಯಾದ ಪೂರ್ಣಿಮಾ ಉಪಸ್ಥಿತರಿದ್ದರು.

ಮೇಘನಾ, ಶ್ರುತಿ ನಿರೂಪಿಸಿದರು. ಶ್ರೀದೇವಿ ಪ್ರಾರ್ಥಿಸಿದರು. ಎ.ಜಿ. ಪ್ರಶಾಂತ್ ಸ್ವಾಗತಿಸಿದರು. ಶಿಬಿರಾಧಿಕಾರಿಗಳಾದ ಅದಿತಿ ಕಾಮತ್ ವಂದಿಸಿದರು.

ಮುಖ್ಯಾಂಶಗಳು

- ಶಿಬಿರವು ಒಟ್ಟಿಗೆ ಬಾಳುವುದನ್ನು ಕಲಿಸುತ್ತದೆ
- ಎನ್‌ಎಸ್‌ಎಸ್ ಪ್ರಯೋಜನಕಾರಿ
- ಗ್ರಾಮ ಸ್ವಚ್ಛತೆ ಹಾಗೂ ತರಬೇತಿ ಶಿಬಿರ

Mangaluru

Scanned by CamScanner

ಕನ್ನಡಪ್ರಭ
ಬುಧವಾರ 6.12.2017

ಒಗ್ಗಟ್ಟಿನಲ್ಲಿ ಬಲ | ಎನ್‌ಎಸ್‌ಎಸ್ ವಿಶೇಷ ವಾರ್ಷಿಕ ಶಿಬಿರದಲ್ಲಿ ರಾಜ್ಯಾಧ್ಯಕ್ಷ ಸಚಿನ್ ಮೀಗಾ

ಸಂಘಟನೆ ಕೊರತೆಯಿಂದಾಗಿ ರೈತರ ಹೋರಾಟ ವಿಫಲ

• ಕಸ್ತೂರಿ ಪ್ರಭ ವಾರ್ತೆ ಶೃಂಗೇರಿ

ರೈತರು ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ವಿರಂತರವಾಗಿ ಹೋರಾಟ ನಡೆಸುತ್ತಿದ್ದರೂ ಎಲ್ಲ ಹೋರಾಟಗಳು ಸಫಲಗೊಳ್ಳುತ್ತಿಲ್ಲ. ಕಾರಣ ರೈತರಲ್ಲಿ ಒಗ್ಗಟ್ಟು ಇಲ್ಲ. ಸಂಘಟನಾತ್ಮಕ ಮನೋಭಾವನೆ ಇಲ್ಲದಿರುವುದೇ ರೈತಹೋರಾಟಗಳು ವಿಫಲಗೊಳ್ಳಲು ಕಾರಣ ಎಂದು ಕೆಪಿಸಿಸಿ ಕಿಸಾನ್ ಘಟಕದ ರಾಜ್ಯಾಧ್ಯಕ್ಷ ಸಚಿನ್ ಮೀಗಾ ಹೇಳಿದರು. ಕ್ಯಾದಿಗೆ ಅಂಚೆಯ ತಮಾನಂದ ಜ್ಞಾನಜ್ಯೋತಿ ಶಾಲೆಯಲ್ಲಿ ನಡೆಯುತ್ತಿರುವ ಜೆಸಿಐ ಎಂ ಕಾಲೇಜಿನ ಎನ್‌ಎಸ್‌ಎಸ್ ವಿಶೇಷ ವಾರ್ಷಿಕ ಶಿಬಿರದಲ್ಲಿ ಅವರು ಮಾತನಾಡಿದರು.



ಶೃಂಗೇರಿ ತಾ ಕ್ಯಾದಿಗೆಯಲ್ಲಿ ನಡೆದ ಜೆಸಿಐ ಎಂ ಕಾಲೇಜಿನ ಎನ್‌ಎಸ್‌ಎಸ್ ಶಿಬಿರದಲ್ಲಿ ಕೆಪಿಸಿಸಿ ಕಿಸಾನ್ ಘಟಕದ ರಾಜ್ಯಾಧ್ಯಕ್ಷ ಸಚಿನ್ ಮೀಗಾ ಮಾತನಾಡಿದರು.

ರೈತರ ಎಲ್ಲ ಹೋರಾಟಗಳಿಗೆ ಸಮರ್ಪಕ ಬೆಂಬಲ ಸಿಗುತ್ತಿಲ್ಲ. ಹೋರಾಟಕ್ಕೆ ರಾಜಕಾರಣದ ಬೆಂಬಲ ಸಿಗಬೇಕು. ಇದು ಸಿಗುತ್ತಿಲ್ಲ. ಒಂದು ಪಕ್ಷದಲ್ಲಿನ ರೈತರು ಇನ್ನೊಂದು ಪಕ್ಷದಲ್ಲಿನ ರೈತರ ಹೋರಾಟಕ್ಕೆ ಬೆಂಬಲ ನೀಡುವುದಿಲ್ಲ. ಇಲ್ಲಿ ರೈತರ ಪಕ್ಷ ಮುಖ್ಯವಲ್ಲ. ರೈತರ ಸಮಸ್ಯೆ ಮುಖ್ಯ. ಎಲ್ಲರು ಪಕ್ಷಾತೀತವಾಗಿ ಹೋರಾಟ ನಡೆಸಬೇಕು ಎಂದರು.

ಗುಜರಾತ್‌ನಲ್ಲಿ ಜಾತಿ ಮೀಸಲಾತಿ ಹೋರಾಟಕ್ಕೆ ಲಕ್ಷಾಂತರ ಜನ ಸೇರುತ್ತಾರೆ. ಸಾಯಿಕಟ್ಟಕ್ಕೆ ಬೆಂಬಲ ನೀಡುತ್ತಾರೆ. ಇತ್ತೀಚೆಗೆ ನಡೆದ ಗಾರ್ಮೆಂಟ್ ಕಾರ್ಮಿಕರು ಮೆಜೆಸ್ಟಿಕ್ ಕೇಳಿದ ಹಾಕಿದ ಕೇಂದ್ರ ಸರ್ಕಾರದ ವಿರುದ್ಧ ಹೋರಾಡುತ್ತಾರೆ. ಬೀದಿಗಿಳಿಯುತ್ತಾರೆ, ಬಸ್ ಗಾಜನ್ನು ಒಡೆಯುತ್ತಾರೆ. ರಾತ್ರಿ ಅಗುವುದರೊಳಗೆ ಸರ್ಕಾರ ಕಾರ್ಮಿಕರ ಹೋರಾಟಕ್ಕೆ ಮಣಿದು ಆದೇಶವನ್ನು ಹಿಂಪಡೆದುಕೊಳ್ಳುತ್ತದೆ. ಶೇ.೨೫ಷ್ಟು ಇರುವ ರೈತರು ಯಾವ ಹೋರಾಟಕ್ಕೆ ಸರ್ಕಾರಗಳು ಮಣಿಯದೇ ಕೇವಲ ಶೇ.೨ರಷ್ಟು ಇರುವ ಗಾರ್ಮೆಂಟ್ ಕಾರ್ಮಿಕರ ಹೋರಾಟಕ್ಕೆ ಮಣಿಯುತ್ತದೆ ಯೋಚಿಸಿಬೇಕಾದ ವಿಷಯ. ರೈತರಲ್ಲಿ ಒಗ್ಗಟ್ಟಿಲ್ಲ. ಸಂಘಟನೆಯಾಗಿ, ಒಗ್ಗಟ್ಟಾಗಿ ಹೋರಾಟ ಮಾಡಿದರೆ ಸರ್ಕಾರಗಳು ರೈತರ ಹೋರಾಟಗಳಿಗೆ ತಲೆಬಾಗಲೇ ಬೇಕಾಗುತ್ತದೆ.

ಮಲೆನಾಡು ಭಾಗದಲ್ಲಿ ಹೆಚ್ಚಿದ ಎಲೆರೋಗ ಸಮಸ್ಯೆ, ಮಿಶ್ರಮಳ್ಳು ಸಮಸ್ಯೆ, ಕುದುರೆಮುಖ ರಾಷ್ಟ್ರೀಯ ಉದ್ಯಾನವನ ಸಮಸ್ಯೆ ಇತ್ಯಾದಿ ಸಮಸ್ಯೆಗಳಿಂದ ಜನರು ಸಂಕಷ್ಟದಲ್ಲಿದ್ದಾರೆ. ಇವುಗಳನ್ನು ಗಂಭೀರವಾಗಿ ಪರಿಗಣಿಸಿ ಪರಿಹಾರ ನಡೆಸುವ ಸ್ಪಷ್ಟ ನಿಲುವನ್ನು ಸರ್ಕಾರಗಳು ತೆಗೆದುಕೊಳ್ಳಬೇಕಿದೆ. ಈಭಾಗದ ಸಮಸ್ಯೆಗಳನ್ನು ಕೂಲಂಕುಷವಾಗಿ ಅಧ್ಯಯನ ಮಾಡಿದ ಶೃಂಗೇರಿ ಕ್ಷೇತ್ರದ ಅಭಿವೃದ್ಧಿಗೆ ೨೦ ಅಂಶದ ಅಡಳಿತಾತ್ಮಕ ಡಾ. ಗೌರೀಶಂಕರ್ ಅವರಿಗೆ ಮನವಿ ಸಲ್ಲಿಸಿದ್ದಾರೆ. ಅಭಿವೃದ್ಧಿ ಧಾರ್ಮಿಕ ಕ್ಷೇತ್ರದ ಮುಖ್ಯಮಂತ್ರಿ ಎಂದರೆ ಕಪ್ಪಾಗಲಾರದು. ಮಲೆನಾಡು ಗ್ರಾಮೀಣ ಭಾಗಗಳಲ್ಲಿ ಎನ್‌ಎಸ್‌ಎಸ್ ಶಿಬಿರಗಳು ನಡೆಯುತ್ತಿರುವ ಒಳ್ಳೆಯ ಕೆಲಸವಾಗಿದೆ. ವಿದ್ಯಾರ್ಥಿಗಳು ಶಿಬಿರದ ಸದ್ಬಳಕೆ ಮಾಡಿಕೊಳ್ಳಬೇಕು ಎಂದರು. ಪ್ರಾಚಾರ್ಯ ಡಾ. ಎಂ.ಸ್ವಾಮಿ ಕಾರ್ಯಕ್ರಮದ ಆಧ್ಯಕ್ಷತೆ ವಹಿಸಿದ್ದರು. ಕಾಣಕಿ ಡಿ.ಎನ್. ಜೀವರಾಜ್, ಸಾಲಾಧ್ಯಕ್ಷೆ ವಿದ್ಯಾ ಸಮಿತಿಯ ಕೆ.ಸಿ. ರಾಜೇಂದ್ರ ರಾವ್, ಕಾಮಗಾರಿ ಅಧ್ಯಕ್ಷೆ ಲಯಶೀಲ, ಬಿ.ಸಿವಶಂಕರ್ ಮತ್ತಿತರರು ಇದ್ದರು.

Scanned by CamScanner

ಜೀವನದ ಮೌಲ್ಯ ಬದುಕಿಗೆ ದಾರಿ ದೀಪ

ವಿಶೇಷ ಸುದ್ದಿಲೋಕ ಕೃಷ್ಣಗೇರಿ

ರಾಷ್ಟ್ರೀಯ ಸೇವಾ ಯೋಜನೆಯ ಶಿಬಿರ ವಿದ್ಯಾರ್ಥಿಗಳಿಗೆ ಶಿಕ್ಷಣದೊಂದಿಗೆ ಜೀವನದ ಪಾಠ ಕಲಿಸುತ್ತದೆ ಎಂದು ಶ್ರೀಮಠದ ಆಡಳಿತಾಧಿಕಾರಿ ವಿ.ಆರ್.ಗೌರಿ ಶಂಕರ್ ಹೇಳಿದರು.

ಕೃಷ್ಣಗಿರಿ ಶ್ರೀ ಅಭಿನವ ರಾಮಾನಂದ ಪ್ರೌಢ ಶಾಲೆಯಲ್ಲಿ ಹಮ್ಮಿಕೊಂಡಿರುವ ಏಳು ದಿನದ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ಶಿಬಿರದ ಶಿಬಿರಕ್ಕೆ ಸೋಮವಾರ ಚಾಲನೆ ನೀಡಿ ಮಾತನಾಡಿದರು.

ವಿದ್ಯಾರ್ಥಿಗಳ ಪುಸ್ತಕದ ಕಲಿಕೆಗಿಂತ ಜೀವನ ಮೌಲ್ಯದ ಪಾಠವೇ ಬದುಕಿಗೆ ದಾರಿ ದೀಪ. ಇಂತಹ ಜೀವನ ಪಾಠಗಳನ್ನು ಎನ್.ಎಸ್.ಎಸ್ ಶಿಬಿರ ಕಲಿಸುತ್ತದೆ. ನಮ್ಮ ಗ್ರಾಮದ ಉದ್ಧಾರ ನಮ್ಮಿಂದಲೇ ಸಾಧ್ಯ. ಅದು ನಮ್ಮಿಂದಲೇ ಆಗಬೇಕು. ಬೇರೆಯವರೆಗೆ ಕೈ ಚಾಚುವುದಕ್ಕಿಂತ ನಾವೆಲ್ಲಾ ಒಟ್ಟಾಗಿ ಕೈ ಜೋಡಿಸೋಣ. ಆಗ ಯಾವ ಕೆಲಸವನ್ನಾದರೂ ಮಾಡಬಹುದು ಎಂದರು.

ಪಾಠ ಪ್ರವಚನ ಜೀವಾಳ, ವಿದ್ಯಾರ್ಥಿಗಳು ಗ್ರಾಮಸ್ಥರೊಂದಿಗೆ ಉತ್ತಮ ಬಾಂಧವ್ಯವನ್ನು ಬೆಳೆಸಿಕೊಳ್ಳಬೇಕು. ಕಲಿಸುವುದರೊಂದಿಗೆ ಕೂಡಿ ಬಾಳುವುದು ಸೌಹಾರ್ದತೆಯನ್ನು ಶಿಬಿರದಲ್ಲಿ ಕಲಿಯಬೇಕು. ಶಿಬಿರದಲ್ಲಿ ಬಿಡದ ಜೀವನ ಶೈಲಿಯು ಶುಚ್ಛತೆ, ಸುಖ-ದುಃಖದ ವಿಚಿತ್ರವಾಗಿ ಸೇವಾ ಪ್ರವೃತ್ತಿಯನ್ನು ಬೆಳೆಸಿಕೊಳ್ಳುವ ಮನೋಭಾವ ಬೆಳೆಯುತ್ತದೆ ಎಂದರು.

ಇದೇ ಮೊಳೆ ಎನ್.ಎಸ್.ಎಸ್ ಶಿಬಿರ ಸ್ವಯಂ ಸೇವಕ ಜಾಗರಾಜು ಕೂಡೆಯವರ 'ಪನ್ನಂದಿ ಹಕ್ಕಿ ಬಿಟ್ಟೆ ಬಿಟ್ಟೆ ಹಾಗೂ 'ಹರಿಯದೆ ತಿರುಮಕ್ಕು' ಎಂಬ ಪುಸ್ತಕ ಬಿಡುಗಡೆಗೊಂಡಿತು. ಕ್ರೀಡಾ ಕ್ಷೇತ್ರದ ಸಾಧಕ ಆಕಾಶನನ್ನು ಸನ್ಮಾನಿಸಲಾಯಿತು.

ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ಶಿಬಿರ

ಪ್ರಾಂಶುಪಾಲ ಡಾ.ಎಂ.ಸ್ವಾಮಿ ಮಹಿಸಿದ್ದರು. ಜಿ.ಪಂ.ಸದಸ್ಯ ಬಿ.ಶಿವಶಂಕರ್, ತಾ.ಪಂ.ಅಧ್ಯಕ್ಷೆ ಅಯಾಶಿಲ, ರೈತ ಮುಖಂಡ ಸುಬ್ಬಾ ಪಂಗಾ, ಪ್ರೌಢ ಶಾಲೆ ಮುಖ್ಯ ಶಿಕ್ಷಕಿ ಪೂರ್ಣಿಮಾ ಉಪಸ್ಥಿತರಿದ್ದರು.

ಶ್ರೀದೇವಿ ವಾರ್ಥಿಸಿ, ಎನ್.ಎನ್.ಎಸ್. ಅಧಿಕಾರಿ ಎ.ಜೆ. ಪ್ರಶಾಂತ್ ಸ್ವಾಗತಿಸಿ, ಶಿಬಿರಾಧಿಕಾರಿ ಅದಿತಿ ಗಾಮತ್ ವಂದಿಸಿದರು. ಮೇಘನಾ, ಭೃತಿ ನಿರೂಪಿಸಿದರು.

ಶಿಕ್ಷಕರ ಜ್ಯೇಷ್ಠತಾ ಪಟ್ಟಿ ಪ್ರಕಟ

ಚಿಕ್ಕಮಗಳೂರು: ಜಿಲ್ಲೆಯ ಸರಕಾರಿ ಪ್ರಾಥಮಿಕ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರು ಹಾಗೂ ಸಹಶಿಕ್ಷಕರ ಅಂತಿಮ ಜ್ಯೇಷ್ಠತಾ ಪಟ್ಟಿ ಪ್ರಕಟಿಸಲಾಗಿದೆ. ಶಿಕ್ಷಕರು ಪಟ್ಟಿಯಲ್ಲಿ ತಮ್ಮ ಜ್ಯೇಷ್ಠತೆಯನ್ನು ಗಮನಿಸಿಕೊಳ್ಳುವಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎನ್.ಜಿ. ಬಸವರಾಜು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಕೃಷ್ಣಗಿರಿ ತಾಲೂಕಿನ ಕೃಷ್ಣಗಿರಿ ಶ್ರೀ ಅಭಿನವ ರಾಮಾನಂದ ಪ್ರೌಢ ಶಾಲೆಯಲ್ಲಿ ಹಮ್ಮಿಕೊಂಡಿರುವ ಏಳು ದಿನದ ಎನ್.ಎಸ್.ಎಸ್ ವಾರ್ಷಿಕ ವಿಶೇಷ ಶಿಬಿರಕ್ಕೆ ವಿ.ಆರ್.ಗೌರಿಶಂಕರ್ ಚಾಲನೆ ನೀಡಿದರು.

ಪಾರಂಪರಿಕ ಉಚ್ಚಿ

ವಿಶೇಷ ಸುದ್ದಿಲೋಕ ಬೆಳ್ಳಾವರಿ

ಅಜ್ಜಂಪುರ ಸಮೀಪ ನಲ್ಲೀಪುರ ಹಿರೇಮಠದಲ್ಲಿ ಪಾರಂಪರಿಕ ಊಟದ ಆರೋಗ್ಯ ಶಿಬಿರ ಮತ್ತು ಸಂವಾದ ಕಾರ್ಯಕ್ರಮ ನಂದೀಶ್ವರ ಶಿವಾಚಾರ್ಯ ಸ್ವಾಮಿಗಳ ದಿವ್ಯ ಸಾನ್ನಿಧ್ಯದಲ್ಲಿ ಭಾನುವಾರ ಜರುಗಿತು.

ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಕಾಲಿಕು ಪಾರಂಪರಿಕ ವೈದ್ಯರ ಸಂಘದ ಅಧ್ಯಕ್ಷ ಎಂ.ಸಿ.ನೈರಲಿಂಗನ್ನ ಬೀಳ ವೈದ್ಯ ಪದ್ಧತಿಗಿಂತ ಪ್ರಮುಖ ಚಿಕಿತ್ಸಾ ರೂಪದಲ್ಲಿ ಬಾಳೆಮರ ವೈದ್ಯ ಪದ್ಧತಿ ಆಳವಡಿಸಿಕೊಳ್ಳಬೇಕೆಂದರು.

ಕಾರ್ಯಕ್ರಮ ಉದ್ಘಾಟಿಸಿದ ರಾಜ್ಯಾಧ್ಯಕ್ಷ ನೆಲ್ಲೂರ ಗುಮಾಸ್ತರವ್ವ ಪಾರಂಪರಿಕ ವೈದ್ಯ ಪದ್ಧತಿಯನ್ನು ಹಿತ್ತಲು ಗಿಡ ಮದ್ದು ಎನ್ನುತ್ತಾರೆ. ಹಿತ್ತಲು ಗಿಡವನ್ನು ಮದ್ದಾಗಿ ಬಳಸಿ, ಬೆಳೆಸಿ ಎಂದರು.

ವೈದ್ಯ ಸಮಾಲೋಚಕ ಮಾತನಾಡಿ, ಯಾವುದೇ ಸೈಡ್ ಎಫೆಕ್ಟ್ ಇಲ್ಲದ ಆಯುರ್ವೇದ ಮನೆ ಮದ್ದಾಗಳು ಸುಮಾರು ಕಾಯಿಲೆಗೆ ವಿಷಧಿಯಾಗುತ್ತವೆ. ಇಂಟ ವೈದ್ಯ ಪದ್ಧತಿಯಲ್ಲಿ ಕೆಲ ಪದ್ಧಗಳು ಅವಶ್ಯಕ ಅವುಗಳ ಬಾಳಿ ಪಾಲನ ಅವಶ್ಯಕ ಎಂದರು.

ಸಿ.ತಿಮ್ಮರಾಮ ಸ್ವಾಗತಿಸಿ, ನಿರೂಪಿಸಿದರು. ಶಾಗದಕಟ್ಟೆ ಚಿಂತ ಪ್ರಕಾಶ್ ವಂದಿಸಿದರು.

Scanned by CamScanner

ಸಂಯುಕ್ತ ಕರ್ನಾಟಕ ಸೋಮವಾರ, 4 ಡಿಸೆಂಬರ್, 2017,

ಇಂದಿನಿಂದ ಎನ್ ಎಸ್ ಎಸ್ ಶಿಬಿರ

ಶೃಂಗೇರಿ: ಜೆಸಿಬಿಎಂ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರ ಡಿ.4ರಿಂದ ಡಿ.10ರ ವರೆಗೆ ಕಿಗ್ಗದ ಅಭಿನವ ರಾಮಾನಂದ ಪ್ರೌಢಶಾಲೆಯಲ್ಲಿ ನಡೆಯಲಿದೆ ಎಂದು ಎನ್.ಎಸ್.ಎಸ್.ನ ಸಂಪರ್ಕ ಅಧಿಕಾರಿ ಎ.ಜಿ.ಪ್ರಶಾಂತ್ ತಿಳಿಸಿದರು.

ಶ್ರೀಮಠದ ಆಡಳಿತಾಧಿಕಾರಿ ಡಾ.ವಿ.ಆರ್.ಗೌರಿಶಂಕರ್ ಶಿಬಿರ ಉದ್ಘಾಟಿಸುವರು. ಶಾಸಕ ಡಿ.ಎನ್.ಜೀವರಾಜ್ ಅತಿಥಿಗಳಾಗುವರು.

ಪ್ರಾಂಶುಪಾಲ ಡಾ.ಸ್ವಾಮಿ ಎಂ., ಎ.ಜಿ.ಪ್ರಶಾಂತ್ ಹಾಗೂ ಸಂತೋಷ ಬಿ.ಡಿ. ಪ್ರೌಢಶಾಲೆಯ ಆಡಳಿತಾಧಿಕಾರಿ ಕೆ.ಎಸ್. ರಾಜೇಂದ್ರರಾವ್ ಉಪಸ್ಥಿತರಿರುವರು. ವಿದ್ವತ್ ಶ್ರೀಕಂಠಭಟ್ ಉಪನ್ಯಾಸ, ವಕೀಲರ ಸಂಘದಿಂದ ಕಾನೂನು ಅರಿವು-ನೆರವು, ತೋಟಗಾರಿಕಾ ಇಲಾಖೆಯ ಕೃಷ್ಣ ಅವರಿಂದ ಅಣಬೆ ಕೃಷಿ-ಮಾಹಿತಿ ಕಾರ್ಯಾಗಾರ, ಡಾ.ಕೆ.ಶ್ರೀಪತಿ ಹಳಗುಂದ ಕುವೆಂಪು ಸಾಹಿತ್ಯ ಕುರಿತ ಉಪನ್ಯಾಸ, ಜೆಸಿಬಿಎಂ ಕಾಲೇಜಿನ ಆಡಳಿತ ಮಂಡಳಿ ಮಣಿಪಾಲದ ಅಕಾಡೆಮಿ ಆಫ್ ಜನರಲ್ ಎಜುಕೇಶನ್‌ನ ಅಮೃತ ಮಹೋತ್ಸವದ ನೆನಪಿನಲ್ಲಿ ಡಿ.8ರಂದು ಶಿಬಿರದಲ್ಲಿ ಬೆಂಗಳೂರಿನ ಕಿದ್ವಾಯಿ ಸ್ಮಾರಕ ಕ್ಯಾನ್ಸರ್ ಆಸ್ಪತ್ರೆ ವತಿಯಿಂದ ಉಚಿತ ತಪಾಸಣಾ ಶಿಬಿರ ಮತ್ತು ಶಾರದಾ ಧನ್ವಂತರಿ ಆಸ್ಪತ್ರೆಯ ಬೆಂಗಳೂರು ಶಾಖೆಯ ವತಿಯಿಂದ ನೇತ್ರ ತಪಾಸಣಾ ಶಿಬಿರ ಆಯೋಜಿಸಲಾಗಿದೆ ಎಂದು ಪ್ರಶಾಂತ್ ತಿಳಿಸಿದರು.

ರಾಮಾನಂದ ಪ್ರೌಢಶಾಲೆಯ ಅಧ್ಯಾಪಕ ಬಿ.ಎಲ್.ರವಿಕುಮಾರ್ ಉಪಸ್ಥಿತರಿದ್ದರು.

ಪ್ರಬಂಧ ಸ್ಪರ್ಧೆ: ಸಾಕ್ಷಿ ಸಾಗರ್ ಪ್ರಥಮ

ಸಾಗರ: ಇಲ್ಲಿನ ಸಂತ ಜೋಸೆಫ್ ಆಂಗ್ಲ ಮಾಧ್ಯಮ ಪ್ರೌಢಶಾಲೆಯ 10ನೇ ತರಗತಿ ವಿದ್ಯಾರ್ಥಿನಿ ಸಾಕ್ಷಿ ಸಾಗರ್ ಮಕ್ಕಳ ದಿನಾಚರಣೆ ಅಂಗವಾಗಿ ರೋಟರಿ ಇನ್ನರ್‌ವ್ಹೀಲ್ ಕ್ಲಬ್ ಏರ್ಪಡಿಸಿದ್ದ ತಾಲ್ಲೂಕು ಮಟ್ಟದ 'ಸದೃಢ ದೇಶ ನಿರ್ಮಾಣದಲ್ಲಿ ಯುವಜನರ ಪಾತ್ರ' ಪ್ರಬಂಧ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿದ್ದಾರೆ.

ಸಾಕ್ಷಿ ಸಾಗರ್ ಅವರು ಪತ್ರಕರ್ತ ಎಚ್.ಬಿ.ರಾಘವೇಂದ್ರ ಹಾಗೂ ಎಲ್.ಬಿ. ಕಾಲೇಜಿನ ಕನ್ನಡ ಉಪನ್ಯಾಸಕಿ ಸರೋಜ ಅವರ ಪುತ್ರಿಯಾಗಿದ್ದಾಳೆ.

Scanned by CamScanner

ಕನ್ನಡಪ್ರಭ
ಮಂಗಳವಾರ 5.12.2017



ವ್ಯಕ್ತಿತ್ವ ವಿಕಸನಕ್ಕೆ ಎನ್‌ಎಸ್‌ಎಸ್ ಪೂರಕ

ಶೃಂಗೇರಿ: ಎನ್‌ಎಸ್‌ಎಸ್ ಸಂಘಟನೆ ವಿದ್ಯಾರ್ಥಿಗಳಲ್ಲಿ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿದೆ ಎಂದು ಶ್ರೀ ಮಠದ ಆಡಳಿತಾಧಿಕಾರಿ ಡಾ. ವಿ.ಆರ್. ಗೌರೀ ಶಂಕರ್ ಹೇಳಿದರು. ತಾಲೂಕಿನ ಮರ್ಕಲ್ ಪಂಚಾಯಿತಿ ಕಿಗ್ಗಾ ಅಭಿನವ ರಮಾನಂದ ಪ್ರೌಢಶಾಲೆಯಲ್ಲಿ ಜೆಸಿಬಿಎಂ ಕಾಲೇಜಿನ ಎನ್‌ಎಸ್‌ಎಸ್ ವಾರ್ಷಿಕ ಶಿಬಿರ ಉದ್ಘಾಟಿಸಿ ಮಾತನಾಡಿದರು. ವಿದ್ಯಾರ್ಥಿಗಳು ಶಾಲಾ ಕಾಲೇಜು ದಿನಗಳಿಂದಲೇ ಸೇವಾ ಮನೋಭಾವನೆ ಬೆಳೆಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು. ಕಾಲೇಜಿನ ಪ್ರಾಚಾರ್ಯ ಡಾ. ಎಂ. ಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶಾಸಕ ಡಿ.ಎನ್. ಜೀವರಾಜ್, ಕೆಪಿಸಿಸಿ ಕಿಸಾನ್ ಘಟಕದ ರಾಜ್ಯಾಧ್ಯಕ್ಷ ಸಚಿನ್ ಮೀಗಾ, ಬಿ.ಶಿವಶಂಕರ್ ಇತರರು ಇದ್ದರು.

Scanned by CamScanner

ಅಶಿರಾಬಾನು ರವರಿಗೆ

ಬಿ.ಎ. ಪರೀಕ್ಷೆಯಲ್ಲಿ 5 ನೇ ರ್‍ಯಾಂಕ್



ಶೃಂಗೇರಿ: ಇಲ್ಲಿನ ಶ್ರೀ ಜೆ.ಸಿ.ಬಿ.ಎಂ. ಕಾಲೇಜಿನ ವಿದ್ಯಾರ್ಥಿನಿ ಅಶಿರಾಬಾನು, ಕಳೆದ ಏಪ್ರಿಲ್‌ನಲ್ಲಿ ನಡೆದ ಕುವೆಂಪು ವಿ.ವಿ. ಯ ಅಂತಿಮ ಬಿ.ಎ. ಪರೀಕ್ಷೆಯಲ್ಲಿ 5 ನೇ ರ್‍ಯಾಂಕ್ ಪಡೆದಿದ್ದಾರೆ. ಪ್ರತಿಭಾವಂತೆ ಅಶಿರಾಬಾನು ರವರನ್ನು "ನಾಗೇಶ್ ಪತ್ರಿಕೆ" ಅಭಿನಂದಿಸುತ್ತದೆ.

Scanned by CamScanner

ಬಿ.ಎಸ್‌ಸಿ., ಹೆಚ್.ಎಸ್. ಶಾಶ್ವತಿ ಗೆ, ದ್ವಿತೀಯ ರ್‍ಯಾಂಕ್



ಶೃಂಗೇರಿ: ಇಲ್ಲಿನ ಶ್ರೀ ಜೆ.ಸಿ.ಬಿ.ಎಂ. ಕಾಲೇಜಿನ ವಿದ್ಯಾರ್ಥಿನಿ ಹೆಚ್.ಎಸ್. ಶಾಶ್ವತಿ, ಕಳೆದ ಏಪ್ರಿಲ್‌ನಲ್ಲಿ ನಡೆದ ಕುವೆಂಪು ವಿ.ವಿ. ಯ ಅಂತಿಮ ಬಿ.ಎಸ್‌ಸಿ. ಪರೀಕ್ಷೆಯಲ್ಲಿ ದ್ವಿತೀಯ ರ್‍ಯಾಂಕ್ ಪಡೆದಿದ್ದಾರೆ. ಒಟ್ಟು ಶೇ. 96.08 ಅಂಕಗಳನ್ನು ಗಳಿಸಿರುವ ಇವರು ಬಾಳೆಹೊನ್ನೂರಿನ ಕಾಫಿ ಸಂಶೋಧನಾ ಕೇಂದ್ರದಲ್ಲಿರುವ ಸುಂಕುರ್ಡಿ ಡಾ.ಹೆಚ್. ಜಿ. ಸೀತಾರಾಮ್ ಮತ್ತು ಶೈಲಾಶ್ರೀ ಯವರ ಸುಪುತ್ರಿಯಾಗಿದ್ದಾರೆ.

Scanned by CamScanner

ಶುಕ್ರವಾರ, 3 ನವೆಂಬರ್ 2017, ಶಿವಮೊಗ್ಗ ವಿಜಯ ಕರ್ನಾಟಕ

ಶಾಶ್ವತಿಗೆ 2ನೇ ರ್‍ಯಾಂಕ್



ಶೃಂಗೇರಿ: ಇಲ್ಲಿನ ಶ್ರೀ ಜೆಸಿಬಿಎಂ ಕಾಲೇಜಿನ ಅಂತಿಮ ಬಿಎಸ್ಸಿ ವಿದ್ಯಾರ್ಥಿನಿ ಎಚ್. ಎಸ್.ಶಾಶ್ವತಿ ಏಪ್ರಿಲ್‌ನಲ್ಲಿನಡೆದ ಕುವೆಂಪು ವಿ.ವಿ.ಯ ಪರೀಕ್ಷೆಯಲ್ಲಿದ್ವಿತೀಯ ರ್‍ಯಾಂಕ್ ಪಡೆದಿದ್ದಾರೆ. ಶೇ.96.08 ಅಂಕ ಗಳಿಸಿರುವ ಇವರು ಬಾಳೆಹೊನ್ನೂರಿನ ಕಾಫಿ ಸಂಶೋಧನಾ ಕೇಂದ್ರದಲ್ಲಿರುವ ಸುಂಕುರ್ಡಿ ಡಾ.ಎಚ್.ಜಿ.ಸೀತಾರಾಮ್ ಮತ್ತು ಶೈಲಾಶ್ರೀ ಅವರ ಪುತ್ರಿ.

Scanned by CamScanner

ಬುಧವಾರ • ನವೆಂಬರ್ 1, 2017 ಪ್ರಜಾವಾಣಿ

ಪ್ಯಾಟ್ರಕ್ ಇದ್ದರು.

ಪದವಿ- ರ‍್ಯಾಂಕ್



ಶಾಶ್ವತಿ

ಶೃಂಗೇರಿ: ಕುವೆಂಪು ವಿಶ್ವವಿದ್ಯಾಲಯದ 2016-17ರ ಸಾಲಿನ ಪರೀಕ್ಷೆಯಲ್ಲಿ ಜೆ.ಸಿ.ಬಿ.ಎಂ. ಕಾಲೇಜಿನ ಬಿ.ಎಸ್ಸಿ.ಯ ಶಾಶ್ವತಿ ಎಚ್. ಎಸ್. 2ನೇ ರ‍್ಯಾಂಕ್ ಹಾಗೂ ಬಿ.ಎ.ನಲ್ಲಿ ಅಶಿರಾಬಾನು, 5ನೇ ರ‍್ಯಾಂಕ್ ಗಳಿಸಿದ್ದಾರೆ.



ಅಶಿರಾಬಾನು

Scanned by CamScanner

ವಿಜಯ ಕರ್ನಾಟಕ VK

ಶುಕ್ರವಾರ, 6 ಅಕ್ಟೋಬರ್ 2017, ಶಿವಮೊಗ್ಗ

ಬಾಹ್ಯ ಸೌಂದರ್ಯಕ್ಕಿಂತ ವ್ಯಕ್ತಿತ್ವವೇ ಮುಖ್ಯ



ಶೃಂಗೇರಿಯಲ್ಲಿ ಏರ್ಪಡಿಸಿದ್ದ ನೈತಿಕ ಮತ್ತು ಆಧ್ಯಾತ್ಮಿಕ ಚಿಂತನ ಶಿಬಿರವನ್ನು ಶ್ರೀವೀರೇಶಾನಂದ ಸರಸ್ವತೀ ಸ್ವಾಮೀಜಿ ಉದ್ಘಾಟಿಸಿದರು.

■ **ವಿಕ ಸುದ್ದಿಲೋಕ** ಶೃಂಗೇರಿ

ವ್ಯಕ್ತಿಯ ಬಾಹ್ಯ ಸೌಂದರ್ಯ ಹಾಗೂ ಪುಸ್ತಕದ ವಿದ್ಯೆಗಿಂತ ನೈತಿಕತೆ ಹಾಗೂ ವ್ಯಕ್ತಿತ್ವವೇ ಮುಖ್ಯವಾದುದು ಎಂದು ತುಮಕೂರಿನ ಶ್ರೀ ರಾಮಕೃಷ್ಣ ಆಶ್ರಮ ದ ಅಧ್ಯಕ್ಷ ವೀರೇಶಾನಂದ ಸರಸ್ವತೀ ಸ್ವಾಮೀಜಿ ಹೇಳಿದರು.

ಅವರು ಸೋಮವಾರ ಶ್ರೀ ಜೆ.ಸಿ.ಬಿ.ಎಂ.ಕಾಲೇಜಿನಲ್ಲಿ ಏರ್ಪಡಿಸಿದ್ದ ನೈತಿಕ ಮತ್ತು ಆಧ್ಯಾತ್ಮಿಕ ಚಿಂತನ ಶಿಬಿರ ಉದ್ಘಾಟಿಸಿ ಮಾತನಾಡಿದರು.

ಆತ್ಮವಿಶ್ವಾಸ ಇಲ್ಲದೇ ಕಾರ್ಯ ಸಾಧನೆ ಸಾಧ್ಯವಿಲ್ಲ. ನಮ್ಮ ಭವಿಷ್ಯ ರೂಪಿಸಿಕೊಳ್ಳುವವರು ನಾವೇ. ಸತ್ಯ, ಪ್ರಾಮಾಣಿಕತೆ ಹಾಗೂ ದೃಢ ಸಂಕಲ್ಪದಿಂದ ಏನನ್ನಾದರೂ ಸಾಧಿಸಬಹುದು ಎಂದರು.

ಡಾ.ರಂಗನಾಥ್ ಮಾತನಾಡಿ, ಪುಣ್ಯಕೋಟಿ ಪ್ರತಿಪಾದಿಸುವ ಮೌಲ್ಯಗಳ ಬಗ್ಗೆ ವಿಚಾರ ವಿನಿಮಯ ನಡೆಸಿದರು. ಸತ್ಯ ಹಾಗೂ ಪ್ರಾಮಾಣಿಕತೆಗೆ ಗೋವಿನ ಹಾಡು ಪ್ರಖ್ಯಾತಿ ಪಡೆದಿದೆ.ಇದು ಕೇವಲ ಒಂದು ಕಥೆಯಾಗಿರದೆ ಪ್ರತಿಯೊಬ್ಬ ವ್ಯಕ್ತಿಗೂ ಆದರ್ಶದಾಯಕ. ಜೀವನದಲ್ಲಿ ಸತ್ಯ ನುಡಿಯುವು ದರೊಂದಿಗೆ ಅದರಂತೆ ನಡೆದುಕೊಳ್ಳುವುದೂ ಅತಿ ಪ್ರಮುಖವಾದುದು ಎಂದರು.

ಕಾರ್ಯಕ್ರಮದಲ್ಲಿ ಕಾಲೇಜಿನ ವಿಶ್ವಸ್ಥ ಮಂಡಳಿ ಸದಸ್ಯರಾದ ಅನಂತ ಪದ್ಮನಾಭ ಭಟ್,ಪ್ರಾಂಶುಪಾಲ ದೇವಿದಾಸ್ ಎಸ್. ನಾಯಕ್, ಡಾ.ಸ್ವಾಮಿ, ಪ್ರಾಧ್ಯಾಪಕ ರಾದ ವಿದ್ಯಾಧರ್ ಮತ್ತಿತರರು ಉಪಸ್ಥಿತರಿದ್ದರು.

ಎನ್.ಎಸ್.ಎಸ್. ಅಧಿಕಾರಿಗಳಾದ ಎ.ಜಿ. ಪ್ರಶಾಂತ್ ನಿರೂಪಿಸಿ, ಪ್ರತಾಪ್ ಪ್ರಾರ್ಥಿಸಿ, ದೇವದಾಸ್ ವಂದಿಸಿದರು.

Scanned by CamScanner

ಕನ್ನಡಪ್ರಭ
ಗುರುವಾರ 5.10.2017

ಸ್ವಚ್ಛತೆ ಪ್ರತಿ ವ್ಯಕ್ತಿಯ ಸ್ವಭಾವವಾಗಲಿ



ಶೃಂಗೇರಿ ಜೆಸಿಬಿಎಂ ಕಾಲೇಜು ಸಭಾಂಗಣದಲ್ಲಿ ನಡೆದ ಸ್ವಚ್ಛತಾ ಕಾರ್ಯಕ್ರಮ ಮಠದ ಅಧಿಕಾರಿ ಶ್ರೀಪಾದರಾವ್ ಉದ್ಘಾಟಿಸಿದರು.

ಶೃಂಗೇರಿ:ಮನಸ್ಸನ್ನುಹೇಗೆಸ್ವಚ್ಛವಾಗಿಟ್ಟುಕೊಳ್ಳಲು ಪ್ರಯತ್ನಿಸುತ್ತೇವೆಯೋ ಹಾಗೆಯೇ ಪರಿಸರ ಸ್ವಚ್ಛತೆಯನ್ನು ನಮ್ಮ ಧ್ಯೇಯವಾಗಿಸಿ ಕೊಳ್ಳಬೇಕು. ಸ್ವಚ್ಛತೆ ಪ್ರತಿ ವ್ಯಕ್ತಿಯ ಸ್ವಭಾವವಾಗಬೇಕುಎಂದುಪದ್ಮಶ್ರೀ ಪುರಸ್ಕೃತ ಸಂಸ್ಕೃತ ವಿದ್ವಾಂಸ ಚ.ಮೂ. ಕೃಷ್ಣಶಾಸ್ತ್ರಿ ಹೇಳಿದರು. ಪಟ್ಟಣದ ಜೆಸಿಬಿಎಂಕಾಲೇಜಿನಲ್ಲಿನಡೆದಗಾಂಧೀ ಜಯಂತಿ, 'ಸ್ವಚ್ಛಭಾರತ-ಸ್ವಚ್ಛಶೃಂಗೇರಿ ವಾರ್ಷಿಕ ಅಭಿಯಾನ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದರು.

ಕಾರ್ಯಕ್ರಮಉದ್ಘಾಟಿಸಿದಮಠದ ಅಧಿಕಾರಿ ಶ್ರೀಪಾದರಾವ್ ಮಾತನಾಡಿ ಸ್ವಚ್ಛಭಾರತಗಾಂಧೀಜಿಯವರಕನಸು. ಗಾಂಧಿಜೀಯವರ ತತ್ವ ಆದರ್ಶಗಳು ನಮ್ಮಬದುಕಿಗೆದಾರಿದೀಪವಾಗಬೇಕು. ಅವರಸರಳವ್ಯಕ್ತಿತ್ವ,ಮೌಲ್ಯ,ತತ್ವಆದರ್ಶಗಳನ್ನು ಮೈಗೂಡಿಸಿ ಕೊಳ್ಳಬೇಕು. ಈ ಗಾಂಧಿ ಜಯಂತಿಯ ದಿನದಂದು

- ಗಾಂಧಿಜೀಯವರ ತತ್ವ ಆದರ್ಶಗಳು ನಮ್ಮ ಬದುಕಿಗೆ ದಾರಿದೀಪವಾಗಲಿ
- ಎಲ್ಲರ ಸಹಕಾರದಿಂದ ಮಾತ್ರ ಸ್ವಚ್ಛ ಶೃಂಗೇರಿ ನಿರ್ಮಾಣ ಸಾಧ್ಯ

ಈ ಅಭಿಯಾನ ಆರಂಭವಾಗಿದೆ. ಇದು ವರ್ಷಕ್ಕೆ ಮಾತ್ರ ಸೀಮಿತವಾಗಿರದೇ ನಿರಂತರವಾಗಿ ನಡೆದು ಶ್ರದ್ಧಾ ಕೇಂದ್ರವಾಗಿರುವ ಶೃಂಗೇರಿ ಸ್ವಚ್ಛ ಹಾಗೂ ಸ್ವಸ್ಥ ಪಟ್ಟಣವಾಗಲಿ ಎಂದು ಅಭಿಪ್ರಾಯಪಟ್ಟರು.

ಅಧ್ಯಕ್ಷತೆ ವಹಿಸಿದ್ದ ಪಟ್ಟಣ ಪಂಚಾಯಿತಿಅಧ್ಯಕ್ಷಡಾ.ಲಕ್ಷ್ಮೀಎನ್.ಪ್ರಸಾದ್ ಅವರು, ಎಲ್ಲರ ಸಹಕಾರದಿಂದ ಮಾತ್ರ ಸ್ವಚ್ಛಶೃಂಗೇರಿನಿರ್ಮಾಣಸಾಧ್ಯ.ಪಪಂ ಆಡಳಿತ ಪಟ್ಟಣದ ಸ್ವಚ್ಛತೆಗೆ ಆದ್ಯತೆ ನೀಡುತ್ತಿದೆ.ಜನರಸಹಭಾಗಿತ್ವವುಅಷ್ಟೇ ಮುಖ್ಯ. ಕೇವಲ ಕಾನೂನು ಕಾಯ್ದೆ, ನಿಯಮಗಳಿಂದ ಪರಿಸರ ಸಂರಕ್ಷಣೆ ಸಾಧ್ಯವಿಲ್ಲ.ಜನತೆಯಜವಾಬ್ದಾರಿಯೂ ಅಷ್ಟೇ ಮುಖ್ಯ. ಜನರಲ್ಲಿ ಪರಿಸರ, ಅರಣ್ಯ ಸಂರಕ್ಷಣೆಯ ಬಗ್ಗೆ ಅರಿವು ಮಾಡಿಸಬೇಕು ಎಂದು ತಿಳಿಸಿದರು.

ಸ್ವಚ್ಛ ಭಾರತ್-ಸ್ವಚ್ಛ ಶೃಂಗೇರಿ ಅಭಿಯಾನಕ್ಕೆ ಚಾಲನೆ ನೀಡಲಾಯಿತು. ನಂತರಕಾಲೇಜಿನ ಆವರಣದಿಂದ ಪಟ್ಟಣದ ಡಾ.ಆರ್.ಗೌರೀಶಂಕರ್ ಸಭಾಂಗಣವರೆಗೆಬೃಹತ್ ಜನಜಾಗೃತಿಜಾಥಾ ನಡೆಯಿತು.ಪಪಂಸದಸ್ಯರು,ಸಿಬ್ಬಂದಿ, ಭಾರತಿ ವಿದ್ಯಾಸಂಸ್ಥೆ, ಕಾಲೇಜಿನ ಎನ್ಎಸ್ಎಸ್, ಎನ್ಸಿಸಿ, ಯುವ ರೆಡ್ ಕ್ರಾಸ್ ಘಟಕ, ರೋಟರಿ ಕ್ಲಬ್, ಇನ್ನರ್ ವ್ಹೀಲ್, ಲಯನ್ಸ್ ಕ್ಲಬ್, ಹಿರಿಯ ವಿದ್ಯಾರ್ಥಿಗಳಸಂಘದಅಧ್ಯಕ್ಷ,ಸದಸ್ಯರು, ತಾಲೂಕಿನ ವಿವಿಧ ಸರ್ಕಾರಿ ಇಲಾಖೆಗಳ ಮುಖ್ಯಸ್ಥರು ಪಾಲ್ಗೊಂಡಿದ್ದರು.

Scanned by CamScanner

ಕನ್ನಡಪ್ರಭ
ಗುರುವಾರ 5.10.2017

ಆತ್ಮವಿಶ್ವಾಸ ಇಲ್ಲದೇ ಯಾವುದೇ ಕಾರ್ಯ ಅಸಾಧ್ಯ: ಸರಸ್ವತಿ ಶ್ರೀ

ಶೃಂಗೇರಿ: ಯಾವುದೇ ವ್ಯಕ್ತಿ ತನ್ನ ಮೇಲೆ ತಾನು ನಂಬಿಕೆ ಹೊಂದಿರಬೇಕು. ಆತ್ಮವಿಶ್ವಾಸ ಇಲ್ಲದೇ ಯಾವುದೇ ಕಾರ್ಯ ಸಾಧನೆ ಮಾಡಲು ಸಾಧ್ಯವಿಲ್ಲ ಎಂದು ತುಮಕೂರು ರಾಮಕೃಷ್ಣ ಆಶ್ರಮದ ವೀರೇಶಾನಂದ ಸರಸ್ವತೀ ಸ್ವಾಮೀಜಿ ಹೇಳಿದರು. ಪಟ್ಟಣದ ಜೆಸಿಬಿಎಂ ಕಾಲೇಜಿನ ಸಭಾಂಗಣದಲ್ಲಿ ನಡೆದ ನೈತಿಕ ಮತ್ತು ಆಧ್ಯಾತ್ಮಿಕ ಚಿಂತನ ಶಿಬಿರ ಉದ್ಘಾಟಿಸಿ ಮಾತನಾಡಿದರು.

ನಮ್ಮ ಭವಿಷ್ಯ ರೂಪಿಸಿಕೊಳ್ಳುವವರು ನಾವೇ. ಸತ್ಯ, ಪ್ರಾಮಾಣಿಕತೆ ಹಾಗೂ ದೃಢ ಸಂಕಲ್ಪದಿಂದ ಏನನ್ನಾದರೂ ಸಾಧಿಸಬಹುದು. ವ್ಯಕ್ತಿಯ ಬಾಹ್ಯ ಸೌಂದರ್ಯ ಹಾಗೂ ಪುಸ್ತಕದ ವಿದ್ಯೆಗಿಂತ ನೈತಿಕತೆ, ವ್ಯಕ್ತಿತ್ವವೇ ಮುಖ್ಯ ಎಂದರು.

ಕಲಿಯಲು ಯಾವುದೇ ವಯಸ್ಸಿನ ಮಿತಿ ಇಲ್ಲ. ಪ್ರತಿಯೊಬ್ಬರಿಂದಲೂ ಉತ್ತಮ ವಿಚಾರ ತಿಳಿದುಕೊಳ್ಳಿ. ಜಗತ್ತಿನಲ್ಲಿ ಜ್ಞಾನ ಹಾಗೂ ಉತ್ತಮವಾದುದನ್ನು ತಿಳಿದುಕೊಳ್ಳಬೇಕೆಂಬ ದಾಹ ಹಾಗೂ ಹಂಬಲ ಇದೆ. ಆತ್ಮವಿಶ್ವಾಸ ಹಾಗೂ ಜ್ಞಾನದಿಂದ ಜಗತ್ತಿನಲ್ಲಿ ನಾವು ಉತ್ತಮ ಸ್ಥಾನ ಹೊಂದಬಹುದು. ಜೀವನದಲ್ಲಿ ಸರಳತೆಯನ್ನು ರೂಢಿಸಿಕೊಳ್ಳಿ ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಮುಖ್ಯ ಅತಿಥಿ ವಾಗ್ಮಿ, ಡಾ. ರಂಗನಾಥ್ ಮಾತನಾಡಿ ಪುಣ್ಯಕೋಟಿ ಪ್ರತಿಪಾದಿಸುವ ಮೌಲ್ಯಗಳ ಬಗ್ಗೆ ವಿಚಾರ ವಿನಿಮಯ ನಡೆಸಿದರು. ಸತ್ಯ ಹಾಗೂ ಪ್ರಾಮಾಣಿಕತೆಗೆ ಗೋವಿನ ಹಾಡು ಪ್ರಖ್ಯಾತಿ ಪಡೆದಿದೆ. ಇದು ಕೇವಲ ಒಂದು ಕಥೆಯಾಗಿರದೇ ಪ್ರತಿಯೊಬ್ಬ ವ್ಯಕ್ತಿಗೂ ಆದರ್ಶದಾಯಕ ಎಂದು ಹೇಳಿದರು. ಕಾಲೇಜಿನ ವಿಶ್ವಸ್ಥ ಮಂಡಳಿ ಸದಸ್ಯ ಅನಂತ ಪದ್ಮನಾಭ ಭಟ್, ಪ್ರಾಚಾರ್ಯ ಸ್ವಾಮಿ, ಎಂ.ದೇವಿದಾಸ್ ನಾಯಕ್, ವಿದ್ಯಾಧರ್ ಇತರರಿದ್ದರು.



ಶೃಂಗೇರಿ ಪಟ್ಟಣದ ಜೆಸಿಬಿಎಂ ಕಾಲೇಜಿನ ಸಭಾಂಗಣದಲ್ಲಿ ನಡೆದ ನೈತಿಕ ಮತ್ತು ಆಧ್ಯಾತ್ಮಿಕ ಶಿಬಿರ ವೀರೇಶಾನಂದ ಸರಸ್ವತೀ ಸ್ವಾಮೀಜಿ ಉದ್ಘಾಟಿಸಿದರು.

Scanned by CamScanner



ಶೃಂಗೇರಿ ತಾಲ್ಲೂಕಿನ ಜೆ.ಸಿ.ಬಿ.ಎಂ ಕಾಲೇಜಿನ ಸಭಾಂಗಣದಲ್ಲಿ ಮಂಗಳವಾರ ನಡೆದ ನೈತಿಕ ಆಧ್ಯಾತ್ಮಿಕ ಶಿಬಿರದಲ್ಲಿ ಉಪನ್ಯಾಸ ನೀಡಿದ ಖ್ಯಾತ ಹಾಸ್ಯ ಲೇಖಕಿ ಭುವನೇಶ್ವರಿ ಹೆಗಡೆ ಅವರನ್ನು ಸನ್ಮಾನಿಸಲಾಯಿತು.

ಯುವಜನತೆ ರಾಷ್ಟ್ರದ ಅತ್ಯಮೂಲ್ಯ ಆಸ್ತಿ: ಭುವನೇಶ್ವರಿ ಹೆಗಡೆ

ಪ್ರಜಾವಾಣಿ ವಾರ್ತೆ

ಶೃಂಗೇರಿ: 'ನಾವು ಒಳ್ಳೆಯ ಹಾದಿಯಲ್ಲಿ ನಡೆದರೆ ಜಗತ್ತು ಒಳ್ಳೆಯದಾಗಿ ಕಾಣುತ್ತದೆ. ಕೆಟ್ಟ ದಾರಿಯಲ್ಲಿ ನಡೆದಾಗ ಕೆಟ್ಟದ್ದು ಮಾತ್ರ ಗೋಚರವಾಗುತ್ತದೆ. ನಾವು ಸಂತೋಷವಾಗಿದ್ದೇವೆ ಎಂಬ ಭಾವ ನಮ್ಮೊಳಗೆ ಇದ್ದಾಗ ಮಾತ್ರ ಬದುಕಿನಲ್ಲಿ ಆನಂದ ಲಭಿಸಲು ಸಾಧ್ಯ' ಎಂದು ಖ್ಯಾತ ಹಾಸ್ಯಲೇಖಕಿ ಭುವನೇಶ್ವರಿ ಹೆಗಡೆ ತಿಳಿಸಿದರು.

ಶೃಂಗೇರಿ ತಾಲ್ಲೂಕಿನ ಜೆ.ಸಿ.ಬಿ.ಎಂ ಕಾಲೇಜಿನ ಸಭಾಂಗಣದಲ್ಲಿ ಮಂಗಳವಾರ ನಡೆದ ನೈತಿಕ-ಆಧ್ಯಾತ್ಮಿಕ ಶಿಬಿರದಲ್ಲಿ 'ಯುವಜನತೆ-ಆತ್ಮಸಂತೋಷಕ್ಕೆ ಹಾದಿಗಳು' ಎಂಬ ವಿಷಯದ ಕುರಿತು ಉಪನ್ಯಾಸ ನೀಡಿ ಮಾತನಾಡಿದರು.

ಆತ್ಮಸಂತೋಷಕ್ಕೆ ವಿವಿಧ ಹಾದಿಗಳು ಇವೆ. ಯೋಗ ಶಿಕ್ಷಣ ಪಡೆದವರು ಯೋಗದ ಮೂಲಕ, ಕ್ರೀಡೆಯ ಅಸಕ್ತಿ ಹೊಂದಿದವರು ಕ್ರೀಡಾಮನೋಭಾವದ ಮೂಲಕ, ಸಮಾಜಸೇವಕರು ಸಮಾಜಕ್ಕೆ ಸೇವೆ ಸಲ್ಲಿಸುವ ಮುಖಾಂತರ ಆತ್ಮಸಂತೋಷ ಪಡೆಯಬಹುದು ಎಂದರು.

ಕಣ್ಣಿಗೆ ಕಾಣುವ ಹೊರಜಗತ್ತಿನಲ್ಲಿ ನಾವು ಎಲ್ಲರ ಜೊತೆ ಬೇರೆಯಬೇಕಾದ ಅನಿವಾರ್ಯತೆ ಇದೆ. ಆದರೆ, ಕಣ್ಣಿಗೆ ಕಾಣದ ಒಳ ಜಗತ್ತಿನಲ್ಲಿ ನಾವು ಒಬ್ಬರೇ ಸುಖವನ್ನು ಅನುಭವಿಸಬಹುದು. ಸೌಂದರ್ಯ ಪ್ರಜ್ಞೆ, ವ್ಯಕ್ತಿತ್ವ ನಿರ್ಮಾಣ, ಉತ್ತಮ ಅಭಿರುಚಿ, ಎಲ್ಲವನ್ನೂ ನಾವು ಒಳಜಗತ್ತಿನಿಂದ ಪಡೆಯಲು ಸಾಧ್ಯ ಎಂದರು.

ಕಾಲೇಜಿನ ಪ್ರಾಚಾರ್ಯ ಸ್ವಾಮಿ, ನಿವೃತ್ತ ಪ್ರಾಚಾರ್ಯ ಡಾ.ಎಚ್. ಸಿ.ವೀರಪ್ಪಗೌಡ, ಎನ್.ಎಸ್.ಎಸ್ ಅಧಿಕಾರಿ ಪ್ರಶಾಂತ್ ಮೊದಲಾದವರು ಹಾಜರಿದ್ದರು.

Mangaluru

Scanned by CamScanner

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » SHIVAMOGGA
4
ಬುಧವಾರ
4 ಅಕ್ಟೋಬರ್ 2017
4 OCTOBER 2017

ಪ್ರಾಕೃತಿಕ ಸಂಪನ್ಮೂಲ ರಕ್ಷಣೆ ಪ್ರತಿಯೊಬ್ಬರ ಹೊಣೆ

■ ವಿಜಯವಾಣಿ ಸುದ್ದಿಜಾಲ ಶೃಂಗೇರಿ

ಸ್ವಚ್ಛ ಪರಿಸರದಿಂದ ಸಮಾಜದಲ್ಲಿ ಆರೋಗ್ಯಕರ ವಾತಾವರಣ ನಿರ್ಮಾಣ ಪಾಗುತ್ತದೆಂಬ ಆಶಯವನ್ನು ಗಾಂಧೀಜಿ ಹೊಂದಿದ್ದರು ಎಂದು ಶ್ರೀಮಠದ ಅಧಿಕಾರಿ ಶ್ರೀಪಾದ ರಾವ್ ಹೇಳಿದರು.

ಶ್ರೀ ಶಾರದಾ ಪೀಠ, ಪಪಂ ಸ್ಥಳೀಯ ವಿದ್ಯಾಸಂಸ್ಥೆಗಳು ಹಾಗೂ ವಿವಿಧ ಸಂಘ ಸಂಸ್ಥೆಗಳು ಜೆಸಿಬಿಎಂ ಕಾಲೇಜಿನ ಆವರಣದಲ್ಲಿ ಏರ್ಪಡಿಸಿದ್ದ ಸ್ವಚ್ಛ ಭಾರತ, ಸ್ವಚ್ಛ ಶೃಂಗೇರಿ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದರು.

ಭಾರತವು ಪ್ರಗತಿ ಪಥದಲ್ಲಿದ್ದು ಪ್ರಾಕೃತಿಕ ಸಂಪನ್ಮೂಲಗಳನ್ನು ಕಾಪಾಡಿಕೊಳ್ಳುವ ಜವಾಬ್ದಾರಿ ಎಲ್ಲರ ಮೇಲಿದೆ. ಶುದ್ಧ ನೀರು, ಗಾಳಿ ಇದ್ದರೆ ಮನುಷ್ಯನ ಆರೋಗ್ಯ ಚೆನ್ನಾಗಿರುತ್ತದೆ. ಮುಂದಿನ ಪೀಳಿಗೆಗೆ ಉತ್ತಮ ಪರಿಸರ ಬಿಟ್ಟುಹೋಗುವ ಜವಾಬ್ದಾರಿ ಎಲ್ಲರ ಮೇಲಿದೆ. ಸ್ವಚ್ಛತೆ ಅಭಿಯಾನ ನಿರಂತರವಾಗಿ ನಡೆಯಬೇಕು ಎಂದು ಹೇಳಿದರು.

ಸಂಸ್ಕೃತ ಭಾರತೀ ಸಂಸ್ಥೆ ಪ್ರವರ್ತಕ ಬಿ.ಮೂ.ಕೃಷ್ಣಶಾಸ್ತ್ರಿ ಮಾತನಾಡಿ, ಸ್ವಚ್ಛ ಭಾರತ ಮಹಾತ್ಮ ಗಾಂಧಿ ಅವರ ಕನಸು. ರಾಷ್ಟ್ರಪಿತನ ಕನಸು ನನಸಾಗಿಸುವಲ್ಲಿ ಕೇಂದ್ರ ಸರ್ಕಾರದ ಕೊಡುಗೆ ಅನನ್ಯ. ದೇಶ ಸ್ವಚ್ಛವಾಗಬೇಕಾದರೆ ಮನಸ್ಸು ಸ್ವಚ್ಛವಾಗಿರಬೇಕು. ಯುವಕರು ದೇಶದ ಬಗ್ಗೆ ಅಭಿಮಾನ ಬೆಳೆಸಿಕೊಳ್ಳಬೇಕು. ಈ ದೇಶದ ಸಂಪತ್ತನ್ನು ಕಾಪಾಡುವ ಕಾಳಜಿ ಎಲ್ಲರಲ್ಲೂ ಇದ್ದಾಗ ಮಾತ್ರ ಭಾರತ ವಿಶ್ವಗುರುವಾಗಲು ಸಾಧ್ಯ ಎಂದು ಹೇಳಿದರು.

ಪಪಂ ಅಧ್ಯಕ್ಷೆ ಲಕ್ಷ್ಮೀ ಪ್ರಸಾದ್ ಮಾತನಾಡಿ, ತಾಲೂಕಿನ ಎಲ್ಲ ಸಂಘ ಸಂಸ್ಥೆಗಳೂ ಸ್ವಚ್ಛ ಭಾರತ ಅಭಿಯಾನಕ್ಕೆ ಕೈಜೋಡಿಸಿರುವುದು ಸಂತಸದ ಸಂಗತಿ ಎಂದು ಹೇಳಿದರು.

ಕಾಲೇಜಿನ ಪ್ರಾಚಾರ್ಯ ಡಾ. ದೇವಿದಾಸ್ ಎಸ್. ನಾಯಕ್, ನಿವೃತ್ತ ಪ್ರಾಚಾರ್ಯ ಡಾ. ವೀರಪ್ಪ ಗೌಡ, ಪಳೀ ವಿದ್ಯಾರ್ಥಿ ಸಂಘದ ಅಧ್ಯಕ್ಷ ಟಿ.ಟಿ.ಕಳಸಪ್ಪ, ವರ್ತಕರ ಸಂಘದ ಅಧ್ಯಕ್ಷ ಗೇರುಬೈಲು ಶಂಕರಪ್ಪ, ತಾಲೂಕು ಕಸಾಪ ಅಧ್ಯಕ್ಷೆ ಪೂರ್ಣಿಮಾ ಸಿದ್ಧಪ್ಪ, ಸಂಪತ್, ಲಯನ್ಸ್ ಅಧ್ಯಕ್ಷ ದಿನೇಶ್, ಉಮೇಶ್ ಮತ್ತಿತರರು ಉಪಸ್ಥಿತರಿದ್ದರು.



ಶೃಂಗೇರಿಯಲ್ಲಿ ಆಯೋಜಿಸಿದ್ದ ಸ್ವಚ್ಛ ಭಾರತ, ಸ್ವಚ್ಛ ಶೃಂಗೇರಿ ಅಭಿಯಾನದಲ್ಲಿ ವಿದ್ಯಾರ್ಥಿಗಳು, ವಿವಿಧ ಸಂಘಸಂಸ್ಥೆಗಳ ಕಾರ್ಯಕರ್ತರು ಭಾಗವಹಿಸಿದ್ದರು.

Scanned by CamScanner

ಬುಧವಾರ • ಅಕ್ಟೋಬರ್ 4, 2017 ಪ್ರಜಾವಾಣಿ



ಶೃಂಗೇರಿ ತಾಲ್ಲೂಕಿನ ಬಿಜಿಎಂ ಕಾಲೇಜಿನಿಂದ ಡಾ.ವಿ.ಆರ್.ಗೌರಿಶಂಕರ್ ಸಭಾಂಗಣದ ತನಕ ಹಮ್ಮಿಕೊಂಡ ಜಾಥಾ ಕಾರ್ಯಕ್ರಮದಲ್ಲಿ ಸಾವಿರಾರು ಮಂದಿ ಭಾಗವಹಿಸಿದರು.

ಸ್ವಚ್ಛ ಭಾರತ ಸ್ವಚ್ಛ ಶೃಂಗೇರಿ ಅಭಿಯಾನ ಕಾರ್ಯಕ್ರಮ

ಸ್ವಚ್ಛ ಪರಿಸರದಿಂದ ಆರೋಗ್ಯಕರ ಸಮಾಜ ಕಟ್ಟೋಣ: ಶ್ರೀಪಾದ ರಾವ್

ಪ್ರಜಾವಾಣಿ ವಾರ್ತೆ

ಶೃಂಗೇರಿ: ಗಾಂಧೀಜಿ ಅವರು ಸ್ವಚ್ಛ ಭಾರತದ ಬಗ್ಗೆ ಕನಸು ಕಂಡಿದ್ದರು. ಸ್ವಚ್ಛ ಪರಿಸರದಿಂದ ಸಮಾಜದಲ್ಲಿ ಆರೋಗ್ಯಕರವಾದ ವಾತಾವರಣ ಕಾಣಬಹುದು ಎಂಬ ಆಶಯ ಅವರದಾಗಿತ್ತು ಎಂದು ಶಾರದ ಮಠದ ಅಧಿಕಾರಿ ಶ್ರೀಪಾದರಾವ್ ತಿಳಿಸಿದರು.

ಶೃಂಗೇರಿ ತಾಲ್ಲೂಕಿನಲ್ಲಿ ಶಾರದಾಪೀಠ, ಪಟ್ಟಣ ಪಂಚಾಯಿತಿ, ಸ್ಥಳೀಯ ವಿದ್ಯಾಸಂಸ್ಥೆಗಳು ಹಾಗೂ ವಿವಿಧ ಸಂಘ ಸಂಸ್ಥೆಗಳು ಗಾಂಧಿ ಜಯಂತಿ ಪ್ರಯುಕ್ತ ಸೋಮವಾರ ಬಿಜಿಎಂ ಕಾಲೇಜಿನ ಆವರಣದಲ್ಲಿ ಸ್ವಚ್ಛಭಾರತ-ಸ್ವಚ್ಛ ಶೃಂಗೇರಿ ಅಭಿಯಾನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

'ಭಾರತ ದೇಶ ಪ್ರಗತಿ ಪಥದಲ್ಲಿದೆ. ಪ್ರಾಕೃತಿಕ ಸಂಪನ್ಮೂಲಗಳನ್ನು ಕಾಪಾಡಿಕೊಳ್ಳುವ ಗುರುತರ ಜವಾಬ್ದಾರಿ ಎಲ್ಲರ ಮೇಲಿದೆ. ಶುದ್ಧವಾದ ನೀರು, ಗಾಳಿ ಇದ್ದರೆ ಮಾತ್ರ ಮನುಷ್ಯನ ಆರೋಗ್ಯ ಚೆನ್ನಾಗಿರುತ್ತದೆ. ಯುವಜನತೆಯು ಮನೋದೃಢತೆಗೆ ಪೂರಕವಾಗಿ ಪರಿಸರವು ಸುಂದರವಾಗಿರಬೇಕು. ಮುಂದಿನ ಪೀಳಿಗೆಗೆ ಉತ್ತಮವಾದ ಪರಿಸರವನ್ನು ಬಿಟ್ಟುಹೋಗುವ ಜವಾಬ್ದಾರಿ ಎಲ್ಲರ ಮೇಲಿದೆ. ಸ್ವಚ್ಛ ಅಭಿಯಾನ ನಿರಂತರವಾಗಿ ನಡೆಯಬೇಕು. ಶೃಂಗೇರಿ ಪ್ರವಾಸಿಗರ ತಾಣ. ನಾನಾ ಪ್ರಾಂತ್ಯಗಳಿಂದ ಬರುವ ಭಕ್ತರಿಗೆ ಉತ್ತಮವಾದ ಪರಿಸರ ನಾವು ನೀಡಬೇಕು' ಎಂದರು.

ಸಂಸ್ಕೃತ ಭಾರತಿ ಸಂಸ್ಥೆಯ ಪ್ರವರ್ತಕರಾದ ಬಿ.ಮೂ.ಕೃಷ್ಣಶಾಸ್ತ್ರಿ ಮಾತನಾಡಿ, 'ಧಾರ್ಮಿಕ ಚಿಂತನೆ ಕನಸನ್ನು ನನಸಾಗಿಸುವಲ್ಲಿ ಕೇಂದ್ರ ಸರ್ಕಾರದ ಕೊಡುಗೆ ಅನನ್ಯ. ದೇಶ ಸ್ವಚ್ಛವಾಗಿರಬೇಕಾದರೆ ಮನಸ್ಸು ಸ್ವಚ್ಛವಾಗಿರಬೇಕು. ಸ್ವಚ್ಛ ಭಾರತದ ಪರಿಕಲ್ಪನೆಯನ್ನು ಸಂಘ-ಸಂಸ್ಥೆಗಳು ಸೇರಿ ಒಗ್ಗೂಡಿ ಕಾರ್ಯನಿರ್ವಹಿಸಬೇಕು. ಯುವಕರು ದೇಶದ ಬಗ್ಗೆ ಅಭಿಮಾನ ಬೆಳೆಸಿಕೊಳ್ಳಬೇಕು. ಈ ದೇಶದ ಸಂಪತ್ತುಗಳನ್ನು ಕಾಪಾಡಿಕೊಳ್ಳುವ ಕಾಳಜಿ ಎಲ್ಲರಲ್ಲೂ ಇದ್ದಾಗ ಮಾತ್ರ ಭಾರತ ವಿಶ್ವಗುರುವಾಗಲು ಸಾಧ್ಯ' ಎಂದರು.

ಪಟ್ಟಣ ಪಂಚಾಯಿತಿ ಅಧ್ಯಕ್ಷೆ ಲಕ್ಷ್ಮೀಪ್ರಸಾದ್ ಮಾತನಾಡಿ, 'ತಾಲ್ಲೂಕಿನ ಎಲ್ಲ ಸಂಘ-ಸಂಸ್ಥೆಗಳು ಒಗ್ಗೂಡಿ ಸ್ವಚ್ಛ ಭಾರತ ಅಭಿಯಾನಕ್ಕೆ ಕೈಜೋಡಿಸಿರುವುದು ಸಂತಸದಾಯಕ. ಯುವಕರು ಜತೆಗೂಡಿ ಸ್ವಚ್ಛತೆಯ ಬಗ್ಗೆ ಕೈಜೋಡಿಸುತ್ತಿರುವುದು ಉತ್ತಮ ನಡೆ. ಈ ನಡೆ ನಿರಂತರವಾಗಿರಬೇಕು' ಎಂದರು.

ಜಾಥಾದಲ್ಲಿ ಪಟ್ಟಣ ಪಂಚಾಯಿತಿ ಸದಸ್ಯರು, ಕಾಲೇಜಿನ ಪ್ರಾಚಾರ್ಯ ಡಾ.ದೇವಿದಾಸ್ ಎಸ್.ನಾಯಕ್, ನಿವೃತ್ತ ಪ್ರಾಚಾರ್ಯ ಡಾ.ವೀರಪ್ಪಗೌಡ, ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಟಿ.ಟಿ. ಕಳಸಪ್ಪ, ವರ್ತಕರ ಸಂಘದ ಅಧ್ಯಕ್ಷ ಗೇಯಬೈಲು ಶಂಕರಪ್ಪ, ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷೆ ಪೂರ್ಣಿಮಾ ಸಿದ್ಧಪ್ಪ, ರೋಟರಿ ಅಧ್ಯಕ್ಷ ಸಂಪತ್, ಲಯನ್ಸ್ ಅಧ್ಯಕ್ಷ ದಿನೇಶ್, ಉಪನ್ಯಾಸಕ ಎ.ಡಿ ಉಮೇಶ್ ಹಾಜರಿದ್ದರು.

ಬಿಜಿಎಂ ಕಾಲೇಜಿನಿಂದ ಡಾ.ವಿ.ಆರ್.ಗೌರೀಶಂಕರ್ ಸಭಾಂಗಣದ ತನಕ ಹಮ್ಮಿಕೊಂಡ ಜಾಥಾದಲ್ಲಿ ಎನ್.ಎಸ್.ಎಸ್, ಎನ್.ಸಿ.ಸಿ, ರೋವರ್ಸ್, ರೇಂಜರ್ಸ್, ಯುವ ರೆಡ್ ಕ್ರಾಸ್ ಘಟಕಗಳು, ಕಾಲೇಜಿನ ಅಧ್ಯಾಪಕ ವೃಂದ, ವಿದ್ಯಾರ್ಥಿಗಳ ಸಮುದಾಯ, ಹಿರಿಯ ವಿದ್ಯಾರ್ಥಿ ಸಂಘಗಳು ಪದಾಧಿಕಾರಿಗಳು ಭಾಗವಹಿಸಿದರು.

Scanned by CamScanner

ಶಾಂತಾರಾಂ ಬದುಕು ವಿದ್ಯಾರ್ಥಿಗಳಿಗೆ ಮಾದರಿ

■ ವಿಶೇಷ ವರದಿ/ಕೊಣಾಜೆ ಪ್ರತಿನಿಧಿ

ಮಂಗಳೂರಲ್ಲಿ ಶಿಕ್ಷಣ ಮತ್ತು ಸಂಸ್ಥೆಯ ಉದ್ಯೋಗ ಪಡೆದರೆ, ಸಮಾಜ ಉದ್ಧರಿಸಲು ಮೇಲಿನ ಮೂಲಕ ಶಾಂತಾರಾಂ ಅವರು ಅವರಂತೆ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದ್ದರೆ ಎಂದು ಪರಿಚಯವು ಮಹಾವೀರ ಕ್ರೀ ಸ್ಥಾಪಿಸಿದ ಸಚ್ಚಾರಿತ್ರ್ಯದಿಂದ ಇಲ್ಲಿ ಸ್ಥಾಪಿಸಿದ್ದರು.

ಶ್ರೀ ಕೆಮಿಜೂ ಕಾಲೇಜಿನಲ್ಲಿ ಶಿಕ್ಷಣವನ್ನು ಪಡೆದಿದ್ದ ಮಹಿಳಾ ಅಧಿಕಾರಿ ಆಗಿ ಒಬ್ಬರಾಗಿ ಎಂಬುದಕ್ಕೆ ಡಾ.ಶಾಂತಾರಾಂ ಪ್ರಶಸ್ತಿ-೨೦೦೮ ಕಾರ್ಯಕ್ರಮವು ಇಲ್ಲಿನ ಸಭಾಂಗಣದಲ್ಲಿ ನಡೆಯಿತು.

ಶಾಂತಾರಾಂ ಅವರು ನೆಲೆಯಾದ ಒಬ್ಬಳ ಮುಗ್ಧ ಕಾರಣ ದೇಶಾದಾಗ ಪ್ರತಿಭಾವಂತ ಅಂಶ ಮಾಡಿಕೊಂಡರು. ಮಾನಸಿಕ್ಕಿ ಹೊಗಳ ಎಂಬುದಕ್ಕೆ ಹಾಗು ಮಾಡಬೇಕು ಎಂಬುದನ್ನು ಸಕ್ಷ ಅಕ್ಷರಶಃ ಸಾಧಿಸಿ ತೋರಿಸಿದರು. ಬಳಿಕದ್ದು ಹಾಗೂ ಸಾಧನೆಯನ್ನು ಸಾಧಿಸಿ ಇಲ್ಲಿನ ಶಿಕ್ಷಣದ ಪರಿಸರವನ್ನು ಇಲ್ಲಿನ ಶಿಕ್ಷಣದ ಪರಿಸರವನ್ನು ಬಳಸಿಕೊಂಡು ನೆಲ್ಲ ಕೆಲಸಕ್ಕೆ ಪಡೆಯಲು ಯುವಕರಿಗೆ ಮುಂದೆ ಎಂದರು.

ಅಧ್ಯಕ್ಷತೆಯ ಭಾಷಣ ಮಾಡಿದ ಕಾರ್ಯದರ್ಶಿ ಅಡ್ಡಂಡ ಮಂದಣ್ಣ ಆಳ್ವ ಮಹಾವೀರ ಶಿಕ್ಷಣ ಸಂಸ್ಥೆಯು ಶಾಂತಾರಾಂ ಅವರ ಬಳಿ ಸಂಸ್ಥೆಯ ಸಾಧನೆಯನ್ನು ಹೆಮ್ಮೆಯ ವಿಷಯ ಎಂದರು.

ಮಂಗಳೂರಿನಲ್ಲಿ ೨೦೦ ಕಾರ್ಯಕ್ರಮದಲ್ಲಿ ಪರಿಚಯಿಸಿದ ಶ್ರೀ ಅಭಿಮತ

ಎಂಬುದಕ್ಕೆ ನಮ್ಮೆಗೂ ಪರಿಚಯ ಇದೆ. ಈಗ ಸಾಧ್ಯವಾಗಿದೆ ಅದರ ಬಗ್ಗೆಗಿನ ಸಂತೋಷ ಎಂದು ಹೇಳಿದರು.

ಸಭೆಯ ಪ್ರಾರಂಭದಲ್ಲಿ ಡಾ.ಪಾಲಾಕ್ಷ ಗೌಡ ಮಾತನಾಡಿ, ಮೊದಲು ವ್ಯಕ್ತಿಯ ಬಗ್ಗೆಗಿನ ಪರಿಚಯ ಮಾಡಿಕೊಂಡು, ಶಿಕ್ಷಣ ಪಡೆದ ಡಾ.ಶಾಂತಾರಾಂ ಹೆಮ್ಮೆಯ ಎಲ್ಲರಿಗೂ ಮಾದರಿಯಾಗಿದೆ. ಅಧ್ಯಕ್ಷತೆಯಲ್ಲಿ ಪಾಠಪ್ರವಚನ ಸಾಗಲೂ ನಿಯಮಿತ ಹೊಂದಿದ್ದರಿಂದ ಅವರಿಗೆ ಸಾಧನೆ ಸಾಧ್ಯವಾಗಿದೆ ಎಂದರು.

ಅಧ್ಯಾಪಕರ ಸ್ವಾಗತ ಮಾಡಿದ ಪ್ರಾ. ಶಾಂತಾರಾಂ, ಸಮಾಜಕ್ಕೆ ಹೊಸದಾಗಿ ಏನಾದರೂ ಕೊಡುವ ಮೊದಲಿನ ಹೊಣೆ ಸಂಸ್ಥೆಯ ಇರುವ ಮಾರ್ಗ.

ಇರುವ ಉದ್ಯೋಗದಲ್ಲಿ ತೃಪ್ತಿಯಿಂದ ಮುಂದೆ ಕೊಂಡೊಯ್ಯಲಿಲ್ಲ ಬೆಳವಣಿಗೆಯ ಪ್ರತಿಯೊಬ್ಬರ ಕೊಡುಗೆಯನ್ನು ಅವರು ಮೂಲಕ ಕೊಟ್ಟಿರುವುದರ ಮೂಲಕ ಸಮಾಜಕ್ಕೆ ಕಟ್ಟುವುದೇ ಅವ ಕೊಡುಗೆ ನೀಡಬೇಕೆಂದು ಎಂದು ಹೇಳಿದರು.

ಮೈಸೂರಿನ ಡಾ.ಬೆಳವಾಡ ವಿಶ್ವೇಶ್ವರ ಸಭಾಧ್ಯಕ್ಷತೆ ವಹಿಸಿದ್ದರು. ಮಂಗಳೂರಿನ ಡಾ. ಬಿ.ಆರ್ ಕಾಲೇಜು ಅಧ್ಯಕ್ಷ ಮುಂಡಾಜೆ ಪಿಲ್ಲಾರ್ ಚಂದ್ರಶೇಖರ ರಾವ್ ಎಂಬವರಿಗೆ ಶಾಂತಾರಾಂ ಅಭಿನಂದಿಸಿದರು.

ಕಾರ್ಯಕ್ರಮದ ಆರಂಭದ ಮೊದಲು ಪ್ರಾರ್ಥನೆ ಮಂಗಳ ಪರವಾಗಿ ಡಾ.ಶಾಂತಾರಾಂ ನೆನಪಿಸಲಾಯಿತು. ಎ.ಜೆ.ಪ್ರಭಾಕರ್ ಕಾರ್ಯಕ್ರಮ ನಿರೂಪಿಸಿದರು.



ಶ್ರೀ ಕೆಮಿಜೂ ಕಾಲೇಜಿನಲ್ಲಿ ಮಂಗಳೂರು ಶಾಂತಾರಾಂ ಅವರ ಬಗ್ಗೆಗಿನ ಪರಿಚಯವನ್ನು ಡಾ.ಶಾಂತಾರಾಂ ಬಿಡುಗಡೆಗೊಳಿಸಿದರು.

Scanned by CamScanner



ಶೃಂಗೇರಿ: ಇಲ್ಲಿನ ಶ್ರೀ ಜೆ.ಸಿ.ಬಿ.ಎಂ. ಕಾಲೇಜಿನ ವಿದ್ಯಾರ್ಥಿಗಳಾದ ಜಿ. ಸಂಪತ್ ಕುಮಾರ್, ಎಸ್. ದರ್ಶನ್, ಎಸ್.ಕೆ. ನವಜಿತ್, ಎಸ್. ಅಭಿಶೇಕ್, ಜಿ. ಸೂರ್ಯಕುಮಾರ್, ಎ.ಎಲ್. ಪ್ರಜ್ವಲ್ ರವರುಗಳು, ಶಿಕಾರಿಪುರದ ಕುಮದ್ವತಿ ಕಾಲೇಜಿನಲ್ಲಿ ಇತ್ತೀಚೆಗೆ ನಡೆದ ವಿ.ವಿ. ಅಂತರ್ ಕಾಲೇಜು ಬ್ಯಾಡ್ಮಿಟನ್ ಪಂದ್ಯಾವಳಿಯಲ್ಲಿ ಪ್ರಥಮ ಸ್ಥಾನವನ್ನು ಗಳಿಸಿದ್ದಾರೆ.

Scanned by CamScanner

ಕನ್ನಡಪ್ರಭ
ಮಂಗಳವಾರ 12.9.2017

ಂಗಳೂರು

• ಬಿಜೆಪಿ ಅಧಿಕಾರದಲ್ಲಿದ್ದಾಗ ಮೂವರು ಮುಖ್ಯಮಂ
ಆವರಲ್ಲಿ ಗೊಂದಲ, ಜಗಳದಿಂದ ಮುಖ್ಯಮಂತ್ರಿಯೊ
ಹೋಗುವ ಮೂಲಕ ಅವರ ಯೋಗ್ಯತೆ ಏನೆಂದು ರ
ತಿಳಿದು ಕಾಂಗ್ರೆಸ್ ಪಕ್ಷಕ್ಕೆ ಅಧಿಕಾ
- ಡಾ.ವಿಜಯಕುಮಾರ್, ಜಿಲ್ಲಾ ಕಾ



ಶೃಂಗೇರಿ ಜೆಸಿಬಿಎ ಕಾಲೇಜಿನ ಕ್ರೀಡಾ ವಿದ್ಯಾರ್ಥಿಗಳ ತಂಡ ಶಿಕಾರಿಪುರದಲ್ಲಿ ನಡೆದ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಪ್ರಶಸ್ತಿ ಗಳಿಸಿದೆ. ತಂಡದ ಸಂಪತ್‌ಕುಮಾರ್ ಜಿ. ದರ್ಶನ್ ಎಸ್. ನವಜಿತ್ ಎಸ್.ಕೆ. ಅಭಿಷೇಕ್ ಎಸ್. ಸೂರ್ಯಕುಮಾರ್ ಜಿ. ಪ್ರಜ್ವಲ್ ಎ.ಎಲ್. ಇದ್ದಾರೆ.

Scanned by CamScanner

ವಿಶ್ವವಾಣಿ

11.09.2017 ಸೋಮವಾರ

ಪ್ರತಿಭೆ ಅನಾವರಣಕ್ಕೆ ಪ್ರತಿಭಾ ಕಾರಂಜಿ

ವಿಶ್ವವಾಣಿ ಸುದ್ದಿಮನೆ ಶೃಂಗೇರಿ .

ಪ್ರಸ್ತುತ ದಿನಗಳಲ್ಲಿ ದೃಶ್ಯಮಾಧ್ಯಮಗಳಲ್ಲಿ ವಿದ್ಯಾರ್ಥಿಗಳ ಸೃಜನಶೀಲತೆಗೆ ವಿಪುಲವಾದ ಅವಕಾಶಗಳಿವೆ ಎಂದು ಜಿಪಂ ಶಿಕ್ಷಣ ಹಾಗೂ ಆರೋಗ್ಯ ಸ್ಥಾಯಿ ಸಮಿತಿ ಅಧ್ಯಕ್ಷ ಬಣಕಲ್ ಶ್ಯಾಮಣ್ಣ ಹೇಳಿದರು.

ನಗರದ ಜೆಸಿಬಿಎಂ ಕಾಲೇಜಿನ ಸಭಾಂಗಣದಲ್ಲಿ ಜಿಪಂ, ತಾಪಂ ಸಾರ್ವಜನಿಕ ಶಿಕ್ಷಣ ಇಲಾಖೆ ಮತ್ತು ಕ್ಷೇತ್ರಶಿಕ್ಷಣಾಧಿಕಾರಿ ಇಲಾಖೆಯ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ ತಾಲೂಕು ಪ್ರೌಢಶಾಲೆಗಳ ಮತ್ತು ಉನ್ನತ ಪ್ರೌಢಶಾಲೆಗಳ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವವನ್ನು ಉದ್ಘಾಟಿಸಿ ಮಾತನಾಡಿದರು.

ವಿದ್ಯಾರ್ಥಿಗಳು ದೃಶ್ಯಮಾಧ್ಯಮಗಳತ್ತ ಹೆಚ್ಚಿನ ಗಮನಹರಿಸಿ ತಮಗೆ ಬೇಕಾದ ವಿಷಯವನ್ನು ಆಯ್ಕೆ ಮಾಡಿಕೊಂಡು ದುಡಿದು ನಿಮ್ಮ ಕುಟುಂಬವನ್ನು ರಕ್ಷಿಸಬೇಕೆಂದರು.

ಮಾಜಿ ಶಿಕ್ಷಣ ಸಚಿವ ಗೋವಿಂದಗೌಡರು ಮಕ್ಕಳ ಕ್ರಿಯಾಶೀಲತೆಯ ಬೆಳವಣಿಗೆಗೆ ಮಕ್ಕಳ ಮೇಳ ರೂಪಿಸಿದರು. ಪ್ರಸ್ತುತ ಅದು ಪ್ರತಿಭಾಕಾರಂಜಿಯಾಗಿ ರೂಪುಗೊಂಡಿದೆ. ಮಕ್ಕಳ ಅಂತರ್ಗತದಲ್ಲಿ ಅಡಗಿರುವ ಕ್ರಿಯಾಶೀಲತೆಗೆ ಪ್ರತಿಭಾಕಾರಂಜಿ ಒಂದು ಅಪೂರ್ವ ವೇದಿಕೆ. ತೀರ್ಪುಗಾರರು



ನಗರದ ಜೆಸಿಬಿಎಂ ಕಾಲೇಜಿನ ಸಭಾಂಗಣದಲ್ಲಿ ಆಯೋಜಿಸಲಾದ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವವನ್ನು ಜಿಪಂ ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ ಅಧ್ಯಕ್ಷ ಬಣಕಲ್ ಶಾಮಣ್ಣ ಉದ್ಘಾಟಿಸಿದರು.

ನ್ಯಾಯಸಮ್ಮತವಾಗಿ ತೀರ್ಪು ನೀಡಬೇಕು. ಸಾಂಸ್ಕೃತಿಕ ಭಾವವಿದ್ದರೆ ಮನಸ್ಸು ಸ್ವಚ್ಛವಾಗುತ್ತದೆ. ಸಾಮಾಜಿಕ, ರಾಜಕೀಯ, ಶೈಕ್ಷಣಿಕ ಮೊದಲಾದ ವ್ಯವಸ್ಥೆಗಳಲ್ಲಿ ಭ್ರಷ್ಟಾಚಾರವನ್ನು ಹೊರದೂಡಬೇಕು. ಆಗ ಮಾತ್ರ ದೇಶ ವಿಶ್ವಗುರುವಾಗಲು ಸಾಧ್ಯ ಎಂದರು.

ಮುಖ್ಯ ಅತಿಥಿ ಜಿಪಂ ಸದಸ್ಯ ಬಿ. ಶಿವಶಂಕರ್ ಮಾತನಾಡಿ, ಸರ್ವಶಿಕ್ಷಣ ಅಭಿಯಾನ ಮಾಜಿ ಪ್ರಧಾನಿ ವಾಜಪೇಯಿ ಅವರ ಕನಸು. ಶಿಕ್ಷಣ ಇಲಾಖೆಗೆ 22.99 ಸಾವಿರ ಕೋಟಿ ಹಣ ಸರಕಾರ ವ್ಯಯಿಸುತ್ತದೆ. ಸರಕಾರ ನೀಡಿದ ಹಣವನ್ನು ಸದ್ಬಳಕೆ ಮಾಡಿಕೊಳ್ಳುವುದು ನಮ್ಮ ಆದ್ಯ ಕರ್ತವ್ಯ. ಆಗ ಮಾತ್ರ ರಾಷ್ಟ್ರಪತಿ ಅಬ್ದುಲ್ ಕಲಾಂ ಅವರ ಭವ್ಯಭಾರತದ ಕನಸು ನನಸಾಗಲು ಸಾಧ್ಯ ಎಂದರು.

ಜಿಪಂ ಅಧ್ಯಕ್ಷೆ ಡಾ.ಲಕ್ಷ್ಮೀಪ್ರಸಾದ್ ಮಾತನಾಡಿ, ಪ್ರತಿಯೊಬ್ಬರಲ್ಲೂ ಪ್ರತಿಭೆ ಇರುತ್ತದೆ. ಮನುಷ್ಯನ ಆತ್ಮವಿಶ್ವಾಸ ಹೆಚ್ಚಿಸುವಲ್ಲಿ ಕಲಾಪ್ರಕಾರಗಳ ಕೊಡುಗೆ ಅನನ್ಯ. ಕ್ರಿಯಾಶೀಲತೆ ವ್ಯಕ್ತಿತ್ವಕ್ಕೆ ಮೆರಗು ನೀಡುತ್ತದೆ. ಸುಸಂಸ್ಕೃತ ವ್ಯಕ್ತಿತ್ವ ಸಮಾಜದ ಉನ್ನತಿಗೆ ಸಹಕಾರಿಯಾಗುತ್ತದೆ ಎಂದರು.

ತಾಪಂ ಅಧ್ಯಕ್ಷೆ ಜಯಶೀಲ ಚಂದ್ರಶೇಖರ್ ಅಧ್ಯಕ್ಷತೆ ವಹಿಸಿದರು. ಸದಸ್ಯ ಕುರದಮನೆ ವೆಂಕಟೇಶ್, ಜಿಪಂ ಸದಸ್ಯೆ ಶಿಲ್ಪಾರವಿ, ಪ್ರಾಚಾರ್ಯ ಡಾ. ದೇವಿದಾಸ್ ನಾಯಕ್, ಬಿಇಒ ಎನ್.ಜಿ. ರಾಘವೇಂದ್ರ, ಶಿವಕುಮಾರ್ ಇದ್ದರು.

Scanned by CamScanner

ಅವಕಾಶಗಳು ಸಮರ್ಥವಾಗಿ ಬಳಕೆಯಾದರೆ ಸೃಜನಶೀಲತೆ ಪ್ರದರ್ಶನ

ಪ್ರತಿಭೆ ಅನಾವರಣಕ್ಕೆ ಪ್ರತಿಭಾ ಕಾರಂಜಿ ಸೂಕ್ತ ವೇದಿಕೆ | ಬಣಕಲ್ ಶಾಮಣ್ಣ ಹೇಳಿಕೆ | ಶೃಂಗೇರಿಯಲ್ಲಿ ಕಲೋತ್ಸವ



ಶೃಂಗೇರಿ ಪಟ್ಟಣದಲ್ಲಿ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವ ಉದ್ಘಾಟಿಸಿ ಶಿಕ್ಷಣ ತಜ್ಞ ಬಣಕಲ್ ಶಾಮಣ್ಣ ಮಾತನಾಡಿದರು

ಸಾರ್ವಜನಿಕ ವಾಹನದಲ್ಲಿದ್ದ ಮಹಿಳೆಯ ಮೊಬೈಲ್ ಫೋನ್ ಇರಿಯಲು ಬಂದಿದ್ದ ಹೆಸರು, ಪ್ರಯಾಣವನ್ನು ಸ್ಥಗಿತಗೊಳಿಸಬೇಕೇ: ಬಂದು ಅಣ್ಣಾ. ಭೂಪ್ರಪಾರ ಹೆಸರಾಯಿದಾಗ ದೇಶ ಮಿಲ್ಲಿ ಬಲಿಯಾಗಲು ಸಾಧ್ಯ

ಶಿಕ್ಷಣ ಸಚಿವ ಪ್ರಶ್ನೆಗಳಿಗೆ ಮೌನಾಗಿದ್ದಾರೆ

ವಿದ್ಯಾರ್ಥಿಗಳಲ್ಲಿ ಅಭ್ಯಾಸಕ್ಕೆ ಹೊರತಾದ ಶಿಕ್ಷಣದ ಜತೆಗೆ ಪ್ರಮುಖ ಪಠ್ಯೇತರ ಚಟುವಟಿಕೆಗಳಿಗೆ ಉತ್ತೇಜನ ನೀಡುವ ಕೆಲಸವಾಗಬೇಕು

ಶೃಂಗೇರಿ ಪಟ್ಟಣದಲ್ಲಿ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವ ಉದ್ಘಾಟಿಸಿ ಶಿಕ್ಷಣ ತಜ್ಞ ಬಣಕಲ್ ಶಾಮಣ್ಣ ಮಾತನಾಡಿದರು

Scanned by CamScanner



Surya Kumar G of JCBM College of Sringeri got first place in high jump in an intercollegiate athletics meet of the Kuvempu University, at the Sahyadri College stadium in Shivamogga on Monday | **Shimoga Nandan**

Scanned by CamScanner

ಶೃಂಗೇರಿ:ದಿಲ್ಷಾದ್‌ಗೆ ಗಾನ ನಮನ



ಶೃಂಗೇರಿ ತಾಲೂಕು ಆಡಳಿತದಿಂದ ದಿವಂಗತ ಗಾಯಕಿ ದಿಲ್ಷಾದ್ ಗಾಗಿ ಆಯೋಜಿಸಿದ್ದ ಸಂಗೀತ ಕಾರ್ಯಕ್ರಮದಲ್ಲಿ ಸಚಿವ ಡಿ.ಬಿ.ಚಂದ್ರೇಗೌಡ ಮೊದಲಾದವರು.

Scanned by CamScanner

ಯವಾಣಿ ದಾವಣಗೆರೆ
, ಸೆಪ್ಟೆಂಬರ್ 11, 2017

ಎನ್ನೆಸ್ಸೆಸ್ ಘಟಕದ ಸದ್ಭಾವನಾ ಪಾಕ್ಷಿಕ ಸಮಾರಂಭ

ಶೃಂಗೇರಿ: ಎನ್.ಎಸ್.ಎಸ್ ಚಟುವಟಿಕೆಗಳಲ್ಲಿ ಭಾಗವಹಿಸಿ ಶಿಬಿರದಲ್ಲಿ ಭಾಗವಹಿಸುತ್ತಿದ್ದ ವಿದ್ಯಾರ್ಥಿಗಳನ್ನು ಮಾತನಾಡಿಸಿ ದಿಲ್‌ಷಾದ್‌ರವರು ಅನುಭವ ವಿನಿಮಯ ಮಾಡಿಕೊಳ್ಳುತ್ತಿದ್ದು ಯುವ ಜನತೆಗೆ ಹುರುಪು ತುಂಬುತ್ತಿದ್ದರು ಎಂದು ಜೆಸಿಬಿಎಂ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಡಾ।ಎಚ್.ಸಿ.ವೀರಪ್ಪಗೌಡ ಹೇಳಿದರು.

ಅವರು ಇತ್ತೀಚೆಗೆ ಜೆಸಿಬಿಎಂ ಕಾಲೇಜಿನಲ್ಲಿ ಎನ್.ಎಸ್.ಎಸ್ ಘಟಕ ಸದ್ಭಾವನಾ ಪಾಕ್ಷಿಕದಪ್ರಯುಕ್ತವಿರ್ಪಡಿಸಿದ್ದ ದಿಲ್‌ಷಾದ್‌ಗೆ ಗಾನನಮನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಸರಳತೆ, ಸುಲಭದಲ್ಲಿ ಸತ್ಕಾರ್ಯಗಳಿಗೆ ಎಲ್ಲರಿಗೂ ಸಿಗುವ ಗುಣಹೊಂದಿ ಪೂರ್ವಭಾಷಿಯೂ ಆದ ಇವರು, ರಾಷ್ಟ್ರೀಯ ಸೇವಾ ಯೋಜನೆಯ ನಿಜವಾದ ಭೀಷ್ಮನಂತಿದ್ದರು ಎಂದರು.

ಗಾಯಕ ಎಚ್.ಎಂ.ನಾಗರಾಜ್ ಕಲ್ಕುಟ್ಟಿ ಮಾತನಾಡಿ, ಸ್ವಯಂ ಸ್ಫೂರ್ತಿಯುಳ್ಳ ವಿದ್ಯಾರ್ಥಿಗಳಿಗೆ ಎನ್.ಎಸ್.ಎಸ್ ನಿಜಕ್ಕೂ ಜೀವನ ಸಾಧನೆಯ ಪ್ರೇರಕ. ನಾವು ಬೆಳೆದಂತೆಲ್ಲಾ ನಮ್ಮನ್ನು ಗಮನಿಸುವವರೂ ಹೆಚ್ಚಾಗುತ್ತಾರೆ. ಆದ ಕಾರಣ ಮಾದರಿ ವ್ಯಕ್ತಿತ್ವ ರೂಪಿಸಿಕೊಳ್ಳುವುದು ಅಗತ್ಯ. ಇದಕ್ಕೆ ಎನ್.ಎಸ್.ಎಸ್ ನಿಜಕ್ಕೂ ಪ್ರೇರಣೆ ನೀಡುತ್ತದೆ ಎಂದರು.

ಎನ್.ಎಸ್.ಎಸ್ ಅಧಿಕಾರಿ ಎ.ಜಿ. ಪ್ರಶಾಂತ್ ಮಾತನಾಡಿ, ದಿಲ್‌ಷಾದ್ ಅಂದ್ರೆ ಎನ್.ಎಸ್.ಎಸ್ ನಲ್ಲಿ ಗೀತೆ ಎಂದೇ ಖ್ಯಾತಿ ಹೊಂದಿದ್ದಾರೆ. ಯುವ ಜನಾಂಗಕ್ಕೆ ಮಾರ್ಗದರ್ಶಿ ಸೂತ್ರಗಳನ್ನು ಕೊಟ್ಟ ಅವರನ್ನು ನಾವು ಸದಾ ಸ್ಮರಿಸಬೇಕು ಎಂದರು.

ಶಿಬಿರಾರ್ಥಿ ಪ್ರತಾಪ್ ಪ್ರಾರ್ಥಿಸಿದರು. ಶ್ವೇತಿ ಸ್ವಾಗತಿಸಿದರು, ಎನ್.ಎಸ್.ಎಸ್ ಅಧಿಕಾರಿ ಸಂತೋಷ್ ನಿರೂಪಿಸಿ ವಂದಿಸಿದರು. ಸಭಾಕಾರ್ಯಕ್ರಮದ ನಂತರ ಗಾಯಕ ಎಚ್.ಎಂ. ನಾಗರಾಜರಾವ್ ಸ್ವಯಂಸೇವಕರಿಗೆ ಎನ್.ಎಸ್.ಎಸ್ ಗೀತೆಗಳ ಗಾಯನ ತರಬೇತಿ ನೀಡಿದರು.



ಶೃಂಗೇರಿ: ಎನ್.ಎಸ್.ಎಸ್ ಘಟಕ ಸದ್ಭಾವನಾ ಪಾಕ್ಷಿಕದ ಪ್ರಯುಕ್ತ ವಿರ್ಪಡಿಸಿದ್ದ ದಿಲ್‌ಷಾದ್‌ಗೆ ಗಾನನಮನ ಕಾರ್ಯಕ್ರಮವನ್ನು ಜೆಸಿಬಿಎಂ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಡಾ।ಎಚ್.ಸಿ.ವೀರಪ್ಪಗೌಡ ಉದ್ಘಾಟಿಸಿದರು.

Scanned by CamScanner

ಸೋಮವಾರ • ಸೆಪ್ಟೆಂಬರ್ 11, 2017 ಪ್ರಜಾವಾಣಿ

'ಗುರುವಿನ ಸ್ಥಾನ ಶ್ರೇಷ್ಠವಾದುದು'

ಶೃಂಗೇರಿ: ಭಾರತದ ಬಗ್ಗೆ ಹಲವು ದೇಶದ ಮುತ್ಸದ್ದಿಗಳು ಹಾಡಿ ಹೊಗಳಿದ್ದಾರೆ. ಅಂತಹ ಸಂಸ್ಕೃತಿಯಲ್ಲಿ ಗುರುವಿನ ಸ್ಥಾನ ಶ್ರೇಷ್ಠತೆ ಪಡೆದಿದ್ದು, ಪ್ರಸ್ತುತ ಗುರು ಏನು ಮಹಾ ಎಂಬ ಮನೋಭಾವ ನಮ್ಮಲ್ಲಿ ಮೂಡಿದ್ದು, ಇಂತಹ ಸಂಸ್ಕೃತಿ ಬದಲಾಗಬೇಕು. ತಾಯಿ, ತಂದೆ, ಗುರು, ಸಮಾಜದ ಋಣವನ್ನು ತೀರಿಸಿದ ಗುರುತರ ಜವಾಬ್ದಾರಿ ಎಲ್ಲರ ಮೇಲಿದೆ ಎಂದು ಬೆಂಗಳೂರಿನ ಇಂಟರ್ನ್ಯಾಷನಲ್ ಯೋಗ ಫೌಂಡೇಶನ್‌ನ ಮುಖ್ಯಸ್ಥ ಪ್ರಕಾಶ್‌ಯೋಗಿ ತಿಳಿಸಿದರು.

ಶೃಂಗೇರಿ ತಾಲ್ಲೂಕಿನ ಜೆಸಿಬಿಎಂ ಕಾಲೇಜಿನಲ್ಲಿ ಈಚೆಗೆ ಹಳೇ ವಿದ್ಯಾರ್ಥಿ ಸಂಘ ಆಯೋಜಿಸಿದ ಗುರುನಮನ ಕಾರ್ಯಕ್ರಮದಲ್ಲಿ ಡಾ.ಕೆ.ಬಿ.ರಾಮಕೃಷ್ಣರಾವ್ ದತ್ತಿ ಉಪನ್ಯಾಸ ನೀಡಿದರು.

'ಚೀನಾ ದೇಶದ ಪ್ರಧಾನಿ ಮಾವೋತ್ಸೆ ತುಂಗ್ ಈ ಜನ್ಮದಲ್ಲಿ ಪುಣ್ಯ ಕೆಲಸ ಮಾಡಿದರೆ ಮುಂದಿನ ಜನ್ಮದಲ್ಲಿ ಭಾರತದಲ್ಲಿ ಮಾನವನಾಗಿ ಹುಟ್ಟುತ್ತಾನೆ ಎಂದಿದ್ದಾರೆ. ಕಾಲಜ್ಞಾನಿ ನಾಸ್ಟರ್ಡಾಮೋಸ್ ಮಡಿದಂತೆ ಭಾರತವು ಪ್ರಪಂಚಕ್ಕೆ ದೇವಮಂದಿರವಾಗಲಿದೆ ಎಂದಿದ್ದು ದೇಶ ಪ್ರಸ್ತುತ ಗುರುವಿನ ಸ್ಥಾನವನ್ನು ಪಡೆಯುತ್ತಿದೆ. ನಾವು ಮಕ್ಕಳನ್ನು ಜ್ಞಾನಿಗಳನ್ನಾಗಿ ಮಾಡಬೇಕು' ಎಂದರು.

ಜ್ಞಾನದ ಜತೆಗೆ ಸಂಸ್ಕೃತಿಯನ್ನು ಕಲಿಸಿದರೆ ವೃದ್ಧಾಶ್ರಮವು ಕಡಿಮೆಯಾಗುತ್ತದೆ. ನಾವು ಅಧ್ಯಾತ್ಮಚಿಂತನೆಯತ್ತ ಸಾಗಬೇಕು. ಆಗ ಮಾತ್ರ ದೇಶದಲ್ಲಿ ಸುಸಂಸ್ಕೃತ ವಾತಾವರಣ ಕಾಣಬಹುದು. ಭಾರತ ಯೋಗಿಗಳ ನಾಡು. ಅಹಂಭಾವಿಕೆಯನ್ನು ಬದಿಗೊತ್ತಿದ್ದಾಗ ಮಾತ್ರ ನಾವು ಶ್ರೇಷ್ಠ ಮಾನವರಾಗುತ್ತೇವೆ. ಭಾರತದಲ್ಲಿ ಮನುಷ್ಯರ ನಡುವೆ ವರ್ಣ, ಜಾತಿ, ಭೇದಭಾವವಿಲ್ಲ. ನಮ್ಮಲ್ಲಿರುವ ವ್ಯವಸ್ಥೆಗಳು ಮನುಷ್ಯ-ಮನುಷ್ಯರ ನಡುವೆ ಕಂದಕ ತೋಡುತ್ತಿದೆ ಎಂದರು.

ಗುಜರಾತ್‌ನ ಐ.ಎಫ್.ಎಸ್ ಅಧಿಕಾರಿ ಪ್ರಭುದ್ಧ.ಎಚ್.ಆರ್ ಮಾತನಾಡಿ, 'ವಿದ್ಯಾರ್ಥಿ ಜೀವನ ಸ್ವರ್ಣಯುಗ.ಇಲ್ಲಿ ಸಮಯವನ್ನು ವ್ಯರ್ಥ ಮಾಡಿಕೊಳ್ಳಬಾರದು.ಗುರುಹಿರಿಯರಿಗೆ ಗೌರವ ನೀಡಿ ಭವಿಷ್ಯದ ಬಗ್ಗೆ ಗುರಿಯನ್ನು ಹೊಂದಬೇಕು' ಎಂದರು. ಅಧ್ಯಕ್ಷತೆಯನ್ನು ಹಳೇವಿದ್ಯಾರ್ಥಿ ಸಂಘದ ಕಳಸಪ್ಪ.ಟಿ.ಟಿ ವಹಿಸಿದರು. ಸಂಘದ ಸ್ಥಾಪಕ ಅಧ್ಯಕ್ಷ ಕೆ.ವಿ. ಆರ್.ಟ್ಯಾಗೋರ್, ಪ್ರಾಚಾರ್ಯ ಡಾ.ದೇವಿದಾಸ್ ನಾಯ್ಕ್ ಹಾಜರಿದ್ದರು. ಪ್ರತಿಭಾನ್ವಿತ ವಿದ್ಯಾರ್ಥಿಗಳು ಹಾಗೂ ನಿವೃತ್ತ ಪ್ರಾಧ್ಯಾಪಕರಾದ ಪ್ರೊ.ಕೆಂಚಣ್ಣಗೌಡರನ್ನು ಸಭೆಯಲ್ಲಿ ಸನ್ಮಾನಿಸಲಾಯಿತು.



ಶೃಂಗೇರಿ ತಾಲ್ಲೂಕಿನ ಜೆಸಿಬಿಎಂ ಕಾಲೇಜಿನಲ್ಲಿ ಈಚೆಗೆ ಹಳೆ ವಿದ್ಯಾರ್ಥಿ ಸಂಘ ಆಯೋಜಿಸಿದ ಗುರುನಮನ ಕಾರ್ಯಕ್ರಮದಲ್ಲಿ ಡಾ.ಕೆ.ಬಿ.ರಾಮಕೃಷ್ಣರಾವ್ ದತ್ತಿ ಉಪನ್ಯಾಸ ನೀಡಿ ಪ್ರಕಾಶ್ ಯೋಗಿ ಮಾತನಾಡಿದರು.

Scanned by CamScanner

ಪ್ರಜಾವಾಣಿ ಭಾನುವಾರ • ಸೆಪ್ಟೆಂಬರ್ 10, 2017

'ವ್ಯಕ್ತಿತ್ವ ಬದಲಿಸುವ ಪ್ರತಿಭಾ ಕಾರಂಜಿ'

ಶೃಂಗೇರಿ: ಜೆಸಿಬಿಎಂ ಕಾಲೇಜಿನ ಸಭಾಂಗಣದಲ್ಲಿ ಪ್ರತಿಭಾ ಕಾರಂಜಿಗೆ ಚಾಲನೆ

ಪ್ರಜಾವಾಣಿ ವಾರ್ತೆ



ಜೆಸಿಬಿಎಂ ಕಾಲೇಜಿನ ಸಭಾಂಗಣದಲ್ಲಿ ಜಿಲ್ಲಾ ಪಂಚಾಯಿತಿ,ತಾಲ್ಲೂಕು ಪಂಚಾಯಿತಿ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯ ಸಂಯುಕ್ತಾಶ್ರಯದಲ್ಲಿ ಶನಿವಾರ ಆಯೋಜಿಸಿದ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವವನ್ನು ಜಿಲ್ಲಾ ಪಂಚಾಯಿತಿ ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ ಅಧ್ಯಕ್ಷ ಬಣಕಲ್ ಶಾಮಣ್ಣ ಉದ್ಘಾಟಿಸಿದರು.

ಮುಖ್ಯಾಂಶಗಳು

- ಕ್ರಿಯಾಶೀಲತೆ ವ್ಯಕ್ತಿತ್ವಕ್ಕೆ ಮೆರುಗು
- ಪ್ರತಿಭಾ ಕಾರಂಜಿ ಕಲೋತ್ಸವ ಉದ್ಘಾಟನೆ

ಶೃಂಗೇರಿ: ಸ್ವಾತಂತ್ರ್ಯ ಪೂರ್ವದಲ್ಲಿ ವಿದ್ಯಾರ್ಥಿಗಳ ಪ್ರತಿಭಾ ಪ್ರದರ್ಶನಕ್ಕೆ ಹೆಚ್ಚಿನ ಅವಕಾಶವಿರಲಿಲ್ಲ. ಪ್ರಸ್ತುತ ಶಾಲೆಗಳಲ್ಲಿ, ದೃಶ್ಯಮಾಧ್ಯಮಗಳಲ್ಲಿ ವಿದ್ಯಾರ್ಥಿಗಳ ಸೃಜನಶೀಲತೆಗೆ ವಿಪುಲವಾದ ಅವಕಾಶಗಳಿವೆ. ಈ ಅವಕಾಶಗಳನ್ನು ಸಮರ್ಥವಾಗಿ ಬಳಸಿಕೊಳ್ಳುವತ್ತ ಮಕ್ಕಳು ಹೆಚ್ಚಿನ ಗಮನ ಹರಿಸಬೇಕು ಎಂದು ಜಿಲ್ಲಾಪಂಚಾಯಿತಿ ಶಿಕ್ಷಣ ಹಾಗೂ ಆರೋಗ್ಯ ಸ್ಥಾಯಿ ಸಮಿತಿಯ ಅಧ್ಯಕ್ಷ ಬಣಕಲ್ ಶಾಮಣ್ಣ ತಿಳಿಸಿದರು.

ಶೃಂಗೇರಿ ಜೆಸಿಬಿಎಂ ಕಾಲೇಜಿನ ಸಭಾಂಗಣದಲ್ಲಿ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಸಾರ್ವಜನಿಕ ಶಿಕ್ಷಣ ಇಲಾಖೆ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿ ಇಲಾಖೆಯ ಸಂಯುಕ್ತಾಶ್ರಯದಲ್ಲಿ ಶನಿವಾರ ಆಯೋಜಿಸಿದ ತಾಲ್ಲೂಕು ಪ್ರೌಢಶಾಲೆಗಳ ಮತ್ತು ಪದವಿ ಕಾಲೇಜಿನ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವವನ್ನು ಉದ್ಘಾಟಿಸಿ ಮಾತನಾಡಿದರು.

'ಮಾಜಿ ಶಿಕ್ಷಣ ಸಚಿವ ಗೋವಿಂದಗೌಡರು ಮಕ್ಕಳ ಕ್ರಿಯಾಶೀಲತೆಯ ಬೆಳವಣಿಗೆಗೆ ಮಕ್ಕಳ ಮೇಳ ರೂಪಿಸಿದರು. ಪ್ರಸ್ತುತ ಅದು ಪ್ರತಿಭಾಕಾರಂಜಿಯಾಗಿ ರೂಪುಗೊಂಡಿದೆ.ಮಕ್ಕಳ ಅಂತರ್ಗತದಲ್ಲಿ ಅಡಗಿರುವ ಕ್ರಿಯಾಶೀಲತೆಗೆ ಪ್ರತಿಭಾ ಕಾರಂಜಿ ಒಂದು ಅಪೂರ್ವ ವೇದಿಕೆ. ತೀರ್ಪುಗಾರರು ನ್ಯಾಯಸಮ್ಮತವಾಗಿ ತೀರ್ಪು ನೀಡಬೇಕು. ಸಾಂಸ್ಕೃತಿಕ ಭಾವವಿದ್ದರೆ ಮನಸ್ಸು ಸ್ವಚ್ಛವಾಗುತ್ತದೆ. ಮೋದಿ ಅವರ ಕ್ಲೀನ್ ಇಂಡಿಯಾ ಎಂದರೆ ಮನಸ್ಸು ಹಾಗೂ ಹೃದಯವನ್ನು ಮೊದಲು ಸ್ವಚ್ಛವಾಗಿರಿಸಿಕೊಳ್ಳಬೇಕು ಎಂದು ಅರ್ಥ. ಸಾಮಾಜಿಕ, ರಾಜಕೀಯ, ಶೈಕ್ಷಣಿಕ ಮೊದಲಾದ ವ್ಯವಸ್ಥೆಗಳಲ್ಲಿ ಭ್ರಷ್ಟಾಚಾರವನ್ನು ಹೊರದೂಡಬೇಕು. ಆಗ ಮಾತ್ರ ದೇಶ ವಿಶ್ವಗುರುವಾಗಲು ಸಾಧ್ಯ' ಎಂದರು.

ಪಟ್ಟಣ ಪಂಚಾಯಿತಿ ಅಧ್ಯಕ್ಷೆ ಡಾ.ಲಕ್ಷ್ಮೀಪ್ರಸಾದ್ ಮಾತನಾಡಿ, ಪ್ರತಿಯೊಬ್ಬರಲ್ಲೂ ಪ್ರತಿಭೆ ಇರುತ್ತದೆ. ಮನುಷ್ಯನ ಆತ್ಮವಿಶ್ವಾಸ ಹೆಚ್ಚಿಸುವಲ್ಲಿ ಕಲಾಪ್ರಕಾರಗಳ ಕೊಡುಗೆ ಅಪಾರ. ಕ್ರಿಯಾಶೀಲತೆ ವ್ಯಕ್ತಿತ್ವಕ್ಕೆ ಮೆರುಗು ನೀಡುತ್ತದೆ. ಸುಸಂಸ್ಕೃತ ವ್ಯಕ್ತಿತ್ವ ಸಮಾಜದ ಆಸ್ತಿಗೆ ಸಹಕಾರಿಯಾಗುತ್ತದೆ' ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ತಾಲ್ಲೂಕು ಪಂಚಾಯಿತಿ ಅಧ್ಯಕ್ಷೆ ಜಯಶೀಲ ಚಂದ್ರಶೇಖರ್ ವಹಿಸಿದ್ದರು. ತಾಲ್ಲೂಕು ಪಂಚಾಯಿತಿ ಸದಸ್ಯ ಕುರದಮನೆ ವೆಂಕಟೇಶ್,ಕು. ರೇಖಾ,ಬಿಲ್ಲಾ ಪಂಚಾಯಿತಿ ಸದಸ್ಯೆ ಶಿಲ್ಪಾರವಿ,ಕಾಲೇಜಿನ ಪ್ರಾಚಾರ್ಯ ಡಾ. ದೇವದಾಸ್ ನಾಯಕ್, ಕ್ಷೇತ್ರಶಿಕ್ಷಣಾಧಿಕಾರಿ ಎಸ್.ಜಿ. ರಾಘವೇಂದ್ರ,ಪ್ರೌಢಶಾಲಾ ಸಹಶಿಕ್ಷಕರ ಸಂಘದ ಅಧ್ಯಕ್ಷ ಶಿವಕುಮಾರ್ ಮೊದಲಾದವರು ಉಪಸ್ಥಿತರಿದ್ದರು.

Scanned by CamScanner

ಮಕ್ಕಳಿಗೆ ಜ್ಞಾನದ ಜೊತೆ ಸಂಸ್ಕೃತಿ ಕಲಿಸಿ



ಶೃಂಗೇರಿಯಶ್ರೀಜೆಸಿಬಿಎಂಕಾಲೇಜಿನಹಳೇವಿದ್ಯಾರ್ಥಿಸಂಘದಗುರುನಮನ ಕಾರ್ಯಕ್ರಮದಲ್ಲಿ ಶ್ರೀ ಪ್ರಕಾಶ್‌ಯೋಗಿ ಅವರು ಡಾ.ಕೆ.ಬಿ.ರಾಮಕೃಷ್ಣರಾವ್ ದತ್ತಿ ಉಪನ್ಯಾಸ ನೀಡಿರ್‌ದರು.

ಶೃಂಗೇರಿ: ನಮ್ಮ ಸಂಸ್ಕೃತಿಯಲ್ಲಿ ಗುರುವಿನ ಸ್ಥಾನ ಶ್ರೇಷ್ಠವಾಗಿದ್ದು ತಾಯಿ, ತಂದೆ, ಗುರು ಹಾಗೂ ಸಮಾಜದ ಋಣವನ್ನು ತೀರಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ಇಂಟರ್‌ನ್ಯಾಷನಲ್ ಯೋಗ ಫೌಂಡೇಷನ್‌ನ ಪ್ರಕಾಶ ಯೋಗಿ ತಿಳಿಸಿದರು.

ಅವರು ಜೆಸಿಬಿಎಂ ಕಾಲೇಜಿನ ಹಳೇ ವಿದ್ಯಾರ್ಥಿ ಸಂಘವು ಆಯೋಜಿಸಿದ್ದ ಗುರುನಮನ ಕಾರ್ಯಕ್ರಮದಲ್ಲಿ ಪೂರ್ವ ಪ್ರಾಚಾರ್ಯ ಡಾ.ಕೆ.ಬಿ.ರಾಮಕೃಷ್ಣರಾವ್ ಸ್ಮಾರಕ ದತ್ತಿ ಉಪನ್ಯಾಸ ನೀಡಿದರು.

ಕಾಲಜ್ಞಾನಿ ನಾರ್ಡಾಮಸ್ ಭಾರತವು ಜಗತ್ತಿನ ದೇವ ಮಂದಿರವಾಗಲಿದೆ ಎಂದಿದ್ದಾನೆ. ವರ್ತಮಾನದ ಸ್ಥಿತಿಗತಿ ಗಮನಿಸಿದರೆ ಭಾರತವು ಜಗತ್ತಿನ ಗುರು ಆಗುವ ದಿಕ್ಕಿನಲ್ಲಿ ಸಾಗುತ್ತಿರುವುದನ್ನು ಗಮನಿಸಬಹುದು ಎಂದರು.

ದೇಶದ ಜನರ ನಡುವೆ ವರ್ಣ, ಜಾತಿ, ಭೇದಭಾವಗಳಿಲ್ಲ. ಆದರೆ, ನಮ್ಮಲ್ಲಿರುವ ವ್ಯವಸ್ಥೆಗಳು ಮನುಷ್ಯ-ಮನುಷ್ಯರ ನಡುವೆ ಕಂದಕಗಳನ್ನು ಸೃಷ್ಟಿ ಮಾಡುತ್ತಿವೆ. ನಾವು ಮಕ್ಕಳನ್ನು ಜ್ಞಾನಿಗಳನ್ನಾಗಿ ಮಾಡಬೇಕು. ಜ್ಞಾನದ ಜೊತೆಗೆ ಸಂಸ್ಕೃತಿಯನ್ನು ಕಲಿಸಿದರೆ ವೃದ್ಧಾಶ್ರಮಗಳು ಕಡಿಮೆ ಆಗುತ್ತದೆ. ಆಧ್ಯಾತ್ಮಿಕ ಚಿಂತನೆಯತ್ತ ನಾವು ವಾಲಿದಾಗ ಮಾತ್ರ ದೇಶದಲ್ಲಿ ಸುಸಂಸ್ಕೃತ ವಾತಾವರಣ ಕಾಣಬಹುದು ಎಂದು ಅಭಿಪ್ರಾಯಪಟ್ಟರು.

ಮುಖ್ಯ ಅತಿಥಿಗಳಾಗಿದ್ದ ಗುಜರಾತ್‌ನ ಐ.ಎಫ್.ಎಸ್ ಅಧಿಕಾರಿ ಪ್ರಭುದ್ದ.ಎಚ್.ಆರ್ ಮಾತನಾಡಿ, ವಿದ್ಯಾರ್ಥಿ ಜೀವನ ಸ್ವರ್ಣ ಯುಗವಾಗಿದ್ದು ಇಲ್ಲಿ ಸಮಯವನ್ನು ವ್ಯರ್ಥ ಮಾಡಬಾರದು. ಗುರುಹಿರಿಯರಿಗೆ ಗೌರವ ನೀಡಿ ಭವಿಷ್ಯದ ಬಗ್ಗೆ ಗುರಿಯನ್ನು ಹೊಂದಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹಳೇವಿದ್ಯಾರ್ಥಿ ಸಂಘದ ಕಳಸಪ್ಪ.ಟಿ.ಟಿ. ವಹಿಸಿದ್ದರು. ಸಂಘದ ಸ್ಥಾಪಕಾಧ್ಯಕ್ಷ ಕೆ.ವಿ.ಆರ್. ಟ್ಯಾಗೋರ್, ಪ್ರಾಚಾರ್ಯ ಡಾ.ದೇವಿದಾಸ್ ನಾಯ್ಕ್ ಹಾಜರಿದ್ದರು. ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಹಾಗೂ ನಿವೃತ್ತ ಪ್ರಾಧ್ಯಾಪಕರಾದ ಪ್ರೋ. ಕೆಂಚಣ್ಣಗೌಡರನ್ನು ಸನ್ಮಾನಿಸಲಾಯಿತು.

Scanned by CamScanner

ವಿಜಯ ಕರ್ನಾಟಕ VK ಬುಧವಾರ, 6 ಸೆಪ್ಟೆಂಬರ್ 2017, ಶಿವಮೊಗ್ಗ

ಮಕ್ಕಳನ್ನು ಜ್ಞಾನವಂತರನ್ನಾಗಿಸಿ



ಶೃಂಗೇರಿ ಶ್ರೀ ಜೆಸಿಬಿಎಂ ಕಾಲೇಜಿನಲ್ಲಿ ಜೆಸಿಬಿಎಂ ಕಾಲೇಜಿನ ಹಳೇ ವಿದ್ಯಾರ್ಥಿ ಸಂಘ ಆಯೋಜಿಸಿದ್ದ ಗುರುನಮನ ಮತ್ತು ಪ್ರಾಂಶುಪಾಲ ಡಾ.ಕೆ.ಬಿ. ರಾಮಕೃಷ್ಣರಾವ್ ದತ್ತಿ ಉಪನ್ಯಾಸ ಕಾರ್ಯಕ್ರಮವನ್ನು ಪ್ರಕಾಶ್ ಯೋಗಿ ಉದ್ಘಾಟಿಸಿದರು.

ಶೃಂಗೇರಿ: ಮಕ್ಕಳನ್ನು ಕೇವಲ ವಿದ್ಯಾವಂತರನ್ನಾಗಿ ಸುತ್ತಿದ್ದು, ಮಕ್ಕಳನ್ನು ಜ್ಞಾನವಂತರಾಗಿಸುವತ್ತ ಹೆಚ್ಚು ಕಾಳಜಿ ವಹಿಸಬೇಕಾಗಿದೆ ಎಂದು ಬೆಂಗಳೂರಿನ ಇಂಟರ್ ನ್ಯಾಷನಲ್ ಯೋಗ ಫೌಂಡೇಶನ್‌ನ ಪ್ರಕಾಶ್‌ಯೋಗಿ ಹೇಳಿದರು.

ಅವರು ಶ್ರೀ ಜೆಸಿಬಿಎಂ ಕಾಲೇಜಿನಲ್ಲಿ ಹಳೇ ವಿದ್ಯಾರ್ಥಿ ಸಂಘ ಮಂಗಳವಾರ ಆಯೋಜಿಸಿದ್ದ ಗುರು ನಮನ ಮತ್ತು ಪ್ರಾಂಶುಪಾಲ ಡಾ.ಕೆ.ಬಿ.ರಾಮಕೃಷ್ಣರಾವ್ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದರು.

ಪೋಷಕರು ತಮ್ಮ ಮಕ್ಕಳನ್ನು ಹೆಚ್ಚು ಅಂಕ ಗಳಿಸುವುದಕ್ಕೆ ಮಹತ್ವ ನೀಡುತ್ತಿದ್ದಾರೆ. ಆದರೆ ಸಂಸ್ಕಾರ ಇಲ್ಲದೆ, ಆಚಾರ ವಿಚಾರಗಳನ್ನು ಮರೆಯುತ್ತಿದ್ದೇವೆ. ನಮ್ಮ ದೇಶ ಸಂತರು, ಯೋಗಿಗಳು, ಮಹಾತ್ಮರು ನೆಲೆಸಿದ ನಾಡಾಗಿತ್ತು. ಆದರೆ ಹಣದ ವ್ಯಾಮೋಹದ ಹಿಂದೆ ಬಿದ್ದಿರುವ ನಾವುಗಳು ಮನುಷ್ಯತ್ವ ಮರೆಯುತ್ತಿದ್ದೇವೆ.ಪೋಷಕರನ್ನು ವೃದ್ಧಾಶ್ರಮಕ್ಕೆ ತಳ್ಳುತ್ತಿರುವ ಈಗಿನ ಸಂಸ್ಕೃತಿ ಆತಂಕಕಾರಿಯಾಗಿದೆ. ನಮ್ಮಲ್ಲಿ ಹೆಚ್ಚುತ್ತಿರುವ ಸೋಮಾರಿತನ ನಮ್ಮ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತಿದೆ ಎಂದರು.

ಗುರು, ಪೋಷಕರು, ಸಮಾಜದ ಋಣ ಭಾರಗಳನ್ನು ನಾವು ತೀರಿಸಲು ಸಾಧ್ಯವಿಲ್ಲ. ಪ್ರತಿ ದಿನ ಯೋಗ ಮಾಡುವುದರಿಂದ ಲವಲವಿಕೆ ಹಾಗೂ ಆರೋಗ್ಯದಿಂದ ಇರಲು ಸಾಧ್ಯ. ಚೀನಾ ತ್ಯಜಿಸಿ, ದೇಶೀಯ ವಸ್ತು ಖರೀದಿಸುವ ಮೂಲಕ ದೇಶಪ್ರೇಮ ಹೆಚ್ಚಿಸಿಕೊಳ್ಳಬೇಕು ಎಂದರು.

ಹಳೇ ವಿದ್ಯಾರ್ಥಿ ಸಂಘದ ಸಂಸ್ಥಾಪನ ಅಧ್ಯಕ್ಷ ಕೆ.ವಿ.ಆರ್.ಟ್ಯಾಗೂರ್ ಮಾತನಾಡಿ, ಶಿಕ್ಷಣದಿಂದ ಮಲೆನಾಡಿನ ಮಕ್ಕಳು ವಂಚಿತರಾಗಬಾರದು ಎಂಬ ಉದ್ದೇಶದಿಂದ ಸ್ಥಾಪಿತವಾದ ಸಂಘ ನೂರಾರು ವಿದ್ಯಾರ್ಥಿಗಳಿಗೆ ಸಹಕಾರ ನೀಡಿದೆ ಎಂದರು.

ಸಂಘದ ಕಾರ್ಯದರ್ಶಿ ಎಚ್.ಟಿ.ರಮೇಶ್ ಮಾತನಾಡಿದರು. ಕಾಲೇಜಿನ ಎಲ್ಲಾ ಅಧ್ಯಾಪಕರನ್ನು ಗೌರವಿಸಲಾಯಿತು. ನಿವೃತ್ತ ಪ್ರಾಧ್ಯಾಪಕ ಡಿ.ಕೆಂಚಣ್ಣ ಗೌಡರನ್ನು ಗೌರವಿಸಲಾಯಿತು.

ಗುಜರಾತ್ ಸೆಕ್ಟರ್‌ನ ಡಿಸಿಎಫ್ ಎಚ್.ಆರ್.ಪ್ರಭುದ್ಧ ಕಾಲೇಜಿನ ಪ್ರಾಂಶುಪಾಲ ಡಾ.ದೇವಿದಾಸ ನಾಯಕ್, ಪಿಯುಸಿ ವಿಭಾಗದ ಮುಖ್ಯಸ್ಥ ಎ.ಜಿ.ಪ್ರಶಾಂತ್ ಇದ್ದರು.

ಹಳೇ ವಿದ್ಯಾರ್ಥಿ ಸಂಘದ ಅಧ್ಯಕ್ಷ ಟಿ.ಟಿ.ಕಳಸಪ್ಪ ಅಧ್ಯಕ್ಷತೆ ವಹಿಸಿದ್ದರು. ಉಮೇಶ್ ಪುದುವಾಳ್ ನಿರೂಪಿಸಿದರು.

Scanned by CamScanner

ಕನ್ನಡಪ್ರಭ
ಭಾನುವಾರ 3.9.2017

ಸ್ಪರ್ಧಾತ್ಮಕ ಜಗತ್ತಿನಲ್ಲಿ ಯಾವುದೇ ಸವಾಲು ಎದುರಿಸಲು ಸನ್ನದ್ಧರಾಗಿ

ಜೆಸಿಬಿಎಂ ಕಾಲೇಜಿನಲ್ಲಿ ಆಯೋಜಿಸಿದ್ದ ಪ್ರತಿಭಾನ್ವೇಷಣೆ ಕಾರ್ಯಕ್ರಮ ಉದ್ಘಾಟಿಸಿದ ಕಂಬಳಗದ್ದೆ ಮಂಜುನಾಥ್ ಸಲಹೆ

ಶೃಂಗೇರಿ: ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಜಗತ್ತಿನಲ್ಲಿ ಯಾವುದೇ ಸವಾಲು ಎದುರಿಸಲು ಸನ್ನದ್ಧರಾಗಿದ್ದು ತಮ್ಮ ಪ್ರತಿಭೆಯನ್ನು ಸದ್ವಿನಿಯೋಗ ಮಾಡಿಕೊಂಡು ಯಶಸ್ಸುಗಳಿಸಬೇಕೆಂದು ಕಂಬಳಗದ್ದೆ ಮಂಜುನಾಥ ತೀರ್ಥರು.

ಪಟ್ಟಣದ ಜೆಸಿಬಿಎಂ ಕಾಲೇಜಿನಲ್ಲಿ ಲಲಿತ ಕಲಾ ಸಮಿತಿಯಿಂದ ಪದವಿ ವಿದ್ಯಾರ್ಥಿಗಳಿಗೆ ಆಯೋಜಿಸಲಾಗಿದ್ದ ಪ್ರತಿಭಾನ್ವೇಷಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ಆಯೋಜಿಸಿದ್ದ ಪ್ರತಿಭಾನ್ವೇಷಣೆ ಕಾರ್ಯಕ್ರಮ ಕಂಬಳಗದ್ದೆ ಮಂಜುನಾಥ ಉದ್ಘಾಟಿಸಿದರು.

ವಿದ್ಯಾರ್ಥಿಗಳು ಶಾಲಾ ಕಾಲೇಜು ದಿನಗಳಲ್ಲಿ ಪಠ್ಯಮೊಂದಿಗೆ ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು. ಕಲೆ ಸಾಹಿತ್ಯ, ಸಂಸ್ಕೃತಿ, ಕ್ರೀಡೆ ಚಟುವಟಿಕೆಗಳಲ್ಲಿ ಆಸಕ್ತಿ ಮೂಡಿಸಿಕೊಳ್ಳಬೇಕು. ಆಸಕ್ತಿಯುತ ಕ್ಷೇತ್ರ ಆಯ್ಕೆ ಮಾಡಿಕೊಂಡು ಪ್ರತಿಭಾ ಸಂಪನ್ನರಾಗಿ ಕಠಿಣ ಪರಿಶ್ರಮದಿಂದ ಗುರಿಯತ್ತ ಮುನ್ನಡೆದಾಗ ಸಿದ್ಧಿ ಸಾಕ್ಷಿ ಮಲ್ಲಿಕ್, ಸಚಿನ್ ತೆಂಡುಲ್ಕರ್, ಅಮಿತಾಬ್ ಬಚ್ಚನ್ ರಂತೆ ರೂಪುಗೊಳ್ಳಲು ಸಾಧ್ಯ. ಗೆಲುವು ನಮಗೆ ಲಭಿಸ ಬೇಕಾದರೆ ಕಠಿಣ ಪರಿಶ್ರಮ ಮತ್ತು ಶ್ರದ್ಧೆ ಅತ್ಯಗತ್ಯ ಅದಕ್ಕೆ ಪೂರಕ ಗುರು ಹಿರಿಯರ ಮಾರ್ಗದರ್ಶನ ಇದನ್ನು ಯುವಜನತೆ ಅರ್ಥ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ನಿಮ್ಮನ್ನು ಸಾಕಿ ಸಲುಹಿ ನಿಮ್ಮ ಬಗ್ಗೆ ಅಪಾರ ಹೊಂಗನಸು ಕಂಡಿರುವ ತಂದೆ ತಾಯಿ ಬಗ್ಗೆ ಗೌರವ ಆದರ ಹೊಂದಿರುವುದಲ್ಲದೆ ವೃದ್ಧಾಪ್ಯದಲ್ಲಿ ಸೌರವಯುತವಾಗಿ ನೋಡಿಕೊಳ್ಳಬೇಕು. ಹಾಗೂ ಅವರ ಜೊತೆಗಿರುವ ಜವಾಬ್ದಾರಿಯುವ ಜನತೆಯದ್ದಾಗಿದೆ ಎಂದ ಅವರು, ಮೊಬೈಲ್ ಮುಂತಾದವುಗಳ ಬಳಕೆ ದುರುಪಯೋಗವಾಗುತ್ತಿರುವ ಬಗ್ಗೆ ಕಳವಳ ವ್ಯಕ್ತಪಡಿಸಿದರು. ಮುಖ್ಯ ಅತಿಥಿ ಲಲಿತ ಕಲಾ ಸಮಿತಿ ಸಂಚಾಲಕ ಡಾ.ಎಚ್.ಜಿ ಅನಂತ ಹೆಗ್ಗೋಡು ಮಾತನಾಡಿ, ಪ್ರತಿಭಾನ್ವಿತರಿಗೆ ಕಾಲೇಜಿನಲ್ಲಿ, ವಿಶ್ವವಿದ್ಯಾಲಯ ಮಟ್ಟದಲ್ಲಿ ನೀಡುವ ವಿವಿಧ ಅವಕಾಶಗಳ ಬಗ್ಗೆ ಮಾಹಿತಿ ನೀಡಿದರು. ಸೌತ್ ವಿಷ್ಣನ್ ಝೋನ್‌ನಲ್ಲಿ ಥಾಗವಹಿಸಿದ್ದ ಪ್ರತಿಭಾವಂತರನ್ನು ಅಭಿನಂದಿಸಿದರು. ಪ್ರಾಚಾರ್ಯ ಡಾ. ದೇವದಾಸ್ ಎಸ್.ನಾಯಕ್ ಅಧ್ಯಕ್ಷತೆವಹಿಸಿದ್ದರು. ಪ್ರೊ.ಮುನೀರ್ ಅಹಮ್ಮದ್ ಖಾನ್ ಹಾಗೂ ಕಲಾ, ವಿಜ್ಞಾನ, ವಾಣಿಜ್ಯ ಸಂಘಗಳ ಅಧ್ಯಕ್ಷರು ಉಪಸ್ಥಿತರಿದ್ದರು.

Scanned by CamScanner

ಶನಿವಾರ, 2 ಸೆಪ್ಟೆಂಬರ್ 2017, ಶಿವಮೊಗ್ಗ

VK ವಿಜಯ ಕರ್ನಾಟಕ

ಸ್ಪರ್ಧಾತ್ಮಕ ಜಗತ್ತಿನ ಸವಾಲು ಎದುರಿಸಿ

■ ವಿಕ ಸುದ್ದಿಲೋಕ ಶೃಂಗೇರಿ

ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಜಗತ್ತಿನಲ್ಲಿ ಎಲ್ಲಾ ಸವಾಲುಗಳನ್ನು ಎದುರಿಸಲು ಸಿದ್ಧರಾಗಿರಬೇಕು ಎಂದು ಪ್ರಗತಿಪರ ಕೃಷಿಕ ಕಂಬಳಗದ್ದೆ ಮಂಜುನಾಥ್ ಹೇಳಿದರು.

ಇಲ್ಲಿನ ಶ್ರೀ ಜೆ.ಸಿ.ಬಿ.ಎಂ.ಕಾಲೇಜಿನಲ್ಲಿ ಲಲಿತ ಕಲಾ ಸಮಿತಿ ವತಿಯಿಂದ ಪದವಿ ವಿದ್ಯಾರ್ಥಿಗಳಿಗೆಗುರುವಾರ ಆಯೋಜಿಸಿದ್ದ ಪ್ರತಿಭಾನ್ವೇಷಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಇಂದು ಎಲ್ಲಾ ಕ್ಷೇತ್ರಗಳಲ್ಲಿ ಸವಾಲುಗಳಿದ್ದು ಅದನ್ನು ಎದುರಿಸುವ ಆತ್ಮಸ್ಥೈರ್ಯವನ್ನು ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕು. ನಮ್ಮ ಆಸಕ್ತಿಯುತ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡು ಪ್ರತಿಭಾನ್ವಿತರಾಗಿ ಕಠಿಣ ಪರಿಶ್ರಮದಿಂದ ಗುರಿಯತ್ತ ಮುನ್ನೆಡೆದಾಗ ನಾವು ಪಿ.ವಿ.ಸಿಂಧು, ಸಾಕ್ಷಿ ಮಲ್ಲಿಕ್, ಸಚಿನ್ ತೆಂಡೂಲ್ಕರ್, ಅಮಿತಾಭ್ ಬಚ್ಚನ್‌ರಂತೆ ಯಶಸ್ಸು ಗಳಿಸಲು ಸಾಧ್ಯ. ಗೆಲುವಿಗಾಗಿ ಕಠಿಣ ಪರಿಶ್ರಮ ಮತ್ತು ಶ್ರದ್ಧೆ ಅತ್ಯಗತ್ಯ. ಅದಕ್ಕೆ ಗುರು, ಹಿರಿಯರ ಮಾರ್ಗದರ್ಶನ ಅತ್ಯವಶ್ಯಕವಾಗಿದೆ. ಇದನ್ನು ಯುವ ಜನತೆ ಅರ್ಥಮಾಡಿಕೊಳ್ಳಬೇಕು. ನಮ್ಮನ್ನು ಸಾಕಿ ಸಲುಹಿದ ಪೋಷಕರ ಬಗ್ಗೆ ಗೌರವಾದರಗಳನ್ನುನೋಂದಿರುವುದರ ಜತೆಗೆ ವೃತ್ತಾವ್ಯದಲ್ಲಿ ಅವರನ್ನು ಗೌರವಯುತವಾಗಿ ನೋಡಿಕೊಳ್ಳುವ ಜವಾಬ್ದಾರಿ ಯುವ ಜನತೆಯದ್ದಾಗಿದೆ ಎಂದರು.

ಸಮಿತಿಯ ಸಂಚಾಲಕಿ ಡಾ.ಎಚ್.ಜಿ. ಅನಿತ ಹೆಗ್ಗೋಡು ಮಾತನಾಡಿ, ಪ್ರತಿಭಾನ್ವಿತರಿಗೆ ಕಾಲೇಜಿನಲ್ಲಿ, ವಿಶ್ವವಿದ್ಯಾನಿಲಯ ಮಟ್ಟದಲ್ಲಿ ದೊರೆಯುವ ವಿವಿಧ ಅವಕಾಶಗಳ ಬಗ್ಗೆ ಮಾಹಿತಿ ನೀಡಿದರು.

ಸೌಕ್ ಫಿಷನ್ ಶೋನ್‌ನಲ್ಲಿ ಭಾಗವಹಿಸಿದ ಪ್ರತಿಭಾನ್ವೇಷಣೆಯ ಆಭಿನಂದನೆಯನ್ನು ಸ್ವೀಕರಿಸಿದರು. ಪ್ರಾಂಶುಪಾಲ ಡಾ.ದೇವಿದಾಸ್ .ಎನ್. ನಾಯಕ್ ಅಧ್ಯಕ್ಷತೆ ವಹಿಸಿದ್ದರು. ವಿದ್ಯಾರ್ಥಿ ಕ್ಷೇಮಪಾಲನ ಅಧಿಕಾರಿ ಪ್ರೊ.ಮುನಿರ್ ಅಹಮ್ಮದ್ ಖಾನ್, ಪಾಣಿಜ್ಯ ಸಂಘದ ಅಧ್ಯಕ್ಷ ಪೂರ್ವಿಕ್, ವಿಜ್ಞಾನ ಸಂಘದ ಅಧ್ಯಕ್ಷ ಆಕ್ಷಯ್, ಕಲಾ ಸಂಘದ ಅಧ್ಯಕ್ಷ ಸೃಜನ್ ಉಪಸ್ಥಿತರಿದ್ದರು.



ಶೃಂಗೇರಿ ಜೆ.ಸಿ.ಬಿ.ಎಂ. ಕಾಲೇಜಿನಲ್ಲಿ ಪದವಿ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ಪ್ರತಿಭಾನ್ವೇಷಣೆ ಕಾರ್ಯಕ್ರಮವನ್ನು ಕಂಬಳಗದ್ದೆ ಮಂಜುನಾಥ್ ಉದ್ಘಾಟಿಸಿದರು.

1 Media Company Limited, Sy. No.45/2, Sarjalanga Road, Navule, Shivamogga - 577 204
served. Reproduction in whole or part without permission is prohibited

RNI No. KARKAN/2000/4175
Vol. 17 Issue No. 253

Scanned by CamScanner



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ಆಯೋಜಿಸಿದ್ದ ಪ್ರತಿಭಾನ್ವೇಷಣೆ ಕಾರ್ಯಕ್ರಮವನ್ನು ಲಯನ್ ಮಂಜುನಾಥ್ ಉದ್ಘಾಟಿಸಿದರು.

ಪ್ರತಿಭಾನ್ವೇಷಣೆ ಕಾರ್ಯಕ್ರಮ ಉದ್ಘಾಟನೆ

ಶೃಂಗೇರಿ: ಸ್ಪರ್ಧಾತ್ಮಕ ಜಗತ್ತಿನಲ್ಲಿ ವಿದ್ಯಾರ್ಥಿಗಳು ಸವಾಲು ಎದುರಿಸಲು ಸನ್ನದ್ಧರಾಗಿ, ತಮ್ಮ ಪ್ರತಿಭೆಯ ಸದ್ವಿನಿಯೋಗದಿಂದ ಯಶಸ್ಸನ್ನು ಗಳಿಸಬೇಕು ಎಂದು ಲಯನ್ಸ್ ಮಾಜಿ ಅಧ್ಯಕ್ಷ ಕಂಬಳಗದ್ದೆ ಮಂಜುನಾಥ ತಿಳಿಸಿದರು.

ಅವರು ಜೆ.ಸಿ.ಬಿ.ಎಂ ಕಾಲೇಜಿನ ಲಲಿತಕಲಾ ಸಮಿತಿಯಿಂದ ಪದವಿ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ಪ್ರತಿಭಾನ್ವೇಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ನಮ್ಮ ಆಸಕ್ತಿಗೆ ಅನುಗುಣವಾದ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡು, ಕಠಿಣ ಪರಿಶ್ರಮದಿಂದ ಗುರಿಯತ್ತ ಮುನ್ನೆಡೆದಾಗ ನಾವು ಪಿ.ವಿ. ಸಿಂಧು, ಸಾಕ್ಷಿ ಮಲ್ಲಿಕ್, ಸಚಿನ್ ತೆಂಡುಲ್ಕರ್ ಅಥವಾ ಅಮಿತಾಬ್ ಬಚ್ಚನ್ ರಂತೆ ರೂಪುಗೊಳ್ಳಲು ಸಾಧ್ಯ ಎಂದು ಹೇಳಿದರು.

ಸಮಿತಿಯ ಸಂಚಾಲಕಿ ಡಾ.ಹೆಚ್.ಜಿ. ಅನಿತ ಹೆಗ್ಗೋಡು ಅವರು ಪ್ರತಿಭಾನ್ವಿತರಿಗೆ ಕಾಲೇಜಿನಲ್ಲಿ, ವಿಶ್ವವಿದ್ಯಾಲಯ ಮಟ್ಟದಲ್ಲಿ ದೊರೆಯುವ ವಿವಿಧ ಅವಕಾಶಗಳ ಬಗ್ಗೆ ಮಾಹಿತಿಯನ್ನು ನೀಡಿದರು. ಸೌತ್ ಏಷ್ಯನ್ ಝೋನ್‌ನಲ್ಲಿ ಭಾಗವಹಿಸಿದ್ದ ಪ್ರತಾಪ್ ಅವರನ್ನು ಅಭಿನಂದಿಸಲಾಯಿತು. ಪ್ರಾಚಾರ್ಯ ಡಾ. ದೇವಿದಾಸ್ ಎಸ್.ನಾಯಕ್ ಅಧ್ಯಕ್ಷತೆ ವಹಿಸಿದ್ದರು. ವಿದ್ಯಾರ್ಥಿ ಕ್ಷೇಮಪಾಲನ ಅಧಿಕಾರಿ ಪ್ರೋ.ಮುನಿರ್ ಅಹಮ್ಮದ್ ಖಾನ್ ಹಾಗೂ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಸಂಘಗಳ ಅಧ್ಯಕ್ಷರು ಉಪಸ್ಥಿತರಿದ್ದರು.

Scanned by CamScanner

19 ಸಂಚಿಕೆ: 02 ದಿನಾಂಕ: 25 – 08 – 2017 ಪುಟ: 8

ನಾಗೇಶ್ ಪತ್ರಿಕೆ

ಟೇಬಲ್ ಟೆನ್ನಿಸ್, ಶ್ರೀ ಜೆ.ಸಿ.ಬಿ.ಎಂ ಕಾಲೇಜಿಗೆ ಪ್ರಶಸ್ತಿ



ಶೃಂಗೇರಿ: ಇಲ್ಲಿನ ಶ್ರೀ ಜೆ.ಸಿ.ಬಿ.ಎಂ ಕಾಲೇಜಿನ ವಿದ್ಯಾರ್ಥಿಗಳಾದ ಹೆಚ್.ಎನ್. ಮಹಂತೇಶ್, ಎಸ್.ಆರ್. ಸಾತ್ವಿಕ್, ಆರ್. ಅಬೀಲ್, ಎಸ್. ಅಭಿಷೇಕ್ ಮತ್ತು ಬಿ.ಎಂ. ನಿಬಿಲ್ ರವರುಗಳು, ಶಿಕಾರಿಪುರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಇತ್ತೀಚೆಗೆ ನಡೆದ ಕುವೆಂಪು ವಿಶ್ವವಿದ್ಯಾನಿಲಯ ಅಂತರ್‌ಕಾಲೇಜು ಟೇಬಲ್ ಟೆನ್ನಿಸ್ ಸ್ಪರ್ಧೆಯಲ್ಲಿ ಭಾಗವಹಿಸಿ, ಪ್ರಥಮ ಸ್ಥಾನವನ್ನು ಗಳಿಸಿದ್ದಾರೆ. ಯಶಸ್ಸು ಸಾಧಿಸಿದ ಎಲ್ಲ ವಿದ್ಯಾರ್ಥಿಗಳನ್ನು ಕಾಲೇಜಿನ ಪ್ರಾಂಶುಪಾಲರು ಮತ್ತು ಸಿಬ್ಬಂದಿ ವರ್ಗ ಹಾಗೂ ಆಡಳಿತ ಮಂಡಳಿ ಸದಸ್ಯರು ಅಭಿನಂದಿಸಿದ್ದಾರೆ.

Scanned by CamScanner

ಕನ್ನಡಪ್ರಭ
ಮಂಗಳವಾರ 8.8.2017

ಗರಿಷ್ಠ 25°C | ಕನಿಷ್ಠ 19°C

ಸಣ್ ಸುದ್ದಿ

ಕ್ವಿಟ್ ಇಂಡಿಯಾ ಚಳವಳಿ 75ನೇ ವರ್ಷಾಚರಣೆ 9ಕ್ಕೆ

ಚಿಕ್ಕಮಗಳೂರು: ಸ್ವಾತಂತ್ರ್ಯಕ್ಕಾಗಿ ನಡೆದ ಅನೇಕ ಚಳವಳಿಗಳಲ್ಲಿ 'ಬ್ರಿಟಿಷರೆ ಭಾರತ ಬಿಟ್ಟು ತೊಲಗಿ (ಕ್ವಿಟ್ ಇಂಡಿಯಾ) ಚಳವಳಿಯೂ ಒಂದಾಗಿದ್ದು, ಇದಕ್ಕೆ 75 ವರ್ಷಗಳು ತುಂಬುತ್ತಿರುವ ಹಿನ್ನೆಲೆಯಲ್ಲಿ ಆ.9 ರಂದು 75ನೇ ವರ್ಷಾಚರಣೆ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಕಾಂಗ್ರೆಸ್ ವಕ್ತಾರ ಎಂ.ಸಿ. ಶಿವಾನಂದಸ್ವಾಮಿ ತಿಳಿಸಿದ್ದಾರೆ. ಚಿಕ್ಕಮಗಳೂರಿನಲ್ಲಿ ಜಿಲ್ಲಾ ಕಾಂಗ್ರೆಸ್ ಹಾಗೂ ಸೇವಾದಳ ಘಟಕಗಳ ವತಿಯಿಂದ ಕಾರ್ಯಕ್ರಮ ನಡೆಯಲಿದೆ.



ಶೃಂಗೇರಿ ಜೆಸಿಬಿಎಂ ಕಾಲೇಜು ಆವರಣದಲ್ಲಿ ರೋಟರಿ ಕ್ಲಬ್ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ವನಮಹೋತ್ಸವ ಕಾರ್ಯಕ್ರಮದಲ್ಲಿ ಸದಸ್ಯರು ಗಿಡನೆಟ್ಟು ನೀರೆರೆದರು. ವೀರಪ್ಪಗೌಡ, ಪ್ರಶಾಂತ್, ಅನಿತ್ ಕುಮಾರ್ ಮತ್ತಿತರರು ಇದ್ದರು.

Scanned by CamScanner

ಕನ್ನಡಪ್ರಭ
ಭಾನುವಾರ 6.8.2017

ಹೊಸ ಆವಿಷ್ಕಾರ ಬಗ್ಗೆಯೂ ಆಸಕ್ತಿ ಇರಲಿ: ಪ್ರೊ.ಕುಲಕರ್ಣಿ

ಶೃಂಗೇರಿ: ಕಾಲೇಜು ದಿನಗಳಲ್ಲಿ ವಿದ್ಯಾರ್ಥಿಗಳು ಪಠ್ಯ ಅಧ್ಯಯನದತ್ತ ಮಾತ್ರ ಆಸಕ್ತಿ ವಹಿಸದೇ ಆವಿಷ್ಕಾರ, ಸಂಶೋಧನೆ ಬಗ್ಗೆಯೂ ಆಸಕ್ತಿ ಬೆಳೆಸಿಕೊಳ್ಳಬೇಕು ಎಂದು ಬೆಂಗಳೂರಿನ ಸೆಂಟರ್ ಫಾರ್ ನ್ಯಾನೋ ಮತ್ತು ಸಾಫ್ಟ್ ಮ್ಯಾಟರ್ ಸೈನ್ಸ್ ಅಧ್ಯಕ್ಷ ಪ್ರೊ. ಜೆ.ಯು. ಕುಲಕರ್ಣಿ ಹೇಳಿದರು.

ಪಟ್ಟಣದ ಜೆಸಿಬಿಎಂ ಕಾಲೇಜಿನಲ್ಲಿ ಸೆಂಟರ್ ಫಾರ್ ನ್ಯಾನೋ ಮತ್ತು ಸಾಫ್ಟ್ ಮ್ಯಾಟರ್ ಸೈನ್ಸ್ ಸಹಯೋಗದೊಂದಿಗೆ ನಡೆದ 'ನ್ಯಾನೋ ತಂತ್ರಜ್ಞಾನದಲ್ಲಿ ವಿವಿಧ ಅವಕಾಶಗಳು' ಎಂಬ ವಿಚಾರವಾಗಿ ಏರ್ಪಡಿಸಿದ್ದ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ನಡೆದ 'ನ್ಯಾನೋ ತಂತ್ರಜ್ಞಾನದಲ್ಲಿ ವಿವಿಧ ಅವಕಾಶಗಳು' ಕುರಿತ ಕಾರ್ಯಾಗಾರ ಪ್ರೊ.ಕುಲಕರ್ಣಿ ಉದ್ಘಾಟಿಸಿ ಮಾತನಾಡಿದರು.

ಪಠ್ಯ ವಿಷಯಗಳಲ್ಲಿ ಹೇಗೆ ಅಧ್ಯಯನಶೀಲರಾಗಿರುತ್ತೇವೆಯೋ ಹಾಗೆಯೇ ಇತರ ವಿಷಯಗಳ ಬಗ್ಗೆಯೂ ಆಸಕ್ತರಾಗಬೇಕು. ವಿಜ್ಞಾನ, ವೈಜ್ಞಾನಿಕ, ತಾಂತ್ರಿಕ ವಿಷಯಗಳ ಬಗ್ಗೆ ಕುತೂಹಲ ಆಸಕ್ತಿ ಮೂಡಿಸಿಕೊಳ್ಳಬೇಕು. ಸಿಕ್ಕಿದ ಅವಕಾಶ ಬಳಸಿ ಕೊಳ್ಳಬೇಕು ಎಂದು ಸಲಹೆ ನೀಡಿದರು.

ಪ್ರಾಚಾರ್ಯ ದೇವಿದಾಸ್ ನಾಯಕ್ ಅಧ್ಯಕ್ಷತೆ ವಹಿಸಿದ್ದರು. ಭೌತಶಾಸ್ತ್ರ ಮುಖ್ಯಸ್ಥ ಮುನೀರ್ ಅಹ ಮ್ಮದ್ ಖಾನ್, ಡಾ.ಸ್ವಾಮಿ ಎಂ, ಪ್ರಶಾಂತ್ ಎ.ಜಿ. ಇತರರು ಉಪಸ್ಥಿತರಿದ್ದರು. ಕಾರ್ಯಾಗಾರದಲ್ಲಿ ನ್ಯಾನೋ- ತಂತ್ರಜ್ಞಾನದ ಮಾಹಿತಿ, ನ್ಯಾನೋ ತಂತ್ರಜ್ಞಾನದಲ್ಲಿ ಗ್ರಾಫೀನ್ ಬಳಕೆ ವಿಚಾರವಾಗಿ ಮಾಹಿತಿ, ಸೋಲಾರ್ ಸೆಲ್‌ನಲ್ಲಿ ನ್ಯಾನೋ ವಸ್ತುಗಳ ಬಳಕೆ ವಿಚಾರವಾಗಿ ಮಾಹಿತಿ ನೀಡಲಾಯಿತು.

Scanned by CamScanner

ವಿಜಯ ಕರ್ನಾಟಕ ಬುಧವಾರ, 2 ಆಗಸ್ಟ್ 201

ಜೀವನ ಮೌಲ್ಯ ಅಳವಡಿಸಿಕೊಳ್ಳಿ

■ ವಿಕ ಸುದ್ದಿಲೋಕ ಕೊಪ್ಪ

ಮಾನವೀಯತೆಗಿಂತ ಮಿಗಿಲಾದದ್ದು ಯಾವುದೂ ಇಲ್ಲ ಎಂದು ಶೃಂಗೇರಿಯ ಜೆಸಿಬಿಎಂ ಕಾಲೇಜಿನ ಪ್ರಾಂಶುಪಾಲ ಡಾ.ದೇವಿದಾಸ ನಾಯಕ್ ತಿಳಿಸಿದರು.

ತಾಲೂಕಿನ ಹರಿಹರಪುರದ ಶ್ರೀ ಮಠದಲ್ಲಿ ಸ್ವಯಂ ಪ್ರಕಾಶ ಟ್ರಸ್ಟ್ ವತಿಯಿಂದ ಮಂಗಳವಾರ ನಡೆದ ವಿದ್ಯಾರ್ಥಿಗಳಿಗೆ ಸಹಾಯಧನ ವಿತರಣಾ ಕಾರ್ಯ ಕ್ರಮದಲ್ಲಿ ಅವರು ಮಾತನಾಡಿದರು.

ಇಂದು ಪ್ರತಿಭೆ ಮತ್ತು ವ್ಯಕ್ತಿತ್ವದ ನಡುವೆ ಸಂಘರ್ಷಗಳಾಗುತ್ತಿವೆ. ಆದರೆ ಅವೆಲ್ಲಕ್ಕಿಂತ ಮಿಗಿಲಾದ ಜೀವನ ಮೌಲ್ಯಗಳನ್ನು ವಿದ್ಯಾರ್ಥಿಗಳು ಅದನ್ನು ಅಳವಡಿಸಿಕೊಳ್ಳಬೇಕು. ಸತ್ಯ, ಅಹಿಂಸೆ, ಕಾಯಕ, ಸೇವೆ ಮತ್ತು ಪ್ರೀತಿಯನ್ನು ಬೆಳೆಸಿಕೊಳ್ಳಬೇಕು ಎಂದರು.

ಉದ್ಯಮಿ ರಾಜೇಂದ್ರ ರಾವ್ ಮಾತನಾಡಿ, ವಿದ್ಯಾರ್ಥಿ ದೆಸೆಯಿಂದಲೆ ಸೌಜನ್ಯತೆ ಬೆಳೆಸಿಕೊಳ್ಳಬೇಕು. ಸಾಧನೆ ಹೆಚ್ಚಿದಂತೆ ನಯ, ವಿನಯವು ಹೆಚ್ಚಬೇಕು. ನಾವೇ ಅಧಿಕರೆಂದು ಅಹಂಕಾರಪಡಬಾರದು ಎಂದು ಹೇಳಿದರು.

ತಾ.ಪಂ.ಸದಸ್ಯ ಪ್ರವೀಣ್ ಕುಮಾರ್ ಮಾತನಾಡಿ, ಶ್ರೀಮಠದಿಂದ ಒಂದಿನಿಂದಲೂ ಜಾತಿ, ಧರ್ಮ ಹೊರತಾದ ದಾಸೋಹ ಕಾರ್ಯ ನಡೆಯುತ್ತಲೇ ಬಂದಿದೆ ಎಂದರು.

ಉಪನ್ಯಾಸಕ ದಯಾನಂದ್ ಮಾತನಾಡಿ, ಸಹಾಯಧನದ ಸದುಪಯೋಗ ಮಾಡಬೇಕು ಎಂದು ಹೇಳಿದರು.

ಅಭಿನವ ರಾಮಾನಂದ ಸರಸ್ವತೀ ಪದವಿ ಪೂರ್ವ ಕಾಲೇಜಿನ ಆಡಳಿತ ಸಮಿತಿಯ ಗೌರವ ಕಾರ್ಯದರ್ಶಿ ಗೋವಿಂದ್ ಭಟ್ ಮಾತನಾಡಿದರು.

ಶ್ರೀಮಠದ ಆಡಳಿತಾಧಿಕಾರಿ ರವಿಶಂಕರ್ ಅಧ್ಯಕ್ಷತೆ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಶ್ರೀ ಮಠದ ಸ್ವಯಂ ಪ್ರಕಾಶ ಟ್ರಸ್ಟ್ ವತಿಯಿಂದ ಪಟ್ಟಣದ ವಿಶೇಷ ಅಗತ್ಯವುಳ್ಳ 'ಮಾ' ಮಕ್ಕಳ ಸಂಸ್ಥೆಗೆ 25 ಸಾವಿರ ರೂ. ಚೆಕ್ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ತಾಲೂಕಿನ 155 ಮಕ್ಕಳಿಗೆ 3.5 ಲಕ್ಷ ರೂ. ಸಹಾಯಧನ ನೀಡಲಾಯಿತು.

ಗುರುರಾಜ ಭಟ್ ಮತ್ತು ಸುಬ್ರಹ್ಮಣ್ಯ ವೇದ ಘೋಷ ನಡೆಸಿ, ಶ್ರೀ ಮಠದ ವ್ಯವಸ್ಥಾಪಕ ಕೃಷ್ಣಮೂರ್ತಿ ಭಟ್ ಸ್ವಾಗತಿಸಿ, ನಿರೂಪಿಸಿದರು.



ಕೊಪ್ಪ ತಾಲೂಕು ಹರಿಹರಪುರದ ಶ್ರೀ ಮಠದಲ್ಲಿ ಸ್ವಯಂ ಪ್ರಕಾಶ ಟ್ರಸ್ಟ್ ವತಿಯಿಂದ ಆಡಳಿತಾಧಿಕಾರಿ ರವಿಶಂಕರ್ ಅವರು ವಿದ್ಯಾರ್ಥಿಗಳಿಗೆ ಸಹಾಯಧನ ವಿತರಿಸಿದರು.

Scanned by CamScanner

2
ಶುಕ್ರವಾರ
7 ಜುಲೈ 2017
7 JULY 2017

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » SHIVAMOGGA

ಸ್ನಾತಕೋತ್ತರ ಪದವಿ ಪ್ರವೇಶಕ್ಕೆ ಅವಕಾಶ

ಶಂಗೇರಿ: ಜೆಸಿಬಿಎಂ ಕಾಲೇಜಿನಲ್ಲಿ ಪ್ರಸಕ್ತ ಸಾಲಿನ ಸ್ನಾತಕೋತ್ತರ ಅರ್ಥಶಾಸ್ತ್ರ ಪ್ರಥಮ ವರ್ಷದ ಪ್ರವೇಶ ಪ್ರಾರಂಭ ಆಗಿದ್ದು ಬಿಎ ಪದವೀಧರರು ಜು.31ರ ಒಳಗೆ ಪ್ರವೇಶ ಪಡೆಯಬಹುದು ಎಂದು ಪ್ರಾಂಶುಪಾಲ ಡಾ. ದೇವಿದಾಸ ಎಸ್. ನಾಯ್ಕ್ ಹಾಗೂ ಕೇಂದ್ರದ ಸಂಯೋಜಕ ಡಾ. ಎಚ್.ಸಿ.ವೀರಪ್ಪ ಗೌಡ ತಿಳಿಸಿದ್ದಾರೆ. ಮಾಹಿತಿಗೆ ಕಾಲೇಜು ಕಚೇರಿ ಅಥವಾ ಕೇಂದ್ರದ ಸಂಯೋಜಕರನ್ನು ಸಂಪರ್ಕಿಸಬಹುದು.

Scanned by CamScanner

ಗುರುವಾರ, 6 ಜುಲೈ 2017

ವಿಜಯ ಕರ್ನಾಟಕ

ಪ್ರವೇಶ ಪ್ರಾರಂಭ

ಶೃಂಗೇರಿ: ಜೆಸಿಬಿಎಂ ಕಾಲೇಜಿನಲ್ಲಿ ಪ್ರಸಕ್ತ ಸಾಲಿನ ಸ್ನಾತಕೋತ್ತರ ಅರ್ಥಶಾಸ್ತ್ರ ಪ್ರಥಮ ವರ್ಷದ ಪ್ರವೇಶ ಪ್ರಾರಂಭವಾಗಿದ್ದು ಆಸಕ್ತ ಬಿ.ಎ.ಪದವಿಧರರು ಜು. 31 ರೊಳಗೆ ಪ್ರವೇಶ ಪಡೆಯುವಂತೆ ಪ್ರಾಂಶುಪಾಲ ಡಾ.ದೇವಿದಾಸ ಎಸ್. ನಾಯ್ಕ್ ಹಾಗೂ ಕೇಂದ್ರದ ಸಂಯೋಜಕ ಡಾ.ಎಚ್. ಸಿ.ವೀರಪ್ಪಗೌಡ ತಿಳಿಸಿದ್ದಾರೆ. ಮಾಹಿತಿಗೆ ಕಾಲೇಜು ಕಚೇರಿ ಅಥವಾ ಕೇಂದ್ರದ ಸಂಯೋಜಕರನ್ನು ಸಂಪರ್ಕಿಸಬಹುದು.

Scanned by CamScanner

ನಮ್ಮ ಚಿಕ್ಕಮಗಳೂರು

ಜೆಸಿಬಿಎಂ ಅಧ್ಯಯನ ಕೇಂದ್ರಕ್ಕೆ ಶೇ.100 ಫಲಿತಾಂಶ

ಶೃಂಗೇರಿ: ಕುವೆಂಪು ವಿವಿಯು ಅಂತಿಮ ಸ್ನಾತಕೋತ್ತರ ಅರ್ಥಶಾಸ್ತ್ರ ಪರೀಕ್ಷೆಯಲ್ಲಿ ಜೆಸಿಬಿಎಂ ಕಾಲೇಜಿನ ಅಧ್ಯಯನ ಕೇಂದ್ರಕ್ಕೆ ಶೇ.100 ಫಲಿತಾಂಶ ಬಂದಿದೆ. 14 ವಿದ್ಯಾರ್ಥಿಗಳಲ್ಲಿ 5 ಜನ ಅತ್ಯುನ್ನತ ಶ್ರೇಣಿ, 7 ಜನ ಉನ್ನತ ಶ್ರೇಣಿ ಹಾಗೂ 2 ಜನ ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿರುತ್ತಾರೆ. ಬೇಬಿ ರೆಹಾನ 1424 ಅಂಕ ಪಡೆದು ಕೇಂದ್ರಕ್ಕೆ ಪ್ರಥಮ ಸ್ಥಾನ ಪಡೆದಿದ್ದಾರೆ ಎಂದು ಪ್ರಾಂಶುಪಾಲ ಡಾ.ದೇವಿದಾಸ ಎಸ್. ನಾಯ್ಕ ಹಾಗೂ ಅಧ್ಯಯನ ಕೇಂದ್ರದ ಸಂಯೋಜಕ ಡಾ. ಎಚ್.ಸಿ.ವೀರಪ್ಪಗೌಡ ಜಂಟಿ ಹೇಳಿಕೆಯಲ್ಲಿ ತಿಳಿಸಿದ್ದಾರೆ.



Scanned by CamScanner

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » SHIVAMOGGA

ಬೀಬಿ ಝೋಹಾಗೆ 1,424 ಅಂಕ

■ ವಿಜಯವಾಣಿ ಸುದ್ದಿಜಾಲ ಶೃಂಗೇರಿ

ಮೇ 2017ರಲ್ಲಿ ನಡೆದ ಕುವೆಂಪು ವಿಶ್ವ ವಿದ್ಯಾಲಯದ ಅಂತಿಮ ಸ್ನಾತಕೋತ್ತರ ಅರ್ಥಶಾಸ್ತ್ರ ಪರೀಕ್ಷೆಯಲ್ಲಿ ಕಾಲೇಜಿನ ಅಧ್ಯಯನ ಕೇಂದ್ರಕ್ಕೆ ಶೇ.100 ಫಲಿತಾಂಶ ಬಂದಿದ್ದು ಅತ್ಯುನ್ನತ ಶ್ರೇಣಿಯಲ್ಲಿ ಐವರು, ಉನ್ನತ ಶ್ರೇಣಿಯಲ್ಲಿ 7 ಮಂದಿ ಹಾಗೂ ದ್ವಿತೀಯ ಶ್ರೇಣಿಯಲ್ಲಿ ಇಬ್ಬರು ಉತ್ತೀರ್ಣರಾಗಿದ್ದಾರೆ. 1,424 ಅಂಕ ಪಡೆದಿರುವ ಬೀಬಿ ಝೋಹಾ ಕೇಂದ್ರಕ್ಕೆ ಪ್ರಥಮ ಸ್ಥಾನ ಗಳಿಸಿದ್ದಾರೆ.



» 8

Scanned by CamScanner

ಶೃಂ ಪತ್ರಿಕೆ

ದಿನಾಂಕ : 15 - 05 - 2017

ದ್ವಿತೀಯ ಪಿ.ಯು.ಸಿ. ಪರೀಕ್ಷೆ

ಶ್ರೀ ಜಿ.ಸಿ.ಬಿ.ಎಂ.ಕಾಲೇಜಿಗೆ, ಶೇ. 86 ಫಲಿತಾಂಶ







ಶೃಂಗೇರಿ: ಇಲ್ಲಿ ಶ್ರೀ ಜಗದ್ಗುರು ಚಂದ್ರಶೇಖರ ಭಾರತೀ ಸ್ಮಾರಕ ಪದವಿಪೂರ್ವ ಕಾಲೇಜಿಗೆ ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ ಶೇ. 86 ಫಲಿತಾಂಶ ಲಭಿಸಿದೆ. ಪರೀಕ್ಷೆಗೆ ಹಾಜರಾದ ಒಟ್ಟು 257 ವಿದ್ಯಾರ್ಥಿಗಳಲ್ಲಿ 220 ವಿದ್ಯಾರ್ಥಿಗಳು ತೇರ್ಗಡೆ ಹೊಂದಿರುತ್ತಾರೆ. 37 ವಿದ್ಯಾರ್ಥಿಗಳು ಅತ್ಯುನ್ನತ. 141 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯನ್ನು ಪಡೆದಿದ್ದಾರೆ. ವಿಜ್ಞಾನ ವಿಭಾಗದ ಟಿ.ಪಿ. ಪ್ರಶಾಂತ ಒಟ್ಟು 575 ಅಂಕ (ಶೇ. 96%) ಪಡೆದು ಕಾಲೇಜಿಗೆ ಪ್ರಥಮ ಸ್ಥಾನ ಗಳಿಸಿರುತ್ತಾನೆ. ಇವರು ವೈಕುಂಠಪುರದ ಪ್ರಭಾಕರ ಹಾಗೂ ಶಾಂತಲಾರವರ ಪುತ್ರ. ವಾಣಿಜ್ಯ ವಿಭಾಗದಲ್ಲಿ ಹೆಚ್.ಕೆ. ಕಾವ್ಯಶ್ರೀ ಒಟ್ಟು 556 (ಶೇ. 93%) ಅಂಕಗಳೊಂದಿಗೆ ದ್ವಿತೀಯ ಸ್ಥಾನವನ್ನು ಪಡೆದಿರುತ್ತಾಳೆ. ಕಲಾ ವಿಭಾಗದಲ್ಲಿ ಜಿ.ಎಸ್. ರಾಜ್‌ಕಿಶನ್ ರವರು ಶೇ. 90 ಅಂಕಗಳನ್ನು ಪಡೆದು ಕಲಾ ವಿಭಾಗದಲ್ಲಿ ಪ್ರಥಮ ಸ್ಥಾನಗಳಿಸಿರುತ್ತಾರೆ. ಎಂದು ಕಾಲೇಜಿನ ಪ್ರಾಚಾರ್ಯ ಡಾ. ದೇವಿದಾಸ ನಾಯಕ್ ತಿಳಿಸಿ, ಯಶಸ್ಸು ಪಡೆದ ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ.

Scanned by CamScanner

ವಿ. ವಾ. 23-3-17

ಕಾನೂನು ಅರಿವು ಅಗತ್ಯ

ಸೌಲಭ್ಯಕ್ಕೆ ಕಾನೂನು ಚೌಕಟ್ಟಿನಲ್ಲಿ ಹೋರಾಡಿ | ರವೀಂದ್ರನಾಥ್ ಶಾನುಭಾಗ್ ಸಲಹೆ

■ ವಿಜಯವಾಣಿ ಸುದ್ದಿಜಾಲ ಶೃಂಗೇರಿ

ಭಾರತದಲ್ಲಿ ಸರ್ವರಿಗೂ ಸಮಾನತೆಯ ಹಕ್ಕಿದೆ. ಹಕ್ಕು ಎಂದರೆ ಹಿಂಸೆಯಿಂದ ಮಾಡುವ ಹೋರಾಟವಲ್ಲ. ನಮ್ಮ ಹಕ್ಕಿನ ಮೌಲ್ಯಗಳನ್ನು ಅರಿತು ಕಾನೂನಿನ ಚೌಕಟ್ಟಿನಲ್ಲಿ ಹೋರಾಡಬೇಕು ಎಂದು ಉಡುಪಿಯ ಮಾನವ ಹಕ್ಕುಗಳ ಸಂರಕ್ಷಣಾ ಸಮಿತಿ ಅಧ್ಯಕ್ಷ ಡಾ. ರವೀಂದ್ರನಾಥ್ ಶಾನುಭಾಗ್ ತಿಳಿಸಿದರು.

ಜೆಸಿಬಿಎಂ ಕಾಲೇಜಿನ ಡಾ. ಟಿಎಂಎ ಪೈ ಸಭಾಂಗಣದಲ್ಲಿ ಬುಧವಾರ ಬೆಂಗಳೂರಿನ ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆ, ಜೆಸಿಬಿಎಂ ಕಾಲೇಜಿನ ಕಲಾಸಂಘದ ಆಶ್ರಯದಲ್ಲಿ ಏರ್ಪಡಿಸಿದ್ದ ಮಾನವ ಹಕ್ಕುಗಳು ಮತ್ತು ಮಾನವೀಯ ಮೌಲ್ಯಗಳು ರಾಜ್ಯ ಮಟ್ಟದ ವಿಚಾರ ಸಂಕಿರಣದಲ್ಲಿ 'ಮಾನವ ಹಕ್ಕುಗಳು ಮತ್ತು ಸಾಮಾಜಿಕ ಜವಾಬ್ದಾರಿಗಳು' ಕುರಿತು ಉಪನ್ಯಾಸ ನೀಡಿದರು.

ಪ್ರಜಾಕಂತ್ರ ವ್ಯವಸ್ಥೆಯಲ್ಲಿ ಸರ್ವರೂ ಒಡೆಯರು. ಮಾನವ ಹಕ್ಕುಗಳ ಬಗ್ಗೆ ಹೆಚ್ಚಾಗಿ ಸರ್ಕಾರಿ ಅಧಿಕಾರಿಗಳಿಗೆ ಅರಿವು ಇರಬೇಕು. ಆಗಮಾತ್ರ ಹಕ್ಕುಗಳ ರಕ್ಷಣೆ ಸಾಧ್ಯ. ಭಾರತದಲ್ಲಿ 80 ಲಕ್ಷದಷ್ಟು ಅಂಗವಿಕಲ ಮಕ್ಕಳಿದ್ದಾರೆ. ವೈದ್ಯರ ಬಳಿ ಹೋಗದೆ ಗರ್ಭಿಣಿಯರು ಔಷಧ ಸೇವಿಸುವುದೇ ಅಂಗವಿಕಲ ಮಕ್ಕಳ ಹುಟ್ಟಿಗೆ ಪ್ರಮುಖ ಕಾರಣ ಎಂದರು.

ಶಿವಮೊಗ್ಗ ನ್ಯಾಷನಲ್ ಕಾನೂನು ಕಾಲೇಜಿನ ಪ್ರಾಚಾರ್ಯ ಪ್ರೊ. ಜಿ.ಆರ್.ಜಗದೀಶ್ 'ಮಾನವ ಹಕ್ಕುಗಳ ರಕ್ಷಣೆಯಲ್ಲಿ ಆಯೋಗದ ಪಾತ್ರ' ಕುರಿತು ಮಾತನಾಡಿ, ಮಾನವನು ಸಮಾಜ ಜೀವಿ. ಪ್ರತಿಯೊಬ್ಬರಿಗೂ ಜೀವಿಸುವ, ಶಿಕ್ಷಣ ಪಡೆಯುವ ಹಕ್ಕಿದೆ. ಪರಿಪೂರ್ಣವಾದ ಸ್ವಾತಂತ್ರ್ಯ ಯಾರಿಗೂ ಇಲ್ಲ ಎಂದು ಹೇಳಿದರು.

ಸರ್ಕಾರದ ಅಧೀನದಲ್ಲಿರುವ ಮಾನವ ಹಕ್ಕುಗಳ ಆಯೋಗದಲ್ಲಿ ನಮ್ಮ ಹಕ್ಕುಗಳ ಉಲ್ಲಂಘನೆಯಾದಾಗ ಪ್ರಶ್ನಿಸಬಹುದು. ನಮ್ಮ ಹಕ್ಕುಗಳ ಬಗ್ಗೆ ನಮಗೆ ಅರಿವು ಇರಬೇಕು. ಮಾನವ ಹಕ್ಕುಗಳು ಜೀವನದ ಮೌಲ್ಯ ಎಂದರು.



ಶೃಂಗೇರಿಯಲ್ಲಿ ಏರ್ಪಡಿಸಿದ್ದ ಮಾನವ ಹಕ್ಕುಗಳು ಮತ್ತು ಮಾನವೀಯ ಮೌಲ್ಯಗಳು ರಾಜ್ಯ ಮಟ್ಟದ ವಿಚಾರ ಸಂಕಿರಣದಲ್ಲಿ ಬೆಂಗಳೂರು ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆ ನಿರ್ದೇಶಕ ಎಸ್.ಬಿ.ಗುಲಗುಂಜಿ ಮಾತನಾಡಿದರು.

> ಗ್ರಾಮೀಣ ಪ್ರದೇಶಗಳಲ್ಲಿ ಇಂದು ಮಾನವಹಕ್ಕುಗಳ ಉಲ್ಲಂಘನೆಯಾಗುತ್ತಿದ್ದು ಯುವಪೀಳಿಗೆ ಶಿಕ್ಷಣದ ಜತೆಗೆ ಕಾನೂನು ಅರಿಯುವ ಅಗತ್ಯವಿದೆ.
> | ಡಾ. ರವೀಂದ್ರನಾಥ್ ಶಾನುಭಾಗ್

> ಮಹಿಳೆಯರು ಸಬಲರಾಗಲು ಅವರಿಗೆ ಶಿಕ್ಷಣ ನೀಡಬೇಕು. ಶಿಕ್ಷಣದಿಂದ ಆತ್ಮವಿಶ್ವಾಸ ಮೂಡುತ್ತದೆ. ಸಮಾಜದ ಸಮಸ್ಯೆಗಳ ಬಗ್ಗೆ ಚಿಂತನೆ ಮಾಡುವ ಹಾಗೂ ಪ್ರಶ್ನಿಸುವ ಮನೋಭಾವ ಅವರಲ್ಲಿ ಉಂಟಾಗುತ್ತದೆ. ಸಮಾಜದ ಸೂಕ್ಷ್ಮಗಳನ್ನು ಅರ್ಥಮಾಡಿಕೊಂಡು ಕಾನೂನುಬದ್ಧವಾಗಿ ಹೋರಾಟ ಮಾಡುವತ್ತ ಮಹಿಳೆಯರು ಕಾರ್ಯಪ್ರವೃತ್ತರಾಗಬೇಕು.
> | ಡಾ. ಹಾ.ಮ.ನಾಗಾರ್ಜುನ
> ಶಿವಮೊಗ್ಗ ಸಹ್ಯಾದ್ರಿ ವಿಜ್ಞಾನ ಕಾಲೇಜಿನ ಸಹಾಯಕ ಪ್ರಾಧ್ಯಾಪಕ

ಕಾರ್ಯಕ್ರಮವನ್ನು ಬೆಂಗಳೂರು ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆ ನಿರ್ದೇಶಕ ಎಸ್.ಬಿ.ಗುಲಗುಂಜಿ ಉದ್ಘಾಟಿಸಿದರು. ಕಾಲೇಜಿನ ಪ್ರಾಚಾರ್ಯ ಡಾ. ದೇವಿದಾಸ ಎಸ್. ನಾಯಕ್ ಅಧ್ಯಕ್ಷತೆ ವಹಿಸಿದ್ದರು. ಕಾಲೇಜಿನ ವಿಶ್ವಸ್ಥ ಮಂಡಳಿ ಸದಸ್ಯ ಆನಂತಪದ್ಮನಾಭ ಭಟ್, ಪ್ರಾಧ್ಯಾಪಕಿ ಯಶವಂತಿ [illegible]. ಬೆಂಗಳೂರಿನ ಕಾನೂನು ಸಂಸದೀಯ ಸುಧಾರಣಾ ಸಂಸ್ಥೆ ಮುಖ್ಯಸ್ಥ ಡಾ. ರೇವಯ್ಯ [illegible]ಡೆಯರ್ ಭಾಗವಹಿಸಿದ್ದರು.

Scanned by CamScanner

ಪ್ರಭವಾಣಿ 23-2-17

'ಮಾನವ ಹಕ್ಕುಗಳ ಜವಾಬ್ದಾರಿ ಪ್ರತಿಯೊಬ್ಬರ ಆದ್ಯ ಕರ್ತವ್ಯ'

ಶೃಂಗೇರಿ: ಹಕ್ಕು ಎಂದರೆ ಹಿಂಸೆಯಿಂದ ಮಾಡುವ ಹೋರಾಟವಲ್ಲ. ನಮ್ಮ ಹಕ್ಕಿನ ಮೌಲ್ಯಗಳನ್ನು ಅರಿತು ಕಾನೂನಿನ ಚೌಕಟ್ಟಿನಲ್ಲಿ ಹೋರಾಡಬೇಕು ಎಂದು ಉಡುಪಿಯ ಮಾನವ ಹಕ್ಕುಗಳ ಸಂರಕ್ಷಣಾ ಸಮಿತಿ ಅಧ್ಯಕ್ಷ ಡಾ.ರವೀಂದ್ರನಾಥ್ ಶ್ಯಾನುಭೋಗ್ ತಿಳಿಸಿದರು.

ಜಿಸಿಬಿಎಂ ಕಾಲೇಜಿನ ಡಾ.ಟಿ.ಎಂ.ಎ.ಪೈ ಸಭಾಂಗಣದಲ್ಲಿ ಬೆಂಗಳೂರಿನ ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆ ಹಾಗೂ ಜಿಸಿಬಿಎಂ ಕಾಲೇಜಿನ ಕಲಾಸಂಘದ ಸಂಯುಕ್ತ ಆಶ್ರಯದಲ್ಲಿ ಬುಧವಾರ ನಡೆದ 'ಮಾನವ ಹಕ್ಕುಗಳು ಮತ್ತು ಮಾನವೀಯ ಮೌಲ್ಯಗಳು' ರಾಜ್ಯಮಟ್ಟದ ವಿಚಾರ ಸಂಕಿರಣದಲ್ಲಿ 'ಮಾನವ ಹಕ್ಕುಗಳು ಮತ್ತು ಸಾಮಾಜಿಕ ಜವಾಬ್ದಾರಿಗಳು' ವಿಷಯ ಕುರಿತು ಅವರು ಉಪನ್ಯಾಸ ನೀಡಿದರು.

ಶಿವಮೊಗ್ಗ ನ್ಯಾಷನಲ್ ಲಾ ಕಾಲೇಜಿನ ಪ್ರಾಚಾರ್ಯರಾದ ಪ್ರೊ.ಜಿ.ಆರ್. ಜಗದೀಶ್ 'ಮಾನವ ಹಕ್ಕುಗಳ ರಕ್ಷಣೆ



ಶೃಂಗೇರಿಯ ಜಿಸಿಬಿಎಂ ಕಾಲೇಜಿನ ಡಾ.ಟಿ.ಎಂ.ಎ.ಪೈ ಸಭಾಂಗಣದಲ್ಲಿ ಬುಧವಾರ ನಡೆದ 'ಮಾನವ ಹಕ್ಕುಗಳು ಮತ್ತು ಮಾನವೀಯ ಮೌಲ್ಯಗಳು' ರಾಜ್ಯಮಟ್ಟದ ವಿಚಾರ ಸಂಕಿರಣ ಕಾರ್ಯಕ್ರಮ ನಡೆಯಿತು.

ಯಲ್ಲಿ ಮಾನವಹಕ್ಕುಗಳ ಆಯೋಗದ ಪಾತ್ರ'ದ ಕುರಿತು ಮಾತನಾಡಿ, ಮಾನವನು ಸಮಾಜ ಜೀವಿ. ಪ್ರತಿಯೊಬ್ಬರಿಗೂ ಜೀವಿಸುವ, ಶಿಕ್ಷಣ ಪಡೆಯುವ ಹಕ್ಕು ಇದ್ದು, ಮಾನವಹಕ್ಕುಗಳ ಅಧಿನಿಯಮ ಕಾಯ್ದೆಯಡಿ 1993ರಲ್ಲಿ ಕಾನೂನು ಚೌಕಟ್ಟಿನಲ್ಲಿ ಮಾನವ ಆಯೋಗದ ಸಂಸ್ಥೆ ರಾಷ್ಟ್ರ ಮತ್ತು ರಾಜ್ಯಮಟ್ಟದಲ್ಲಿ ಸ್ಥಾಪನೆಯಾಗಿದೆ. ರಾಜ್ಯಮಟ್ಟದಲ್ಲಿ ಪ್ರಸ್ತುತ ಆಯೋಗವಿದೆ. ಆದರೆ ನಮ್ಮ ಹಕ್ಕುಗಳ ಉಲ್ಲಂಘನೆಯಾದಾಗ ಬೆಲ್ಲಾ ನ್ಯಾಯಾಲಯದಲ್ಲಿ ದೂರನ್ನು ಸಲ್ಲಿಸಬಹುದು. ಮಾನವಹಕ್ಕುಗಳನ್ನು ವರ್ಗಾಯಿಸಲು ಸಾಧ್ಯವಿಲ್ಲ ಎಂದರು.

ಕಾರ್ಯಕ್ರಮದ ಉದ್ಘಾಟನೆಯನ್ನು ಬೆಂಗಳೂರು ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆಯ ನಿರ್ದೇಶಕರಾದ ಎಸ್.ಬಿ. ಗುಲಗುಂಜಿ ಉದ್ಘಾಟಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಚಾರ್ಯ ಡಾ.ದೇವಿದಾಸ. ಎಸ್.ನಾಯಕ್ ವಹಿಸಿದ್ದರು. ಕಾಲೇಜಿನ ವಿಶ್ವಸ್ತಮಂಡಳಿ ಸದಸ್ಯರಾದ ಅನಂತ ಪದ್ಮನಾಭ ಭಟ್, ಪ್ರಾಧ್ಯಾಪಕರಾದ ಯಶವಂತಿ ಸಾಲಿಯಾನ್, ಬೆಂಗಳೂರಿನ ಕಾನೂನು ಸಂಸದೀಯ ಸುಧಾರಣಾ ಸಂಸ್ಥೆ ಮುಖ್ಯಸ್ಥ ಡಾ.ರೇವಯ್ಯ ಒಡೆಯರ್ ಭಾಗವಹಿಸಿದರು.

ಗ್ರಾಮೀಣ ಪ್ರದೇಶಗಳಲ್ಲಿ ಇಂದು ಮಾನವ ಹಕ್ಕುಗಳ ಉಲ್ಲಂಘನೆಯಾಗುತ್ತಿದ್ದು, ಯುವಕರು ಶಿಕ್ಷಣದ ಜೊತೆಗೆ ಕಾನೂನನ್ನು ಅರಿಯುವ ಅಗತ್ಯವಿದೆ

ಡಾ.ರವೀಂದ್ರ ಶ್ಯಾನುಭೋಗ್

ಅಧ್ಯಕ್ಷರು, ಮಾನವ ಹಕ್ಕುಗಳ ಸಂರಕ್ಷಣಾ ಸಮಿತಿ ಉಡುಪಿ

ಪ್ರ ವಾ. 23-2-17

Scanned by CamScanner

ವಾರ್ತೆ ಪತ್ರಿಕೆ

ದಿನಾಂಕ : 23 - 02 - 2017

ಶಿ ಪತ್ರಿಕೆ

ಉನ್ನತ ಶಿಕ್ಷಣ ಪಡೆದವರಿಗೆ ಸಮಾಜದಲ್ಲಿ ಉನ್ನತ ಸ್ಥಾನವಿದೆ.

ಶ್ರೀ ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮಿ



ಶೃಂಗೇರಿ: ಇಲ್ಲಿನ ಶ್ರೀ ಜೆ.ಸಿ.ಬಿ.ಎಂ. ಕಾಲೇಜಿನ ಆವರಣದಲ್ಲಿ, ಶೃಂಗೇರಿ ಶ್ರೀ ಶಾರದಾ ಪೀಠದ ಜಗದ್ಗುರುಗಳಾಗಿದ್ದ ಶ್ರೀ ಚಂದ್ರಶೇಖರ ಭಾರತೀ ಮಹಾಸ್ವಾಮಿಗಳವರ ಪ್ರತಿಮೆ ಅನಾವರಣ ಸಮಾರಂಭವು ಫೆ. 15 ರಂದು ನಡೆಯಿತು. ಶ್ರೀ ಶಾರದಾ ಪೀಠದ ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮಿಗಳವರು ಪ್ರತಿಮೆಯನ್ನು ಅನಾವರಣ ಮಾಡಿದರು. ಈ ಸಂದರ್ಭದಲ್ಲಿ ಆಶೀರ್ವಚನ ನೀಡಿದ ಅವರು, ವಿದ್ಯಾರ್ಥಿಗಳು ವಿದ್ಯಾರ್ಜನೆಗೆ ಬಯುವಾಗ ಉನ್ನತವಾದ ಆದರ್ಶವನ್ನಿಟ್ಟುಕೊಳ್ಳಬೇಕು. ಪ್ರತಿನಿತ್ಯ ಕಾಲೇಜಿಗೆ ಪ್ರವೇಶಿಸಿದಾಗ ಜಗದ್ಗುರುಗಳ ಪ್ರತಿಮೆ ಎದುರು ಗುರುವಂದನೆ ಸಲ್ಲಿಸಿ ಮುನ್ನಡೆದರೆ ಅದು ಶ್ರೇಯಸ್ಕರವಾಗಲಿದೆ. ನಮಗೆ ಯಾರು ಸ್ಫೂರ್ತಿ ಪಾತ್ರರಾಗುತ್ತಾರೋ, ಅಂಥವರ ಮನೆಗೆ ಸೋವಾಗದಂತೆ ವಿದ್ಯಾರ್ಥಿಗಳು ವರ್ತಿಸಬೇಕಿದೆ ಎಂದರು. ಉನ್ನತ ಶಿಕ್ಷಣ ಪಡೆದವರಿಗೆ ಸಮಾಜದಲ್ಲಿ ಉನ್ನತ ಸ್ಥಾನವಿದೆ. ಅವರು ವಿಶ್ವದ ಎಲ್ಲೆಡೆಯೂ ಪ್ರಶಂಸೆಗೆ ಪಾತ್ರರಾಗುತ್ತಾರೆ ಎಂದರು. ಐದು ದಶಕಗಳನ್ನು ಪೂರೈಸಿರುವ ಈ ಕಾಲೇಜು ಸಾವಿರಾರು ವಿದ್ಯಾರ್ಥಿಗಳಿಗೆ ಉತ್ತಮ ಭವಿಷ್ಯ ನೀಡಿದೆ ಎಂದ ಅವರು ಉತ್ತರೋತ್ತರ ಕಾಲೇಜಿಗೆ ಇನ್ನೂ ಹೆಚ್ಚಿನ ಯಶಸ್ಸು ಪ್ರಾಪ್ತವಾಗಲೆಂದು ಆಶೀರ್ವದಿಸಿದರು.

ಶಾಸಕ ಡಿ.ಎನ್.ಜೀವರಾಜ್ ಮಾತನಾಡಿ, ಶ್ರೀಮಠ ಶಿಕ್ಷಣಕ್ಕೆ ಹೆಚ್ಚು ಪ್ರೋತ್ಸಾಹ ನೀಡುತ್ತಿದ್ದು, ಪ್ರತಿ ದಿನವೂ ಸಾವಿರಾರು ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಬಿಸಿಯೂಟ ಒದಗಿಸುತ್ತಿದೆ. ವಿದ್ಯಾರ್ಥಿಗಳು ಗುರುವಿನ ಮಾರ್ಗದರ್ಶನದಂತೆ ಮುನ್ನಡೆದು ಜೀವನದಲ್ಲಿ ಯಶಸ್ಸು ಗಳಿಸಬೇಕು. ಗುರುವಿನ ಪ್ರತಿಮೆ ಸ್ಥಾಪಿಸುವುದರಿಂದ ವಿದ್ಯಾರ್ಥಿಗಳಿಗೆ ಹೊಸ್ಸ ಭಾವನೆ ಬರುವಂತಾಗಲಿ ಎಂದರು. ಮಣಿಪಾಲ ಅಕಾಡೆಮಿಯ ಡಾ.ಶಾಂತರಾಮ್ ಮಾತನಾಡಿ, ಕಾಲೇಜಿನ ಇತಿಹಾಸದಲ್ಲಿ ಇದೊಂದು ಮಹತ್ವದ ದಿನವಾಗಿದೆ ಎಂದರು. ಕಾರ್ಯಕ್ರಮದಲ್ಲಿ ಶ್ರೀಮಠದ ಆಡಳಿತಾಧಿಕಾರಿ ಡಾ.ಎಸ್.ಆರ್. ಗೌರಿಶಂಕರ್, ಕಾಲೇಜಿನ ಪ್ರಾಚಾರ್ಯ ಡಾ.ದೇವಿದಾಸ ನಾಯಕ್, ಆಡಳಿ ಮಂಡಳಿಯ ಸದಸ್ಯರಾದ ಟಿ.ಕೆ.ವರಾಕರ, ಹುಲಗಾರು ಚಂದ್ರಶೇಖರರಾವ್, ಅನಂತಪದ್ಮನಾಭಭಟ್, ಕೆ.ಎಂ.ಶ್ರೀನಿವಾಸ್, ಕಾಲೇಜಿನ ನಿವೃತ್ತ ಪ್ರಾಚಾರ್ಯ ಡಾ.ಹೆಚ್.ಸಿ.ವೀರಭದ್ರಗೌಡ ಮುಂತಾದವರು ಹಾಜರಿದ್ದರು.

ಕಾರ್ಯಕ್ರಮದ ಆರಂಭದಲ್ಲಿ ಜಗದ್ಗುರುಗಳವರು ವೇದಿಕೆಯಲ್ಲಿ ಆಸೀನರಾದ ಸ್ವಲ್ಪ ಹೊತ್ತಿನಲ್ಲಿ ರಭಸವಾದ ಗಾಳಿಗೆ ತಾತ್ಕಾಲಿಕ ವೇದಿಕೆಯ ಒಂದು ಭಾಗ ಮಹಾಸ್ವಾಮಿಗಳವರು ಕುಳಿತ ಕಡೆ ಬಾಲಿ, ಆಕ್ಷಣ ಆತಂಕದ ವಾತಾವರಣವನ್ನು ಸೃಷ್ಟಿಸಿತ್ತು. ತಕ್ಷಣ ಅದನ್ನು ಅಲ್ಲಿಂದ ತೆರವುಗೊಳಿಸಲಾಯಿತು. ಆದರಿಂದಾಗಿ ಏನೊ ಒಂದು ಹಾನಿ ಸಂಭವಿಸದೆ ಕಾರ್ಯಕ್ರಮವು ನಿರಾತಂಕವಾಗಿ ಮುನ್ನಡೆದಿದ್ದು ಸಮಾಧಾನಕರ ವಿಚಾರವಾಗಿದೆ.

Scanned by CamScanner

ಕನ್ನಡಪ್ರಭ 03

ೊರು ಪ್ರಭ

17.2.2017 FRIDAY

ಪರೀಕ್ಷೆ: ಮೂಡಬಿದರೆ ಆಳ್ವಾಸ್ ಕನ್ನಡ ಮಾಧ್ಯಮ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆ ವತಿಯಿಂದ 6 ರಿಂದ 10ನೇ ತರಗತಿ ವರೆಗೆ ಉಚಿತ ಪ್ರವೇಶಕ್ಕಾಗಿ, 19 ರಂದು ಪರೀಕ್ಷೆ ಏರ್ಪಡಿಸಲಾಗಿದೆ. 04

ಚಂದ್ರಶೇಖರ ಶ್ರೀಗಳ ಮೂರ್ತಿ ಅನಾವರಣ

• ಕನ್ನಡಪ್ರಭ ವಾರ್ತೆ ಶೃಂಗೇರಿ

ನಮ್ಮ ಸಂಸ್ಕೃತಿ, ಪರಂಪರೆಯಲ್ಲಿ ಗುರುವಿಗೆ ಮಹತ್ತರ ಸ್ಥಾನವಿದೆ. ವಿದ್ಯಾರ್ಥಿಗಳು ಗುರುಹಿರಿಯರಲ್ಲಿ ಭಯ-ಭಕ್ತಿ ತೋರಬೇಕು ಎಂದು ಶೃಂಗೇರಿ ಶಾರದಾ ಪೀಠದ ಜಗದ್ಗುರು ಭಾರತೀ ತೀರ್ಥರು ಹೇಳಿದರು.

ಅವರು ಪಟ್ಟಣದ ಜೆಸಿಬಿಎ ಕಾಲೇಜಿನಲ್ಲಿಜಗದ್ಗುರುಚಂದ್ರಶೇಖರ ಭಾರತೀ ಸ್ವಾಮೀಜಿಯವರ ಮೂರ್ತಿ ಅನಾವರಣಗೊಳಿಸಿಮಾತನಾಡಿದರು.

ವಿದ್ಯಾರ್ಥಿಗಳು ವ್ಯಾಸಂಗಕ್ಕೆ ಬರುವಾಗಉದಾತ್ತ ಆಲೋಚನೆಗಳನ್ನು ಹೊಂದಿರಬೇಕು. ಶಿಕ್ಷಣ ಪಡೆದವರಿಗೆ ಸಮಾಜದಲ್ಲಿ ಉನ್ನತ ಸ್ಥಾನವಿದೆ.



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ಚಂದ್ರಶೇಖರ ಭಾರತೀ ಸ್ವಾಮಿಗಳ ಮೂರ್ತಿ ಅನಾವರಣಗೊಳಿಸಲಾಯಿತು

ಜಗತ್ತಿನ ಎಲ್ಲೆಡೆ ಪ್ರಶಂಸೆಗೆ ಪಾತ್ರರಾಗುತ್ತಾರೆ. ಮಾನವೀಯತೆ ಶ್ರೇಷ್ಠವಾದುದು. ನಮಗೆ ಯಾರು ಪ್ರೀತಿಪಾತ್ರರಾಗುತ್ತಾರೋಅಂತಹವರ ವಿಷಯದಲ್ಲಿ ನಾವು ಒಳ್ಳೆಯ ಭಾವನೆ ಹೊಂದಬೇಕು. ಅವರ ಮನಸ್ಸಿಗೆ ಯಾವುದೇರೀತಿಯಲ್ಲಿನೋವಾಗದಂತೆ ವರ್ತಿಸಬೇಕು ಎಂದರು.

ಮಣಿಪಾಲ ಅಕಾಡೆಮಿಯ ಡಾ.ಶಾಂತಾರಾಂ, ಶಾಸಕ ಡಿ.ಎನ್.ಜೀವರಾಜ್, ಮಠದ ಆಡಳಿತಾಧಿಕಾರಿ ಡಾ.ವಿ.ಆರ್. ಗೌರೀಶಂಕರ್, ಪ್ರಾಚಾರ್ಯ ಡಾ.ದೇವಿದಾಸ್, ಟಿ.ಕೆ.ಪರಾಶರ, ಚಂದ್ರಶೇಖರ್‌ರಾವ್, ಅನಂತ ಪದ್ಮನಾಭ ಭಟ್ ಮತ್ತಿತರರು ಉಪಸ್ಥಿತರಿದ್ದರು.

Scanned by CamScanner

ಚಂದ್ರಶೇಖರ ಸ್ವಾಮೀಜಿ ಪ್ರತಿಮೆ ಅನಾವರಣ ಕಾರ್ಯಕ್ರಮದಲ್ಲಿ ವಿಧುಶೇಖರ ಭಾರತಿ ಸ್ವಾಮೀಜಿ

ಮಾನವೀಯ ಗುಣಗಳಿಂದ ವ್ಯಕ್ತಿತ್ವ ವಿಕಸನ



ಜೆಸಿಬಿಎಂ ಕಾಲೇಜಿನ ಆವರಣದಲ್ಲಿ ಬಾಗಲಕೋಟೆ ಚಂದ್ರಶೇಖರ ಸ್ವಾಮೀಜಿ ಅವರ ಪ್ರತಿಮೆಯನ್ನು ಶ್ರೀ ವಿಧುಶೇಖರ ಭಾರತಿ ಸ್ವಾಮೀಜಿ ಅನಾವರಣ ಗೊಳಿಸಿದರು.

ದಾವಣಗೆರೆ ಉದಯವಾಣಿ
ಗುರುವಾರ | ಫೆಬ್ರವರಿ | 16 | 2017

ಶ್ರೀಗಳ ಮಾತು

■ ಶ್ರೀ ಜೆಸಿಬಿಎಂ ಕಾಲೇಜಿನಲ್ಲಿ ಜಗದ್ಗುರು ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳ ಮೂರ್ತಿ ಅನಾವರಣ

ಉನ್ನತ ಆಲೋಚನೆಯೊಂದಿಗೆ ಕಾಲೇಜಿಗೆ ಬನ್ನಿ

ಶೃಂಗೇರಿ: ವಿದ್ಯಾರ್ಥಿಗಳು ವಿದ್ಯಾರ್ಜನೆಗೆ ಬರುವಾಗ ಉಚ್ಚತೆಯಾದ ಆಲೋಚನೆ ಹೊಂದಬೇಕು.ಕಾಲೇಜಿಗೆ ಪ್ರವೇಶಿಸಿ ಜಗದ್ಗುರುಗಳ ಪ್ರತಿಮೆ ಎದುರು ಗುರುವಂದನೆ ಸಲ್ಲಿಸಿ ಮುನ್ನಡೆಯಬೇಕು ಎಂದು ಶ್ರೀ ಶಾರದಾ ಪೀಠದ ಜಗದ್ಗುರು ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿಗಳು ಹೇಳಿದರು.

ಅವರು ಬುಧವಾರ ಶ್ರೀ ಜೆಸಿಬಿಎಂ ಕಾಲೇಜಿನಲ್ಲಿ ಜಗದ್ಗುರು ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳಮೂರ್ತಿಯನ್ನು ಅನಾವರಣ ಮಾಡಿ ಆಶೀರ್ವಚನ ನೀಡಿದರು.

ಶಿಕ್ಷಣ ಪಡೆದವರಿಗೆ ಸಮಾಜದಲ್ಲಿ ಉನ್ನತ ಸ್ಥಾನವಿದೆ. ಅವರು ಎಕ್ಕಡದ ಎಳ್ಳಿಡೆಯೂ ಪ್ರಶಂಸೆಗೆ ಪಾತ್ರರಾಗುತ್ತಾರೆ. ಐದು ದಶಕಗಳನ್ನು ಪೂರೈಸಿರುವ ಈ ಕಾಲೇಜು ಸಾವಿರಾರು ವಿದ್ಯಾರ್ಥಿಗಳಿಗೆ ಭವಿಷ್ಯ ನೀಡಿದೆ. ನಮಗೆ ಯಾರು ಪ್ರೀತಿ ಪಾತ್ರರಾಗುತ್ತಾರೋ,ಅಂಕಪಿವರ, ವಿಷಯದಲ್ಲಿ ಅವರ ಮನಸ್ಸಿಗೆ ನೋವಾಗದಂತೆ ವರ್ತಿಸಬೇಕದ ಎಂದರು.

ಶಾಸಕ ಡಿ.ಎನ್.ಜೀವರಾಜ್ ಮಾತನಾಡಿ, ಶ್ರೀಮಠ ಶಿಕ್ಷಣಕ್ಕೆ ಹೆಚ್ಚು ಪ್ರೋತ್ಸಾಹ ನೀಡುತ್ತಿದ್ದು ಪ್ರತಿ ದಿನವೂ ಸಾವಿರಾರು ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಬಿಸಿಯೂಟ ಒದಗಿಸುತ್ತಿದೆ. ವಿದ್ಯಾರ್ಥಿಗಳು ಗುರುಮಠ ಮಾರ್ಗದರ್ಶನದಂತೆ ಮುನ್ನಡೆದು ಜೀವನದಲ್ಲಿ ಯಶಸ್ಸು ಗಳಿಸಬೇಕು. ಗುರುಮಠ ಪ್ರತಿಮೆ ಸ್ಥಾಪಿಸಿರುವುದರಿಂದ ವಿದ್ಯಾರ್ಥಿಗಳಿಗೆ ಪೂಜ್ಯ ಭಾವನೆ ಬರುವಂತಾಗಲಿ ಎಂದರು.



ಶೃಂಗೇರಿ: ಶ್ರೀ ಜೆಸಿಬಿಎಂ ಕಾಲೇಜಿನಲ್ಲಿ ಜಗದ್ಗುರು ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳಮೂರ್ತಿಯನ್ನು ಜಗದ್ಗುರು ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿಗಳು ಅನಾವರಣಗೊಳಿಸಿ ಪೂಜೆ ಸಲ್ಲಿಸಿದರು.

ಮಣಿಪಾಲ ಅಕಾಡೆಮಿಯ ಡಾ। ಶಾಂತರಾಮ್ ಮಾತನಾಡಿ, ಕಾಲೇಜಿನ ಇತಿಹಾಸದಲ್ಲಿ ಇದೊಂದು ಮಹತ್ವದ ದಿನವಾಗಿದೆ ಎಂದರು.

ಶ್ರೀಮಠದ ಆಡಳಿತಾಧಿಕಾರಿ ಡಾ। ವಿ.ಆರ್. ಗೌರಿಶಂಕರ್, ಕಾಲೇಜಿನ ಪ್ರಾಚಾರ್ಯ ಡಾ। ದೇವಿದಾಸ ನಾಯಕ್, ಆಡಳಿ ಮಂಡಳಿಯ ಸದಸ್ಯರಾದ ಟಿ.ಕೆ.ಪರಾಶರ, ಹುಲಗಾರು ಚಂದ್ರಶೇಖರ ಡಾಮ್,ಅನಂತಪದ್ಮನಾಭ ಭಟ್, ಕೆ.ಎಂ.ಶ್ರೀನಿವಾಸ್, ಕಾಲೇಜಿನ ನಿವೃತ್ತ ಪ್ರಾಚಾರ್ಯ ಡಾ।ಎಚ್.ಸಿ.ವೀರಭದ್ರಗೌಡ ಇದ್ದರು.

ಆಮಂತ್ರಣ: ಕಾರ್ಯಕ್ರಮದ ಆರಂಭದಲ್ಲಿ ಜಗದ್ಗುರು ಶ್ರೀ ವಿಧುಶೇಖರ ಭಾರತೀ ಸ್ವಾಮಿಜಿ ಆಸೀನರಾದ ಸ್ವಲ್ಪ ಹೊತ್ತಿನಲ್ಲಿ ರಭಸವಾದ ಗಾಳಿ ಬೀಸಿತು. ಇದರಿಂದ ವೇದಿಕೆಯ ಶಾಮಿಯಾನ ಹಾರಿದರೂ, ಹೆಚ್ಚಿನ ಹಾನಿ ಸಂಭವಿಸಲಿಲ್ಲ.

Scanned by CamScanner

ವಿಜಯ ಕರ್ನಾಟಕ ಗುರುವಾರ, 16 ಫೆಬ್ರವರಿ 2017, ಶಿವಮೊಗ್ಗ

ಶಿಕ್ಷಣ ಪಡೆದವರಿಗೆ ಉನ್ನತ ಸ್ಥಾನ: ವಿಧುಶೇಖರ ಶ್ರೀ

■ ವಿಕ ಸುದ್ದಿಲೋಕ ಶೃಂಗೇರಿ

ನಮಗೆ ಯಾರು ಪ್ರೀತಿ ಪಾತ್ರರಾಗುತ್ತಾರೋ, ಅಂಥವರ ವಿಷಯದಲ್ಲಿ ಅವರ ಮನಸ್ಸಿಗೆ ನೋವಾಗದಂತೆ ವರ್ತಿಸಬೇಕಿದೆ ಎಂದು ಶ್ರೀ ಶಾರದಾ ಪೀಠದ ಜಗದ್ಗುರು ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿ ಹೇಳಿದರು.

ಇಲ್ಲಿನ ಶ್ರೀ ಜೆಸಿಬಿಎಂ ಕಾಲೇಜಿನಲ್ಲಿ ಜಗದ್ಗುರು ಶ್ರೀ ಚಂದ್ರಶೇಖರ ಭಾರತೀ ಸ್ವಾಮೀಜಿಯ ಮೂರ್ತಿಯನ್ನು ಬುಧವಾರ ಅನಾವರಣ ಮಾಡಿ ಆಶೀರ್ವಚನ ನೀಡಿದರು.

ವಿದ್ಯಾರ್ಥಿಗಳು ವಿದ್ಯಾರ್ಜನೆಗೆ ಬಹುವಾಗಿ ಉನ್ನತವಾದ ಆಲೋಚನೆಯನ್ನು ಹೊಂದಬೇಕು. ಕಾಲೇಜಿಗೆ ಪ್ರವೇಶಿಸಿದಂತೆ ಜಗದ್ಗುರುಗಳ ಪ್ರತಿಮೆ ಎದುರು ಗುರುವಂದನೆ ನಲ್ಲಿಸಿ ಕಾರ್ಯತತ್ಪರರಾಗಬೇಕು. ಶಿಕ್ಷಣ ಪಡೆದವರಿಗೆ ಸಮಾಜದಲ್ಲಿ ಉನ್ನತ ಸ್ಥಾನವಿದೆ. ಅವರು ಎಲ್ಲದ ಎಲ್ಲೆಯೂ



ಶೃಂಗೇರಿ ಶ್ರೀ ಜೆಸಿಬಿಎಂ ಕಾಲೇಜಿನಲ್ಲಿ ಜಗದ್ಗುರು ಶ್ರೀ ಚಂದ್ರಶೇಖರ ಭಾರತೀ ಸ್ವಾಮೀಜಿಯ ಮೂರ್ತಿಯನ್ನು ಜಗದ್ಗುರು ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿ ಅವರು ಬುಧವಾರ ಅನಾವರಣಗೊಳಿಸಿದರು.

ಪ್ರಶಂಸೆಗೆ ಪಾತ್ರರಾಗುತ್ತಾರೆ. ಐದು ದಶಕಗಳನ್ನು ಪೂರೈಸಿರುವ ಈ ಕಾಲೇಜು ಸಾವಿರಾರು ವಿದ್ಯಾರ್ಥಿಗಳಿಗೆ ಭವಿಷ್ಯ ನೀಡಿದೆ ಎಂದರು.

ಶಾಸಕ ಡಿ.ಎನ್.ಜೀವರಾಜ್ ಮಾತನಾಡಿ, ವಿದ್ಯಾರ್ಥಿಗಳು ಗುರುವಿನ ಮಾರ್ಗದರ್ಶನದಂತೆ ಮುನ್ನಡೆದು ಜೀವನದಲ್ಲಿ ಯಶಸ್ಸು ಗಳಿಸಬೇಕು. ಗುರುವಿನ ಪ್ರತಿಮೆ ಸ್ಥಾಪಿಸಿರುವುದರಿಂದ ವಿದ್ಯಾರ್ಥಿಗಳಿಗೆ ಪೂಜ್ಯ ಭಾವನೆ ಬರುವಂತಾಗಲಿ ಎಂದು ಹೇಳಿದರು.

ಮಣಿಪಾಲ ಅಕಾಡೆಮಿಯ ಡಾ. ಶಾಂತರಾಮ್ ಮಾತನಾಡಿ, ಕಾಲೇಜಿನ ಇತಿಹಾಸದಲ್ಲಿ ಇದೊಂದು ಮಹತ್ವದ ದಿನವಾಗಿದೆ ಎಂದರು.

ಶ್ರೀ ಮಠದ ಆಡಳಿತಾಧಿಕಾರಿ ಡಾ.ಎ.ಆರ್.ಗೌರಿಶಂಕರ್, ಪ್ರಾಂಶುಪಾಲ ಡಾ.ದೇವಿದಾಸ ನಾಯಕ್, ಆಡಳಿ ಮಂಡಳಿಯ ಸದಸ್ಯರಾದ ಟಿ.ಕೆ.ಪರಾಶರ, ಹುಲಗಾರು ಚಂದ್ರಶೇಖರ ರಾವ್,ಅನಂತಪದ್ಮನಾಭ ಭಟ್, ಕೆ.ಎಂ.ಶ್ರೀನಿವಾಸ್, ನಿವೃತ್ತ ಪ್ರಾಂಶುಪಾಲ ಡಾ.ಎಚ್.ಸಿ.ವೀರಪ್ಪಗೌಡ ಇದ್ದರು.

ಅವಘಡ

ಕಾರ್ಯಕ್ರಮದ ಆರಂಭದಲ್ಲಿ ಜಗದ್ಗುರು ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿ ಆಸೀನರಾದ ಸ್ವಲ್ಪ ಹೊತ್ತಿನಲ್ಲಿ ರಭಸವಾದ ಗಾಳಿಗೆ ವೇದಿಕೆಯ ಶಾಮಿಯಾನ ಕುಸಿತಗೊಂಡರೂ ಹೆಚ್ಚಿನ ಹಾನಿ ಸಂಭವಿಸಲಿಲ್ಲ.

Scanned by CamScanner

ಎನ್ನೆಸ್ಸೆಸ್ ವಿದ್ಯಾರ್ಥಿನಿಯರ ಸಾಧನೆ

ಶೃಂಗೇರಿ: ಜೆಸಿಬಿಎಂ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ದ್ವಿತೀಯ ಬಿ.ಎಸ್ಸಿ ವಿದ್ಯಾರ್ಥಿನಿ. ಸ್ವಯಂ ಸೇವಕಿ ಮಂದರಾ ಅವರು ಬೆಂಗಳೂರಿನ ಮಾಣಿಕ್ ಷಾ ಮೈದಾನದಲ್ಲಿ ನಡೆದ ಗಣರಾಜ್ಯೋತ್ಸವ ಪಥ ಸಂಚಲನದಲ್ಲಿ ಭಾಗವಹಿಸಿದ್ದರು. ಕಾಲೇಜು ಎನ್‌ಎಸ್‌ಎಸ್ ಹಿರಿಯ ಸ್ವಯಂ ಸೇವಕಿ ಎಚ್. ಕೆ.ಕಾವ್ಯಾ ಅವರು ಕುವೆಂಪು ವಿಶ್ವವಿದ್ಯಾನಿಲಯದ 2015-16ನೇ ಸಾಲಿನ ಅತ್ಯುತ್ತಮ ರಾಷ್ಟ್ರೀಯ ಸೇವಾ ಯೋಜನೆ ಸ್ವಯಂ ಸೇವಕಿ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.



ಮಂದರಾ



ಕಾವ್ಯಾ

Scanned by CamScanner

ಮಂಗಳವಾರ ರಾತ್ರಿ ಡೆತ್‌ನೋಟ್ ಬರೆದಿಟ್ಟು ವಿದ್ಯಾರ್ಥಿ ಸಾವು | ಎಬಿವಿಪಿ ನೇತೃತ್ವದಲ್ಲಿ ಜೆಸಿಬಿಎಂ ಕಾಲೇಜು ವಿದ್ಯಾರ್ಥಿಗಳ ಪ್ರತಿಭಟನೆ | ಕಾಂಗ್ರೆಸ್ ಮುಖಂಡರ ವಿರುದ್ಧ ದೂರು

ಎಫ್‌ಐಆರ್ ದಾಖಲು: ಅಭಿಷೇಕ್ ಆತ್ಮಹತ್ಯೆ

• ಕನ್ನಡಪ್ರಭ ವಾರ್ತೆ ಶೃಂಗೇರಿ

ಎರಡು ವಿದ್ಯಾರ್ಥಿ ಸಂಘಟನೆಗಳ ನಡುವಿನ ಜಗಳ ಹಿರ್ವ ವಿದ್ಯಾರ್ಥಿಯನ್ನು ಬಲಿ ತೆಗೆದುಕೊಂಡಿದೆ. ಮೇಣಸೆ ಕಿಕ್ರೆ ಗ್ರಾಮದ ನಿವಾಸಿ, ಜೆಸಿಬಿಎಂ ಕಾಲೇಜಿನ ಬಿಕಾಂ ವಿದ್ಯಾರ್ಥಿ ಅಭಿಷೇಕ್ (21) ಆತ್ಮಹತ್ಯೆ ಮಾಡಿಕೊಂಡ ದುರ್ದೈವಿ.

ಅಭಿಷೇಕ್ ಮಂಗಳವಾರ ರಾತ್ರಿ ಆತ್ಮಹತ್ಯೆಗೂ ಮುನ್ನ ಬರೆದಿರುವ ಡೆತ್ ನೋಟ್‌ನಲ್ಲಿಪೊಲೀಸ್ ಠಾಣೆಗೆತನ್ನ ವಿರುದ್ಧ ಸುಳ್ಳು ದೂರು ನೀಡಲಾಗಿದೆ. ಪೊಲೀಸರು ಎಫ್‌ಐಆರ್ ದಾಖಲುಮಾಡಿಕೊಂಡಿದ್ದಾರೆ. ಮುಂದೆ ಹೆನಗೆ ಭವಿಷ್ಯವಿಲ್ಲ, ಅದ್ದರಿಂದ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದಾಗಿ ಮನನೊಂದು ಬರೆದಿದ್ದಾನೆ.

ಈ ಆತ್ಮಹತ್ಯೆಗೆಸಂಬಂಧಿಸಿದಂತೆಎಬಿವಿಪಿ ಮುಖಂಡರು ಸ್ಥಳೀಯ ಎನ್‌ಎಸ್‌ಯುಐ ಹಾಗೂ ಕಾಂಗ್ರೆಸ್ ಮುಖಂಡರ ವಿರುದ್ಧ ದೂರನ್ನು ನೀಡಿದ್ದಾರೆ. ಅಭಿಷೇಕ್ ತಂದೆಯೂ ಸಹ ಪ್ರತ್ಯೇಕ ದೂರನ್ನು ನೀಡಿದ್ದಾರೆ.

ಅಭಿಷೇಕ್ ಸಾವಿನ ಬಗ್ಗೆ ತನಿಖೆ ನಡೆಸಬೇಕೆಂದು ಆಗ್ರಹಿಸಿ ಎಬಿವಿಪಿ ನೇತೃತ್ವದಲ್ಲಿ ಜೆಸಿಬಿಎಂ ಕಾಲೇಜಿನ ವಿದ್ಯಾರ್ಥಿಗಳು ಬುಧವಾರ ಮೆರವಣಿಗೆ ನಡೆಸಿ ಇಲ್ಲಿನ ಕೆವಿಆರ್ ವೃತ್ತದಲ್ಲಿ ಸಮಾವೇಶಗೊಂಡರು.

ರಾಜಕೀಯಕ್ಕೆ ಬಲಿ: ಎಬಿವಿಪಿ ಮುಖಂಡ ಸಂತೋಷ್ ಮಾತನಾಡಿ, ಜ.7ರಂದು ಜೆಸಿಬಿಎಂ ಕಾಲೇಜಿನಲ್ಲಿ ಯೋಧ ನಮನ ಕಾರ್ಯಕ್ರಮ ಆಯೋಜಿಸಲಾಗಿತ್ತು. ಪ್ರಧಾನಭಾಷಣಕಾರರಾಗಿವಾಗ್ಮಿಚಕ್ರವರ್ತಿ ಸೂಲಿಬೆಲೆ ಅವರನ್ನು ಆಹ್ವಾನಿಸಲಾಗಿತ್ತು. ಇದನ್ನು ವಿರೋಧಿಸಿದ ಸಂಘಟನೆಯೊಂದು ಪ್ರತಿಭಟನೆಗೆ ಕರೆ ನೀಡಿತ್ತು. ಇದಕ್ಕೆ ರಾಜಕೀಯಪಕ್ಷವೊಂದರಕೆಲಮುಖಂಡರು, ಕಾರ್ಯಕರ್ತರು ಬೆಂಬಲಿಸಿ ಕಾಲೇಜಿನ ಎದುರು ಪ್ರತಿಭಟನೆ ನಡೆಸಿದರು. ಅಂದು,



ಮೇಣಸೆ ಕಿಕ್ರೆ ಗ್ರಾಮದ ವಿದ್ಯಾರ್ಥಿ ಅಭಿಷೇಕ್



ಶೃಂಗೇರಿಯಲ್ಲಿ ಕಾಲೇಜು ವಿದ್ಯಾರ್ಥಿ ಅಭಿಷೇಕ್ ಸಾವಿನ ತನಿಖೆಗೆ ಒತ್ತಾಯಿಸಿ ವಿದ್ಯಾರ್ಥಿಗಳು ಬುಧವಾರ ಪ್ರತಿಭಟನೆ ನಡೆಸಿದರು

ದೂರು ದಾಖಲು

- ಮೃತ ಅಭಿಷೇಕ್ ತಂದೆಯಿಂದಲೂ ಪ್ರತ್ಯೇಕ ದೂರು ದಾಖಲು
- ಅಭಿಷೇಕ್ ಸಾವಿನ ಬಗ್ಗೆ ತನಿಖೆ ನಡೆಸಬೇಕೆಂದು ಆಗ್ರಹಿಸಿ ಎಬಿವಿಪಿ ಪ್ರತಿಭಟನೆ
- ತನಿಖೆ ನಡೆಸುವುದಾಗಿ ಎಸ್ಪಿ ಅಣ್ಣಾಮಲೈ ಭರವಸೆ

ಎಬಿವಿಪಿ ಕಾರ್ಯಕರ್ತರು ಯಾವುದೇ ರೀತಿಯ ಪ್ರತಿಭಟನೆ ನಡೆಸಲಿಲ್ಲ. ಕಾರ್ಯಕರ್ತರೊಂದಿಗೆವಿನಾಕಾರಣಜಗಳ ಮಾಡಿ ದೂರು ದಾಖಲಾಗಿಸಲಾಗಿದೆ. ಇದರಲ್ಲಿ ಮೃತ ಅಭಿಷೇಕ್‌ನ ಹೆಸರು ಸೇರಿಸಲಾಗಿದೆ. ಅಮಾಯಕ ಅಭಿಷೇಕ್ ಭಯಗೊಂಡು ಆತ್ಮಹತ್ಯೆ ಮಾಡಿ ಕೊಂಡಿದ್ದಾನೆ. ಈತನಸಾವಿಗೆಶನಿವಾರಪ್ರತಿಭಟನೆನಡೆಸಿದ ಕೆಲ ರಾಜಕೀಯ ಮುಖಂಡರು, ಕಾರ್ಯಕರ್ತರು, ಸಂಘಟನೆಯೇ ಕಾರಣ. ರಾಜಕೀಯಕ್ಕೆ ಈತ ಬಲಿ ಯಾಗಿದ್ದಾನೆ. ಕೂಡಲೇ ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಬೇಕು ಎಂದರು.

ಎಬಿವಿಪಿ ಕಾರ್ಯಕರ್ತ ಪ್ರಮೋದ್ ಮಾತನಾಡಿ,ಕಾಲೇಜಿನೊಳಗೆಹೊರಗಿನವರು ಬಂದು ರಾಜಕಾರಣ ಮಾಡುತ್ತಿದ್ದಾರೆ. ವಿನಾಕಾರಣ ಜಗಳ ಮಾಡಿ, ಗಲಾಟೆ ಮಾಡಿದವರೇ ದೂರು ನೀಡಿದ್ದಾರೆ. ಬಡತನದಿಂದ ಬಂದಿರುವ ಅಭಿಷೇಕ್ ಸಾವಿಗೆ ಶರಣಾಗಿರುವುದು ದುರಂತ. ಕೂಡಲೇ ಕ್ರಮ ಜರುಗಿಸಬೇಕು ಎಂದರು.

ನಂತರವಿದ್ಯಾರ್ಥಿಗಳು,ಕಾರ್ಯಕರ್ತರು ರಸ್ತೆ ತಡೆ ನಡೆಸಿ ಘೋಷಣೆ ಕೂಗಿ ತಮ್ಮ ಆಕ್ರೋಶ ವ್ಯಕ್ತಪಡಿಸಿದರು. ಸ್ಥಳಕ್ಕೆ ಆಗಮಿಸಿದ ಜಿಲ್ಲಾ ರಕ್ಷಣಾಧಿಕಾರಿ ಅಣ್ಣಾಮಲೈ ಪ್ರತಿಭಟನಾ ನಿರತ ವಿದ್ಯಾರ್ಥಿಗಳನ್ನು ಸಮಾಧಾನಪಡಿಸಿದರು.

ನಮ್ಮ ಕಾಲೇಜಿಗೆ ಹೊರಗಿನ ವ್ಯಕ್ತಿಗಳು ಬಂದು ರಾಜಕೀಯ ಮಾಡುತ್ತಿದ್ದಾರೆ. ನಮಗೆ ಅನ್ಯಾಯವಾಗುತ್ತಿದೆ. ನ್ಯಾಯ ಕೊಡಿಸಿ. ಈ ಸಾವಿಗೆ ಕಾರಣರಾದವರ ವಿರುದ್ಧ ಕ್ರಮಜರುಗಿಸಬೇಕು ಪಟ್ಟು ಹಿಡಿದರು. ನಂತರ ಮನವಿ ಸಲ್ಲಿಸಿದರು. ಮನವಿಯಲ್ಲಿ ಕಾಂಗ್ರೆಸ್ ಮುಖಂಡರ ಹೆಸರು ಪ್ರಸ್ತಾಪಿಸಲಾಗಿದೆ. ಇದರ ಜತೆಗೆ ಕಾಲೇಜು ಆಡಳಿತ ಮಂಡಳಿಯ ವಿರುದ್ಧ ದೂರನ್ನು ನೀಡಲಾಗಿದೆ.

ಇದಕ್ಕೆ ಪ್ರತಿಕ್ರಿಯಿಸಿದ ಎಸ್ಪಿ ಅಣ್ಣಾಮಲೈ ಅವರು, ಒಂದು ವಾರದೊಳಗೆ ತನಿಖೆ ಕೈಗೊಂಡು ಕ್ರಮ ಕೈಗೊಳ್ಳಲಾಗುವುದು. ಜೆಸಿಬಿಎಂ ಕಾಲೇಜಿನಲ್ಲಿ ಕಳೆದ ಒಂದು ತಿಂಗಳಲ್ಲಿ ಮೂರನೆಯ ಪ್ರತಿಭಟನೆ ಇದಾಗಿದೆ. ಕಾಲೇಜಿನಲ್ಲಿ ಹೊರಗಿನವರು ಬಂದು ರಾಜಕೀಯ ಮಾಡುತ್ತಿರುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು. ಕೆಲ ದಿನಗಳ ಹಿಂದೆ ನಾನು ಎಚ್ಚರಿಕೆಯನ್ನು ನೀಡಿದ್ದೆ. ವಿದ್ಯಾರ್ಥಿಗಳೆಂಬ ಕಾರಣದಿಂದ ಕಠಿಣ ಕ್ರಮ ತೆಗೆದುಕೊಂಡಿರಲಿಲ್ಲ. ಆದರೆ ಅಭಿಷೇಕ್ ನಂತಹ ಅಮಾಯಕ ಬಲಿಯಾಗಿದ್ದಾನೆ. ಆತನ ಕುಟುಂಬಕ್ಕೆ ಧೈರ್ಯ ತುಂಬುವಕೆಲಸಮಾಡಬೇಕು. ತಪ್ಪಿತಸ್ಥರನ್ನು ರಕ್ಷಿಸುವ ಪ್ರಶ್ನೆಯೇ ಇಲ್ಲ. ಕಠಿಣ ಕ್ರಮ ಜರುಗಿಸಲಾಗುವುದು ಎಂದರು.

Scanned by CamScanner

ಪಥಸಂಚಲನದಲ್ಲಿ ಭಾಗಿ

ಶೃಂಗೇರಿ: ಜೆಸಿಬಿಎಂ ಕಾಲೇಜಿನ ರಾಷ್ಟ್ರೀಯ ಸೇವಾ



ಮಂದರಾ



ಕಾವ್ಯ

ಯೋಜನೆಯ ದ್ವಿತೀಯ ಬಿಎಸ್ಸಿ ವಿದ್ಯಾರ್ಥಿನಿ ಮಂದರಾ ಬೆಂಗಳೂರಿನ ಮಾಣಿಕ್ ಷಾ ಮೈದಾನದಲ್ಲಿ ನಡೆದ ಗಣರಾಜ್ಯೋತ್ಸವ ಪಥ ಸಂಚಲನದಲ್ಲಿ ಭಾಗವಹಿಸಿದ್ದರು. ಹಾಗೂ ರಾಷ್ಟ್ರೀಯ ಸೇವಾ ಯೋಜನೆಯ ವಿದ್ಯಾರ್ಥಿನಿ ಎಚ್.ಕೆ. ಕಾವ್ಯ ಕುವೆಂಪು ವಿಶ್ವವಿದ್ಯಾನಿಲಯ ನೀಡುವ 2015-16ನೇ ಸಾಲಿನ ಅತ್ಯುತ್ತಮ ರಾ.ಸೇ.ಯೋ. ಸ್ವಯಂ ಸೇವಕಿ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

Scanned by CamScanner

vishwavani.news
9.01.2017
ಸೋಮವಾರ

ನಿವೃತ್ತ ಯೋಧರಿಗೆ ಸನ್ಮಾನ

ವಿಶ್ವವಾಣಿ ಸುದ್ದಿಮನೆ ಶೃಂಗೇರಿ

ಒಬ್ಬ ಸೈನಿಕ ದೇಶಕ್ಕಾಗಿ ಪ್ರಾಣ ಬಲಿದಾನ ಮಾಡುವುದು ಅತ್ಯಂತ ಶ್ರೇಷ್ಠವಾದುದು ಎಂದು ಹೊರನಾಡು ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನದ ಧರ್ಮಕರ್ತ ಡಾ.ಭೀಮೇಶ್ವರ ಜೋಶಿ ಹೇಳಿದರು.

ಜೆಸಿಬಿಎಂ ಸಭಾಂಗಣದಲ್ಲಿ ಎನ್‌ಸಿಸಿ, ಎನ್‌ಎಸ್‌ಎಸ್ ಹಾಗೂ ಕಾಲೇಜಿನ ವಿವಿಧ ಸಂಘಗಳು ಆಯೋಜಿಸಿದ ಯೋಧ ನಮನ ಕಾರ್ಯಕ್ರಮದಲ್ಲಿ ನಿವೃತ್ತ ಯೋಧರನ್ನು ಸನ್ಮಾನಿಸಿ ಮಾತನಾಡಿದರು.

ದೇಶಕ್ಕೆ ಸಂಕಷ್ಟ ಎದುರಾದಾಗ ಮಾತ್ರ ಸೈನಿಕರನ್ನು ನೆನಪಿಸಿಕೊಂಡು ಮತ್ತೆ ಅವರನ್ನು ಮರೆತು ಬಿಡುತ್ತೇವೆ. ಆಕಾಶ, ಭೂಮಿ, ಜಲದಲ್ಲಿ ಕಾರ್ಯ ನಿರ್ವಹಿಸುವ ಅವರ ಜೀವನದ ಮೌಲ್ಯ ಸರ್ವರಿಗೂ ಪ್ರೇರಣೆಯಾಗಬೇಕು. ಭಾರತ ದೇಶದ ಸೈನಿಕರಿಗೆ ಬುದ್ಧಿವಂತಿಕೆ ಇದೆ. ಕೆಚ್ಚೆದೆಯಿಂದ ಶತ್ರುಗಳ ವಿರುದ್ಧ ಹೋರಾಡುವ ಯುಕ್ತಿ ಇದೆ. ದೇಶವನ್ನು, ಜತೆಗಿರುವ ಸೈನಿಕರ ಪ್ರಾಣವನ್ನು ಕೊನೆಯ ಉಸಿರಿನ ತನಕ ಕಾಪಾಡುವ ವಿಶಾಲತೆ ಇರುವುದರಿಂದ ಅವು ಸೈನಿಕರಲ್ಲಿ ಮಾತ್ರ ಎಂದರು.



ನಿವೃತ್ತ ಯೋಧರಿಗೆ ಹೊರನಾಡು ಅನ್ನಪೂರ್ಣೇಶ್ವರಿ ದೇವಸ್ಥಾನದ ಧರ್ಮಕರ್ತ ಡಾ.ಭೀಮೇಶ್ವರ ಜೋಶಿ ಸನ್ಮಾನಿಸಿದರು.

ಸೈನಿಕರ ಸೇವೆ ಗಡಿರಕ್ಷಣೆ ಮಾತ್ರವಲ್ಲ, ದೇಶದಲ್ಲಿ ಪ್ರಕೃತಿ ವಿಕೋಪ, ಭೂಕಂಪ, ಸುನಾಮಿ ಎದುರಾದಾಗ ಜನರನ್ನು ರಕ್ಷಿಸುವ ಕಟ್ಟಕಡೆಯ ವೀರರು ನಮ್ಮ ಸೈನಿಕರು ಎಂದರು.

ಉಡುಪಿಯ ಎನ್‌ಸಿಸಿ ಲೆಫ್ಟಿನೆಂಟ್ ರಮಾನಾಥ ಶೆಟ್ಟಿ ಮಾತನಾಡಿ, ಕೇವಲ ಉದ್ಯೋಗಕ್ಕಾಗಿ ಸೈನಿಕರು ಕಾರ್ಯ ನಿರ್ವಹಿಸುತ್ತಾರೆ ಎಂಬ ಮಾತುಗಳನ್ನು ನಾವು ಕೇಳುತ್ತಿದ್ದೇವೆ, ಬೇರೆ ಉದ್ಯೋಗದಲ್ಲಿ ಬೆಳಗ್ಗೆಯಿಂದ ಸಂಜೆ ತನಕ ಇರುತ್ತದೆ. ಆದರೆ ಸೈನಿಕರು ಮಾಡುವ ಉದ್ಯೋಗ ನಿರಂತರ ಎಂದರು.

ಚಿಕ್ಕಮಗಳೂರು ಸುಮಾರು ಅರವತ್ತು ಯೋಧರನ್ನು ಡಾ.ಭೀಮೇಶ್ವರ ಜೋಶಿ ಸನ್ಮಾನಿಸಿದರು. ಕಾಲೇಜಿನ ಎನ್‌ಸಿಸಿ ಕೆಡೆಟ್‌ಗಳಾದ ಹನುಮಂತಪ್ಪ, ಪ್ರದೀಪ್ ಹಾಗೂ ಶರಣ್ಯ ಅವರನ್ನು ಗೌರವಿಸಲಾಯಿತು.

ಕಾಲೇಜಿನ ಪ್ರಾಚಾರ್ಯ ಡಾ.ದೇವದಾಸ್ ನಾಯಕ್, ಎನ್‌ಎಸ್‌ಎಸ್ ಅಧಿಕಾರಿ ಪ್ರಶಾಂತ್, ಮಾಜಿ ಸೈನಿಕ ಸಂಘದ ಅಧ್ಯಕ್ಷರ ಕೊಪ್ಪದ ಕ್ಯಾಪ್ಟನ್ ಗೋಪಾಲ್ ಇದ್ದರು.

Scanned by CamScanner

ಕನ್ನಡಪ್ರಭ
ಸೋಮವಾರ 9.1.2017

ಯೋಧ ನಮನ ಕಾರ್ಯಕ್ರಮದಲ್ಲಿ ಹೊರನಾಡು ಧರ್ಮಕರ್ತ ಡಾ.ಭೀಮೇಶ್ವರ ಜೋಶಿ

ಸೈನಿಕರ ದೇಶ ಸೇವೆಯೇ ಅತಿ ಶ್ರೇಷ್ಠ

• ಕನ್ನಡಪ್ರಭ ವಾರ್ತೆ ಶೃಂಗೇರಿ

ನಾವು ದಿನನಿತ್ಯ ಯಾವುದೇ ತೊಂದರೆಗಳಿದ್ದರೂ ಮನೆಯಲ್ಲಿ ನಿಶ್ಚಿಂತೆಯಿಂದ ನಿದ್ರಿಸುತ್ತೇವೆ. ಆದರೆ ಗಡಿಕಾಯುವ ಸೈನಿಕರು ದಿನದ 24 ಗಂಟೆಗಳ ಕಾಲ ಕಣ್ಣು ಮುಚ್ಚದೇ ದೇಶದ ರಕ್ಷಣೆಗಾಗಿ ಕಾಯುತ್ತಾರೆ. ತ್ಯಾಗದ ಬದುಕು ಅವರದ್ದು. ಒಬ್ಬ ಸೈನಿಕ ದೇಶಕ್ಕಾಗಿ ಪ್ರಾಣ ಬಲಿದಾನ ಮಾಡುವುದು ಅತ್ಯಂತ ಶ್ರೇಷ್ಠವಾದುದು ಎಂದು ಹೊರನಾಡು ಅನ್ನಪೂರ್ಣೇಶ್ವರಿ ದೇವಸ್ಥಾನದ ಧರ್ಮಕರ್ತ ಡಾ.ಭೀಮೇಶ್ವರ ಜೋಶಿ ತಿಳಿಸಿದರು.



ಶೃಂಗೇರಿ ಜೆಸಿಬಿಎಂ ಸಭಾಂಗಣದಲ್ಲಿ ನಿವೃತ್ತ ಯೋಧರನ್ನು ಸನ್ಮಾನಿಸಲಾಯಿತು

ಅವರು ಜೆಸಿಬಿಎಂ ಸಭಾಂಗಣದಲ್ಲಿ ಎನ್‌ಸಿಸಿ, ಎನ್ಎಸ್ಎಸ್ ಹಾಗೂ ಕಾಲೇಜಿನ ವಿವಿಧ ಸಂಘಗಳು ಶನಿವಾರ ಆಯೋಜಿಸಿದ ಯೋಧ ನಮನ ಕಾರ್ಯಕ್ರಮದಲ್ಲಿ ನಿವೃತ್ತ ಯೋಧರನ್ನು ಸನ್ಮಾನಿಸಿ ಮಾತನಾಡಿದರು.

ವಿವಿಧ ಹಬ್ಬ ಆಚರಣೆಗಳು, ಸಂತೋಷ ಕೂಟಗಳು ಮೊದಲಾದುವುಗಳನ್ನು ವೈವಿಧ್ಯಮಯ ರೀತಿಯಲ್ಲಿ ನಾವು ಆಚರಿಸುತ್ತೇವೆ. ಇದು ಸರ್ವೇಸಾಮಾನ್ಯ. ದೇಶಕ್ಕೆ ಸಂಕಷ್ಟ ಎದುರಾದಾಗ ಮಾತ್ರ ಸೈನಿಕರನ್ನು ನೆನಪಿಸಿಕೊಂಡು ಮತ್ತೆ ಅವರನ್ನು ಮರೆತು ಬಿಡುತ್ತೇವೆ. ಆಕಾಶ, ಭೂಮಿ, ಜಲದಲ್ಲಿ ಕಾರ್ಯ ನಿರ್ವಹಿಸುವ ಅವರ ಜೀವನದ ಮೌಲ್ಯ ಸರ್ವರಿಗೂ ಪ್ರೇರಣೆಯಾಗಬೇಕು ಎಂದರು.

ಭಾರತ ದೇಶದ ಸೈನಿಕರಿಗೆ ಕೆಚ್ಚೆದೆಯಿಂದ ಶತ್ರುಗಳ ವಿರುದ್ಧ ಹೋರಾಡುವ ಯುಕ್ತಿ ಇದೆ. ದೇಶವನ್ನು, ಜೊತೆಗಿರುವ ಸೈನಿಕರ ಪ್ರಾಣವನ್ನು ಕೊನೆಯ ಉಸಿರಿನ ತನಕ ಕಾಪಾಡುವ ವಿಶಾಲತೆ ಇರುವುದಾದರೆ ಅದು ನಮ್ಮ ಸೈನಿಕರಲ್ಲಿ ಮಾತ್ರ. ಸೈನಿಕರ ಸೇವೆ ಗಡಿರಕ್ಷಣೆ ಮಾತ್ರವಲ್ಲ. ದೇಶದಲ್ಲಿ ಪ್ರಕೃತಿ ವಿಕೋಪ, ಭೂಕಂಪ, ಸುನಾಮಿ ಎದುರಾದಾಗ ಜನರನ್ನು ರಕ್ಷಿಸುವ ಕಟ್ಟಕಡೆಯ ವೀರರು ನಮ್ಮ ಸೈನಿಕರು ಎಂದು ಹೇಳಿದರು.

ಉಡುಪಿಯ ಎನ್‌ಸಿಸಿ ಲೆಫ್ಟಿನೆಂಟ್ ರಮಾನಾಥ ಶೆಟ್ಟಿ ಮಾತನಾಡಿ, ಕೇವಲ ಉದ್ಯೋಗಕ್ಕಾಗಿ ಸೈನಿಕರು ಕಾರ್ಯ ನಿರ್ವಹಿಸುತ್ತಾರೆ ಎಂಬ ಮಾತುಗಳನ್ನು ನಾವು ಕೇಳುತ್ತಿದ್ದೇವೆ. ಬೇರೆ ಉದ್ಯೋಗದಲ್ಲಿ ಬೆಳಗ್ಗೆಯಿಂದ ಸಂಜೆ ತನಕ ಮಾತ್ರ ಇರುತ್ತದೆ. ಆದರೆ ಸೈನಿಕರು ಮಾಡುವ ಉದ್ಯೋಗ ನಿರಂತರ ಎಂದರು.

ಜಿಲ್ಲೆಯ ಸುಮಾರು ಅರವತ್ತು ಯೋಧರನ್ನು ಡಾ.ಭೀಮೇಶ್ವರ ಜೋಶಿ ಸನ್ಮಾನಿಸಿದರು. ಎನ್‌ಸಿಸಿ ಕೆಡೆಟ್‌ಗಳಾದ ಹನುಮಂತಪ್ಪ, ಪ್ರದೀಪ್ ಹಾಗೂ ಶರಣ್ಯ ಅವರನ್ನು ಗೌರವಿಸಲಾಯಿತು. ಪ್ರಾಚಾರ್ಯ ಡಾ.ದೇವಿದಾಸ್ ನಾಯಕ್, ಎನ್ಎಸ್ಎಸ್ ಅಧಿಕಾರಿ ಪ್ರಶಾಂತ್, ಮಾಜಿ ಸೈನಿಕ ಸಂಘದ ಅಧ್ಯಕ್ಷ ಕೊಪ್ಪದ ಕ್ಯಾಪ್ಟನ್ ಗೋಪಾಲ್ ಮೊದಲಾದವರು ಉಪಸ್ಥಿತರಿದ್ದರು.

Scanned by CamScanner

ನಂ.1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » SHIVAMOGGA
2
ಭಾನುವಾರ
8 ಜನವರಿ 2017
8 JANUARY 2017

ಸೈನಿಕರ ಜೀವನ ಪ್ರೇರಣೆಯಾಗಲಿ

ಹೊರನಾಡು ಧರ್ಮಕರ್ತ ಡಾ. ಭೀಮೇಶ್ವರ ಜೋಷಿ ಸಲಹೆ

■ ವಿಜಯವಾಣಿ ಸುದ್ದಿಜಾಲ ಶೃಂಗೇರಿ

ಸೈನಿಕರು ಭಾರತದ ಗಡಿಯಲ್ಲಿ ತಮ್ಮ ಜೀವದ ಹಂಗು ತೊರೆದು ದಿನದ 24 ಗಂಟೆಯೂ ಕಾರ್ಯನಿರ್ವಹಿಸುವುದರಿಂದ ನಾವು ಮನೆಯಲ್ಲಿ ನಿಶ್ಚಿಂತೆಯಿಂದ ಮಲಗುತ್ತಿದ್ದೇವೆ ಎಂದು ಹೊರನಾಡಿನ ಅನ್ನಪೂರ್ಣೇಶ್ವರಿ ದೇವಾಲಯದ ಧರ್ಮಕರ್ತ ಡಾ. ಭೀಮೇಶ್ವರ ಜೋಷಿ ಹೇಳಿದರು.

ಜೆಸಿಬಿಎಂ ಸಭಾಂಗಣದಲ್ಲಿ ಎನ್‌ಸಿಸಿ, ಎನ್‌ಎಸ್‌ಎಸ್ ಹಾಗೂ ಕಾಲೇಜಿನ ವಿವಿಧ ಸಂಘಗಳು ಶನಿವಾರ ಆಯೋಜಿಸಿದ್ದ 'ಯೋಧ ನಮನ' ಕಾರ್ಯಕ್ರಮದಲ್ಲಿ ನಿವೃತ್ತ ಯೋಧರನ್ನು ಸನ್ಮಾನಿಸಿ ಮಾತನಾಡಿದರು.



ದೇಶಕ್ಕೆ ಸಂಕಷ್ಟ ಎದುರಾದಾಗ ಮಾತ್ರ ಸೈನಿಕರನ್ನು ನೆನಪು ಮಾಡಿಕೊಂಡು ಮತ್ತೆ ಮರೆತುಬಿಡುತ್ತೇವೆ. ದೇಶಕ್ಕಾಗಿ ಹೋರಾಡುವ ಅವರ ಜೀವನಮೌಲ್ಯ ಎಲ್ಲರಿಗೂ ಪ್ರೇರಣೆಯಾಗಬೇಕು. ಭಾರತ ಸೈನಿಕರಿಗೆ ಶತ್ರುಗಳ ವಿರುದ್ಧ ಹೋರಾಡುವ ಶಕ್ತಿ ಇದೆ. ದೇಶ ಹಾಗೂ ಜತೆಗಿರುವ ಸೈನಿಕರ ಪ್ರಾಣವನ್ನು ಕೊನೆಯ ಉಸಿರಿನವರೆಗೂ ಕಾಪಾಡುವ ವಿಶಾಲತೆ ಇರುವುದು ಸೈನಿಕರಲ್ಲಿ ಮಾತ್ರ ಎಂದರು.

ದೇಶದ ಗಡಿ ರಕ್ಷಣೆ ಜತೆಗೆ ಪ್ರಕೃತಿ ವಿಕೋಪ, ಭೂಕಂಪ, ಸುನಾಮಿ ಸಂಭವಿಸಿದಾಗ ಜನರನ್ನು ರಕ್ಷಿಸುವ ಕಾರ್ಯವನ್ನು ಸೈನಿಕರು ನಿಭಾಯಿಸುತ್ತಾರೆ. ಕೇದಾರನಾಥದಲ್ಲಿ ಪ್ರಕೃತಿ ವಿಕೋಪವಾದಾಗ ಸುಮಾರು 300 ಮೀಟರ್ ತನಕ ಭೂಮಿಯಲ್ಲಿ ಮಲಗಿಕೊಂಡು 3,000 ಜನರನ್ನು ರಕ್ಷಿಸಿದ ಕೀರ್ತಿ ಸೈನಿಕರಿಗೆ ಸಲ್ಲಬೇಕು. ಆದರೆ ಮಾಧ್ಯಮಗಳು ಅವರ ಕಾರ್ಯ ಗುರುತಿಸಲಿಲ್ಲ. ರಾಷ್ಟ್ರವನ್ನು ತನ್ನ ಅಂತರಂಗದ ಬದ್ಧತೆಯಿಂದ ಕಾಪಾಡುವ ತ್ಯಾಗಮಯಿ ಸೈನಿಕರ ಕಾರ್ಯ ಶ್ಲಾಘನೀಯ ಎಂದರು.

> ಶಿಸ್ತು, ಸಂಯಮಕ್ಕೆ ಎನ್‌ಸಿಸಿ ವಿದ್ಯಾರ್ಥಿಗಳು ಸೇರಬೇಕು. ಎನ್‌ಸಿಸಿ ಸೇರಿದವರು ಜೀವನದಲ್ಲಿ ತಪ್ಪು ಮಾಡುವುದಿಲ್ಲ. ಪಾಲಕರು ತಮ್ಮ ಮಕ್ಕಳನ್ನು ಸೇನೆಗೆ ಸೇರಿಸಲು ಪ್ರೋತ್ಸಾಹಿಸಬೇಕು. ದೇಶ ಕಾಯುವ ಸೈನಿಕರನ್ನು ಗೌರವಿಸಬೇಕು.
>
> | ಡಾ. ಭೀಮೇಶ್ವರ ಜೋಷಿ ಹೊರನಾಡು ಧರ್ಮಕರ್ತ

» ಶೃಂಗೇರಿಯಲ್ಲಿ ಯೋಧ ನಮನ ಕಾರ್ಯಕ್ರಮ
» ಸೈನಿಕರ ಸೇವೆಯ ಸ್ಮರಣೆ ನಿರಂತರವಾಗಿರಲಿ
» ದೇಶ ರಕ್ಷಣೆ ಕಾಯಕ ಗುರುತಿಸಿ

ಉಡುಪಿಯ ಎನ್‌ಸಿಸಿ ಲೆಫ್ಟಿನೆಂಟ್ ರಮಾನಾಥ ಶೆಟ್ಟಿ ಮಾತನಾಡಿ, ಕೇವಲ ಉದ್ಯೋಗಕ್ಕಾಗಿ ಸೈನಿಕರು ಕಾರ್ಯನಿರ್ವಹಿಸುತ್ತಾರೆ ಎನ್ನುವುದು ಸರಿಯಲ್ಲ. ಬೇರೆ ಉದ್ಯೋಗದಲ್ಲಿ ಬೆಳಗ್ಗೆಯಿಂದ ಸಂಜೆಯವರೆಗೆ ಮಾತ್ರ ಕಾರ್ಯನಿರ್ವಹಿಸುತ್ತಾರೆ. ಆದರೆ ಸೈನಿಕರು ಮಾಡುವ ಉದ್ಯೋಗ ನಿರಂತರ. ಸೈನಿಕರ ಕಾಯಕಕ್ಕೆ ಪ್ರತಿಯೊಬ್ಬರೂ ಪ್ರೋತ್ಸಾಹ ನೀಡಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲೆಯ 60 ಯೋಧರು, ಎನ್‌ಸಿಸಿ ಕೆಡೆಟ್‌ಗಳಾದ ಹನುಮಂತಪ್ಪ, ಪ್ರದೀಪ್, ಶರಣ್ಯ ಅವರನ್ನು ಸನ್ಮಾನಿಸಲಾಯಿತು. ಪ್ರಾಚಾರ್ಯ ಡಾ. ದೇವಿದಾಸ್ ನಾಯಕ್, ಎನ್‌ಎಸ್‌ಎಸ್ ಅಧಿಕಾರಿ ಪ್ರಶಾಂತ್, ಮಾಜಿ ಸೈನಿಕ ಸಂಘದ ಅಧ್ಯಕ್ಷ ಕೊಪ್ಪದ ಕ್ಯಾಪ್ಟನ್ ಗೋಪಾಲ್ ಇದ್ದರು.

Scanned by CamScanner

ವಿಜಯ ಕರ್ನಾಟಕ

ಭಾನುವಾರ, 8 ಜನವರಿ 2017

ಯೋಧರನ್ನು ಗೌರವಿಸುವುದು ಹೆಮ್ಮೆಯ ವಿಷಯ

ಶೃಂಗೇರಿಯಲ್ಲಿ ಯೋಧ ನಮನ, 60 ಯೋಧರಿಗೆ ಸನ್ಮಾನ

ಶೃಂಗೇರಿ: ಯೋಧರು ಗಡಿ ಕಾಯುವುದಲ್ಲದೆ, ಪ್ರಕೃತಿ ವಿಕೋಪ ಸಂದರ್ಭದಲ್ಲಿ ಸಂಕಷ್ಟಕ್ಕೆ ಸಿಲುಕಿರುವ ಜನರನ್ನು ರಕ್ಷಿಸುವ ಮಹಾತ್ಕಾರ್ಯ ಮಾಡುತ್ತಿದ್ದು, ಯೋಧರನ್ನು ಗೌರವಿಸುವುದು ಹೆಮ್ಮೆಯ ವಿಷಯವಾಗಿದೆ ಎಂದು ಹೊರನಾಡಿನ ಧರ್ಮದರ್ಶಿ ಜಿ.ಭೀಮೇಶ್ವರ ಜೋಷಿ ಹೇಳಿದರು.

ಅವರು ಶನಿವಾರ ಜೆಸಿಬಿಎಂ ಕಾಲೇಜಿನ ಸಭಾಂಗಣದಲ್ಲಿ ಎನ್‌ಸಿಸಿ, ರಾಷ್ಟ್ರೀಯ ಸೇವಾ ಯೋಜನೆ ಹಾಗೂ ಕಾಲೇಜಿನ ವಿವಿಧ ಸಂಘಗಳು ಆಯೋಜಿಸಿದ್ದ ಯೋಧ ನಮನ ಕಾರ್ಯಕ್ರಮದಲ್ಲಿ ನಿವೃತ್ತ ಯೋಧರನ್ನು ಸನ್ಮಾನಿಸಿ ಮಾತನಾಡಿದರು.

ದೇಶಕ್ಕೆ ಸಂಕಷ್ಟ ಎದುರಾದಾಗ ಮಾತ್ರ ಸೈನಿಕರನ್ನು ನೆನಪಿಸಿಕೊಂಡು ಮತ್ತೆ ಅವರನ್ನು ಮರೆತು ಬಿಡುತ್ತೇವೆ. ಆಕಾಶ, ಭೂಮಿ, ಜಲದಲ್ಲಿ ಕಾರ್ಯ ನಿರ್ವಹಿಸುವ ಅವರ ಜೀವನದ ಮೌಲ್ಯ ಎಲ್ಲರಿಗೂ ಪ್ರೇರಣೆಯಾಗಬೇಕು. ಭಾರತದ ಸೈನಿಕರಿಗೆ ಬುದ್ಧಿವಂತಿಕೆ ಇದೆ. ಕೆಚ್ಚೆದೆಯಿಂದ ಶತ್ರುಗಳ ವಿರುದ್ಧ ಹೋರಾಡುವ ಯುಕ್ತಿಯಿದ್ದು, ಒಬ್ಬ ಸೈನಿಕ ದೇಶಕ್ಕಾಗಿ ಪ್ರಾಣ ಬಲಿದಾನ ಮಾಡುವುದು ಅತ್ಯಂತ ಶ್ರೇಷ್ಠವಾದುದು ಎಂದರು.

»3



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ನಡೆದ ಯೋಧ ನಮನ ಕಾರ್ಯಕ್ರಮದಲ್ಲಿ ಡಾ.ಭೀಮೇಶ್ವರ ಜೋಷಿ ನಿವೃತ್ತ ಯೋಧರನ್ನು ಸನ್ಮಾನಿಸಿದರು.

ಎನ್ ಎಸ್ ಯುಐ ಸಾಂಕೇತಿಕ ಪ್ರತಿಭಟನೆ

ಶೃಂಗೇರಿ: ಜೆಸಿಬಿಎಂ ಕಾಲೇಜಿನಲ್ಲಿ ಶನಿವಾರ ಯೋಧರ ನಮನ ಕಾರ್ಯಕ್ರಮಕ್ಕೆ ಆಂತರಿಕ ಚಕ್ರವರ್ತಿ ಸೂಲಿಬೆಲೆಯಿಂದ ವಿಕೃತ ಭಾಷಣ ಆಯೋಜಿಸಲಾಗಿತ್ತಾದರೂ, ಪ್ರತಿಭಟನೆ ಹಿನ್ನಲೆಯಲ್ಲಿ ಸೂಲಿಬೆಲೆ ಆಗಮಿಸಲಿಲ್ಲ. ಆದ್ದಾಗ್ಯೂ ಎನ್ ಎಸ್ ಯುಐ ಸಾಂಕೇತಿಕವಾಗಿ ಪ್ರತಿಭಟನೆ ನಡೆಸಿತು.

ಎನ್ ಎಸ್ ಯುಐ ಅಧ್ಯಕ್ಷ ಸಂಪತ್ ಮಾತನಾಡಿ, ಯೋಧರ ಬಗ್ಗೆ ನಮಗೆ ಅಪಾರ ಗೌರವವಿದ್ದು, ಯೋಧರನ್ನು ಗೌರವಿಸುವ ಕಾರ್ಯಕ್ರಮದಲ್ಲಿ ಮತೀಯ, ಹತ್ತಾರು ಕೇಸುಗಳನ್ನು ಹೊಂದಿರುವ ಚಕ್ರವರ್ತಿ ಸೂಲಿಬೆಲೆ ಅವರನ್ನು ಭಾಷಣಕ್ಕಾಗಿ ಆಹ್ವಾನಿಸಿರುವುದನ್ನು ತೀವ್ರವಾಗಿ ವಿರೋಧಿಸುವುದಾಗಿ ಹೇಳಿದರು.

»3

Scanned by CamScanner

ಸಂಯುಕ್ತ ಕರ್ನಾಟಕ ಶುಕ್ರವಾರ, 30, ಡಿಸೆಂಬರ್, 2016, ದಾವಣಗೆರೆ

ದರೇಕೊಪ್ಪದಲ್ಲಿ ಎನ್‌ಎಸ್‌ಎಸ್ ಶಿಬಿರ ಸಮಾರೋಪ

ಶೃಂಗೇರಿ: ಬದುಕಿನಲ್ಲಿ ಅಹಂ ಇರುವವರು ಅಧಃಪತನ ಹೊಂದುತ್ತಾರೆ. ಅತ್ಮೀಯತೆ ಇರುವವರು ಹೆಗ್ಗುರುತುಗಳನ್ನು ಮೂಡಿಸುತ್ತಾರೆ ಎಂದು ಜೆಸಿಬಿಎಂ ಕಾಲೇಜಿನ ಮಾಜಿ ಪ್ರಾಂಶುಪಾಲ ಡಾ. ಹೆಚ್.ಸಿ.ವೀರಪ್ಪಗೌಡರು ಹೇಳಿದರು.

ಅವರು ದರೆಕೊಪ್ಪ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಜೆಸಿಬಿಎಂ ಕಾಲೇಜು ರಾಷ್ಟ್ರೀಯ ಸೇವಾ ಯೋಜನೆಯ ಏಳು ದಿನಗಳ ವಾರ್ಷಿಕ ವಿಶೇಷ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು. ಪ್ರತಿಯೊಬ್ಬರ ಮೇಲೂ ಸಮಾಜದ ಅನೇಕ ಋಣಗಳಿವೆ. ಚುನಾವಣೆಗಳು ನಡೆಯುವುದು ನಿಮಿತ್ತ ಮಾತ್ರ. ಅದರ ನಂತರ ಗ್ರಾಮಸ್ಥರೆಲ್ಲಾ ಒಂದಾಗಿ ಸಮಾಜವನ್ನು ಅರಿಯುವ, ಸಮಾಜದಲ್ಲಿ ಬೆರೆಯುವ ಹೊಂದಿಕೊಳ್ಳುವ ಕಾರ್ಯದಲ್ಲಿ ಕೊಡಗುತ್ತಾರೆ ಎಂದು ಅವರು ಹೇಳಿದರು.

ನಮ್ಮ ನಡೆ, ನುಡಿಗಳಲ್ಲಿ ಸತ್ಯ ಮತ್ತು ಪ್ರಾಮಾಣಿಕತೆಗಳಿದ್ದರೆ ಹೃದಯಶ್ರೀಮಂತಿಕೆ ಮತ್ತು ಒಳ್ಳೆಯ ವ್ಯಕ್ತಿತ್ವವಿರುತ್ತದೆ. ಇಂತಹ ಸಾಧ್ಯತೆಗೆ ಎನ್ನೆಸ್ಸೆಸ್ ಶಿಬಿರಗಳು ವೇದಿಕೆ ಒದಗಿಸುತ್ತವೆ. ನಮ್ಮಲ್ಲಿರುವ ಸಂಪತ್ತಿಗಿಂತ ಮಿಗಿಲಾಗಿ ಸೇವೆಯು ನಮ್ಮ ಮನಸ್ಸಿಗೆ ಖುಷಿ, ಉತ್ಸಾಹಗಳನ್ನು ನೀಡುತ್ತದೆ ಎಂದರು. ಜಿಲ್ಲಾ ಪಂಚಾಯಿತಿ ಸದಸ್ಯೆ ಶಿಲ್ಪಾರವಿ ಮಾತನಾಡಿ, ಶಿಬಿರದ ನೆನಪು ನಮ್ಮ ಬದುಕಿನುದ್ದಕ್ಕೂ ಹಚ್ಚ ಹಸುರಾಗಿರುತ್ತದೆ. ಗ್ರಾಮೀಣ ಪ್ರದೇಶಗಳಿಗೆ ಹೋಗಿ ಮಾಡಿದ ಸೇವೆ, ವಿಶ್ವಾಸ ಮತ್ತು ಪ್ರೀತಿಗಳನ್ನು ಮೂಡಿಸುತ್ತದೆ ಎಂದರು.



ಶೃಂಗೇರಿಯ ದರೆಕೊಪ್ಪದಲ್ಲಿ ನಡೆದ ಜೆಸಿಬಿಎಂ ಕಾಲೇಜು ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರದ ಸಮಾರೋಪ ಸಮಾರಂಭದಲ್ಲಿ ಡಾ. ಹೆಚ್.ಸಿ.ವೀರಪ್ಪಗೌಡರು ಮಾತನಾಡಿದರು.

ಪ್ರಾಂಶುಪಾಲ ಡಾ. ದೇವಿದಾಸ್ ಎಸ್. ನಾಯ್ಕ್ ಅಧ್ಯಕ್ಷತೆ ವಹಿಸಿ ಶಿಬಿರದ ಯಶಸ್ಸಿಗೆ ಕಾರಣರಾದ ಊರಿನ ಸಮಸ್ತರಿಗೆ ವಂದನೆಗಳನ್ನು ಅರ್ಪಿಸಿ, ಶಿಬಿರಾರ್ಥಿಗಳಿಗೆ ಶುಭಹಾರೈಸಿದರು. ಶಿಬಿರದಲ್ಲಿ ಅಂಗನವಾಡಿ ಮಕ್ಕಳಿಂದ ಹಿಡಿದು ವಯೋವೃದ್ಧರವರೆಗೂ ಆಯೋಜಿಸಲಾಗಿದ್ದ ವಿವಿಧ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಶಿಬಿರದ ಹದಿನಾಲ್ಕು ಸ್ವಯಂಸೇವಕರನ್ನು ಉತ್ತಮ ಸ್ವಯಂಸೇವಕರು ಎಂದು ಗುರುತಿಸಿ ರೋಟ್ರಾಕ್ಟ್ ಕ್ಲಬ್ ವತಿಯಿಂದ ಪುರಸ್ಕರಿಸಲಾಯಿತು.

ದಿನೇಶ್ ಹೆಗ್ಡೆ, ಪ್ರವೀಣ್ ಬಿ.ಪಿ., ಅನಂತಪದ್ಮನಾಭಭಟ್ ಹೇರೂರು, ರಾಮಕೃಷ್ಣ, ಅಂಬ್ಲೂರು, ಚೇತನ್ ಹೆಗ್ಡೆ, ಗೋಪಾಲಹೆಗ್ಡೆ ಕೆ.ಎನ್., ಪ್ರದೀಪ್ ಜೋಳರಮನೆ, ಎಂ.ಆರ್. ಶಿವರಾಜ್ ಮತ್ತಿತರೆ ಪ್ರಮುಖರು ಉಪಸ್ಥಿತರಿದ್ದರು. ಶಿಬಿರಾಧಿಕಾರಿಗಳಾಗಿ ಎ.ಜಿ. ಪ್ರಶಾಂತ್, ಎನ್.ಹೆಚ್. ಲಕ್ಷ್ಮೀನಾರಾಯಣ, ಸಹ ಶಿಬಿರಾಧಿಕಾರಿಗಳಾಗಿ ಲೋಕೇಶ್ ಎಂ.ವಿ., ಸಹಕರಿಸಿದರು.

ರಸ ಪ್ರಶ್ನೆ ಸ್ಪರ್ಧೆಯಲ್ಲಿ ರಾಷ್ಟ್ರಮಟ್ಟಕ್ಕೆ ಆಯ್ಕೆ

ಶೃಂಗೇರಿ: ಪದವಿಪೂರ್ವ ಶಿಕ್ಷಣ ಇಲಾಖೆಯು ವಿಜಾಪುರದಲ್ಲಿ ನಡೆದ ರಾಜ್ಯ ಮಟ್ಟದ ಪದವಿಪೂರ್ವ ಕಾಲೇಜುಗಳ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಶೃಂಗೇರಿಯ ಬಿಜಿಎಸ್ ವಿಜ್ಞಾನ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳಾದ ಎನ್.ಎಸ್. ವಿಶ್ವಜಿತ್ ಮತ್ತು ಆನಘಾ ಎನ್. ರಾವ್ ತಂಡವು ರಸಪ್ರಶ್ನೆ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿ ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿದೆ. ಈ ಸಾಧನೆಗಾಗಿ ಶ್ರೀಆದಿಚುಂಚನಗಿರಿ ಮಠದ ಕಾರ್ಯದರ್ಶಿಗಳಾದ ಶ್ರೀಗುಣನಾಥ ಸ್ವಾಮೀಜಿಯವರು, ಪ್ರಾಚಾರ್ಯರು ಹಾಗೂ ಸಿಬ್ಬಂದಿ ವರ್ಗದವರು ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ.

Scanned by CamScanner

ಬುಧವಾರ, 28 ಡಿಸೆಂಬರ್ 2016, ಶಿವಮೊಗ್ಗ

© www.vijayka

ಪ್ರತಿ ಆರೋಗ್ಯವಂತ ರಕ್ತದಾನ ಮಾಡಿ



ಶೃಂಗೇರಿ ತಾಲೂಕಿನ ಧರೆಕೊಪ್ಪದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ, ದಂತ ತಪಾಸಣಾ ಶಿಬಿರ ಹಾಗೂ ರಕ್ತದಾನ ಶಿಬಿರವನ್ನು ಆಸ್ಪತ್ರೆಯ ವೈದ್ಯಾಧಿಕಾರಿ ಡಾ.ಲಕ್ಷ್ಮೀನಾರಾಯಣ್ ಉದ್ಘಾಟಿಸಿದರು.

ಶೃಂಗೇರಿ: ರಕ್ತವನ್ನು ಯಾವುದೇ ಕೃತಕ ಮೂಲಗಳಿಂದ ತಯಾರಿಸಲು ಸಾಧ್ಯವಿಲ್ಲ. ಒಬ್ಬರು ರಕ್ತವನ್ನು ಕೊಟ್ಟಾಗ ಮಾತ್ರ ಇನ್ನೊಬ್ಬರ ಜೀವ ಉಳಿಯುತ್ತದೆ ಎಂದು ಶಾರದಾ ಧನ್ವಂತರಿ ಆಸ್ಪತ್ರೆ ವೈದ್ಯಾಧಿಕಾರಿ ಡಾ.ಲಕ್ಷ್ಮೀನಾರಾಯಣ್ ಹೇಳಿದರು.

ಅವರು ಧರೆಕೊಪ್ಪ ಸರಕಾರಿ ಶಾಲೆಯಲ್ಲಿ ಶ್ರೀ ಜೆಸಿಬಿಎಂ ಕಾಲೇಜಿನ ಎನ್ನೆಸ್ಸೆಸ್ ಶಿಬಿರದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ, ದಂತ ತಪಾಸಣಾ ಶಿಬಿರ ಹಾಗೂ ರಕ್ತದಾನ ಶಿಬಿರ ಉದ್ಘಾಟಿಸಿ ಮಾತನಾಡಿದರು.

ರಕ್ತದ ಅವಶ್ಯಕತೆ ಇದ್ದಾಗ ಮಾತ್ರ ರಕ್ತದಾನದ ಪ್ರಾಮುಖ್ಯತೆ ಬಹಳ ಗಂಭೀರವಾಗಿ ಅರಿವಿಗೆ ಬರುತ್ತದೆ. ಆದ್ದರಿಂದ ಪ್ರತಿಯೊಬ್ಬ ಆರೋಗ್ಯವಂತರು ರಕ್ತದಾನ ಮಾಡಬೇಕು ಎಂದು ಸಲಹೆ ನೀಡಿದರು. ಇಲ್ಲಿನ ಶಾರದಾ ಧನ್ವಂತರಿ ಆಸ್ಪತ್ರೆ ಹಾಗೂ ಚಿಕ್ಕಮಗಳೂರಿನ ಸರಕಾರಿ ಜಿಲ್ಲಾಸ್ಪತ್ರೆಯಲ್ಲಿ ಮಾತ್ರ ರಕ್ತನಿಧಿ ಲಭ್ಯವಿದ್ದು ಇಲ್ಲಿಂದ ಸುತ್ತಮುತ್ತಲ ತಾಲೂಕುಗಳಿಗೆ ರಕ್ತವನ್ನು ತಲುಪಿಸಲಾಗುತ್ತದೆ ಎಂದರು.

ಜೆಸಿಐ ಅಧ್ಯಕ್ಷೆ ಶಿವಾನಂದ ಹೆಗ್ಗದ್ದೆ ಅಧ್ಯಕ್ಷತೆ ವಹಿಸಿದ್ದರು. ಡಾ.ಪಂದನಾ, ಸಂಪತ್‌ಕುಮಾರ್, ಮಣಿಕಂಠ ಹಾಜರಿದ್ದರು.

ಶ್ರೀಲಕ್ಷ್ಮಿ ಸ್ವಾಗತಿಸಿ, ಚೈತ್ರಾ ಕಾಮತ್ ವಂದಿಸಿ, ಪ್ರಿಯಾಂಕಾ ನಿರೂಪಿಸಿದರು.

Scanned by CamScanner

27-12-16

ಮಂಗಳವಾರ, 27 ಡಿಸೆಂಬರ

ಶೃಂಗೇರಿ:

ಶ್ರೀಜೆಸಿಬಿಎಂ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ವಾರ್ಷಿಕ ವಿಶೇಷ ಶಿಬಿರ, ಧ್ವಜಾರೋಹಣ-ಅಣ್ಣಪ್ಪ ಗೌಡ. ಸಮಯ-ಬೆಳಗ್ಗೆ 7.

ಜೇನುಕೃಷಿ ಮಲೆನಾಡಿಗೆ ಒಂದು ವರದಾನ ಕುರಿತು ಚರ್ಚೆ, ತಜ್ಞರು-ಜೇನುಕೃಷಿ ಅಧಿಕಾರಿ,ತೋಟಗಾರಿಕೆ ಇಲಾಖೆ ಅಧಿಕಾರಿ ಬಿದ್ದಯ್ಯ, ಅಧ್ಯಕ್ಷತೆ-ಸುಂಕುರ್ಡಿ ನಾಗೇಶರಾವ್, ಸಮಯ-2.30.

ಉನ್ನತ ತೋಟಗಾರಿಕಾ ತಂತ್ರಜ್ಞಾನ, ಸಂಪನ್ಮೂಲ ವ್ಯಕ್ತಿ ಸಹಾಯಕ ತೋಟಗಾರಿಕೆ ನಿರ್ದೇಶಕ ಶ್ರೀಕೃಷ್ಣ ಅಧ್ಯಕ್ಷತೆ-ಹುಲಗಾರು ಚಂದ್ರಶೇಖರರಾವ್, ಸಮಯ-ಸಂಜೆ 5. ಸಾಂಸ್ಕೃತಿಕ ಕಾರ್ಯಕ್ರಮ-ಚಿಕ್ಕಮಗಳೂರಿನ ಆಶಾಕಿರಣ ಅಂಧ ಮಕ್ಕಳ ವಸತಿ ಶಾಲೆ ವಿದ್ಯಾರ್ಥಿಗಳಿಂದ, ಸಮಯ-ಸಂಜೆ 6.30, ಸ್ಥಳ-ಸ.ಹಿ.ಪ್ರಾ.ಶಾಲೆ, ಧರೆಕೊಪ್ಪ.

24-12-16

ಶನಿವಾ

ಶೃಂಗೇರಿ: ಶ್ರೀಜೆಸಿಬಿಎಂ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ವಾರ್ಷಿಕ ವಿಶೇಷ ಶಿಬಿರ. ಧ್ವಜಾರೋಹಣ-ಶಂಕರಪ್ಪ ಗೌಡ,ಸಮಯ- ಬೆಳಗ್ಗೆ 7.

ರಾಧಾಕೃಷ್ಣ ಛದ್ಮವೇಷ,ಪರಿಸರ ಚಿತ್ರಕಲೆ,ರಸಪ್ರಶ್ನೆ, ವಸ್ತು ಪ್ರದರ್ಶನ,ನವೀನ ಕೃಷಿ ಉಪಕರಣಗಳ ಪ್ರದರ್ಶನ, ನಿರ್ವಹಣೆ-ಶಿಕ್ಷಕಿ ಬಿ.ಪವಿತ್ರ, ಸಮಯ-ಬೆಳಗ್ಗೆ 10.

ಕಾನೂನು ಅರಿವು ನೆರವು ಕಾರ್ಯಕ್ರಮ,ಸಂಪನ್ಮೂಲ ವ್ಯಕ್ತಿಗಳು-ವಕೀಲರಾದ ಎಸ್.ಜಿ.ಶಶಿಭೂಷಣ್,ಗಣಪತಿ ಮತ್ತು ಕೆ.ಸಿ.ಚರಣ್,ಅಧ್ಯಕ್ಷತೆ-ಎಚ್.ಟಿ.ಸದಾಶಿವ, ಸಮಯ-ಮಧ್ಯಾಹ್ನ 2.30.

ಜೀವ ವೈವಿಧ್ಯತೆ ಒಂದು ವಿಸ್ಮಯ, ಸಂಪನ್ಮೂಲ ವ್ಯಕ್ತಿ-ಡಾ. ಕುಮಾರಸ್ವಾಮಿ ಉಡುಪ, ಅಧ್ಯಕ್ಷತೆ-ಡಾ.ಸಿ.ವಿ.ಗಿರಿಧರಶಾಸ್ತ್ರಿ, ಸಂಜೆ 5.

ಸಾಂಸ್ಕೃತಿಕ ಕಾರ್ಯಕ್ರಮ-ಶಿಬಿರಾರ್ಥಿಗಳಿಂದ ಹಾಗೂ ಧರೆಕೊಪ್ಪ ಗ್ರಾಮಸ್ಥರಿಂದ ಅಂಟಿಗೆ ಪಿಂಟಿಗೆ. ಸಮಯ-ಸಂಜೆ 6.30. ಸ್ಥಳ-ಸ.ಹಿ.ಪ್ರಾ.ಶಾಲೆ,ಧರೆಕೊಪ್ಪ.

Scanned by CamScanner

ಪ್ರಜಾವಾಣಿ ಸೋಮವಾರ • ಡಿಸೆಂಬರ್ 26, 2016

ವಿದ್ಯಾರ್ಥಿಗಳ ಪರಿಪೂರ್ಣ ವ್ಯಕ್ತಿತ್ವಕ್ಕೆ ಎನ್‌ಎಸ್‌ಎಸ್ ಶಿಬಿರ

ಪ್ರಜಾವಾಣಿ ವಾರ್ತೆ

ಶೃಂಗೇರಿ: ವ್ಯಕ್ತಿ ಸಮಾಜದ ಅವಿಭಾಜ್ಯ ಅಂಗವಾಗಿದ್ದು, ಜೀವನ ಪರಿಪೂರ್ಣತೆಗಾಗಿ ಅತ ಸೇವಾ ಮನೋಭಾವನೆ ರೂಢಿಸಿಕೊಳ್ಳಬೇಕು. ಪ್ರತಿಯೊಬ್ಬರ ಮೇಲೂ ಸಮಾಜದ ಋಣವಿದೆ ಎಂದು ಕೀಲು ಮೂಳೆ ತಜ್ಞ ಡಾ.ಉದಯಶಂಕರ್ ಹೇಳಿದರು.

ಧರೆಕೊಪ್ಪ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಜೆಸಿಬಿಎಂ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ಏಳು ದಿನಗಳ ವಾರ್ಷಿಕ ವಿಶೇಷ ಶಿಬಿರದಲ್ಲಿ ಕೊಪ್ಪ ಪ್ರಶಮನಿ ಆಸ್ಪತ್ರೆ, ಸಹಕಾರದೊಂದಿಗೆ ನಡೆದ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಅವರು ಮಾತನಾಡಿದರು.

ವಿದ್ಯಾರ್ಥಿಗಳ ಪರಿಪೂರ್ಣ ವ್ಯಕ್ತಿತ್ವ ಪಡೆಯಲು ಎನ್‌ಎಸ್‌ಎಸ್ ಶಿಬಿರಗಳು ಕಾರಣವಾಗಬೇಕು. ಸಾಮಾಜಿಕ ಕಳಕಳಿಯನ್ನು ವಿದ್ಯಾರ್ಥಿ ದಿಸೆಯಲ್ಲಿ ಬೆಳೆಸುವಂತಹ ಎನ್‌ಎಸ್‌ಎಸ್ ನಂತಹ ಯೋಜನೆಗಳ ಅನುದಾನ ಹೆಚ್ಚಿಸಬೇಕು ಎಂದು ಹೇಳಿದ ಅವರು ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಹಮ್ಮಿಕೊಂಡಿದ್ದು, ಹರ್ಷದಾಯಕ ಎಂದರು.

ಅಧ್ಯಕ್ಷತೆ ವಹಿಸಿದ್ದ ಡಾ.ಅಣ್ಣಾದೊರೆ ಮಾತನಾಡಿ, ದೇಶದ ಆರೋಗ್ಯದಾತ ರೈತ. ರೈತರು ಸಾವಯವ ಪದ್ಧತಿಯಲ್ಲಿ ಬೆಳೆಯನ್ನು ಬೆಳೆದರೆ ದೇಶ ಆರೋಗ್ಯ ಪೂರ್ಣವಾಗಿರುತ್ತದೆ. ಆದರೆ ಪ್ರಸ್ತುತ ರೈತರು ಶೀಘ್ರವಾಗಿ ಪ್ರಗತಿಹೊಂದಲು ರಾಸಾಯನಿಕ, ಕೀಟನಾಶಕ, ಶಿಲೀಂದ್ರನಾಶಕಗಳಿಗೆ ಮೊರೆ ಹೋಗುತ್ತಿದ್ದಾರೆ ಎಂದು ವ್ಯಕ್ತಪಡಿಸಿದರು.



ಧರೆಕೊಪ್ಪ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಜೆಸಿಬಿಎಂ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರದಲ್ಲಿ ಕೊಪ್ಪದ ಪ್ರಶಮನಿ ಆಸ್ಪತ್ರೆ, ಸಹಕಾರದೊಂದಿಗೆ ನಡೆದ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಕೊಪ್ಪದ ವೈದ್ಯ ಡಾ.ಉದಯಶಂಕರ್ ಉದ್ಘಾಟಿಸಿದರು.

ರಾಸಾಯನಿಕಗಳ ಸಿಂಪಡಣೆಯಿಂದ ಜೀವ ವೈವಿಧ್ಯದ ಮೇಲಾಗುವ ದುಷ್ಪರಿಣಾಮಗಳನ್ನು ರೈತರು ಗಣನೆಗೆ ತೆಗೆದುಕೊಳ್ಳದೇ ಆಹಾರ ಪದಾರ್ಥಗಳ ಕಲಬೆರಕೆಯಿಂದ ಸಮಾಜದ ಸ್ವಾಸ್ಥ್ಯಕ್ಕೆ ತೊಂದರೆಯಾಗುತ್ತಿದ್ದು, ಐಪಾರಾಮಿ ಜೀವನದ ಹಿಂದೆ ಬೀಳದೆ ವಸ್ತುಗಳ ಗುಣಮಟ್ಟದ ಬಗ್ಗೆ ಹೆಚ್ಚಿನ ಗಮನ ವಹಿಸಬೇಕು. ಆಹಾರ ಪದಾರ್ಥಗಳ ಬಣ್ಣ, ಗಾತ್ರ, ಬೆಲೆಗಳಿಗಿಂತ ಮಿಗಿಲಾಗಿ ಗುಣಮಟ್ಟಕ್ಕೆ ಹೆಚ್ಚಿನ ಆದ್ಯತೆ ನೀಡಬೇಕೆಂದು ಕಳಕಳಿ ವ್ಯಕ್ತಪಡಿಸಿದರು.

ತಪಾಸಣಾ ಶಿಬಿರದಲ್ಲಿ ಕಿವಿ, ಮೂಗು, ಗಂಟಲು ತಜ್ಞರು, ಕೀಲು ಮೂಳೆ ತಜ್ಞರು, ಜನರಲ್ ಫಿಸಿಷಿಯನ್‌ಗಳು ಬಂದು ಇಸಿಜಿ ಮಧುಮೇಹ ಮೊದಲಾದ ಉಚಿತ ಪರೀಕ್ಷೆಗಳನ್ನು ಮಾಡಿ ಗ್ರಾಮಸ್ಥರ ಆರೋಗ್ಯದ ತಪಾಸಣೆ ನಡೆಸಿ ಸೂಕ್ತ ಉಚಿತ ಔಷಧಿ ಮತ್ತು ಸಲಹೆಗಳನ್ನು ನೀಡಿದರು. 60 ಮಂದಿ ಗ್ರಾಮಸ್ಥರು ಇದರ ಸದುಪಯೋಗ ಪಡೆದು ಕೊಂಡರು.

ಕಾರ್ಯಕ್ರಮದಲ್ಲಿ ಇ.ಎನ್‌ಟಿ ತಜ್ಞರಾದ ಡಾ. ಚನ್ನಬಸಪ್ಪ, ರೇಖಾ ಉದಯಶಂಕರ್, ಸಂದೇಶ್, ಶೋಭಾ, ಮುಂತಾದವರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಗಣೇಶ್ ಪ್ರಸಾದ್ ಸ್ವಾಗತಿಸಿ, ಶರತ್‌ಭಟ್ ವಂದಿಸಿ, ವಿಜೇಶ್ ನಿರೂಪಿಸಿದರು.

Scanned by CamScanner

ಕನ್ನಡಪ್ರಭ
ಭಾನುವಾರ 25.12.2016

ಎನ್ನೆಸ್ಸೆಸ್ ಶಿಬಿರದಿಂದ ಸಾಮಾಜಿಕ ಜವಾಬ್ದಾರಿ

ದರೆಕೊಪ್ಪದ ಪ್ರಾಥಮಿಕ ಶಾಲೆ ವಾರ್ಷಿಕ ವಿಶೇಷ ಶಿಬಿರದಲ್ಲಿ ಡಾ.ಉದಯಶಂಕರ್ ಅಭಿಪ್ರಾಯ

• ಕನ್ನಡಪ್ರಭ ವಾರ್ತೆ ಶೃಂಗೇರಿ

ಪ್ರತಿಯೊಬ್ಬರ ಮೇಲೂ ಸಮಾಜದ ಋಣವಿದೆ. ಅದನ್ನು ಒಂದಿಲ್ಲೊಂದು ಉತ್ತಮ ಕಾರ್ಯಗಳಿಂದ ಋಣ ಸಂದಾಯ ಮಾಡಬೇಕಿದೆ ಎಂದು ಕೀಲು ಮೂಳೆ ತಜ್ಞ ಡಾ. ಉದಯಶಂಕರ್ ಹೇಳಿದರು.

ತಾಲೂಕಿನ ದರೆಕೊಪ್ಪ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆಯುತ್ತಿರುವ ಜೆಸಿಬಿಎಂ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ 7 ದಿನಗಳ ವಾರ್ಷಿಕ ವಿಶೇಷ ಶಿಬಿರದಲ್ಲಿ ಪ್ರಶಮನಿ ಆಸ್ಪತ್ರೆ, ಕೊಪ್ಪ ಸಹಕಾರದೊಂದಿಗೆ ನಡೆದ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಉದ್ಘಾಟಿಸಿ ಮಾತನಾಡಿದರು.

ಎನ್‌ಎಸ್‌ಎಸ್ ಶಿಬಿರಗಳು ವಿದ್ಯಾರ್ಥಿಗಳ ಪರಿಪೂರ್ಣ ವ್ಯಕ್ತಿತ್ವ ಪಡೆಯುವುದಕ್ಕೆ ಸಮಾಜದ ಉನ್ನತಿಗೆ ಕಾರಣವಾಗಬೇಕು. ಸಾಮಾಜಿಕ ಕಳಕಳಿಯನ್ನು ವಿದ್ಯಾರ್ಥಿ ದೆಸೆಯಲ್ಲಿ ಬೆಳೆಸುವಂತಹ ಎನ್.ಎಸ್.ಎಸ್. ನಂತಹ ಯೋಜನೆಗಳ ಅನುದಾನ ಹೆಚ್ಚಿಸಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಲಯನ್ಸ್ ಅಧ್ಯಕ್ಷ ಡಾ. ಅಣ್ಣಾದೊರೆ, ಈ ದೇಶದ ಆರೋಗ್ಯದಾತ ರೈತನೇ. ರೈತರು ಸಾವಯವ ಪದ್ಧತಿಯಲ್ಲಿ ಬೆಳೆಯನ್ನು ಬೆಳೆದರೆ ದೇಶ ಆರೋಗ್ಯ ಪೂರ್ಣವಾಗಿರುತ್ತದೆ. ಆದರೆ ಇಂದು ರೈತರು ಶೀಘ್ರವಾಗಿ ಪ್ರಗತಿ ಹೊಂದಲು ರಾಸಾಯನಿಕ, ಕೀಟನಾಶಕ, ಶಿಲೀಂಧ್ರ ನಾಶಕಗಳಿಗೆ ಮೊರೆ ಹೋಗುತ್ತಿದ್ದಾರೆ. ರಾಸಾಯನಿಕಗಳ ಸಿಂಪಡನೆಯಿಂದ ಜೀವ ವೈವಿಧ್ಯದ ಮೇಲಾಗುವ ದುಷ್ಪರಿಣಾಮಗಳನ್ನು ರೈತರು ಗಣನೆಗೆ ತೆಗೆದುಕೊಳ್ಳದೇ ಬಳಸುವುದರಿಂದ ಹಾಗೂ ಆಹಾರ ಪದಾರ್ಥಗಳ ಕಲಬೆರಕೆಯಿಂದ ಸಮಾಜದ ಸ್ವಾಸ್ಥ್ಯಕ್ಕೆ ದಾರಿ ಆಗುತ್ತದೆ. ಆದರೂ ಐಷಾರಾಮಿ ಜೀವನದ ಹಿಂದೆ ಬೀಳದೆ ವಸ್ತುಗಳ ಗುಣಮಟ್ಟದ ಬಗ್ಗೆ ಹೆಚ್ಚಿನ ಗಮನ ವಹಿಸಬೇಕು. ಆಹಾರ ಪದಾರ್ಥಗಳ ಬಣ್ಣ, ಗಾತ್ರ, ಬೆಲೆಗಳಿಗಿಂತ ಮಿಗಿಲಾಗಿ ಗುಣಮಟ್ಟಕ್ಕೆ ಹೆಚ್ಚಿನ ಆದ್ಯತೆ ನೀಡಬೇಕೆಂದು ಕಳಕಳಿ ವ್ಯಕ್ತಪಡಿಸಿದರು.



ಶೃಂಗೇರಿ ತಾಲೂಕಿನ ದರೆಕೊಪ್ಪದಲ್ಲಿ ಎನ್.ಎಸ್.ಎಸ್ ಶಿಬಿರದಲ್ಲಿ ಆರೋಗ್ಯ ತಪಾಸಣಾ ಶಿಬಿರವನ್ನು ಡಾ. ಉದಯ್‌ಶಂಕರ್ ಉದ್ಘಾಟಿಸಿದರು.

ತಪಾಸಣಾ ಶಿಬಿರದಲ್ಲಿ ಕಿವಿ, ಮೂಗು, ಗಂಟಲು ತಜ್ಞರು, ಕೀಲುಮೂಳೆ ತಜ್ಞರು, ಜನರಲ್ ಫಿಜಿಷಿಯನ್‌ಗಳು ಆಗಮಿಸಿ ಇಸಿಜಿ ಮಧುಮೇಹ ಮೊದಲಾದ ಉಚಿತ ಪರೀಕ್ಷೆಗಳನ್ನು ಮಾಡಿ, ಗ್ರಾಮಸ್ಥರ ಆರೋಗ್ಯದ ತಪಾಸಣೆ ನಡೆಸಲಾಯಿತು. ರೋಗಿಗಳಿಗೆ ಸೂಕ್ತ ಉಚಿತ ಔಷಧಿ ಮತ್ತು ಸಲಹೆಗಳನ್ನು ನೀಡಿದರು. 60 ಜನ ಗ್ರಾಮಸ್ಥರು ಶಿಬಿರದ ಪ್ರಯೋಜನ ಪಡೆದರು.

ಕಾರ್ಯಕ್ರಮದಲ್ಲಿ ಇಎನ್‌ಟಿ ತಜ್ಞರಾದ ಡಾ. ಚನ್ನಬಸಪ್ಪ, ರೇಖಾ ಉದಯಶಂಕರ್, ಸಂದೇಶ್, ಶೋಭಾ ಶೋಭಾ ಮತ್ತಿತರರು ಉಪಸ್ಥಿತರಿದ್ದರು. ಗಣೇಶ್ ಪ್ರಸಾದ್ ಸ್ವಾಗತಿಸಿ, ಶರತ್‌ಭಟ್ ನಿರೂಪಿಸಿದರು. ವಿಜೇಶ್ ನಿರೂಪಿಸಿದರು.

Scanned by CamScanner

ಪ್ರಜಾವಾಣಿ ಕನ್ನಡ ದಿನಾಂಕ 23-12-16

ಉಚಿತ ಆರೋಗ್ಯ ತಪಾಸಣಾ ಶಿಬಿರ

ಶೃಂಗೇರಿ: ದರೆಕೊಪ್ಪ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆರಂಭಗೊಂಡಿರುವ ಜೆಸಿಬಿಎಂ ಕಾಲೇಜಿನ ಏಳು ದಿನಗಳ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರದಲ್ಲಿ ಕೊಪ್ಪದ ಪ್ರಶಮನಿ ಆಸ್ಪತ್ರೆ ಸಹಕಾರದೊಂದಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಸಲಾಯಿತು. ಶಿಬಿರವನ್ನು ಉದ್ಘಾಟಿಸಿದ ಕೀಲು ಮತ್ತು ಮೂಳೆ ತಜ್ಞ ಡಾ.ಉದಯಶಂಕರ್ ಮಾತನಾಡಿ, ಎನ್‌ಎಸ್‌ಎಸ್ ಶಿಬಿರಗಳು ವಿದ್ಯಾರ್ಥಿಗಳ ಪರಿಪೂರ್ಣ ವ್ಯಕ್ತಿತ್ವ ನಿರೂಪಣೆಗೆ ಮತ್ತು ಸಮಾಜದ ಉನ್ನತಿಗೆ ಕಾರಣವಾಗಬೇಕು ಎಂದು ತಿಳಿಸುತ್ತ ಉಚಿತ ಆರೋಗ್ಯ ತಪಾಸಣಾ ಶಿಬಿರದ ಆಯೋಜನೆಗೆ ಹರ್ಷ ವ್ಯಕ್ತಪಡಿಸಿದರು.

Scanned by CamScanner

vishwavani.news
23.12.2016
ಶುಕ್ರವಾರ

ಎನ್ ಎಸ್ ಎಸ್ ವಾರ್ಷಿಕ ವಿಶೇಷ ಶಿಬಿರದಲ್ಲಿ ಶಾಸಕ ಜೀವರಾಜ್ ಅಭಿಮತ

ಯುವಕರಿಂದ ದೇಶದ ಭವಿಷ್ಯ ನಿರ್ಮಾಣ

ವಿಶ್ವವಾಣಿ ಸುದ್ದಿಮನೆ ಶೃಂಗೇರಿ

ಸಮಾಜದ ನಿಸ್ವಾರ್ಥ ದಾನಧರ್ಮಗಳು ಇಂತಹ ಶಿಬಿರಗಳು ಆಯೋಜನೆಗೊಳ್ಳುವ ಸಂದರ್ಭದಲ್ಲಿ ಪ್ರಕಟಗೊಳ್ಳುತ್ತವೆ ಎಂದು ಶೃಂಗೇರಿ ಕ್ಷೇತ್ರದ ಶಾಸಕ ಡಿ.ಎನ್.ಜೀವರಾಜ್ ಹೇಳಿದರು.

ದರಕೊಪ್ಪ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಜೆಸಿಬಿಎಂ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ಏಳು ದಿನಗಳ ವಾರ್ಷಿಕ ವಿಶೇಷ ಶಿಬಿರದಲ್ಲಿ ಮಾತನಾಡಿ, ದೇಶದ ಬೌದ್ಧಿಕ ಮಟ್ಟವು ಉನ್ನತವಾಗಿದ್ದು, ನೈತಿಕ ಮೌಲ್ಯ-ಗುಣಮಟ್ಟದೆಡೆಗೆ ಗಮನ ಹರಿಸಬೇಕಿದೆ. ಹಿಂದೆ ಪ್ರತಿ ಮನೆಯಲ್ಲಿಯೂ ನೈತಿಕತೆಯ ಪಾಠ ನಡೆಯುತ್ತಿತ್ತು. ಆದರೆ ಇಂದು ಹಿರಿಯರೇ ಈ ಕಾರ್ಯದಲ್ಲಿ ಹಿಂದೆ ಬಿದ್ದಿದ್ದಾರೆ ಎಂದು ವಿಷಾದ ವ್ಯಕ್ತಪಡಿಸಿದರು. ಅಮೇರಿಕಾದಂತಹ ದೇಶಗಳಲ್ಲಿ ಭಾರತದ ಅತ್ಯುನ್ನತ ಪ್ರತಿಭೆಗಳನ್ನು ಕೂಡ ದ್ವಿತೀಯ ದರ್ಜೆಯಾಗಿ ನೋಡುವ ಪರಿಸ್ಥಿತಿಗಳಿದ್ದರೂ ಕೂಡ ನಮ್ಮ ಯುವ ಜನಾಂಗ ಅದಕ್ಕೆ ಅತೀತರಾಗಿ ಬೆಳೆಯುತ್ತಿರುವುದು ಶುಭಾ ಸೂಚಕ ಸಂಗತಿ.



ದರಕೊಪ್ಪ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಜೆಸಿಬಿಎಂ ಕಾಲೇಜಿನ ಎನ್‌ಎಸ್‌ಎಸ್ ವಾರ್ಷಿಕ ವಿಶೇಷ ಶಿಬಿರದಲ್ಲಿ ಶಾಸಕ ಡಿ.ಎನ್.ಜೀವರಾಜ್ ಮಾತನಾಡಿದರು.

> ಮಕ್ಕಳನ್ನು ಪೋಷಕರು ಬಹಳ ಪ್ರೀತಿಯಿಂದ ಬೆಳೆಸಿರುತ್ತಾರೆ. ಆದರೆ ಸಮಾಜದೊಂದಿಗೆ ಬೆರೆತು ಬದುಕುವ ಕಲೆಯನ್ನು ಎನ್‌ಎಸ್‌ಎಸ್ ಶಿಬಿರ ಕಲಿಸುತ್ತದೆ. ಶಿಬಿರಾರ್ಥಿಗಳು ಗ್ರಾಮಸ್ಥರೊಂದಿಗೆ ಉತ್ತಮ ಸಂಬಂಧ ಬೆಳೆಸಿಕೊಳ್ಳುವ ಮೂಲಕ ಎನ್‌ಎಸ್‌ಎಸ್ ಆಶಯವನ್ನು ಸಾಕಾರಗೊಳಿಸಬೇಕು.
>
> -ಡಿ.ಎನ್.ಜೀವರಾಜ್, ಶಾಸಕ

ಇಂದು ಭಾರತಕ್ಕಾಗಿ ಕೆಲಸ ಮಾಡುವ ಯುವಜನಾಂಗವನ್ನು ನಾವು ನಿರ್ಮಾಣ ಮಾಡಬೇಕಿದೆ. ಇಂದಿನ ಧಾರಾವಾಹಿಗಳು ನಮ್ಮ ಕೌಟುಂಬಿಕ, ಸಾಮಾಜಿಕ ಮೌಲ್ಯಗಳನ್ನು ಕೊಲ್ಲುತ್ತಿದ್ದು ವಿದ್ಯಾರ್ಥಿಗಳ ಚಿಂತನಾ ಲಹರಿಗಳನ್ನು ಬದಲಾಯಿಸಿರುವುದು ದುರಂತ. ವಿದ್ಯಾರ್ಥಿಗಳಲ್ಲಿ ನೈತಿಕ ಮೌಲ್ಯ ಮತ್ತು ಸಾಮಾಜಿಕ ಜವಾಬ್ದಾರಿ ಬೆಳೆಸಲು ಎನ್‌ಎಸ್‌ಎಸ್ ಶಿಬಿರಗಳು ಅತ್ಯಂತ ಪೂರಕ ವಾತಾವರಣವನ್ನು ಕಲ್ಪಿಸುತ್ತವೆ ಎಂದು ತಿಳಿಸಿದರು.

ಜಿಪಂ ಸದಸ್ಯ ಬಿ.ಶಿವಶಂಕರ್ ಮಾತನಾಡಿ, ಸೃಜನಶೀಲತೆಯು ಬದುಕಿನಲ್ಲಿ ನಮ್ಮನ್ನು ಗಟ್ಟಿಗೊಳಿಸುತ್ತದೆ ಎಂದು ತಿಳಿಸಿದರು. ಶಿಲ್ಪಾ ರವಿ, ಡಾ. ದೇವಿದಾಸ್ ಎಸ್.ನಾಯಕ್ ಮಾತನಾಡಿದರು. ಚೇತನ್ ಹೆಗ್ಡೆ, ಪ್ರವೀಣ್ ಬಿ.ಪಿ, ಟಿ.ಕೆ.ಪರಾಶರ, ಗೋಪಾಲ ಬೆಳ್ಳೆ ಕೆ.ಎನ್, ಶಿವರಾಜ್ ಎಂ.ಆರ್, ಪ್ರದೀಪ್ ಚೋಳರ ಮನೆ, ದಿನೇಶ್, ವಿಜಯೇಂದ್ರ ಇದ್ದರು.

Scanned by CamScanner

23-12-16

ಶೃಂಗೇರಿ:

ಶ್ರೀ ಜೆಸಿಬಿಎಂ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ವಾರ್ಷಿಕ ವಿಶೇಷ ಶಿಬಿರ: ಧ್ವಜಾರೋಹಣ-ಚೋಳರಮನೆ ಸಿ.ಕೆ.ವೆಂಕಟೇಶಗೌಡ.ಬೆಳಗ್ಗೆ 7. ಶಂ.ನ.ಶೇಷಗಿರಿಯವರಿಂದ ನುಡಿಚಿತ್ರ ಪ್ರದರ್ಶನ, ಲಯನ್ಸ್ ಕ್ಲಬ್ ಮತ್ತು ಪ್ರಶಮನಿ ಆಸ್ಪತ್ರೆ ಕೊಪ್ಪ ಜಂಟಿ ಆಶ್ರಯದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ. ಭಾಗವಹಿಸುವ ತಜ್ಞರು-ಡಾ.ನೀಲಕಂಠ, ಡಾ.ಉದಯಶಂಕರ್, ಡಾ.ಚನ್ನಬಸಪ್ಪ, ಅಧ್ಯಕ್ಷತೆ-ಲಯನ್ಸ್ ಕ್ಲಬ್ ಅಧ್ಯಕ್ಷ ಡಾ. ಅಣ್ಣಾದೊರೆ. ಸಮಯ-ಬೆಳಗ್ಗೆ 10. ವ್ಯಂಗ್ಯಚಿತ್ರ ಕಲೆ-ಒಂದು ಕಾರ್ಯಗಾರ. ಸಂಪನ್ಮೂಲ ವ್ಯಕ್ತಿ ಅರಳಸುರಳಿ ನಟರಾಜ್, ಸತ್ಯನಾರಾಯಣ, ಮುಖ್ಯ ಶಿಕ್ಷಕ ಮಸಿಗೆ. ಅಧ್ಯಕ್ಷತೆ-ತಿಮ್ಮಪ್ಪಹೆಗ್ಡೆ. ಸಮಯ-ಮಧ್ಯಾಹ್ನ 2.30.

ಶೃಂಗೇರಿ: ಶ್ರೀ ಜೆಸಿಬಿಎಂ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ವಾರ್ಷಿಕ ವಿಶೇಷ ಶಿಬಿರ: ಧ್ವಜಾರೋಹಣ-ಧರೆಕೊಪ್ಪದ ರಾಮಮೇಸ್ತ್ರಿ. ಬೆಳಗ್ಗೆ 7.

ಸಮಾರೋಪ ಭಾಷಣ-ಬೆಂಗಳೂರಿನ ಯುವ ಸಬಲೀಕರಣ ಇಲಾಖೆಯ ಡಾ.ಗಣನಾಥಶೆಟ್ಟಿ ಎಕ್ಕಾರ್. ಅತಿಥಿಗಳು-ಡಾ. ಕುಂದನ್ ಬಸವರಾಜ್, ಶಿಲ್ಪಾರವಿ, ಚಂದ್ರಮತಿ, ಬಿ.ವಿಪ್ರವೀಣ್, ರಾಮಕೃಷ್ಣ ಅಂಬ್ಲೂರು. ಬಹುಮಾನ ವಿತರಣೆ-ಋಷ್ಯಶೃಂಗ ಹೆಗ್ಡೆ. ಅಧ್ಯಕ್ಷತೆ-ಕಾಲೇಜಿನ ಪ್ರಾಚಾರ್ಯ ಡಾ.ದೇವಿದಾಸನಾಯಕ್. ಸ್ಥಳ-ಸ.ಹಿ.ಪ್ರಾ.ಶಾಲೆ, ಧರೆಕೊಪ್ಪ ಸಮಯ-ಬೆಳಗ್ಗೆ 11.

Media Company Limited, by R. J. F
Scanned by CamScanner

vishwavani.news

22.12.2016
ಗುರುವಾರ



ಚಿತ್ರದುರ್ಗದಲ್ಲಿ ನಡೆದ ರಾಜ್ಯಮಟ್ಟದ ಟೇಕ್ವಾಂಡೋ ಸ್ಪರ್ಧೆಯಲ್ಲಿ ಶೃಂಗೇರಿಯ ಜೆಸಿಬಿಎಮ್ ಕಾಲೇಜಿನ ಚರಣ್.ವಿ ಪ್ರಥಮ ಸ್ಥಾನಗಳಿಸಿ ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿದ್ದು, ಕ್ರೀಡಾಪಟುವನ್ನು ಕಾಲೇಜಿನ ಆಡಳಿತ ಮಂಡಳಿ ಅಭಿನಂದಿಸಿದೆ.

Scanned by CamScanner

ಪ್ರಜಾವಾಣಿ ಗುರುವಾರ • ಡಿಸೆಂಬರ್ 22, 2016

ಧರೆಕೊಪ್ಪದಲ್ಲಿ ಎನ್ನೆಸ್ಸೆಸ್ ಶಿಬಿರ ಆರಂಭ

ಸ್ವಯಾವಾಣಿ ವಾರ್ತೆ

ಶೃಂಗೇರಿ: ಇಲ್ಲಿನ ಜೆ.ಸಿ.ಬಿ.ಎಂ. ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ವತಿಯಿಂದ ಶೃಂಗೇರಿ ತಾಲ್ಲೂಕಿನ ಧರೆಕೊಪ್ಪ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 7 ದಿನಗಳ ವಾರ್ಷಿಕ ವಿಶೇಷ ಶಿಬಿರ ಆರಂಭವಾಯಿತು.

ಬುಧವಾರ ಸಂಜೆ 4.30ಕ್ಕೆ ಶಿಬಿರ ಉದ್ಘಾಟನೆಯಾಯಿತು. ಸಂಜೆ 6.30 ರಿಂದ ಶಿಬಿರಾರ್ಥಿಗಳಿಂದ 'ಸುಗಮ ಸಂಗೀತ'ದಲ್ಲಿ ಪೂರ್ಣಚಂದ್ರ ತೇಜಸ್ವಿ ಅವರ 'ಪರಿಸರದ ಕಥೆಗಳು' ಕೃತಿಯ ನಾಟಕ ಹಾಗೂ ನೃತ್ಯ ರೂಪಕ. ಸರ್ಕಾರಿ ಪ್ರೌಢಶಾಲೆ-ಹೊಳೆಕೊಪ್ಪ ಇಲ್ಲಿನ ಸಹ್ಯಾದ್ರಿ ಇಕೋ ಕ್ಲಬ್ ವಿದ್ಯಾರ್ಥಿಗಳಿಂದ ಪರಿಸರ ಜಾಗೃತಿ ಎಂಬ ಕಾರ್ಯಕ್ರಮ ನಡೆದವು.

ಗುರುವಾರ ಬೆಳಿಗ್ಗೆ 10 ಗಂಟೆಗೆ ನುಡಿಚಿತ್ರ ಕಲಾವಿದರಾದ ಶಂ.ನ. ಶೇಷಗಿರಿಯವರಿಂದ ನುಡಿಚಿತ್ರ ಪ್ರದರ್ಶನ, ಕೊಪ್ಪ ಪ್ರಶಮನಿ ಆಸ್ಪತ್ರೆಯವರ ಸಹಕಾರದೊಂದಿಗೆ 'ಉಚಿತ ಆರೋಗ್ಯ ತಪಾಸಣಾ ಶಿಬಿರ'ವನ್ನು ಆಯೋಜಿಸಲಾಗಿದೆ. ಮಧ್ಯಾಹ್ನ 2.30 ರಿಂದ 'ವ್ಯಂಗ್ಯಚಿತ್ರ ಕಲೆ - ಒಂದು ಕಾರ್ಯಾಗಾರ' ಕುರಿತು ಉಪನ್ಯಾಸ ನಡೆಯಲಿದ್ದು, ಸಂಜೆ 5 ಗಂಟೆಗೆ ಶೃಂಗೇರಿ ರೋಟರಿ ಕ್ಲಬ್ ಸಹಕಾರದಲ್ಲಿ 'ಸಮುದಾಯ ಮತ್ತು ಆರೋಗ್ಯ' ಎಂಬ ಉಪನ್ಯಾಸವನ್ನು 6.30ರಿಂದ ಶಿಬಿರಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿದೆ.

23ರ ಶುಕ್ರವಾರ ಮಧ್ಯಾಹ್ನ 2.30ಕ್ಕೆ 'ಜೇನು ಕೃಷಿ - ಮಲೆನಾಡಿಗೆ ಒಂದು ವರದಾನ' 'ಚಾರಣ - ಒಂದು ರೋಚಕ ಅನುಭವ' ಎಂಬ ಉಪನ್ಯಾಸವನ್ನು ಆಯೋಜಿಸಲಾಗಿದೆ. ಸಂಜೆ 6.30 ರಿಂದ ಚಿಕ್ಕಮಗಳೂರಿನ ಆಶಾಕಿರಣ ಅಂಧ ಮಕ್ಕಳ ವಸತಿ ಶಾಲೆಯ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿದೆ.

24ರಂದು ಮಧ್ಯಾಹ್ನ 2.30ರಿಂದ 'ಕಾನೂನು ಅರಿವು ಮತ್ತು ನೆರವು' ಎಂಬ ಕಾರ್ಯಕ್ರಮವನ್ನು ಸಂಜೆ 4.30ಕ್ಕೆ 'ಜೀವ ವೈವಿಧ್ಯತೆ - ಒಂದು ವಿಸ್ಮಯ' ಎಂಬ ಉಪನ್ಯಾಸವನ್ನು ಆಯೋಜಿಸಲಾಗಿದೆ. ಸಂಜೆ 6.30ರಿಂದ ಶಿಬಿರಾರ್ಥಿಗಳಿಂದ ಹಾಗೂ ಧರೆಕೊಪ್ಪ ಗ್ರಾಮಸ್ಥರಿಂದ ಜನಪದ ಕಲೆ 'ಅಂಟಿಗೆ-ಪಿಂಟಿಗೆ' ಎಂಬ ಕಾರ್ಯಕ್ರಮ ಆಯೋಜಿಸಿದ್ದು, 25ರಂದು 'ಮಾದಕ ವಸ್ತುಗಳು - ಯುವಜನತೆ- ದುಷ್ಪರಿಣಾಮ' ಕುರಿತು ಎಂಬ ಉಪನ್ಯಾಸ, ಸಂಜೆ 4.30 ಕ್ಕೆ 'ಆಕಾಶ ವಿಸ್ಮಯ' ಎಂಬ ಉಪನ್ಯಾಸ, ಸಂಜೆ 6ಕ್ಕೆ ವಿದ್ಯಾರ್ಥಿಗಳಿಂದ ಮಾರ್ಷಲ್ ಆರ್ಟ್ ಅಣುಕು ಪ್ರದರ್ಶನ ಮತ್ತು ಧರೆಕೊಪ್ಪ ಸ.ಹಿ.ಪ್ರಾ.ಶಾಲೆ ಹಾಗೂ ಅಂಗನವಾಡಿ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ. 26ರಂದು ಬೆಳಿಗ್ಗೆ 10ರಿಂದ 'ಸ್ವ-ಉದ್ಯೋಗದ ಮಾರ್ಗೋಪಾಯಗಳು-ಗ್ರಾಮಸ್ಥರಿಗೆ' ಎಂಬ ಉಪನ್ಯಾಸ, ಮಧ್ಯಾಹ್ನ 2ಗಂಟೆಯಿಂದ 'ಶಿಬಿರಾರ್ಥಿಗಳ ಹಾಗೂ ಗ್ರಾಮಸ್ಥರ ನಡುವಿನ ಸೌಹಾರ್ದ ಕ್ರೀಡಾ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ಸಂಜೆ 5.30ರಿಂದ ಹೊನ್ನವಳ್ಳಿಯ 'ವೆಂಕಟೇಶ್ವರ ಯಕ್ಷಗಾನ ಕಲಾಸಂಘ'ದಿಂದ ಯಕ್ಷಗಾನ, ರಾತ್ರಿ 9.30ಕ್ಕೆ ದೀಪೋತ್ಸವ ಹಮ್ಮಿಕೊಳ್ಳಲಾಗಿದೆ. 27ರಂದು ಬೆಳಿಗ್ಗೆ 11ಕ್ಕೆ ಸಮಾರೋಪ ಸಮಾರಂಭ ನಡೆಯಲಿದ್ದು, ಶಿಬಿರ ದಲ್ಲಿ ಪ್ರತಿದಿನ ಶಾಲಾ ಮಕ್ಕಳಿಗೆ ಮತ್ತು ಗ್ರಾಮಸ್ಥರಿಗೆ ಕ್ರೀಡೆಗಳನ್ನು ಮತ್ತು ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ಶಿಬಿರವು ಪ್ರತಿದಿನ ಮುಂಜಾನೆ 5 ಗಂಟೆಗೆ ಪ್ರಾರಂಭವಾಗಿ ರಾತ್ರಿ 10ಕ್ಕೆ ಮುಕ್ತಾಯವಾಗಲಿದ್ದು, ಪ್ರತಿದಿನ ಮುಂಜಾನೆ ಧ್ವಜಾರೋಹಣ ಮತ್ತು ಶ್ರಮದಾನವನ್ನು ಆಯೋಜಿಸಲಾಗಿದೆ ಎಂದು ಪ್ರಾಚಾರ್ಯರಾದ ಡಾ.ದೇವಿದಾಸ್ ಎಸ್.ನಾಯಕ್ ತಿಳಿಸಿದ್ದಾರೆ.

Scanned by CamScanner

ವಿಜಯ ಕರ್ನಾಟಕ VK

ಗುರುವಾರ, 22 ಡಿಸೆಂಬರ್ 20



ಶೃಂಗೇರಿ ಶ್ರೀ ಜೆಸಿಬಿಎಂ ಕಾಲೇಜಿನ ವಿ.ಚರಣ್ ಚಿತ್ರದುರ್ಗದಲ್ಲಿ ನಡೆದ ರಾಜ್ಯಮಟ್ಟದ ಟೇಕ್ವಾಂಡೋ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನಗಳಿಸಿ ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಇವರನ್ನು ಕಾಲೇಜಿನ ಪ್ರಾಚಾರ್ಯ ಡಾ.ದೇವಿದಾಸ್ ಎನ್.ನಾಯಕ್ ಮತ್ತು ಸಿಬ್ಬಂದಿ ಅಭಿನಂದಿಸಿದ್ದಾರೆ.

Scanned by CamScanner

ಯುವ ಜನಾಂಗ ವಿದೇಶಿ ಉದ್ಯೋಗದತ್ತ ಆತುರ

■ ವಿಕ ಸುದ್ದಿಲೋಕ ಶೃಂಗೇರಿ

ವಿದೇಶಗಳಲ್ಲಿ ಭಾರತದ ಅತ್ಯುನ್ನತ ಪ್ರತಿಭೆಗಳನ್ನು ಕೂಡಾ ದ್ವಿತೀಯ ದರ್ಜೆಯಾಗಿ ನೋಡುವ ಪರಿಸ್ಥಿತಿಗಳಿದ್ದರೂ ನಮ್ಮ ಯುವಜನಾಂಗ ವಿದೇಶಿ ಉದ್ಯೋಗದತ್ತ ಆತುರ ಪಡುತ್ತಿರುವುದು ವಿಷಾದನೀಯ ಎಂದು ಶಾಸಕ ಡಿ.ಎನ್. ಜೀವರಾಜ್ ಹೇಳಿದರು.

ಅವರು ಬುಧವಾರ ಧರೆಕೊಪ್ಪ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶ್ರೀಜೆಸಿಬಿಎಂ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ಏಳು ದಿನಗಳ ವಾರ್ಷಿಕ ವಿಶೇಷ ಶಿಬಿರ ಉದ್ಘಾಟಿಸಿ ಮಾತನಾಡಿದರು.

ಶಿಬಿರಾರ್ಥಿಗಳು ಗ್ರಾಮಸ್ಥರೊಂದಿಗೆ ಉತ್ತಮ ಸಂಬಂಧ ಬೆಳೆಸಿಕೊಳ್ಳುವ ಮೂಲಕ ಎನ್‌ಎಸ್‌ಎಸ್‌ನ ಆಶಯವನ್ನು ಸಾಕಾರಗೊಳಿಸಬೇಕು. ಈ ದೇಶದ ಬೌದ್ಧಿಕ ಮಟ್ಟವು ಉನ್ನತವಾಗಿದ್ದು, ನೈತಿಕ ಮೌಲ್ಯ-ಗುಣಮಟ್ಟದೆಡೆಗೆ ಗಮನ ಹರಿಸಬೇಕಿದೆ ಎಂದರು.

ಜಿ.ಪಂ.ಸದಸ್ಯ ಬಿ.ಶಿವಶಂಕರ್ ಮಾತನಾಡಿ, ಸೃಜನಶೀಲತೆಯು ಬದುಕಿನಲ್ಲಿ ನಮ್ಮನ್ನು ಗಟ್ಟಿಗೊಳಿಸುತ್ತದೆ. ವಾಸ್ತವ ಜೀವನವನ್ನು ಶಿಬಿರ ಕಲಿಸಿಕೊಡುತ್ತದೆ ಎಂದರು. ಜಿ.ಪಂ. ಸದಸ್ಯೆ ಶಿಲ್ಪಾರವಿ ಮಾತನಾಡಿದರು.



ಶೃಂಗೇರಿ ತಾಲೂಕು ಧರೆಕೊಪ್ಪ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಶ್ರೀಜೆಸಿಬಿಎಂ ಕಾಲೇಜಿನ ಎನ್ನೆಸ್ಸೆಸ್ ಶಿಬಿರವನ್ನು ಶಾಸಕ ಡಿ.ಎನ್.ಜೀವರಾಜ್ ಉದ್ಘಾಟಿಸಿ ಮಾತನಾಡಿದರು.

ಡಾ. ದೇವಿದಾಸ್ ಎಸ್. ನಾಯಕ್ ಅಧ್ಯಕ್ಷತೆ ವಹಿಸಿದ್ದರು. ಚೇತನ್ ಹೆಗ್ಡೆ, ಬಿ.ವಿ.ಪ್ರವೀಣ್, ಟಿ.ಕೆ.ಪರಾಶರ, ಕೆ.ಎನ್.ಗೋಪಾಲ ಹೆಗ್ಡೆ, ಎಂ.ಆರ್. ಶಿವರಾಜ್, ಪ್ರದೀಪ್ ಚೋಳರ ಮನೆ, ಎಚ್.ಎಚ್.ದಿನೇಶ್, ವಿಜಯೇಂದ್ರ, ನಟೇಶ್, ರಾಘವೇಂದ್ರ ಮತ್ತಿತರರು ಹಾಜರಿದ್ದರು.

ಶಾಶ್ವತಿ ಪ್ರಾರ್ಥಿಸಿ, ಎನ್‌ಎಸ್‌ಎಸ್ ಅಧಿಕಾರಿ ಎನ್.ಎಚ್. ಲಕ್ಷ್ಮೀನಾರಾಯಣ ಸ್ವಾಗತಿಸಿ, ಎ.ಜಿ. ಪ್ರಶಾಂತ್ ವಂದಿಸಿದರು.

Scanned by CamScanner

ಕನ್ನಡಪ್ರಭ
ಬುಧವಾರ 21.12.2016

ಇಂದಿನಿಂದ ಎನ್ನೆಸ್ಸೆಸ್ ವಾರ್ಷಿಕ ವಿಶೇಷ ಶಿಬಿರ

• **ಕನ್ನಡಪ್ರಭ ವಾರ್ತೆ** ಶೃಂಗೇರಿ

ತಾಲೂಕಿನ ಧರೆಕೊಪ್ಪ ಪಂಚಾಯಿತಿ ಧರೆಕೊಪ್ಪದಲ್ಲಿ ಜೆ.ಸಿ.ಬಿ.ಎಂ. ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ವತಿಯಿಂದ 7 ದಿನಗಳ ವಾರ್ಷಿಕ ವಿಶೇಷ ಶಿಬಿರ ಏರ್ಪಡಿಸಲಾಗಿದೆ.

ಡಿ.21 ರಂದು ಸಂಜೆ 4.30 ಗಂಟೆಗೆ ಸಮಾರಂಭದ ಉದ್ಘಾಟನೆ ನಡೆಯಲಿದ್ದು, 6.30 ರಿಂದ ಶಿಬಿರಾರ್ಥಿಗಳಿಂದ ಸುಗಮ ಸಂಗೀತ, ಪೂರ್ಣಚಂದ್ರ ತೇಜಸ್ವಿಯವರ ಪರಿಸರದ ಕಥೆಗಳು ಕೃತಿಯ ನಾಟಕ ಹಾಗೂ ನೃತ್ಯ ರೂಪಕ ಪ್ರದರ್ಶನವಿದೆ. ಸರ್ಕಾರಿ ಪ್ರೌಢಶಾಲೆ-ಹೊಳೆಕೊಪ್ಪ ಇಲ್ಲಿನ ಸಹ್ಯಾದ್ರಿ ಇಕೋ ಕ್ಲಬ್ ವಿದ್ಯಾರ್ಥಿಗಳಿಂದ 'ಪರಿಸರಜಾಗೃತಿ' ಎಂಬ ಕಾರ್ಯಕ್ರಮ ನಡೆಯಲಿದೆ.

- 7 ದಿನಗಳ ಶಿಬಿರದಲ್ಲಿ ವಿವಿಧ ವಿಷಯಗಳ ಬಗ್ಗೆ ಗಣ್ಯರಿಂದ ಉಪನ್ಯಾಸ
- ಶಿಬಿರಾರ್ಥಿಗಳು, ಗ್ರಾಮಸ್ಥರಿಗೆ ಕ್ರೀಡೆ-ಸಾಂಸ್ಕೃತಿಕ ಸ್ಪರ್ಧೆ-ಕಾರ್ಯಕ್ರಮ

Scanned by CamScanner

ಬುಧವಾರ, 21 ಡಿಸೆಂಬರ್ 2016, ಶಿವಮೊಗ್ಗ

ವಿಜಯ ಕರ್ನಾಟಕ

21ರಿಂದ ವಾರ್ಷಿಕ ವಿಶೇಷ ಶಿಬಿರ

■ ವಿಕ ಸುದ್ದಿಲೋಕ ಶೃಂಗೇರಿ

ಶ್ರೀ ಜೆಸಿಬಿಎಂ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ವತಿಯಿಂದ ತಾಲೂಕಿನ ಧರೆಕೊಪ್ಪ ಸ.ಹಿ.ಪ್ರಾ.ಶಾಲೆಯಲ್ಲಿ ಡಿ.21 ರಿಂದ ಏಳು ದಿನಗಳ ವಾರ್ಷಿಕ ವಿಶೇಷ ಶಿಬಿರವನ್ನು ಆಯೋಜಿಸಲಾಗಿದೆ.

ಡಿ.21ರಂದು ಮಧ್ಯಾಹ್ನ 4.30ಕ್ಕೆ ಶಾಸಕ ಡಿ. ಎನ್.ಜೀವರಾಜ್ ಶಿಬಿರವನ್ನು ಉದ್ಘಾಟಿಸಲಿದ್ದು, ಕಾಲೇಜಿನ ಪ್ರಾಚಾರ್ಯ ಡಾ.ದೇವಿದಾಸ್ ನಾಯಕ್ ಅಧ್ಯಕ್ಷತೆ ವಹಿಸಲಿದ್ದಾರೆ. ಸಂಜೆ 6.30 ರಿಂದ ಶಿಬಿರಾರ್ಥಿಗಳಿಂದ ಸುಗಮ ಸಂಗೀತ, ಪೂರ್ಣಚಂದ್ರ ತೇಜಸ್ವಿಯವರ ಪರಿಸರದ ಕಥೆಗಳು, ಕೃತಿಯ ನಾಟಕ ಹಾಗೂ ನೃತ್ಯ ರೂಪಕ. ಹೊಳೆಕೊಪ್ಪ ಸರಕಾರಿ ಪ್ರೌಢಶಾಲೆಯ ಇಲ್ಲಿನ ಸಹ್ಯಾದ್ರಿ ಇಕೋ ಕ್ಲಬ್ ವಿದ್ಯಾರ್ಥಿಗಳಿಂದ ಪರಿಸರ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

22 ರಂದು ಬೆಳಗ್ಗೆ 10 ಗಂಟೆಗೆ ಶಂ.ನ. ಶೇಷಗಿರಿಯವರಿಂದ ನುಡಿಚಿತ್ರ ಪ್ರದರ್ಶನ, ಕೊಪ್ಪ ಪ್ರಶಮನಿ ಆಸ್ಪತ್ರೆಯವರ ಸಹಕಾರದೊಂದಿಗೆ ಆರೋಗ್ಯ ಉಚಿತ ತಪಾಸಣೆ ಶಿಬಿರ, ಮಧ್ಯಾಹ್ನ 2.30 ರಿಂದ ವ್ಯಂಗ್ಯಚಿತ್ರ ಕಲೆ - ಒಂದು ಕಾರ್ಯಾಗಾರ, ಸಂಜೆ 5 ಗಂಟೆಗೆ ರೋಟರಿ ಕ್ಲಬ್ ಸಹಕಾರದಲ್ಲಿ ಸಮುದಾಯ ಮತ್ತು ಆರೋಗ್ಯ ಎಂಬ ಉಪನ್ಯಾಸ ನಡೆಯಲಿದೆ. 6.30ರಿಂದ ಶಿಬಿರಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ.

23ರಂದು ಮಧ್ಯಾಹ್ನ 2.30ಕ್ಕೆ ಜೇನು ಕೃಷಿ ಮಲೆನಾಡಿಗೆ ಒಂದು ವರದಾನ, ಚಾರಣ ಒಂದು ರೋಚಕ ಅನುಭವ ಉಪನ್ಯಾಸ, ಸಂಜೆ 6.30 ರಿಂದ ಚಿಕ್ಕಮಗಳೂರಿನ ಆಶಾಕಿರಣ ಅಂಧ ಮಕ್ಕಳ ವಸತಿ ಶಾಲೆಯ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿದೆ.

ಡಿ. 24 ರಂದು ಮಧ್ಯಾಹ್ನ 2.30 ರಿಂದ ಕಾನೂನು ಅರಿವು ಮತ್ತು ನೆರವು, ಸಂಜೆ 4.30ಕ್ಕೆ ಜೀವ ವೈವಿಧ್ಯತೆ - ಒಂದು ವಿಸ್ಮಯ ಕುರಿತು ಉಪನ್ಯಾಸ, ಸಂಜೆ 6.30 ರಿಂದ ಶಿಬಿರಾರ್ಥಿಗಳಿಂದ ಹಾಗೂ ಧರೆಕೊಪ್ಪ ಗ್ರಾಮಸ್ಥರಿಂದ ಜನಪದ ಕಲೆ ಅಂಟಿಗೆ-ಪಿಂಟಿಗೆ ಕಾರ್ಯಕ್ರಮ ನಡೆಯಲಿದೆ.

ಡಿ. 25ರಂದು ಮಾದಕ ವಸ್ತುಗಳು - ಯುವ ಜನತೆ- ದುಷ್ಪರಿಣಾಮ ಎಂಬ ಉಪನ್ಯಾಸ, ಸಂಜೆ 4.30 ಕ್ಕೆ ಆಕಾಶ ವಿಸ್ಮಯ ಎಂಬ ಉಪನ್ಯಾಸ, ಸಂಜೆ 6ಕ್ಕೆ ವಿದ್ಯಾರ್ಥಿಗಳಿಂದ ಮಾರ್ಷಲ್ ಆರ್ಟ್ ಅಣುಕು ಪ್ರದರ್ಶನ ಮತ್ತು ದರೆಕೊಪ್ಪ ಸ.ಹಿ.ಪ್ರಾ. ಶಾಲೆ ಹಾಗೂ ಅಂಗನವಾಡಿ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿದೆ.

ಡಿ.26ರ ಬೆಳಗ್ಗೆ 10ರಿಂದ ಸ್ವ-ಉದ್ಯೋಗದ ಮಾರ್ಗೋಪಾಯಗಳು- ಗ್ರಾಮಸ್ಥರಿಗೆ ಎಂಬ ಉಪನ್ಯಾಸ, ಮಧ್ಯಾಹ್ನ 2 ಗಂಟೆಯಿಂದ ಶಿಬಿರಾರ್ಥಿಗಳ ಹಾಗೂ ಗ್ರಾಮಸ್ಥರ ನಡುವಿನ ಸೌಹಾರ್ದ ಕ್ರೀಡಾ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ಸಂಜೆ 5.30ರಿಂದ ಹೊನ್ನವಳ್ಳಿಯ ಶ್ರೀ ವೆಂಕಟೇಶ್ವರ ಯಕ್ಷಗಾನ ಕಲಾಸಂಘದಿಂದ ಯಕ್ಷಗಾನ, ರಾತ್ರಿ 9.30ಕ್ಕೆ ದೀಪೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಡಿ.27 ರಂದು ಬೆಳಗ್ಗೆ 11 ರಿಂದ ಸಮಾರೋಪ ಸಮಾರಂಭ ಆಯೋಜಿಸಲಾಗಿದೆ. ಶಿಬಿರದಲ್ಲಿ ಪ್ರತಿದಿನ ಶಾಲಾ ಮಕ್ಕಳಿಗೆ ಮತ್ತು ಗ್ರಾಮಸ್ಥರಿಗೆ ಕ್ರೀಡೆಗಳನ್ನು ಮತ್ತು ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ.

ಶಿಬಿರವು ಪ್ರತಿದಿನ ಮುಂಜಾನೆ 5 ಗಂಟೆಗೆ ಪ್ರಾರಂಭವಾಗಿ ರಾತ್ರಿ 10 ಗಂಟೆಗೆ ಮುಕ್ತಾಯವಾಗಲಿದ್ದು, ಮುಂಜಾನೆ ಧ್ವಜಾರೋಹಣ ಮತ್ತು ಶ್ರಮದಾನವನ್ನು ಆಯೋಜಿಸಲಾಗಿದೆ ಎಂದು ಪ್ರಾಚಾರ್ಯ ಡಾ. ದೇವಿದಾಸ್ ಎಸ್. ನಾಯಕ್ ತಿಳಿಸಿದ್ದಾರೆ.

Scanned by CamScanner

ಕನ್ನಡಪ್ರಭ
ಮಂಗಳವಾರ 13.12.2016



ಶೃಂಗೇರಿ ಪಟ್ಟಣದ ಜೆಸಿಬಿಎಂ ಕಾಲೇಜಿನ ಆವರಣದಲ್ಲಿ ಯುವ ರೆಡ್ ಕ್ರಾಸ್ ಸಂಘಟನೆ ಆಶ್ರಯದಲ್ಲಿ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಕರಾಟೆ ತರಬೇತಿ ಶಿಬಿರ ನಡೆಯಿತು. ವಿವಿಧ ಭಂಗಿಯಲ್ಲಿ ಶಿಬಿರಾರ್ಥಿಗಳು ಇದ್ದಾರೆ.

Scanned by CamScanner

ಸೋಮವಾರ, 12 ಡಿಸೆಂಬರ್ 2016, ಶಿವಮೊಗ್ಗ

ವಿಜಯ ಕರ್ನಾಟಕ VK

ಶೃಂಗೇರಿ: ಯೋಗ ತರಬೇತಿ ಕಾರ್ಯಕ್ರಮ

ಶೃಂಗೇರಿ: ಸೋಮಾರಿತನವೇ ಮನುಷ್ಯರಿಗೆ ದೊಡ್ಡ ಶತ್ರು. ಆಲಸ್ಯವನ್ನು ಹೋಗಲಾಡಿಸಲು ದೇಹ ಮನಸ್ಸನ್ನು ಸುಂದರವಾಗಿಡಲು ಯೋಗ ಸಹಕಾರಿ ಎಂದು ಪತಂಜಲಿ ಯೋಗ ಶಿಕ್ಷಣ ಸಮಿತಿ ಅಧ್ಯಕ್ಷ ಡಾ.ಎಚ್.ಸಿ.ವೀರಪ್ಪಗೌಡ ಹೇಳಿದರು.

ಅವರು ಶನಿವಾರ ಜೆಸಿಬಿಎಂ ಕಾಲೇಜಿನಲ್ಲಿ ಯೋಗ ತರಬೇತಿ ಕಾರ್ಯಕ್ರಮದ ಸಮಾರೋಪ ಕಾರ್ಯಕ್ರಮದಲ್ಲಿ ಮಾತನಾಡಿದರು.

ಯೋಗ ಮತ್ತು ಧ್ಯಾನ ನಮ್ಮ ಮನಸ್ಸನ್ನು ಪರಿಶುದ್ಧಗೊಳಿಸುತ್ತದೆ ಯೋಗ ನಮ್ಮ ಜೀವನದ ಬದ್ಧತೆಯಾಗ ಬೇಕು ಎಂದರು.

ಪತಂಜಲಿ ಯೋಗ ಶಿಕ್ಷಣ ಸಮಿತಿ ಸಂಚಾಲಕ ಹಾಗೂ ಯೋಗ ತರಬೇತಿದಾರ ನಾಗರಾಜ್ ಮಾತನಾಡಿ, ಸಂಸ್ಕಾರ, ಸೇವೆ, ಶಿಕ್ಷಣ ಈ ಮೂರು ಮುಖ್ಯ ಧ್ಯೇಯಗಳನ್ನು ಪತಂಜಲಿ ಯೋಗ ಶಿಕ್ಷಣ ಸಮಿತಿ ಹೊಂದಿದೆ. ಈ ನಿಟ್ಟಿನಲ್ಲಿ ಅದು ಕಾರ್ಯಪ್ರವೃತ್ತವಾಗಿದೆ. ಯೋಗ ಅಭ್ಯಾಸ ನಿರಂತರವಾಗಿದ್ದರೆ ಮನಸ್ಸು ಶುದ್ಧಗೊಳ್ಳುವುದರ ಜತೆಗೆ ಏಕಾಗ್ರತೆ ಲಭಿಸುತ್ತದೆ. ಸದೃಢ ದೇಹ ಮತ್ತು ಮನಸ್ಸು ವೃದ್ಧಿಸುತ್ತದೆ. ಬುದ್ಧಿ ಮತ್ತು ಮನಸ್ಸುಗಳ ನಡುವಿನ ಸಮನ್ವಯತೆ ಸಾಧಿಸಲು ಯೋಗ ಅತ್ಯಗತ್ಯವಾಗಿದೆ ಎಂದರು.

ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಚಾರ್ಯ ಡಾ.ದೇವಿದಾಸ್ ನಾಯಕ್ ವಹಿಸಿದ್ದರು. ಎ.ಜಿ.ಪ್ರಶಾಂತ್ ನಿರೂಪಿಸಿದರು. ಸಂತೋಷ್, ಲೋಕೇಶ್, ಶಿಲ್ಪ, ಸಂದೀಪ್ ಹಾಜರಿದ್ದರು.



ಶೃಂಗೇರಿ ಜೆಸಿಬಿಎಂ ಕಾಲೇಜಿನ ವಿದ್ಯಾರ್ಥಿಗಳು ಯೋಗ ಪ್ರದರ್ಶನ ನೀಡಿದರು.

Scanned by CamScanner

ವಿಜಯ ಕರ್ನಾಟಕ VK

6-12-

ಶುಚಿತ್ವದಿಂದ ಸ್ವಚ್ಛ ರಾಷ್ಟ್ರ ನಿರ್ಮಾಣ ಸಾಧ್ಯ

■ ವಿಕ ಸುದ್ದಿಲೋಕ ಶೃಂಗೇರಿ

ಸ್ವಚ್ಛರಾಷ್ಟ್ರ ನಿರ್ಮಾಣದಲ್ಲಿ ಪ್ರತಿ ಮನೆಯು ಶೌಚಾಲಯ ಹೊಂದಬೇಕು ಎಂದು ಜೆಸಿಬಿಎಂ ಕಾಲೇಜಿನ ಪ್ರಾಚಾರ್ಯ ಡಾ.ದೇವಿದಾಸ ನಾಯಕ್ ಹೇಳಿದರು.

ಕನ್ನಡ ಭವನದಲ್ಲಿ ಇತ್ತೀಚೆಗೆ ಏರ್ಪಡಿಸಿದ್ದ ತಾಲೂಕು ಮಟ್ಟದ ನೆರೆ ಹೊರೆ ಯುವ ಸಂಸತ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಆರೋಗ್ಯ ರಕ್ಷಣೆಗಾಗಿ ಶುಚಿತ್ವ ಮುಖ್ಯವಾಗಿದ್ದು, ಬಯಲು ಬಹಿರ್ದೆಸೆಯಿಂದ ಅನೇಕ ಸಾಂಕ್ರಾಮಿಕ ರೋಗಗಳು ಹರಡುತ್ತವೆ. ಅಲ್ಲದೇ ಬಹಿರ್ದೆಸೆಗೆ ತೆರಳಿದ ಸಂದರ್ಭದಲ್ಲಿ ಹಾವು ಕಚ್ಚಿ ಮೃತಪಡುವ ಪ್ರಕರಣ, ಮಹಿಳೆ ಯರ ಮೇಲೆ ದೌರ್ಜನ್ಯ ಪ್ರಕರಣಗಳು ನಡೆದಿದೆ.ಸರಕಾರವು ಬಡವರಿಗೆ ಶೌಚಾಲಯ ನಿರ್ಮಾಣಕ್ಕೆ ಸಹಾಯಧನ ನೀಡುತ್ತಿದೆ ಎಂದರು.

ಸಿಡಿಪಿಒ ಟಿ.ಎಲ್.ಉಮೇಶ್ ಮಾತನಾಡಿ, ಯುವಜನ ಸಬಲೀಕರಣ



ಶೃಂಗೇರಿ ಕನ್ನಡಭವನದಲ್ಲಿ ತಾಲೂಕು ಮಟ್ಟದ ನೆರೆ ಹೊರೆ ಯುವ ಸಂಸತ್ ಕಾರ್ಯಕ್ರಮ ನಡೆಯಿತು.

ಗ್ರಾಮೀಣ ವಿಕಾಸ ಯೋಜನೆಯಡಿ ಸರಕಾರ ಹಲವಾರು ಕಾರ್ಯಕ್ರಮ ರೂಪಿಸಿದೆ. ಸ್ವಯಂ ಉದ್ಯೋಗ ಪ್ರೇರಣೆ, ಕೌಶಲ್ಯಭಿವೃದ್ಧಿ ಮತ್ತಿತರ ಯೋಜ ನೆಗಳನ್ನು ಯುವ ಜನಾಂಗ ಬಳಸಿಕೊಳ್ಳಬೇಕು ಎಂದರು. ಶಾರದಾ ಯುವತಿ ಮಂಡಳಿ ಅಧ್ಯಕ್ಷೆ ತುಳಸಿ ಸುಬ್ರಮಣ್ಯ ಅಧ್ಯಕ್ಷತೆ ವಹಿಸಿದ್ದರು. ನಿವೃತ್ತ ಪ್ರಾಚಾರ್ಯ ಡಾ.ವೀರಪ್ಪಗೌಡ, ತಾ.ಪಂ.ಇಒ ಡಾ.ಪ್ರದೀಪ್ ಹಾಜರಿದ್ದರು. ತಾಲೂಕಿನ ವಿವಿಧ ಯುವಕ, ಯುವತಿ ಮಂಡಳಿ ಸದಸ್ಯರು ಭಾಗವಹಿಸಿದ್ದರು. ಶಾರದಾ ಯುವತಿ ಮಂಡಳಿ ಮತ್ತು ನೆಹರೂ ಯುವ ಕೇಂದ್ರದ ಆಶ್ರಯದಲ್ಲಿ ಕಾರ್ಯಕ್ರಮ ಆಯೋಜಿ ಸಲಾಗಿತ್ತು. ರಮ್ಯಾ ಹರಿಪ್ರಸಾದ್ ಪ್ರಾರ್ಥಿಸಿ, ಸುಬ್ರಹ್ಮಣ್ಯ ಸ್ವಾಗತಿಸಿದರು.ನೆಹರೂ ಯುವ ಕೇಂದ್ರದ ಅರುಣ್ ನಿರೂಪಿಸಿದರು.

Scanned by CamScanner

ನಾಗೇಶ್ ಪತ್ರಿಕೆ ದಿನಾಂಕ : 28 - 11 - 2016

ಧ್ಯಾನದ ಮೂಲಕ ಏಕಾಗ್ರತೆ ಸಾಧ್ಯವಾಗಲಿದೆ: ಕೆ.ನಾಗರಾಜ್

ಶೃಂಗೇರಿ: ಇಲ್ಲಿನ ಶ್ರೀ ಜೆ.ಸಿ.ಬಿ.ಎಂ. ಕಾಲೇಜಿನಲ್ಲಿ ಯೋಗ ಮತ್ತು ಧ್ಯಾನ ಶಿಬಿರ ನ. 21 ರಂದು ನಡೆಯಿತು. ಶೃಂಗೇರಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಕೆ.ನಾಗರಾಜ್ ಶಿಬಿರವನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ದಿನನಿತ್ಯದ ಒತ್ತಡಗಳಿಂದ ಹೊರ ಬರಬೇಕಾದರೆ ಯೋಗ ಮತ್ತು ಧ್ಯಾನ ಅತ್ಯಗತ್ಯವಾಗಿದೆ. ಜೊತೆಗೆ ಧ್ಯಾನದ ಮೂಲಕ ಏಕಾಗ್ರತೆ ಸಾಧ್ಯವಾಗಲಿದೆ ಎಂದು ಹೇಳಿದರು. ನಮ್ಮಲ್ಲಿ ಆತ್ಮಸ್ಥೈರ್ಯ ಮತ್ತು ಆತ್ಮ ವಿಶ್ವಾಸ ಬೆಳೆಯಲು ಯೋಗ ಮತ್ತು ಧ್ಯಾನ ಸಹಕಾರಿಯಾಗಿದೆ. ಯಾವುದೇ ಕೆಲಸವನ್ನು ಮಾಡಲು ಆ ಕೆಲಸದ ಬಗ್ಗೆ ಕಾಳಜಿ ಮತ್ತು ಏಕಾಗ್ರತೆ ಅಗತ್ಯ. ಚಂಚಲ ಮನಸ್ಸು ಹೊಂದಿದ್ದರೆ ನಾವು ಯಾವ ಕೆಲಸವನ್ನು ಪರಿಪೂರ್ಣವಾಗಿ ಮಾಡಲು



ಸಾಧ್ಯವಾಗದು ಎಂದರು. ಕಾಲೇಜಿನ ಪ್ರಾಚಾರ್ಯ ಡಾ.ದೇವಿದಾಸ ನಾಯಕ್ ಮಾತನಾಡಿ, ಓದುವಾಗ ಮತ್ತು ಬರೆಯುವಾಗ ನಮ್ಮ ಚಿತ್ತ ಓದಿನ ಕಡೆಗೆ ಮಾತ್ರ ಇರಬೇಕು. ಎರಡು ಮನಸ್ಸು ಇದ್ದರೆ ಓದಿನ ಕಡೆಗೆ ಪೂರ್ಣವಾಗಿ ತೊಡಗಿಸಿಕೊಳ್ಳಲಾಗದು. ಯೋಗ ಮತ್ತು ಧ್ಯಾನವನ್ನು ಮಾಡುವುದರಿಂದ ವಿದ್ಯಾರ್ಥಿಗಳಲ್ಲಿ ಚಂಚಲತೆ ಮಾಯವಾಗಿ ಏಕಾಗ್ರತೆ ದೊರಕುತ್ತದೆ ಎಂದರು. ಕಾರ್ಯಕ್ರಮದಲ್ಲಿ ಸಂತೋಷ್, ಸಂದೀಪ್ ಮತ್ತು ಶಿಲ್ಪಾ ಇದ್ದರು. ಎ.ಜಿ. ಪ್ರಶಾಂತ್ ಸ್ವಾಗತಿಸಿ, ನಿರೂಪಿಸಿದರು.

Scanned by CamScanner

vishwavani.news
24.11.2016
ಗುರುವಾರ



ಶೃಂಗೇರಿಯ ಜೆಸಿಬಿಎಂ ಕಾಲೇಜಿನ ವಿದ್ಯಾರ್ಥಿಗಳಿಗಾಗಿ ಯೋಗ ಹಾಗೂ ಧ್ಯಾನದ ಶಿಬಿರ ಉದ್ಘಾಟನೆ ಸಮಾರಂಭದಲ್ಲಿ ಸರಕಾರಿ ಪದವಿಪೂರ್ವ ಕಾಲೇಜಿನ ಪ್ರಾಚಾರ್ಯ ನಾಗರಾಜ್ ಮಾತನಾಡಿದರು. ಪ್ರಾಚಾರ್ಯ ಡಾ. ದೇವಿದಾಸ್, ಪ್ರಶಾಂತ್, ಸಂತೋಷ, ಸಂದೀಪ್, ಶಿಲ್ಪಾ ಇದ್ದರು.

Scanned by CamScanner

ಯೋಗ, ಧ್ಯಾನದಿಂದ ಆತ್ಮಸ್ಥೈರ್ಯ



ಶೃಂಗೇರಿ ತಾಲೂಕಿನ ಜೆಸಿಬಿಎಂ ಕಾಲೇಜಿನಲ್ಲಿ ಯೋಗ ಮತ್ತು ಧ್ಯಾನ ಶಿಬಿರವನ್ನು ಉದ್ಘಾಟಿಸಿ ಸ.ಪ.ಪೂ.ಕಾಲೇಜು ಪ್ರಾಚಾರ್ಯ ನಾಗರಾಜ್ ಮಾತನಾಡಿದರು.

■ **ವಿಕ ಸುದ್ದಿಲೋಕ** ಶೃಂಗೇರಿ

ಆತ್ಮಸ್ಥೈರ್ಯ,ಏಕಾಗ್ರತೆಗೆ ಯೋಗ ಮತ್ತು ಧ್ಯಾನ ಸಹಕಾರಿ ಎಂದು ಸರಕಾರಿ ಪದವಿಪೂರ್ವ ಕಾಲೇಜು ಪ್ರಾಚಾರ್ಯ ಕೆ. ನಾಗರಾಜ್ ಹೇಳಿದರು.

ಶ್ರೀ ಜೆಸಿಬಿಎಂ ಕಾಲೇಜಿನಲ್ಲಿ ಸೋಮವಾರ ಏರ್ಪಡಿಸಿದ್ದ ಯೋಗ ಮತ್ತು ಧ್ಯಾನ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

ಯಾವುದೇ ಕೆಲಸವನ್ನು ಮಾಡಲು ಏಕಾಗ್ರತೆ ಅಗತ್ಯ. ಧ್ಯಾನದಿಂದ ಏಕಾಗ್ರತೆ ಸಾಧ್ಯ. ಚಂಚಲ ಮನಸ್ಸು ಹೊಂದಿದ್ದರೆ ನಾವು ಯಾವ ಕೆಲಸವನ್ನು ಪರಿಪೂರ್ಣವಾಗಿ ಮಾಡಲು ಸಾಧ್ಯವಾಗದು. ಯೋಗ ಮತ್ತು ಧ್ಯಾನಗಳು ಏಕಾಗ್ರತೆ ಮತ್ತು ಆತ್ಮಸ್ಥೈರ್ಯ ನೀಡುತ್ತವೆ ಎಂದರು.

ಪ್ರಾಚಾರ್ಯ ಡಾ.ದೇವಿದಾಸ ನಾಯಕ್ ಮಾತನಾಡಿ, ವಿದ್ಯಾರ್ಥಿಗಳು ಪರೀಕ್ಷೆಗಳಲ್ಲಿ ಹೆಚ್ಚು ಅಂಕ ಪಡೆಯಲು ನಮ್ಮ ಚಿತ್ತ ಓದಿನ ಕಡೆಗೆ ಮಾತ್ರ ಇರಬೇಕು. ಯೋಗ ಮತ್ತು ಧ್ಯಾನವನ್ನು ಮಾಡುವುದರಿಂದ ವಿದ್ಯಾರ್ಥಿಗಳಲ್ಲಿ ಚಂಚಲತೆ ಮಾಯವಾಗಿ ಏಕಾಗ್ರತೆ ದೊರಕುತ್ತದೆ ಎಂದರು. ಕಾರ್ಯಕ್ರಮದಲ್ಲಿ ಸಂತೋಷ್, ಸಂದೀಪ್ ಮತ್ತು ಶಿಲ್ಪಾ ಇದ್ದರು. ಎ.ಜಿ.ಪ್ರಶಾಂತ್ ಸ್ವಾಗತಿಸಿ, ನಿರೂಪಿಸಿದರು.

ದಿ: 23-11-16

Scanned by CamScanner

ಪ್ರಜಾವಾಣಿ ದಿನಾಂಕ 11.11.16

ಮೆಡಿಕಲ್ ಟ್ರಾನ್ಸ್‌ಕ್ರಿಪ್ಷನ್ ಉದ್ಯೋಗ ತರಬೇತಿ

ಶೃಂಗೇರಿ: ವಿದೇಶದಲ್ಲಿನ ವೈದ್ಯರ ಮತ್ತು ರೋಗಿಗಳ ನಡುವಿನ ಚಿಕಿತ್ಸಾ ಸಂಭಾಷಣೆಯನ್ನು ಭಾರತದ ಪಟ್ಟಣದಲ್ಲಿ ಕುಳಿತು ಅಕ್ಷರ ರೂಪದ ದಾಖಲೆಯಾಗಿ ಮಾಡಿ, ಹಿಂದಿರುಗಿಸುವ ಕಾರ್ಯವಾಗಿರುವ ಮೆಡಿಕಲ್ ಟ್ರಾನ್ಸ್‌ಕ್ರಿಪ್ಷನ್ ಉದ್ಯೋಗ ಆಧಾರಿತ ಶಿಕ್ಷಣವಾಗಿದ್ದು, ಇದನ್ನು 12 ವಾರಗಳ ತರಬೇತಿಯಿಂದ ಯಾರೂ ಸಹ ಪಡೆಯಬಹುದು ಎಂದು ಸೆರೆಬ್ರಾ ಟೋಟಲ್ ಐಟಿ ಸಲ್ಯೂಷನ್‌ನ ರಾಜಶೇಖರ ಆಳ್ವ ತಿಳಿಸಿದರು.



ಶೃಂಗೇರಿಯಲ್ಲಿ ಸಾಫ್ಟೆಕ್ ಸಲ್ಯೂಷನ್ ಸಂಸ್ಥೆಯ ಕೌಶಲ್ಯಾಧಾರಿತ ಮೆಡಿಕಲ್ ಟ್ರಾನ್ಸ್‌ಕ್ರಿಪ್ಷನ್ ತರಬೇತಿ ಕೇಂದ್ರವನ್ನು ಪ್ರೊ. ಹೆಚ್.ಸಿ.ವೀರಪ್ಪಗೌಡ ಉದ್ಘಾಟಿಸಿ ಮಾತನಾಡಿದರು.

ಅವರು ಸಾಫ್ಟೆಕ್ ಸಲ್ಯೂಷನ್ ಸಂಸ್ಥೆಯು ಪಟ್ಟಣದ ಶಾರದಾ ಸಹಕಾರಿ ಸೌಧದಲ್ಲಿ ಆರಂಭಿಸಿದ ಕೌಶಲ್ಯಾಧಾರಿತ ಮೆಡಿಕಲ್ ಟ್ರಾನ್ಸ್‌ಕ್ರಿಪ್ಷನ್ ತರಬೇತಿ ಕೇಂದ್ರದ ಉದ್ಘಾಟನಾ ಸಮಾರಂಭದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಮಾತನಾಡಿದರು.

ಮಾನವ ದೇಹದ ಅಂಗಾಗಳ ಹೆಸರಿನ ಪರಿಚಯ, ಚಿಕಿತ್ಸಾ ಕ್ರಮ ಮತ್ತು ಔಷಧಿಗಳ ಹೆಸರಿನ ಪರಿಚಯದೊಂದಿಗೆ ವೈದ್ಯರ ಹೇಳಿಕೆಯನ್ನು ಕಂಪ್ಯೂಟರ್‌ನಲ್ಲಿ ಅಕ್ಷರ ರೂಪಕ್ಕೆ ಇಳಿಸುವುದನ್ನು ಈ ತರಬೇತಿ ಕಾಲದಲ್ಲಿ ತಿಳಿಸಿಕೊಡಲಾಗುತ್ತದೆ ಎಂದರು.

ಪ್ರೊ.ಹೆಚ್. ಸಿ. ವೀರಪ್ಪಗೌಡರು ಕಾರ್ಯಕ್ರಮ ಉದ್ಘಾಟಿಸಿ, ತರಬೇತಿ ಶಾಲೆಯನ್ನು ಶೃಂಗೇರಿಯ ವಿದ್ಯಾರ್ಥಿಗಳಿಗೆ ಪರಿಚಯಿಸಿಕೊಟ್ಟ ಸಾಧನೆ ಈ ಸಂಸ್ಥೆಯದ್ದಾಗಿದೆ. ವಿದೇಶದಲ್ಲಿ ಚಿಕಿತ್ಸೆಯ ಬಹು ಆಯಾಮದ ಅಮೂಲ್ಯ ದಾಖಲೆಯಾಗಿ ಉಳಿಯುವ ಟ್ರಾನ್ಸ್‌ಕ್ರಿಪ್ಷನ್ನು ನಮ್ಮ ವಿದ್ಯಾರ್ಥಿಗಳು ವ್ಯಾಕರಣಬದ್ಧವಾಗಿ ದಾಖಲಿಸಿ ಕೊಡುವ ಜಾಣ್ಮೆಯನ್ನು ಹೊರದಿರುವುದಾಗಿ ತಿಳಿಸಿದರು.

ಜೆಸಿಬಿಎಂ ಕಾಲೇಜು ಪ್ರಾಂಶುಪಾಲ ಪ್ರೊ.ದೇವಿದಾಸ್ ನಾಯಕ್ ಅಧ್ಯಕ್ಷತೆ ವಹಿಸಿ ಮಾತನಾಡಿ, ಪದವಿಯೊಂದಿಗೆ ಉದ್ಯೋಗಕ್ಕೆ ಆಧಾರವಾಗುವ ಇಂತಹ ವಿಶೇಷ ತರಬೇತಿಯನ್ನು ಪಡೆದವರಿಗೆ ಉತ್ತಮ ಭವಿಷ್ಯ ಇರುವುದರಿಂದ ಇದೊಂದು ಆಕರ್ಷಕ ಕ್ಷೇತ್ರವಾಗಿದೆ ಎಂದು ಹೇಳಿದರು.

ಸಂಸ್ಥೆಯ ಪ್ರವರ್ತಕ ಚಂದ್ರಶೇಖರ ಗ್ರಾಮೀಣ ವಿದ್ಯಾರ್ಥಿಗಳಿಗಾಗಿ ಶುಲ್ಕರಿಯಾಯಿತಿ ನೀಡಲಾಗುತ್ತಿದ್ದು, ಡಿ. 5ರಿಂ ತರಗತಿಗಳು ಆರಂಭವಾಗಲಿವೆ ಎಂದ ಡಾ.ಭುವನೇಶ್ವರಿ ಬಲ್ಲಾಳ್, ಶೋಭಾ ಅನಂತ ಅತಿಥಿಗಳಾಗಿದ್ದರು. ಶೃಂಗೇರಿ ಸು ಸ್ವಾಗತಿಸಿದರು. ಸುಬ್ರಹ್ಮಣ್ಯ ನಿರೂಪಿಸಿದರು

Scanned by CamScanner

ವಿಜಯ ಕರ್ನಾಟಕ VK ಗುರುವಾರ, 27 ಅಕ್ಟೋಬರ್ 2016

ಸಹ್ಯಾದ್ರಿ ಉತ್ಸವ ಉದ್ಘಾಟಿಸಿದ ರಂಗ ನಿರ್ದೇಶಕ ಸಿ. ಬಸವಲಿಂಗಯ್ಯ

ಯುವಜನರು ವಿಚಾರಕ್ಕೆ ತುಡಿಯಲಿ



ಶೃಂಗೇರಿಯ ಜೆಸಿಎಂಬಿ ಕಾಲೇಜಿನ ವಿದ್ಯಾರ್ಥಿಗಳು ಪ್ರದರ್ಶಿಸಿದ ದಸರಾ ಉತ್ಸವದ ಮೆರವಣಿಗೆಯನ್ನು ಕಣ್ತುಂಬಿಕೊಳ್ಳುತ್ತಿರುವ ವಿಶ್ವವಿದ್ಯಾನಿಲಯ ಪ್ರಮುಖರು.

■ ವಿಕ ಸುದ್ದಿಲೋಕ ಶಿವಮೊಗ್ಗ

ದೇಶ ಯಾವಾಗ ಕ್ವೋಬೆಗೆ ಒಳಗಾಗುತ್ತದೋ ಆಗ ನಮ್ಮ ಅಭಿವ್ಯಕ್ತಿಗೆ ಕವಡೆ ಕಾಸಿನ ಕಿಮ್ಮತ್ತೂ ಸಿಗುವುದಿಲ್ಲ ಎಂದು ಪ್ಯಾಕ ರಂಗ ನಿರ್ದೇಶಕ ಸಿ. ಬಸವಲಿಂಗಯ್ಯ ಹೇಳಿದರು.

ಕುವೆಂಪು ವಿಶ್ವವಿದ್ಯಾನಿಲಯ ಸಹಪತ್ಯ ಚಟುವಟಿಕೆಗಳ ವಿಭಾಗದ ವತಿಯಿಂದ ಆಯೋಜಿಸಿರುವ ಸಹ್ಯಾದ್ರಿ ಉತ್ಸವ ಸಾಂಸ್ಕೃತಿಕ ಸ್ಪರ್ಧೆಯನ್ನು ಬುಧವಾರ ಉದ್ಘಾಟಿಸಿ ಅವರು ಮಾತನಾಡಿದರು.

21ನೇ ಶತಮಾನಕ್ಕೆ ಕಾಲಿಟ್ಟರೂ ಪುನಃ ಆದಿಕಾಲಕ್ಕೆ ಹೋಗುತ್ತಿದ್ದೆವೆಯೇ ಎನ್ನುವ ಸಂದಿಗ್ಧ ಪರಿಸ್ಥಿತಿ ದೇಶಕ್ಕೆ ಬರುತ್ತಿದೆ. ಧರ್ಮ ಮತ್ತು ರಾಜಕಾರಣ ಒಟ್ಟಿಗೂಡುವ ಹಂತಕ್ಕೆ ನಾವಿಂದು ತಲುಪಿದ್ದೇವೆ. ನಮ್ಮ ಮಾನಸಿಕ ನೆಮ್ಮದಿಗೆ ಸೃಷ್ಟಿಸಿಕೊಂಡಿರುವ ದೇವರುಗಳನ್ನು ಅಧಿಕಾರದ ಲಾಲಸೆಗೆ ಬಳಸಿಕೊಳ್ಳುತ್ತಿದ್ದೇವೆ. ಹೃದಯದಲ್ಲಿಟ್ಟುಕೊಳ್ಳಬೇಕಾದ ದೇವರು ರಾಜಕಾರಣದ ವಸ್ತುವಾದರೆ ದೇಶಕ್ಕೆ ಖಂಡಿತಾ ವಿಪತ್ತು ಎದುರಾಗುವುದರಲ್ಲಿ ಸಂಶಯವಿಲ್ಲ ಎಂದರು.

ದೇಶವನ್ನು ಎರಡು ಶತಮಾನಗಳ ಕಾಲ ಆಳಿ ಅಪಾರ ಸಂಪತ್ತನ್ನು ಕೊಳ್ಳೆ ಹೊಡೆದ ವರನ್ನು ಶಾಂತ ರೀತಿಯಿಂದ ಇಲ್ಲಿಂದ ಕಳುಹಿಸಿಕೊಟ್ಟಿದ್ದೇವೆ. ಆದರೆ ಆಳುವ ಪಕ್ಷಗಳು ಇಂತಹವನ್ನು ರತ್ನಗಂಬಳಿ ಹಾಸಿ ಪುನಃ ಇಲ್ಲಿಗೇ ಆಹ್ವಾನಿಸುತ್ತಿವೆ. ಜಗತ್ತಿನ ಯಾವ ದೇಶಗಳಿಗೂ ಇಂದು ಗಡಿಯಿಲ್ಲದಂತಾಗಿದೆ. ಹೀಗಾಗಿ ಭಾರತದಲ್ಲಿ ಪ್ರತಿಭಾವಂತರಿಗೆ ಅವಕಾಶ ವಿಲ್ಲ ಎಂಬ ಮನಸ್ಥಿತಿಯಿಂದ ಪ್ರತಿಭಾ ಪಲಾಯನ ನಡೆಯುತ್ತಿದೆ. ಯುವ ಜನತೆ, ಶಿಕ್ಷಣ ಸಂಸ್ಥೆಗಳು ಇದನ್ನು ಗಂಭೀರವಾಗಿ ಯೋಚಿಸಬೇಕು. ಭವಿಷ್ಯದಲ್ಲಿ ಎದುರಾಗಲಿರುವ ಸಮಸ್ಯೆಗಳನ್ನು ಮನದಟ್ಟು ಮಾಡಿಕೊಂಡು ಈಗಿನಿಂದಲೇ ಅದನ್ನು ಹೋಗಲಾಡಿಸುವಲ್ಲಿ ಪ್ರಯತ್ನಿಸಬೇಕು ಎಂದರು.

ರಾಜ್ಯದಲ್ಲಿ ಕನ್ನಡ ಆಡಳಿತ ಭಾಷೆಯಾಗಿದ್ದರೂ ಇಂದಿಗೂ ಅದು ಅಭಿವ್ಯಕ್ತಿಯಾಗುತ್ತಿಲ್ಲ, ಬ್ರಿಟಿಷರು ಹೊರ ಹೋದರೂ ನಮ್ಮ ಮಾನಸಿಕ ಗುಲಾಮಗಿರಿ ಹೋಗಿಲ್ಲ ಮತ್ತೀಯ ವಿಕಾರಗಳು ರಾರಾಜಿಸುತ್ತಿವೆ. ಹಿಂದಿನ ಕಾಲದ ವಿಚಾರಗಳನ್ನು ಕೈಗೆತ್ತಿಕೊಂಡು ವರ್ತಮಾನದಲ್ಲಿ ರಾಡಿ ಮಾಡುತ್ತಿದ್ದೇವೆ. ಪುರಾಣಗಳನ್ನು ಹಾಳು ಗೆಡುವುತ್ತಿದ್ದೇವೆ. ಪುರಾಣಗಳನ್ನು ಮುಟ್ಟುವಾಗ ಬಹಳ ಎಚ್ಚರದಿಂದಿರಬೇಕು. ಅವನ್ನು ರಾಜಕಾರಣಗೊಳಿಸಬಾರದು. ಇಲ್ಲವೇ ಹೋದರೆ ಕಠಿಣ ದಿನಗಳನ್ನು ಎದುರಿಸುವ ಕಾಲ ದೂರವಿಲ್ಲ ಎಂದರು.

ಕುಲಪತಿ ಪ್ರೊ.ಜೋಗನ್ ಶಂಕರ್ ಅಧ್ಯಕ್ಷತೆ ವಹಿಸಿದ್ದರು. ಆಕಾಶವಾಣಿ ಕಲಾವಿದೆ ಸುರೇಖಾ ಗೋಪಾಲ ಹೆಗಡೆ, ಕುಲಸಚಿವರಾದ ಪ್ರೊ.ಜೆ.ಸೋಮ ಶೇಖರ್, ಪ್ರೊ.ಸಿ.ಎಂ.ತ್ಯಾಗರಾಜ್, ಹಣಕಾಸು ಅಧಿಕಾರಿ ಪ್ರೊ.ಎಂ.ಬಿ.ಶಿವಣ್ಣ ವಿದ್ಯಾರ್ಥಿಗಳ ಕಲ್ಯಾಣ ನಿರ್ದೇಶಕ ಪ್ರೊ.ಎ.ರಾಮೇಗೌಡ, ಡಾ.ಕುಮಾರ ಚಲ್ಯ, ಡಾ.ಜಿ. ಪ್ರಶಾಂತನಾಯಕ್ ಮತ್ತಿತರರಿದ್ದರು. ಸಹಪತ್ಯ ಚಟುವಟಿಕೆಗಳ ವಿಭಾಗದ ಸಂಚಾಲಕ ಡಾ.ನೆಳ್ಕಟ್ಟೆ ಎಸ್.ಸ್ವೀಶ್ ಸ್ವಾಗತಿಸಿ, ಡಾ.ಸಿ.ಶ್ವೇತಾ ಮತ್ತು ಪುರುಷೋತ್ತಮ್ ನಿರೂಪಿಸಿದರು.

Scanned by CamScanner

ವಿಜಯ ಕರ್ನಾಟಕ VK
ಶುಕ್ರವಾರ, 21 ಅಕ್ಟೋಬರ್ 2016

ಭಾಷೆಯ ನಿರ್ಲಕ್ಷ್ಯ ಸಲ್ಲದು

■ ವಿಕ ಸುದ್ದಿಲೋಕ ಶೃಂಗೇರಿ

ಭಾಷೆಯ ಬಗ್ಗೆ ನಿರ್ಲಕ್ಷ್ಯ ಧೋರಣೆ ತೋರಿದರೆ ಮುಂದಿನ ವರ್ಷಗಳಲ್ಲಿ ವಿಶ್ವದಲ್ಲಿ ಕೇವಲ 15 ಭಾಷೆಗಳು ಉಳಿಯಲು ಸಾಧ್ಯ ಎಂದು ಕಲಬುರ್ಗಿ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಎಂ. ಎಚ್.ಮಹೇಶ್ವರಯ್ಯ ಹೇಳಿದರು.

ಅವರು ಗುರುವಾರ ಶ್ರೀಜೆಬಿಎಂ ಕಾಲೇಜಿನಲ್ಲಿ ಆಯೋಜಿಸಿದ್ದ 'ಆಳಿನಂಚಿನಲ್ಲಿರುವ ಭಾಷೆಗಳು' ಕುರಿತ ಮೂರು ದಿನಗಳ ರಾಷ್ಟ್ರೀಯ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ದೇಶದಲ್ಲಿ 196 ಭಾಷೆಗಳು ಹಾಗೂ ಕರ್ನಾಟಕದಲ್ಲಿ ಆರು ಭಾಷೆಗಳು ಆಳಿನ ಅಂಚಿನಲ್ಲಿದೆ. ಭಾಷೆಯ ಆಳಿಗೆ ಪಕ್ಕದ ಬೇರೆ ಭಾಷೆಗಳು ಕಾರಣ. ಭಾಷೆ ಉಳಿದರೆ ಮಾತ್ರ ಸಾಂಸ್ಕೃತಿಕ, ಬೆಳವಣಿಗೆ ಸಾಧ್ಯ. ದೇಶದಲ್ಲಿ ಶೇ.28ರಷ್ಟು ಜನರು ದ್ರಾವಿಡ ಭಾಷೆಗಳನ್ನು ಮಾತನಾಡಿದರೆ, ಶೇ.73ರಷ್ಟು ಜನರು ಹಿಂದಿ, ಸಂಸ್ಕೃತ, ರಾಜಸ್ಥಾನಿ, ಗುಜರಾತಿ ಮೊದಲಾದ ಭಾಷೆಯ ಮಾತನಾಡುತ್ತಿದ್ದಾರೆ ಎಂದರು.

ಶಿವಮೊಗ್ಗ ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಡಿ.ಮಂಜುನಾಥ್ ಮಾತನಾಡಿ, ಮಕ್ಕಳಿಗೆ ವ್ಯಾಕರಣದ ಜತೆಗೆ ಕನ್ನಡದ ಶುದ್ಧಭಾಷೆಯನ್ನು ಮೊದಲು ಹೇಳಿಕೊಡಬೇಕಾಗಿದೆ. ಶಿಕ್ಷಕರಿಗೆ ಇದರ ಬಗ್ಗೆ ಅರಿವು ಮೂಡಿಸಲು ತರಬೇತಿ ನೀಡಬೇಕು.

»03

ಭಾಷೆ ನಿರ್ಲಕ್ಷ್ಯ ಸಲ್ಲದು

» ನಮ್ಮ ಮೊದಲ ಪುಟದಿಂದ

ಪ್ರಪಂಚದಲ್ಲಿ ಆಂಗ್ಲ ಭಾಷೆಯನ್ನೇ ಹೆಚ್ಚು ಜನರು ಮಾತನಾಡುತ್ತಾರೆ ಎಂಬ ತಪ್ಪು ಭಾವನೆ ಇದೆ. ಪ್ರತಿಯೊಬ್ಬರೂ ನಮ್ಮ ಭಾಷೆಯನ್ನು ಉಳಿಸಿ ಬೆಳಸಬೇಕು ಎಂದರು.

ಕಾಲೇಜಿನ ಪ್ರಾಚಾರ್ಯ ಡಾ.ದೇವಿದಾಸ್. ಎಸ್.ನಾಯಕ್ ಅಧ್ಯಕ್ಷತೆ ವಹಿಸಿದ್ದರು. ಕಾಲೇಜಿನ ವಿಶ್ವನೀಡ ಮಂಡಳಿ ಸದಸ್ಯ ಹೇರೂರು ಅನಂತಪದ್ಮನಾಭ ಭಟ್, ಪ್ರಶಾಂತ್ ಉಪಸ್ಥಿತರಿದ್ದರು.

ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾನಿಲಯ ಮತ್ತು ಜೆಸಿಬಿಎಂ ಕಾಲೇಜು ಆಶ್ರಯದಲ್ಲಿ ಕಾರ್ಯಾಗಾರ ಆಯೋಜಿಸಲಾಗಿದೆ.



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ಆಯೋಜಿಸಿರುವ 'ಆಳಿನಂಚಿನಲ್ಲಿರುವ ಭಾಷೆಗಳು' ಕುರಿತ ಮೂರು ದಿನಗಳ ಕಾರ್ಯಾಗಾರವನ್ನು ಕಲಬುರ್ಗಿ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾನಿಲಯದ ಕುಲಪತಿ ಪ್ರೋ.ಎಂ.ಎಚ್.ಮಹೇಶ್ವರಯ್ಯ ಗುರುವಾರ ಉದ್ಘಾಟಿಸಿದರು.

Scanned by CamScanner

ಅಳಿವಿನಂಚಿನಲ್ಲಿರುವ ಭಾಷೆ ಉಳಿಸಿದರೆ ಮಾತ್ರ ಸಂಸ್ಕೃತಿ ಬೆಳವಣಿಗೆ ಸಾಧ

ಕರ್ನಾಟಕ ವಿವಿ ಉಪಕುಲಪತಿ ಪ್ರೊ. ಎಂ.ಎಚ್.ಮಹೇಶ್ವರಯ್ಯ ಅಭಿಪ್ರಾಯ | ಮೂರು ದಿನಗಳ ಕಾರ್ಯಾಗಾರಕ್ಕೆ ಚಾಲನ

■ ಹೊಯಸಳಾಣೆ ಸುದ್ದಿಜಾಡು ಸ್ಟಂಗೇರಿ

ಪ್ರಪಂಚದಲ್ಲಿ ಒಟ್ಟು 6500 ಭಾಷೆಗಳಿದ್ದು ಅವುಗಳಲ್ಲಿ 2000 ಭಾಷೆಗಳು ಸತ್ತಿವೆ. 2600 ಅಳಿವಿನ ಅಂಚಿನಲ್ಲಿ ಇವೆ ಎಂದು ಯುನಾಯಿಟೆಡ್ ನೇಷನ್ಸ್ ಸಂಸ್ಥೆಯು ವಿಶ್ವವಿದ್ಯಾನಿಲಯದ ಉಪಕುಲಪತಿ ಪ್ರೊ. ಎಂ.ಎಚ್.ಮಹೇಶ್ವರಯ್ಯ ಹೇಳಿದರು.

ಜೆಸಿಐ ಇಂಡಿಯಾ ಹಾಗೂ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾನಿಲಯದಿಂದ ಆಚೆಹಳ್ಳಿ ಅಯೋಜಿಸಿರುವ ಅಳಿವಿನಂಚಿನಲ್ಲಿರುವ ಭಾಷೆಯನ್ನು ಕುರಿತ ಮೂರುದಿನದ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿ, ದೇಶದಲ್ಲಿ 196 ಪ್ರಾಗೈತಿಹಾಸಿಕ ಭಾಷೆಗಳಿದ್ದವು. ಅವುಗಳಲ್ಲಿ 6 ಭಾಷೆಗಳು ಅಳಿವಿನ ಅಂಚಿನಲ್ಲಿವೆ. ಆದ್ದರಿಂದ ಅವುಗಳನ್ನು ಉಳಿಸಿಕೊಳ್ಳಬೇಕು. ಅದಾಗಲೇ ಪ್ರಪಂಚದಲ್ಲಿ ಅನೇಕ ಭಾಷೆಗಳು ಅಳಿದುಹೋಗಿವೆ. ಇನ್ನಾದರೂ ಪ್ರಯತ್ನಿಸಿದಲ್ಲಿ ಕೆಲವು ಭಾಷೆಗಳನ್ನು ಉಳಿಸಿಕೊಳ್ಳಲು ಸಾಧ್ಯವಿದೆಯೂ ಅನಾಯುಷ್ಯವಿದೆ ಎಂದರು.

ಮಾತೃಭಾಷೆಯಲ್ಲಿ ಕೇ.28 ಜನರು ವ್ಯಾವಹಾರಿಕ ಭಾಷೆಗಳನ್ನು



ಸ್ಟಂಗೇರಿ ಜೆಸಿಐವಿಎಂ ಕಾಲೇಜಿನಲ್ಲಿ ಆಯೋಜಿಸಿದ್ದ ಅಳಿವಿನಂಚಿನಲ್ಲಿರುವ ಭಾಷೆಗಳಾ ಕುರಿತ ಮೂರು ದಿನಗಳ ಕಾರ್ಯಾಗಾರವನ್ನು ಪ್ರೊ.ಎಂ.ಎಚ್.ಮಹೇಶ್ವರಯ್ಯ ಉದ್ಘಾಟಿಸಿದರು.

> ಭಾಷೆಗಳ ಬಗ್ಗೆ ನಿರ್ಲಕ್ಷ್ಯ ತೋರಿದರೆ ಇನ್ನು ಮೂರು ವರ್ಷಗಳಲ್ಲಿ 15 ಭಾಷೆಗಳು ಮಾತ್ರ ಉಳಿಯುತ್ತವೆ. ಅಳಿವಿನಂಚಿನಲ್ಲಿರುವ ಭಾಷೆಗಳ ಬಗ್ಗೆ ಎಲ್ಲರೂ ಅರಿವು ಮೂಡಿಸಬೇಕು. ಈ ನಿಟ್ಟಿನಲ್ಲಿ ಕಾರ್ಯಾಗಾರ ಪ್ರಮುಖವಾಗಿದೆ.
> ಪ್ರೊ.ಎಂ.ಎಚ್.ಮಹೇಶ್ವರಯ್ಯ

ಮಾತನಾಡುವರು. ಶೇ.73 ಜನರು ಕೆಲವು ನಿರ್ದಿಷ್ಟ ರಾಜ್ಯಗಳಲ್ಲಿ, ಗಡಿಭಾಗದಲ್ಲಿ ಭಾಷೆಗಳನ್ನು ಬಳಸುತ್ತಾರೆ. ಎಲ್ಲ ಭಾಷೆಗಳ ಜತೆಗೆ ಮಾತೃಭಾಷೆಯನ್ನು ಉಳಿಸಿಕೊಳ್ಳಬೇಕು. ಮತ್ತಷ್ಟು ಅದನ್ನು ಕಲಿತು ಜಾಗತಿಕ ಸಾಮರ್ಥ್ಯ ಹೆಚ್ಚಿಸಿಕೊಳ್ಳಬೇಕು ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಚಾರ್ಯ ಪ್ರೊ.ಎಂ.ಎಚ್.ಮಹೇಶ್ವರಯ್ಯ ಮಾತನಾಡಿ, ವಿಶ್ವದಲ್ಲಿ ಇರುವ ಬಹುತೇಕ ಭಾಷೆಗಳಿಗೆ ಲಿಪಿಯೇ ಇಲ್ಲ. ಲಿಪಿಯಿಲ್ಲದ ಭಾಷೆಗಳಿಗೆ ಲಿಪಿ ಸೃಷ್ಟಿಸಿ ಅವುಗಳನ್ನು ಉಳಿಸಿ ಬೆಳೆಸಬೇಕಾದ ಅಗತ್ಯವಿದೆ. ಅಳಿವಿನಂಚಿನಲ್ಲಿರುವ ಭಾಷೆಯನ್ನು ಉಳಿಸಿ ಬೆಳೆಸಿಕೊಳ್ಳಲು ಸಾಧ್ಯವಾದಷ್ಟು ಪ್ರಯತ್ನಿಸಬೇಕು ಎಂದರು.

ವಿಶ್ವವಿದ್ಯಾನಿಲಯದ ಡೀನ್ ಪ್ರೊ.ಎಸ್.ಪಿ.ಪಲ್ಲಾಗಟ್ಟಿ ಮಾತನಾಡಿ, ವಿಶ್ವದಲ್ಲಿ ಇರುವ ಭಾಷೆಗಳಲ್ಲಿ ಶೇ.90 ಭಾಷೆಗಳು ಅಳಿವಿನಂಚಿನಲ್ಲಿವೆ. ಇವುಗಳನ್ನು ಉಳಿಸಿ ಬೆಳೆಸಲು ಸಾಧ್ಯವಾದಷ್ಟು ಪ್ರಯತ್ನಿಸಬೇಕು ಎಂದರು.

ಕಾರ್ಯಾಗಾರದಲ್ಲಿ ಪ್ರೊ.ಎಸ್.ಪಿ.ಪಲ್ಲಾಗಟ್ಟಿ, ಪ್ರಾಧ್ಯಾಪಕ ಡಾ. ಬಿ.ಎಸ್.ಮಂಜುನಾಥ್, ಪ್ರಾಧ್ಯಾಪಕ ಡಾ.ಎಸ್.ಎಂ.ಪಾಟೀಲ್, ಪ್ರಾಧ್ಯಾಪಕ ಡಾ.ಎಸ್.ಎಂ.ಪಾಟೀಲ್, ಪ್ರಾಧ್ಯಾಪಕ ಡಾ.ಎಸ್.ಎಂ.ಪಾಟೀಲ್ ಮತ್ತಿತರರು ಉಪಸ್ಥಿತರಿದ್ದರು.

Scanned by CamScanner

ಬರ್ 21, 2016 | ಮಂಗಳೂರು | ₹ 5.00 | ಪುಟ 24 | ಸಂಪುಟ 19 | ಸಂಚಿಕೆ 292

'ಅಳಿವಿನಂಚಿನಲ್ಲಿ 196 ಭಾಷೆಗಳು'



ಶೃಂಗೇರಿಯಲ್ಲಿ ಗುರುವಾರ ಆಯೋಜಿಸಿದ್ದ 'ಅಳಿವಿನಂಚಿನಲ್ಲಿರುವ ಭಾಷೆಗಳು' ಕುರಿತ ಕಾರ್ಯಾಗಾರವನ್ನು ಕಲಬುರ್ಗಿಯ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎಂ.ಎಚ್.ಮಹೇಶ್ವರಯ್ಯ ಉದ್ಘಾಟಿಸಿದರು.

ಪ್ರಜಾವಾಣಿ ವಾರ್ತೆ

ಶೃಂಗೇರಿ: ಭಾರತದಲ್ಲಿ 196 ಭಾಷೆಗಳು ಹಾಗೂ ಕರ್ನಾಟಕದಲ್ಲಿ ಆರು ಭಾಷೆಗಳು ಅಳಿವಿನ ಅಂಚಿನಲ್ಲಿದ್ದು, ಭಾಷೆಯ ಅಳಿವಿಗೆ ಪಕ್ಕದ ಬೇರೆ ಭಾಷೆಗಳು ಕಾರಣ. ಭಾಷೆ ಉಳಿದರೆ ಮಾತ್ರ ಸಾಂಸ್ಕೃತಿಕ ಬೆಳವಣಿಗೆ ಸಾಧ್ಯ ಎಂದು ಕಲಬುರ್ಗಿಯ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎಂ. ಎಚ್.ಮಹೇಶ್ವರಯ್ಯ ತಿಳಿಸಿದರು.

ಇಲ್ಲಿನ ಜಗದ್ಗುರು ಚಂದ್ರಶೇಖರ ಭಾರತಿ ಮೆಮೋರಿಯಲ್ (ಜೆಸಿಬಿಎಂ) ಕಾಲೇಜು ಹಾಗೂ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ವತಿಯಿಂದ ಗುರುವಾರ ಕಾಲೇಜಿನಲ್ಲಿಲ ಆಯೋಜಿಸಿದ್ದ 'ಅಳಿವಿನಂಚಿನಲ್ಲಿರುವ ಭಾಷೆಗಳು' ಕುರಿತು ಮೂರು ದಿನಗಳ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಭಾರತದಲ್ಲಿ ಶೇ 28ರಷ್ಟು ಜನರು ದ್ರಾವಿಡ ಭಾಷೆಗಳನ್ನು ಮಾತನಾಡಿದರೆ, ಶೇ 73ರಷ್ಟು ಜನರು ಹಿಂದಿ, ಸಂಸ್ಕೃತ, ರಾಜಸ್ತಾನಿ, ಗುಜರಾತಿ ಮೊದಲಾದ ಭಾಷೆಗಳನ್ನು ಮಾತನಾಡುತ್ತಾರೆ. ಭಾಷೆಯ ಬಗ್ಗೆ ನಿರ್ಲಕ್ಷ್ಯ ಧೋರಣೆ ತಾಳಿದರೆ ಮುಂದಿನ 100 ವರ್ಷಗಳಲ್ಲಿ ವಿಶ್ವದಲ್ಲಿ ಕೇವಲ 15 ಭಾಷೆಗಳಷ್ಟೇ ಉಳಿಯುವ ಆತಂಕ ಇದೆ ಎಂದರು.

'ಒಂದು ಭಾಷೆ ಬೆಳೆಯಬೇಕಾದರೆ ಮಾನವನಿಗೆ ಭಾಷೆಯ ಬಗ್ಗೆ ಹೆಚ್ಚಿನ ವ್ಯಾಮೋಹ ಇರಬೇಕು. ನಾವು ಮನೆಯಲ್ಲಿ ಆಡುವಂತಹ ಕನ್ನಡದ ಸ್ಥಿತಿಗತಿಗಳ ಬಗ್ಗೆ ಪ್ರತಿಯೊಬ್ಬರು ಆತ್ಮಾವ ಲೋಕನ ಮಾಡಿಕೊಳ್ಳಬೇಕು' ಎಂದರು.

Scanned by CamScanner

ವಿಜಯ ಕರ್ನಾಟಕ VK

ಗುರುವಾರ, 20 ಅಕ್ಟೋಬರ್ 2016, ಬೆಂಗಳೂರು



ಕನ್ನಡಪ್ರಭ

ಗುರುವಾರ 20.10.2016

ಚಿತ್ರಸುದ್ದಿ



ವಿಜಯ ಕರ್ನಾಟಕ VK
ಬುಧವಾರ, 19 ಅಕ್ಟೋಬರ್ 2016

ಡಿಸುವುದೇ ಜನತಾ

ಕಾರ್ಯಾಗಾರ

ಶೃಂಗೇರಿ: ಪಟ್ಟಣದ ಜೆಸಿಬಿಎಂ ಕಾಲೇಜಿನಲ್ಲಿ ಅ.20ರಿಂದ ಮೂರು ದಿನ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾನಿಲಯದ ಸಹಯೋಗ ದೊಂದಿಗೆ ಆಳಿವಿನಂಚಿನಲ್ಲಿರುವ ಭಾಷೆಗಳ ಬಗ್ಗೆ ರಾಷ್ಟ್ರೀಯ ಕಾರ್ಯಾಗಾರ ನಡೆಯಲಿದೆ.

. ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾನಿಲ ಯದ ಕುಲಪತಿ ಪ್ರೊ.ಎಚ್.ಎಂ.ಮಹೇಶ್ವ ರಯ್ಯ ಕಾರ್ಯಾಗಾರ ಉದ್ಘಾಟಿಸಿ, ದಿಕ್ಸೂಚಿ ಭಾಷಣ ಮಾಡಲಿದ್ದಾರೆ. ವಿದ್ವಾಂಸರಾದ ಪ್ರೊ. ಜ್ಞಾನ ಸುಂದರಂ, ಪ್ರೊ.ಎ.ಪಿ.ನಾವಡ, ಪ್ರೊ.ಕೃಷ್ಣಯ್ಯ, ಪ್ರೊ. ಮುರೆಗೆಪ್ಪ, ಪ್ರೊ.ರಾಮ ಸ್ವಾಮಿ, ಡಾ. ಬಸವ ರಾಜ ಕುಡಗುಂಟ, ಪ್ರೊ.ಕೆ. ಎಸ್.ನಾಗರಾಜ, ಡಾ.ಅನುಶ್ರೀ ಶ್ರೀನಿ ವಾಸನ್, ಸೈಯದ್ ಮುಜೀ ಬ್ ಅಹ್ಮದ್ ಅವರು ಕರ್ನಾ ಟಕದ ಅಳಿವಿನಂಚಿ ನಲ್ಲಿರುವ ಭಾಷೆಗಳ ಕುರಿತು ಚರ್ಚಿಸಲಿದ್ದಾರೆ. ವಿವಿಧ ವಿಶ್ವವಿದ್ಯಾನಿಲಯ ಗಳಿಂದ ಸುಮಾರು 75 ಶಿಕ್ಷಕ ಹಾಗೂ ವಿದ್ಯಾರ್ಥಿ ಪ್ರತಿನಿಧಿಗಳು ಭಾಗವಹಿ ಸಲಿದ್ದಾರೆ ಎಂದು ಕಾಲೇಜಿನ ಪ್ರಾಚಾರ್ಯ ಡಾ.ದೇವಿದಾಸ ನಾಯಕ್ ತಿಳಿಸಿದ್ದಾರೆ.

Scanned by CamScanner

ಎನ್ನೆಸ್ಸೆಸ್ ವಿದ್ಯಾರ್ಥಿಗಳಿಂದ ಶ್ರಮದಾನ

ಶೃಂಗೇರಿ: ನಾವು ಸಂಚರಿಸುವ ರಸ್ತೆ ಮತ್ತು ಪರಿಸರವನ್ನು ಸ್ವಚ್ಛವಾಗಿರಿಸಿಕೊಳ್ಳ ಬೇಕು ಎಂಬುದನ್ನು ಪ್ರತಿಯೊಬ್ಬರು ಅರಿತರೆ ಮಾತ್ರ ಗ್ರಾಮಾಂತರ ರಸ್ತೆಗಳು ಅಚ್ಚುಕಟ್ಟಾಗಿರಲು ಸಾಧ್ಯ ಎಂದು ರೋಟರಿ ಕ್ಲಬ್ ಅಧ್ಯಕ್ಷೆ ಎಚ್.ಎಸ್. ಗಣೇಶ್ ಹೇಳಿದರು.

ಅವರು ಇತ್ತೀಚೆಗೆ ಜೆಸಿಬಿಎಂ ಕಾಲೇಜು ಎನ್ನೆಸ್ಸೆಸ್ ವಿದ್ಯಾರ್ಥಿಗಳು ಮತ್ತು ರೋಟರಿ ಕ್ಲಬ್ ಜಂಟಿ ಆಶ್ರಯದಲ್ಲಿ ಪಟ್ಟಣದಿಂದ ವಿದ್ಯಾರಣ್ಯಪುರದವರೆಗಿನ ಒಂದು ಕಿ.ಮೀ. ರಸ್ತೆಯ ಶ್ರಮದಾನ ಉದ್ಘಾಟಿಸಿ ಮಾತನಾಡಿದರು.

ರಸ್ತೆ ಬದಿಗಳು ಗಿಡ ಗಂಟಿಗಳಿಂದ ಮುಚ್ಚಿದ್ದರೆ ಅದು ಅಪಾಯಕ್ಕೆ ಆಹ್ವಾನ ನೀಡಿದಂತೆ. ಇದಲ್ಲವೆ ಸಾರ್ವಜನಿಕರು ತಮ್ಮ ಮನೆ ಮುಂಭಾಗವನ್ನು ಸಾರ್ವಜನಿಕ ರಸ್ತೆಯಾಗಿದ್ದರೂ, ಕಳೆ ನಿರ್ವಹಣೆಗೆ ಆದ್ಯತೆ ನೀಡದಲ್ಲಿ ರಸ್ತೆಗಳು ಸುಸ್ಥಿಯಲ್ಲಿಡಲು ಸಾಧ್ಯ. ವಿದ್ಯಾರ್ಥಿಗಳು ಒಟ್ಟು ಗೂಡಿ ಈ ಕೆಲಸ ಮಾಡುತ್ತಿರುವುದರಿಂದ ತಮ್ಮ ಮನೆಯ ಪರಿಸರವನ್ನು ಶುದ್ಧವಾಗಿರಿಸಿ ಕೊಳ್ಳಬೇಕೆಂಬ ಉತ್ತೇಜನ ಅವರಿಗೂ ದೊರಕಲಿದೆ. ರಸ್ತೆಯ ಮೂಲಕ ಪ್ರತಿ ದಿನ ನೂರಾರು ವಾಹನಗಳು ಪಾದಚಾರಿಗಳು ಸಂಚರಿಸುತ್ತಾರೆ. ರಸ್ತೆ ಬದಿ ಬೆಳೆದಿರುವ ಗಿಡ, ಕಾಲುವೆಗಳನ್ನು ಸ್ವಚ್ಛಗೊಳಿಸಿರುವು ದರಿಂದ ಅನುಕೂಲ ವಾಗಲಿದೆ ಎಂದರು.



ಶೃಂಗೇರಿ ಜೆಸಿಬಿಎಂ ಕಾಲೇಜಿನ ಎನ್ನೆಸ್ಸೆಸ್ ವಿದ್ಯಾರ್ಥಿಗಳು ಮತ್ತು ರೋಟರಿ ಕ್ಲಬ್ ಆಶ್ರಯದಲ್ಲಿ ವಿದ್ಯಾರಣ್ಯಪುರ ರಸ್ತೆಯನ್ನು ಶ್ರಮದಾನದ ಮೂಲಕ ಸ್ವಚ್ಛಗೊಳಿಸಲಾಯಿತು.

ರೋಟರಿ ಕಾರ್ಯದರ್ಶಿ ಡಾ.ಅನಿಶ್ ಕುಮಾರ್ ಮಾತನಾಡಿ, ವಿದ್ಯಾರಣ್ಯ ಪುರದ ನಿವಾಸಿಗಳು ಮಾತ್ರವಲ್ಲದೇ ಅಲ್ಲಿರುವ ವೃದ್ಧಾಶ್ರಮದವರಿಗೂ ರಸ್ತೆ ಬಳಕೆಯಾಗುತ್ತಿದೆ. ರಾತ್ರಿ ವೇಳೆ ಸಂಚರಿಸುವಾಗ ಹಾವು, ಚೇಳುಗಳಿಂದ ರಕ್ಷಣೆ ಪಡೆಯಲು ರಸ್ತೆ ಸ್ವಚ್ಛತೆ ಅಗತ್ಯ ಎಂದರು.

ಶ್ರಮದಾನದಲ್ಲಿ ಎನ್ನೆಸ್ಸೆಸ್ ಅಧಿಕಾರಿಗಳಾದ ಎ.ಜೆ.ಪ್ರಶಾಂತ್, ಲಕ್ಷ್ಮೀನಾರಾಯಣ, ರೋಟರಿ ಕ್ಲಬ್‌ನ ಸಿದ್ದಪ್ಪ ಉಮೇಶ್, ಕಾಡಪ್ಪಗೌಡ ಮತ್ತಿತರರು ಹಾಜರಿದ್ದರು.

Scanned by CamScanner

15, OCTOBER 2016 ಕೃತ ಸಂಗಾತಿ

ಜೀವನದಲ್ಲಿ ನಿರ್ದಿಷ್ಟ ಗುರಿಗಳಿದ್ದಾಗ ಮಾತ್ರ ಯಶಸ್ಸು ಸಾಧ್ಯ

– ಡಾ. ಶ್ರೀ ಮಂದಾರ.



ಜಗತ್ತಿನ ಮಹಾನ್ ಸಾಧಕರುಗಳಾದ ಮಹಾತ್ಮ ಗಾಂಧೀಜಿ, ಅಂಬೇಡ್ಕರ್, ಅಬ್ರಾಹಂ ಲಿಂಕನ್, ಜಗಜೀವನ್ ರಾಮ್, ಡಾ. ಎ.ಪಿ.ಜೆ. ಅಬ್ದುಲ್ ಕಲಾಂ, ಇವರುಗಳು ತಮ್ಮ ಬಡತನ, ಅಸ್ಪೃಶ್ಯತೆ, ಅಂಗವಿಕಲತೆಗಳನ್ನು ಮೆಟ್ಟಿ ನಿಂತು ದೈಹಿಕವಾಗಿ ಇಂದು ನಮ್ಮೊಂದಿಗೆ ಇಲ್ಲದಿದ್ದರೂ ಜನ–ಮಾನಸದಲ್ಲಿ ಇಂದಿಗೂ ಅಚ್ಚಳಿಯದೇ ಬದುಕುಳಿದಿದ್ದಾರೆ. ಇದಕ್ಕೆ ಕಾರಣ ಅವರುಗಳಿಗೆ ಹಿಂದೆ ಒಬ್ಬ ಸಮರ್ಥ ಗುರು ಹಾಗೂ ಹಿಂದಕ್ಕೆ ಒಂದು ನಿರ್ದಿಷ್ಟ ಗುರಿಯಿತ್ತು ಅಲ್ಲದೆ ಅವರುಗಳು ತಮ್ಮ ವಿದ್ಯಾರ್ಥಿ ಜೀವನದಲ್ಲಿ ಸಮಯ ಪ್ರಜ್ಞೆ, ಏನನ್ನಾದರೂ ಸಾಧಿಸಬೇಕೆಂಬ ತುಡಿತ, ಶಿಸ್ತು, ನಿರಂತರ ಪ್ರಯತ್ನ ಹಾಗೆಯೇ ಈ ಮಾನವ ಜನ್ಮ ಬಹುದೊಡ್ಡ ಜನ್ಮ ಇದನ್ನು ಪಡೆಯಲು ಏಳೇಳು ಜನ್ಮಗಳನ್ನು ದಾಟಿ ಬರಬೇಕು, ಆದ್ದರಿಂದ ಅದನ್ನು ಸಮಾಜದ ಅಭಿವೃದ್ಧಿಗೆ ಪೂರಕವಾಗಿರುವಂತೆ ಸದುಪಯೋಗ ಪಡಿಸಿಕೊಳ್ಳಬೇಕು, ಏನನ್ನಾದರು ಸಾಧಿಸಲು ಹೋದಾಗ ಸಮಾಜದಲ್ಲಿ ಕಾಲೇಳೆಯುವವರ ಸಂಖ್ಯೆಯೇ ಇಂದಿನ ಸಮಾಜದಲ್ಲಿ ಜಾಸ್ತಿಯಿದ್ದಾರೆ ಅದ್ಯಾವುದನ್ನು ಲೆಕ್ಕಿಸದೆ ಸಮಸ್ಯೆಗಳನ್ನು ಸವಾಲಾಗಿ ಸ್ವೀಕರಿಸಿ ನಿಮ್ಮ ಪ್ರಯತ್ನಗಳನ್ನು ಮಂದುವರೆಸಿ ಎಂದು ಸರ್ಕಾರಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕ ಡಾ. ಶ್ರೀಮಂದಾರರವರು ವಿದ್ಯಾರ್ಥಿಗಳಿಗೆ ಕಿವಿಮಾತನ್ನು ಹೇಳಿದರು.

ಅವರು ಜೇಸಿಐ ಶೃಂಗೇರಿ ಇದರ ಜೇಸಿ ಸಪ್ತಾಹ–2016ರ ಪ್ರಯುಕ್ತ ಜೆ.ಸಿ.ಬಿ.ಎಂ. ಕಾಲೇಜಿನ ಪದವಿ ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ "ಐ ಸ್ಟಾರ್ಟ್" ಎಂಬ ವಿಷಯದ ಕುರಿತು ನೀಡಿದ ತರಬೇತಿಯನ್ನು ನೀಡುತ್ತಾ ಈ ಮೇಲಿನಂತೆ ಕರೆ ನೀಡಿದರು. ಜಿಲ್ಲಾ ಪಂಚಾಯಿತಿ ಸದಸ್ಯ ಜೇಸಿ. ಶಿವಶಂಕರ್.ಬಿ ಇವರಪ್ಪ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಚಾರ್ಯರಾದ ಡಾ. ದೇವಿದಾಸ್ ನಾಯಕ್, ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಪ್ರಾಶಾಂತ್, ಸಾಮಾಜಿಕ ನ್ಯಾಯ ಸಮಿತಿ ಅಧ್ಯಕ್ಷ ಅಂಬ್ಕೂರು ರಾಮಕೃಷ್ಣ, ಕಾರ್ಯದರ್ಶಿ ಸುಜನ್ ಹಾಗೂ ಅಧ್ಯಕ್ಷ ವಿಜಯ್ ಕುಮಾರ್ ಸುಂಕದಮಕ್ಕಿ, ಅನಿರುದ್ಧ, ಪ್ರಣಮ್ಯ, ಶ್ರೀಧರ್ ಇವರುಗಳು ವೇದಿಕೆಯಲ್ಲಿದ್ದರು.

–ರಾಘು ಮಾತೃಶ್ರೀ

Scanned by CamScanner

ಪುಸ್ತಕ ಓದುವ ಹವ್ಯಾಸ ರೂಢಿಸಿಕೊಳ್ಳಿ: ಚಿಂತನ ಶಿಬಿರದಲ್ಲಿ ಜಿತಕಾಮಾನಂದಜೀ

ಜೆಸಿಬಿಎಂ ಕಾಲೇಜಿನಲ್ಲಿ ಪುಸ್ತಕ ಪ್ರದರ್ಶನ ಕಾಯ್ಯಕಮ ಉದ್ಘಾಟನೆ

• ಕನ್ನಡಪ್ರಭ ವಾರ್ತೆ ಶೃಂಗೇರಿ

ಪುಸ್ತಕಗಳನ್ನು ಓದುವುದರಿಂದ ಓದುಗನ ಜ್ಞಾನದಾಹ ಹೆಚ್ಚುತ್ತದೆ. ವಿದ್ಯಾರ್ಥಿಗಳು ಪುಸ್ತಕಗಳನ್ನು ಓದುವ ಹವ್ಯಾಸ ರೂಢಿಸಿಕೊಳ್ಳಬೇಕು ಎಂದು ಮಂಗಳೂರಿನ ರಾಮಕೃಷ್ಣಮಠದ ಸ್ವಾಮಿ ಜಿತಕಾಮಾನಂದಜೀ ಹೇಳಿದರು.

ಅವರು ಪಟ್ಟಣದ ಜೆಸಿಬಿಎಂ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ನೈತಿಕ ಆಧ್ಯಾತ್ಮಿಕ ಚಿಂತನ ಶಿಬಿರ ಹಾಗೂ ಪುಸ್ತಕ ಪ್ರದರ್ಶನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಪುಸ್ತಕಗಳೆಂದರೆ ಕೇವಲ ಪಠ್ಯಪುಸ್ತಕಗಳಲ್ಲ, ಸಾಹಿತ್ಯ, ವಿಜ್ಞಾನ, ತತ್ವಶಾಸ್ತ್ರ ಸೇರಿದಂತೆ ವಿವಿಧ ಕೃತಿಗಳನ್ನು ಓದಬೇಕು. ಪುಸ್ತಕಗಳು ಜ್ಞಾನದಾಹ ಹೆಚ್ಚಿಸುವುದರ ಜೊತೆಗೆ ಮನರಂಜನೆಯನ್ನೂ ನೀಡುತ್ತವೆ. ಈಚಿನ ದಿನಗಳಲ್ಲಿ ಪುಸ್ತಕ ಓದುವ ಹವ್ಯಾಸ ಕಡಿಮೆಯಾಗುತ್ತದೆ. ಓದುಗರ ಸಂಖ್ಯೆ ಕಡಿಮೆಯಾದಂತೆ ಪುಸ್ತಕ ಸಂಸ್ಕೃತಿ ಮೇಲೆ ಪರಿಣಾಮ ಬೀರುತ್ತದೆ. ನಮ್ಮ ಇತಿಹಾಸ, ಪರಂಪರೆ, ಸಾಮಾಜಿಕ, ಐತಿಹಾಸಿಕ ಸೇರಿದಂತೆ ಅನೇಕ ಕೃತಿಗಳು ನಮಗೆ ಬದುಕನ್ನು ಕಲಿಸಿಕೊಡುತ್ತವೆ. ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಸಾಹಿತ್ಯ ಕೃತಿಗಳನ್ನು ಓದುವ ಪರಿಪಾಠ ಬೆಳಸಿ ಕೊಳ್ಳಬೇಕು. ಗ್ರಂಥಾಲಯಗಳ ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಹೇಳಿದರು.



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ನಡೆದ ನೈತಿಕ ಆಧ್ಯಾತ್ಮಿಕ ಚಿಂತನ ಶಿಬಿರ ಮತ್ತು ಪುಸ್ತಕ ಪ್ರದರ್ಶನ ಸ್ವಾಮಿ ಜಿತಕಾಮಾನಂದಜೀ ಉದ್ಘಾಟಿಸಿದರು.

ಮುಖ್ಯ ಅತಿಥಿಗಳಾಗಿ ಮಂಗಳೂರು ರಾಮಕೃಷ್ಣ ವಿವೇಕನಂದ ಆಶ್ರಮದ ವೀರೇಶಾನಂದಜೀ, ಚಿಂತಕ ಡಾ.ಎಸ್. ರಂಗನಾಥ್, ಪ್ರಾಚಾರ್ಯ ದೇವಿದಾಸ್ ನಾಯಕ್, ಗ್ರಂಥಪಾಲಕ ಪ್ರಸನ್ನಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

Scanned by CamScanner

ಕನ್ನಡಪ್ರಭ
ಬುಧವಾರ 5.10.2016

ಆಧ್ಯಾತ್ಮಿಕ ಚಿಂತನೆ ಅಡಿಪಾಯದಲ್ಲಿ ವ್ಯಕ್ತಿತ್ವ ನಿರ್ಮಾಣ

ಜೆಸಿಬಿಎಂ ಕಾಲೇಜಿನಲ್ಲಿ ವಿವೇಕಾನಂದ, ಗಾಂಧಿ ಅಧ್ಯಯನ ಕೇಂದ್ರ ಉದ್ಘಾಟನೆ

• ಕನ್ನಡಪ್ರಭ ವಾರ್ತೆ ಶೃಂಗೇರಿ

ಸುಸಂಸ್ಕೃತಿ, ಸಂಸ್ಕಾರಗಳಿಲ್ಲದ ಜೀವನ ಜೀವನವೇ ಅಲ್ಲ. ಪ್ರತಿಯೊಬ್ಬರಿಗೂ ವ್ಯಕ್ತಿತ್ವ ಅವಶ್ಯ. ವ್ಯಕ್ತಿತ್ವವನ್ನು ಆಧ್ಯಾತ್ಮಿಕ ಮತ್ತು ನೈತಿಕ ಚಿಂತನೆಗಳ ಅಡಿಪಾಯದಲ್ಲಿ ನಿರ್ಮಿಸಬೇಕಾಗಿದೆ ಎಂದು ಮಂಗಳೂರಿನ ರಾಮಕೃಷ್ಣ ಮಠದ ಅಧ್ಯಕ್ಷ ಸ್ವಾಮಿಜಿ ತಕಾಮಾನಂದಜೀ ಹೇಳಿದರು.

ಪಟ್ಟಣದ ಜೆಸಿಬಿಎಂ ಕಾಲೇಜಿನಲ್ಲಿ ಸ್ವಾಮಿ ವಿವೇಕಾನಂದ ಹಾಗೂ ಗಾಂಧಿ ಅಧ್ಯಯನ ಕೇಂದ್ರ ಉದ್ಘಾಟಿಸಿ ಮಾತನಾಡಿದರು.

ಪುಸ್ತಕದಲ್ಲಿ ಇರೋದನ್ನು ಬಾಯಿಪಾಠ ಮಾಡಿ ಪರೀಕ್ಷೆ ಬರೆಯುವುದೇ ಇಂದಿನ ವಿದ್ಯಾಭ್ಯಾಸವಾಗಿದೆ. ಪರೀಕ್ಷೆ ಮುಗಿಯುತ್ತಿದ್ದಂತೆ ಶಿಕ್ಷಣ ಸ್ಥಗಿತಗೊಳ್ಳುತ್ತಿರುವುದು ದೊಡ್ಡ ದುರಂತ. ನಿಜವಾದ ವಿದ್ಯಾಭ್ಯಾಸದ ಮೂಲತತ್ವವ್ಯಕ್ತಿಯನ್ನು ದೈವತ್ವಕ್ಕೆ ಏರಿಸುವುದು. ಶೀಲ ನಿರ್ಮಾಣದ ಶಿಕ್ಷಣ ಇಂದು ತುರ್ತಾಗಿ ಬೇಕಾಗಿದೆ. ಇಂತಹ ಶಿಕ್ಷಣ ನಿಜವಾದ ಆತ್ಮಸ್ಥೈರ್ಯ ಬೆಳೆಸುತ್ತದೆ. ಬದುಕಿನ ಉನ್ನತ ಮೌಲ್ಯಗಳನ್ನು ಕಲಿಸುತ್ತದೆ. ಎಲ್ಲ ಬಂಧನ ಮತ್ತು ಎಲ್ಲ ಪ್ರೇರಣೆಗಳಿಗೂ ಮನಸ್ಸೇ ಕಾರಣ. ಯಾವುದು ಒಳಿತು, ಯಾವುದು ಕೆಡಕು ಎಂದು ವಿಂಗಡಿಸುವಂತಹ ವಿವೇಕ ಬುದ್ಧಿಯನ್ನು ಎಳೆ ಮನಸ್ಸುಗಳಿಗೆ ಭಿತ್ತಬೇಕಾದ ಕೆಲಸ ಇಂದು ಆಗಬೇಕಾಗಿದೆ. ಆಧ್ಯಾತ್ಮಿಕ ಶಿಕ್ಷಣ ನಮಗೆ ಅದ್ಭುತ ತಾಳ್ಮೆ ಕಲಿಸುತ್ತದೆ ಎಂದರು.



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಸ್ವಾಮಿ ಜಿತಕಾಮನಂದಾಜಿ ಮಾತನಾಡಿದರು.

ತುಮಕೂರು ರಾಮಕೃಷ್ಣ - ವಿವೇಕಾನಂದ ಆಶ್ರಮದ ಅಧ್ಯಕ್ಷ ವೀರೇಶಾನಂದಜೀ ಮಾತನಾಡಿ, ಯುವಶಕ್ತಿಯನ್ನು ಆಕರ್ಷಿಸಿದ ವ್ಯಕ್ತಿತ್ವ ಸ್ವಾಮಿವಿವೇಕಾನಂದ ಅವರದಾಗಿತ್ತು. ನ್ಯಾಯ ಮಾರ್ಗದ ಸೋಲು ಅನ್ಯಾಯ ಮಾರ್ಗದ ಗೆಲುವಿಗಿಂತ ಹೆಚ್ಚು ನೈತಿಕ ಎನ್ನುವುದು ವಿವೇಕಾನಂದರ ದಿವ್ಯವಾಣಿಯಾಗಿತ್ತು. ಇಡೀ ಜಗತ್ತು ಕ್ರಾಂತಿಯ ಭ್ರಮೆಯಲ್ಲಿ ಹೊರಳಾಡುತ್ತಿರುವಾಗ, 'ನಾನು ಕ್ರಾಂತಿಯಲ್ಲಿ ಬದಲಾವಣೆಯ ನಂಬಿಕೆ ಇಟ್ಟಿಲ್ಲ. ನಾನು ವಿಕಾಸವಾದವನ್ನು ನಂಬಿದ್ದೇನೆ ಎಂದು ಜಗತ್ತಿನಾದ್ಯಂತ ಸಾರಿದ ಧೀಮಂತ ವ್ಯಕ್ತಿ ವಿವೇಕಾನಂದರಾಗಿದ್ದರು ಎಂದು ತಿಳಿಸಿದರು. ಮುಖ್ಯ ಅತಿಥಿಗಳಾಗಿ ಬೆಂಗಳೂರಿನ ಚಿಂತಕ ಡಾ.ಎಸ್. ರಂಗನಾಥ್, ಶಿವಮೊಗ್ಗದ ಜೆ.ಎಸ್. ನಟೇಶ್ ಮತ್ತಿತರರು ಇದ್ದರು.

Scanned by CamScanner

ಭಾನುವಾರ • ಅಕ್ಟೋಬರ್ 2, 2016 ಪ್ರಜಾವಾಣಿ

'ಬಾಯಿ ಪಾಠ ಸಂಸ್ಕೃತಿ ತರವಲ್ಲ'

ಪ್ರಜಾವಾಣಿ ವಾರ್ತೆ

ಶೃಂಗೇರಿ: ಪಠ್ಯಪುಸ್ತಕವನ್ನು ಬಾಯಿಪಾಠ ಮಾಡಿಕೊಂಡು ಪರೀಕ್ಷೆಯಲ್ಲಿ ಉತ್ತೀರ್ಣವಾಗುವುದು ಇಂದಿನ ವಿದ್ಯಾಭ್ಯಾಸದ ಪದ್ಧತಿ. ನಿಜವಾದ ವ್ಯಕ್ತಿಯನ್ನು ದೈವತ್ವಕ್ಕೆ ಏರಿಸುವ ಸದ್ಗುಣವನ್ನು ನೀಡುವುದೇ ಶಿಕ್ಷಣದ ಮೂಲತತ್ವವಾಗಬೇಕು ಎಂದು ಮಂಗಳೂರು ರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ಜಿತಕಾಮಾನಂದಜೀ ತಿಳಿಸಿದರು.

ಇಲ್ಲಿನ ಜೆಸಿಬಿಎಂ ಕಾಲೇಜು ಶನಿವಾರ ಆಯೋಜಿಸಿದ ಪ್ರಥಮ ವರುಷದ ನೈತಿಕ-ಆಧ್ಯಾತ್ಮಿಕ ಚಿಂತನ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಯುವಜನತೆಗೆ ವಿವೇಕಾನಂದರ ಸಂದೇಶಗಳು' ಎಂಬ ವಿಷಯದ ಕುರಿತು ತುಮಾಕೂರು ರಾಮಕೃಷ್ಣ- ವಿವೇಕಾನಂದ ಆಶ್ರಮದ ಅಧ್ಯಕ್ಷರಾದ ವೀರೇಶಾನಂದಜೀ ಮಾತನಾಡಿ, ಯುವಜನತೆಗೆ ಪ್ರಸ್ತುತ ಬೇಕಾಗಿರುವುದು ವಿಕಾಸದ ಚಿಂತನೆ. ತಲೆಗೂದಲು ಬೆಳೆಸಿಕೊಂಡರೆ ಸಾಲದು. ತಲೆಯೊಳಗೆ ಬೌದ್ಧಿಕತೆಯ ಸ್ವರೂಪವನ್ನು ರೂಪಿಸಿಕೊಳ್ಳಬೇಕು. ಬುದ್ಧಿ ಹಾಗೂ ಸಾಮರ್ಥ್ಯ ಇರುವುದು ಉತ್ತಮ ಕಾರ್ಯಗಳಿಗಾಗಿ ಮಾತ್ರ ಎಂದರು.

ಜನಸಾಮಾನ್ಯರ ಶೋಷಣೆಗೆ ಅದನ್ನು ಬಳಸಬಾರದು. ಜೀವನದಲ್ಲಿ



ಶೃಂಗೇರಿಯ ಜೆಸಿಬಿಎಂ ಕಾಲೇಜು ಶನಿವಾರ ಆಯೋಜಿಸಿದ ಪ್ರಥಮ ವರುಷದ ನೈತಿಕ ಆಧ್ಯಾತ್ಮಿಕ ಚಿಂತನ ಶಿಬಿರದಲ್ಲಿ ತುಮಕೂರಿನ ರಾಮಕೃಷ್ಣ ಆಶ್ರಮದ ಸ್ವಾಮಿ ವಿರೇಶಾನಂದಜೀ ಉಪನ್ಯಾಸ ನೀಡಿದರು.

ಗುರಿ ಮುಖ್ಯ. ಗುರಿಗಿಂತಲೂ ದಾರಿ ಪ್ರಾಮುಖ್ಯ. ಅನ್ಯಾಯದ ಮಾರ್ಗದಲ್ಲಿ ಗೆಲುವು ಸಾಧಿಸುವುದು ನಿಜವಾದ ಗೆಲುವು ಅಲ್ಲ. ನ್ಯಾಯ ಮಾರ್ಗದಲ್ಲಿ ಸೋಲುವುದು ನಿಜವಾದ ಸೋಲಲ್ಲ. ತಿರುಕನ ಕನಸನ್ನು ಕಾಣದೆ ಸೋಲನ್ನು ಮೆಟ್ಟಿ ನಿಂತು ಅಂತರ್ ಧ್ವನಿಯನ್ನು ಆಲಿಸಿಕೊಂಡು ಸಮಾಜದಲ್ಲಿ ತಲೆ ಎತ್ತಿ ಬದುಕುವುದೇ ಜೀವನದ ಮೌಲ್ಯ ಜೀವನದಲ್ಲಿ ಸುಲಭವಾಗಿ ಸಿಗುವುದು ಸುಲಭವಾಗಿ ಕೈತಪ್ಪಿ ಹೋಗುತ್ತದೆ. ಕಷ್ಟದಿಂದ ಸಂಪಾದಿಸುವ ಚಾರಿತ್ರ್ಯ ಕೊನೆತನಕ ಉಳಿಯುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಬೆಂಗಳೂರಿನ ಚಿಂತಕರಾದ ಡಾ.ಎಸ್.ರಂಗನಾಥ್ ಮತ್ತು ಶಿವಮೊಗ್ಗದ ಚಿಂತಕ ಜಿ.ಎಸ್. ನಟೇಶ್ ಮಾತನಾಡಿದರು. ಸಮಾರಂಭದ ಅಧ್ಯಕ್ಷತೆಯನ್ನು ಕಾಲೇಜಿನ ವಿಶ್ವಸ್ಥ ಮಂಡಳಿಯ ಸದಸ್ಯ ಅನಂತಪದ್ಮನಾಭ ಭಟ್ ವಹಿಸಿದರು. ದಾನಿಗಳಾದ ತಿಮ್ಮಪ್ಪಹೆಗಡೆ. ಪ್ರಾಚಾರ್ಯ ಡಾ.ದೇವಿದಾಸ್ ನಾಯಕ್, ನೂತನವಾಗಿ ಉದ್ಘಾಟನೆಗೊಂಡ ಸ್ವಾಮಿ ವಿವೇಕಾನಂದ ಅಧ್ಯಯನ ಕೇಂದ್ರದ ವಿದ್ಯಾಧರ್, ಉಪನ್ಯಾಸಕಿ ಯಶವಂತಿ ಸುವರ್ಣ ಉಪಸ್ಥಿತರಿದ್ದರು.

Scanned by CamScanner



ಕುವೆಂಪು ವಿಶ್ವವಿದ್ಯಾನಿಲಯ ಅಂತರ್ ಕಾಲೇಜು ಚೆಸ್ ಪಂದ್ಯಾವಳಿಯಲ್ಲಿ ಶ್ರೀ ಜೆಸಿಬಿಎಂ ಕಾಲೇಜು ತೃತೀಯ ಬಹುಮಾನ ಗಳಿಸಿದೆ. ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದ ಜಿ.ಎ.ಭವ್ಯ , ಎಚ್.ಆರ್.ಹರ್ಷಿತ, ಕೆ.ಎಸ್.ಲಕ್ಷ್ಮೀ, ಕೆ.ಎಸ್. ಅಕ್ಷತ ಅವರೊಂದಿಗೆ ಪ್ರಾಂಶುಪಾಲ ಡಾ.ದೇವಿದಾಸ್ ಎಸ್.ನಾಯ್ಕ್, ಡಾ.ವೀರಪ್ಪಗೌಡ, ಎಂ.ವಿ.ಲೋಕೇಶ್ ಮತ್ತಿತರರು ಹಾಜರಿದ್ದರು.

Scanned by CamScanner

ಶೃಂಗೇರಿ: ಸ್ವಾಮಿ ವಿವೇಕಾನಂದ ಮತ್ತು ಗಾಂಧಿ ಅಧ್ಯಯನ ಕೇಂದ್ರಗಳ ಉದ್ಘಾಟನೆ ಮತ್ತು ನೈತಿಕ-ಆಧ್ಯಾತ್ಮಿಕ ಚಿಂತನ ಶಿಬಿರ. ಉದ್ಘಾಟನೆ-ಮಂಗಳೂರಿನ ರಾಮಕೃಷ್ಣ ಮಠದ ಶ್ರೀಸ್ವಾಮಿ ಜಿತಕಾಮಾನಂದಜೀ. ಪ್ರವಚನ-ಯುವಜನತೆಗೆ ವಿವೇಕಾನಂದರ ಸಂದೇಶಗಳು ವಿಷಯದ ಬಗ್ಗೆ ತುಮಕೂರಿನ ರಾಮಕೃಷ್ಣವಿವೇಕಾನಂದ ಆಶ್ರಮದ ಶ್ರೀವಿರೇಶಾನಂದಜೀ. ನವ ಸಮಾಜಕ್ಕೆ ನೈತಿಕ ಲೇಪನದ ಬಗ್ಗೆ ಬೆಂಗಳೂರಿನ ಚಿಂತಕ ಡಾ. ಎಸ್.ರಂಗನಾಥ್,ಮಂಕುತಿಮ್ಮನ ಕಗ್ಗ ಶಿವಮೊಗ್ಗದ ಚಿಂತಕ ಜೆ.ಎಸ್.ನಟೇಶ್, ನಂತರ ವಿದ್ಯಾರ್ಥಿಗಳಿಂದ ಭಾವಗಾನ. ಸ್ಥಳ-ಶ್ರೀಜೆಸಿಬಿಎಂ ಕಾಲೇಜು, ಸಮಯ-ಬೆಳಗೆ 9ರಿಂದ.

Scanned by CamScanner

25-9-16

ವಿಜಯ ಕರ್ನಾಟಕ VK

ಕುವೆಂಪು ಸಾಹಿತ್ಯದಿಂದ ಮೌಢ್ಯ ಬಹಿರಂಗ

■ ವಿಕ ಸುದ್ದಿಲೋಕ ಶೃಂಗೇರಿ

ಸಮಾಜದಲ್ಲಿನ ಮೌಢ್ಯಯುಕ್ತ ವಾತಾವರಣ, ಜಾತ್ಯತೀತ ಚಿಂತನೆಗಳ ವಿಚಾರಗಳನ್ನು ತಮ್ಮ ಸಾಹಿತ್ಯದ ಮೂಲಕ ಜನಸಾಮಾನ್ಯರಿಗೂ ತಲುಪಿಸಿದ ಶ್ರೇಷ್ಠರು ಕುವೆಂಪು ಅವರು ಎಂದು ಸಾಹಿತಿ ಜಯಪ್ರಕಾಶ ಮಾವಿನಕುಳಿ ಹೇಳಿದರು.

ಅವರು ಇತ್ತೀಚೆಗೆ ಜೆಸಿಬಿಎಂ ಕಾಲೇಜಿನಲ್ಲಿ ಆಯೋಜಿಸಿದ್ದ ಕುವೆಂಪು ಸಾಹಿತ್ಯ ಸ್ಪಂದನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಸ್ವಾತಂತ್ರ್ಯ ಬಳಿಕ ಭಾರತ ಸಾಕಷ್ಟು ಸವಾಲುಗಳನ್ನು ಎದುರಿಸುತ್ತಿದೆ. ಅದರ ಬಗ್ಗೆ ಚಿಂತನೆಗಳನ್ನು ಬೆಳೆಸ ಬೇಕಾದವರ ಸ್ವಾರ್ಥಪರ ಯೋಚನೆಗಳಿಂದ ದೇಶದ ಸಮಸ್ಯೆ ಸಮಸ್ಯೆಯಾಗಿ ಉಳಿದಿವೆ. ಕುವೆಂಪು ಅವರ ಸಾಹಿತ್ಯದಲ್ಲಿ ಬರುವ ನೇಗಿಲಯೋಗಿಯ ಬದುಕು ದುಸ್ತರವಾಗಿದೆ ಎಂದರು.

ಕುವೆಂಪು ಕಾದಂಬರಿ ಬಗ್ಗೆ ತೀರ್ಥಹಳ್ಳಿ ಉಪನ್ಯಾಸಕ ಬಿ.ಗಣಪತಿ ಮಾತನಾಡಿ, ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಬರುವ ಪ್ರತಿಪಾತ್ರಗಳಲ್ಲಿ ಕಂಡು ಬರುವ ಶೋಷಣೆಗಳ ವಿರುದ್ಧ ಕುವೆಂಪು ತನ್ನ ನಿಲುವನ್ನು ಹೂವಯ್ಯನ ವೈಚಾರಿಕ ವ್ಯಕ್ತಿ ಮೂಲಕ ವ್ಯಕ್ತಪಡಿಸಿದ್ದಾರೆ ಎಂದರು.



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ಕುವೆಂಪು ಸಾಹಿತ್ಯ ಸ್ಪಂದನ ಕಾರ್ಯಕ್ರಮವನ್ನು ಸಾಹಿತಿ ಜಯಪ್ರಕಾಶ ಮಾವಿನಕುಳಿ ಉದ್ಘಾಟಿಸಿದರು.

ಕುವೆಂಪು ಕಾವ್ಯದ ಬಗ್ಗೆ ಶಿವಮೊಗ್ಗದ ಸಾಹಿತಿ ಶ್ರೀಕಂಠಕೂಡಿಗೆ ಮಾತನಾಡಿ, ಸಾಮಾಜಿಕ, ನೈಸರ್ಗಿಕ ಅನುಭವದ ನಿಸರ್ಗ ಪ್ರೀತಿಯನ್ನು ತನ್ನ ಕಾವ್ಯಗಳಲ್ಲಿ ಕುವೆಂಪು ಅನಾವರಣ ಗೊಳಿಸಿದ್ದಾರೆ ಎಂದರು.

ನಾಟಕ ಕುರಿತು ಆಯನೂರಿನ ಸಾಹಿತಿ ಟಿ.ಸಿ.ಭಾರತಿ ಮಾತನಾಡಿ, ತಮ್ಮ ನಾಟಕಗಳಲ್ಲಿ ಕುವೆಂಪು ಅವರು ಸರಳ ರಗಳೆಯನ್ನು ಬಳಸಿದವರು. ಅವರು ನಾಟಕಗಳಲ್ಲಿ ಶ್ರೇಣಿಕೃತ ವ್ಯವಸ್ಥೆಯನ್ನು ತಿರಸ್ಕರಿಸಿ ಮೌಲ್ಯ ಸಂಸ್ಕೃತಿಯನ್ನು ರೂಪಿಸುವಲ್ಲಿ ಯಶಸ್ಸು ಕಂಡರು ಎಂದರು.

ಕಾಲೇಜಿನ ಪ್ರಾಚಾರ್ಯ ದೇವಿದಾಸ್. ಎಸ್.ನಾಯಕ್ ಅಧ್ಯಕ್ಷತೆ ವಹಿಸಿದ್ದರು. ಕನ್ನಡ ಪ್ರಾಧ್ಯಾಪಕಿ ಅನಿತಾ ಹೆಗ್ಡೋಡು ಹಾಜರಿದ್ದರು.

Scanned by CamScanner

4A
ದಾವಣಗೆರೆ ಉದಯವಾಣಿ
ಗುರುವಾರ | ಸೆಪ್ಟೆಂಬರ್ | 22 | 2016

ಸಾಹಿತ್ಯ ಸ್ಪಂದನ

■ ಜನಪ್ರತಿನಿಧಿಗಳ ಸ್ವಾರ್ಥಪರ ಯೋಚನೆಗಳಿಂದ ದೇಶದ ಸಮಸ್ಯೆ ಬಗೆಹರಿದಿಲ್ಲ

ಕುವೆಂಪು ಜಾತ್ಯತೀತ ವಿಚಾರ ಸಾಮಾನ್ಯರಿಗೆ ತಲುಪಿಸಿದ ಕವಿ

ಶೃಂಗೇರಿ: ಸರ್ವರಿಗೂ ಸಮಬಾಳು-ಸಮಪಾಲು ಎಂಬ ದೃಷ್ಟಿಕೋನದಿಂದ ಒಮ್ಮಿಕ ಸಮೊಳಗಿಸುವ ಅಂತರಂಗದ ಸಾಮರ್ಥ್ಯವನ್ನು ಜಗತ್ತಿಗೆ ತೋರುಹೊಟ್ಟ ಅಪರೂಪದ ಕವಿಗಳಲ್ಲಿ ಕುವೆಂಪು ಒಬ್ಬರು ಎಂದು ಸಾಹಿತಿ ಜಯಪ್ರಕಾಶ ಮಾವಿನಕುಳಿ ಹೇಳಿದರು.

ಅವರು ಇತ್ತೀಚೆಗೆ ಜೆಬಿಎಂ ಕಾಲೇಜಿನಲ್ಲಿ ಆಯೋಜಿಸಿದ್ದ ಕುವೆಂಪು ಸಾಹಿತ್ಯ ಸ್ಪಂದನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಸಮಾಜದಲ್ಲಿ ಮೌಢ್ಯಯುಕ್ತವಾದ ಮಾಹಾಪರಂಪರೆ, ಜಾತ್ಯತೀತ ಚಿಂತನೆಗಳ ವಿಚಾರಗಳನ್ನು ತಮ್ಮ ಸಾಹಿತ್ಯದ ಮೂಲಕ ಜನಸಾಮಾನ್ಯರಿಗೂ ತಲುಪಿಸಿದ ಶ್ರೇಷ್ಠರು. ಸ್ವತಂತ್ರ್ಯದ ಬಳಿಕ ಭಾರತ ಸಾಕಷ್ಟು ಸವಾಲುಗಳನ್ನು ಎದುರಿಸುತ್ತಿದೆ. ಹಸಿವು, ಬಡತನ, ಅಶಾಂತಿ, ಮೌಢ್ಯಗಳು ಇನ್ನೂ ಚಿಂತನೆಗಳನ್ನು ಬೆಳೆಸಬೇಕಾದವರ ಸ್ವಾರ್ಥಪರ ನಿರ್ಮೂಲನೆಯಾಗಿಲ್ಲ. ಅದರ ಬಗ್ಗೆ ಯೋಚನೆಗಳಿಂದ ದೇಶದ ಸಮಸ್ಯೆ ಸಮಸ್ಯೆಯಾಗಿ ಬಗೆಹರಿದಿದೆ ಎಂದರು.



ಶೃಂಗೇರಿ: ಜೆಬಿಎಂ ಕಾಲೇಜಿನಲ್ಲಿ ಕುವೆಂಪು ಸಾಹಿತ್ಯ ಸ್ಪಂದನ ಕಾರ್ಯಕ್ರಮವನ್ನು ಸಾಹಿತಿ ಜಯಪ್ರಕಾಶ ಮಾವಿನಕುಳಿ ಉದ್ಘಾಟಿಸಿದರು.

ಕುವೆಂಪು ಕಾವ್ಯದ ಕುರಿತು ವಿಷಯಮಂಡನೆ ಮಾಡಿದ ಸಾಹಿತಿ ಶ್ರೀಕಂಠಕೂಡಿಗೆ ಮಾತನಾಡಿ, ಸಾಮಾಜಿಕ, ಧಾರ್ಮಿಕ ಅಸಮಾನತೆಯ ವಿರುದ್ಧ ಪ್ರತಿಭಟಿಸುವ ಕನ್ನಡ ಕಾವ್ಯಗಳಲ್ಲಿ ಕುವೆಂಪು ಅಮರರಾಗಿದ್ದಾರೆ. ಅಲಕ್ಷಿತ ವರ್ಗಗಳು ಹಾಗೂ ದಮನಿತ ಎರೋಧಿ ನೆಲೆಗಳು ಅವರ ಕಾವ್ಯದ ಕೇಂದ್ರಬಿಂದು. ಪ್ರಕೃತಿಯು ತೂಪು, ಹಿರೇಕಾಯಿ, ಮಳೆ, ಹುಲಿ ಅವರ ಕಾವ್ಯ ಸೃಷ್ಟಿಗೆ ಸ್ಫೂರ್ತಿ. ಹೆಣ್ಣನ್ನು ಭಗವತಿ ಎಂದು ಕರೆದ ಅವರ ಕಾವ್ಯಗಳಲ್ಲಿ ವೈಚಾರಿಕ ದೃಷ್ಟಿಕೋನದ ಹಿನ್ನೆಲೆಯಲ್ಲಿ ವಿವಿಧ ಮಜಲುಗಳನ್ನು ಕಾಣಬಹುದು ಎಂದರು.

ಕುವೆಂಪು ನಾಟಕ ಕುರಿತು ಅಯಿತಾಡಿನ ಸಾಹಿತಿ ಟಿ.ಸಿ.ಭಾರತಿ ಮಾತನಾಡಿ, ತಮ್ಮ ನಾಟಕಗಳಲ್ಲಿ ಕುವೆಂಪು ಅವರು ಸರಳ ಭಾಷೆಯನ್ನು ಬಳಸಿದ್ದಾರೆ. ಅವರು ನಾಟಕಗಳಲ್ಲಿ ತೆಗಳಿಕ್ಕಿಕ ಪ್ರಜ್ಞೆಯ ವಿಸ್ತಾರವಿದೆ. ಹಳ್ಳಿ ಸಂಸ್ಕೃತಿಯನ್ನು ರೂಪಿಸುವಲ್ಲಿ ಯಶಸ್ವಿಯಾಗಿದ್ದಾರೆ ಎಂದರು. ಕುವೆಂಪು ಕಾದಂಬರಿ ಬಗ್ಗೆ ವಿಮರ್ಶಕಿಯಾದ ಉಮಾವಸತಿ ಬಿ.ಗಣಪತಿ ಮಾತನಾಡಿ, ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಬರುವ ಸಾಹಿತ್ಯಗಳಲ್ಲಿ ಕಂಡು ಬರುವ ಹೋಮಾಗಳ ವಿಧವನ್ನು ಕುವೆಂಪು ತಮ್ಮ ನಿಲುವನ್ನು ಹೊರಹಾಕುವ ವೈಚಾರಿಕ ದೃಷ್ಟಿಯ ಮೂಲಕ ವ್ಯಕ್ತಪಡಿಸಿದ್ದಾರೆ ಎಂದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಚಾರ್ಯ ದೇವಿದಾಸ್. ಎಸ್.ನಾಯಕ ವಹಿಸಿದ್ದರು. ಕನ್ನಡ ಪ್ರಾಧ್ಯಾಪಕಿ ಅನಿತಾ ದೇಸ್ಗೋಡು ಕಾರ್ಯಕ್ರಮದಲ್ಲಿ ಹಾಜರಿದ್ದರು.

Scanned by CamScanner

vishwavani.news
21.09.2016
ಬುಧವಾರ

ರಕ್ತದಾನ ಅತ್ಯಂತ ಶ್ರೇಷ್ಠ ಕಾರ್ಯ

ವಿಶ್ವವಾಣಿ ಸುದ್ದಿಮನೆ ಶೃಂಗೇರಿ

ರಕ್ತದಾನ ಅತ್ಯಂತ ಶ್ರೇಷ್ಠವಾದ ಕಾರ್ಯ. ಈ ಕೆಲಸದಲ್ಲಿ ಯುವ ಜನತೆ ಹೆಚ್ಚಿನ ಸಂಖ್ಯೆಯಲ್ಲಿ ತೊಡಗಿಸಿಕೊಂಡು ಸಮಾಜ ಸೇವೆಗೆ ಮುಂದಾಗಬೇಕು ಎಂದು ಜೆಸಿಬಿಎಂ ಕಾಲೇಜು ವಿಶ್ವಸ್ತ ಮಂಡಳಿ ಸದಸ್ಯ ಅನಂತ ಪದ್ಮನಾಭ ಭಟ್ ಹೇಳಿದರು.

ಶ್ರೀ ಜೆಸಿಬಿಎಂ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ, ಯುವ ರೆಡ್ ಕ್ರಾಸ್ ಘಟಕಗಳ ಸಂಯುಕ್ತಾಶ್ರಯದಲ್ಲಿ ಪ್ರಧಾನಿ ನರೇಂದ್ರ ಮೋದಿ ಹುಟ್ಟು ಹಬ್ಬದ ಅಂಗವಾಗಿ ಏರ್ಪಡಿಸಿದ್ದ ರಕ್ತದಾನ ಶಿಬಿರ ಉದ್ಘಾಟಿಸಿ ಮಾತನಾಡಿದರು.

ಕಾಲೇಜಿನ ಪ್ರಾಚಾರ್ಯ ಡಾ. ದೇವಿದಾಸ್ ಎಸ್. ನಾಯಕ್ ಅಧ್ಯಕ್ಷತೆ ವಹಿಸಿದ್ದರು. ರಕ್ತದಾನ ಶಿಬಿರ ಏರ್ಪಡಿಸಿದ ಕಾಲೇಜಿನ ಎನ್‌ಎಸ್‌ಎಸ್ ಘಟಕ, ಯುವ ರೆಡ್ ಕ್ರಾಸ್ ಘಟಕಗಳನ್ನು ಅಭಿನಂದಿಸಿದರು. ಶ್ರೀ ಶಾರದಾ ಧನ್ವಂತರಿ ಆಸ್ಪತ್ರೆ ಸಹಯೋಗದಲ್ಲಿ ಜರುಗಿದ ರಕ್ತದಾನ ಶಿಬಿರದಲ್ಲಿ 65 ಜನ ಸ್ವಯಂ ಪ್ರೇರಿತರಾಗಿ ರಕ್ತದಾನ ಮಾಡಿದರು. ರಕ್ತದಾನ ಶಿಬಿರದ ನೇತೃತ್ವವನ್ನು ಪ್ರಶಾಂತ್, ಲಕ್ಷ್ಮೀನಾರಾಯಣ ವಹಿಸಿದ್ದರು. ಎನ್‌ಎಸ್‌ಎಸ್ ಮುಂದಾಳುಗಳಾದ ಸ್ವಾಗತ್ ಇದ್ದರು.



ರಕ್ತದಾನ ಶಿಬಿರದಲ್ಲಿ ಕಾಲೇಜಿನ ಎನ್‌ಎಸ್‌ಎಸ್, ಯುವ ರೆಡ್‌ಕ್ರಾಸ್ ಘಟಕಗಳ 65 ವಿದ್ಯಾರ್ಥಿಗಳು ಸ್ವಯಂ ಪ್ರೇರಿತರಾಗಿ ರಕ್ತದಾನ ಮಾಡಿದರು.

Scanned by CamScanner

ಸಮಾಚಾರ
ಸಣ್ಣದಲ್ಲ

ಕುವೆಂಪು ಸಾಹಿತ್ಯ ಸ್ಪಂದನ

ಶೃಂಗೇರಿ: ಸರ್ವರಿಗೂ ಸಮಬಾಳು-ಸಮಪಾಲು ಎಂಬ ಮನೋಭಾವದೊಂದಿಗೆ ಬದುಕಿ ತನ್ನೊಳಗಿರುವ ಅಂತರಂಗದ ಸಾಮರ್ಥ್ಯವನ್ನು ಜಗತ್ತಿಗೆ ತೋರಿಸಿಕೊಟ್ಟ ಅಪರೂಪದ ಕವಿಗಳಲ್ಲಿ ಕುವೆಂಪು ಸಹಾ ಒಬ್ಬರು. ಜಾತ್ಯತೀತ ಚಿಂತನೆಗಳ ವಿಚಾರಗಳನ್ನು ತಮ್ಮ ಸಾಹಿತ್ಯದ ಮೂಲಕ ಜನಸಾಮಾನ್ಯರಿಗೆ ತಲುಪಿಸಿದ ಶ್ರೇಷ್ಠ ಕವಿ ಕುವೆಂಪು ಎಂದು ಸಾಹಿತಿ ಜಯಪ್ರಕಾಶ ಮಾವಿನಕುಳಿ ಹೇಳಿದರು. ಸಾಹಿತ್ಯ ಅಕಾಡೆಮಿ ಹಾಗೂ ಜೆಸಿಬಿಎಂ ಕಾಲೇಜಿನ ಸಹಯೋಗದಲ್ಲಿ ಡಾ.ಟಿ.ಎಂ.ಎ.ಪೈ ಸಭಾಂಗಣದಲ್ಲಿ ಶನಿವಾರ ಆಯೋಜಿಸಿದ್ದ ಕುವೆಂಪು ಸಾಹಿತ್ಯ ಸ್ಪಂದನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಸ್ವಾತಂತ್ರ್ಯದ ಬಳಿಕ ಭಾರತ ಸಾಕಷ್ಟು ಸವಾಲುಗಳನ್ನು ಎದುರಿಸುತ್ತಿದೆ. ಹಸಿವು, ಬಡತನ, ಅಶಾಂತಿ, ಮೌಢ್ಯಗಳು ಇನ್ನೂ ನಿರ್ಮೂಲನೆಗೊಂಡಿಲ್ಲ. ಅದರ ಬಗ್ಗೆ ಚಿಂತನೆಗಳನ್ನು ಬೆಳೆಸಬೇಕಾದವರ ಸ್ವಾರ್ಥ ಪರ ಯೋಚನೆಗಳಿಂದ ದೇಶದ ಸಮಸ್ಯೆಗಳು ಇನ್ನೂ ಸಮಸ್ಯೆಯಾಗಿ ಉಳಿದಿವೆ. ಕುವೆಂಪು ಸಾಹಿತ್ಯದಲ್ಲಿ ಬರುವ ನೇಗಿಲಯೋಗಿಯ ಬದುಕು ದುಸ್ತರವಾಗಿದೆ ಎಂದರು. ಆಯನೂರಿನ ಸಾಹಿತಿ ಟಿ.ಸಿ.ಭಾರತಿ ಕುವೆಂಪು ನಾಟಕ ಕುರಿತು ಮಾತನಾಡಿದರು. ತೀರ್ಥಹಳ್ಳಿಯ ಉಪನ್ಯಾಸಕ ಬಿ.ಗಣಪತಿ ಕುವೆಂಪುರ ಕಾದಂಬರಿಗಳ ಬಗ್ಗೆ ತಿಳಿಸಿರು. ಕಾಲೇಜು ಪ್ರಾಚಾರ್ಯ ದೇವಿದಾಸ್.ಎಸ್.ನಾಯಕ್ ಅಧ್ಯಕ್ಷತೆ ವಹಿಸಿದರು. ಕನ್ನಡ ಪ್ರಾಧ್ಯಾಪಕಿ ಅನಿತಾ ಇದ್ದರು.



ಕುವೆಂಪು ಸಾಹಿತ್ಯ ಸ್ಪಂದನ ಕಾರ್ಯಕ್ರಮವನ್ನು ಸಾಹಿತಿ ಜಯಪ್ರಕಾಶ್ ಮಾವಿನಕುಳಿ ಉದ್ಘಾಟಿಸಿದರು.

Scanned by CamScanner

ಸಾಹಿತ್ಯ ಓದಿನಿಂದ ಬದಲಾವಣೆ ಸಾಧ್ಯ

ವಿಶ್ರಾಂತ ಪ್ರಾಧ್ಯಾಪಕ ಶ್ರೀಕಂಠ ಕೂಡಿಗೆ ಅಭಿಮತ | ಕುವೆಂಪು ಸಾಹಿತ್ಯ ಸ್ಪಂದನ ಕಾರ್ಯಕ್ರಮ

■ ವಿಜಯವಾಣಿ ಸುದ್ದಿಜಾಲ ಶೃಂಗೇರಿ

ಪ್ರತಿಯೊಬ್ಬ ಮನುಷ್ಯ ಹುಟ್ಟುತ್ತ ವಿಶ್ವಮಾನವನಾಗಿ ಬೆಳೆಯುತ್ತ ಅಲ್ಪ ಮಾನವ ನಾಗುತ್ತಿದ್ದಾನೆ ಎಂದು ಕುವೆಂಪು ವಿವಿ ವಿಶ್ರಾಂತ ಪ್ರಾಧ್ಯಾಪಕ ಶ್ರೀಕಂಠ ಕೂಡಿಗೆ ಹೇಳಿದರು.

ಜೆಸಿಬಿಎಂ ಕಾಲೇಜಿನಲ್ಲಿ ಆಯೋಜಿಸಿದ್ದ ಕುವೆಂಪು ಸಾಹಿತ್ಯ ಸ್ಪಂದನ ಕಾರ್ಯಕ್ರಮದಲ್ಲಿ ಮಾತನಾಡಿ, ಸಾಮಾಜಿಕ ಕೆಡುಕುಗಳಿಗೆ ಕುವೆಂಪು ಸಾಹಿತ್ಯಗಳಲ್ಲಿ ಉತ್ತರವಿದೆ. ಅವರ ಸಾಹಿತ್ಯವನ್ನು ಓದುವುದರಿಂದ ಸಾಮಾಜಿಕ ಬದಲಾವಣೆ ಸಾಧ್ಯ. ದೇವರನ್ನು ಸಿಸ್ಗರ್ದಲ್ಲಿ ಕಾಣುವ ಆಧ್ಯಾತ್ಮಿಕವನ್ನು ಸಾಹಿತ್ಯದಲ್ಲಿ ಹೆಚ್ಚಾಗಿ ಕಾಣುತ್ತೇವೆ ಎಂದು ಹೇಳಿದರು.

ಸಾಹಿತಿ ಅಯನೂರಿನ ಭಾರತಿ ಮಾತನಾಡಿ, ಸಾಮಾನ್ಯರನ್ನ ಶ್ರೀಸಾಮಾನ್ಯರಂತೆ ಕಂಡ ಕವಿ ಕುವೆಂಪು, ತಮ್ಮ 25ನೇ ವಯಸ್ಸಿನಲ್ಲಿಯೇ ಸಾಮಾಜಿಕ ಲೋಪದೋಷಗಳನ್ನು ವಿಮರ್ಶಿಸುವ ಸಾಮರ್ಥ್ಯ ಹಾಗೂ ಆಳವಾದ ಗಂಭೀರ ಚಿಂತನಾಶಕ್ತಿ ಹೊಂದಿದ್ದರು. ಕುವೆಂಪು ಅವರ ದೃಷ್ಟಿಯಲ್ಲಿ ಯಾರೂ ಮುಖ್ಯರಲ್ಲ ಎಂದರು.



ಶೃಂಗೇರಿಯ ಜೆಸಿಬಿಎಂ ಕಾಲೇಜಿನಲ್ಲಿ ಆಯೋಜಿಸಿದ್ದ ಕುವೆಂಪು ಸಾಹಿತ್ಯ ಸ್ಪಂದನ ಕಾರ್ಯಕ್ರಮವನ್ನು ಸಾಹಿತಿ ಜಯಪ್ರಕಾಶ್ ಮಾವಿನಕುಳಿ ಉದ್ಘಾಟಿಸಿದರು.

> ಕುವೆಂಪು ಅವರು ಕೃತರನ್ನು ಯೋಗಿ, ನೇಗಿಲಯೋಗಿ ಎಂದು ಕರೆದರು. ಇಂದು ಜಗತ್ತಿನಲ್ಲಿ ಎಲ್ಲದಕ್ಕಿಂತ ಹಣ ಮುಖ್ಯವಾಗಿದೆ. ಕುವೆಂಪು ಅವರ ಸಾಹಿತ್ಯ ಮೈಗೂಡಿಸಿಕೊಂಡರೆ ಸಾಮಾಜಿಕ ಬದಲಾವಣೆ ಸಾಧ್ಯ.
> | ಜಯಪ್ರಕಾಶ್ ಮಾವಿನಕುಳಿ ಸಾಹಿತಿ

ತುಂಗಾ ಕಾಲೇಜಿನ ಪ್ರಾಚಾರ್ಯ ಬಿ.ಗಣಪತಿ ಮಾತನಾಡಿ, ವಿದ್ಯಾರ್ಥಿಗಳು ಪುಸ್ತಕ ಓದುವ ಹವ್ಯಾಸ ಬೆಳಸಿಕೊಳ್ಳಬೇಕು. ಆಗ ನಿಮಗೆ ಸೋಲು ಎಂಬುದು ಬರುವುದಿಲ್ಲ. ಕುವೆಂಪು ಅವರ ಕಾನೂರು ಹೆಗ್ಗಡತಿ ಹಾಗೂ ಮಲೆಗಳಲ್ಲಿ ಮದುಮಗಳು ಕಾದಂಬರಿಗಳ ವೈಶಿಷ್ಟ್ಯಗಳ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು.

ಕಾಲೇಜಿನ ಪ್ರಾಚಾರ್ಯ ದೇವಿದಾಸ್ ನಾಯ್ಕ್ ಮತ್ತಿತರರು ಇದ್ದರು.

Scanned by CamScanner

18.09.2016
ಭಾನುವಾರ



ಕುವೆಂಪು ವಿಶ್ವವಿದ್ಯಾಲಯದ ಅಂತಾಕಾಲೇಜು ಪುರುಷರ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಶೃಂಗೇರಿಯ ಜೆಸಿಬಿಎಂ ಕಾಲೇಜಿನ ವಿದ್ಯಾರ್ಥಿಗಳು ತೃತೀಯ ಸ್ಥಾನ ಪಡೆದಿದ್ದು, ಕಾಲೇಜಿನ ಪ್ರಾಂಶುಪಾಲರು ಹಾಗೂ ಆಡಳಿತ ಮಂಡಳಿ ಅವರನ್ನು ಅಭಿನಂದಿಸಿದ್ದಾರೆ. ಪ್ರಶಸ್ತಿ ಪಡೆದ ವಿದ್ಯಾರ್ಥಿಗಳಾದ ವೀರರಾಜು, ಸಂಪತ್ ಕುಮಾರ್, ಹನುಮಂತ, ಸೂರ್ಯಕುಮಾರ್, ಪ್ರೀತಮ್ ಇದ್ದರು.

Scanned by CamScanner

ಕನ್ನಡಪ್ರಭ 02
18.9.2016 SUNDAY



ಶೃಂಗೇರಿ ಪಟ್ಟಣದ ಜೆಸಿಬಿಎಂ ಕಾಲೇಜಿನ ಕ್ರೀಡಾ ತಂಡ ಕುವೆಂಪು ವಿಶ್ವವಿದ್ಯಾನಿಲಯ ಅಂತರ ಕಾಲೇಜು ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ತೃತೀಯ ಸ್ಥಾನ ಗಳಿಸಿದೆ.

Scanned by CamScanner

ದಾವಣಗೆರೆ ಉದಯವಾಣಿ
ಶುಕ್ರವಾರ | ಸೆಪ್ಟೆಂಬರ್ | 16 | 2016

ಸಮಾನತೆ ಇದ್ದರೂ ನಡೆಯುತ್ತಿದೆ ಮಹಿಳಾ ದೌರ್ಜನ್ಯ: ಸುಧೀರ್



ಶೃಂಗೇರಿ: 'ಮಹಿಳಾ ಸಮಾನತೆ' ವಿಚಾರ ಸಂಕಿರಣದಲ್ಲಿ ಕೊಪ್ಪ ವಕೀಲ ಸುಧೀರ್‌ಕುಮಾರ್ ಮುರೊಳ್ಳಿ ಮಾತನಾಡಿದರು.

ಶೃಂಗೇರಿ: ಪುರುಷರಿಗೆ ನೀಡುತ್ತಿರುವ ಸಮಾನತೆಯನ್ನು ಆಕೆ ಪಡೆದರೂ ಕೂಡಾ ಅವಿರತವಾಗಿ ಅತ್ಯಾಚಾರಗಳು ಹಾಗೂ ಭ್ರೂಣಹತ್ಯೆ ನಡೆಯುತ್ತಲೇ ಇದೆ. ಮಾರುಕಟ್ಟೆಯ ಸರಕುಗಳಿಗೆ ಹೆಣ್ಣನ್ನು ಬಳಸಿಕೊಳ್ಳುವ ಪ್ರವೃತ್ತಿ ಹೆಚ್ಚಾಗಿದೆ ಎಂದು ಕೊಪ್ಪದ ವಕೀಲ ಸುಧೀರ್‌ಕುಮಾರ್ ಮುರೊಳ್ಳಿ ಹೇಳಿದರು.

ಅವರು ಇತ್ತೀಚೆಗೆ ಜೆಸಿಬಿಎಂ ಕಾಲೇಜಿನಲ್ಲಿ ಜೆಸೀ ಸಪ್ತಾಹದಲ್ಲಿ ಆಯೋಜಿಸಿದ್ದ ಮಹಿಳಾ ಸಮಾನತೆಯ ಬಗ್ಗೆ ಮಾತನಾಡಿದರು.

ಹೆಣ್ಣಿಗೆ ವಿಧವಾ ವಿವಾಹ ನಿರ್ಬಂಧವಿದ್ದು ಆಸ್ತಿಯಲ್ಲಿ ಹಕ್ಕುಗಳನ್ನು ಕೊಡುತ್ತಿರಲಿಲ್ಲ ಇಂದಿನ ಸಮಾಜ ಹೆಣ್ಣಿಗೆ ಪ್ರಾತಿನಿಧ್ಯವನ್ನು ನೀಡಿದೆ, ಪುರುಷರಿಗೆ ನೀಡುತ್ತಿರುವ ಸಮಾನತೆಯನ್ನು ಆಕೆ ಪಡೆದರೂ ಕೂಡಾ ಅತ್ಯಾಚಾರಗಳು ಹಾಗೂ ಭ್ರೂಣಹತ್ಯೆ ನಿರಂತರವಾಗಿ ನಡೆಯುತ್ತಿದೆ. ಮಾರುಕಟ್ಟೆಯ ಸರಕುಗಳಿಗೆ ಹೆಣ್ಣನ್ನು ಬಳಸಿಕೊಳ್ಳುವ ಪ್ರವೃತ್ತಿ ಹೆಚ್ಚಾಗಿದೆ. ಪೋಕ್ಸೋ ಕಾಯ್ದೆಯು ಮಹಿಳೆಯರ ಪರವಾಗಿದ್ದರೂ ಶೋಷಣೆ ನಡೆದಾಗ ಅದನ್ನು ಹೇಳಿಕೊಳ್ಳುವ ಮನೋಪ್ರವೃತ್ತಿಯನ್ನು ಅವರು ಬೆಳೆಸಿಕೊಳ್ಳಬೇಕು. ಹೆಣ್ಣು ಬದಲಾವಣೆಯ ಹರಿಕಾರರಾಗಬೇಕು ಎಂದರು. .

ಜೆಸಿಬಿಎಂ ಕಾಲೇಜಿನ ಪ್ರಾಚಾರ್ಯ ಡಾ।ದೇವಿದಾಸ್ ನಾಯಕ್ ಮಾತನಾಡಿ, ಎಲ್ಲಾ ಕ್ಷೇತ್ರಗಳಲ್ಲಿ ತನ್ನ ಅಸ್ತಿತ್ವವನ್ನು ಅಂತರ್ಗತ ಮಾಡಿಕೊಳ್ಳುವ ಮಹಿಳೆಯರು ಮುನ್ನಡೆ ಸಾಧಿಸುತ್ತಿದ್ದಾರೆ. ಆದರೆ ಆಕೆಯ ಮೇಲೆ ನಡೆಯುತ್ತಿರುವ ಶೋಷಣೆಗಳು ಕೊನೆಯಾಗಬೇಕು. ಕುಟುಂಬದಲ್ಲಿ, ಸಮಾಜದಲ್ಲಿ ಸಮಾನತೆಯ ದೃಷ್ಟಿಕೋನದಿಂದ ಆಕೆಯನ್ನು ಕಾಣಬೇಕು. ಅವಳ ಸೃಜನಶೀಲತೆಗೆ ಪೂರಕವಾದ ವಾತಾವರಣ ಸೃಷ್ಟಿಸಿದಾಗ ಮಾತ್ರ ಮಹಿಳೆ ದೇಶದ ಉನ್ನತಿಗೆ ಅನನ್ಯಕೊಡುಗೆ ನೀಡಲು ಸಾಧ್ಯ ಎಂದರು.

ಅಧ್ಯಕ್ಷತೆಯನ್ನು ಜೆಸಿಐ ಅಧ್ಯಕ್ಷ ವಿಜಯಕುಮಾರ್ ವಹಿಸಿದ್ದರು. ಕಾರ್ಯಕ್ರಮದಲ್ಲಿ ತಾ.ಪಂ ಸದಸ್ಯ ಕೆ.ಆರ್.ವೆಂಕಟೇಶ್, ಲಯನ್ಸ್ ಮಾಜಿ ಅಧ್ಯಕ್ಷ ಕೆ.ಎಂ.ಮಂಜುನಾಥ್, ಪ.ಪಂ ಸದಸ್ಯೆ ಶೋಭಾ ಅನಂತಯ್ಯ ,ಜೆಸಿಐ ಕಾರ್ಯದರ್ಶಿ ಸುಜನ್ ಉಪಸ್ಥಿತರಿದ್ದರು.

Scanned by CamScanner

ವಿಜಯ ಕರ್ನಾಟಕ VK
ಶುಕ್ರವಾರ, 16 ಸೆಪ್ಟೆಂಬರ್ 2016, ಶಿವಮೊಗ್ಗ

ಎನ್ನೆಸ್ಸೆಸ್‌ನಿಂದ ಸೇವಾ ಮನೋಭಾವ

■ ವಿಕ ಸುದ್ದಿಲೋಕ ಶೃಂಗೇರಿ

ವಿಶ್ವಭ್ರಾತೃತ್ವ, ಸಾಮಾಜಿಕ ಪ್ರಜ್ಞೆ, ಪರಿಸರ ಪ್ರೇಮ ಮನೋಭಾವ, ದೇಶಭಕ್ತಿ, ಸಹಬಾಳ್ವೆ ಎಲ್ಲವನ್ನೂ ಎನ್‌ಎಸ್‌ಎಸ್ ಗೀತೆಗಳ ಅಧ್ಯಯನದಿಂದ ತಿಳಿಯಬಹುದು ಎಂದು ಕಲ್ಕುಟ್ಟಿ ಪುಸ್ತಕದ ಮನೆಯ ಸಂಗೀತ ಸಂಯೋಜಕ ಎಚ್. ಎಂ.ನಾಗರಾಜರಾವ್ ಹೇಳಿದರು.

ಅವರು ಮಂಗಳವಾರ ಶ್ರೀಜೆಬಿಎಂ ಕಾಲೇಜಿನಲ್ಲಿ ಎನ್‌ಎಸ್‌ಎಸ್ ಘಟಕ ಆಯೋಜಿಸಿದ್ದ ಎನ್‌ಎಸ್‌ಎಸ್ ಗೀತೆಗಳ ಗಾಯನ ತರಬೇತಿ ಕಾರ್ಯಾಗಾರದಲ್ಲಿ ಮಾತನಾಡಿದರು.

ಎನ್ನೆಸ್ಸೆಸ್ ಅಧಿಕಾರಿ ಎ.ಜಿ.ಪ್ರಶಾಂತ್ ಮಾತನಾಡಿ, ಕಾಲೇಜಿನ ಘಟಕವು ವಿದ್ಯಾರ್ಥಿಗಳಿಗೆ ಸಂಗೀತ, ಸಾಹಿತ್ಯ, ನಾಟಕ ಹಾಗೂ ವಿಶ್ವಾಸ ಮುಂತಾದ ಕ್ಷೇತ್ರಗಳಲ್ಲಿ ಹಲವಾರು ವೇದಿಕೆಗಳನ್ನು ಒದಗಿಸಿಕೊಟ್ಟಿದೆ ಎಂದರು.



ಶೃಂಗೇರಿ ಜೆಬಿಎಂ ಕಾಲೇಜಿನಲ್ಲಿ ಎನ್‌ಎಸ್‌ಎಸ್ ಘಟಕ ಆಯೋಜಿಸಿದ್ದ ಎನ್‌ಎಸ್‌ಎಸ್ ಗೀತೆಗಳ ಗಾಯನ ತರಬೇತಿ ಕಾರ್ಯಾಗಾರದಲ್ಲಿ ಎಚ್.ಎಂ.ನಾಗರಾಜರಾವ್ ತರಬೇತಿ ನೀಡಿದರು.

ಎನ್.ಎಚ್. ಲಕ್ಷ್ಮೀನಾರಾಯಣ್ ಮಾತನಾಡಿ, ಗಾಯಕ ನಾಗರಾಜರಾವ್ ಐದು ವರ್ಷಗಳಿಂದ ಎನ್‌ಎಸ್‌ಎಸ್ ಗೀತ ಗಾಯನ ಶಿಬಿರ ನಡೆಸಿಕೊಡುತ್ತಿರುವುದು ಹೆಮ್ಮೆಯ ಸಂಗತಿ ಎಂದರು. ದರ್ಶನ್ ಸ್ವಾಗತಿಸಿ, ಸ್ವಾಗತ್ ನಿರೂಪಿಸಿ, ಪ್ರಿಯಾಂಕ ವಂದಿಸಿದರು.

Scanned by CamScanner

ವಿಶ್ವವಾಣಿ 15-9-16

ಸಂಗೀತದಿಂದ ಸಾತ್ವಿಕತೆ ಲಭ್ಯ: ನಾಗರಾಜ

ವಿಶ್ವವಾಣಿ ಸುದ್ದಿಮನೆ ಶೃಂಗೇರಿ

ಪ್ರತಿಯೊಬ್ಬ ವ್ಯಕ್ತಿಯಲ್ಲೂ ಸಾತ್ವಿಕತೆ ಮೂಡಲು ಸಂಗೀತ ನೆರವಾಗುತ್ತದೆ. ನಿರಂತರ ನಾದೋಪಾಸನೆ ಮನಸ್ಸಿಗೆ ನೆಮ್ಮದಿ, ಶಾಂತಿ ನೀಡುತ್ತದೆ. ವಿದ್ಯಾರ್ಥಿ ಜೀವನದಲ್ಲಿ ಬರುವ ಎನ್‌ಎಸ್‌ಎಸ್ ನಂಥ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದರೆ ಪೂರ್ಣತೆಗೆ ಬೇಕಾದ ಎಲ್ಲ ವಿದ್ಯೆಗಳನ್ನು ಕಲಿಯಬಹುದಾಗಿದೆ ಎಂದು ಕಲ್ಕಟ್ಟೆ ಪುಸ್ತಕದ ಮನೆ ಖ್ಯಾತ ಸಂಗೀತ ಸಂಯೋಜಕ ಎಚ್.ಎಂ.ನಾಗರಾಜ ರಾವ್ ಹೇಳಿದರು.

ಜೆಸಿಬಿಎಂ ಕಾಲೇಜಿನಲ್ಲಿ ಎನ್‌ಎಸ್‌ಎಸ್ ಘಟಕದ ವತಿಯಿಂದ ಆಯೋಜಿಸಿದ್ದ ಎನ್‌ಎಸ್‌ಎಸ್ ಗೀತೆಗಳ ಗಾಯನ ತರಬೇತಿ ಕಾರ್ಯಾಗಾರದಲ್ಲಿ ಮಾತನಾಡಿದರು.

ಎನ್‌ಎಸ್‌ಎಸ್ ಗೀತೆಗಳಲ್ಲಿ ಕಾರ್ಯಕ್ರಮಗಳ ಸಂಪೂರ್ಣ ರೂಪು ರೇಷೆಗಳನ್ನು ಒಳಗೊಂಡಿದೆ. ಪರಿಸರ ಪ್ರೇಮ, ದೇಶಭಕ್ತಿ, ಸಹಬಾಳ್ವೆ ಎಲ್ಲ ವನ್ನೂ ಈ ಗೀತೆಗಳ ಅಧ್ಯಯನದಿಂದ ತಿಳಿಯಬಹುದು. ಇದರಿಂದ ನಮ್ಮ ಸಂಕಲ್ಪ ಯಶಸ್ವಿಯಾಗಲು ನಾವು ಸನ್ಮಾರ್ಗದಲ್ಲಿ ನಡೆಯುವುದು ಹೇಗೆ ಎಂಬುದನ್ನು ಗ್ರಹಿಸಬಹುದಾಗಿದೆ ಎಂದರು.



ಶ್ರೀ ಜೆಸಿಬಿಎಂ ಕಾಲೇಜಿನಲ್ಲಿ ಎನ್‌ಎಸ್‌ಎಸ್ ಘಟಕದ ವತಿಯಿಂದ ಆಯೋಜಿಸಿದ್ದ ಎನ್‌ಎಸ್‌ಎಸ್ ಗೀತೆಗಳ ಗಾಯನ ತರಬೇತಿ ಕಾರ್ಯಾಗಾರದಲ್ಲಿ ಸಂಗೀತ ಸಂಯೋಜಕ ಎಚ್.ಎಂ.ನಾಗರಾಜ ರಾವ್ ಮಾತನಾಡಿದರು.

ಎನ್‌ಎಸ್‌ಎಸ್ ಅಧಿಕಾರಿ ಶ್ರೀ ಎನ್.ಎಚ್.ಲಕ್ಷ್ಮೀನಾರಾಯಣ್, ರಾಜ್ಯ ಎನ್‌ಎಸ್‌ಎಸ್ ಅಧಿಕಾರಿ ಪ್ರಶಸ್ತಿ ಪುರಸ್ಕೃತರಾದ ಎ.ಜಿ. ಪ್ರಶಾಂತ್ ಮಾತನಾಡಿದರು. ಸ್ವಯಂ ಸೇವಕ ಸ್ವಾಗತ್ ನಿರೂಪಿಸಿ, ದರ್ಶನ್ ಸ್ವಾಗತಿಸಿ, ಪ್ರಿಯಾಂಕಾ ವಂದಿಸಿದರು.

Scanned by CamScanner

ರಾಜ್ಯಮಟ್ಟಕ್ಕೆ ಆಯ್ಕೆ

ಶೃಂಗೇರಿ: ಚಿಕ್ಕಮಗಳೂರಿನಲ್ಲಿ ನಡೆದ ಸ.ಪ.ಪೂ. ಕಾಲೇಜುಗಳ ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ ಜೆಸಿಬಿಎಂ ಸಿಂಯು ಕಾಲೇಜಿನ ವಿದ್ಯಾರ್ಥಿಗಳು ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಬಾಲಕರ ವಿಭಾಗದ ವಾಲಿಬಾಲ್ ಬ್ಯಾಡ್ಮಿಂಟನ್ ಮತ್ತು ಟೇಬಲ್ ಟೆನ್ನಿಸ್‌ನಲ್ಲಿ ಪ್ರಥಮ ಹಾಗೂ ಚೆಸ್‌ನಲ್ಲಿ ಇಬ್ಬರು ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಬಾಲಕಿಯರ ವಿಭಾಗದಲ್ಲಿ ಇಬ್ಬರು ಪ್ರಥಮ ಸ್ಥಾನ, ಥ್ರೋಬಾಲ್ ಥ್ರೋದಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ. ಬಾಲಕಿಯರ ವಿಭಾಗದಲ್ಲಿ ವಾಲಿಬಾಲ್ ಬ್ಯಾಡ್ಮಿಂಟನ್ ಪ್ರಥಮ ಸ್ಥಾನ, ಟೇಬಲ್ ಟೆನ್ನಿಸ್‌ನಲ್ಲಿ ದ್ವಿತೀಯ ಸ್ಥಾನ ಗಳಿಸಿದ್ದಾರೆ.

ವಿಜೇತ ವಿದ್ಯಾರ್ಥಿಗಳೊಂದಿಗೆ ದೈಹಿಕ ಶಿಕ್ಷಣ ನಿರ್ದೇಶಕರಾದ ಎ.ಪಿ.ಟೋಣೇಶ್, ಎ.ಜಿ. ಪ್ರಶಾಂತ್, ಕೆ.ಎಸ್.ಸಂತೋಷ್‌ಕುಮಾರ್, ಬಿ.ಡಿ.ಸಂತೋಷ್, ಚಂದ್ರಕಲಾ, ಕುಮಾರಿ, ಮಹಾಬಾನು ಉಪಸ್ಥಿತರಿದ್ದರು. ಪ್ರಾಚಾರ್ಯ ಡಾ. ದೇವದಾಸ್ ಎಸ್. ನಾಯಕ್ ಹಾಗೂ ಆಡಳಿತ ಮಂಡಳಿ ಅಭಿನಂದಿಸಿದೆ.



ಚಿಕ್ಕಮಗಳೂರಿನಲ್ಲಿ ನಡೆದ ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ ರಾಜ್ಯ ಮಟ್ಟಕ್ಕೆ ಆಯ್ಕೆಯಾದ ಶೃಂಗೇರಿ ಜೆಸಿಬಿಎಂ ಕಾಲೇಜು ವಿದ್ಯಾರ್ಥಿಗಳೊಂದಿಗೆ ಉಪನ್ಯಾಸಕರು.

Scanned by CamScanner

ಸಾಹಿತ್ಯ ಕಾರ್ಯಕ್ರಮ

ಶೃಂಗೇರಿ: ಶ್ರೀಜೆಸಿಬಿಎಂ ಕಾಲೇಜಿನಲ್ಲಿ ಸೆ.17ರಂದು ಬೆಳಗ್ಗೆ 9.30ಕ್ಕೆ ಸಾಹಿತ್ಯ ಅಕಾಡೆಮಿ ಸಹಯೋಗದಲ್ಲಿ ಕುವೆಂಪು ಸಾಹಿತ್ಯ ಸ್ಪಂದನ ನಡೆಯಲಿದೆ. ಸಾಹಿತಿ ಜಯ ಪ್ರಕಾಶ ಮಾವಿನಕುಳಿ ಕಾರ್ಯಕ್ರಮ ಉದ್ಘಾಟಿಸಲಿದ್ದು, ಕುವೆಂಪು ಕಾವ್ಯದ ಬಗ್ಗೆ ಶ್ರೀಕಂಠಕೊಡಿಗೆ, ಕುವೆಂಪು ನಾಟಕಗಳ ಬಗ್ಗೆ ಆಯನೂರಿನ ಟಿ.ಸಿ.ಭಾರತಿ, ಕುವೆಂಪು ಕಾದಂಬರಿಗಳ ಬಗ್ಗೆ ತೀರ್ಥಹಳ್ಳಿಯ ಬಿ.ಗಣಪತಿ ಉಪನ್ಯಾಸ ನೀಡಲಿದ್ದಾರೆ. ಕಾಲೇಜಿನ ಪ್ರಾಚಾರ್ಯ ದೇವಿದಾಸ ನಾಯಕ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

Scanned by CamScanner

ಕನ್ನಡಪ್ರಭ
ಬುಧವಾರ 14.9.2016



ಶೃಂಗೇರಿ ಪಟ್ಟಣದ ಜೆ.ಸಿ.ಬಿ.ಎಂ. ಕಾಲೇಜಿನಲ್ಲಿ ನಡೆದ ಗುರುನಮನ ಕಾರ್ಯಕ್ರಮದಲ್ಲಿ ಡಾ.ರಾಧಾಕೃಷ್ಣನ್ ಕುರಿತ ಪುಸ್ತಕಗಳ ಪ್ರದರ್ಶನಕ್ಕೆ ಬೆಂಗಳೂರು ಮಹಾರಾಣಿ ಕಾಲೇಜಿನ ಪ್ರಾಧ್ಯಾಪಕಿ ಡಾ. ಆಶಾದೇವಿ ಚಾಲನೆ ನೀಡಿದರು.

Scanned by CamScanner

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI « SHIVAMOGGA
4 | ಸೋಮವಾರ
12 ಸೆಪ್ಟೆಂಬರ್ 2016
12 SEPTEMBER 2016
ಟಾಪ್ ನ್ಯೂಸ್

ಪ್ರಾತಿನಿಧ್ಯವಿದ್ದರೂ ತಪ್ಪದ ಸ್ತ್ರೀ ಶೋಷಣೆ

ಸುಧೀರ್‌ಕುಮಾರ್ ಮುರೊಳ್ಳಿ ಅಸಮಾಧಾನ | ಜೇಸಿ ಸಪ್ತಾಹದಲ್ಲಿ ಮಹಿಳಾ ಸಮಾನತೆ ಕುರಿತ ಉಪನ್ಯಾಸ

■ ವಿಜಯವಾಣಿ ಸುದ್ದಿಜಾಲ ಶೃಂಗೇರಿ

ಹೆಣ್ಣಿನ ಜೀವನವನ್ನು ಅನೇಕ ಸಮಸ್ಯೆಗಳು ಆವರಿಸಿಕೊಂಡಿವೆ. ಪ್ರಪಂಚದೆಲ್ಲೆಡೆ ಯುದ್ಧ, ಗಲಭೆಗಳು ಉದ್ಭವಿಸಿದರೆ ಅದರ ನೋವನ್ನು ಮೊದಲು ಅನುಭವಿಸುವವರು ಮಹಿಳೆಯರು ಎಂದು ಹಿರಿಯ ವಕೀಲ ಸುಧೀರ್‌ಕುಮಾರ್ ಮುರೊಳ್ಳಿ ಹೇಳಿದರು.

ಜೆಸಿಬಿಎಂ ಕಾಲೇಜಿನಲ್ಲಿ ಜೆಸಿಐ ಸಂಸ್ಥೆಯಿಂದ ಏರ್ಪಡಿಸಿದ್ದ ಮಹಿಳಾ ಸಮಾನತೆ ಕುರಿತ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದರು.

ಬಹಳ ಹಿಂದೆ ವಿದ್ಯಾ ನಿವಾಸಕ್ಕೆ ಅವಕಾಶ ಇರಲಿಲ್ಲ. ಆಸ್ತಿಯಲ್ಲಿ ಪಾಲು ಕೊಡುತ್ತಿರಲಿಲ್ಲ. ಇಂದಿನ ಸಮಾಜದಲ್ಲಿ ಸ್ತ್ರೀಯರಿಗೆ ಪ್ರಾತಿನಿಧ್ಯವಿದೆ. ಪುರುಷರಿಗೆ ಸೀಮಿತವಾದ ಸಮಾನತೆ ಕೊಡುತ್ತಿದ್ದರೂ ಅತ್ಯಾಚಾರ, ಹೆಣ್ಣು ಭ್ರೂಣ ಹತ್ಯೆಗಳು ನಡೆಯುತ್ತಲೇ ಇವೆ. ಇದನ್ನು ತಡೆಯಲು ಮಹಿಳೆಯರೇ ಮುಂದಾಗಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಜೆಸಿಐ ಅಧ್ಯಕ್ಷ ವಿಜಯಕುಮಾರ್ ಮಾತನಾಡಿ, ಸ್ತ್ರೀಯರ ಸೇವಾದಾಖಲೆಗಳನ್ನು ಗೌರವಿಸಬೇಕು ಎಂದರು.

ವೇದಿಕೆಯಲ್ಲಿ ಸಂಸ್ಥೆ ಕಾರ್ಯದರ್ಶಿ ವೆಂಕಟೇಶ್, ಲಯನ್ಸ್ ಮಾಜಿ ಅಧ್ಯಕ್ಷ ಕೆ.ಎಂ. ಮಂಜುನಾಥ್, ವಲಯ ಸದಸ್ಯೆ ಶೋಭಾ, ಜೆಸಿಐ ಕಾರ್ಯದರ್ಶಿ ಸುಜನ್ ಇದ್ದರು.



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ಜೆಸಿಐ ಸಂಸ್ಥೆ ಆಯೋಜಿಸಿದ್ದ ಮಹಿಳಾ ಸಮಾನತೆ ಕುರಿತ ಉಪನ್ಯಾಸ ಕಾರ್ಯಕ್ರಮದಲ್ಲಿ ವಕೀಲ ಸುಧೀರ್ ಕುಮಾರ್ ಮುರೊಳ್ಳಿ ಮಾತನಾಡಿದರು.

> ಎಲ್ಲ ಕ್ಷೇತ್ರಗಳಲ್ಲಿ ಮಹಿಳೆಯರು ಮುನ್ನಡೆ ಸಾಧಿಸುತ್ತಿದ್ದಾರೆ. ಆದರೆ ಅವರ ಮೇಲಿನ ದೌರ್ಜನ್ಯಗಳು ಸಂಪೂರ್ಣವಾಗಿ ನಿಂತಿಲ್ಲ. ಹೆಣ್ಣನ್ನು ಸಮಾನತೆಯಿಂದ ನೋಡಬೇಕು. ಅವರ ಸೃಜನಶೀಲತೆಗೆ ಪೂರಕ ವಾತಾವರಣ ಕಲ್ಪಿಸಬೇಕು.
>
> (ಡಾ. ನಂದಿತಾ ನಾಯಕ್
> ಜೆಸಿಬಿಎಂ ಪ್ರಾಚಾರ್ಯೆ

Scanned by CamScanner

ಕನ್ನಡಪ್ರಭ

ಶನಿವಾರ 10.9.2016



ಶೃಂಗೇರಿ ಜೆಸಿಬಿಎಂ ಕಾಲೇಜಿನ ಡಾ.ಟಿ.ಎಂ.ಎ ಪೈ ಸಭಾಂಗಣದಲ್ಲಿ ನಡೆದ ರೋಟರ್ಯಾಕ್ಟ್ ಪದಗ್ರಹಣ ಸಮಾರಂಭ ರಾಜೇಗೌಡ ಉದ್ಘಾಟಿಸಿದರು.

Scanned by CamScanner

ಕನ್ನಡಪ್ರಭ
ಗುರುವಾರ 8.9.2016

ಭಾರತೀಯ ಸಂಸ್ಕೃತಿ: ಗುರುವಿಗೆ ಮಹತ್ತರ ಸ್ಥಾನ

ರಾಮಕೃಷ್ಣರಾವ್ ದತ್ತಿ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿದ ಆಶಾದೇವಿ

• ಕನ್ನಡಪ್ರಭ ವಾರ್ತೆ ಶೃಂಗೇರಿ

ಭಾರತೀಯ ಸಂಸ್ಕೃತಿ, ಪರಂಪರೆಯಲ್ಲಿ ಗುರುವಿಗೆ ಮಹತ್ತರ ಸ್ಥಾನವಿದೆ. ತಾಯಿ ಮಗು ನಡುವಿನ ಸಂಬಂಧ ಹೇಗಿರುತ್ತದೆಯೋ ಹಾಗೆಯೇ ಗುರುಶಿಷ್ಯರ ನಡುವಿನ ಸಂಬಂಧವೂ ಅಷ್ಟೇ ಪ್ರಮುಖವಾದುದು. ಗುರುಹಿರಿಯರಲ್ಲಿ ಭಯ ಭಕ್ತಿ ತೋರುವುದು ವಿದ್ಯಾರ್ಥಿಗಳ ಪ್ರಮುಖ ಕಾರ್ಯವಾಗಿದೆ ಎಂದು ಬೆಂಗಳೂರು ಮಹಾರಾಣಿ ಕಾಲೇಜಿನ ಪ್ರಾಧ್ಯಾಪಕಿ ಡಾ.ಆಶಾದೇವಿ ಹೇಳಿದರು.

ಪಟ್ಟಣದ ಶ್ರೀ ಜೆಸಿಬಿಎಂ ಕಾಲೇಜಿನ ಡಾ.ಟಿ.ಎಂ.ಎ.ಪೈ ಸಭಾಂಗಣದಲ್ಲಿ ಹಳೇ ವಿದ್ಯಾರ್ಥಿ ಸಂಘ ಆಯೋಜಿಸಿದ್ದ ಗುರು ನಮನ ಹಾಗೂ ಡಾ.ಬಿ.ರಾಮಕೃಷ್ಣರಾವ್ ದತ್ತಿ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ನಮಗೆ ತಾಯಿ ಋಣ ತೀರಿಸಲು ಸಾಧ್ಯವಿಲ್ಲವೋ ಹಾಗೆಯೇ ಗುರುವಿನ ಋಣ ತೀರಿಸುವುದು ಅಸಾಧ್ಯ. ಗುರು ಶಿಷ್ಯರ ನಡುವಿನ ಸಂಬಂಧಕ್ಕೆ ಕೊನೆಯೆಂಬುದೇ ಇಲ್ಲ. ಗುರುಗಳ ಬಗ್ಗೆ ಗೌರವ ಇಟ್ಟುಕೊಳ್ಳುವುದು, ಗೌರವ, ಕೃತಜ್ಞತೆ ಸಲ್ಲಿಸುವುದು ಶಿಷ್ಯರ ಪ್ರಮುಖ ಕರ್ತವ್ಯವಾಗಿದೆ ಎಂದರು.



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ನಡೆದ ಗುರು ನಮನ ಕಾರ್ಯಕ್ರಮದಲ್ಲಿ ಡಾ. ಆಶಾದೇವಿ ಮಾತನಾಡಿದರು.

ಹಳೇ ವಿದ್ಯಾರ್ಥಿ ಸಂಘದ ಸಂಸ್ಥಾಪಕ ಅಧ್ಯಕ್ಷ ಕೆ.ವಿ.ಆರ್.ಠ್ಯಾಗೂರ್ ಮಾತನಾಡಿ, ಗುರುವು ತನ್ನ ಸೇವೆಯಲ್ಲಿ ತನ್ನ ಅನುಭವದ ಅಮೃತವನ್ನು ಶಿಷ್ಯರಿಗೆ ಧಾರೆ ಎರೆದು ಜ್ಞಾನದ ಭಂಡಾರವನ್ನು ನೀಡಿದವರಾಗಿದ್ದಾರೆ. ಹಣ ಸಂಪಾದನೆ ಮುಖ್ಯವಲ್ಲ, ನಮ್ಮಲ್ಲಿರುವ ಜ್ಞಾನವನ್ನು ಇತರರಿಗೆ ಧಾರೆಯೆರೆದಾಗ ಮಾತ್ರ ನಮ್ಮ ಜೀವನ ಸಾರ್ಥಕವಾಗುತ್ತದೆ ಎಂದು ಹೇಳಿದರು.

ಹಳೇವಿದ್ಯಾರ್ಥಿ ಸಂಘದ ಅಧ್ಯಕ್ಷ ಕೆ.ಎಸ್.ವೆಂಕಟೇಶ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಮುಖ್ಯ ಅತಿಥಿಗಳಾಗಿ ಪ್ರಾಚಾರ್ಯ ದೇವಿದಾಸ್ ನಾಯಕ್, ಶೇಲಜಾ ರತ್ನಾಕರ ಹೆಗ್ಡೆ, ಭಾಗ್ಯ ಠ್ಯಾಗೋರ್ ಮತ್ತಿತರರು ಉಪಸ್ಥಿತರಿದ್ದರು. ಕಾಲೇಜಿನ ಎಲ್ಲಾ ಪ್ರಾಧ್ಯಾಪಕರಿಗೆ ಗುರು ನಮನ ಸಲ್ಲಿಸಲಾಯಿತು. ಎಚ್.ಸಿ.ವೀರಪ್ಪಗೌಡ ಪಂದತಿಯನ್ನು ಅಭಿನಂದಿಸಲಾಯಿತು.

Scanned by CamScanner

ಗುರುವಾರ, 8 ಸೆಪ್ಟೆಂಬರ್ 2016, ಶಿವಮೊಗ್ಗ

ವಿಜಯಕರ್ನಾಟಕ VK

ಗುರು-ಶಿಷ್ಯರ ಸಂಬಂಧ ಪವಿತ್ರವಾದದು

ಶೃಂಗೇರಿ: ತಾಯಿ ಮಗುವಿನ ಸಂಬಂಧದಂತೆ ಗುರು ಶಿಷ್ಯರ ಸಂಬಂಧವೂ ಅಷ್ಟೇ ಪವಿತ್ರವಾದದು ಎಂದು ಬೆಂಗಳೂರಿನ ಮಹಾರಾಣ ಕಾಲೇಜು ಪ್ರಾಧ್ಯಾಪಕಿ ಡಾ. ಆಶಾದೇವಿ ಹೇಳಿದರು.

ಅವರು ಬುಧವಾರ ಶ್ರೀ ಜೆಸಿಬಿಎಂ ಕಾಲೇಜಿನ ಹಳೆ ವಿದ್ಯಾರ್ಥಿ ಸಂಘ ಆಯೋಜಿಸಿದ್ದ ಗುರುನಮನ ಹಾಗೂ ಡಾ. ಕೆ.ಬಿ.ರಾಮಕೃಷ್ಣರಾವ್ ದತ್ತಿ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ತಾಯಿ ಋಣ ತೀರಿಸಲು ಹೇಗೆ ಸಾಧ್ಯವಿಲ್ಲವೋ, ಹಾಗೆಯೇ ಗುರುವಿನ ಋಣ ತೀರಿಸಲು ಸಾಧ್ಯವಿಲ್ಲ. ಆದರೆ, ಗುರು ಶಿಷ್ಯರ ಸಂಬಂಧಕ್ಕೆ ಕೊನೆ ಎಂಬುದಿಲ್ಲ. ಗುರುಗಳ ಬಗ್ಗೆ ಗೌರವ ಇಟ್ಟುಕೊಳ್ಳುವುದರ ಜತೆಗೆ ಪರೋಕ್ಷ ಗುರುಗಳ ಬಗ್ಗೆ ಕೃತಜ್ಞತೆ ಹಾಗೂ ಗೌರವವಿರಬೇಕು. ಇತ್ತೀಚಿನ ದಿನಗಳಲ್ಲಿ ಗುರು ಶಿಷ್ಯರ ನಡುವೆ ಕಂದಕ ಸೃಷ್ಟಿಯಾಗಿದೆ.



ಶೃಂಗೇರಿಯ ಜೆಸಿಬಿಎಂ ಕಾಲೇಜಿನ ಹಳೆ ವಿದ್ಯಾರ್ಥಿ ಸಂಘ ಆಯೋಜಿಸಿದ್ದ ಗುರುನಮನ, ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಡಾ.ಆಶಾದೇವಿ ಮಾತನಾಡಿದರು.

ಆದರೆ, ಗುರುವಿನಲ್ಲಿರುವ ಪ್ರೀತಿ ಕಡಿಮೆಯಾಗಿಲ್ಲ. ಕಾರ್ಯ ಪಾಲನೆಯಲ್ಲಿ ಅಲ್ಪಸ್ವಲ್ಪ ಬದಲಾವಣೆಯಾಗಿದೆ ಎಂದರು.

ಹಳೆ ವಿದ್ಯಾರ್ಥಿ ಸಂಘದ ಸ್ಥಾಪಕ ಅಧ್ಯಕ್ಷ ಕೆ.ವಿ.ಆರ್.ಟ್ಯಾಗೂರ್ ಮಾತನಾಡಿ, ಗುರುವು ಅನುಭವದ ಅಮೃತವನ್ನು ಶಿಷ್ಯರಿಗೆ ಧಾರೆ ಎರೆದು ಜ್ಞಾನದ ಭಂಡಾರವನ್ನು ನೀಡಿದವರಾಗಿದ್ದಾರೆ. ಹಣ ಸಂಪಾದನೆ ಮುಖ್ಯವಲ್ಲ. ಜ್ಞಾನದ ಭಂಡಾರವನ್ನು ಇತರರಿಗೆ ಧಾರೆ ಎರೆದಾಗ ಜೀವನ ಸಾರ್ಥಕ್ಯ ಪಡೆಯಲು ಸಾಧ್ಯ ಎಂದರು.

ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಕೆ.ಎಸ್. ವೆಂಕಟೇಶ್ ಅಧ್ಯಕ್ಷತೆ ವಹಿಸಿದ್ದರು. ಕಾಲೇಜಿನ ಪ್ರಾಚಾರ್ಯ ಡಾ.ದೇವಿದಾಸ ನಾಯಕ್, ಭಾಗ್ಯ ಟ್ಯಾಗೂರ್, ಶೈಲಜಾ ರತ್ನಾಕರ ಹೆಗ್ಡೆ ಕೊಳಿ ಶ್ರೀನಿವಾಸ್, ಸುಂದರೇಶ್ ಉಪಸ್ಥಿತರಿದ್ದರು.

ಇದೇ ಸಂದರ್ಭ ಕಾಲೇಜಿನ ಎಲ್ಲ ಪ್ರಾಧ್ಯಾಪಕರಿಗೆ ಗುರು ನಮನ ಸಲ್ಲಿಸಲಾಯಿತು. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸಹಾಯಧನದ ಚೆಕ್ ನೀಡಲಾಯಿತು. ನಿವೃತ್ತ ಪ್ರಾಂಶುಪಾಲ ಡಾ.ವೀರಪ್ಪಗೌಡ ದಂಪತಿಯನ್ನು ಗೌರವಿಸಲಾಯಿತು. ಕೆ.ಟಿ.ಮಂಜುನಾಥ್ ಸ್ವಾಗತಿಸಿ, ಉಮೇಶ್ ಪುದುವಾಳ್ ನಿರೂಪಿಸಿ, ಎ.ಜಿ.ಪ್ರಶಾಂತ್ ವಂದಿಸಿದರು.

Scanned by CamScanner

ನಾಗೇಶ್ ಪತ್ರಿಕೆ ದಿನಾಂಕ : 08 - 09 - 2016

ಗುರು ಶಿಷ್ಯರ ಸಂಬಂಧಕ್ಕೆ ಕೊನೆ ಎಂಬುದಿಲ್ಲ: ಡಾ.ಆಶಾದೇವಿ



ಶೃಂಗೇರಿ: ಇಲ್ಲಿನ ಶ್ರೀ ಜೆ.ಸಿ.ಬಿ.ಎಂ. ಕಾಲೇಜಿನ ಮುಖ್ಯ ಸಭಾಂಗಣದಲ್ಲಿ, ಗುರುನಮನ ಹಾಗೂ ಡಾ.ಕೆ.ಬಿ.ರಾಮಕೃಷ್ಣರಾವ್ ದತ್ತಿ ಉಪ ನ್ಯಾಸ ಕಾರ್ಯಕ್ರಮ ಸೆ. 7 ರಂದು ನಡೆಯಿತು. ಕಾಲೇಜಿನ ಹಳೆ ವಿದ್ಯಾರ್ಥಿ ಸಂಘ ಆಯೋಜಿಸಿದ್ದ ಈ ಕಾರ್ಯಕ್ರಮವನ್ನು ಬೆಂಗಳೂರಿನ ಮಹಾ ರಾಣಿ ಕಾಲೇಜಿನ ಪ್ರಾಧ್ಯಾಪಕಿ ಡಾ.ಆಶಾದೇವಿ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಾತನಾಡಿ ದ ಅವರು, ಜಗತ್ತಿನಲ್ಲಿ ತಾಯಿ ಮಗುವಿನ ಸಂಬಂಧ ಸರ್ವ ಶ್ರೇಷ್ಠವಾದ್ದುದ್ದಾಗಿದೆ. ಹಾಗೆಯೇ ಗುರು ಶಿಷ್ಯರ ಸಂಬಂಧವೂ ಅಷ್ಟೇ ಪವಿತ್ರವಾದ್ದು ದ್ದಾಗಿದೆ. ತಾಯಿ ಋಣ ತೀರಿಸಲು ಹೇಗೆ ಸಾಧ್ಯ ವಿಲ್ಲವೋ, ಹಾಗೆಯೇ ಗುರುವಿನ ಋಣ ತೀರಿಸಲು ಸಹ ಸಾಧ್ಯವಿಲ್ಲ ಎಂದರು. ಗುರು ಶಿಷ್ಯರ ಸಂಬಂಧಕ್ಕೆ ಕೊನೆ ಎಂಬುದಿಲ್ಲ. ಅದು ಯಾವತ್ತು ಮುಪ್ಪಾಗದು. ಅದು ಹೂವಿನ ಹಾಗೇ ಮೃದು ವಾಗಿರುತ್ತದೆ. ಗುರುಗಳ ಬಗ್ಗೆ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಕೃತಜ್ಞತೆ ಹಾಗೂ ಗೌರವವನ್ನು ಇಟ್ಟುಕೊಳ್ಳಬೇಕು ಎಂದು ಹೇಳಿದರು. ಇತ್ತೀಚೆಗೆ ಎಲ್ಲಾ ಜನಾಂಗಗಳಲ್ಲಿ ಗುರು ಶಿಷ್ಯರ ನಡುವೆ ಕಂದಕ ಸೃಷ್ಟಿಯಾಗುತ್ತಿದೆ. ಆದರೆ ಗುರುವಿನಲ್ಲಿರುವ ಪ್ರೀತಿ ಕಡಿಮೆಯಾಗಿಲ್ಲ. ಕಾರ್ಯ ಪಾಲನೆಯಲ್ಲಿ ಅಲ್ಪ ಸಲ್ಪ ಬದಲಾವಣೆಯಾಗಿದೆ. ಗುರು ದೀಪದ ಶಕ್ತಿ ಇದ್ದಂತೆ. ಅವರು ತಮ್ಮಲ್ಲಿನ ಭೌತಿಕ ಜ್ಞಾನವನ್ನು ಶಿಷ್ಯರಿಗೆ ವರ್ಗಾಯಿಸುತ್ತಾರೆ. ನಮ್ಮ ಸಮುದಾಯದಲ್ಲಿನ ನೂರು ಬಗೆಯ ವಿಕಾರಗಳಿಂದಾಗಿ ಸಮುದಾಯ ಒಡೆಯದಂತೆ ನೋಡಿಕೊಳ್ಳುವಲ್ಲಿ ಗುರುವಿನ ಪಾತ್ರ ಮಹತ್ವ ದ್ದಾಗಿದೆ ಎಂದರು. ಹಳೆ ವಿದ್ಯಾರ್ಥಿ ಸಂಘದ ಸ್ಥಾಪಕ ಅಧ್ಯಕ್ಷ ಕೆ.ವಿ.ಆರ್.ಟ್ಯಾಗೂರ್ ಮಾತನಾಡಿ, ಜೀವನದಲ್ಲಿ ಆಸೆ ಹಾಗೂ ಗುರಿಗಳನ್ನು

4 ನೇ ಪುಟಕ್ಕೆ...

...1 ನೇ ಪುಟದಿಂದ

ಇಟ್ಟುಕೊಳ್ಳಬೇಕು. ಅವೆರಡು ಇಟ್ಟುಕೊಳ್ಳದಿದ್ದರೆ ಜೀವನದಲ್ಲಿ ಏನನ್ನು ಸಾಧಿಸಲಾಗದು. ಗುರುವು ತಮ್ಮಲ್ಲಿನ ಅನುಭವದ ಅಮೃತವನ್ನು ಶಿಷ್ಯರಿಗೆ ಧಾರೆ ಎರೆದು ಜ್ಞಾನದ ಭಂಡಾರವನ್ನು ನೀಡುವ ವರಾಗಿದ್ದಾರೆ. ಹಣ ಸಂಪಾದನೆ ಮುಖ್ಯವಲ್ಲ. ಜ್ಞಾನದ ಭಂಡಾರವನ್ನು ಇತರರಿಗೆ ಧಾರೆ ಎರೆದಾಗ ಜೀವನ ಸಾರ್ಥಕ್ಯ ಪಡೆಯಲು ಸಾಧ್ಯವಾಗುತ್ತದೆ ಎಂದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಕೆ.ಎಸ್.ವೆಂಕಟೇಶ್ ವಹಿಸಿದ್ದರು. ಕಾಲೇಜಿನ ಪ್ರಾಚಾರ್ಯ ಡಾ.ದೇವಿದಾಸನಾಯಕ್, ಭಾಗ್ಯ ಟ್ಯಾಗೂರ್, ಶೈಲಜಾ ರತ್ನಾಕರ ಹೆಗ್ಡೆ, ಕೌಳಿ ಶ್ರೀನಿವಾಸ್, ಸಂದರೇಶ್ ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಕಾಲೇಜಿನ ಎಲ್ಲಾ ಪ್ರಾಧ್ಯಾಪಕರಿಗೆ ಗುರು ನಮನ ಸಲ್ಲಿಸಲಾಯಿತು. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸಹಾಯಧನದ ಚೆಕ್ ವಿತರಿಸ ಲಾಯಿತು. ಕಾಲೇಜಿನ ಮಾಜಿ ಪ್ರಾಂಶುಪಾಲ ಡಾ.ವೀರಪ್ಪಗೌಡ ದಂಪತಿಗಳನ್ನು ಗೌರವಿಸ ಲಾಯಿತು. ಕೆ.ಟಿ.ಮಂಜುನಾಥ್ ಸ್ವಾಗತಿಸಿದರೆ, ಉಮೇಶ್ ಪುದುವಾಳ್ ನಿರೂಪಿಸಿದರು. ಎ.ಜಿ. ಪ್ರಶಾಂತ್ ವಂದಿಸಿದರು.

Scanned by CamScanner

ವಾರ್ತಾ ಪತ್ರಿಕೆ ೫-೧-೧೬

ವಿದ್ಯಾರ್ಥಿಗಳಿಗೆ ತಂದೆ, ತಾಯಿ, ಅಧ್ಯಾಪಕರೇ ದಿಕ್ಸೂಚಿಗಳಾಗಬೇಕು

ಡಾ.ಕುಂದನ್ ಬಸವರಾಜ್

ಶೃಂಗೇರಿ: ಇಲ್ಲಿನ ಶ್ರೀ ಜೆ.ಸಿ.ಬಿ.ಎಂ. ಕಾಲೇಜಿನಲ್ಲಿ, ರಾಷ್ಟ್ರೀಯ ಸೇವಾ ಯೋಜನೆ ಹಾಗೂ ಯುವರೆಡ್ ಕ್ರಾಸ್ ಘಟಕದ ದೈನಂದಿನ ಚಟುವಟಿಕೆಗಳ ಉದ್ಘಾಟನಾ ಸಮಾರಂಭ ಇತ್ತೀಚೆಗೆ ನಡೆಯಿತು. ಸಮಾರಂಭದಲ್ಲಿ ಉಪಸ್ಥಿತರಿದ್ದು ಮಾತನಾಡಿದ ಕುವೆಂಪು ವಿಶ್ವ ವಿದ್ಯಾನಿಲಯದ ಎನ್.ಎಸ್.ಎಸ್. ಸಂಯೋಜನಾಧಿಕಾರಿ ಡಾ. ಕುಂದನ್ ಬಸವರಾಜ್, ಯುವಕರು ಕುಗ್ಗುತ್ತಿರುವ ಮಾನಸಿಕ ಸ್ಥೈರ್ಯವನ್ನು ಹೆಚ್ಚಿಸಿಕೊಂಡು, ಸಮಾಜದ ಎಲ್ಲಾ ಮಜುಲುಗಳೊಂದಿಗೆ ಸಂಪರ್ಕ ಹೊಂದುವ ಮೂಲಕ ಹೃದಯಶ್ರೀಮಂತಿಕೆಯನ್ನು ಬೆಳೆಸಿಕೊಳ್ಳಬೇಕು ಎಂದು ಹೇಳಿದರು. ವಿದ್ಯಾರ್ಥಿಗಳಿಗೆ ತಂದೆ, ತಾಯಿ, ಅಧ್ಯಾಪಕರೇ ದಿಕ್ಸೂಚಿಗಳಾಗಬೇಕು ಎಂದರು. ವಿದ್ಯಾರ್ಥಿಗಳಲ್ಲಿ ಸಹನೆ, ತಾಳ್ಮೆ, ಪ್ರೀತಿ ಮೊದಲಾದ ಮಾನವೀಯ ಗುಣಗಳು ಹೆಚ್ಚಾಗಬೇಕೆಂದು ಆಶಿಸಿದರು. ಜಿ.ಪಂ. ಸದಸ್ಯೆ ಶಿಲ್ಪಾರವಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಪ್ರಾಚಾರ್ಯ ಡಾ. ದೇವಿದಾಸ್ ಎಸ್. ನಾಯ್ಕ್ ಸಭೆಯ ಅಧ್ಯಕ್ಷತೆ



ವಹಿಸಿದ್ದರು. ಮಾಜಿ ಪ್ರಾಚಾರ್ಯ ಡಾ. ಹೆಚ್.ಸಿ. ವೀರಪ್ಪಗೌಡ, ವಿದ್ಯಾರ್ಥಿ ಕ್ಷೇಮ ಪಾಲನಾಧಿಕಾರಿ ಪ್ರೋ.ಯಶವಂತಿ ಎಸ್.ಸಾಲಿಯಾನ, ಎನ್.ಎಸ್.ಎಸ್. ಅಧಿಕಾರಿಗಳಾದ ಎನ್. ಹೆಚ್. ಲಕ್ಷ್ಮೀನಾರಾಯಣ, ಎ.ಜಿ.ಪ್ರಶಾಂತ್, ಪ್ರಸನ್ನ ಕುಮಾರ್ ಮುಂತಾದವರು ಉಪಸ್ಥಿತರಿದ್ದರು. ಶಾಶ್ವತಿ ಪ್ರಾರ್ಥಿಸಿದರೆ, ಮಾನುಷ ನಿರೂಪಿಸಿದರು.

Scanned by CamScanner

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI« SHIVAMOGGA
2 | ಗುರುವಾರ
8 ಸೆಪ್ಟೆಂಬರ್ 2016
8 SEPTEMBER 2016

ದಾಕ್ಷಯಣಮ್ಮ ಇದ್ದರು.

ಮೇರಿಮಾತೆ ಹಬ್ಬದ ಪ್ರಯುಕ್ತ ವಿದ್ಯುತ್

ಗುರು ಶಿಷ್ಯರ ಬಾಂಧವ್ಯ ಜೀವ ಕೊರಳಿನ ಸಂಬಂಧವಿದ್ದಂತೆ

ಉಪನ್ಯಾಸಕಿ ಡಾ. ಆಶಾದೇವಿ ಅಭಿಮತ | ಜೆಸಿಬಿಎಂ ಕಾಲೇಜಿನ ಹಳೇ ವಿದ್ಯಾರ್ಥಿಗಳ ಸಂಘದಿಂದ ಗುರುನಮನ

■ ವಿಜಯವಾಣಿ ಸುದ್ದಿಜಾಲ ಶೃಂಗೇರಿ

ಎಲ್ಲ ಸಂಬಂಧಗಳಿಗಿಂತ ತಾಯಿ, ಮಗುವಿನ ಸಂಬಂಧ ಶ್ರೇಷ್ಠವಾದದ್ದು ಎಂದು ದಾರ್ಶನಿಕರು, ಮನೋವಿಜ್ಞಾನಿಗಳು ಹೇಳಿದ್ದಾರೆ. ಗುರು- ಶಿಷ್ಯರ ಸಂಬಂಧವೂ ಅಷ್ಟೇ ಪವಿತ್ರವಾದದ್ದು ಎಂದು ಬೆಂಗಳೂರು ಮಹಾರಾಣಿ ವಿಜ್ಞಾನ ಕಾಲೇಜಿನ ಕನ್ನಡ ಉಪನ್ಯಾಸಕಿ ಡಾ. ಆಶಾದೇವಿ ಹೇಳಿದರು.

ಜೆಸಿಬಿಎಂ ಕಾಲೇಜಿನ ಹಳೇ ವಿದ್ಯಾರ್ಥಿ ಸಂಘದಿಂದ ಕಾಲೇಜಿನ ಸಭಾಂಗಣದಲ್ಲಿ ಆಯೋಜಿಸಿದ್ದ ಗುರುನಮನ ಮತ್ತು ಪ್ರಾಚಾರ್ಯ ಡಾ. ಕೆ.ಬಿ.ರಾಮಕೃಷ್ಣರಾವ್ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದರು.

ಪ್ರಸ್ತುತ ಗುರು- ಶಿಷ್ಯರ ಬಾಂಧವ್ಯದಲ್ಲಿ ಕಂದಕವಿದೆ ಎಂಬ ಆರೋಪವಿದೆ. ಸಂಬಂಧಗಳ ಸ್ವರೂಪದಲ್ಲಿ ಬದಲಾವಣೆಯಾಗಿರಬಹುದು. ಆದರೆ ಗುರು- ಶಿಷ್ಯರ ನಡುವಿನ ಜೀವಕೊರಳಿನ ಸಂಬಂಧ ಎಂಬುದು ಸತ್ಯ ಎಂದರು.

ಒಂದು ಸಮುದಾಯದಲ್ಲಿ ನೂರು ಬಗೆಯ ವಿಕಾರಗಳಿವೆ. ಇಂಥ ವಿಚಿತ್ರ ವ್ಯವಸ್ಥೆಗಳ ವಿರುದ್ಧ ನಡೆಸುವ ಹೋರಾಟಗಳು ವ್ಯರ್ಥವಾಗುತ್ತಿವೆ. ಭಾರತೀಯ ಸಮಾಜ ಛಿದ್ರಗೊಳ್ಳುತ್ತಿರುವ ಈ ಸನ್ನಿವೇಶದಲ್ಲಿ ಶಿಕ್ಷಕರು ವಿದ್ಯಾರ್ಥಿಗಳಲ್ಲಿ ಭಾರತೀಯ ಮನಸು, ವ್ಯಕ್ತಿತ್ವ ರೂಪಿಸುವ ಜವಾಬ್ದಾರಿ ಹೊರಬೇಕು. ಬೇರೆ ಬೇರೆ ವಿಚಾರಧಾರೆ, ಧರ್ಮ ಸಹಿಷ್ಣುತೆಯನ್ನು ಸೌಹಾರ್ದವಾಗಿ ಒಗ್ಗೂಡಿಸಿ ಸಮಾಜ ಕಟ್ಟುವ ಕಾರ್ಯವನ್ನು ಶಿಷ್ಯರಿಗೆ ಕಲಿಸಿಕೊಡಬೇಕು ಎಂದು ಹೇಳಿದರು.

> ಶಿಕ್ಷಣ ಕಲಿಸುವವನು ಪ್ರತ್ಯಕ್ಷ ಗುರು. ಆದರೆ ಪರೋಕ್ಷವಾಗಿ ನಮಗೆ ತುಂಬ ಜನ ಗುರುವಾಗುತ್ತಾರೆ. ಗುರುತ್ವ ಎಲ್ಲ ಕಡೆಗೂ ಇರುತ್ತದೆ. ಮುಗ್ಧ ಮಗುವಿನ ನಗು, ಅರಳುವ ಹೂವುಗಳಿಂದಲೂ ನಾವು ಕಲಿಯುವುದು ಬಹಳಷ್ಟಿದೆ. ನಮ್ಮಲ್ಲಿ ಮಾನವೀಯ ಮೌಲ್ಯಗಳನ್ನು ಬೆಳಿಸಿ ದೇಶದ ಉನ್ನತಿಗಾಗಿ ತುಡಿಯುವ ಸ್ಥೈರ್ಯ ನೀಡುವವನೇ ನಿಜವಾದ ಗುರು.
>
> | ಡಾ. ಆಶಾದೇವಿ ಉಪನ್ಯಾಸಕಿ

ಹಳೇ ವಿದ್ಯಾರ್ಥಿ ಸಂಘದ ಸ್ಥಾಪಕ ಅಧ್ಯಕ್ಷ ಕೆ.ವಿ.ರವೀಂದ್ರನಾಥ ಟ್ಯಾಗೋರ್ ಮಾತನಾಡಿ, ವಿದ್ಯಾರ್ಥಿಗಳು ಜೀವನದಲ್ಲಿ ಉನ್ನತ ಗುರಿ ಇಟ್ಟುಕೊಳ್ಳಬೇಕು. ಪ್ರತಿ ವ್ಯಕ್ತಿಗೂ ತಾಯಿ, ತಂದೆ ಹಾಗೂ ಗುರುಗಳು ಮಾರ್ಗದರ್ಶಕರು. ಗುರು ಆದರ್ಶದ ನಡೆಯಿಂದ ವಿದ್ಯಾರ್ಥಿಗಳಿಗೆ ಹತ್ತಿರವಾಗುತ್ತಾನೆ ಎಂದರು.

ತಾಯಿಯ ಉಡಿ, ತಂದೆಯ ನುಡಿ, ಗುರುಗಳ ನಡೆ ಬಗ್ಗೆ ನಿರಂತರ ಮೆಲುಕು ಹಾಕಿ ಅದರ ಸಕಾರಾತ್ಮಕ ಚಿಂತನೆಗಳನ್ನು ಸಮಾಜಕ್ಕೆ ನೀಡಬೇಕು. ಆಗ ನಾನು ಎಂಬ ಭ್ರಮೆಯಿಂದ ಹೊರಬರಲು ಸಾಧ್ಯ. ಸುತ್ತಲೂ ನಡೆಯುವ ಸೂಕ್ಷ್ಮಗಳನ್ನು ಅರ್ಥೈಸಿಕೊಂಡು ನಮ್ಮೊಳಗಿನ ಕಣ್ಣು ತೆರೆದಿಟ್ಟಾಗ ವಿಶ್ವವೇ ನಮ್ಮ ಕುಟುಂಬವಾಗುತ್ತದೆ ಎಂದು ಹೇಳಿದರು.

ದಾನಿಗಳಾದ ಭಾಗ್ಯಾ ಟ್ಯಾಗೋರ್ ಕಾರ್ಯಕ್ರಮ ಉದ್ಘಾಟಿಸಿದರು. ಪ್ರತಿಭಾನ್ವಿತ ವಿದ್ಯಾರ್ಥಿಗಳಾದ ಜೀವನ್ ಕುಮಾರ್, ವೈ.ಕೆ.ಪ್ರತಿಭಾ, ಕೆ.ಸಿ.ಪ್ರಿಯಾಂಕಾ, ವಿ.ಆರ್. ಸ್ಮಿತಾರನ್ನು ಸಂಘದಿಂದ ಪುರಸ್ಕರಿಸಲಾಯಿತು. ಕಾಲೇಜಿನ ನಿವೃತ್ತ ಪ್ರಾಚಾರ್ಯ ಡಾ. ಕೆ.ಸಿ.ವೀರಪ್ಪ ಗೌಡ ದಂಪತಿಯನ್ನು ಸನ್ಮಾನಿಸಲಾಯಿತು.

ಹಳೇ ವಿದ್ಯಾರ್ಥಿ ಸಂಘದ ಅಧ್ಯಕ್ಷ ಕೆ.ಎಸ್.ವೆಂಕಟೇಶ್ ಅಧ್ಯಕ್ಷತೆ ವಹಿಸಿದ್ದರು. ಪ್ರಾಚಾರ್ಯ ಡಾ. ದೇವಿದಾಸ್ ನಾಯಕ್, ದಾನಿಗಳಾದ ಶೈಲಜಾ ರತ್ನಾಕರ ಹೆಗಡೆ, ಶ್ರೀನಿವಾಸ್ ಕೌಳಿ, ಸುಂದರೇಶ್, ಹಳೇ ವಿದ್ಯಾರ್ಥಿ ಸಂಘದ ಉಪಾಧ್ಯಕ್ಷ ಟಿ.ಟಿ.ಕಳಸಪ್ಪ, ದಿನೇಶ್ ಶೆಟ್ಟಿ, ಸದಸ್ಯರಾದ ಉಮೇಶ್ ಪೊದುವಾಳ್, ವೇಣು ಮಾಧವ ನಾಯಕ್, ಕೆ.ಎಂ.ಶ್ರೀನಿವಾಸ್, ಎಚ್.ಎಸ್.ಸಿದ್ದಪ್ಪ ಮತ್ತಿತರರು ಇದ್ದರು.

Scanned by CamScanner

ಶೃಂಗೇರಿ: 7ರಂದು ಗುರು ನಮನ

ಶೃಂಗೇರಿ: ಶ್ರೀಜೆಸಿಬಿಎಂ ಕಾಲೇಜಿನ ಹಳೇ ವಿದ್ಯಾರ್ಥಿ ಸಂಘದಿಂದ ಸೆ.7ರಂದು ಕಾಲೇಜಿನಲ್ಲಿ ಗುರುನಮನ ಕಾರ್ಯಕ್ರಮ ನಡೆಯಲಿದೆ.

ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಕೆ.ಎಸ್ ವೆಂಕಟೇಶ್ ಅಧ್ಯಕ್ಷತೆ ವಹಿಸಲಿದ್ದು, ಬೆಂಗಳೂರಿನ ಮಹಾರಾಣಿ ವಿಜ್ಞಾನ ಮಹಿಳಾ ಕಾಲೇಜಿನ ಕನ್ನಡ ಪ್ರಾಧ್ಯಾಪಕಿ ಡಾ. ಆಶಾದೇವಿ, ನಿವೃತ್ತ ಪ್ರಾಚಾರ್ಯ ದಿ. ಡಾ. ಕೆ.ಬಿ.ರಾಮಕೃಷ್ಣರಾವ್ ಅವರ ದತ್ತಿ ಉಪನ್ಯಾಸ ನೀಡಲಿದ್ದಾರೆ. ನಿವೃತ್ತ ಪ್ರಾಚಾರ್ಯರಾದ ಡಾ. ಎಚ್.ಸಿ ವೀರಪ್ಪಗೌಡ ಮತ್ತು ಡಾ. ಸಿ.ವಿ.ಗಿರಿಧರ ಶಾಸ್ತ್ರಿ ಅವರಿಗೆ ಗೌರವ ಸಮರ್ಪಣೆ ಹಾಗೂ ರ್‍ಯಾಂಕ್ ವಿಜೇತರಿಗೆ ಸನ್ಮಾನ, ದಾನಿಗಳಿಗೆ ಗೌರವ ಸಮರ್ಪಣೆ ಏರ್ಪಡಿಸಲಾಗಿದೆ. ಅಂದು ಮಧ್ಯಾಹ್ನ 2.30ಕ್ಕೆ ಹಳೆ ವಿದ್ಯಾರ್ಥಿ ಸಂಘದ ಸರ್ವ ಸದಸ್ಯರ ಸಭೆ ಆಯೋಜಿಸಲಾಗಿದೆ. ಹಳೆ ವಿದ್ಯಾರ್ಥಿ ಸಂಘದಿಂದ ಈ ವರ್ಷ ಒಂಬತ್ತು ವಿದ್ಯಾರ್ಥಿಗಳು ಸೇರಿದಂತೆ ಒಟ್ಟು 32 ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನ ಪಡೆಯುತ್ತಿದ್ದಾರೆ ಎಂದು ಹಳೆ ವಿದ್ಯಾರ್ಥಿ ಸಂಘದ ಪ್ರಕಟಣೆ ತಿಳಿಸಿದೆ.

Scanned by CamScanner

ಕನ್ನಡ ಪ್ರಭ 31-8-16

ವಿದ್ಯಾರ್ಥಿಗಳು ಓದುವ ಹವ್ಯಾಸ ಹೆಚ್ಚು ರೂಢಿಸಿಕೊಳ್ಳಲಿ: ರೇಖಾ ಪೈ

ಜೆಸಿಬಿಎಂ ಕಾಲೇಜಿನ ಸಭಾಂಗಣದಲ್ಲಿ ಗ್ರಂಥಾಲಯ ದಿನಾಚರಣೆ

• ಕನ್ನಡಪ್ರಭ ವಾರ್ತೆ ಶೃಂಗೇರಿ

ಕೇವಲ ಪಠ್ಯಪುಸ್ತಕಗಳಿಂದ ಜ್ಞಾನ ಹೆಚ್ಚಲು ಸಾಧ್ಯವಿಲ್ಲ. ಉತ್ತಮ ಸಾಹಿತ್ಯ, ಪತ್ರಿಕೆ ಓದುವುದರಿಂದ ಜ್ಞಾನದಾಹ ಹೆಚ್ಚುತ್ತದೆ. ಆದ್ದರಿಂದ ವಿದ್ಯಾರ್ಥಿಗಳು ಓದುವ ಹವ್ಯಾಸ ರೂಢಿಸಿ ಕೊಳ್ಳಬೇಕು ಎಂದು ಮಣಿಪಾಲ ತಾಂತ್ರಿಕ ವಿಶ್ವ ವಿದ್ಯಾನಿಲಯ ಪ್ರಾಧ್ಯಾಪಕಿ ಡಾ. ರೇಖಾ ಟಿ. ಪೈ ಹೇಳಿದರು. ಅವರು ಪಟ್ಟಣದ ಜೆಸಿಬಿಎಂ ಕಾಲೇಜಿನ ಡಾ. ಟಿ.ಎಂ.ಎ. ಪೈ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಗ್ರಂಥಾಲಯ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ವಿದ್ಯಾರ್ಥಿಗಳು ದೈನಂದಿನ ಚಟುವಟಿಕೆಗಳಲ್ಲಿ ಓದುವುದನ್ನು ಕೂಡಾ ಒಂದು ಹವ್ಯಾಸದಂತೆ ಬೆಳೆಸಿ ಕೊಳ್ಳಬೇಕು. ಅದಕ್ಕಾಗಿ ಕಾಲೇಜಿನ ಗ್ರಂಥಾಲಯ ಸದುಪಯೋಗ ಅವಶ್ಯಕವಾಗಿ ಪಡೆದುಕೊಳ್ಳಬೇಕು. ಉತ್ತಮ ಸಾಹಿತ್ಯ ಹೇಗೆ ಸಮಾಜದ ಮೇಲೆ ಒಳ್ಳೆಯ ಪರಿಣಾಮ ಬೀರುತ್ತದೆಯೋ ಹಾಗೆಯೇ ಒಂದು ಉತ್ತಮ ಕೃತಿ ಓದುಗನನ್ನು ಉತ್ತಮ ವ್ಯಕ್ತಿಯನ್ನಾಗಿ ರೂಪಿಸುವ ಶಕ್ತಿ ಹೊಂದಿದೆ. ಈಚೆಗೆ ಟಿವಿ, ಸಿನೆಮಾ, ಮೊಬೈಲ್, ಇಂಟರ್‌ನೆಟ್‌ಗಳ ಹಾವಳಿಯಿಂದ ಪುಸ್ತಕ ಓದುವವರ ಸಂಖ್ಯೆ ಕಡಿಮೆಯಾಗುತ್ತಿದೆ. ಇದು ದುರಂತದ ವಿಷಯ ಎಂದರು.



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ನಡೆದ ಗ್ರಂಥಾಲಯ ದಿನಾಚರಣೆ ಕಾರ್ಯಕ್ರಮದಲ್ಲಿ ಡಾ. ರೇಖಾ ಪೈ ಮಾತನಾಡಿದರು.

ಡಾ.ಎಸ್.ರಂಗನಾಥನ್ ಗ್ರಂಥಾಲಯದ ವಿಷಯವಾಗಿ ಅನೇಕ ಅವಿಷ್ಕಾರ ಮಾಡಿದರು. ಅವರ ಜನ್ಮ ದಿನದ ನೆನಪಿಗಾಗಿ ನಾವಿಂದು ಗ್ರಂಥಾಲಯ ದಿನಾಚರಣೆ ಆಚರಿಸುತ್ತಿದ್ದೇವೆ. ಗ್ರಂಥಪಾಲಕರಾಗಲು ಅನೇಕ ಕೋರ್ಸ್‌ಗಳಿದ್ದು ವಿದ್ಯಾರ್ಥಿಗಳು ಅದರ ಕಡೆ ವಿಶೇಷ ಆಸಕ್ತಿ ವಹಿಸಬಹುದು. ವಿದ್ಯಾರ್ಥಿಗಳು ಕೃತಿಗಳನ್ನು ಓದುವುದರ ಮೂಲಕ ಓದುವ ಸಂಸ್ಕೃತಿ ಮುಂದುವರೆಸಬೇಕು. ಗ್ರಂಥಾಲಯ ಗಳಲ್ಲಿನ ಪುಸ್ತಕಗಳ ಸದ್ಬಳಕೆಯಾಗಬೇಕು ಎಂದು ಹೇಳಿದರು. ಡಾ.ಕೆ.ಪಿ.ಪ್ರಕಾಶ್ ಅಧ್ಯಕ್ಷತೆ ವಹಿಸಿದ್ದು, ದೇಹ ಉತ್ಸಾಹದಿಂದ ಇರಲುಹೇಗೆವ್ಯಾಯಾಮಆವಶ್ಯಕವೋ ಹಾಗೆ ಮೆದುಳು ಉತ್ಸಾಹದಿಂದ ಇರಲು ಓದುವಿಕೆ ಕೂಡಾ ಅತಿ ಅವಶ್ಯಕವಾಗಿದೆ ಎಂದರು.

ಮುಖ್ಯ ಅತಿಥಿಗಳಾಗಿ ಕಾಲೇಜಿನ ಮುಖ್ಯಗ್ರಂಥಪಾಲಕಪ್ರಸನ್ನಕುಮಾರ್, ವಿದ್ಯಾಧರ, ವಿದ್ಯಾಗಣೇಶ್, ಸ್ವಾಮಿ ಉಪಸ್ಥಿತರಿದ್ದರು. ಕು.ಅನನ್ಯ ನಿರೂಪಿಸಿದರು.

Scanned by CamScanner

ಯ ಕರ್ನಾಟಕ VK

ಸೋಮವಾರ, 29 ಆಗಸ್ಟ್ 2016



ಶೃಂಗೇರಿ ಜೆಸಿಬಿಎಂ ಕಾಲೇಜಿನ ಅರ್ಥಶಾಸ್ತ್ರ ವಿಭಾಗದ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಸ್ವಾಗತ ಕೋರಲಾಯಿತು. ಕಾಲೇಜಿನ ನಿವೃತ್ತ ಪ್ರಾಚಾರ್ಯ ಡಾ.ಎಚ್.ಸಿ.ವೀರಪ್ಪಗೌಡ, ಕಾಲೇಜಿನ ಪ್ರಾಚಾರ್ಯ ಡಾ.ದೇವಿದಾಸ ನಾಯಕ್ ಅಧ್ಯಕ್ಷತೆ ವಹಿಸಿದ್ದರು. ವಾಣಿಜ್ಯ ವಿಭಾಗದ ಮುಖ್ಯಸ್ಥ ಪ್ರೊ. ಯಶವಂತಿ ಎಸ್. ಸಾಲಿಯಾನ್ ಮತ್ತು ಎ.ಜಿ.ಪ್ರಶಾಂತ್ ಹಾಜರಿದ್ದರು.

Scanned by CamScanner

ಚಿತ್ರಸುದ್ದಿ

ಕನ್ನಡ ಪ್ರಭ 29-8-16



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ನಡೆದ ರಾಷ್ಟ್ರೀಯ ಸೇವಾ ಯೋಜನೆ ಹಾಗೂ ಯುವ ರೆಡ್‌ಕ್ರಾಸ್ ಘಟಕದ ವಾರ್ಷಿಕ ದೈನಂದಿನ ಚಟುವಟಿಕೆ ಕಾರ್ಯಕ್ರಮಕ್ಕೆ ಜಿಪಂ ಸದಸ್ಯೆ ಶಿಲ್ಪಾ ರವಿ ಚಾಲನೆ ನೀಡಿದರು. ದೇವಿದಾಸ್ ನಾಯಕ್,ಕುಂದನ್ ಬಸವರಾಜ್ ಇದ್ದರು.



ಶೃಂಗೇರಿ ಪಟ್ಟಣದಲ್ಲಿ ಆಯೋಜಿಸಿದ್ದ ಪದವಿ ಪೂರ್ವ ಕಾಲೇಜುಗಳ ತಾಲೂಕು ಮಟ್ಟದ ವಿಶೇಷ ಕ್ರೀಡಾಕೂಟವನ್ನು ಅನಂತಕೃಷ್ಣಭಟ್ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ದೇವಿದಾಸ್ ನಾಯಕ್, ಕುಂದನ್ ಬಸವರಾಜ್, ಯಶವಂತ ಸಾಲಿಯನ್ ಮೊದಲಾದವರು ಇದ್ದರು.

Scanned by CamScanner

ವಿಜಯವಾಣಿ 28.8.16

ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಬೆಳೆಸಿ

■ ವಿಜಯವಾಣಿ ಸುದ್ದಿಜಾಲ ಶೃಂಗೇರಿ

ವಿದ್ಯಾರ್ಥಿಗಳಲ್ಲಿ ನಾಯಕತ್ವ ಗುಣ ಬೆಳೆಸಲು ಪೂರಕವಾದ ಆತ್ಮವಿಶ್ವಾಸ ಹಾಗೂ ಮಾನಸಿಕ ಸದೃಢತೆಯನ್ನು ಪಾಲಕರು, ಶಿಕ್ಷಕರು ತುಂಬಬೇಕು ಎಂದು ಕುವೆಂಪು ವಿವಿ ಎನ್‌ಎಸ್‌ಎಸ್ ಸಂಯೋಜನಾಧಿಕಾರಿ ಡಾ. ಕುಂದನ್ ಬಸವರಾಜ್ ತಿಳಿಸಿದರು.

ಜೆಸಿಬಿಎಂ ಕಾಲೇಜಿನಲ್ಲಿ ನಡೆದ ರಾಷ್ಟ್ರೀಯ ಸೇವಾ ಯೋಜನೆ ಹಾಗೂ ಯುವ ರೆಡ್‌ಕ್ರಾಸ್ ಘಟಕದ ದೈನಂದಿನ ಚಟುವಟಿಕೆಗಳ ಕಾರ್ಯಕ್ರಮದಲ್ಲಿ ಮಾತನಾಡಿದರು.

ಇಂದು ಯುವಕರಲ್ಲಿ ಮಾನಸಿಕ ಸ್ಥೈರ್ಯ ಕುಗ್ಗುತ್ತಿದ್ದು ಅವರು ಸಮಾಜದ ಎಲ್ಲ ಮಜಲುಗಳೊಂದಿಗೆ ಸಂಪರ್ಕ ಹೊಂದುವ ಅಗತ್ಯವಿದೆ. ನಾವು ನಿಸ್ವಾರ್ಥದಿಂದ ಮಾಡುವ ಕೆಲಸಗಳಿಗೆ ಪ್ರಶಸ್ತಿಗಳು ತಾನಾಗೇ ಅರಸಿ ಬರುತ್ತವೆ. ವಿದ್ಯಾರ್ಥಿಗಳಲ್ಲಿ ಸಹನೆ, ತಾಳ್ಮೆ, ಪ್ರೀತಿ ಮೊದಲಾದ ಮಾನವೀಯ ಗುಣಗಳನ್ನು ಬೆಳೆಸಬೇಕು ಎಂದರು.

ಜಿಪಂ ಸದಸ್ಯೆ ಶಿಲ್ಪಾ ರವಿ ಮಾತನಾಡಿ, ಯುವಕರು ಸೇವೆ ಮೂಲಕ ಗ್ರಾಮೀಣ ಭಾಗದಲ್ಲಿ ಬದಲಾವಣೆ ತರಬೇಕು. ನಾವು ಮಾಡುವ ಸೇವೆ ಮತ್ತೊಬ್ಬರ ಬದುಕನ್ನು ರೂಪಿಸಿದಾಗ ಜೀವನ ಸಾರ್ಥಕವಾಗುತ್ತದೆ ಎಂದು ತಿಳಿಸಿದರು.

ಡಾ. ದೇವಿದಾಸ್ ಎಸ್. ನಾಯ್ಕ್, ಮಾಜಿ ಪ್ರಾಚಾರ್ಯ ಡಾ. ಎಚ್.ಸಿ.ವೀರಪ್ಪ ಗೌಡ, ವಿದ್ಯಾರ್ಥಿ ಕ್ಷೇಮಪಾಲನಾಧಿಕಾರಿ ಪ್ರೊ. ಯಶವಂತಿ ಎಸ್. ಸಾಲಿಯಾನ, ಎನ್‌ಎಸ್‌ಎಸ್ ಅಧಿಕಾರಿಗಳಾದ ಎನ್. ಎಚ್.ಲಕ್ಷ್ಮೀನಾರಾಯಣ, ಎ.ಜಿ.ಪ್ರಶಾಂತ್, ಪ್ರಸನ್ನಕುಮಾರ್, ವಿದ್ಯಾರ್ಥಿಗಳಾದ ಶಾಶ್ವತಿ, ಮಾನುಷ ಉಪಸ್ಥಿತರಿದ್ದರು.



ಶೃಂಗೇರಿ ಜೆಸಿಬಿಎಂ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಹಾಗೂ ಯುವ ರೆಡ್‌ಕ್ರಾಸ್ ಘಟಕದ ಕಾರ್ಯಕ್ರಮವನ್ನು ಜಿಪಂ ಸದಸ್ಯೆ ಶಿಲ್ಪಾ ರವಿ ಉದ್ಘಾಟಿಸಿದರು.

Scanned by CamScanner

ವಿಜಯ ಕರ್ನಾಟಕ VK

ಭಾನುವಾರ, 28 ಆಗಸ್ಟ್ 2016, ಶಿವಮೊಗ್ಗ

ಸರಕಾರದಿಂದ ಕ್ರೀಡಾಕ್ಷೇತ್ರಕ್ಕೆ ಪ್ರೋತ್ಸಾಹ ಸದುಪಯೋಗವಾಗಲಿ

• ವಿಕ ಸುದ್ದಿಲೋಕ ಶೃಂಗೇರಿ

ಒಲಿಂಪಿಕ್ಸ್ ಸ್ಪರ್ಧೆಯಲ್ಲಿ ಮಹಿಳಾ ಕ್ರೀಡಾಪಟುಗಳು ಪದಕ ಗೆಲ್ಲುವ ಮೂಲಕ ದೇಶದ ಗೌರವ ಹೆಚ್ಚಿಸಿದ್ದಾರೆ ಎಂದು ಶ್ರೀ ಜೆಸಿಬಿಎಂ ಕಾಲೇಜಿನ ವಿದ್ಯಾ ಮಂಡಳಿ ಸದಸ್ಯ ಅನಂತಪದ್ಮನಾಭ ಭಟ್ ಹೇಳಿದರು.

ಅವರು ಇತ್ತೀಚೆಗೆ ಜೆಸಿಬಿಎಂ ಕಾಲೇಜಿನಲ್ಲಿ ತಾಲೂಕು ಮಟ್ಟದ ಪದವಿಪೂರ್ವ ಕಾಲೇಜುಗಳ ಕ್ರೀಡಾಕೂಟ ಉದ್ಘಾಟಿಸಿ ಮಾತನಾಡಿದರು.

ಇಂದಿನ ಯುವಜನತೆ ಕ್ರೀಡೆಯಲ್ಲಿ ಭಾಗವಹಿಸಿ, ತಮ್ಮ ಮಾನಸಿಕ ಹಾಗೂ ದೈಹಿಕ ಆರೋಗ್ಯ ಉತ್ತಮಪಡಿಸಿಕೊಳ್ಳಬೇಕೆಂದರು.

ಜಿಲ್ಲಾ ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಬಿ.ಕೆ. ಚಂದ್ರಶೇಖರ್ ಮಾತನಾಡಿ, ಸರಕಾರ ಕ್ರೀಡೆಗಾಗಿ ಸಾಕಷ್ಟು ಪ್ರೋತ್ಸಾಹ ನೀಡುತ್ತಿದ್ದು ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಪ್ರಾಂಶುಪಾಲ ಡಾ. ದೇವಿದಾಸ್ ಎನ್.ನಾಯಕ್ ಅಧ್ಯಕ್ಷತೆ ವಹಿಸಿದ್ದರು. ವಿಶ್ವಸ್ಥ ಮಂಡಳಿ ಸದಸ್ಯರಾದ ತಿಮ್ಮಪ್ಪ ಹೆಗ್ಡೆ ವಿದ್ಯಾರ್ಥಿ ಕ್ಷೇಮಪಾಲನ ಅಧಿಕಾರಿ ಪ್ರೊ. ಯಶವಂತಿ ಎಸ್. ಸಾಲಿಯಾನ ಉಪಸ್ಥಿತರಿದ್ದರು.

ಪ್ರಶಾಂತ್ ಸ್ವಾಗತಿಸಿ, ಲೋಕೇಶ್ ವಂದಿಸಿದರು.

ತಾಲೂಕಿನ ವಿವಿಧ ಕಾಲೇಜುಗಳ 500ಕ್ಕೂ ಹೆಚ್ಚಿನ ಕ್ರೀಡಾಪಟುಗಳು, 30ಕ್ಕೂ ಹೆಚ್ಚಿನ ಸ್ಪರ್ಧೆಯಲ್ಲಿ ಭಾಗವಹಿಸಿದ್ದಾರೆ.

ಅಧಿಕಾರ ಸ್ವೀಕಾರ

ಶೃಂಗೇರಿ: ಪದ್ಮನಾಭಶಾಸ್ತ್ರಿ ಶಹಸೀಲ್ದಾರ್ ಆಗಿ ಗುರುವಾರ ಅಧಿಕಾರ ಸ್ವೀಕರಿಸಿದರು.

ಡಾ.ಶಾರದಾಂಬಾ ಮರ್ಗಾವಕೆ ಯಾಗಿರುವ ಹಿನ್ನೆಲೆಯಲ್ಲಿ ಮೂಡಿಗೆರೆಯಿಂದ ಪದ್ಮನಾಭಶಾಸ್ತ್ರಿ ಅಧಿಕಾರ ಸ್ವೀಕರಿಸಿದರು.



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ತಾಲೂಕು ಮಟ್ಟದ ಪದವಿಪೂರ್ವ ಕಾಲೇಜುಗಳ ಕ್ರೀಡಾಕೂಟವನ್ನು ಅನಂತಪದ್ಮನಾಭ ಭಟ್ ಉದ್ಘಾಟಿಸಿದರು.

Scanned by CamScanner

ಸಂಯುಕ್ತ ಕರ್ನಾಟಕ

4 ಶುಕ್ರವಾರ, 26, ಆಗಸ್ಟ್, 2016, ದಾವಣಗೆರೆ.

ಭಾರತೀಯರ ಗೌರವ ಹೆಚ್ಚಿಸಿದ ಮಹಿಳಾ ಕ್ರೀಡಾಪಟುಗಳು

ಶೃಂಗೇರಿ: ಕ್ರೀಡೆಗಳಲ್ಲಿ ಮಹಿಳೆಯರು ಆಸಕ್ತಿಯಿಂದ ಭಾಗವಹಿಸುತ್ತಿರುವುದು ಸಂತೋಷದ ವಿಚಾರ. ರಿಯೋ ಒಲಂಪಿಕ್ಸ್ ಕ್ರೀಡೆಯಲ್ಲಿ ಮಹಿಳಾ ಕ್ರೀಡಾಪಟುಗಳು ಭಾರತೀಯರ ಗೌರವವನ್ನು ಹೆಚ್ಚಿಸಿದ್ದಾರೆ ಎಂದು ಶ್ರೀಜೆಸಿಬಿಎಂ ಕಾಲೇಜಿನ ವಿಶ್ವಸ್ಥ ಮಂಡಳಿ ಹಿರಿಯ ಸದಸ್ಯ ಕೆ.ಆರ್. ಅನಂತಪದ್ಮನಾಭ ಭಟ್ಟರು ಹೇಳಿದರು.



ಶೃಂಗೇರಿಯ ಶ್ರೀ ಜೆ.ಸಿ.ಬಿ.ಎಂ ಪದವಿಪೂರ್ವ ಕಾಲೇಜಿನ ಆತಿಥ್ಯದಲ್ಲಿ ನಡೆದ ಪದವಿಪೂರ್ವ ಕಾಲೇಜುಗಳ ತಾಲ್ಲೂಕು ಮಟ್ಟದ ಕ್ರೀಡಾಕೂಟವನ್ನು ಕೆ.ಆರ್. ಅನಂತಪದ್ಮನಾಭ ಭಟ್ಟರು ಉದ್ಘಾಟಿಸಿದರು.

ಶ್ರೀ ಜೆ.ಸಿ.ಬಿ.ಎಂ ಪದವಿಪೂರ್ವ ಕಾಲೇಜಿನ ಆತಿಥ್ಯದಲ್ಲಿ ನಡೆದ ಪದವಿಪೂರ್ವ ಕಾಲೇಜುಗಳ ತಾಲ್ಲೂಕು ಮಟ್ಟದ ಕ್ರೀಡಾಕೂಟ ಉದ್ಘಾಟಿಸಿ ಮಾತನಾಡಿದರು. ಯುವಜನರು ಕ್ರೀಡೆಯಲ್ಲಿ ಹೆಚ್ಚಾಗಿ ತೊಡಗಿಸಿಕೊಂಡು, ಮಾನಸಿಕ ಹಾಗೂ ದೈಹಿಕ ಆರೋಗ್ಯ ಉತ್ತಮಪಡಿಸುವ ಅವಕಾಶ ಬಳಸಿಕೊಳ್ಳಬೇಕು ಎಂದರು. ಮುಖ್ಯ ಅತಿಥಿಗಳಾಗಿದ್ದ ಚಿಕ್ಕಮಗಳೂರು ಜಿಲ್ಲಾ ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಚಂದ್ರಶೇಖರ ಬಿ.ಕೆ. ಮಾತನಾಡಿ, ಪದವಿಪೂರ್ವ ಶಿಕ್ಷಣ ಹಂತದಲ್ಲಿ ಪಠ್ಯದೊಂದಿಗೆ ಪಠ್ಯೇತರ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು ಪಾಲ್ಗೊಂಡು ಸರ್ವತೋಮುಖ ಅಭಿವೃದ್ಧಿ ಹೊಂದಬೇಕೆಂದರು.

ಪ್ರಾಂಶುಪಾಲ ಡಾ. ದೇವಿದಾಸ್ ಎಸ್. ನಾಯಕ್ ಅಧ್ಯಕ್ಷತೆ ವಹಿಸಿದ್ದರು. ವಿಶ್ವಸ್ಥ ಮಂಡಳಿ ಸದಸ್ಯರಾದ ತಿಮ್ಮಪ್ಪ ಹೆಗ್ಡೆ, ವಿದ್ಯಾರ್ಥಿ ಕ್ಷೇಮಪಾಲನ ಅಧಿಕಾರಿ ಪ್ರೊ.ಯಶವಂತಿ ಎಸ್. ಸಾಲಿಯಾನ ಮುಂತಾದವರು ಉಪಸ್ಥಿತರಿದ್ದರು.

ಪ್ರಶಾಂತ್ ಸ್ವಾಗತಿಸಿದರು. ಲೋಕೇಶ್ ಎಂ.ವಿ ವಂದಿಸಿದರು. ತಾಲ್ಲೂಕಿನ 5 ಕಾಲೇಜುಗಳ 500ಕ್ಕೂ ಹೆಚ್ಚಿನ ಕ್ರೀಡಾಪಟುಗಳು 30 ಕ್ಕೂ ಹೆಚ್ಚಿನ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದರು.

Scanned by CamScanner

ವಾರ್ತೆ ಪತ್ರಿಕೆ 22-8-16

ಕೆಲಸವನ್ನು ಪ್ರಾಮಾಣಿಕತೆಯಿಂದ ಮಾಡಿದರೆ ಪ್ರಶಸ್ತಿಗಳು ತಾನಾಗಿಯೇ ಹುಡುಕಿಕೊಂಡು ಬರುತ್ತವೆ



ಶೃಂಗೇರಿ: ಇಲ್ಲಿನ ಶ್ರೀ ಜೆ.ಸಿ.ಬಿ.ಎಂ. ಕಾಲೇಜಿನ ಮುಖ್ಯ ಸಭಾಂಗಣದಲ್ಲಿ, ಮುಖ್ಯ ಮಂತ್ರಿ ಪ್ರಶಂಸನಾ ಪದಕ ವಿಜೇತ ರಾಷ್ಟ್ರೀಯ ಯುವ ಸೇನಾ ದಳದ ಅಧಿಕಾರಿ ಡಾ.ಇ. ಕುಮಾರಸ್ವಾಮಿ ಉಡುಪ ರವರ ಸನ್ಮಾನ ಕಾರ್ಯಕ್ರಮವು ಇತ್ತೀಚೆಗೆ ನಡೆಯಿತು. ಈ ಕುರಿತ ಸಭಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಡಾ.ದೇವಿದಾಸ ನಾಯಕ್ ಮಾತನಾಡಿ, ಎನ್‌ಸಿ.ಸಿ. ಶಿಸ್ತನ್ನು ಕಲಿಸಿಕೊಡುತ್ತದೆ. ಆ ಶಿಸ್ತನ್ನು ದೈನಂದಿನ ಬದುಕಿನಲ್ಲಿ ಅಳವಡಿಸಿಕೊಂಡರೆ, ಜೀವನದಲ್ಲಿ ಯಶಸ್ಸು ಗಳಿಸಲು ಸಾಧ್ಯವಾಗುತ್ತದೆ ಎಂದು ಹೇಳಿದರು. ಯಾವುದೇ ಕೆಲಸವನ್ನು ಪ್ರಾಮಾಣಿಕತೆಯಿಂದ ಮಾಡಿದರೆ, ಅದನ್ನು ಸಂಘ, ಸಂಸ್ಥೆಗಳವರು ಗುರುತಿಸುತ್ತಾರೆ. ಆವಾಗ್ಯೆ ಪ್ರಶಸ್ತಿಗಳನ್ನು ಹುಡುಕಿಕೊಂಡು ಹೋಗುವ ಬದಲಿಗೆ ಪ್ರಶಸ್ತಿಗಳು ತಾನಾಗಿಯೇ ಹುಡುಕಿಕೊಂಡು ಬರುವಂತಾಗುತ್ತದೆ ಎಂದರು. ಕಾರ್ಯಕ್ರಮದಲ್ಲಿ ಕಾಲೇಜಿನ ನಿವೃತ್ತ ಪ್ರಾಚಾರ್ಯ ಡಾ.ಹೆಚ್.ಸಿ.ವೀರಪ್ಪಗೌಡ, ವಿದ್ಯಾರ್ಥಿ ಕ್ಷೇಮಪಾಲನಾಧಿಕಾರಿಗಳಾದ ಪ್ರೊ. ಯಶವಂತಿ ಎಸ್ ಸಾಲಿಯಾನ, ಎ.ಜಿ.ಪ್ರಶಾಂತ್ ಉಪಸ್ಥಿತರಿದ್ದರು. ಕಾವ್ಯ ಪ್ರಾರ್ಥಿಸಿದರೆ, ಹರ್ಷಿತ್ ಸ್ವಾಗತಿಸಿದರು. ಶರಣ್ಯ ನಿರೂಪಿಸಿದರೆ, ಅರ್ಪಿತಾ ವಂದಿಸಿದರು.

Scanned by CamScanner



ಶೃಂಗೇರಿ ಪಟ್ಟಣದ ಜೆಸಿಬಿಎಂ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಮಹರ್ಷಿ ವ್ಯಾಸಜಯಂತಿ ಕಾರ್ಯಕ್ರಮ ಅಖಿಲ ಭಾರತೀಯ ಸಾಹಿತ್ಯ ಪರಿಷತ್ತಿನ ರಾಘವೇಂದ್ರ ಭಟ್ ಉದ್ಘಾಟಿಸಿದರು. ಡಾ.ದೇವಿದಾಸ್ ನಾಯಕ್, ಪ್ರಶಾಂತ್ ಮತ್ತಿತರರು ಇದ್ದಾರೆ.

ಕನ್ನಡ ಪ್ರಭ - 27-7-16

Scanned by CamScanner

ಸಂಕ್ಷಿಪ್ತ ಸುದ್ದಿ

ಜೆಸಿಬಿಎಂ ಕಾಲೇಜಿಗೆ ಉತ್ತಮ ಫಲಿತಾಂಶ

ಶೃಂಗೇರಿ: ಕುವೆಂಪು ವಿಶ್ವವಿದ್ಯಾನಿಲಯದ ಪ್ರಸಕ್ತ ಸಾಲಿನ ಎಂ.ಎ.ಅರ್ಥಶಾಸ್ತ್ರ ಫಲಿತಾಂಶವು ಬಂದಿದ್ದು, ಜೆಸಿಬಿಎಂ ಕಾಲೇಜಿನ ಸ್ನಾತಕೋತ್ತರ ಕೇಂದ್ರವು ಶೇ 100 ಫಲಿತಾಂಶವನ್ನು ಪಡೆದಿದೆ. ಶೇ 36 ಮಂದಿ ಎ+, ಶೇ 35 ಮಂದಿ ಎ ಹಾಗೂ ಶೇ 29 ರಷ್ಟು ವಿದ್ಯಾರ್ಥಿಗಳು ಬಿ ಗ್ರೇಡ್ ಪಡೆದು ಉತ್ತೀರ್ಣರಾಗಿದ್ದಾರೆ. ಉತ್ತಮ ಫಲಿತಾಂಶಕ್ಕೆ ಕಾರಣರಾದ ವಿದ್ಯಾರ್ಥಿಗಳನ್ನು ಸ್ನಾತಕೋತ್ತರ ಕೇಂದ್ರ ಸಂಯೋಜಕ ಡಾ. ಎಚ್.ಸಿ. ವೀರಪ್ಪಗೌಡ, ಪ್ರಾಚಾರ್ಯ ಡಾ. ದೇವಿ ದಾಸ್ ಎಸ್ ನಾಯ್ಕ್ ಅಭಿನಂದಿಸಿದ್ದಾರೆ.

Scanned by CamScanner

ವಿಜಯ ಕರ್ನಾಟಕ 23-7-16

ವ್ಯಾಸ ಜಯಂತಿ ಕಾರ್ಯಕ್ರಮ

ಬದುಕಿಗೆ ಗುರುತರ ಮಾರ್ಗ ತೋರುವವನೇ ಗುರು

ಶೃಂಗೇರಿ: ಜಗದ್ಗುರು ಸ್ಥಾನವನ್ನು ಪಡೆದಿರುವ ವೇದವ್ಯಾಸರು ಮತ್ತು ಶಂಕರಾಚಾರ್ಯರು ಗುರುವಿನ ಮಾರ್ಗದರ್ಶನದಲ್ಲಿಯೇ ಬೆಳೆದವರು ಎಂದು ಅಖಿಲ ಭಾರತೀಯ ಸಾಹಿತ್ಯ ಪರಿಷತ್ತಿನ ಸಂಚಾಲಕ ರಾಘವೇಂದ್ರ ಭಟ್ ಹೇಳಿದರು.

ಅವರು ಶುಕ್ರವಾರ ಜೆಸಿಬಿಎಂ ಕಾಲೇಜಿನಲ್ಲಿ ಅಖಿಲ ಭಾರತೀಯ ಸಾಹಿತ್ಯ ಪರಿಷತ್ ಘಟಕ ಆಯೋಜಿಸಿದ್ದ ವ್ಯಾಸ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ರಾಮಾಯಣ ಮಹಾಭಾರತದಂತಹ ಶ್ರೇಷ್ಠ ಕೃತಿಗಳನ್ನು ನೀಡಿದ ವೇದವ್ಯಾಸರು ಮತ್ತು ವಾಲ್ಮೀಕಿ ಋಷಿಗಳು ನಿತ್ಯ ಸ್ಮರಣೀಯರಾಗಿದ್ದಾರೆ ಎಂದರು.

ನಾರ್ವೆ ಸ್ವಯಂಪ್ರಕಾಶ ಪ್ರೌಢಶಾಲೆ ಮುಖ್ಯ ಶಿಕ್ಷಕ ಎಂ.ಎಸ್.ಜನಾರ್ದನ್ ಮಾತನಾಡಿ, ಅಲೌಕಿಕವಾದ ಜ್ಞಾನದ ಜತೆಗೆ ಲೌಕಿಕ ಜ್ಞಾನ ನೀಡುವ ಗುರುತರ ಜವಾಬ್ದಾರಿ ಗುರುವಿನದ್ದಾಗಿರುತ್ತದೆ. ಅಂತಹ ಜ್ಞಾನವನ್ನು ವೇದ ವ್ಯಾಸರು ನಮಗೆ ನೀಡಿದ್ದಾರೆ. ಬದುಕಿಗೆ ಗುರುತರವಾದ ಮಾರ್ಗ ತೋರುವವನೆ ನಿಜ ಗುರು ಎಂದರು. ಜೆಸಿಬಿಎಂ ಕಾಲೇಜಿನ ಪ್ರಾಚಾರ್ಯ ಡಾ.ದೇವಿ ದಾಸ್ ನಾಯಕ್ ಮಾತನಾಡಿ, ಪ್ರಾಪಂಚಿಕ ಬದುಕಿಗೆ ನಮ್ಮನ್ನು ತೆರೆದುಕೊಳ್ಳುವುದಕ್ಕಾಗಿ ಶಿಕ್ಷಣದ ಅವಶ್ಯಕತೆ ಇದೆ ಎಂದರು.

ಕಾಲೇಜಿನ ಪಿಯು ವಿಭಾಗದ ಪ್ರಾಚಾರ್ಯ ಎ.ಜಿ.ಪ್ರಶಾಂತ್, ಸಾಹಿತ ಪರಿಷತ್ತಿನ ಸಂಚಾಲಕಿ ಪುಷ್ಪಾಶ್ರೀಕಾಂತ್, ಜಯಶ್ರೀ ಗಣೇಶ್, ಕಲ್ಕೆರೆ ಸುರೇಶ್ ,ವೈ.ಆರ್.ರಾಜೀವ್ ,ಶೃಂಗೇರಿ ಸುಬ್ಬಣ್ಣ ಮತ್ತಿತರರು ಉಪಸ್ಥಿತರಿದ್ದರು.



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ಶುಕ್ರವಾರ ನಡೆದ ವ್ಯಾಸ ಜಯಂತಿ ಕಾರ್ಯಕ್ರಮವನ್ನು ಅಖಿಲ ಭಾರತೀಯ ಸಾಹಿತ್ಯ ಪರಿಷತ್ತಿನ ಸಂಚಾಲಕ ರಾಘವೇಂದ್ರ ಭಟ್ ಉದ್ಘಾಟಿಸಿದರು.

Scanned by CamScanner

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI « SHIVAMOGGA
4
ಶುಕ್ರವಾರ
22 ಜುಲೈ 2016
22 JULY 2016

» ಶೃಂಗೇರಿ

ತಾಲೂಕು ಅಖಿಲ ಭಾರತೀಯ ಸಾಹಿತ್ಯ ಪರಿಷತ್‌ನಿಂದ ವ್ಯಾಸಜಯಂತಿ ಪ್ರಯುಕ್ತ ಗುರುನಮನ

ಅಧ್ಯಕ್ಷತೆ: ಪರಿಷತ್‌ನ ಸಹ ಸಂಚಾಲಕ ಡಾ. ರಾಘವೇಂದ್ರ ಭಟ್.
ಉಪಸ್ಥಿತಿ: ಜೆಸಿಬಿಎಂ ಕಾಲೇಜು ಪ್ರಾಚಾರ್ಯ ಡಾ. ದೇವಿದಾಸ್, ಜೆಸಿಬಿಎಂ ಸರ್ಕಾರಿ ಪಿಯು ಕಾಲೇಜು ಪ್ರಾಚಾರ್ಯ ಎ.ಜೆ.ಪ್ರಶಾಂತ್.
ಉಪನ್ಯಾಸ: ಶ್ರೀ ಸ್ವಯಂ ಪ್ರೌಢಶಾಲೆ ಮುಖ್ಯಶಿಕ್ಷಕ ಎಂ.ಎಸ್.ಜನಾರ್ದನ್ ಮಂಡಗಾರು. ಸ್ಥಳ: ಜೆಸಿಬಿಎಂ ಕಾಲೇಜಿನ ಡಾ. ಟಿ.ಎಂ.ಪೈ ಸಭಾಂಗಣ. ಮಧ್ಯಾಹ್ನ 3ಕ್ಕೆ.

Scanned by CamScanner

ದಾನ್ ಉತ್ಸವ: ನೋಟ್‌ಬುಕ್ ವಿತರಣೆ



ಶೃಂಗೇರಿ ಜೆಸಿಬಿಎಂ ಕಾಲೇಜಿನ ಎನ್ಎಸ್ಎಸ್ ನಿಂದ ದಾನ್ ಉತ್ಸವದಲ್ಲಿ ದತ್ತುಗ್ರಾಮ ವಿದ್ಯಾರಣ್ಯಪುರದ ಸ.ಹಿ.ಪ್ರಾ. ಶಾಲೆಯ ವಿದ್ಯಾರ್ಥಿಗಳಿಗೆ ನೋಟ್ ಬುಕ್ ನೀಡಲಾಯಿತು.

ಶೃಂಗೇರಿ: ಪ್ರತಿಯೊಬ್ಬರೂ ಸಹಾಯ ಮಾಡುವ ಪ್ರವೃತ್ತಿ ಬೆಳೆಸಿಕೊಂಡಾಗ ಸಂಕಷ್ಟದಲ್ಲಿರುವವರಿಗೆ ಸಹಾಯ ದೊರಕಿದಂತಾಗುತ್ತದೆ ಎಂದು ಶ್ರೀ ಜೆಸಿಬಿಎಂ ಕಾಲೇಜಿನ ಪ್ರಾಂಶುಪಾಲ ಡಾ. ದೇವಿದಾಸ ನಾಯಕ್ ಹೇಳಿದರು.

ಅವರು ಇತ್ತೀಚೆಗೆ ಶ್ರೀ ಜೆಸಿಬಿಎಂ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯಿಂದ ಇತ್ತೀಚೆಗೆ ದಾನ್ ಉತ್ಸವದಲ್ಲಿ ದತ್ತುಗ್ರಾಮ ವಿದ್ಯಾರಣ್ಯ ಪುರದ ಸ.ಹಿ.ಪ್ರಾ. ಶಾಲೆಯ ಮಕ್ಕಳಿಗೆ ಉತ್ಸವ ಅಂಗವಾಗಿ ಉಚಿತ ನೋಟ್‌ಬುಕ್ಸ್ ಹಾಗೂ ಲೇಖನ ಸಾಮಗ್ರಿಗಳನ್ನು ವಿತರಿಸಿ ಮಾತನಾಡಿದರು.

ವಿದ್ಯಾರ್ಥಿಗಳು ದಾನ ಮಾಡುವ ಪ್ರವೃತ್ತಿ ಬೆಳೆಸಿಕೊಂಡು ಸಮಾಜದ ಏಳಿಗೆಯಲ್ಲಿ ಅಳಿಲು ಸೇವೆ ಸಲ್ಲಿಸಬಹುದು. ಇದರಿಂದ ಸುಂದರ ಸಮಾಜ ನಿರ್ಮಾಣಗೊಳ್ಳುವಲ್ಲಿ ಸಹಕಾರಿಯಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಅಧಿಕಾರಿಗಳಾದ ಎ.ಜಿ.ಪ್ರಶಾಂತ್, ಲಕ್ಷ್ಮೀನಾರಾಯಣ್, ಉಮೇಶ್ ಹಾಗೂ ಉಪನ್ಯಾಸಕ ಭಾರದ್ವಾಜ್, ಶಾಲೆ ಮುಖ್ಯ ಶಿಕ್ಷಕ ಸತ್ಯನಾರಾಯಣ್ ಹಾಗೂ ಅಧ್ಯಾಪಕ ವರ್ಗದವರು ಹಾಜರಿದ್ದರು. ಈ ಸಂದರ್ಭ ವಿದ್ಯಾರ್ಥಿಗಳಿಗೆ ನೋಟ್‌ಬುಕ್ ಮತ್ತು ಲೇಖನ ಸಾಮಗ್ರಿಗಳನ್ನು ವಿತರಿಸಲಾಯಿತು.

ಕಚೇರಿ ವಿಳಾಸ

ವಿಜಯಕರ್ನಾಟಕ

ತಮ್ಮಯ್ಯ ಕಾಂಪ್ಲೆಕ್ಸ್, ಹನುಮಂತಪ್ಪ ಸರ್ಕಲ್ ಹತ್ತಿರ, ಎಂ.ಜಿ. ರಸ್ತೆ, ಚಿಕ್ಕಮಗಳೂರು.

ದೂರವಾಣಿ :08262-235354

ಜಾಹೀರಾತು ವಿಭಾಗ :08182-271868

ಪ್ರಸಾರಾಂಗ ವಿಭಾಗ :

08182-277414

ಇಮೇಲ್: vkckmlore@gmail.com

Scanned by CamScanner

ಶ್ರೀ ಜೆ.ಸಿ.ಬಿ.ಎಂ. ಕಾಲೇಜಿನ ಪ್ರಾಂಶುಪಾಲರಾಗಿ ಡಾ. ದೇವಿದಾಸ್ ನಾಯಕ್



ಶೃಂಗೇರಿ : ಶ್ರೀ ಜೆ.ಸಿ.ಬಿ.ಎಂ. ಕಾಲೇಜಿನ ಪ್ರಾಂಶುಪಾಲರಾಗಿ ಕಾರ್ಕಳದ ಡಾ. ದೇವಿದಾಸ್ ನಾಯಕ್ ಬುಧವಾರ ಅಧಿಕಾರ ಸ್ವೀಕರಿಸಿದರು. ಕಳೆದ 12 ವರ್ಷಗಳಿಂದ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದ್ದ ಡಾ|| ವೀರಪ್ಪಗೌಡರ ನಿವೃತ್ತಿಯಿಂದ ಈ ಸ್ಥಾನ ತೆರವಾಗಿತ್ತು. ಕಾರ್ಕಳ ಭುವನೇಂದ್ರ ಕಾಲೇಜಿನಲ್ಲಿ ಕಳೆದ 25 ವರ್ಷದಿಂದ ಆಂಗ್ಲಭಾಷೆ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದ ದೇವಿದಾಸನಾಯಕ್ ಸ್ವಾಮಿ ವಿವೇಕಾನಂದ ಅಧ್ಯಯನ ಕೇಂದ್ರದ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದರು. ರಾಷ್ಟ್ರೀಯ ಸೇವಾ ಯೋಜನೆಯಲ್ಲಿ ಅತ್ಯುತ್ತಮ ಎನ್.ಎಸ್.ಎಸ್. ಅಧಿಕಾರಿ ಪ್ರಶಸ್ತಿ ಪಡೆದಿರುವ ಇವರು ಹಲವಾರು ರಾಷ್ಟ್ರೀಯ ವಿಚಾರ ಸಂಕಿರಣಗಳು ಹಾಗೂ ಕಾರ್ಯಗಾರಗಳನ್ನು ಸಂಘಟಿಸಿದ್ದಾರೆ. ಅಧಿಕಾರ ಹಸ್ತಾಂತರ ಸಂದರ್ಭ ಕಾಲೇಜಿನ ವಿಶ್ವಸ್ಥ ಮಂಡಳಿ ಸದಸ್ಯರಾದ ಚಂದ್ರಶೇಖರರಾವ್ ಹುಲುಗಾರ್, ನಾಗೇಶ್‌ರಾವ್ ಸುಂಕುರ್ಡಿ ಹಾಗೂ ಕಾಲೇಜಿನ ಸಿಬ್ಬಂದಿ ಹಾಜರಿದ್ದರು.

Scanned by CamScanner

ಶೃಂಗೇರಿ: ಶ್ರೀ ಜೆ.ಸಿ.ಬಿ.ಎಂ. ಕಾಲೇಜು ನಿವೃತ್ತ ಪ್ರಾಚಾರ್ಯ ಡಾ.ಹೆಚ್.ಸಿ.ವೀರಪ್ಪಗೌಡರಿಗೆ, ಅಭಿನಂದನೆ



ಶೃಂಗೇರಿ: ಇಲ್ಲಿನ ಶ್ರೀ ಜೆ.ಸಿ.ಬಿ.ಎಂ. ಕಾಲೇಜಿನಲ್ಲಿ ಸುದೀರ್ಘಕಾಲ, ಸಮರ್ಥರೀತಿಯಲ್ಲಿ ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿ ಇದೀಗ ನಿವೃತ್ತಿ ಹೊಂದಿರುವ ಡಾ.ಹೆಚ್.ಸಿ.ವೀರಪ್ಪ ಗೌಡರಿಗೆ ಅಭಿನಂದನೆ ಸಲ್ಲಿಸುವ ಸಲುವಾಗಿನ ಸಮಾರಂಭವು, ಕಾಲೇಜಿನ ಮುಖ್ಯ ಸಭಾಂಗಣದಲ್ಲಿ ಜೂನ್. 14 ರಂದು ಸಾವಿರಾರು ಜನರ ಪಾಲ್ಗೊಳ್ಳುವಿಕೆ ನಡುವೆ ಸಂಪನ್ನಗೊಂಡಿತು. ಡಾ.ಹೆಚ್.ಸಿ.ವೀರಪ್ಪಗೌಡ ರವರನ್ನು ಅಭಿನಂದಿಸಿ ಮಾತನಾಡಿದ ಶ್ರೀ ಶಾರದಾ ಪೀಠದ ಆಡಳಿತಾಧಿಕಾರಿ ಡಾ.ವಿ.ಆರ್.ಗೌರೀ ಶಂಕರ್, ಜ್ಞಾನದ ಧಾರೆ ಎರೆಯುವ ವೃತ್ತಿಯನ್ನು ಕೈಗೊಂಡವರಿಗೆ ನಿವೃತ್ತಿ ಎಂಬುದು ಎಂದಿಗೂ ಇರುವುದಿಲ್ಲ. ವೀರಪ್ಪಗೌಡರಿಗೆ ತಮ್ಮ 52 ರ ಪ್ರಾಯದಲ್ಲಿ ಪಿ.ಹೆಚ್‌ಡಿ. ಮಾಡಬೇಕು ಎಂಬ ಆಕಾಂಕ್ಷೆ ಉಂಟಾಗಿದ್ದಲ್ಲದೇ ಅದನ್ನು ಅವರು ಸಾಧಿಸಿ ತೋರಿಸಿದ್ದರು ಎಂದು ಹೇಳಿದರು. ಪ್ರಾಥಮಿಕ ಶಿಕ್ಷಣದ ಹಂತದಲ್ಲೇ ತಾನು ಚೆನ್ನಾಗಿ ಓದಿ ಶಿಕ್ಷಕನಾಗಬೇಕೆಂಬ ಗುರಿಯನ್ನಿಟ್ಟುಕೊಂಡು ಅದನ್ನು ಸಾಧಿಸಿ ತೋರಿಸಿರುವ ವೀರಪ್ಪಗೌಡರು ವಿದ್ಯಾರ್ಥಿಗಳ ಪಾಲಿನ ರೋಲ್ ಮಾಡೆಲ್ ಆಗಿದ್ದಾರೆ. ಐವತ್ತು ವರ್ಷಗಳ ಇತಿಹಾಸ ಹೊಂದಿರುವ ಶ್ರೀ ಜೆ.ಸಿ.ಬಿ.ಎಂ. ಕಾಲೇಜನ್ನು ಕಟ್ಟಿ ಬೆಳೆಸುವಲ್ಲಿ ನೂರಾರು ಜನರ ಪರಿಶ್ರಮವಿದೆ. 24 ವರ್ಷ ಕಾಲೇಜಿನಲ್ಲಿ ಸೇವೆ ಸಲ್ಲಿಸಿರುವ ಗೌಡರು, ಹನ್ನೆರಡು ವರ್ಷ ಪ್ರಾಚಾರ್ಯರಾಗಿ ಕರ್ತವ್ಯ ನಿರ್ವಹಿಸಿ, ಕಾಲೇಜನ್ನು ವಿಶ್ವ ವಿದ್ಯಾ ನಿಲಯದಲ್ಲಿ ಗುರುತಿಸುವಂತಹ ಕೆಲಸ ಮಾಡಿದ್ದಾರೆ ಎಂದರು.

ಮಣಿಪಾಲದ ಅಕಾಡೆಮಿ ಆಫ್ ಜನರಲ್ ಎಜುಕೇಶನ್‌ನ ಆಡಳಿತಾಧಿಕಾರಿ ಡಾ.ಹೆಚ್.ಶಾಂತಾರಾಂ ಮಾತನಾಡಿ, ಐವತ್ತು ವರ್ಷ ತುಂಬಿರುವ ಮಲೆನಾಡಿನ ಈ ಹೆಮ್ಮೆಯ ಸಂಸ್ಥೆಯ ಬೆಳವಣಿಗೆಯಲ್ಲಿ ವೀರಪ್ಪಗೌಡರ ಕೊಡುಗೆ ಅಮೂಲ್ಯ ಪಾದಪ್ಪಾಗಿದೆ. ಅವರು ಕಾಲೇಜಿನಲ್ಲಿ ಆರಂಭಿಸಿರುವ ವಿವಿಧ ಕಾರ್ಯಕ್ರಮಗಳಿಗೆ ಜೀವ ತುಂಬುವ ಕಾರ್ಯವೂ ಸಹ ಅವರಿಂದಲೇ ಆಗಬೇಕು. ಗುರುವಿನ ಸ್ಥಾನದಲ್ಲಿರುವವರಿಗೆ ಸದಾ ಜಾಗೃತ ಪ್ರಜ್ಞೆ ಇರುವುದರಿಂದ ಅವರು ನಿವೃತ್ತರಾಗುವುದಿಲ್ಲ ಎಂದರು.

ಅಕಾಡೆಮಿ ಅಧ್ಯಕ್ಷ ಹೆಚ್.ಎಸ್.ಬಲ್ಲಾಳ್ ಮಾತನಾಡಿ, ವೀರಪ್ಪಗೌಡರಿಗೆ ತಮ್ಮ 52 ರ ಪ್ರಾಯದಲ್ಲಿ ವಿಶೇಷ ಜ್ಞಾನ ಸಂಪಾದನೆಯ ಆಸಕ್ತಿ ಇತ್ತು. ಈಗಿನ ವಿದ್ಯಾರ್ಥಿಗಳಲ್ಲಿ ತಾವು ಮುಂದೆ ಏನು ಸಾಧಿಸಬೇಕು ಎಂಬುದರ ಕಲ್ಪನೆ ಇರುವುದರಿಂದ ಇದು ಉಜ್ವಲ ಭವಿಷ್ಯಕ್ಕೆ ಕಾರಣವಾಗುವುದು ಎಂದು ಅಭಿಪ್ರಾಯ ಪಟ್ಟರು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ವೀರಪ್ಪಗೌಡರು, ಹರೆಯದಲ್ಲಿ ಅಕ್ಷರ ವಿದ್ಯೆ ಮತ್ತು ನಂತರ ಉದ್ಯೋಗವನ್ನು ನೀಡಿದ ಈ ಸಂಸ್ಥೆಯಲ್ಲೇ ತಾನು ನಿವೃತ್ತಿ ಹೊಂದುತ್ತಿರುವುದು ಬಲು ಭಾವನಾತ್ಮಕ ಸಂಗತಿ ಆಗಿದೆ ಎಂದರು. ಕಾಲೇಜಿನ ಆಡಳಿತ ಮಂಡಳಿಯ, ಆಕಾಡೆಮಿಯ, ಶ್ರೀ ಮಠದ ಹಾಗೂ ವಿವಿಧ ಸಂಘ ಸಂಸ್ಥೆಗಳ ಬೆಂಬಲದಿಂದಾಗಿ ಬಹಳಷ್ಟು ಕಾರ್ಯಗಳನ್ನು ಮಾಡಲು ತನಗೆ ಸಾಧ್ಯವಾಯಿತು ಎಂದು ತಿಳಿಸಿದ ಅವರು ತಮಗೆ ನೀಡಿದ ಅಭಿನಂದನೆಗೆ ಕೃತಜ್ಞತೆ ಸಲ್ಲಿಸಿದರು.

ವಿಶ್ವ ಮಾಂಡಳಿ ಸದಸ್ಯ ಅನಂತಾಪದ್ಮನಾಭ ಭಿಡೆ ಅಧ್ಯಕ್ಷತೆಯಲ್ಲಿ ನಡೆದ ಸಮಾರಂಭದಲ್ಲಿ ಸದಸ್ಯ ಟಿ.ಕೆ.ವರಾಹರು, ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಕೆಲ್ಸಿಂದ ಕೆ.ಎನ್. ಮೆಂಡೋನ್ಸ್ ಹಾಗೂ ನೂತನ ಪ್ರಾಚಾರ್ಯ ಡಾ. ದೇವಿದಾಸ ನಾಯಕ್ ಉಪಸ್ಥಿತರಿದ್ದರು. ನಾಗೇಶ ಕಾಮತ್ ಗೌರವ ಕುರಿತು ತಮ್ಮ ಅನಿಸಿಕೆ ವ್ಯಕ್ತಪಡಿಸಿದರು. ಸಮಾರಂಭದಲ್ಲಿ ವೀರಪ್ಪಗೌಡ ಮತ್ತು ಅವರ ಧರ್ಮಪತ್ನಿ ಭಾಗ್ಯವೀರಪ್ಪಗೌಡ ರವರನ್ನು ಸನ್ಮಾನಿಸಲಾಯಿತು. ಕೆ.ಎಂ.ಶ್ರೀನಿವಾಸ್ ಸ್ವಾಗತಿಸಿದರೆ, ಮಹಾಕಾಲೇಜಿನ ಪ್ರಾಂಶುಪಾಲ ಎ.ಜೆ.ಪ್ರಶಾಂತ್ ಮತ್ತು ಕ್ರಾಫ್ ನಿರೂಪಿಸಿದರು.

Scanned by CamScanner

ನಾಗೇಶ್ ಪತ್ರಿಕೆ 16-6-16

ನಾಗೇ

ಶ್ರೀ ಜೆ.ಸಿ.ಬಿ.ಎಂ. ಕಾಲೇಜಿನ ನೂತನ ಪ್ರಾಚಾರ್ಯರಾಗಿ ಡಾ.ದೇವಿದಾಸ ನಾಯಕ್ ಅಧಿಕಾರ ಸ್ವೀಕಾರ



ಶೃಂಗೇರಿ: ಇಲ್ಲಿನ ಶ್ರೀ ಜೆ.ಸಿ.ಬಿ.ಎಂ. ಕಾಲೇಜಿನ ನೂತನ ಪ್ರಾಚಾರ್ಯರಾಗಿ ಡಾ.ದೇವಿದಾಸ ನಾಯಕ್ ರವರು ಅಧಿಕಾರ ಸ್ವೀಕರಿಸಿದ್ದಾರೆ. ಈ ವರೆವಿಗೆ ಕಾಲೇಜಿನ ಪ್ರಾಚಾರ್ಯರಾಗಿದ್ದ ಡಾ. ಹೆಚ್.ಸಿ.ವೀರಪ್ಪಗೌಡರು ನಿವೃತ್ತಿ ಹೊಂದಿರುವ ಹಿನ್ನಲೆಯಲ್ಲಿ ಈ ನೇಮಕವಾಗಿದೆ. ಕಾರ್ಕಳ ಭುವನೇಂದ್ರ ಕಾಲೇಜಿನಲ್ಲಿ ಕಳೆದ 25 ವರ್ಷದಿಂದ ಆಂಗ್ಲ ಭಾಷೆ ವಿಭಾಗದಲ್ಲಿ ಪ್ರಾಧ್ಯಪಕರಾಗಿ ಸೇವೆ ಸಲ್ಲಿಸುತ್ತಿದ್ದ ದೇವಿದಾಸ ನಾಯಕ್, ಅನೇಕ ಜವಾಬ್ದಾರಿಗಳನ್ನು ಯಶಸ್ವಿಯಾಗಿ ನಿರ್ವಹಿಸಿದ ಅನುಭವವನ್ನು ಹೊಂದಿದ್ದಾರೆ. ಅದರಲ್ಲಿ ಮುಖ್ಯವಾಗಿ ನೈತಿಕ ಮತ್ತು ಆಧ್ಯಾತ್ಮಿಕ ಶಿಬಿರಗಳನ್ನು ಸಂಘಟಿಸಿದ, ಸ್ವಾಮಿ ವಿವೇಕಾನಂದ ಅಧ್ಯಯನ ಕೇಂದ್ರದ ನಿರ್ದೇಶಕರಾಗಿ ಸೇವೆ ಸಲ್ಲಿಸಿದ ಅನುಭವ ಅವರಿಗಿದೆ. ರಾಷ್ಟ್ರೀಯ ಸೇವಾಯೋಜನೆಯಲ್ಲಿ ಅತ್ಯುತ್ತಮ ಎನ್.ಎಸ್.ಎಸ್ ಅಧಿಕಾರಿ ಪ್ರಶಸ್ತಿ ಪಡೆದ ಇವರು, ಹಲವಾರು ರಾಷ್ಟ್ರೀಯ ವಿಚಾರ ಸಂಕೀರಣಗಳನ್ನು ಹಾಗೂ ಕಾರ್ಯಗಾರಗಳನ್ನು ಸಂಘಟಿಸಿದ್ದಾರೆ. ಅಧಿಕಾರ ಹಸ್ತಾಂತರ ಸಂದರ್ಭದಲ್ಲಿ ಕಾಲೇಜಿನ ವಿಶ್ವಸ್ತ ಮಂಡಳಿ ಸದಸ್ಯರಾದ ಹುಲುಗಾರ್ ಚಂದ್ರಶೇಖರ ರಾವ್, ಸುಂಕುರ್ಡಿ ನಾಗೇಶ್‌ರಾವ್ ಹಾಗೂ ಕಾಲೇಜಿನ ಸಿಬ್ಬಂದಿವರ್ಗದವರು ಹಾಜರಿದ್ದರು.

Scanned by CamScanner

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » SHIVAMOGGA
ಗುರುವಾರ
16 ಜೂನ್ 2016
16 JUNE 2016
5

ನಿವೃತ್ತ ಪ್ರಾಚಾರ್ಯರಿಗೆ ಬೀಳ್ಕೊಡುಗೆ

■ ವಿಜಯವಾಣಿ ಸುದ್ದಿಜಾಲ ಶೃಂಗೇರಿ

ಪ್ರಾಥಮಿಕ ಶಿಕ್ಷಣ ಹಂತದಲ್ಲೇ ಚೆನ್ನಾಗಿ ಓದಿ ಶಿಕ್ಷಕನೇ ಆಗಬೇಕು ಎಂದು ನಿರ್ದಿಷ್ಟ ಗುರಿಯನ್ನಿಟ್ಟುಕೊಂಡು ಅದನ್ನು ಸಾಧಿಸಿ ತೋರಿಸಿದ ಪ್ರೊ. ಎಚ್.ಸಿ.ವೀರಪ್ಪ ಗೌಡರು ವಿದ್ಯಾರ್ಥಿಗಳಿಗೆ ಚೈತನ್ಯ ತುಂಬಿದ್ದಾರೆ ಎಂದು ಶ್ರೀ ಶಾರದಾ ಪೀಠದ ಆಡಳಿತಾಧಿಕಾರಿ ಡಾ. ವಿ.ಆರ್. ಗೌರೀಶಂಕರ್ ಹೇಳಿದರು.

ಜೆಸಿಬಿಎಂ ಕಾಲೇಜಿನಲ್ಲಿ ನಿವೃತ್ತ ಪ್ರಾಚಾರ್ಯ ಡಾ. ಎಚ್.ಸಿ.ವೀರಪ್ಪ ಗೌಡರಿಗೆ ಹಮ್ಮಿಕೊಂಡಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಅಭಿನಂದನಾ ಭಾಷಣ ಮಾಡಿದರು.

ಅಜ್ಞಾನವನ್ನು ಹೋಗಲಾಡಿಸಿ ಜ್ಞಾನವನ್ನು ನೀಡುವ ವೃತ್ತಿ ಸೇರಿದವರಿಗೆ ನಿವೃತ್ತಿ ಎಂಬುದಿಲ್ಲ. ವೀರಪ್ಪ ಗೌಡರು 52ರ ಪ್ರಾಯದಲ್ಲಿ ಪಿಎಚ್‌ಡಿ ಮಾಡಿದರು. 50 ವರ್ಷ ತುಂಬಿರುವ ಈ ಕಾಲೇಜಿನ ಅಭಿವೃದ್ಧಿಗಾಗಿ ಅವರು ಸದಾ ಸಲಹೆ, ಮಾರ್ಗದರ್ಶನ ನೀಡಬೇಕು ಎಂದು ಹೇಳಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ವೀರಪ್ಪ ಗೌಡ, ಅಕ್ಷರ ಕಲಿಸಿ, ನಂತರ ಉದ್ಯೋಗವನ್ನೂ ನೀಡಿದ ಸಂಸ್ಥೆಯಿಂದಲೇ ಈಗ ನಿವೃತ್ತನಾಗುತ್ತಿದ್ದೇನೆ. ಇದು ಭಾವನಾತ್ಮಕ ಸಂಗತಿ. ಕಾಲೇಜಿನ ಆಡಳಿತ ಮಂಡಳಿ, ಶ್ರೀಮಠ, ವಿವಿಧ ಸಂಘ ಸಂಸ್ಥೆಗಳ ಬೆಂಬಲದಿಂದ ಅನೇಕ ಕೆಲಸ ಗಳನ್ನು ಮಾಡಲು ಸಾಧ್ಯವಾಯಿತು ಎಂದು ಹೇಳಿದರು.

ಮಣಿಪಾಲ ಅಕಾಡೆಮಿ ಆಫ್ ಜನರಲ್ ಎಜುಕೇಶನ್ ಆಡಳಿತಾಧಿಕಾರಿ ಡಾ. ಎಚ್. ಶಾಂತಾರಾಂ ಮಾತನಾಡಿ, ಗುರುವಿಗೆ ನಿವೃತ್ತಿ ಎಂಬುದೇ ಇಲ್ಲ. ಅವರಲ್ಲಿ ಸದಾ ಜಾಗೃತ ಪ್ರಜ್ಞೆ ಇರುತ್ತದೆ ಎಂದರು.

ಅಕಾಡೆಮಿ ಅಧ್ಯಕ್ಷ ಎಚ್.ಎಸ್.ಬಲ್ಲಾಳ್ ಮಾತನಾಡಿದರು. ವಿಶ್ರಸ್ತ ಮಂಡಳಿ ಸದಸ್ಯ ಅನಂತಪದ್ಮನಾಭ ಭಟ್ಟ ಅಧ್ಯಕ್ಷತೆ ವಹಿಸಿದ್ದರು. ಸದಸ್ಯ ಟಿ.ಕೆ.ಪರಾಶರ, ಹಳೇ ವಿದ್ಯಾರ್ಥಿ ಸಂಘದ ಅಧ್ಯಕ್ಷ ಹೆಬ್ಬುಂದ ವೆಂಕಟೇಶ್, ಪ್ರಾಚಾರ್ಯ ಡಾ. ದೇವಿದಾಸ ನಾಯಕ್, ಎ.ಜಿ.ಪ್ರಶಾಂತ್, ನಾಗೇಶ ಕಾಮತ್ ಇದ್ದರು.



ಜೆಸಿಬಿಎಂ ಕಾಲೇಜಿನಲ್ಲಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ಪ್ರಾಚಾರ್ಯ ವೀರಪ್ಪ ಗೌಡರನ್ನು ಅಕಾಡೆಮಿ ಆಫ್ ಜನರಲ್ ಎಜುಕೇಶನ್ ಆಡಳಿತಾಧಿಕಾರಿ ಶಾಂತಾರಾಂ ಸನ್ಮಾನಿಸಿದರು.

Scanned by CamScanner

ವಿಜಯ ಕರ್ನಾಟಕ VK

ಬುಧವಾರ, 15 ಜೂನ್ 2016, ಶಿವಮೊ

ಡಾ.ವೀರಪ್ಪಗೌಡರಿಂದ ಗುರುತರ ಸೇವೆ



ಶೃಂಗೇರಿ ಜೆಸಿಬಿಎಂ ಕಾಲೇಜಿನ ನಿವೃತ್ತ ಪ್ರಾಚಾರ್ಯ ಡಾ.ಎಚ್.ಸಿ.ವೀರಪ್ಪಗೌಡ ದಂಪತಿಯನ್ನು ಮಂಗಳವಾರ ಕಾಲೇಜಿನಲ್ಲಿ ಅಭಿನಂದಿಸಲಾಯಿತು. ಶ್ರೀಶಾರದಾ ಪೀಠದ ಆಡಳಿತಾಧಿಕಾರಿ ಡಾ.ವಿ.ಆರ್.ಗೌರೀಶಂಕರ್ ಮತ್ತಿತರರು ಹಾಜರಿದ್ದರು.

■ ವಿಜಯ ಸುದ್ದಿಲೋಕ, ಶೃಂಗೇರಿ

ಮಲೆನಾಡಿನ ಪ್ರತಿಷ್ಠಿತ ಸಂಸ್ಥೆಯಾದ ಶ್ರೀಜೆಸಿಬಿಎಂ ಕಾಲೇಜನ್ನು ಮತ್ತಷ್ಟು ಉನ್ನತಿಗೆ ಕೊಂಡೊಯ್ಯುವಲ್ಲಿ ಡಾ. ವೀರಪ್ಪಗೌಡರ ಪಾತ್ರ ಅಮೂಲ್ಯವಾದುದು ಎಂದು ಶ್ರೀಶಾರದಾ ಪೀಠದ ಆಡಳಿತಾಧಿಕಾರಿ ಡಾ.ವಿ.ಆರ್. ಗೌರೀಶಂಕರ್ ಹೇಳಿದರು.

ಅವರು ಮಂಗಳವಾರ ಶ್ರೀಜೆಸಿಬಿಎಂ ಕಾಲೇಜಿನಲ್ಲಿ ನಡೆದ ನಿವೃತ್ತ ಪ್ರಾಚಾರ್ಯ ಡಾ.ಎಚ್.ಸಿ. ವೀರಪ್ಪಗೌಡರ ಅಭಿನಂದನಾ ಸಮಾರಂಭದಲ್ಲಿ ಅವರನ್ನು ಅಭಿನಂದಿಸಿ ಮಾತನಾಡಿದರು.

50 ವರ್ಷಗಳ ಇತಿಹಾಸ ಹೊಂದಿರುವ ಕಾಲೇಜನ್ನು ಕಟ್ಟಿ ಬೆಳೆಸುವಲ್ಲಿ ನೂರಾರು ಜನರ ಪರಿಶ್ರಮವಿದೆ. 24 ವರ್ಷ ಕಾಲೇಜಿನಲ್ಲಿ ಸೇವೆ ಸಲ್ಲಿಸಿದ ಗೌಡರು, 12 ವರ್ಷ ಪ್ರಾಚಾರ್ಯರಾಗಿ ಕಾಲೇಜನ್ನು ವಿಶ್ವ ವಿದ್ಯಾನಿಲಯದಲ್ಲಿ ಗುರುತಿಸುವಂತಹ ಕೆಲಸ ಮಾಡಿದ್ದಾರೆ. ಜ್ಞಾನದ ಧಾರೆ ಎರೆಯುವ ವೃತ್ತಿಯನ್ನು ಸೇರಿದವರಿಗೆ ನಿವೃತ್ತಿ ಎಂಬುದು ಎಂದಿಗೂ ಇರುವುದಿಲ್ಲ. ವೀರಪ್ಪಗೌಡರಿಗೆ ತಮ್ಮ 52ನೇ ವಯಸ್ಸಿನಲ್ಲಿ ಸಂಶೋಧನಾ ಗ್ರಂಥ ಮಾಡಬೇಕು ಎಂಬ ಆಕಾಂಕ್ಷೆ ಉಂಟಾಗಿದ್ದಲ್ಲದೇ ಅದನ್ನು ಅವರು ಸಾಧಿಸಿ ತೋರಿಸಿದ್ದರು. ಅವರ ಸೇವೆಯು ನಿರಂತರವಾಗಿ ಕಾಲೇಜಿಗೆ ದೊರಕಲಿ ಎಂದರು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ವೀರಪ್ಪಗೌಡರು, ನಾನು ಹುಟ್ಟಿ ಬೆಳೆದ ಊರಿನ ಕಾಲೇಜಿನಲ್ಲಿ ಸೇವೆ ಸಲ್ಲಿಸುವ ಅವಕಾಶ ದೊರಕಿತ್ತು. ಇಲ್ಲಿಯೇ ನಿವೃತ್ತಿ ಹೊಂದುತ್ತಿದ್ದರೂ,ಕಾಲೇಜಿನ ಸಂಬಂಧ ಎಂದಿಗೂ ಇರುತ್ತದೆ. ಎಲ್ಲರ ಸಹಕಾರದಿಂದ ಕಾಲೇಜು ಅಭಿವೃದ್ಧಿಗೊಳ್ಳಲು ಸಾಧ್ಯವಾಯಿತು ಎಂದರು.

ಕಾರ್ಯಕ್ರಮದಲ್ಲಿ ಮಣಿಪಾಲದ ಅಕಾಡೆಮಿ ಆಫ್ ಜನರಲ್ ಎಜುಕೇಶನ್‌ನ ಆಡಳಿತಾಧಿಕಾರಿ ಡಾ.ಎಚ್. ಶಾಂತಾರಾಂ, ಅಕಾಡೆಮಿ ಅಧ್ಯಕ್ಷ ಎಚ್. ಎಸ್.ಬಲ್ಲಾಳ್, ಪ.ಪಂ.ಸದಸ್ಯ ಟಿ. ಕೆ.ಪರಾಶರ, ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಹೆಬ್ಬುಗಂದ್ ವೆಂಕಟೇಶ್ ಹಾಗೂ ನೂತನ ಪ್ರಾಚಾರ್ಯ ಡಾ.ದೇವಿದಾಸ ನಾಯಕ್ ಉಪಸ್ಥಿತರಿದ್ದರು.

ಕೆ.ಎಂ.ಶ್ರೀನಿವಾಸ್ ಸ್ವಾಗತಿಸಿ, ಪ್ರಭಾಕರ ಕಾರಂತ ಪ್ರಾಸ್ತಾವಿಕ ಮಾತನಾಡಿದರು. ಪ್ರಕಾಶ್ ಮತ್ತು ಪ್ರಶಾಂತ್ ನಿರೂಪಿಸಿದರು.

Scanned by CamScanner

ನಾಗೇಶ್ ಪತ್ರಿಕೆ

ದಿನಾಂಕ : 02 - 06 - 2016

ದ್ವಿತೀಯ ಪಿ.ಯು.ಸಿ. ಪರೀಕ್ಷೆ

ಶ್ರೀ ಜೆ.ಸಿ.ಬಿ.ಎಂ. ಕಾಲೇಜಿಗೆ, ಶೇ.87 ಫಲಿತಾಂಶ



ಶೃಂಗೇರಿ: ಇಲ್ಲಿನ ಶ್ರೀ ಜೆ.ಸಿ.ಬಿ.ಎಂ. ಕಾಲೇಜಿಗೆ ದ್ವಿತೀಯ.ಪಿ.ಯು.ಸಿ. ಪರೀಕ್ಷೆಯಲ್ಲಿ ಶೇ. 87 ರಷ್ಟು ಫಲಿತಾಂಶ ಬಂದಿದೆ. ಪರೀಕ್ಷೆಗೆ ಹಾಜರಾಗಿದ್ದ ಒಟ್ಟು 293 ವಿದ್ಯಾರ್ಥಿಗಳಲ್ಲಿ 255 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಅವರಲ್ಲಿ 50 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್‌ನಲ್ಲಿ ಪಾಸಾಗಿದ್ದರೆ, 168 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ಕೆ.ಎಸ್.ಧಾತ್ರಿ ಒಟ್ಟು 583 ಅಂಕ ಪಡೆದು (ಶೇ. 97) ಪ್ರಥಮ ಸ್ಥಾನವನ್ನು ಪಡೆದರೆ, ಎಂ.ಬಿ. ಭಾವನಾ ಭಟ್ ಒಟ್ಟು 573 ಅಂಕಗಳೊಂದಿಗೆ (ಶೇ. 95) ದ್ವಿತೀಯ ಸ್ಥಾನವನ್ನು ಗಳಿಸಿದ್ದಾರೆ. ವಿಜ್ಞಾನ ವಿಭಾಗದಲ್ಲಿ ಜೆ.ಎ. ಪ್ರಿಯ ಒಟ್ಟು 558 ಅಂಕ ಸಂಪಾದಿಸಿ (ಶೇ 94. 33) ಪ್ರಥಮ ಸ್ಥಾನ ಪಡೆದರೆ, ವಿ.ಬಿ. ಶ್ರೀನಿವಾಸ ಸೌಮಿತ್ರಿ ಒಟ್ಟು 556 ಅಂಕ ಗಳಿಸಿ (ಶೇ.. 93) ದ್ವಿತೀಯಳಾಗಿ ಹೊರಹೊಮ್ಮಿದ್ದಾರೆ. ಕಲಾ ವಿಭಾಗದಲ್ಲಿ ಸಿ.ಲಕ್ಷ್ಮೀಶ ಒಟ್ಟು 513 ಅಂಕ ಗಳೊಂದಿಗೆ (ಶೇ. 85) ಪ್ರಥಮ ಸ್ಥಾನವನ್ನು ಪಡೆದಿದ್ದಾರೆ. ಹೆಚ್ಚಿನ ಸಾಧನೆ ತೋರಿದ ಎಲ್ಲಾ ವಿದ್ಯಾರ್ಥಿಗಳನ್ನು ಕಾಲೇಜಿನ ಆಡಳಿತ ಮಂಡಳಿ, ಪ್ರಾಂಶುಪಾಲರು, ಸಿಬ್ಬಂದಿ ವರ್ಗದವರು ಅಭಿನಂದಿಸಿದ್ದಾರೆ.

Scanned by CamScanner

ವಿಜಯ ಕರ್ನಾಟಕ
1-6-16

ಶೃಂಗೇರಿ ಜೆಸಿಬಿಎಂ ಕಾಲೇಜಿಗೆ ಉತ್ತಮ ಫಲಿತಾಂಶ







ಶೃಂಗೇರಿ: ಶ್ರೀ ಜೆಸಿಬಿಎಂ ಕಾಲೇಜಿಗೆ ದ್ವಿತೀಯ ಪಿಯುಸಿ ಯಲ್ಲಿ ಶೇ.87 ಫಲಿತಾಂಶ ಗಳಿಸಿದ್ದು 50 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ ಪಾಸಾಗಿದ್ದಾರೆ.

ಪರೀಕ್ಷೆಗೆ ಹಾಜರಾದ ಒಟ್ಟು 293 ವಿದ್ಯಾರ್ಥಿಗಳಲ್ಲಿ 255 ಮಂದಿ ಉತ್ತೀರ್ಣರಾಗಿದ್ದು, 168 ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಕೆ.ಎಸ್.ಧಾತ್ರಿ ಶೇ.97 (583), ಎಂ.ಬಿ.ಭಾವನಾ ಭಟ್ ಶೇ.95 (573) ಅಂಕ ಪಡೆದಿದ್ದು, ಜೆ.ಎ.ಪ್ರಿಯ ಶೇ.94.33 (556) ಹಾಗೂ ವಿ.ಬಿ.ಶ್ರೀನಿವಾಸಸೌಮಿತ್ರಿ ಶೇ.93 (558) ಸಿ.ಲಕ್ಷ್ಮೀಶ ಶೇ 85 (513) ಅಂಕ ಗಳಿಸಿದ್ದಾರೆ.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » SHIVAMOGGA
ಸೋಮವಾರ 30 ಮೇ 2016 | 3
30 MAY 2016

ಅತ್ಯುನ್ನತ ಶ್ರೇಣಿ

ಶೃಂಗೇರಿ: ಶ್ರೀ ಜೆಸಿಬಿಎಂ ಕಾಲೇಜಿನ ವಿದ್ಯಾರ್ಥಿನಿ ಜಿ.ದಿಶಾ ಶೆಟ್ಟಿ ವಾಣಿಜ್ಯ ವಿಭಾಗದಲ್ಲಿ ಶೇ.94.33 ಅಂಕ ಗಳಿಸಿ ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ವರ್ತಕ ಗೋಪಾಲ ಶೆಟ್ಟಿ ಮತ್ತು ಮೀನಾ ಅವರ ಪುತ್ರಿ.



ವಿಜಯ ಕರ್ನಾಟಕ VK
ಸೋಮವಾರ, 30 ಮೇ 2016,

ದಿಶಾ ಶೆಟ್ಟಿಗೆ ಅತ್ಯುನ್ನತ ಶ್ರೇಣಿ

ಶೃಂಗೇರಿ: ಪಟ್ಟಣದ ಜೆಸಿಬಿಎಂ ಕಾಲೇಜಿನ ವಿದ್ಯಾರ್ಥಿನಿ ಜಿ.ದಿಶಾ ಶೆಟ್ಟಿ ವಾಣಿಜ್ಯ ವಿಭಾಗದಲ್ಲಿ ಶೇ.94.33 ಅಂಕ ಗಳಿಸಿ ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಇವರು ಪಟ್ಟಣದ ವರ್ತಕ ಗೋಪಾಲ ಶೆಟ್ಟಿ ಮತ್ತು ಮೀನಾ ಅವರ ಪುತ್ರಿ.



Scanned by CamScanner

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » SHIVAMOGGA
10 | ಶುಕ್ರವಾರ 27 ಮೇ 2016 27 MAY 2016

ಶುಕ್ರವಾರ, ಮೇ • 27, 2016 ಪ್ರಜಾವಾಣಿ

ವಿದ್ಯಾರ್ಥಿಗಳಿಂದಲೇ ಶಿಕ್ಷಕರ ರಿಪೋರ್ಟ್ ಕಾರ್ಡ್

ನವದೆಹಲಿ: ಉನ್ನತ ಶಿಕ್ಷಣದ ಗುಣಮಟ್ಟ ಹೆಚ್ಚಳದ ಸಲುವಾಗಿ ವಿಶ್ವವಿದ್ಯಾಲಯ ಧನಸಹಾಯ ಆಯೋಗ (ಯುಜಿಸಿ) ವಿಶ್ವವಿದ್ಯಾಲಯ ಮತ್ತು ಕಾಲೇಜು ಪ್ರೊಫೆಸರ್‌ಗಳ ಬಡ್ತಿ ಮತ್ತು ಕೆಲಸದ ನೀತಿಯಲ್ಲಿ ಬದಲಾವಣೆ ತಂದಿದೆ. ಪ್ರೊಫೆಸರ್‌ಗಳು ಮಾಸಿಕ 6ರಿಂದ 8 ಗಂಟೆ ಹೆಚ್ಚು ಕ್ಲಾಸ್‌ಗಳನ್ನು ತೆಗೆದುಕೊಳ್ಳಬೇಕಿದೆ. ಜತೆಗೆ ಥಿಸೀಸ್‌ಗಳ ಮೌಲ್ಯಾಂಕನಕ್ಕೆ ಹೊರಗಿನ ಇಬ್ಬರು ಪ್ರೊಫೆಸರ್‌ಗಳಿರುವುದು ಅನಿವಾರ್ಯವಾಗಲಿದೆ. ಸೈನ್ಸ್ ಲ್ಯಾಬ್‌ನ ಪ್ರಾಕ್ಟಿಕಲ್ ಅವಧಿಯನ್ನು 1ರಿಂದ 2 ಗಂಟೆಗೆ ಹೆಚ್ಚಿಸಲಾಗಿದೆ. ಶಿಕ್ಷಕರ ರಿಪೋರ್ಟ್ ಕಾರ್ಡ್ ತಯಾರಿಸುವ ಜವಾಬ್ದಾರಿಯನ್ನು ವಿದ್ಯಾರ್ಥಿ ಗಳಿಗೆ ನೀಡಲು ನಿರ್ಧರಿಸಲಾಗಿದೆ. ಅವರು ಮಾಡುವ ಪಾಠವನ್ನಾಧರಿಸಿ ರಿಪೋರ್ಟ್ ಸಿದ್ಧವಾಗುತ್ತದೆ. ರಿಪೋರ್ಟ್ ಕಾರ್ಡ್‌ಗೆ ಶೇ.70ಕ್ಕಿಂತ ಹೆಚ್ಚು ಹಾಜರಾತಿ ಹೊಂದಿರುವ ವಿದ್ಯಾರ್ಥಿಗಳನ್ನು ಮಾತ್ರ ಪರಿಗಣಿಸಲಾಗುತ್ತದೆ.



'ಬೋಧನಾ ಅವಧಿ ಹೆಚ್ಚಳ ಇಲ್ಲ'

ನವದೆಹಲಿ (ಪಿಟಿಐ): ವಿಶ್ವವಿದ್ಯಾಲಯಗಳ ಸಹಾಯಕ ಪ್ರಾಧ್ಯಾಪಕರ ಬೋಧನಾ ಅವಧಿಯನ್ನು ಎರಡು ಗಂಟೆ ಹೆಚ್ಚಿಸಿರುವ ನಿಯಮವನ್ನು ಕೈಬಿಡುವಂತೆ ವಿಶ್ವವಿದ್ಯಾಲಯ ಅನುದಾನ ಆಯೋಗಕ್ಕೆ ಕೇಂದ್ರ ಮಾನವ ಸಂಪನ್ಮೂಲ ಇಲಾಖೆ ಸೂಚನೆ ನೀಡಿದೆ.

ಯುಜಿಸಿ ನೀಡಿದ ಸಲಹೆಯ ನಂತರ ಸಹಾಯಕ ಪ್ರಾಧ್ಯಾಪಕರ ಬೋಧನಾ ಅವಧಿ ಎರಡು ಗಂಟೆ ಹೆಚ್ಚಿಸಿ ಗೆಜೆಟ್ ಪ್ರಕಟಣೆ ಹೊರಡಿಸಲಾಗಿತ್ತು. ಇದಾದ ನಂತರ ದೆಹಲಿ ವಿ.ವಿ. ಉಪನ್ಯಾಸಕರು ಪ್ರತಿಭಟನೆ ಆರಂಭಿಸಿದ್ದರು.ಎರಡು ದಿನ ಹಿಂದೆ ಈ ಬಗ್ಗೆ ಸ್ಪಷ್ಟನೆ ನೀಡಿದ್ದ ಉನ್ನತ ಶಿಕ್ಷಣ ಇಲಾಖೆ ಕಾರ್ಯದರ್ಶಿ ವಿನಯಶೀಲ ಒಬೆರಾಯ್, 'ಬೋಧನಾ ಅವಧಿಯಲ್ಲಿ ಹೆಚ್ಚಳ ಮಾಡುವುದಿಲ್ಲ. ಅದು ಯುಜಿಸಿಯ ಸಲಹೆಯಾಗಿತ್ತೇ ವಿನಾ ಕಡ್ಡಾಯವಲ್ಲ' ಎಂದು ಸ್ಪಷ್ಟನೆ ನೀಡಿದ್ದರು.

Scanned by CamScanner

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » SHIVAMOGGA
12 | ಶುಕ್ರವಾರ 27 ಮೇ 2016
27 MAY 2016

ಜೆಸಿಬಿಎಂ ಫಲಿತಾಂಶ ಶೇ.87

ಶೃಂಗೇರಿ: ಜೆಸಿಬಿಎಂ ಕಾಲೇಜಿನ ದ್ವಿತೀಯ ಪಿಯು ಫಲಿತಾಂಶ ಶೇ.87ರಷ್ಟಾಗಿದೆ. ಹಾಜರಾದ ಒಟ್ಟೂ 293 ವಿದ್ಯಾರ್ಥಿಗಳಲ್ಲಿ 255 ಮಂದಿ ಉತ್ತೀರ್ಣರಾಗಿದ್ದಾರೆ. 50 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿ, 168 ಪ್ರಥಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ಕೆ.ಎಸ್.ಧಾತ್ರಿ ಶೇ.97 ಅಂಕ ಪಡೆದು ಪ್ರಥಮ ಸ್ಥಾನ ಪಡೆದಿದ್ದಾಳೆ. ಇದೇ ವಿಭಾಗದ ಎಂ.ಬಿ.ಭಾವನಾ ಭಟ್ ಶೇ.95 ಅಂಕ ಗಳಿಸಿ ದ್ವಿತೀಯ ಹಾಗೂ ವಿಜ್ಞಾನ ವಿಭಾಗದ ಜೆ.ಎ.ಪ್ರಿಯಾ ಶೇ.94.33 ಪ್ರಥಮ ಹಾಗೂ ವಿ.ಬಿ.ಶ್ರೀನಿವಾಸ ಸೌಮಿತ್ರಿ ಶೇ.93 ಅಂಕ ಗಳಿಸಿ ದ್ವಿತೀಯ ಪಡೆದಿದ್ದಾರೆ. ಕಲಾ ವಿಭಾಗದಲ್ಲಿ ಸಿ.ಲಕ್ಷ್ಮೀಶ್ ಶೇ.85 ಅಂಕಗಳೊಂದಿಗೆ ಪ್ರಥಮ ಸ್ಥಾನ ಪಡೆದಿದ್ದಾರೆ.


ಧಾತ್ರಿ


ಭಾವನಾ ಭಟ್


ಪ್ರಿಯಾ


ಶ್ರೀನಿವಾಸ್


ಲಕ್ಷ್ಮೀಶ

Scanned by CamScanner

 ವಾರ್ತೆ ಪತ್ರಿಕೆ 19-5-16

ಆಧುನಿಕತೆಯ ಸೋಗು, ಮಲೆನಾಡಿನ ಮೂಲ ಗುಣಗಳಿಗೆ ತೀವ್ರ ಪೆಟ್ಟು ನೀಡುತ್ತಿದೆ: ರಮೇಶ್ ಬೇಗಾರ್



ಶೃಂಗೇರಿ: ಇಲ್ಲಿನ ಶ್ರೀ ಜೆ.ಸಿ.ಬಿ.ಎಂ. ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ಸೇವಾ ಯೋಜನೆ, ಯುವ ರೆಡ್ ಕ್ರಾಸ್ ಘಟಕಗಳ ದೈನಂದಿನ ಚಟುವಟಿಕೆಗಳ ಸಮಾರೋಪ ಕಾರ್ಯಕ್ರಮವು ಇತ್ತೀಚೆಗೆ ನಡೆಯಿತು. ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು ಮಾತನಾಡಿದ ರಂಗ ಕರ್ಮಿ ರಮೇಶ್ ಬೇಗಾರ್, ಮಲೆನಾಡಿನಲ್ಲಿಯೂ ಆಧುನಿಕತೆಯ ಬಿಸಿ ತಟ್ಟಿದ್ದು, ಇದರಿಂದ ಮಲೆನಾಡಿನ ಸಂಸ್ಕೃತಿ, ಆಚಾರ, ವಿಚಾರಗಳ ಮೇಲೆ ಪೆಟ್ಟು ಬೀಳುತ್ತಿದೆ ಎಂದು ಹೇಳಿದರು. ಬದಲಾಗುತ್ತಿರುವ ಜನ ಜೀವನ ಪದ್ಧತಿ ಎಲ್ಲಾ ಕ್ಷೇತ್ರದ ಮೇಲೂ ಪರಿಣಾಮಬೀರುತ್ತಿದ್ದು, ಆಧುನಿಕತೆಯ ಸೋಗು ಮಲೆನಾಡಿನ ಮೂಲ ಗುಣಗಳಿಗೆ ತೀವ್ರ ಪೆಟ್ಟು ನೀಡುತ್ತಿದೆ. ಮಲೆನಾಡಿಗೆ ತನ್ನದೇ ಆದ ವೈಶಿಷ್ಟ್ಯವಿದ್ದು, ಅದು ಬಯಲು ಸೀಮೆ ಪ್ರಾಂತ್ಯಕ್ಕಿಂತ ಭಿನ್ನವಾಗಿದೆ. ಆದರೆ ವರ್ತಮಾನದಲ್ಲಿ ಮಲೆನಾಡಿನ ಆಚಾರ ವಿಚಾರಗಳು ಪಟ್ಟಣ ಪ್ರದೇಶದ ಆಚಾರ ವಿಚಾರಗಳಂತೆ ಬದಲಾಗುತ್ತಿರುವುದು ಕಂಡು ಬರುತ್ತಿದೆ. ನಮ್ಮ ಸಂಸ್ಕೃತಿಯನ್ನು ಉಳಿಸಿ, ಬೆಳೆಸಲು ಯುವ ಜನಾಂಗ ಗಂಭೀರವಾಗಿ ಚಿಂತಿಸುವ ಕಾಲ ಇದಾಗಿದೆ ಎಂದರು. ವಿದ್ಯಾರ್ಥಿ ಕ್ಷೇಮಪಾಲನಾಧಿಕಾರಿ ದತ್ತಾತ್ರೇಯ ಎಂ ಮಾರ್ಪಳ್ಳಿ ಮಾತನಾಡಿ, ಮನುಷ್ಯನೊಬ್ಬನ ಬದುಕಿನ ವ್ಯಕ್ತಿತ್ವ ಮತ್ತು ಯಶಸ್ಸು ಆತನು ತೊಡಗಿಸಿಕೊಳ್ಳುವ ಸಂಘಟನೆಗಳ ಸಂಖ್ಯೆಯ ಮೇಲೆ ನಿಂತಿದೆ ಎಂದು ಹೇಳಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಚಾರ್ಯ ಡಾ ಹೆಚ್.ಸಿ.ವೀರಪ್ಪಗೌಡ ವಹಿಸಿದ್ದರು. ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಎ.ಜಿ.ಪ್ರಶಾಂತ, ಡಾ ಎಂ.ಸ್ವಾಮಿ, ರಾಘವೇಂದ್ರ, ಕೆ.ಜಿ.ಉಮೇಶ್ ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಮುಖ್ಯಮಂತ್ರಿ ಅಭಿನಂದನಾ ಪ್ರಶಸ್ತಿ ಪಡೆದ ಕಾಲೇಜಿನ ಎನ್.ಸಿ.ಸಿ. ಅಧಿಕಾರಿ ಡಾ.ಕುಮಾರಸ್ವಾಮಿ ಉಡುಪ ದಂಪತಿಗಳನ್ನು ಸನ್ಮಾನಿಸಲಾಯಿತು. ಕಿರಣ್, ಕಾವ್ಯ ತಮ್ಮ ಅನಿಸಿಕೆ ಹಂಚಿಕೊಂಡರು. ಶಾಶ್ವತಿ ಪ್ರಾರ್ಥಿಸಿ, ಸ್ವಾಗತ್ ವರದಿ ವಾಚಿಸಿದರು. ಮಾನುಷ ನಿರೂಪಿಸಿ, ಶ್ರೀನಿವಾಸ್ ವಂದಿಸಿದರು.

Scanned by CamScanner

ಕಾರ್ಕಳ ಪತ್ರಿಕೆ 19-5-16

ನಾಗೇಶ

ಶ್ರೀ ಜೆ.ಸಿ.ಬಿ.ಎಂ. ಕಾಲೇಜಿನ, ಎನ್.ಸಿ.ಸಿ. ಅಧಿಕಾರಿಗಳಾದ, ಲೆಫ್ಟಿನೆಂಟ್ ಇ.ಎಸ್.ಕುಮಾರಸ್ವಾಮಿ ಉಡುಪ ರವರಿಗೆ, ಮುಖ್ಯಮಂತ್ರಿ ಪ್ರಶಂಸನಾ ಪತ್ರ



ಶೃಂಗೇರಿ: ಇಲ್ಲಿನ ಶ್ರೀ ಜೆ.ಸಿ.ಬಿ.ಎಂ. ಕಾಲೇಜಿನ ಎನ್.ಸಿ.ಸಿ. ಅಧಿಕಾರಿಗಳಾದ ಲೆಫ್ಟಿನೆಂಟ್ ಡಾ. ಇ.ಎಸ್.ಕುಮಾರಸ್ವಾಮಿ ಉಡುಪ ರವರಿಗೆ ಈ ಸಾಲಿನ ಮುಖ್ಯಮಂತ್ರಿ ಪ್ರಶಂಸನಾ ಪತ್ರ ಲಭಿಸಿದೆ. ಕಾಲೇಜಿನಲ್ಲಿ ಎನ್.ಸಿ.ಸಿ. ಅಧಿಕಾರಿಗಳಾಗಿರುವ ಇವರು, ಕಳೆದ 3 ವರ್ಷಗಳ ಅವಧಿಯಲ್ಲಿ ನಿರ್ವಹಿಸಿರುವ ಅತ್ಯುತ್ತಮ ಕಾರ್ಯ ಚಟುವಟಿಕೆಗಳನ್ನು ಗುರುತಿಸಿ, ಕರ್ನಾಟಕದ ಎನ್.ಸಿ.ಸಿ. ವಿಭಾಗವು ಮುಖ್ಯಮಂತ್ರಿ ಪ್ರಶಂಸನಾ ಪತ್ರವನ್ನು ಕೊಡಮಾಡಿದೆ. ಮುಖ್ಯವಾಗಿ ಇವರು ಗುಜರಾತ್‌ನಲ್ಲಿ ನಡೆದ ರಾಷ್ಟ್ರೀಯ ಚಾರಣ ಶಿಬಿರದಲ್ಲಿ ಆಯ್ದ ಕೆಡೆಟ್ಸ್ ಗಳೊಂದಿಗೆ ಭಾಗವಹಿಸಿದ್ದು, ಅಸ್ಸಾಂನಲ್ಲಿ ನಡೆದ ಸಾಯಕತ್ಸ ತರಭೇತಿ ಶಿಬಿರಕ್ಕೆ ಕರ್ನಾಟಕ ಮತ್ತು ಗೋವ ರಾಜ್ಯಗಳ ಆಯ್ದ 70 ಕೆಡೆಟ್ಸ್‌ಗಳನ್ನು ಕರೆದುಕೊಂಡು ಹೋಗಿದ್ದು, ಹಾಗೆಯೇ ಇವರ ಮಾರ್ಗದರ್ಶನದಲ್ಲಿ ಈ ವರ್ಷ ದೆಹಲಿಯ ಗಣರಾಜ್ಯೋತ್ಸವದಲ್ಲಿ ಎನ್.ಸಿ.ಸಿ. ಯ ಇಬ್ಬರು ಕೆಡೆಟ್ಸ್‌ಗಳು ಭಾಗವಹಿಸಿದ್ದು, ಜೊತೆಗೆ ಒಬ್ಬ ಕೆಡೆಟ್ ದೆಹಲಿಯಲ್ಲಿ ನಡೆಯುವ ಥಾಲ್ ಸೈನಿಕ್ ಕ್ಯಾಂಪ್ ಗೆ ಮತ್ತು ಒಬ್ಬ ವಿದ್ಯಾರ್ಥಿನಿ Y.E.P. (Youth Exchange Program) ಗೆ ಆಯ್ಕೆಯಾಗಿ ವಿದೇಶಕ್ಕೆ ಪ್ರವಾಸ ಹೋಗುವ ಅವಕಾಶ ಪಡೆದುಕೊಂಡಿರುವುದು ಸೇರಿದಂತೆ ಕಾಲೇಜಿನ ಇನ್ನಿತರೆ ಕೆಡೆಟ್ಸ್‌ಗಳು ದೇಶದ ವಿವಿಧ ರಾಜ್ಯಗಳಲ್ಲಿ ನಡೆದ ಚಾರಣ, ಸಾಹಸ, ರಾಷ್ಟ್ರೀಯ ಭಾವೈಕ್ಯತೆ, rock climbing, shooting ಮುಂತಾದ ಶಿಬಿರಗಳಲ್ಲಿ ಭಾಗವಹಿಸಿದ್ದನ್ನು ಇವರ ಸಾಧನೆಯ ಮಾನದಂಡವಾಗಿ ಪರಿಗಣಿಸಲಾಗಿದೆ. ಅಂತೆಯೇ ರಾಜ್ಯ ಮಟ್ಟದ ಪ್ರಶಸ್ತಿಯನ್ನು ಪಡೆದು, ಕಾಲೇಜಿಗೆ ಕೀರ್ತಿಯನ್ನು ತಂದು ಕೊಟ್ಟಿರುವ ಇ.ಎಸ್.ಕುಮಾರಸ್ವಾಮಿ ಉಡುಪ ರವರನ್ನು ಕಾಲೇಜಿನ ಪ್ರಾಚಾರ್ಯರು, ಆಡಳಿತ ಮಂಡಳಿ ಹಾಗೂ ಬೋಧಕ, ಬೋಧಕೇತರ ಸಿಬ್ಬಂದಿವರ್ಗದವರು ಅಭಿನಂದಿಸಿದ್ದಾರೆ.

Scanned by CamScanner

ಶ್ರೀ ಜೆ.ಸಿ.ಬಿ.ಎಂ. ಕಾಲೇಜಿನ, ಎನ್.ಸಿ.ಸಿ. ಅಧಿಕಾರಿಗಳಾದ, ಲೆಫ್ಟಿನೆಂಟ್ ಡಾ.ಎಸ್.ಕುಮಾರಸ್ವಾಮಿ ಉಡುಪ ರವರಿಗೆ, ಮುಖ್ಯಮಂತ್ರಿ ಪ್ರಶಂಸನಾ ಪತ್ರ



ಬೆಂಗಳೂರು: ಇಲ್ಲಿನ ಶ್ರೀ ಜೆ.ಸಿ.ಬಿ.ಎಂ. ಕಾಲೇಜಿನ ಎನ್.ಸಿ.ಸಿ. ಅಧಿಕಾರಿಗಳಾದ ಲೆಫ್ಟಿನೆಂಟ್ ಡಾ. ಎ.ಎಸ್.ಕುಮಾರಸ್ವಾಮಿ ಉಡುಪ ರವರಿಗೆ ಈ ಸಾಲಿನ ಮುಖ್ಯಮಂತ್ರಿ ಪ್ರಶಂಸನಾ ಪತ್ರ ಲಭಿಸಿದೆ. ಕಾಲೇಜಿನಲ್ಲಿ ಎನ್.ಸಿ.ಸಿ. ಅಧಿಕಾರಿಗಳಾಗಿರುವ ಇವರು, ಕಳೆದ 3 ವರ್ಷಗಳ ಅವಧಿಯಲ್ಲಿ ನಿರ್ವಹಿಸಿರುವ ಅತ್ಯುತ್ತಮ ಕಾರ್ಯ ಚಟುವಟಿಕೆಗಳನ್ನು ಗುರುತಿಸಿ, ಕರ್ನಾಟಕದ ಎನ್.ಸಿ.ಸಿ. ವಿಭಾಗವು ಮುಖ್ಯಮಂತ್ರಿ ಪ್ರಶಂಸನಾ ಪತ್ರವನ್ನು ಕೊಡಮಾಡಿದೆ. ಮುಖ್ಯವಾಗಿ ಇವರು ಗುಜರಾತ್‌ನಲ್ಲಿ ನಡೆದ ರಾಷ್ಟ್ರೀಯ ಚಾರಣ ಶಿಬಿರದಲ್ಲಿ ಅಯ್ಕೆ ಕೆಡೆಟ್ಸ್ ಗಳೊಂದಿಗೆ ಭಾಗವಹಿಸಿದ್ದು, ಅಸ್ಸಾಂನಲ್ಲಿ ನಡೆದ ನಾಯಕತ್ವ ತರಬೇತಿ ಶಿಬಿರಕ್ಕೆ ಕರ್ನಾಟಕ ಮತ್ತು ಗೋವ ರಾಜ್ಯಗಳ ಅಯ್ಕೆ 70 ಕೆಡೆಟ್ಸ್‌ಗಳನ್ನು ಕರೆದುಕೊಂಡು ಹೋಗಿದ್ದು, ಹಾಗೆಯೇ ಇವರ ಮಾರ್ಗದರ್ಶನದಲ್ಲಿ ಈ ವರ್ಷ ದೆಹಲಿಯ ಗಣರಾಜ್ಯೋತ್ಸವದಲ್ಲಿ ಎನ್.ಸಿ.ಸಿ. ಯ ಇಬ್ಬರು ಕೆಡೆಟ್ಸ್‌ಗಳು ಭಾಗವಹಿಸಿದ್ದು, ಜೊತೆಗೆ ಒಬ್ಬ ಕೆಡೆಟ್ ದೆಹಲಿಯಲ್ಲಿ ನಡೆಯುವ ಥಾಲ್ ಸೈನಿಕ್ ಕ್ಯಾಂಪ್ ಗೆ ಮತ್ತು ಒಬ್ಬ ವಿದ್ಯಾರ್ಥಿನಿ Y.E.P. (Youth Exchange Program) ಗೆ ಅಯ್ಕೆಯಾಗಿ ವಿದೇಶಕ್ಕೆ ಪ್ರವಾಸ ಹೋಗುವ ಅವಕಾಶ ಪಡೆದುಕೊಂಡಿರುವುದು ಸೇರಿದಂತೆ ಕಾಲೇಜಿನ ಇನ್ನಿತರೆ ಕೆಡೆಟ್ಸ್‌ಗಳು ದೇಶದ ವಿವಿಧ ರಾಜ್ಯಗಳಲ್ಲಿ ನಡೆದ ಚಾರಣ, ಸಾಹಸ, ರಾಷ್ಟ್ರೀಯ ಭಾವೈಕ್ಯತೆ, rock climbing, shooting ಮುಂತಾದ ಶಿಬಿರಗಳಲ್ಲಿ ಭಾಗವಹಿಸಿದ್ದನ್ನು ಇವರ ಸಾಧನೆಯ ಮಾನದಂಡವಾಗಿ ಪರಿಗಣಿಸಲಾಗಿದೆ. ಅಂತೆಯೇ ರಾಜ್ಯ ಮಟ್ಟದ ಪ್ರಶಸ್ತಿಯನ್ನು ಪಡೆದು, ಕಾಲೇಜಿಗೆ ಕೀರ್ತಿಯನ್ನು ತಂದು ಕೊಟ್ಟಿರುವ ಡಾ.ಎಸ್.ಕುಮಾರಸ್ವಾಮಿ ಉಡುಪ ರವರನ್ನು, ಕಾಲೇಜಿನ ಪ್ರಾಚಾರ್ಯರು, ಆಡಳಿತ ಮಂಡಳಿ ಹಾಗೂ ಬೋಧಕ, ಬೋಧಕೇತರ ಸಿಬ್ಬಂದಿವರ್ಗದವರು ಅಭಿನಂದಿಸಿದ್ದಾರೆ.

Scanned by CamScanner

ವಿಜಯ ಕರ್ನಾಟಕ VK

ಬುಧವಾರ, 11 ಮೇ 2016, ಶಿವಮೊಗ್ಗ

ಎನ್‌ಸಿಸಿ ಅಧಿಕಾರಿಗೆ ಮುಖ್ಯಮಂತ್ರಿ ಪದಕ

ಶೃಂಗೇರಿ: ಶ್ರೀ ಜೆಸಿಬಿಎಂ ಕಾಲೇಜಿನ ಎನ್‌ಸಿಸಿ ಅಧಿಕಾರಿ ಡಾ. ಕುಮಾರ ಸ್ವಾಮಿ ಉಡುಪ ಅವರಿಗೆ ಕರ್ನಾಟಕದ ಎನ್‌ಸಿಸಿ ವಿಭಾಗದಿಂದ ನೀಡಲಾಗುವ ಈ ವರ್ಷದ ಉತ್ತಮ ಎನ್‌ಸಿಸಿ ಅಧಿಕಾರಿ ಎಂದು ಮುಖ್ಯಮಂತ್ರಿಗಳ ಪ್ರಶಂಸನಾ ಪತ್ರ ದೊರಕಿದೆ.



ಇವರು ಗುಜರಾತ್‌ನಲ್ಲಿ ನಡೆದ ರಾಷ್ಟ್ರೀಯ ಚಾರಣ ಶಿಬಿರದಲ್ಲಿ ಕೆಡೆಟ್ಸ್ ಗಳೊಂದಿಗೆ ಭಾಗವಹಿಸಿದ್ದು, ಅಸ್ಸಾಂನಲ್ಲಿ ನಡೆದ ನಾಯಕತ್ವ ತರಬೇತಿ ಶಿಬಿರದಲ್ಲಿ ಕರ್ನಾಟಕ ಮತ್ತು ಗೋವಾ ರಾಜ್ಯದ 70 ಕೆಡೆಟ್ಸ್‌ಗಳೊಂದಿಗೆ ಪಾಲ್ಗೊಂಡಿದ್ದರು. ಈ ವರ್ಷ ಒಬ್ಬ ಕೆಡೆಟ್ ದೆಹಲಿಯಲ್ಲಿ ಥಾಲ್ ಸೈನಿಕ್ ಕ್ಯಾಂಪ್ ಮತ್ತು ಇಬ್ಬರು ಕೆಡೆಟ್ಸ್‌ಗಳು ದೆಹಲಿಯ ಗಣರಾಜ್ಯೋತ್ಸವದಲ್ಲಿ ಭಾಗವಹಿಸಿರುತ್ತಾರೆ. ವಿದ್ಯಾರ್ಥಿನಿಯೊಬ್ಬರು ಯೂತ್ ಎಕ್ಸ್‌ಚೇಂಜ್ ಪ್ರೋಗ್ರಾಮ್‌ನಲ್ಲಿ ವಿದೇಶ ಪ್ರವಾಸದ ಅವಕಾಶ ಪಡೆದಿದ್ದಾರೆ. ಕಾಲೇಜಿನ ಕೆಡೆಟ್ಸ್‌ಗಳು ದೇಶದ ವಿವಿಧ ರಾಜ್ಯಗಳಲ್ಲಿ ನಡೆದ ಚಾರಣ, ಸಾಹಸ, ರಾಷ್ಟ್ರೀಯ ಭಾವೈಕ್ಯತೆ ಶಿಬಿರಗಳಲ್ಲಿ ಭಾಗವಹಿಸಿದ್ದಾರೆ.

Scanned by CamScanner

ಮುಖ್ಯಮಂತ್ರಿ ಪ್ರಶಂಸನಾ ಪ್ರಶಸ್ತಿ



ಶೃಂಗೇರಿ: ಜೆಸಿಬಿಎಂ ಕಾಲೇಜಿನಲ್ಲಿ ಮೂರು ವರ್ಷಗಳಿಂದ ಎನ್‌ಸಿಸಿ ಅಧಿಕಾರಿಗಳಾಗಿ ಕಾರ್ಯ ನಿರ್ವಹಿಸುತ್ತಿರುವ **ಡಾ. ಕುಮಾರ ಸ್ವಾಮಿ ಉಡುಪ** ಅತ್ಯುತ್ತಮ ಸೇವೆ ಪರಿಗಣಿಸಿ ಈ ಸಾಲಿನ ಮುಖ್ಯಮಂತ್ರಿ ಪ್ರಶಂಸನಾ ಪ್ರಶಸ್ತಿ ನೀಡಲಾಗಿದೆ.

ವಿ ಕ ಸ ನ ೫.೫-೧೦

Scanned by CamScanner

ಪಾಕೇಜ್ ಪತ್ರಿಕೆ ೬-೬-16

ಒನ್ ಡೇ ವಿತ್ ವಿ ಜಿ, ಆತ್ಮೀಯ ಅಭಿನಂದನೆ



ಶೃಂಗೇರಿ: ಪಟ್ಟಣದ ಶ್ರೀ.ಜೆ.ಸಿ.ಬಿ.ಎಂ ಕಾಲೇಜಿನ ಮುಖ್ಯ ಸಭಾಂಗಣದಲ್ಲಿ "ವಿ.ಜಿ. ಜೊತೆಗೆ ಒಂದು ದಿನ" ಎಂಬ ಹೆಸರಿನಡಿ, ಸದ್ಯದ್ದಲ್ಲೇ ನಿವೃತ್ತರಾಗಲಿರುವ ಪ್ರಾಂಶುಪಾಲ ಡಾ.ಹೆಚ್.ಸಿ.ವೀರಪ್ಪಗೌಡರನ್ನು ಅಭಿನಂದಿಸುವ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು. ಸಮಾರಂಭದಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಡಾ.ಹೆಚ್.ಸಿ. ವೀರಪ್ಪಗೌಡ, ನನ್ನ ಜೀವನದ ಅತ್ಯಂತ ಅವಿಸ್ಮರಣೀಯ ಘಳಿಗೆಯನ್ನು ಕಟ್ಟಿ ಕೊಡಲು ನೀವು ಪಟ್ಟ ಶ್ರಮಕ್ಕೆ, ಹಳೆಯ ನೆನಪುಗಳೆಲ್ಲವನ್ನು ಒಂದೇ ವೇದಿಕೆಯಲ್ಲಿ ಕ್ರೋಢೀಕರಿಸಿ ನನ್ನನ್ನು ಭಾವಲೋಕದಲ್ಲಿ ಮುಳುಗುವಂತೆ ಮಾಡಿದ ನಿಮ್ಮ ಪ್ರಯತ್ನಕ್ಕೆ ಅಭಿನಂದನೆ ಸಲ್ಲಿಸಲು ಪದಗಳೇ ಸಾಲುತ್ತಿಲ್ಲ ಎಂದು ಹೇಳಿದರು. ಒಬ್ಬ ಗುರು ತನ್ನ ವಿದ್ಯಾರ್ಥಿಗಳಿಂದ ಅಪೇಕ್ಷೆ ಪಡುವುದು ಉತ್ತಮ ಸಾಧನೆಯನ್ನು ಮಾತ್ರ. ಆದರೆ ನೀವೆಲ್ಲರೂ ನನಗೆ ಅದ್ಭುತ ಕೊಡುಗೆ ಕೊಟ್ಟಿದ್ದೀರಿ. ವಿದ್ಯಾರ್ಥಿಗಳು ಒಂದೇ ಮನಸ್ಸಿನಿಂದ ಒಗ್ಗೂಡಿದರೆ, ಎಂತಹ ಕೆಲಸವನ್ನಾದರು ಮಾಡಬಹುದು ಎಂಬುದಕ್ಕೆ ಈ ಅರ್ಥಪೂರ್ಣ ಕಾರ್ಯಕ್ರಮವು ಒಂದು ಉತ್ತಮ ನಿದರ್ಶನವಾಗಿದೆ. ಎಷ್ಟೇ ಹಣ ವ್ಯಯಿಸಿದರೂ ಸಿಗಲಾರದಂತಹ ಈ ಸುಂದರ ಅನುಭವ, ನನಗೆ ಬಂದ ಪ್ರಶಸ್ತಿ, ನಡೆದ ಸನ್ಮಾನಗಳಿಗಿಂತ ಮೇಲು ಮಟ್ಟದಾಗಿದೆ ಎಂದು ಭಾವುಕರಾಗಿ ನುಡಿದರು. ಟಿ.ವಿ.ಯಲ್ಲಿ ಪ್ರಸಾರವಾಗುವ 'ವೀಕೆಂಡ್ ವಿತ್ ರಮೇಶ್' ಕಾರ್ಯಕ್ರಮದ ಮಾದರಿಯಲ್ಲಿ ನಡೆದ ಈ ಸಮಾರಂಭದಲ್ಲಿ ತೃತೀಯ ಬಿ.ಕಾಂ. ವಿದ್ಯಾರ್ಥಿ ನಿತೀಶ್ ನಾಯಿಕ್ ರವರ ನಿರೂಪಣೆ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಕಾರ್ಯಕ್ರಮದಲ್ಲಿ ಬಳಸಿಕೊಳ್ಳುವ ಸಲುವಾಗಿ ವೀರಪ್ಪ ಗೌಡರು ಹುಟ್ಟಿದ ಊರಾದ ಹಂದಿಗೋಡು, ಅವರು ಓದಿದ ತ್ಯಾವಣ ಸರ್ಕಾರಿ ಪ್ರಾಥಮಿಕ ಪಾಠಶಾಲೆ, ನೆಮ್ಮಾರು ಸರ್ಕಾರಿ ಮಾಧ್ಯಮಿಕ ಪಾಠಶಾಲೆ ಶೃಂಗೇರಿ ಸರ್ಕಾರಿ ಪ್ರೌಢಶಾಲೆ ಹಾಗು ಪ್ರಸ್ತುತ ಗೌಡರು ವಾಸವಾಗಿರುವ ಮನೆ ಮತ್ತು ಕಾಲೇಜಿನ ಆವರಣದಲ್ಲಿ ಚಿತ್ರೀಕರಣ ನಡೆಸಲಾಗಿತ್ತು. ಕಾರ್ಯಕ್ರಮದ ನಡು ನಡುವೆ ಅವರ ಕುಟುಂಬದ ಸದಸ್ಯರು, ಆತ್ಮೀಯರನ್ನು ಅವರಿಗೆ ಗೊತ್ತಿಲ್ಲದಂತೆ ಕರೆಸಿ, ಅನಿರೀಕ್ಷಿತ, ಭಾವುಕ ಸನ್ನಿವೇಶವನ್ನು ಸೃಷ್ಟಿಸಿದ್ದು ವಿಶೇಷವಾಗಿತ್ತು. ಈ ಸಂದರ್ಭದಲ್ಲಿ ಕಾಲೇಜಿನ ವಿದ್ಯಾರ್ಥಿಗಳು ವೀರಪ್ಪ ಗೌಡರಿಗೆ ಶಾಲು ಹೊದಿಸಿ, ಸ್ಮರಣಿಕೆ ನೀಡಿ ಗೌರವಿಸಿ ಸಂಭ್ರಮಿಸಿದರು. ಸಮಾರಂಭದಲ್ಲಿ ಕಾಲೇಜಿನ ವಿಶ್ವಸ್ಥ ಮಂಡಳಿ ಸದಸ್ಯರು, ಹಳೆವಿದ್ಯಾರ್ಥಿ ಸಂಘದವರು, ವೀರಪ್ಪಗೌಡರ ಆತ್ಮೀಯರು, ಪಾ.ಪ್ರಭಾರಿ ಪ್ರಾಂಶುಪಾಲರಾದ ಎ.ಜೆ ಪ್ರಶಾಂತ್, ವಿದ್ಯಾರ್ಥಿ ಕ್ಷೇಮಪಾಲನಾಧಿಕಾರಿ ದತ್ತಾತ್ರೇಯ ಮಾರ್ಪಳ್ಳಿ, ಎಲ್ಲಾ ಅಧ್ಯಾಪಕ ವರ್ಗದವರು ಹಾಗೂ ವಿದ್ಯಾರ್ಥಿ ಸಂಘದ ಅಧ್ಯಕ್ಷರುಗಳು ಉಪಸ್ಥಿತರಿದ್ದರು.

Scanned by CamScanner

ಪ್ರಜಾವಾಣಿ ಸೋಮವಾರ • ಏಪ್ರಿಲ್ 4, 2016

'ಜೀವನವು ಸಂಸ್ಮರಣೆಯ ರೂಪದಲ್ಲಿರಲಿ'

ಪ್ರಜಾವಾಣಿ ವಾರ್ತೆ

ಶೃಂಗೇರಿ: ಜೀವನವು ಕುಟುಂಬ, ಸಮಾಜಕ್ಕೆ ಮಾದರಿಯಾಗಿರಬೇಕು. ಸಂಸ್ಮರಣೆಯ ರೂಪದಲ್ಲಿರಬೇಕು ಎಂದು ಹೊರನಾಡಿನ ಧರ್ಮಕರ್ತ ಡಾ. ಭೀಮೇಶ್ವರ ಜೋಷಿ ಹೇಳಿದರು.

ಜೆ.ಸಿ.ಬಿ.ಎಂ.ಕಾಲೇಜಿನಲ್ಲಿ ಏರ್ಪಡಿಸಿದ್ದ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಸಂಘಗಳ ಸಮಾರೋಪ ಸಮಾರಂಭ ಹಾಗೂ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪ್ರಪಂಚದಲ್ಲಿ ಇದ್ದು, ಬದುಕಿ, ಅಂಟಿಕೊಳ್ಳದೇ ಬಾಳಬೇಕು. ತನ್ನನ್ನು ತಾನು ಅಹಿಂಸೆ, ಕಷ್ಟ, ತ್ಯಾಗಕ್ಕೆ ಒಡ್ಡಿಕೊಂಡವನು ಮಹಾತ್ಮನಾಗುತ್ತಾನೆ. ಸಮಾಜ ಅತನ ಇರುವಿಕೆಯನ್ನು ಗುರುತಿಸುತ್ತದೆ ಎಂದ ಅವರು, ಹಿರಿಯರು ಕಿರಿಯರ ಕಾಲೆಳೆಯದೇ ಅವರನ್ನು ಸ್ವಾಗತಿಸುವ, ಒಗ್ಗೂಡಿಸುವ ಕೆಲಸಗಳು ಇಂದು ಅಗತ್ಯವಾಗಿದ್ದು, ನಮ್ಮ ಬದುಕು ಅರ್ಪಣೆಗೊಳಪಟ್ಟು ಆದರ್ಶವಾಗಬೇಕೆಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ ಎಚ್.ಸಿ.ವೀರಪ್ಪಗೌಡ ವಹಿಸಿದ್ದರು. ವಿದ್ಯಾರ್ಥಿ ಕ್ಷೇಮಪಾಲನಾಧಿಕಾರಿ ಪ್ರೊ. ದತ್ತಾತ್ರೇಯ ಎಂ ಮಾರ್ಪಳ್ಳಿ, ಕಾಲೇಜು ವಿಶ್ವಸ್ತ ಮಂಡಳಿ ಸದಸ್ಯ ಅನಂತ ಪದ್ಮನಾಭ ಭಟ್, ವಿದ್ಯಾರ್ಥಿ ನಾಯಕ ಶ್ರೀನಿವಾಸ್, ರಕ್ಷಿತ್, ನಿತೀಶ್‌ನಾಯಕ್ ಇದ್ದರು.



ಶೃಂಗೇರಿಯ ಜೆಸಿಬಿಎಂ ಕಾಲೇಜಿನಲ್ಲಿ ಏರ್ಪಡಿಸಿದ್ದ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಸಂಘಗಳ ಸಮಾರೋಪ ಸಮಾರಂಭದಲ್ಲಿ ಹೊರನಾಡಿನ ಧರ್ಮಕರ್ತ ಡಾ. ಭೀಮೇಶ್ವರ ಜೋಷಿ ಮಾತನಾಡಿದರು.

r Editorial Office: II Floor, Yenepoya Chambers, Balmatta, Mangaluru - 575 002. E-mail: editorpv@prajavani.co.in.
Reproduction in whole or in part without permission is prohibited. RNI No 22577/2000.

Scanned by CamScanner

ಕನ್ನಡಪ್ರಭ 4-4-2016

ಶಿಕ್ಷಕರು ವಿದ್ಯಾರ್ಥಿಗಳ ಭವಿಷ್ಯ ರೂಪಿಸಲಿ: ಡಾ.ಮುರುಳೀಧರ್

ಸಹಾಯಕ ಪ್ರಾಧ್ಯಾಪಕರ ನ್ಯಾಕ್-ವಿಪಿಐ ತರಬೇತಿ ಶಿಬಿರ



ಜೆಸಿಬಿಎಂ ಕಾಲೇಜಿನಲ್ಲಿ ನಡೆದ ನ್ಯಾಕ್ ಮತ್ತು ವಿಪಿಐ ಶಿಬಿರದಲ್ಲಿ ಡಾ.ಮುರುಳೀಧರ್ ಮಾತನಾಡಿದರು.

• ಕನ್ನಡಪ್ರಭ ವಾರ್ತೆ ಶೃಂಗೇರಿ

ವಿದ್ಯಾರ್ಥಿಗಳ ಭವಿಷ್ಯ ರೂಪಿಸುವ ಮಹತ್ತರ ಜವಾಬ್ದಾರಿ ಶಿಕ್ಷಕರ ಮೇಲಿದೆ. ಆದ್ದರಿಂದ ಶಿಕ್ಷಕರು ಪ್ರಾಮಾಣಿಕವಾಗಿ, ಜವಾಬ್ದಾರಿಯುತರಾಗಿ ಕೆಲಸ ಮಾಡಿ ವೃತ್ತಿಯ ಘನತೆ ಗೌರವ ಹೆಚ್ಚಿಸುವ ಕೆಲಸ ಮಾಡಬೇಕಿದೆ ಎಂದು ಶಿವಮೊಗ್ಗ ಪ್ರಾದೇಶಿಕ ಜಂಟಿ ನಿರ್ದೇಶಕ ಡಾ.ಎ.ಎಲ್.ಮುರುಳಿಧರ್ ತಿಳಿಸಿದರು.

ಅವರು ಪಟ್ಟಣದ ಜೆಸಿಬಿಎಂ ಕಾಲೇಜಿನ ಡಾ.ಟಿ.ಎಂ.ಎ. ಪೈ ಸಭಾಂಗಣದಲ್ಲಿ ನಡೆದ ಸಹಾಯಕ ಪ್ರಾಧ್ಯಾಪಕರ ನ್ಯಾಕ್ ಮತ್ತು ವಿಪಿಐ ತರಬೇತಿ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು.

ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ ಪ್ರಾಧ್ಯಾಪಕರಿಗೆ ಯುಜಿಸಿ, ನ್ಯಾಕ್, ವಿಪಿಐ ಬಗ್ಗೆ ಸಂಪೂರ್ಣ ಅರಿವು ಇರಬೇಕು. ನ್ಯಾಕ್‌ನಲ್ಲಿ ಉತ್ತಮ ಶ್ರೇಣಿ ಹೊಂದಿದರೆ ಸಾಲದು. ಕೇವಲ ಶ್ರೇಣಿಗಾಗಿ ಕೆಲಸ ಮಾಡದೇ, ಕಾಲೇಜುಗಳಲ್ಲಿ ನಿರಂತರವಾಗಿ ಉತ್ತಮ ಕೆಲಸಗಳು ನಡೆಯುತ್ತಿರಬೇಕು ಎಂದರು.

ಒಮ್ಮೆ ನ್ಯಾಕ್‌ನಲ್ಲಿ ಉತ್ತಮ ಶ್ರೇಣಿ ಬಂದ ಮಾತ್ರಕ್ಕೆ ಕೆಲಸ ನಿಲ್ಲಿಸುವುದಲ್ಲ. ದಾಖಲಾತಿಗಳ ಪರಿಶೀಲನೆ, ಪ್ರಗತಿ ಕಾರ್ಯಗಳು ನಿರಂತರವಾಗಿ ನಡೆಯುತ್ತಿರಬೇಕು. ಪ್ರಾಧ್ಯಾಪಕರು ಉತ್ತಮ ಕಾರ್ಯ, ಅನುಭವಗಳನ್ನು ಹೊಂದಿದಾಗ ಅವರ ಮುಂಬಡ್ತಿಗೆ ಸಹಾಯವಾಗುತ್ತದೆ. ಉತ್ತಮ ಶೈಕ್ಷಣಿಕ ವಿಧಾನಗಳನ್ನು ಅಳವಡಿಸಿಕೊಳ್ಳಬೇಕು. ಹಾಗೂ ಕಾರ್ಯೋಗಾರಗಳ ಸದ್ಬಳಕೆ ಮಾಡಿಕೊಳ್ಳಬೇಕು. ಈಗಾಗಲೇ ಚಿತ್ರದುರ್ಗ, ಶಿವಮೊಗ್ಗಗಳಲ್ಲಿ ನ್ಯಾಕ್ ತರಬೇತಿ ಶಿಬಿರಗಳು ನಡೆದಿವೆ. ಶಿಬಿರಗಳು ಇನ್ನಷ್ಟು ನಡೆಯಲಿ ಎಂದು ಹೇಳಿದರು.

ಪ್ರಾಚಾರ್ಯ ಎಚ್.ಸಿ.ವೀರಪ್ಪಗೌಡ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಡಾ.ಉಮೆ. ಪ್ರೊ.ಸಜ್ಜದ್, ದಕ್ಷತ್ರಿ ಮಾರ್ಪಳ್ಳಿ ಮತ್ತಿತರರು ಉಪಸ್ಥಿತರಿದ್ದರು.

Scanned by CamScanner

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » SHIVAMOGGA
2 | ಭಾನುವಾರ
3 ಏಪ್ರಿಲ್ 2016
3 APRIL 2016

ಆತ್ಮಸ್ಥೈರ್ಯಕ್ಕೆ ಅಧ್ಯಾತ್ಮ ಪೂರಕ



ಶೃಂಗೇರಿ: ಪ್ರತಿಯೊಬ್ಬರೂ ಆಧ್ಯಾತ್ಮಿಕ ಬುನಾದಿಯಲ್ಲಿ ವ್ಯಕ್ತಿತ್ವ ಬೆಳೆಸಿಕೊಂಡರೆ ಸುಸಂಸ್ಕೃತ ವಾತಾವರಣ ನಿರ್ಮಾಣ ಮಾಡಲು ಸಾಧ್ಯ ಎಂದು ಹರಿಹರಪುರದ ಶ್ರೀ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತೀ ಸ್ವಾಮೀಜಿ ಹೇಳಿದರು.

ಜೆಸಿಬಿಎಂ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಸಂಸ್ಥಾಪಕರ ಸಂಸ್ಮರಣೆ ಮತ್ತು ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದರು.

ಮನುಷ್ಯ ಆತ್ಮಸಾಕ್ಷಿಗೆ ಅನುಗುಣವಾಗಿ ಬದುಕಬೇಕು. ದೈವತ್ವ ವಿಕಾಸ ಮಾಡಿಕೊಂಡು ಹೃದಯ ವೈಶಾಲ್ಯತೆ ತೋರಿಸಬೇಕು. ಮಾನವತ್ವ ಜಾಗೃತವಾದಾಗ ಆಧ್ಯಾತ್ಮಿಕತೆ ಬೆಳೆಯುತ್ತದೆ. ಮೋಸ, ವಂಚನೆ, ಸುಳ್ಳು, ಶೋಷಣೆ ತ್ಯಜಿಸಿ ನೀತಿ, ನಿಯಮ ಅಳವಡಿಸಿಕೊಂಡು ಕರ್ತವ್ಯ ನಿರ್ವಹಿಸಬೇಕು. ಆತ್ಮಸ್ಥೈರ್ಯ ಬೆಳೆಸಿಕೊಳ್ಳಲು ಅಧ್ಯಾತ್ಮ ಚಿಂತನೆ ಅಗತ್ಯ ಎಂದು ಹೇಳಿದರು.

ಜೆಸಿಐ ಪ್ರಮುಖ ಎನ್.ಸಿ.ಪಾಂಡುರಂಗ ಮಾತನಾಡಿ, ಶ್ರೀ ಚಂದ್ರಶೇಖರ ಭಾರತೀ ಸ್ವಾಮೀಜಿ ಅವರು ಶ್ರೀ ಮಠದ ಏಳ್ಗೆಗಾಗಿ ಅವಿರತವಾಗಿ ದುಡಿದಿದ್ದಾರೆ. ತಪೋನಿಷ್ಠರಾಗಿ ಜನಮಾನಸದಲ್ಲಿ ಉಳಿದಿದ್ದಾರೆ ಎಂದರು.

ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪದಕ ಮತ್ತು ನಗದು ಬಹುಮಾನ ನೀಡಿ ಪುರಸ್ಕರಿಸಲಾಯಿತು. ಕಾಲೇಜಿನ ಪ್ರಾಚಾರ್ಯ ಡಾ. ಎಚ್.ಸಿ.ವೀರಪ್ಪ ಗೌಡ, ವಿದ್ಯಾರ್ಥಿ ಕ್ಷೇಮಪಾಲನಾಧಿಕಾರಿ ಪ್ರೊ. ದತ್ತಾತ್ರೇಯ ಮಾರ್ಪಳ್ಳಿ, ಆಡಳಿತ ಮಂಡಳಿ ಸದಸ್ಯ ಅನಂತ ಪದ್ಮನಾಭ ಭಟ್, ವಿದ್ಯಾರ್ಥಿ ನಾಯಕರಾದ ರಕ್ಷಿತ್, ಶ್ರೀನಿವಾಸ್, ನಿತೀಶ್ ನಾಯಕ್ ಮತ್ತಿತರರು ಇದ್ದರು.

Scanned by CamScanner

ಶನಿವಾರ, 2 ಏಪ್ರಿಲ್ 2016, ಶಿವಮೊಗ್ಗ

ನಮ್ಮ ಚಿಕ್ಕಮಗಳೂರು

ಕಲೆ ಮೂಲಕ ಕ್ರಿಯಾಶೀಲತೆ ಅನಾವರಣ



ಶೃಂಗೇರಿ ಜೆಸಿಬಿಎಂ ಕಾಲೇಜಿನ ಶೃಂಗಸಂಭ್ರಮ ಕಾರ್ಯಕ್ರಮದಲ್ಲಿ ನಾಗರಾಜ ಕೊವೆಯವರ ಕೈತುತ್ತು-ಭಾವನೆಗಳ ಹೊತ್ತು ಲೇಖನ ಸಂಗ್ರಹ ಬಿಡುಗಡೆ ಮಾಡಲಾಯಿತು.

ಶೃಂಗೇರಿ: ಕಲೆಯು ಕೇವಲ ಪ್ರವೃತ್ತಿಯಾಗಿ ಉಳಿಯದೇ ವೃತ್ತಿಯಾಗಿದ್ದು, ಅದರ ಮೂಲಕ ಹೆಸರು, ಸ್ಥಾನ, ಹಣ ಗಳಿಸುತ್ತಿರುವುದನ್ನು ನಾವಿಂದು ಕಾಣಬಹುದು ಎಂದು ಮೆಣಸೆ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲೆ ಆಶಾಲತಾ ಹೇಳಿದರು.

ಅವರು ಇತ್ತೀಚೆಗೆ ಶ್ರೀಜೆಸಿಬಿಎಂ ಕಾಲೇಜಿನ ಅಂತರ ಕಾಲೇಜು ಸಾಂಸ್ಕೃತಿಕ ಸ್ಪರ್ಧೆ, ಶೃಂಗ ಸಂಭ್ರಮ ಉದ್ಘಾಟಿಸಿ ಮಾತನಾಡಿದರು. ಮನುಷ್ಯನ ಕ್ರಿಯಾಶೀಲತೆಯು ಕಲೆಯ ಮೂಲಕ ಅನಾವರಣಗೊಳ್ಳುತ್ತದೆ. ಸಾಂಸ್ಕೃತಿಕ ಚಟುವಟಿಕೆಗಳು ಏಕವ್ಯಕ್ತಿ ಕೇಂದ್ರಿತವಾಗದೇ ಗುಂಪುಗಳಲ್ಲಿ ನಡೆದಾಗ ನಮ್ಮಲ್ಲಿ ಮೌಲ್ಯ ಮತ್ತು ಜವಾಬ್ದಾರಿಗಳನ್ನು ಕಲಿಸಿ, ಬೆಳೆಸುತ್ತದೆ. ಸಹನೆ, ಸ್ವೀಕರಿಸುವ ಮನೋಭಾವಗಳು ನಮ್ಮೊಡನೆ ಬೆಳೆಯಲು ಕಲೆ ಸಹಕಾರಿ ಎಂದ ಅವರು, ಶ್ರದ್ಧೆಯಿಂದ ಕೆಲಸ ಮಾಡಿದಾಗ ಸ್ಪರ್ಧಿಗಳ ಆತ್ಮವಿಶ್ವಾಸ ಹೆಚ್ಚುತ್ತದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಡಾ. ಎಚ್.ಸಿ. ವೀರಪ್ಪಗೌಡ ಮಾತನಾಡಿ, ಸಾಂಸ್ಕೃತಿಕ ಸಂಭ್ರಮಗಳು ನಮ್ಮಲ್ಲಿ ಉತ್ಕೃಷ್ಟವಾದ ಸಾಂಸ್ಕೃತಿಕತೆ ಬೆಳೆಸುತ್ತವೆ. ಶಿಕ್ಷಣದ ಬೇರುಗಳು ಕಹಿಯಾದಾಗ ಶಿಕ್ಷಣ ಸಿಹಿಯಾಗಿರುತ್ತದೆ ಎಂದರು. ಸಭಾ ಕಾರ್ಯಕ್ರಮದ ನಂತರ ಸಾಂಸ್ಕೃತಿಕ ಸ್ಪರ್ಧೆಗಳು ನಡೆಯಿತು.

ಸ್ಪರ್ಧೆಯಲ್ಲಿ ಕುವೆಂಪು ವಿಶ್ವವಿದ್ಯಾನಿಲಯದ 10 ಕಾಲೇಜುಗಳು ಭಾಗವಹಿಸಿದ್ದವು. ಕಾಲೇಜಿನ ವಿದ್ಯಾರ್ಥಿ ನಾಗರಾಜ ಕೊವೆಯವರ 'ಕೈತುತ್ತು-ಭಾವನೆಗಳ ಹೊತ್ತು' ಎಂಬ ಸಾಂದರ್ಭಿಕ ಲೇಖನಗಳ ಸಂಗ್ರಹವನ್ನು ಬಿಡುಗಡೆಗೊಳಿಸಲಾಯಿತು. ವಿದ್ಯಾರ್ಥಿ ಕ್ಷೇಮ ಪಾಲನಾಧಿಕಾರಿ ಪ್ರೊ.ದತ್ತಾತ್ರೇಯ ಎಂ. ಮಾರ್ಪಳ್ಳಿ, ಸಾಂಸ್ಕೃತಿಕ ಸಂಚಾಲಕರಾದ ಯಶವಂತಿ ಎಸ್. ಸಾಲಿಯಾನ, ವಿದ್ಯಾರ್ಥಿ ನಾಯಕರಾದ ಜೆ.ವಿ.ಶ್ರೀನಿವಾಸ್, ನಿತೀಶ್ ನಾಯಕ್, ರಕ್ಷಿತ್ ಮತ್ತಿತರರು ಉಪಸ್ಥಿತರಿದ್ದರು.

Scanned by CamScanner

ಶುಕ್ರವಾರ, 1, ಏಪ್ರಿಲ್, 2016, ದಾವಣಗೆರೆ ಸಂಯುಕ್ತ ಕರ್ನಾಟಕ

ಚಿಕ್ಕಮಗಳೂರು

'ಆಧ್ಯಾತ್ಮಿಕ ಚೌಕಟ್ಟಿನಲ್ಲಿ ವ್ಯಕ್ತಿತ್ವ ನಿರ್ಮಾಣವಾಗಲಿ'



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ಏರ್ಪಡಿಸಿದ್ದ ಸಂಸ್ಕಾರಕ ಸಂಸ್ಕರಣೆ ಮತ್ತು ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಹರಿಹರಪುರ ಶ್ರೀ ಸ್ವಯಂಪ್ರಕಾಶ ಸ್ವಾಮಿಗಳು ಆಶೀರ್ವಚನ ನೀಡಿದರು.

ಶೃಂಗೇರಿ

ಪ್ರತಿಯೊಬ್ಬ ವ್ಯಕ್ತಿಯೂ ತನ್ನ ವ್ಯಕ್ತಿತ್ವವನ್ನು ಆಧ್ಯಾತ್ಮಿಕ ಚೌಕಟ್ಟಿನಲ್ಲಿ ಬೆಳೆಸಿಕೊಳ್ಳಬೇಕು ಎಂದು ಹರಿಹರಪುರದ ಶ್ರೀ ಸ್ವಯಂಪ್ರಕಾಶ ಸ್ವಾಮಿಗಳು ಹೇಳಿದರು.

ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ನಡೆದ ಸಂಸ್ಕಾರಕ ಸಂಸ್ಕರಣೆ ಮತ್ತು ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಪ್ರತಿಯೊಬ್ಬ ಮನುಷ್ಯನೂ ತನ್ನ ಅಂತರಾತ್ಮಕ್ಕೆ ಸಮಾಧಾನವಾಗಿ ಸ್ವಯಂ ಆನಂದವನ್ನು ಪಡೆಯಲು ವೈವಿಧ್ಯಮಯ ವಿಚಾರ ಮಾಡಿಕೊಳ್ಳಬೇಕು. ಅಂತರಾತ್ಮದ ಜಾಗೃತಿಯಿಂದ ಪ್ರಪಂಚ ವೈಜ್ಞಾನಿಕತೆಯಿಂದ ಮುನ್ನಡೆಯಲು ಸಾಧ್ಯವಾಗಿ ಆಧ್ಯಾತ್ಮಿಕತೆ ಬೆಳೆಯುತ್ತದೆ ಎಂದು ಹೇಳಿದರು.

ಬದುಕಿನಲ್ಲಿ ಆಧ್ಯಾತ್ಮಿಕತೆ ಇಲ್ಲದಿದ್ದರೆ ಜಾತಿಯ ಬಗ್ಗೆ ಮಾತನಾಡುವ ಮನಸ್ಥಿತಿ ಬರುತ್ತದೆ. ಮೌಲ್ಯಗಳಿಲ್ಲದ ಶಿಕ್ಷಣ ಬದುಕಿಗೆ ಆಧ್ಯಾತ್ಮಿಕತೆ ತೀರಾ ಅಗತ್ಯವಾಗಿದ್ದು ಪ್ರತಿಯೊಬ್ಬರಲ್ಲಿ ಇದು ಜಾಗೃತವಾಗಬೇಕು. ಮೋಸ, ಜಾತಿಗೆ, ಭಯ, ಹೊಡೆದಾಟಗಳನ್ನು ಇದು ಸ್ವಲ್ಪ ನೀತಿಯುತವಾಗಿ ನಿಲ್ಲಿಸಿ ಸಾಮರಸ್ಯವನ್ನು ಮೂಡಿಸಬೇಕು. ಸ್ವಾಮಿ ವಿವೇಕಾನಂದರಿಗೆ ಆತ್ಮಶಕ್ತಿ ಬೇಕಾಗಿತ್ತು ಎಂದು ಶ್ರೀಗಳು ನುಡಿದರು.

ಉಪನ್ಯಾಸ ನೀಡಿದ ಎನ್.ಸಿ.ಮಹಾಂತಯ್ಯ ಅವರು, ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳು ಶೃಂಗೇರಿಯಲ್ಲಿ ಹುಟ್ಟಿ ಶೃಂಗೇರಿ ಪೀಠಕ್ಕೆ ಪೀಠಾಧಿಪತಿಗಳಾಗಿ ನೇಮಕಗೊಂಡ ವಿಶೇಷ ವ್ಯಕ್ತಿಯಾಗಿದ್ದಾರೆ. ಯಾವ ಸಂದರ್ಭದಲ್ಲಿ ಸಂಸ್ಕಾರವನ್ನು ಪಡೆದಾಗಲು ಎಂದು ಹೇಳುವುದು ಮಾತ್ರವಲ್ಲದೇ ಅವರೇ ಸಿದ್ಧರಾಗಿರುವ ಮೊದಲು ಅವನ್ನು ಸ್ವಯಂ ಪಾಲಿಸುವ ಆದರ್ಶ ಶ್ರೀ ಚಂದ್ರಶೇಖರ ಭಾರತೀ ಮಹಾಸ್ವಾಮಿಗಳವರಾಗಿದ್ದಾರೆ ಎಂದರು.

ಪ್ರಾಂಶುಪಾಲ ಡಾ.ಜೆ.ಎಸ್.ವೀರಭದ್ರ ಗೌಡ, ವಿದ್ಯಾರ್ಥಿ ಕ್ಷೇಮಪಾಲನಾ ಅಧಿಕಾರಿ ಪ್ರೊ. ಪದ್ಮಾಕ್ಷಿಯಮ್ಮ ಎಂ.ಎಸ್.ಆರ್.ಕೆ. ಅವರಿಗೆ ಮಾರ್ಗದರ್ಶನ ಪಡೆದ ವಿದ್ಯಾರ್ಥಿನಿ ಭಾಗ್ಯ, ವಿದ್ಯಾರ್ಥಿ ಪ್ರತಿನಿಧಿಗಳಾದ ರಕ್ಷಿತ್, ಶ್ರೀನಿವಾಸ್, ನಿತೀಶ್ ಸಾಮಾಜಿಕ ಮತ್ತಿತರರು ಉಪಸ್ಥಿತರಿದ್ದರು.

Scanned by CamScanner

ಪ್ರಜಾವಾಣಿ ಶುಕ್ರವಾರ • ಏಪ್ರಿಲ್ 1, 2016

'ಸನ್ನಡತೆಗೆ ರಂಗಭೂಮಿ ಸಹಕಾರಿ'

ಚೌಳಹಿರಿಯೂರು(ಕಡೂರು): ರಂಗ ಭೂಮಿ ಸನ್ನಡೆಗೆ ರಹದಾರಿ ಮಾಡಿ ಕೊಡುತ್ತದೆ. ಮನುಷ್ಯನ ಆಲೋಚನಾ ಕ್ರಮದ ಮೇಲೆ ಪ್ರಭಾವ ಬೀರುವ ಶಕ್ತಿ ರಂಗ ಕಲೆಗೆ ಇದೆ ಎಂದು ಉಪನ್ಯಾಸಕಿ ಜ್ಯೋತಿ ಶಿವಕುಮಾರ್ ತಿಳಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಚೌಳಹಿರಿಯೂರಿನ ಮೈತ್ರಿ ನಾಟಕ ಸಂಚಾರಿ ತಂಡದ ಸಹಯೋಗದಲ್ಲಿ ಇತ್ತೀಚೆಗೆ ನಡೆದ ವಿಶ್ವರಂಗ ಭೂಮಿ ದಿನಾಚರಣೆ ಹಾಗೂ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ರಂಗಕಲೆಗೆ ತಾಳ್ಮೆ ಕಲಿಸುವ ಶಕ್ತಿ ಇದೆ. ಸಂಸಾರದಲ್ಲಿ ಸಾಮರಸ್ಯ ಕಾಪಾಡುವಲ್ಲಿ ರಂಗಕಲೆ ಪಾತ್ರ ಹಿರಿದು. ದುಷ್ಟ ಮನಸ್ಥಿತಿಯನ್ನು ಬದಲಿಸಲು ಶಕ್ತಿ ರಂಗಚಟುವಟಿಕೆಯಲ್ಲಿರುತ್ತದೆ ಎಂದು ಹೇಳಿದರು. ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಜಿಲ್ಲಾ ಪಂಚಾಯಿತಿ ಸದಸ್ಯೆ ವನಮಾನ ದೇವರಾಜ್, ರಾಷ್ಟ್ರದ ಪ್ರಗತಿಗೆ ಭದ್ರಬುನಾದಿ ಹಾಕಿ ಕೊಟ್ಟ ಇಂದಿರಾಗಾಂಧಿ ಸ್ಮರಣೆ ಅಗತ್ಯ ಎಂದರು.

ಕಾರ್ಯಕ್ರಮ ಸಂಘಟಕ ಎಚ್.ಬಿ. ಮಲ್ಲಿಕಾರ್ಜುನ ಮಾತನಾಡಿದರು. ತಾಲ್ಲೂಕು ಪಂಚಾಯಿತಿ ಸದಸ್ಯ ಭಾರತಿ ಪ್ರಹ್ಲಾದ್, ಗ್ರಾಮ ಪಂಚಾಯಿತಿ ಅಧ್ಯಕ್ಷೆ ಯಮುನಸಿದ್ದಪ್ಪ ದಳವಾಯಿ, ಮೇಘನಾ, ಶ್ವೇತಾ, ಅನ್ನಪೂರ್ಣ ಇದ್ದರು.

ಶಿವಮೊಗ್ಗ ತುಮರಿಯ ಕಿನ್ನರ ಮೇಳ ತಂಡದಿಂದ ಬುಗರಿ ನಾಟಕ ಪ್ರದರ್ಶನ ಗೊಂಡಿತು.



ವಿಶ್ವ ಹಿಂದೂ ಪರಿಷತ್‌ನ ರಾಷ್ಟ್ರೀಯ ಕಾರ್ಯದರ್ಶಿ ದಿನೇಶ್ ಚಂದ್ರಜಿ ಅವರು ಇತ್ತೀಚೆಗೆ ಶೃಂಗೇರಿ ಮಠಕ್ಕೆ ಭೇಟಿ ನೀಡಿದ ವೇಳೆ ಮಾತನಾಡಿದರು. ರಾಜ್ಯ ಕಾರ್ಯದರ್ಶಿ ಗೋಪಾಲ್, ಪ್ರಾಂತೀಯ ಕಾರ್ಯದರ್ಶಿ ಖಾಂಡ್ಯ ಪ್ರವೀಣ್, ಜಿಲ್ಲಾ ಕಾರ್ಯದರ್ಶಿ ಹರೀಶ್ ಶೆಟ್ಟಿ, ಶೃಂಗೇರಿ ತಾಲ್ಲೂಕು ಕಾರ್ಯಧ್ಯಾಕ್ಷ ರಾಜ್‌ಗೋಪಾಲ್ ಇದ್ದರು.

Scanned by CamScanner

ವಿಜಯ ಕರ್ನಾಟಕ VK

ಶುಕ್ರವಾರ, 1 ಏಪ್ರಿಲ್ 2016, ಶಿವಮೊಗ್ಗ

ಆಧ್ಯಾತ್ಮಿಕ ಚೌಕಟ್ಟಿನಲ್ಲಿ ವ್ಯಕ್ತಿತ್ವ ಬೆಳೆಸಿಕೊಳ್ಳಿ



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ಏರ್ಪಡಿಸಿದ್ದ ಸಂಸ್ಥಾಪಕ ಸಂಸ್ಮರಣೆ ಮತ್ತು ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಶ್ರೀಸಚ್ಚಿದಾನಂದ ಸರಸ್ವತಿ ಸ್ವಾಮೀಜಿ ಆಶೀರ್ವಚನ ನೀಡಿದರು.

■ ವಿಕ ಸುದ್ದಿಲೋಕ, ಶೃಂಗೇರಿ

ಪ್ರತಿಯೊಬ್ಬ ವ್ಯಕ್ತಿಯೂ ತನ್ನ ವ್ಯಕ್ತಿತ್ವವನ್ನು ಆಧ್ಯಾತ್ಮಿಕ ಚೌಕಟ್ಟಿನಲ್ಲಿ ಬೆಳೆಸಿಕೊಳ್ಳಬೇಕು, ಅಂತಃಸಾಕ್ಷಿ ಜಾಗೃತಗೊಂಡಂತೆ ಮಾನವತ್ವ ಜಾಗೃತವಾಗಿ ಆಧ್ಯಾತ್ಮಿಕತೆ ಬೆಳೆಯುತ್ತದೆ ಎಂದು ಹರಿಹರಪುರ ಮಠದ ಶ್ರೀಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತೀ ಸ್ವಾಮೀಜಿ ಹೇಳಿದರು.

ಕ್ಯಾಂಪಸ್

ಅವರು ಇತ್ತೀಚೆಗೆ ಶ್ರೀ ಜೆಸಿಬಿಎಂ ಕಾಲೇಜಿನಲ್ಲಿ ಏರ್ಪಡಿಸಿದ್ದ ಸಂಸ್ಥಾಪಕ ಸಂಸ್ಮರಣೆ ಮತ್ತು ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದರು. ಮೋಸ, ವಂಚನೆ, ಸುಳ್ಳು, ಶೋಷಣೆ ಮೊದಲಾದವು ನಮ್ಮ ಅಂತಃಕರಣಕ್ಕೆ ಅವಶ್ಯವಾಗಿರುವ ವಿಚಾರಗಳು. ಅದನ್ನು ನಾವು ತ್ಯಜಿಸಿ, ನೀತಿಯುತವಾಗಿ ನಿತ್ಯದ ಕರ್ತವ್ಯ ಮಾಡಬೇಕು. ನಮ್ಮ ಬದುಕಿಗೆ ಆತ್ಮಸ್ಥೈರ್ಯ ಬೇಕು ಎಂದು ಹೇಳಿದರು.

ಶ್ರೀ ಚಂದ್ರಶೇಖರ ಭಾರತೀ ಸ್ವಾಮೀಜಿಗಳ ಬಗ್ಗೆ ಉಪನ್ಯಾಸ ನೀಡಿದ ಎನ್.ಸಿ.ಪಾಂಡುರಂಗ, ಶೃಂಗೇರಿಯಲ್ಲಿ ಹುಟ್ಟಿ ಶೃಂಗೇರಿ ಪೀಠಕ್ಕೆ ಪೀಠಾಧಿಪತಿಗಳಾಗಿ ನೇಮಕಗೊಂಡ ಏಕೈಕ ವ್ಯಕ್ತಿ ಇವರು. ಯಾವ ಸಂದರ್ಭದಲ್ಲೂ ನಮ್ಮ ತನವನ್ನು ಬಿಡಬಾರದು. ಉಪದೇಶ ನೀಡುವ ಮೊದಲು ಅದನ್ನು ಪಾಲಿಸುತ್ತಿದ್ದ ಮಹಾನ್ ವ್ಯಕ್ತಿ ಶ್ರೀಚಂದ್ರಶೇಖರ ಭಾರತೀ ಮಹಾಸ್ವಾಮೀಜಿಗಳು ಎಂದರು.

ಕಾರ್ಯಕ್ರಮದಲ್ಲಿ ಅಧಿಕ ಅಂಕ ಪಡೆದ ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪದಕ ಮತ್ತು ನಗದು ಬಹುಮಾನ ನೀಡಿ ಪುರಸ್ಕರಿಸಲಾಯಿತು.

ಕಾಲೇಜಿನ ಪ್ರಾಚಾರ್ಯ ಡಾ.ಎಚ್.ಸಿ.ವೀರಪ್ಪಗೌಡ, ವಿದ್ಯಾರ್ಥಿ ಕ್ಷೇಮಪಾಲನಾಧಿಕಾರಿಗಳಾದ ಪ್ರೊ.ದತ್ತಾತ್ರೇಯ ಎಂ.ಮಾರ್ಪಳ್ಳಿ, ಆಡಳಿತ ಮಂಡಳಿ ಸದಸ್ಯ ಅನಂತ ಪದ್ಮನಾಭ ಭಟ್, ವಿದ್ಯಾರ್ಥಿ ನಾಯಕರಾದ ರಕ್ಷಿತ್, ಶ್ರೀನಿವಾಸ್, ನಿತೀಶ್ ನಾಯಕ್ ಮತ್ತಿತರರು ಉಪಸ್ಥಿತರಿದ್ದರು.

Scanned by CamScanner



ಕೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ಮಂಗಳವಾರ ನಡೆದ 'ಕೃಂಗ ಸಂಭ್ರಮ' ಅಂತರ ಕಾಲೇಜು ಸಾಂಸ್ಕೃತಿಕ ಸ್ಪರ್ಧಾಕೂಟದಲ್ಲಿ 'ಕೈತುತ್ತು ಬಾಮೆಗಳ ಕೊಡುಗೆ' ಲೇಖಕಿಯರ ಸಂಗ್ರಹವನ್ನು ಬಿಡುಗಡೆಗೊಳಿಸಲಾಯಿತು.



ಕೃಂಗೇರಿ ಜೆ.ಸಿ.ಬಿ.ಎಂ. ಕಾಲೇಜಿನಲ್ಲಿ ಏರ್ಪಡಿಸಿದ್ದ 'ಸಂಸ್ಕಾರ ಸಂಸ್ಕೃತಿ ಮತ್ತು ಪ್ರತಿಭಾ ಪುರಸ್ಕಾರ' ಕಾರ್ಯಕ್ರಮದಲ್ಲಿ ಶೃಂಗೇರಿ ಮಹಾಸಂಸ್ಥಾನದ ಸ್ವಯಂವ್ಯಕ್ತಾಕ ಸಚ್ಚಿದಾನಂದ ನರಸಿಂಹ ಭಾರತೀ ಮಹಾಸ್ವಾಮಿ ಮಾತನಾಡಿದರು.

'ವ್ಯಕ್ತಿತ್ವವನ್ನು ಆಧ್ಯಾತ್ಮಿಕ ಚೌಕಟ್ಟಿನಲ್ಲಿ ಬೆಳೆಸಿಕೊಳ್ಳಬೇಕು'

ಶೃಂಗೇರಿ: ಪ್ರತಿಯೊಬ್ಬ ವ್ಯಕ್ತಿಯೂ ತನ್ನ ವ್ಯಕ್ತಿತ್ವವನ್ನು ಆಧ್ಯಾತ್ಮಿಕ ಚೌಕಟ್ಟಿನಲ್ಲಿ ಬೆಳೆಸಿಕೊಳ್ಳಬೇಕು ಎಂದು ಹರಿಹರಪುರದ ಮಹಾಪೀಠ ಸ್ವಯಂವ್ಯಕ್ತಾಕ ಸಚ್ಚಿದಾನಂದ ನರಸಿಂಹ ಭಾರತೀ ಸ್ವಾಮೀಜಿ ಹೇಳಿದರು.

ಜೆ.ಸಿ.ಬಿ.ಎಂ. ಕಾಲೇಜಿನಲ್ಲಿ ಏರ್ಪಡಿಸಿದ್ದ 'ಸಂಸ್ಕಾರ ಸಂಸ್ಕೃತಿ ಮತ್ತು ಪ್ರತಿಭಾ ಪುರಸ್ಕಾರ' ಕಾರ್ಯಕ್ರಮದಲ್ಲಿ ಭಾಗವಹಿಸಿ ಆಶೀರ್ವಚನ ನೀಡಿದರು.

ಪ್ರತಿಯೊಬ್ಬ ಮನುಷ್ಯನೂ ಆತ್ಮ ಸಾಕ್ಷಿಗೆ ಅನುಗುಣವಾಗಿ ಪ್ರಾಮಾಣಿಕವಾಗಿ ಬಾಳಿದಾಗ ತನ್ನಲ್ಲಿನ ಮೌಲ್ಯವನ್ನು ವಿಕಾಸ ಮಾಡಿಕೊಳ್ಳಬೇಕು. ಅಂತರಾತ್ಮ ಜಾಗೃತಗೊಂಡಂತೆ, ಹೃದಯ ನೈರ್ಮಲ್ಯ ವಿಸ್ತರಿಸಿ, ಮಾನವತ್ವ ಜಾಗೃತವಾಗಿ ಆಧ್ಯಾತ್ಮಿಕತೆ ಬೆಳೆಯುತ್ತದೆ ಎಂದರು.

ಬದುಕಿನಲ್ಲಿ ಆಧ್ಯಾತ್ಮಿಕತೆ ಇಲ್ಲದಿದ್ದರೆ ಮಾನವನ ಬುದ್ಧಿವಂತಿಕೆ ದುರ್ಬಳಕೆಯಾಗುತ್ತದೆ. ಲೌಕಿಕ ಬದುಕಿನ ಉನ್ನತಿಗೆ ಆಧ್ಯಾತ್ಮಿಕತೆ ಪೂರಕ ಅಗತ್ಯವಾಗಿದ್ದು ಪ್ರತಿಯೊಬ್ಬರೂ ಇದನ್ನು ಜಾಗೃತಗೊಳ್ಳಬೇಕೆಂದು ಅವರು ಹೇಳಿದರು. ಮೋಸ, ವಂಚನೆ, ಸುಳ್ಳು, ಶೋಷಣೆ ಮೊದಲಾದವು ನಮ್ಮ ಅಂತಃಕರಣಕ್ಕೆ ಅಪವಿತ್ರವಾಗಿರುವ ವಿಚಾರಗಳು. ಅದನ್ನು ನಾವು ತ್ಯಜಿಸಿ, ನೀತಿಯುತವಾಗಿ ಸಿಕ್ಕಿದ ಕರ್ತವ್ಯಗಳನ್ನು ಮಾಡಬೇಕು. ನಮ್ಮ ಬದುಕಿಗೆ ಆಕ್ಸಿಜನ್ ಬೇಕು ಎಂದು ಹೇಳಿದರು.

ಚಂದ್ರಶೇಖರ ಭಾರತೀಯರ ಸಂಸ್ಕಾರದಿಂದ ಉನ್ನತ್ಯಾಕ ನೀಡಿದ ಎನ್.ಸಿ. ಪಾಂಡುರಂಗ ಮಹಸ್ಥಾನಿ, ಉಪದೇಶಗಳ ನೀಡುವ ಮೊದಲು ಅದನ್ನು ಪಾಲಿಸಿದ್ದ ಮಹಾನ್ ವ್ಯಕ್ತಿ ಚಂದ್ರಶೇಖರ ಭಾರತೀ ಮಹಾಸ್ವಾಮಿಗಳವರು ಎಂದು ಅವರು ಹೇಳಿದರು.

ಕಾರ್ಯಕ್ರಮದಲ್ಲಿ ಅಧಿಕ ಅಂಕ ಪಡೆದ ವಿದ್ಯಾರ್ಥಿಗಳನ್ನು ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳನ್ನು ಪದಕ ಮತ್ತು ಪಾರಿತೋಷಕಗಳ ಮೂಲಕ ಪುರಸ್ಕರಿಸಲಾಯಿತು. ಕಾಲೇಜಿನ ಪ್ರಾಂಶುಪಾಲ ಡಾ.ಎಚ್.ಸಿ.ವೀರಣ್ಣ ಗೌಡ, ವಿದ್ಯಾರ್ಥಿ ಕ್ಷೇಮಪಾಲನಾಧಿಕಾರಿ ಪ್ರೊ.ದಕ್ಷಾಕ್ಷೇಯಿ ಎಂ.ಮಾರ್ಪಳ್ಳಿ, ಆಡಳಿತ ಮಂಡಳಿ ಸದಸ್ಯ ಆನಂದ ಪದ್ಮ, ಸಾಧು ಶೆಟ್ಟಿ, ವಿದ್ಯಾರ್ಥಿ ನಾಯಕರಾದ ರಕ್ಷಿತ್, ಶ್ರೀನಿವಾಸ್, ನಿತೀಶ್ ಸಾಯಿಮ್ ಮತ್ತಿತರರು ಇದ್ದರು.

Scanned by CamScanner

ಕ್ರೀಯಾಶೀಲತೆ ಕಲೆಯ ಮೂಲಕ ಅನಾವರಣ

ಶೃಂಗೇರಿ

ಮನುಷ್ಯನ ಕ್ರೀಯಾಶೀಲತೆಯು ಕಲೆಯ ಮೂಲಕ ಅನಾವರಣಗೊಳ್ಳುತ್ತದೆ. ಸಾಂಸ್ಕೃತಿಕ ಚಟುವಟಿಕೆಗಳು ಏಕವ್ಯಕ್ತಿ ಕೇಂದ್ರಿತವಾಗದೇ ಗುಂಪುಗಳಲ್ಲಿ ನಡೆದಾಗ ನಮ್ಮಲ್ಲಿ ಮೌಲ್ಯ ಮತ್ತು ಜವಾಬ್ದಾರಿಗಳನ್ನು ಕಲಿಸಿ, ಬೆಳೆಸುತ್ತದೆ ಎಂದು ಮೇಣಸೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲೆ ಪ್ರೋ. ಅಶಾಲತ ಹೇಳಿದರು.

ಅವರು ಜೆ.ಸಿ.ಬಿ.ಎಂ. ಕಾಲೇಜಿನ ಅಂತರ ಕಾಲೇಜು ಸಾಂಸ್ಕೃತಿಕ ಸ್ಪರ್ಧೆ 'ಶೃಂಗ ಸಂಭ್ರಮ' ಉದ್ಘಾಟಿಸಿ ಮಾತನಾಡಿದರು.

ಕಲೆಯು ಕೇವಲ ಪ್ರವೃತ್ತಿಯಾಗಿ ಉಳಿಯದೇ ವೃತ್ತಿಯಾಗಿದ್ದು, ಅದರ ಮೂಲಕ ಹೆಸರು, ಸ್ಥಾನ, ಹಣವನ್ನು ಗಳಿಸುತ್ತಿರುವುದನ್ನು ನಾವಿಂದು ಕಾಣಬಹುದಾಗಿದೆ. ಸಹನೆ, ಸ್ವೀಕರಿಸುವ ಮನೋಭಾವಗಳು ನಮ್ಮೊಡನೆ ಬೆಳೆಯಲು ಕಲೆ ಸಹಕಾರಿ ಎಂದ ಅವರು ಶ್ರದ್ಧೆಯಿಂದ ಕೆಲಸ ಮಾಡಿದಾಗ ಸ್ಪರ್ಧಿಗಳ ಆತ್ಮವಿಶ್ವಾಸ ಹೆಚ್ಚುತ್ತದೆ ಎಂದರು.



ಶೃಂಗೇರಿ ಜೆಸಿಬಿಎಂ ಕಾಲೇಜಿನ ಶೃಂಗಸಂಭ್ರಮ ಕಾರ್ಯಕ್ರಮದಲ್ಲಿ ನಾಗರಾಜ ಕೊವೆಯವರ ಕೈತುತ್ತು-ಭಾವನೆಗಳ ಹೊತ್ತು ಲೇಖನ ಸಂಗ್ರಹ ಬಿಡುಗಡೆಗೊಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಡಾ. ಹೆಚ್.ಸಿ. ವೀರಭದ್ರಗೌಡ ಮಾತನಾಡಿ, ಸಾಂಸ್ಕೃತಿಕ ಸಂಭ್ರಮಗಳು ನಮ್ಮಲ್ಲಿ ಉತ್ಕೃಷ್ಟವಾದ ಸಾಂಸ್ಕೃತಿಕತೆ ಬೆಳೆಸುತ್ತವೆ. ಶಿಕ್ಷಣದ ಜೊತೆಗಿನ ಕಲೆಯಾದಾಗ ಶಿಕ್ಷಣ ಸಹಿಯಾಗಿರುತ್ತದೆ ಎಂದರು. ಸಭಾ ಕಾರ್ಯಕ್ರಮದ ನಂತರ ಸಾಂಸ್ಕೃತಿಕ ಸ್ಪರ್ಧೆಗಳು ಜರುಗಿದವು. ಸ್ಪರ್ಧೆಯಲ್ಲಿ ಕುವೆಂಪು ವಿಶ್ವವಿದ್ಯಾನಿಲಯದ 10 ಕಾಲೇಜುಗಳು ಭಾಗವಹಿಸಿದ್ದವು. ಕಾಲೇಜಿನ ವಿದ್ಯಾರ್ಥಿ ನಾಗರಾಜ ಕೊವೆಯವರ 'ಕೈತುತ್ತು-ಭಾವನೆಗಳ ಹೊತ್ತು' ಎಂಬ ಸಾಂದರ್ಭಿಕ ಲೇಖನಗಳ ಸಂಗ್ರಹವನ್ನು ಬಿಡುಗಡೆಗೊಳಿಸಲಾಯಿತು. ವಿದ್ಯಾರ್ಥಿ ಕ್ಷೇಮಪಾಲನಾಧಿಕಾರಿಗಳಾದ ಪ್ರೋ. ದತ್ತಾತ್ರೇಯ ಎಂ. ಮಾರ್ಪಳ್ಳಿ, ಸಾಂಸ್ಕೃತಿಕ ಸಂಚಾಲಕರಾದ ಯಶವಂತಿ ಎಸ್. ಸಾಲೆಯಾನ, ವಿದ್ಯಾರ್ಥಿ ನಾಯಕರಾದ ಶ್ರೀನಿವಾಸ್ ಜಿ.ಎ, ನಿತೀಶ್ ನಾಯಕ್, ರಕ್ಷಿತ್ ಮತ್ತಿತರರು ಉಪಸ್ಥಿತರಿದ್ದರು.

ಸಂಯುಕ್ತ ಕರ್ನಾಟಕ 31-3-16

Scanned by CamScanner

ಕಲೆಯಿಂದ ಮನುಷ್ಯ ಕ್ರಿಯಾಶೀಲ

ವಿಶ್ವವಾಣಿ ಸುದ್ದಿಮನೆ ಶೃಂಗೇರಿ

ಕಲೆಯ ಮೂಲಕ ಮನುಷ್ಯನ ಕ್ರಿಯಾಶೀಲತೆ ಅನಾವರಣಗೊಳ್ಳುತ್ತದೆ ಎಂದು ಮೇಣಸೆಯ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲೆ ಪ್ರೊ. ಆಶಾಲತಾ ಹೇಳಿದರು. ಜೆಸಿಬಿಎಂ ಕಾಲೇಜಿನಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಶೃಂಗ ಸಂಭ್ರಮ ಅಂತರ ಕಾಲೇಜು ಸಾಂಸ್ಕೃತಿಕ ಸ್ಪರ್ಧೆ ಉದ್ಘಾಟಿಸಿ ಮಾತನಾಡಿದರು.

ಕಲೆ ಕೇವಲ ಪ್ರವೃತ್ತಿಯಾಗಿ ಉಳಿಯದೇ ವೃತ್ತಿಯಾಗಿದ್ದು, ಆಲೇಕರು 'ಕಲೆಯ ಮೂಲಕ ಹೆಸರು, ಸ್ಥಾನ ಮತ್ತು ಹಣ ಗಳಿಸುತ್ತಿದ್ದಾರೆ. ಸಾಂಸ್ಕೃತಿಕ ಚಟುವಟಿಕೆಗಳು ಏಕವ್ಯಕ್ತಿ ಕೇಂದ್ರಿತವಾಗದೆ ಗುಂಪುಗಳಲ್ಲಿ ನಡೆಯಬೇಕು. ಆಗ ಜೀವನದ ಮೌಲ್ಯ ಮತ್ತು ಜವಾಬ್ದಾರಿಗಳನ್ನು ಕಲಿತು ಬೆಳೆಯಲು ಸಾಧ್ಯವಾಗುತ್ತದೆ. ಸಹನೆ ಮತ್ತು ಸ್ವೀಕರಿಸುವ ಮನೋಭಾವ ಬೆಳೆಯಲು ಕಲೆ ಸಹಕಾರಿ. ಶ್ರದ್ಧೆಯಿಂದ ಕೆಲಸ ಮಾಡಿದರೆ ಆತ್ಮವಿಶ್ವಾಸ ಹೆಚ್ಚುತ್ತದೆ ಎಂದರು.



ಕಾಲೇಜಿನ ದ್ವಿತೀಯ ಬಿಎಸ್‌ಸಿ ವಿದ್ಯಾರ್ಥಿ ನಾಗರಾಜ ಕೂವೆಯ ಕೈತುತ್ತು-ಭಾವನೆಗಳ ಹೊತ್ತು ಎಂಬ ಸಾಂದರ್ಭಿಕ ಲೇಖನಗಳ ಸಂಗ್ರಹ ಬಿಡುಗಡೆಗೊಳಿಸಲಾಯಿತು.

'ಅಧ್ಯಕ್ಷತೆ ವಹಿಸಿದ್ದ ಡಾ. ಎಚ್.ಸಿ ವೀರಪ್ಪ ಗೌಡ ಮಾತನಾಡಿ, ಸಾಂಸ್ಕೃತಿಕ ಸಂಭ್ರಮಗಳು ನಮ್ಮಲ್ಲಿ ಉತ್ಕೃಷ್ಟ ಸಾಂಸ್ಕೃತಿಯನ್ನು ಬೆಳೆಸುತ್ತವೆ. ಶಿಕ್ಷಣದ ಬೇರುಗಳು ಕಹಿಯಾದಾಗ ಶಿಕ್ಷಣ ಸಿಹಿಯಾಗಿರುತ್ತದೆ ಎಂದರು. ಸಾಂಸ್ಕೃತಿಕ ಸ್ಪರ್ಧೆಗಳು ಜರುಗಿದವು. ಸ್ಪರ್ಧೆಯಲ್ಲಿ ಕುವೆಂಪು ವಿಶ್ವವಿದ್ಯಾಲಯದ 10 ಕಾಲೇಜುಗಳು ಭಾಗವಹಿಸಿದ್ದವು.

ಕಾಲೇಜಿನ ದ್ವಿತೀಯ ಬಿಎಸ್‌ಸಿ ವಿದ್ಯಾರ್ಥಿ ನಾಗರಾಜ ಕೂವೆಯ ಕೈತುತ್ತು-ಭಾವನೆಗಳ ಹೊತ್ತು ಎಂಬ ಸಾಂದರ್ಭಿಕ ಲೇಖನಗಳ ಸಂಗ್ರಹ ಬಿಡುಗಡೆಗೊಳಿಸಲಾಯಿತು.

ವಿದ್ಯಾರ್ಥಿ ಕ್ಷೇಮಪಾಲನಾಧಿಕಾರಿ ಪ್ರೊ. ದತ್ತಾತ್ರೇಯ ಎಂ. ಮಾರ್ಪಳ್ಳಿ, ಸಾಂಸ್ಕೃತಿಕ ಸಂಚಾಲಕ ಯಶವಂತಿ ಎಸ್. ಸಾಲಿಯಾನ, ವಿದ್ಯಾರ್ಥಿ ನಾಯಕರಾದ ಶ್ರೀನಿವಾಸ್ ಜಿ.ಪಿ, ನಿತೀಶ್ ನಾಯಕ್, ರಕ್ಷಿತ್ ಇದ್ದರು.

Scanned by CamScanner

ಬುಧವಾರ, 30 ಮಾರ್ಚ್ 2016, ಶಿವಮೊಗ್ಗ

ವಿಜಯ ಕರ್ನಾಟಕ VK

ಬದುಕು ಮಾದರಿಯಾಗಿರಲಿ



ಶೃಂಗೇರಿ ಶ್ರೀ ಜೆಸಿಬಿಎಂ ಕಾಲೇಜಿನಲ್ಲಿ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಸಂಘಗಳ ಸಮಾರೋಪ ಸಮಾರಂಭ ಹಾಗೂ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಡಾ.ಭೀಮೇಶ್ವರ ಜೋಷಿ ಮಾತನಾಡಿದರು.

■ ವಿಕ ಸುದ್ದಿಲೋಕ, ಶೃಂಗೇರಿ

ನಮ್ಮ ಜೀವನ ಕುಟುಂಬ, ಸಮಾಜಕ್ಕೆ ಮಾದರಿಯಾಗಿರಬೇಕು. ನಮ್ಮ ಬದುಕು ವುನಃ ವುನಃ ಅರ್ಪಣೆಗೊಳಪಟ್ಟು ಆದರ್ಶವಾಗಿರಬೇಕು ಎಂದು ಹೊರನಾಡಿನ ಧರ್ಮದರ್ಶಿ ಡಾ.ಭೀಮೇಶ್ವರ ಜೋಷಿ ಹೇಳಿದರು.

ಅವರು ಸೋಮವಾರ ಶ್ರೀ ಜೆಸಿಬಿಎಂ ಕಾಲೇಜಿನಲ್ಲಿ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಸಂಘಗಳ ಸಮಾರೋಪ ಸಮಾರಂಭ ಹಾಗೂ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದರು.

ಜೀವನ ಸಂಸ್ಕರಣೆಯ ರೂಪದಲ್ಲಿರಬೇಕು. ನಾವು ಪ್ರಪಂಚದಲ್ಲಿದ್ದರೂ ಬದುಕಿಗೆ ಅಂಟಿಕೊಳ್ಳದೆ ಬಾಳಬೇಕು. ತನ್ನನ್ನು ತಾನು ಅಹಿಂಸೆ, ಕಷ್ಟ ತ್ಯಾಗಕ್ಕೆ ಒಡ್ಡಿಕೊಂಡವನು ಮಹಾತ್ಮನಾಗುತ್ತಾನೆ. ಸಮಾಜ ಆತನ ಇರುವಿಕೆಯನ್ನು ಗುರುತಿಸುತ್ತದೆ ಎಂದು ಅವರು ಅಭಿಪ್ರಾಯಪಟ್ಟರು.

ಪ್ರಾಚಾರ್ಯ ಡಾ.ಎಚ್.ಸಿ. ವೀರಪ್ಪ ಗೌಡ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ವಿದ್ಯಾರ್ಥಿ ಕ್ಷೇಮಪಾಲನಾಧಿಕಾರಿ ಪ್ರೊ.ದತ್ತಾತ್ರೇಯ ಎಂ.ಮಾರ್ಪಳ್ಳಿ, ಕಾಲೇಜು ವಿಶ್ವಸ್ಥ ಮಂಡಳಿ ಸದಸ್ಯ ಅನಂತ ಪದ್ಮನಾಭ ಭಟ್, ವಿದ್ಯಾರ್ಥಿ ನಾಯಕರಾದ ಶ್ರೀನಿವಾಸ್, ರಕ್ಷಿತ್, ನಿತೀಶ್ ನಾಯಕ್ ಹಾಜರಿದ್ದರು.

ಶ್ರೀಲಕ್ಷ್ಮೀ ಪ್ರಾರ್ಥಿಸಿ, ಪೂರ್ಣಾನಂದ ಸ್ವಾಗತಿಸಿ, ಸುಮಂತ್ ವಂದಿಸಿದರು.

Scanned by CamScanner

ಮಂಗಳವಾರ, 29, ಮಾರ್ಚ್, 2016, ದಾವಣಗೆರೆ

www.skdaily.com ಸಂಯುಕ್ತ ಕರ್ನಾಟಕ

ಸಮಾಜಕ್ಕೆ 'ಜೀವನ' ಮಾದರಿ ಆಗಿರಲಿ



ಶೃಂಗೇರಿ

ನಮ್ಮ ಜೀವನ ಕುಟುಂಬ ಮತ್ತು ಸಮಾಜಕ್ಕೆ ಮಾದರಿಯಾಗಿರಬೇಕು ಎಂದು ಹೊರನಾಡು ಶ್ರೀ ಅನ್ನಪೂರ್ಣೇಶ್ವರಿ ಕ್ಷೇತ್ರದ ಧರ್ಮಕರ್ತ ಡಾ.ಭೀಮೇಶ್ವರ ಜೋಷಿ ಹೇಳಿದರು.

ಜೆಸಿಬಿಎಂ ಕಾಲೇಜಿನ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಸಂಘಗಳ ಸಮಾರೋಪ ಸಮಾರಂಭ ಹಾಗೂ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ನಾವು ಪ್ರಪಂಚದಲ್ಲಿ ಬದುಕಿದ್ದರೂ ಯಾವುದಕ್ಕೂ ಅಂಟಿಕೊಳ್ಳದೇ ಬಾಳಬೇಕು. ಅಹಿಂಸೆ, ಕಷ್ಟ, ತ್ಯಾಗಕ್ಕೆ ತನ್ನನ್ನು ತಾನು ಒಡ್ಡಿಕೊಂಡವರು ಮಹಾತ್ಮ ಆಗುತ್ತಾರೆ. ಸಮಾಜವು ಸಹ ಅತನ ಇರುವಿಕೆ ಗುರುತಿಸುತ್ತದೆ ಎಂದು ಹೇಳಿದರು.

ಹಿರಿಯರು ಕಿರಿಯರ ಕಾಲೆಳೆಯದೇ ಅವರನ್ನು ಸ್ವಾಗತಿಸುವ, ಒಗ್ಗೂಡಿಸುವ ಕೆಲಸಗಳು ನಡೆಯಬೇಕಿದೆ. ನಮ್ಮ ಬದುಕು ಪುನ: ಪುನ: ಅರ್ಪಣೆಗೊಳಪಟ್ಟು ಆದರ್ಶವಾಗಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಡಾ ಹೆಚ್.ಸಿ. ವೀರಪ್ಪ ಗೌಡ ಅಧ್ಯಕ್ಷತೆ ವಹಿಸಿದ್ದರು. ವಿದ್ಯಾರ್ಥಿ ಕ್ಷೇಮ ಪಾಲನಾಧಿಕಾರಿ ಪ್ರೊ. ದತ್ತಾತ್ರೇಯ ಎಂ. ಮಾರ್ಪಳ್ಳಿ, ಕಾಲೇಜು ವಿಶ್ವಸ್ತ ಮಂಡಳಿ ಸದಸ್ಯ ಅನಂತ ಪದ್ಮನಾಭ ಭಟ್, ವಿದ್ಯಾರ್ಥಿ ನಾಯಕರಾದ ಶ್ರೀನಿವಾಸ್, ರಕ್ಷಿತ್, ನಿತೀಶ್ ನಾಯಕ್ ಮಾತನಾಡಿದರು. ಶ್ರೀಲಕ್ಷ್ಮೀ ಪ್ರಾರ್ಥಿಸಿದರು. ಪೂರ್ಣಾನಂದ ಸ್ವಾಗತಿದರು. ಸುಮಂತ್ ವಂದಿಸಿದರು.

Scanned by CamScanner

ಸಮಾಜಕ್ಕೆ ಮಾದರಿಯಾಗಿ ಬದುಕಿ



ಜೆಸಿಬಿಎಂ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಸಂಘಗಳ ಸಮಾರೋಪ ಸಮಾರಂಭ ಹಾಗೂ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಹೊರನಾಡಿನ ಧರ್ಮಕರ್ತ ಡಾ. ಭೀಮೇಶ್ವರ ಜೋಶಿ ಮಾತನಾಡಿದರು.

ವಿಶ್ವವಾಣಿ ಸುದ್ದಿಮನೆ ಶೃಂಗೇರಿ

ನಮ್ಮ ಜೀವನ ಕುಟುಂಬ, ಸಮಾಜಕ್ಕೆ ಮಾದರಿಯಾಗಿರಬೇಕು. ಜೀವನ ಸಂಸ್ಮರಣೆ ರೂಪದಲ್ಲಿರಬೇಕು ಎಂದು ಹೊರನಾಡಿನ ಧರ್ಮಕರ್ತ ಡಾ. ಭೀಮೇಶ್ವರ ಜೋಶಿ ಹೇಳಿದರು.

ಜೆಸಿಬಿಎಂ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಸಂಘಗಳ ಸಮಾರೋಪ ಸಮಾರಂಭ ಹಾಗೂ ವಾರ್ಷಿಕೋತ್ಸವ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಮಾತನಾಡಿದರು.

ಪ್ರಪಂಚದಲ್ಲಿದ್ದು ಬದುಕಿ, ಅಂಟಿಕೊಳ್ಳದೇ ಬಾಳಬೇಕು. ತನ್ನನ್ನು ತಾನು ಅಹಿಂಸೆ, ಕಷ್ಟ ಹಾಗೂ ತ್ಯಾಗಕ್ಕೆ ಒಡ್ಡಿಕೊಂಡವನು ಮಹಾತ್ಮನಾಗುತ್ತಾನೆ. ಸಮಾಜ ಅತನ ಇರುವಿಕೆ ಗುರುತಿಸುತ್ತದೆ ಎಂದರು.

ಹಿರಿಯರು ಕಿರಿಯರ ಕಾಲೆಳೆಯದೇ ಅವರನ್ನು ಸ್ವಾಗತಿಸುವ, ಒಗ್ಗೂಡಿಸುವ ಕೆಲಸ ಇಂದು ಅಗತ್ಯವಾಗಿದೆ. ನಮ್ಮ ಬದುಕು ಅರ್ಪಣೆಗೊಳಪಟ್ಟು ಆದರ್ಶವಾಗಬೇಕು ಎಂದರು.

ಡಾ. ಎಚ್.ಸಿ ವೀರಪ್ಪಗೌಡ, ಪ್ರೊ. ದತ್ತಾತ್ರೇಯ.ಎಂ ಮಾರ್ಪಳ್ಳಿ, ಕಾಲೇಜು ವಿಶ್ವಸ್ತ ಮಂಡಳಿ ಸದಸ್ಯ ಅನಂತ ಪದ್ಮನಾಭ ಭಟ್, ಶ್ರೀನಿವಾಸ್, ರಕ್ಷಿತ್, ನಿತೀಶ್ ನಾಯಕ್ ಇದ್ದರು.

Scanned by CamScanner

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » SHIVAMOGGA
ಮಂಗಳವಾರ
29 ಮಾರ್ಚ್ 2016
29 MARCH 2016
3

ಸಮಾಜಕ್ಕೆ ಮಾದರಿಯಾಗಿರಲಿ ಜೀವನ

ಹೊರನಾಡು ಧರ್ಮಕರ್ತ ಡಾ. ಭೀಮೇಶ್ವರ ಜೋಷಿ ಸಲಹೆ

ಶೃಂಗೇರಿ: ನಮ್ಮ ಜೀವನ ಕುಟುಂಬ ಹಾಗೂ ಸಮಾಜಕ್ಕೆ ಮಾದರಿಯಾಗುವ ಮೂಲಕ ಸಂಸ್ಮರಣೆ ರೂಪದಲ್ಲಿರಬೇಕು ಎಂದು ಹೊರನಾಡು ಧರ್ಮಕರ್ತ ಡಾ. ಭೀಮೇಶ್ವರ ಜೋಷಿ ಹೇಳಿದರು.

ಪಟ್ಟಣದ ಜೆಸಿಬಿಎಂ ಕಾಲೇಜಿನಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಸಂಘಗಳ ಸಮಾರೋಪ ಸಮಾರಂಭ ಹಾಗೂ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿ, ಪ್ರಪಂಚದಲ್ಲಿ ಬದುಕು ಶಾಶ್ವತವಲ್ಲ. ಇದ್ದಷ್ಟು ಕಾಲ ಸ್ವಾರ್ಥಪರ ಚಿಂತನೆಗಳಿಗೆ ಅಂಟಿಕೊಳ್ಳದೆ ಬದುಕುವುದೇ ನಿಜ ಜೀವನ ಎಂದರು.

ತಾನೂ ಬದುಕಿ ಮತ್ತೊಬ್ಬರಿಗೂ ಸಹಾಯಹಸ್ತ ನೀಡುವ ಮಾನವನ ಬದುಕೇ ಶ್ರೇಷ್ಠ. ತನ್ನನ್ನು ತಾನು ಅಹಿಂಸೆ, ಕಷ್ಟ, ತ್ಯಾಗಕ್ಕೆ ಒಡ್ಡಿಕೊಂಡವನು ಮಹಾತ್ಮನಾಗುತ್ತಾನೆ. ಸಮಾಜದಲ್ಲಿ ಸುಸಂಸ್ಕೃತ ವಾತಾವರಣ ಪರಿಮೂಡಿಸುತ್ತಾನೆ. ಅಂಥವರ ಇರುವಿಕೆಯನ್ನು ಸಮಾಜ ನಿರಂತರ



ಜೆಸಿಬಿಎಂ ಕಾಲೇಜಿನ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಸಂಘಗಳ ಸಮಾರೋಪ ಸಮಾರಂಭದಲ್ಲಿ ಹೊರನಾಡಿನ ಧರ್ಮಕರ್ತ ಡಾ. ಭೀಮೇಶ್ವರ ಜೋಷಿ ಮಾತನಾಡಿದರು.

ಗುರುತಿಸುತ್ತದೆ ಎಂದು ಅಭಿಪ್ರಾಯಪಟ್ಟರು.

ಹಿರಿಯರ ಆದರ್ಶಗಳನ್ನು ಮೈಗೂಡಿಸಿಕೊಂಡು ಕಿರಿಯರು ಬೆಳೆಯಬೇಕು. ಆಧುನಿಕತೆ ಸೋಗಿನಲ್ಲಿ ಭ್ರಮೆಯ ಲೋಕದಲ್ಲಿ ಎಲ್ಲೆಡೆ ಕೆಟ್ಟದ್ದು ಹೆಚ್ಚಾಗಿ ಪ್ರಜ್ವಲಿಸುತ್ತಿದೆ. ಪ್ರಸ್ತುತ ಇಂತಹ ಸನ್ನಿವೇಶದಲ್ಲಿ ಕಿರಿಯರು ಪರಸ್ಪರ ಪ್ರೀತಿ, ವಿಶ್ವಾಸದಿಂದ ಮನಸ್ಸುಗಳನ್ನು ಒಗ್ಗೂಡಿಸುವ ಕೆಲಸ ಮಾಡಬೇಕಿದೆ. ನಮ್ಮ ಬದುಕು ಪುನಃ ಅರ್ಪಣೆಗೊಳಪಟ್ಟು ಆದರ್ಶವಾಗಬೇಕು ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಪ್ರಾಚಾರ್ಯ ಡಾ. ಎಚ್.ಸಿ.ವೀರಪ್ಪ ಗೌಡ ಅಧ್ಯಕ್ಷತೆ ವಹಿಸಿದ್ದರು. ವಿದ್ಯಾರ್ಥಿ ಕ್ಷೇಮಪಾಲನಾಧಿಕಾರಿ ಪ್ರೊ. ದತ್ತಾತ್ರೇಯ ಮಾರ್ಪಳ್ಳಿ, ಕಾಲೇಜು ವಿಶ್ವಸ್ತ ಮಂಡಳಿ ಸದಸ್ಯ ಅನಂತ ಪದ್ಮನಾಭ ಭಟ್, ವಿದ್ಯಾರ್ಥಿ ನಾಯಕರಾದ ಶ್ರೀನಿವಾಸ್, ರಕ್ಷಿತ್, ನಿತೀಶ್ ನಾಯಕ್, ಶ್ರೀಲಕ್ಷ್ಮಿ, ಪೂರ್ಣಾನಂದ, ಸುಮಂತ್ ಹಾಜರಿದ್ದರು.

Scanned by CamScanner

ಕನ್ನಡಪ್ರಭ
ಮಂಗಳವಾರ 29.3.2016

ಜೀವನ ಸಮಾಜಕ್ಕೆ ಮಾದರಿ ಆಗಿರಲಿ: ಭೀಮೇಶ್ವರ ಜೋಷಿ

• **ಕನ್ನಡಪ್ರಭ ವಾರ್ತೆ** ಶೃಂಗೇರಿ

ನಮ್ಮ ಜೀವನ ಕುಟುಂಬ, ಸಮಾಜಕ್ಕೆ ಮಾದರಿಯಾಗಿರಬೇಕು ಎಂದು ಹೊರನಾಡು ಕ್ಷೇತ್ರ ಧರ್ಮಕರ್ತ ಡಾ. ಭೀಮೇಶ್ವರ ಜೋಷಿ ಹೇಳಿದರು. ಅವರು ಜೆಸಿಬಿಎಂ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಸಂಘಗಳ ಸಮಾರೋಪ ಹಾಗೂ ವಾರ್ಷಿಕೋತ್ಸವದಲ್ಲಿ ಮಾತನಾಡಿದರು.

ನಾವು ಪ್ರಪಂಚದಲ್ಲಿ ಇದ್ದು, ಬದುಕಿ, ಅಂಟಿಕೊಳ್ಳದೇ ಬಾಳಬೇಕು. ತನ್ನನ್ನು ತಾನು ಅಂಸೆ, ಕಪ್ಪ, ತ್ಯಾಗಕ್ಕೆ ಒಡ್ಡಿಕೊಂಡವನು ಮಹಾತ್ಮನಾಗುತ್ತಾನೆ. ಹಿರಿಯರು ಕಿರಿಯರ ಕಾಲೆಳೆಯದೇ ಅವರನ್ನು ಸ್ವಾಗತಿಸುವ, ಒಗ್ಗೂಡಿಸುವ ಕೆಲಸ ಇಂದು ಅಗತ್ಯ. ನಮ್ಮ ಬದುಕು ಪುನ: ಪುನ: ಅರ್ಪಣೆಗೊಳಪಟ್ಟು

■ ಜೆಸಿಬಿಎಂ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಕಲಾ, ವಾಣಿಜ್ಯ ಸಂಘಗಳ ಸಮಾರೋಪ

ಆದರ್ಶವಾಗಬೇಕು ಎಂದು ನುಡಿದರು.

ಪ್ರಾಚಾರ್ಯ ಎಚ್.ಸಿ.ವೀರಪ್ಪಗೌಡ ಅಧ್ಯಕ್ಷತೆ ವಹಿಸಿದ್ದರು.ಮುಖ್ಯ ಅತಿಥಿಗಳಾಗಿ ಪ್ರೊ. ದತ್ತಾತ್ರೇಯ ಎಂ. ಮಾರ್ಪಳ್ಳಿ, ಕಾಲೇಜು ವಿಶ್ವಸ್ತ ಮಂಡಳಿ ಸದಸ್ಯ ಅನಂತ ಪದ್ಮನಾಭ ಭಟ್, ವಿದ್ಯಾರ್ಥಿ ನಾಯಕ ಶ್ರೀನಿವಾಸ್, ರಕ್ಷಿತ್, ನಿತೀಶ್‌ನಾಯಕ್ ಮತ್ತಿತರರು ಉಪಸ್ಥಿತರಿದ್ದರು.

ಪೂರ್ಣಾನಂದ ಸ್ವಾಗತಿಸಿದರು. ಸುಮಂತ್ ನಿರೂಪಿಸಿ ವಂದಿಸಿದರು.

Scanned by CamScanner



ಪ್ರಥಮ ಬಿಕಾಂ ವಿದ್ಯಾರ್ಥಿನಿ ಸ್ವಾತಿ ಅತ್ಯಾಚಾರ ಮತ್ತು ಕೊಲೆ ಆರೋಪಿಗೆ ಜಾಮೀನು ಸಿಗಬಾರದು ಎಂದು ಶೃಂಗೇರಿ ಜೆಸಿಬಿಎಂ ಕಾಲೇಜಿನ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು. ಕಾಲೇಜಿನಿಂದ ಬಸ್ ನಿಲ್ದಾಣದವರೆಗೆ ಪ್ರತಿಭಟನೆ ಮೆರವಣಿಗೆಯಲ್ಲಿ ಸಾಗಿ ಬಳಿಕ ಜೆಸಿಬಿಎಂ ಕಾಲೇಜು ಪ್ರಾಂಶುಪಾಲ ವೀರಪ್ಪ ಗೌಡ ತಹಸೀಲ್ದಾರ್‌ಗೆ ಮನವಿ ಪತ್ರ ಸಲ್ಲಿಸಿದರು.

Scanned by CamScanner

ಶನಿವಾರ, 19 ಮಾರ್ಚ್ 2016, ಶಿವಮೊಗ್ಗ

ಕುವೆಂಪು ವಿವಿ ವಾಲಿಬಾಲ್ ಪಂದ್ಯಾವಳಿ ಫಲಿತಾಂಶ



ಶೃಂಗೇರಿ ಜೆಸಿಬಿಎಂ ಕಾಲೇಜಿನ ವಿದ್ಯಾರ್ಥಿನಿಯರು ವಾಲಿಬಾಲ್ ಪಂದ್ಯಾವಳಿಯಲ್ಲಿ ಕುವೆಂಪು ವಿವಿ ಮಟ್ಟದ ಪ್ರಥಮ ಬಹುಮಾನ ಪಡೆದರು.

ಶೃಂಗೇರಿ: ಚಿಕ್ಕಮಗಳೂರಿನ ಐಡಿ ಎಸ್‌ಜಿ ಕಾಲೇಜಿನಲ್ಲಿ ಏರ್ಪಡಿಸಿದ್ದ ಕುವೆಂಪು ವಿಶ್ವವಿದ್ಯಾನಿಲಯ ಮಟ್ಟದ ವಾಲಿಬಾಲ್ ಕ್ರೀಡೆಯಲ್ಲಿ ಶೃಂಗೇರಿಯ ಶ್ರೀ ಜೆಸಿಬಿಎಂ ಕಾಲೇಜಿನ ವಿದ್ಯಾರ್ಥಿನಿಯರಾದ ಅಪೂರ್ವ, ಮಧುಶ್ರೀ, ಪವಿತ್ರ, ಸಾದ್ವಿತ, ಸುಮಂಗಲಿ, ರೇಖಾ, ಸಿಂಚನ, ರಕ್ಷಿತ, ಕಾವ್ಯ ವಿಜೇತರಾಗಿದ್ದಾರೆ. ವಿಜೇತರು ಪ್ರಶಸ್ತಿಯನ್ನು ಕಾಲೇಜು ಆಡಳಿತ ಮಂಡಳಿಯ ಕೆ.ಆರ್.ಅನಂತಪದ್ಮನಾಭ ಶರ್ಮ, ಪ್ರಾಂಶುಪಾಲ ಎಚ್.ಸಿ.ವೀರಪ್ಪಗೌಡ ಹಾಗೂ ದೈಹಿಕ ಶಿಕ್ಷಣ ಶಿಕ್ಷಕ ಲೋಕೇಶ್ ಅವರಿಗೆ ಹಸ್ತಾಂತರಿಸಿದರು.

n Media Company Limited, by R. J. Prakashanat No.373, 1st Floor, SRR Complex, Jail Road, Shivamogga - 577201 and printed by him at I
re Trinity, 9th Floor, 17, M.G.Road, Bangalore-560 001 (Ph:080-40695000). Editor: Thimmappa Bhat. Resident Editor: Nagaraja S. ©All Ri

Scanned by CamScanner

ವಿಜಯವಾಣಿ - 7.3.16

ಪ್ರದರ್ಶನದ ಬದುಕು ಬೇಡ: ಜೋಶಿ



ನಗರದ ಜೆಸಿಬಿಎಮ್ ಕಾಲೇಜಿನಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಭಾವೈಕ್ಯ ಶಿಬಿರದಲ್ಲಿ ಹೊರನಾಡು ಅನ್ನಪೂರ್ಣೇಶ್ವರಿ ದೇವಸ್ಥಾನದ ಧರ್ಮಕರ್ತ ಭೀಮೇಶ್ವರ ಜೋಶಿ ಮಾತನಾಡಿದರು.

ವಿಶ್ವವಾಣಿ ಸುದ್ದಿಮನೆ ಶೃಂಗೇರಿ

ನೀರು ವಿಶಾಲ ಸಮುದ್ರವನ್ನು ಸೇರುತ್ತ ವಿಸ್ತಾರಗೊಳ್ಳುವಂತೆ ನಮ್ಮ ಮನಸ್ಸು, ಬದುಕು ಕೂಡಾ ವಿಸ್ತಾರಗೊಳ್ಳಬೇಕು. ಸಾಧನೆಯ ಹಾದಿಯಲ್ಲಿ ನಿದರ್ಶನದ ಬದುಕಿರಬೇಕೆ ಹೊರತು, ಪ್ರದರ್ಶನದ ಬದುಕು ಬೇಡ ಎಂದು ಹೊರನಾಡಿನ ಅನ್ನಪೂರ್ಣೇಶ್ವರಿ ದೇವಸ್ಥಾನದ ಧರ್ಮಕರ್ತ ಭೀಮೇಶ್ವರ ಜೋಷಿ ಹೇಳಿದರು.

ಕರ್ನಾಟಕ ಸರಕಾರ, ರಾಷ್ಟ್ರೀಯ ಸೇವಾ ಯೋಜನಾಕೋಶ, ಕುವೆಂಪು ವಿಶ್ವವಿದ್ಯಾಲಯದ ಆಶ್ರಯದಲ್ಲಿ ಜೆಸಿಬಿಎಮ್ ಕಾಲೇಜಿನಲ್ಲಿ ನಡೆಯುತ್ತಿರುವ ಏಳು ದಿನಗಳ ರಾಷ್ಟ್ರೀಯ ಭಾವೈಕ್ಯ ಶಿಬಿರದ ಅಂಗವಾಗಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾತನಾಡಿ, ನಮ್ಮಲ್ಲಿನ ಅಂತರಂಗದ ಕೊಳೆಯನ್ನು ಕಳಚಿದಾಗ ಮಾತ್ರ ಬದುಕು ಸಾರ್ಥಕವಾಗುತ್ತದೆ.

ವಿ.ವಾ. 7.3.16

Scanned by CamScanner

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » SHIVAMOGGA
4 | ಭಾನುವಾರ 6 ಮಾರ್ಚ್ 2016
6 MARCH 2016

ಕಾಫಿ

ಚಿಕ್ಕಮಗಳೂರು

ಅರೇಬಿಕಾ ಪಾರ್ಚ್‌ಮೆಂಟ್	8,250
ಅರೇಬಿಕಾ ಚೆರ್ರಿ	3,350
ರೋಬಸ್ಟಾ ಪಾರ್ಚ್‌ಮೆಂಟ್	5,800
ರೋಬಸ್ಟಾ ಚೆರ್ರಿ	2,700

ಸುದ್ದಿ ಕಾರ್ನರ್

ಅಂತರಂಗ ಶುದ್ಧಿಯಿಂದ ಧನ್ಯತೆ ಪಡೆಯಲು ಸಾಧ್ಯ



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಭಾವೈಕ್ಯತಾ ಶಿಬಿರದಲ್ಲಿ ಧರ್ಮಕರ್ತ ಭೀಮೇಶ್ವರ ಜೋಷಿ ಮಾತನಾಡಿದರು.

ಶೃಂಗೇರಿ: ಹರಿಯುವ ನೀರು ವಿಶಾಲ ಸಮುದ್ರ ಸೇರುವ ಮೂಲಕ ವಿಸ್ತಾರಗೊಳ್ಳುವಂತೆ ನಮ್ಮ ಮನಸ್ಸು, ಬುದ್ಧಿ ಕೂಡ ವಿಸ್ತಾರವಾಗುತ್ತಿರಬೇಕು ಎಂದು ಹೊರನಾಡು ಅನ್ನಪೂರ್ಣೇಶ್ವರಿ ದೇವಸ್ಥಾನದ ಧರ್ಮಕರ್ತ ಭೀಮೇಶ್ವರ ಜೋಷಿ ಹೇಳಿದರು. ಇಲ್ಲಿನ ಜೆಸಿಬಿಎಂ ಕಾಲೇಜಿನಲ್ಲಿ ಕರ್ನಾಟಕ ಸರ್ಕಾರ, ರಾಷ್ಟ್ರೀಯ ಸೇವಾ ಯೋಜನಾ ಕೋಶ, ಕುವೆಂಪು ವಿಶ್ವವಿದ್ಯಾಲಯದ ಆಶ್ರಯದಲ್ಲಿ ನಡೆಯುತ್ತಿರುವ ಏಳು ದಿನಗಳ ರಾಷ್ಟ್ರೀಯ ಭಾವೈಕ್ಯತಾ ಶಿಬಿರದಲ್ಲಿ ಪಾಲ್ಗೊಂಡು ಮಾತನಾಡಿದರು. ಜೀವನದಲ್ಲಿ ಏನನ್ನಾದರೂ ಸಾಧಿಸಬೇಕು. ಗುರಿ ತಲುಪುವ ದಾರಿಯಲ್ಲಿ ಸಾಗುವ ಬದುಕು ಸಿದರ್ಶನವಾಗುವಂತಿರಬೇಕೇ ಹೊರತು ಕೇವಲ ಪ್ರವರ್ಕನದ್ದಾಗಬಾರದು.

ಮೊದಲು ನಮ್ಮನ್ನು ನಾವು ಪ್ರೀತಿಸುವುದನ್ನು ಕಲಿಯಬೇಕು. ಆತ್ಮಾಭಿಮಾನ ಬೆಳೆಸಿಕೊಳ್ಳಬೇಕು. ನಮ್ಮ ಅಂತರಂಗದಲ್ಲಿರುವ ಕೊಳೆಯನ್ನು ಕಳಚಿ ಶುದ್ಧಿಯಾದಾಗ ಧನ್ಯತೆ ಸಿಗುತ್ತದೆ. ಮಾಡುವ ಕೆಲಸ ಉತ್ತಮವಾಗಿದ್ದಾರೆ. ಉತ್ಕೃಷ್ಟವಾಗಿದ್ದರೆ ಜನರಿಗೂ ಇಷ್ಟವಾಗುತ್ತದೆ. ಸಮಾಜಕ್ಕೆ ಒಳಿತಾಗಿ ಜನರು ಮೆಚ್ಚಿದರೆ ಅದೇ ನಿಜವಾದ ಸಾರ್ಥಕತೆ ಎಂದು ಹೇಳಿದರು.

Scanned by CamScanner

ವಿಜಯ ವಾಣಿ · 5-3-16

ಪ್ಲಾಸ್ಟಿಕ್ ಬಳಕೆ ತ್ಯಜಿಸಿದರೆ ಪರಿಸರ ನೈರ್ಮಲ್ಯ

ಉಪನ್ಯಾಸಕ ಕುಮಾರಸ್ವಾಮಿ ಅಭಿಮತ | ಜೆಸಿಬಿಎಂ ಕಾಲೇಜಿನಿಂದ ಸ್ವಚ್ಛ ಭಾರತ್ ನಡಿಗೆ

ಕೃಂಗೇರಿ: ಪ್ರಸ್ತುತ ವಾತಾವರಣದಲ್ಲಿ ಉಷ್ಣಾಂಶದ ಏರಿಕೆಗೆ ಅತಿಯಾದ ಪ್ಲಾಸ್ಟಿಕ್ ಬಳಕೆಯೂ ಒಂದು ಕಾರಣ ವಿದ್ದು ಜೆಸಿಬಿವಿರ ಕಾಲೇಜಿನ ಉಪನ್ಯಾಸಕ ಕುಮಾರಸ್ವಾಮಿ ಅಭಿಪ್ರಾಯ ಪಟ್ಟರು.

ಜೆಸಿಬಿಎಂ ಕಾಲೇಜಿನಲ್ಲಿ ಶುಕ್ರವಾರ ಎನ್.ಎಸ್.ಎಸ್ ಹಾಗೂ ಪರಿಸರದಿಂದ ಆಯೋಜಿಸಿದ್ದ 'ಸ್ವಚ್ಛ ಭಾರತ್ ನಡಿಗೆ' ಸ್ವಚ್ಛತಾ ಕಾರ್ಯಕ್ರಮದಲ್ಲಿ ಮಾತನಾಡಿದರು.

ಪ್ಲಾಸ್ಟಿಕ್ ಬಳಸದಿರಲು ಸಾಧ್ಯವೇ ಇಲ್ಲ. ಆದರೆ ಮಿತವಾಗಿ ಬಳಸಬೇಕು. ಇದರಿಂದ ಪರಿಸರ ಹಾನಿಯನ್ನು ತಪ್ಪಿಸಬಹುದು. ಅಲ್ಲದೆ ಪರಿಸರ ಸ್ವಚ್ಛವಾಗಿಟ್ಟುಕೊಂಡು ಸುತ್ತಮುತ್ತ ಮರಗಿಡಗಳನ್ನು ಬೆಳೆಸಲು ಹೆಚ್ಚಿನ ಗಮನ ನೀಡಬೇಕು. ಕುದ್ರ ಗಾಳಿ, ಬೆಳಕು ಇದ್ದಾಗ ಮಾತ್ರ ಆರೋಗ್ಯಕರ ವಾತಾವರಣ ಕಾಣಬಹುದು. ಈ ನಿಟ್ಟಿನಲ್ಲಿ ಸ್ವಚ್ಛ ಭಾರತ್ ನಡಿಗೆಗೆ ಯುವಜನರ ಸಹಕಾರ ಅಗತ್ಯ ಎಂದರು.



ಶೃಂಗೇರಿಯಲ್ಲಿ ಜೆಸಿಬಿಎಂ ಕಾಲೇಜಿನಿಂದ ಡಾ. ವಿ.ಆರ್.ಗೌರಿಶಂಕರ್ ಸಭಾಂಗಣದವರೆಗೆ ಸ್ವಚ್ಛ ಭಾರತ್ ನಡಿಗೆ ನಡೆಸಲಾಯಿತು.

> ಶೃಂಗೇರಿ ಒಂದು ಪ್ರವಾಸಿ ಕೇಂದ್ರ. ಇಲ್ಲಿ ಪ್ರತಿದಿನ ವಿಶೇಷವಾಗಿ ಗಾಂಧಿ ಮೈದಾನದ ಸ್ವಚ್ಛತೆಗೆ ಪ್ರಾಮುಖ್ಯತೆ ನೀಡುತ್ತೇವೆ. ಪ್ಲಾಸ್ಟಿಕ್ ಬಳಕೆ ಹಾಗೂ ಪರಿಸರದ ಸ್ವಚ್ಛತೆ ಕುರಿತು ಜಾಗೃತಿಗಾಗಿ ಪ್ರವಾಸಿಗರು ಮತ್ತು ನಾಗರಿಕರ ಬೆಂಬಲ ಬೇಕು. ಆಗ ಮಾತ್ರ ಗಾಂಧೀಜಿ ಕಂಡ ಸ್ವಚ್ಛ ಭಾರತದ ಕನಸು ನನಸಾಗಲು ಸಾಧ್ಯ.
>
> - ಡಾ. ಲಕ್ಷ್ಮಿ ಪ್ರಸಾದ್ ಪಟ್ಟಣ ಪಂಚಾಯಿತಿ

ಪಟ್ಟಣ ಪಂಚಾಯಿತಿ ಉಪಾಧ್ಯಕ್ಷೆ ಡಾ. ಲಕ್ಷ್ಮಿ ಪ್ರಸಾದ್ ಮಾತನಾಡಿ, ವಿದ್ಯಾರ್ಥಿಗಳು ಪಠ್ಯ ಚಟುವಟಿಕೆಗಳ ಜತೆಗೆ ಎನ್.ಎಸ್.ಎಸ್‌ಗೆ ಸೇರಿ ಸಮುದಾಯಕ್ಕೆ ಸೇವೆ ನೀಡುವತ್ತ ಹೆಚ್ಚಿನ ಗಮನ ಹರಿಸಬೇಕು. ಸೇವೆಯಲ್ಲಿ ಪರಿಸರ ಸ್ವಚ್ಛತೆಯೂ ಒಂದು ಭಾಗ. ಪಾಶ್ಚಾತ್ಯರ ಅನುಕರಣೆ ಮಾಡಲಿನ್ನವಾಗದಂತೆ ಅದನ್ನು ತಡೆಗಟ್ಟುವ ಶಕ್ತಿ ವಿದ್ಯಾರ್ಥಿ ಸಮೂಹಕ್ಕಿದೆ ಎಂದು ಹೇಳಿದರು.

ಕಾಲೇಜಿನ ಪ್ರಾಚಾರ್ಯ ಡಾ. ಎಚ್. ಸಿ.ವೀರಪ್ಪ ಗೌಡ ಅಧ್ಯಕ್ಷತೆ ವಹಿಸಿದ್ದರು. ರೋಟರಿ ಮಾಜಿ ಅಧ್ಯಕ್ಷ ಎಚ್.ಎಸ್. ನಿಸ್ಸಪ್ಪ ಪಪಂ ಸದಸ್ಯರಾದ ನಾಗೇಶ ಕಾಮತ್, ಟಿ.ಕೆ.ಪರಾನಂದ, ಎನ್.ಎಸ್.ಎಸ್ ಅಧಿಕಾರಿಗಳಾದ ಪ್ರಶಾಂತ್ ಮತ್ತು ಲಕ್ಷ್ಮೀನಾರಾಯಣ ಇದ್ದರು. ಕಾಲೇಜಿನಿಂದ ಪಟ್ಟಣದ ಡಾ. ವಿ.ಆರ್.ಗೌರಿಶಂಕರ ಸಭಾಂಗಣದವರೆಗೆ ಜಾಗೃತಿ ಜಾಥಾ ನಡೆಯಿತು.

ವಿ.ವಾ. 5-3-16

Scanned by CamScanner

ವಿಜಯ ಕರ್ನಾಟಕ: 3.3.16

ರಾಜ್ಯ ಮಟ್ಟದ ಅತ್ಯುತ್ತಮ ಸೇವಾಯೋಜನಾ ಘಟಕ ಪ್ರಶಸ್ತಿ

■ **ವಿಕ ಸುದ್ದಿಲೋಕ,** ಶೃಂಗೇರಿ

ಶೃಂಗೇರಿ ಶ್ರೀ ಜೆಸಿಬಿಎಂ.ಕಾಲೇಜಿಗೆ 2014-15 ನೇ ಸಾಲಿನ ರಾಜ್ಯಮಟ್ಟದ ಅತ್ಯುತ್ತಮ ರಾಷ್ಟ್ರೀಯ ಸೇವಾ ಯೋಜನಾ ಘಟಕ ಪ್ರಶಸ್ತಿ ಲಭಿಸಿದೆ.

ರಾಜ್ಯಮಟ್ಟದ ಅತ್ಯುತ್ತಮ ಯೋಜನಾಧಿಕಾರಿ ಪ್ರಶಸ್ತಿಯು ಶ್ರೀ ಎ.ಜಿ.ಪ್ರಶಾಂತ್‌ಗೆ ದೊರಕಿದೆ. ಮಾ.5 ರಂದು ರಾಜಭವನದಲ್ಲಿ ನಡೆಯುವ ಸಮಾರಂಭದಲ್ಲಿ ರಾಜ್ಯಪಾಲ ವಜೂಭಾಯಿ ವಾಲಾ ಅವರು ಪ್ರಶಸ್ತಿ ವಿತರಿಸಲಿದ್ದಾರೆ.



ಎ.ಜಿ.ಪ್ರಶಾಂತ್



ಎಚ್.ಸಿ.ವೀರಪ್ಪಗೌಡ

ಕಾಲೇಜಿನ ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಈ ಪ್ರಶಸ್ತಿಗಳು ಬಂದಿರುವುದು ಹೆಮ್ಮೆಯ ಸಂಗತಿಯಾಗಿದ್ದು, ಪ್ರಾಚಾರ್ಯ ಡಾ ಎಚ್.ಸಿ.ವೀರಪ್ಪಗೌಡ ಹಾಗೂ ಶ್ರೀ ಎ.ಜಿ.ಪ್ರಶಾಂತ್ ಅವರನ್ನು ಕಾಲೇಜಿನ ಆಡಳಿತ ಮಂಡಳಿ, ಬೋಧಕ, ಬೋಧಕೇತರ ಸಿಬ್ಬಂದಿವರ್ಗದ ವಿದ್ಯಾರ್ಥಿಗಳು ಅಭಿನಂದಿಸಿದ್ದಾರೆ.

Scanned by CamScanner

ಪ್ರಜಾವಾಣಿ ಬುಧವಾರ • ಮಾರ್ಚ್ 2, 2016

ಜೆಸಿಬಿಎಂ ಕಾಲೇಜಿಗೆ ಅತ್ಯುತ್ತಮ ಘಟಕ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಶೃಂಗೇರಿ: ಪಟ್ಟಣದ ಜೆಸಿಬಿಎಂ ಕಾಲೇಜಿಗೆ ರಾಜ್ಯಮಟ್ಟದ ಅತ್ಯುತ್ತಮ ರಾಷ್ಟ್ರೀಯ ಸೇವಾ ಯೋಜನಾ ಘಟಕ ಪ್ರಶಸ್ತಿ ಹಾಗೂ ರಾಜ್ಯಮಟ್ಟದ ಅತ್ಯುತ್ತಮ ಯೋಜನಾಧಿಕಾರಿ ಪ್ರಶಸ್ತಿಯು ಕಾಲೇಜಿನ ಎ.ಜಿ.ಪ್ರಶಾಂತ್‌ಗೆ ದೊರಕಿದೆ. ರಾಜಭವನದಲ್ಲಿ ಇದೇ 5ರಂದು ನಡೆಯುವ ಸಮಾರಂಭದಲ್ಲಿ ರಾಜ್ಯಪಾಲ ವಜುಭಾಯಿ ವಾಲಾ ಪ್ರಶಸ್ತಿಗಳನ್ನು ಪ್ರದಾನ ಮಾಡಲಿದ್ದಾರೆ.

ಕಾಲೇಜಿನ ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಈ ಪ್ರಶಸ್ತಿಗಳು



ಎ.ಜಿ.ಪ್ರಶಾಂತ್



ವೀರಪ್ಪಗೌಡ

ಬಂದಿರುವುದು ಹೆಮ್ಮೆಯ ಸಂಗತಿಯಾಗಿದ್ದು ಪ್ರಾಚಾರ್ಯ ಡಾ.ಎಚ್.ಸಿ.ವೀರಪ್ಪ ಗೌಡ ಹಾಗೂ ಎ.ಜಿ.ಪ್ರಶಾಂತ್ ಅವರನ್ನು ಕಾಲೇಜಿನ ಆಡಳಿತ ಮಂಡಳಿ, ಬೋಧಕ, ಬೋಧಕೇತರ ಸಿಬ್ಬಂದಿ ವರ್ಗ ಅಭಿನಂದಿಸಿದ್ದಾರೆ.

ಈ ಪ್ರಶಸ್ತಿಗೆ ಸರ್ವರ ಸಹಕಾರ ಕಾರಣ,ಅದರಲ್ಲೂ ಸ್ವಯಂಸೇವಕರು ಕಳೆದ ಮೂರು ವರ್ಷಗಳಲ್ಲಿ ಮಾಡಿರುವ ಸಾಧನೆ ಅವಿಸ್ಮರಣೀಯ ಎಂದು ಪ್ರಶಸ್ತಿ ವಿಜೇತರು ಸ್ಮರಿಸಿಕೊಂಡಿದ್ದಾರೆ. ಈ ಹಿಂದೆ ಎರಡು ಬಾರಿ ಈ ಪ್ರಶಸ್ತಿಗಳು ಕಾಲೇಜಿಗೆ ಲಭಿಸಿದ್ದು, ಡಾ ಜಿ.ಕೆ.ಭಟ್ ಹಾಗೂ ಡಾ. ಎಚ್.ಸಿ.ವೀರಪ್ಪಗೌಡರು ಅತ್ಯುತ್ತಮ ಯೋಜನಾಧಿಕಾರಿ ಪ್ರಶಸ್ತಿ ಪಡೆದಿದ್ದರು. ರಾಜ್ಯಮಟ್ಟದ ಅತ್ಯುತ್ತಮ ಸ್ವಯಂಸೇವಕ, ವಿಶ್ವವಿದ್ಯಾನಿಲಯದ ಹಾಗೂ ಜಿಲ್ಲಾ ಮಟ್ಟದ ಹಲವು ಪ್ರಶಸ್ತಿಗಳು ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ಘಟಕಕ್ಕೆ ದೊರಕಿರುವುದು ಗಮನಾರ್ಹ.

Scanned by CamScanner

ಮಂಗಳವಾರ, 1, ಮಾರ್ಚ್, 2016, ದಾವಣಗೆರೆ

ಸಂಯುಕ್ತ ಕರ್ನಾಟಕ www.sk

ಸೇವಾ ಯೋಜನಾ ಘಟಕ ಪ್ರಶಸ್ತಿ

ಶೃಂಗೇರಿ

2014-15ನೇ ಸಾಲಿನ ರಾಜ್ಯಮಟ್ಟದ ಅತ್ಯುತ್ತಮ ರಾಷ್ಟ್ರೀಯ ಸೇವಾ ಯೋಜನಾ ಘಟಕ ಪ್ರಶಸ್ತಿಯು ಶೃಂಗೇರಿಯ ಶ್ರೀ ಜೆ.ಸಿ.ಬಿ.ಎಂ. ಕಾಲೇಜಿಗೆ ಹಾಗೂ ರಾಜ್ಯಮಟ್ಟದ ಅತ್ಯುತ್ತಮ ಯೋಜನಾಧಿಕಾರಿ ಪ್ರಶಸ್ತಿಯು ಕಾಲೇಜಿನ ಎನ್.ಎಸ್.ಎಸ್. ಅಧಿಕಾರಿ ಎ.ಜಿ.ಪ್ರಶಾಂತ್ ಅವರಿಗೆ ದೊರಕಿದ್ದು, ಮಾ.5ರಂದು ರಾಜಭವನದಲ್ಲಿ ನಡೆಯುವ ಸಮಾರಂಭದಲ್ಲಿ ರಾಜ್ಯಪಾಲ ವಜೂಭಾಯಿ ವಾಲಾ ಅವರು ಈ ಪ್ರಶಸ್ತಿಗಳನ್ನು ವಿತರಿಸಲಿದ್ದಾರೆ.

ಈ ಹಿಂದೆ ಎರಡು ಬಾರಿ ಈ ಪ್ರಶಸ್ತಿಯು ಕಾಲೇಜಿಗೆ ಲಭಿಸಿದ್ದು, ಕಾಲೇಜಿನ ಸುವರ್ಣ ಮಹೋತ್ಸವ ಈ ಸಂದರ್ಭದಲ್ಲಿ ಮತ್ತೊಮ್ಮೆ ಬಂದಿರುವುದು ಹೆಮ್ಮೆಯ ಸಂಗತಿಯಾಗಿದೆ. ಪ್ರಶಸ್ತಿಗಾಗಿ ಪ್ರಾಚಾರ್ಯ ಹಾಗೂ ಎ.ಜಿ.ಪ್ರಶಾಂತ್ ಅವರನ್ನು ಕಾಲೇಜಿನ ಆಡಳಿತ ಮಂಡಳಿ, ಬೋಧಕ, ಬೋಧಕೇತರ ಸಿಬ್ಬಂದಿ ವರ್ಗದವರು ಅಭಿನಂದಿಸಿದ್ದಾರೆ.

ಕಾಲೇಜಿನಲ್ಲಿ ಉದ್ಘಾಟನೆಗೊಂಡ ರಾಷ್ಟ್ರೀಯ ಭಾವೈಕ್ಯತಾ ಶಿಬಿರದಲ್ಲಿ ಎ.ಜಿ. ಪ್ರಶಾಂತ್ ದಂಪತಿ ಸನ್ಮಾನಿಸಿ, ಅಭಿನಂದಿಸಲಾಯಿತು.

Scanned by CamScanner

ಕನ್ನಡಪ್ರಭ
ಮಂಗಳವಾರ 1.3.2016

ಜೆಸಿಬಿಎಂ ಕಾಲೇಜಿಗೆ ಎನ್ನೆಸ್ಸೆಸ್ ಪ್ರಶಸ್ತಿ

ಶೃಂಗೇರಿ: ಪಟ್ಟಣದ ಜೆಸಿಬಿಎ ಕಾಲೇಜಿಗೆ 2014-15ನೇ ಸಾಲಿನ ರಾಜ್ಯ ಮಟ್ಟದ ಅತ್ಯುತ್ತಮ ರಾಷ್ಟ್ರೀಯ ಸೇವಾ ಯೋಜನಾ ಘಟಕ ಪ್ರಶಸ್ತಿ ದೊರೆತಿದೆ. ಜೊತೆಗೆ ರಾಜ್ಯಮಟ್ಟದ ಅತ್ಯುತ್ತಮ ಯೋಜನಾಧಿಕಾರಿ ಪ್ರಶಸ್ತಿ ಎ.ಜಿ. ಪ್ರಶಾಂತ್ ಅವರು ಪಾತ್ರ ರಾಗಿದ್ದಾರೆ. ಮಾ.5 ಶನಿವಾರ ಬೆಂಗಳೂರಿನ ರಾಜಭವನದಲ್ಲಿ ನಡೆಯುವ ಸಮಾರಂಭದಲ್ಲಿ ರಾಜ್ಯಪಾಲ ವಜೂಭಾಯಿ ವಾಲಾ ಈ ಪ್ರಶಸ್ತಿಗಳನ್ನು ವಿತರಿಸಿ ಗೌರವಿಸಲಿದ್ದಾರೆ. ಅಲ್ಲದೇ ಕಾಲೇಜಿನ ಸುವರ್ಣ ಮಹೋತ್ಸವ ಸಂದರ್ಭದಲ್ಲಿ ಈ ಪ್ರಶಸ್ತಿಗಳು ಲಭಿಸಿರುವುದು ಹೆಮ್ಮೆಯ ಸಂಗತಿಯಾಗಿದೆ. ಪ್ರಶಸ್ತಿ ವಿಜೇತರನ್ನು ಪ್ರಾಂಶುಪಾಲರು, ಕಾಲೇಜಿನ ಆಡಳಿತ ಮಂಡಳಿ, ಬೋಧಕ, ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿ ವೃಂದ ಅಭಿನಂದಿಸಿದ್ದಾರೆ.

Scanned by CamScanner

ವಿಜಯ ಕರ್ನಾಟಕ 29-2-16

ಉದ್ಯೋಗ ಆಯ್ಕೆ ಪ್ರಕ್ರಿಯೆ



ಶೃಂಗೇರಿಯ ಜೆಸಿಬಿಎಂ ಕಾಲೇಜಿನಲ್ಲಿ ಇನ್ಫೋಸಿಸ್ ಉದ್ಯೋಗ ಆಯ್ಕೆ ಮುಖ್ಯಸ್ಥ ಷೇಕ್ ಅಹಮದ್ ಸಂಸ್ಥೆ ಉದ್ಯೋಗ ಆಯ್ಕೆ ಪ್ರಕ್ರಿಯೆ ನಡೆಸಿಕೊಟ್ಟರು.

■ **ವಿಕ ಸುದ್ದಿಲೋಕ,** ಶೃಂಗೇರಿ

ಶ್ರೀ ಜೆಸಿಬಿಎಂ ಕಾಲೇಜಿನ ಉದ್ಯೋಗ ಮಾರ್ಗದರ್ಶನ ಕೇಂದ್ರ ಹಾಗೂ ಆಂತರಿಕ ಗುಣಮಟ್ಟ ಭರವಸೆ ಕೋಶದ ಆಶ್ರಯದಲ್ಲಿ ಇನ್ಫೋಸಿಸ್ ಸಂಸ್ಥೆಗಾಗಿ ಉದ್ಯೋಗ ಆಯ್ಕೆ ಪ್ರಕ್ರಿಯೆ ನಡೆಯಿತು.

ಕಾಲೇಜಿನ ಪ್ರಾಂಶುಪಾಲ ಡಾ. ಎಚ್.ಸಿ. ವೀರಪ್ಪಗೌಡ ಕಾರ್ಯಕ್ರಮ ಉದ್ಘಾಟಿಸಿದರು. ಇನ್ಫೋಸಿಸ್ ಸಂಸ್ಥೆಯ ಉದ್ಯೋಗ ಆಯ್ಕೆ ತಂಡದ ಮುಖ್ಯಸ್ಥ ಷೇಕ್ ಅಹಮದ್ ಹಾಗೂ ತಂಡದ ಇತರ ಸದಸ್ಯರು ಆಯ್ಕೆ ಪ್ರಕ್ರಿಯೆ ನಡೆಸಿಕೊಟ್ಟರು.

ಈ ಸಂದರ್ಭ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಡಾ.ಸಿ.ವಿ.ಗಿರಿಧರಶಾಸ್ತ್ರಿ ವಿದ್ಯಾರ್ಥಿ ಕ್ಷೇಮಪಾಲನಾಧಿಕಾರಿ ಹಾಗೂ ಐಕ್ಯೂಎಸಿ ಸಂಯೋಜಕ ಪ್ರೊ. ದತ್ತಾತ್ರೇಯ ಮಾರ್ಪಳ್ಳಿ ಹಾಜರಿದ್ದರು.

ಆಯ್ಕೆ ಪ್ರಕ್ರಿಯೆಯಲ್ಲಿ ಶಿವಮೊಗ್ಗ, ಚಿಕ್ಕಮಗಳೂರು, ದಾವಣಗೆರೆ ಜಿಲ್ಲೆಯ ವಿವಿಧ ಕಾಲೇಜುಗಳ ಸುಮಾರು 250 ವಿದ್ಯಾರ್ಥಿಗಳು ಪಾಲ್ಗೊಂಡಿದ್ದು 35 ವಿದ್ಯಾರ್ಥಿಗಳು ಆಯ್ಕೆಯಾದರು. ಇದರಲ್ಲಿ ಜೆಸಿಬಿಎಂ ಕಾಲೇಜಿನ 26 ವಿದ್ಯಾರ್ಥಿಗಳು ಸೇರಿದ್ದರು.

ಈ ಸಂದರ್ಭ ಉದ್ಯೋಗ ಮಾಹಿತಿ ಕೇಂದ್ರದ ಅಧಿಕಾರಿಗಳಾದ ಎನ್. ಎಚ್.ಲಕ್ಷ್ಮೀನಾರಾಯಣ, ಎಸ್. ಎಸ್.ಅಶೋಕ್, ಕೆ.ಎಸ್.ಪ್ರದೀಪ್, ಎ.ಜಿ.ಪ್ರಶಾಂತ್, ಕೆ.ಜಿ.ಉಮೇಶ್ ಮತ್ತು ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಉಪನ್ಯಾಸಕ ಭಾರದ್ವಾಜ್ ಸಹಕರಿಸಿದರು.

ಉದ್ಯೋಗ ಮಾರ್ಗದರ್ಶನ ಕೇಂದ್ರದ ಸಂಯೋಜಕ ದೇವದಾಸ್ ಸ್ವಾಗತಿಸಿದರು.

Scanned by CamScanner

3A | ಪ್ರಜಾವಾಣಿ
ಭಾನುವಾರ, 28 ಫೆಬ್ರುವರಿ 2016

ಇಂದು ರಾಷ್ಟ್ರೀಯ ಭಾವೈಕ್ಯ ಶಿಬಿರ

ಶೃಂಗೇರಿ: ಇಲ್ಲಿನ ಜೆಸಿಬಿಎಂ ಕಾಲೇಜಿನಲ್ಲಿ ಎನ್.ಎಸ್.ಎಸ್. ಕೋಶ, ಯುವ ಜನ ಸೇವೆ ಮತ್ತು ಕ್ರೀಡಾ ಇಲಾಖೆ, ಕುವೆಂಪು ವಿಶ್ವವಿದ್ಯಾಲಯದ ಸಂಯುಕ್ತಾಶ್ರಯದಲ್ಲಿ ಭಾನುವಾರದಿಂದ ಮಾರ್ಚ್ 5ರ ವರೆಗೆ ರಾಷ್ಟ್ರೀಯ ಭಾವೈಕ್ಯ ಶಿಬಿರ ನಡೆಯಲಿದೆ. ವಿಜ್ಞಾನ ಮತ್ತು ವೈಜ್ಞಾನಿಕ ಮನೋಧರ್ಮಕ್ಕಾಗಿ ಯುವ ಜನತೆ ಎಂಬ ಧ್ಯೇಯದೊಂದಿಗೆ ಶಿಬಿರವನ್ನು ರೂಪಿಸಲಾಗಿದ್ದು, 28ರಂದು ಸಂಜೆ 4 ಗಂಟೆಗೆ ಶಿಬಿರವನ್ನು ಯುವ ಜನರ ಸಬಲೀಕರಣ ಮತ್ತು ಕ್ರೀಡಾ ಸಚಿವ ಕೆ. ಅಭಯಚಂದ್ರ ಜೈನ್ ಅವರು ಉದ್ಘಾಟಿಸಲಿದ್ದಾರೆ.

29 ರಂದು ಸ್ವಾಮಿ ವಿವೇಕಾನಂದರ ದೃಷ್ಟಿಯಲ್ಲಿ 'ರಾಷ್ಟ್ರೀಯ ಭಾವೈಕ್ಯತೆ' ವಿಷಯ ಕುರಿತ ಕಾರ್ಯಾಗಾರವಿದ್ದು ಸಂಪನ್ಮೂಲ ವ್ಯಕ್ತಿಗಳಾಗಿ ಬೆಂಗಳೂರಿನ ರಾಮಕೃಷ್ಣ ಮಠದ ಸ್ವಾಮಿ ಮಂಗಳ ನಾಥಾನಂದಜೀ ಮಹಾರಾಜ್ `ಶ್ರೀ ಶಂಕರ ಮತ್ತು ರಾಷ್ಟ್ರೀಯ ಭಾವೈಕ್ಯತೆ' ಎಂಬ ವಿಚಾರದ ಕುರಿತು ಡಾ.ಸಿ.ವಿ. ಗಿರಿಧರ ಶಾಸ್ತ್ರೀಯವರ ಉಪನ್ಯಾಸ ನೀಡಲಿದ್ದಾರೆ.ಮಾರ್ಚ್ 1 ರಂದು ಯುವ ಜನರ ಸಹಭಾಗಿತ್ವದಲ್ಲಿ 'ಭಾರತದಲ್ಲಿ ತಯಾರಿಸಿ' ಎಂಬ ವಿಚಾರ ಸಂಕಿರಣವಿದ್ದು ಸಂಶೋಧಕರಾದ ನಿವೇದನ್ ವಿಂಪೆ ಪಾಲ್ಗೊಳ್ಳಲಿದ್ದಾರೆ. ಅದೇ ದಿನ ವಿಜ್ಞಾನ ಮತ್ತು ವೈಜ್ಞಾನಿಕ ಮನೋಧರ್ಮಕ್ಕಾಗಿ ಯುವಜನತೆ ಎಂಬ ಉಪನ್ಯಾಸ ಏರ್ಪಡಿಸಿದ್ದು ಪ್ರೊ. ಎಂ.ಆರ್. ನಾಗರಾಜು ನಡೆಸಿಕೊಡಲಿದ್ದಾರೆ.

ಮಾರ್ಚ್ 2 ರಂದು ಚಟುವಟಿಕೆಗಳಲ್ಲಿ ನಾಯಕತ್ವ ವಿಷಯದ ಕುರಿತಾಗಿ ಡಾ.ಎಚ್.ಸಿ.ವೀರಪ್ಪಗೌಡ ಉಪನ್ಯಾಸ ನೀಡಲಿದ್ದು, ನಂತರ ಶಿಬಿರಾರ್ಥಿಗಳು ಶಾರದಾ ಮಠಕ್ಕೆ ಭೇಟಿ ನೀಡಲಿದ್ದಾರೆ. ಮಾರ್ಚ್ 3 ರಂದು ಪಶ್ಚಿಮಘಟ್ಟಗಳ ಪರಿಸರ ಪ್ರವಾಸ ಹಮ್ಮಿಕೊಂಡಿದ್ದು ಹೊರನಾಡಿನ ಧರ್ಮಕರ್ತ ಡಾ. ಭೀಮೇಶ್ವರ ಜೋಷಿಯವರೊಡನೆ ಸಂವಾದ ಕಾರ್ಯಕ್ರಮ ನಡೆಯಲಿದೆ.

ಮಾರ್ಚ್ 5ರಂದು ನಡೆವ ಸಮಾರೋಪ ಸಮಾರಂಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಜಿ. ಪರಮೇಶ್ವರ್ ಪಾಲ್ಗೊಳ್ಳಲಿದ್ದಾರೆ. ಈ ಶಿಬಿರದಲ್ಲಿ 9 ರಾಜ್ಯದ ಮತ್ತು ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳ ಸುಮಾರು 150ಕ್ಕೂ ಹೆಚ್ಚು ಸ್ವಯಂಸೇವಕರು ಭಾಗವಹಿಸಲಿದ್ದಾರೆ ಎಂದು ಕಾಲೇಜು ಪ್ರಕಟಣೆ ತಿಳಿಸಿದೆ.

Scanned by CamScanner

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » SHIVAMOGGA
4
ಭಾನುವಾರ
28 ಫೆಬ್ರವರಿ 2016
28 FEBRUARY 2016

ಭಾವೈಕ್ಯತಾ ಶಿಬಿರ ಇಂದು

ಶೃಂಗೇರಿ: ಇಲ್ಲಿನ ಜೆಸಿಬಿಎಂ ಕಾಲೇಜಿನಲ್ಲಿ ಫೆ. 28 ರಿಂದ ಮಾರ್ಚ್ 5ರ ವರೆಗೆ ರಾಷ್ಟ್ರೀಯ ಭಾವೈಕ್ಯತಾ ಶಿಬಿರ ಆಯೋಜಿಸಲಾಗಿದೆ.ಫೆ. 28 ರಂದು ಮಧ್ಯಾಹ್ನ 4 ಗಂಟೆಗೆ ಕ್ರೀಡಾ ಸಚಿವ ಕೆ. ಅಭಯಚಂದ್ರ ಜೈನ್ ಶಿಬಿರ ಉದ್ಘಾಟಿಸಲಿದ್ದಾರೆ. ಫೆ.29 ರಂದು ಸ್ವಾಮಿ ವಿವೇಕಾನಂದರ ದೃಷ್ಟಿಯಲ್ಲಿ ರಾಷ್ಟ್ರೀಯ ಭಾವೈಕ್ಯತೆ ಕುರಿತು ಬೆಂಗಳೂರಿನ ಶ್ರೀ ರಾಮಕೃಷ್ಣ ಮಠದ ಸ್ವಾಮಿ ಮಂಗಳನಾಥಾನಂದಜೀ ಮಹಾರಾಜ್ ಹಾಗೂ ಶ್ರೀ ಶಂಕರ ಮತ್ತು ರಾಷ್ಟ್ರೀಯ ಭಾವೈಕ್ಯತೆ ಎಂಬ ವಿಚಾರ ಕುರಿತು ಡಾ. ಸಿ.ವಿ.ಗಿರಿಧರ ಶಾಸ್ತ್ರಿ ಉಪನ್ಯಾಸ ನೀಡಲಿದ್ದಾರೆ.ಮಾ. 1ರಂದು ಯುವ ಜನರ ಸಹಭಾಗಿತ್ವದಲ್ಲಿ ಭಾರತದಲ್ಲಿ ತಯಾರಿಕೆ ಎಂಬ ವಿಚಾರ ಸಂಕಿರಣದಲ್ಲಿ ಅಡಕೆ ಟೀ ಸಂಶೋಧಕ ನಿವೇದನ್ ನಿಂಪೆ ಮತ್ತು ವಿಜ್ಞಾನ ಮತ್ತು ವೈಜ್ಞಾನಿಕ ಮನೋಧರ್ಮಕ್ಕಾಗಿ ಯುವ ಜನತೆ ಎಂಬ ವಿಷಯದ ಕುರಿತು ಪ್ರೊ. ಎಂ.ಆರ್. ನಾಗರಾಜು ಉಪನ್ಯಾಸ ನೀಡಲಿದ್ದಾರೆ.ಮಾ. 2ರಂದು ಚಟುವಟಿಕೆಗಳಲ್ಲಿ ನಾಯಕತ್ವ ವಿಷಯ ಕುರಿತು ಡಾ.ಎಚ್.ಸಿ.ವೀರಪ್ಪಗೌಡ ಉಪನ್ಯಾಸ ನೀಡಲಿದ್ದಾರೆ. ಬಳಿಕ ಶಿಬಿರಾರ್ಥಿಗಳಿಗೆ ಶೃಂಗೇರಿ ಶ್ರೀ ಮಠದ ದರ್ಶನ ಏರ್ಪಡಿಸಲಾಗಿದೆ. ಮಾ. 3ರಂದು ಪಶ್ಚಿಮಘಟ್ಟಗಳ ಪರಿಸರ ಪ್ರವಾಸ ಏರ್ಪಡಿಸಲಾಗಿದೆ. ಈ ಸಂದರ್ಭದಲ್ಲಿ ಹೊರನಾಡಿನ ಧರ್ಮಕರ್ತ ಡಾ. ಭೀಮೇಶ್ವರ ಜೋಷಿ ಅವರೊಂದಿಗೆ ಸಂವಾದ ಕಾರ್ಯಕ್ರಮ ಏರ್ಪಡಿಸಲಾಗಿದೆ. ಮಾ. 4ರಂದು ರಕ್ತದಾನ ಶಿಬಿರ ಆಯೋಜಿಸಲಾಗಿದೆ. ಮಾ. 5ರಂದು ನಡೆಯುವ ಸಮಾರೋಪ ಸಮಾರಂಭದಲ್ಲಿ ಗೃಹಮಂತ್ರಿ ಡಾ. ಜಿ.ಪರಮೇಶ್ವರ್ ಸಮಾರೋಪ ಭಾಷಣ ಮಾಡಲಿದ್ದಾರೆ. ಈ ಶಿಬಿರದಲ್ಲಿ 9 ರಾಜ್ಯದ ಮತ್ತು ಕರ್ನಾಟಕದ ವಿವಿಧ ವಿಶ್ವವಿದ್ಯಾನಿಲಯಗಳ 150ಕ್ಕೂ ಹೆಚ್ಚು ಸ್ವಯಂಸೇವಕರು ಭಾಗವಹಿಸಲಿದ್ದಾರೆ.

Scanned by CamScanner

ಪ್ರಜಾವಾಣಿ 26-2-16

ಇನ್ಫೊಸಿಸ್‌ಗೆ ಆಯ್ಕೆ

ಪ್ರಜಾವಾಣಿ ವಾರ್ತೆ

ಶೃಂಗೇರಿ: ಜೆ.ಸಿ.ಬಿ.ಎಂ ಕಾಲೇಜಿನಲ್ಲಿ ಇತ್ತೀಚೆಗೆ ನಡೆದ ಇನ್ಫೊಸಿಸ್ ಸಂಸ್ಥೆಗಾಗಿ ಉದ್ಯೋಗ ಆಯ್ಕೆ ಪ್ರಕ್ರಿಯೆಯಲ್ಲಿ 35 ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆ.

ಕಾಲೇಜಿನ ಉದ್ಯೋಗ ಮಾರ್ಗದರ್ಶನ ಕೇಂದ್ರ ಹಾಗೂ ಆಂತರಿಕ ಗುಣಮಟ್ಟ ಭರವಸೆ ಕೋಶದ ಆಶ್ರಯದಲ್ಲಿ ನಡೆದ ಉದ್ಯೋಗ ಆಯ್ಕೆ ಪ್ರಕ್ರಿಯಲ್ಲಿ ಶಿವಮೊಗ್ಗ, ಚಿಕ್ಕಮಗಳೂರು, ದಾವಣಗೆರೆ ಜಿಲ್ಲೆಯ ವಿವಿಧ ಕಾಲೇಜುಗಳ 250 ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಜೆ.ಸಿ.ಬಿ.ಎಂ.ಕಾಲೇಜಿನ 26 ವಿದ್ಯಾರ್ಥಿಗಳು ಸೇರಿದಂತೆ 35 ವಿದ್ಯಾರ್ಥಿಗಳು ಉದ್ಯೋಗಕ್ಕೆ ಆಯ್ಕೆಯಾದರು.

ಇನ್ಫೊಸಿಸ್ ಸಂಸ್ಥೆಯ ಉದ್ಯೋಗ ಆಯ್ಕೆ ತಂಡದ ಮುಖ್ಯಸ್ಥ ಶೇಕ್ ಅಹಮದ್ ನೇತೃತ್ವದಲ್ಲಿ ಆಯ್ಕೆ ಪ್ರಕ್ರಿಯೆ ನಡೆಯಿತು. ಕಾಲೇಜಿನ ಪ್ರಾಚಾರ್ಯ ಎಚ್.ಸಿ.ವೀರಪ್ಪಗೌಡ ಅಧ್ಯಕ್ಷತೆ ವಹಿಸಿದ್ದರು.

ಆಯ್ಕೆ ಪ್ರಕ್ರಿಯೆಯಲ್ಲಿ ಉದ್ಯೋಗ ಮಾಹಿತಿ ಕೇಂದ್ರದ ಅಧಿಕಾರಿ ಎನ್.ಎಚ್.ಸಿ.ಲಕ್ಷ್ಮೀನಾರಾಯಣ, ಅಶೋಕ್, ಕೆ.ಎಸ್.ಪ್ರದೀಪ್, ಎ.ಜಿ. ಪ್ರಶಾಂತ್, ಕೆ.ಜಿ.ಉಮೇಶ್, ಉಪನ್ಯಾಸಕ ಭಾರದ್ವಾಜ್ ಸಹಕರಿಸಿದರು. ಪದವಿ ಪೂರ್ವ ಕಾಲೇಜು ಪ್ರಾಚಾರ್ಯ ಡಾ.ಸಿ.ವಿ.ಗಿರಿಧರಶಾಸ್ತ್ರಿ, ವಿದ್ಯಾರ್ಥಿ ಕ್ಷೇಮಪಾಲನಾಧಿಕಾರಿ ದತ್ತಾತ್ರೇಯ ಮಾರ್ಪಳ್ಳಿ, ಸಂಯೋಜಕ ದೇವದಾಸ್ ಇದ್ದರು.



ಶೃಂಗೇರಿ ಜೆ.ಸಿ.ಬಿ.ಎಂ ಕಾಲೇಜಿನಲ್ಲಿ ಇತ್ತೀಚೆಗೆ ನಡೆದ ಇನ್ಫೊಸಿಸ್ ಸಂಸ್ಥೆಗಾಗಿ ಉದ್ಯೋಗ ಆಯ್ಕೆ ಪ್ರಕ್ರಿಯೆಯಲ್ಲಿ ಆಯ್ಕೆ ತಂಡದ ಮುಖ್ಯಸ್ಥ ಶೇಕ್ ಅಹಮದ್ ಮಾತನಾಡಿದರು.

Scanned by CamScanner

ಪ್ರಜಾವಾಣಿ ಕನ್ನಡ ಬುಕ್ 25-2-16

ಉದ್ಯೋಗ ಪ್ರಕ್ರಿಯೆ: 35 ವಿದ್ಯಾರ್ಥಿಗಳು ಆಯ್ಕೆ



ಶೃಂಗೇರಿಯ ಜೆಸಿಬಿಎಂ ಕಾಲೇಜಿನಲ್ಲಿ ಇನ್ಫೋಸಿಸ್ ಉದ್ಯೋಗ ಆಯ್ಕೆ ಮುಖ್ಯಸ್ಥ ಷೇಕ್ ಅಹಮದ್ ಉದ್ಯೋಗ ಆಯ್ಕೆ ಪ್ರಕ್ರಿಯೆ ನಡೆಸಿಕೊಟ್ಟರು.

ಶೃಂಗೇರಿ

ಜೆ.ಸಿ.ಬಿ.ಎಂ.ಕಾಲೇಜಿನ ಉದ್ಯೋಗ ಮಾರ್ಗದರ್ಶನ ಕೇಂದ್ರ ಹಾಗೂ ಅಂತರಿಕ ಗುಣಮಟ್ಟ ಭರವಸೆ ಕೋಶದ ಆಶ್ರಯದಲ್ಲಿ ಇನ್ಫೋಸಿಸ್ ಸಂಸ್ಥೆಗಾಗಿ ಉದ್ಯೋಗ ಆಯ್ಕೆ ಪ್ರಕ್ರಿಯೆಯನ್ನು ನಡೆಸಲಾಯಿತು.

ಪದವಿ ಕಾಲೇಜಿನ ಪ್ರಾಂಶುಪಾಲ ಡಾ.ಹೆಚ್.ಸಿ.ವೀರಪ್ಪಗೌಡರು ಕಾರ್ಯಕ್ರಮ ಉದ್ಘಾಟಿಸಿದರು. ಇನ್ಫೋಸಿಸ್ ಸಂಸ್ಥೆಯ ಉದ್ಯೋಗ ಆಯ್ಕೆ ತಂಡದ ಮುಖ್ಯಸ್ಥ ಷೇಕ್ ಅಹಮದ್ ಹಾಗೂ ತಂಡದ ಇತರ ಸದಸ್ಯರು ಆಯ್ಕೆ ಪ್ರಕ್ರಿಯೆಯನ್ನು ನಡೆಸಿಕೊಟ್ಟರು.

ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಡಾ.ಸಿ.ವಿ.ಗಿರಿಧರಶಾಸ್ತ್ರಿ, ವಿದ್ಯಾರ್ಥಿ ಕ್ಷೇಮಪಾಲನಾಧಿಕಾರಿ ಹಾಗು ಐ.ಕ್ಯೂ.ಎ.ಸಿ. ಸಂಯೋಜಕ ಪ್ರೊ. ದತ್ತಾತ್ರೇಯ ಮಾರ್ಪಳ್ಳಿರವರು ಉಪಸ್ಥಿತರಿದ್ದರು.

ಆಯ್ಕೆ ಪ್ರಕ್ರಿಯೆಯಲ್ಲಿ ಶಿವಮೊಗ್ಗ, ಚಿಕ್ಕಮಗಳೂರು, ದಾವಣಗೆರೆ ಜಿಲ್ಲೆಯ ವಿವಿಧ ಕಾಲೇಜುಗಳ ಸುಮಾರು 250 ವಿದ್ಯಾರ್ಥಿಗಳು ಪಾಲ್ಗೊಂಡಿದ್ದು 35 ವಿದ್ಯಾರ್ಥಿಗಳು ಆಯ್ಕೆಯಾದರು.

ಆಯ್ಕೆ ಪ್ರಕ್ರಿಯೆಯಲ್ಲಿ ಉದ್ಯೋಗ ಮಾಹಿತಿ ಕೇಂದ್ರದ ಅಧಿಕಾರಿಗಳಾದ ಲಕ್ಷ್ಮೀನಾರಾಯಣ ಎನ್.ಹೆಚ್., ಅಶೋಕ ಎಸ್.ಎಸ್., ಪ್ರದೀಪ ಕೆ.ಎಸ್., ಪ್ರಶಾಂತ ಎ.ಜಿ., ಉಮೇಶ್ ಕೆ.ಜಿ. ಮತ್ತು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಉಪನ್ಯಾಸಕ ಭಾರದ್ವಾಜ್ ಸಹಕರಿಸಿದರು. ಉದ್ಯೋಗ ಮಾರ್ಗದರ್ಶನ ಕೇಂದ್ರದ ಸಂಯೋಜಕ ದೇವದಾಸ್ ಸ್ವಾಗತಿಸಿದರು.

Scanned by CamScanner

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » SHIVAMOGGA
ಗುರುವಾರ
11 ಫೆಬ್ರವರಿ 2016
11 FEBRUARY 2016
3

ಸಾಧನೆಗೆ ಸಾವಿರ ಮಾರ್ಗ



ಗಣರಾಜೋತ್ಸವದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳಿಗೆ ಸನ್ಮಾನ.

ಶೃಂಗೇರಿ: ಜೀವನದಲ್ಲಿ ಸೋಲು-ಗೆಲುವು ಸಾಮಾನ್ಯ. ಸೋತಾಗ ಕುಗ್ಗದೆ ಭವಿಷ್ಯ ನಂಬಿ ಮುಂದೆ ಸಾಗಬೇಕು ಎಂದು 21 ಕರ್ನಾಟಕ ಬೆಟಾಲಿಯನ್ ಕಮಾಂಡಿಂಗ್ ಅಧಿಕಾರಿ ಕರ್ನಲ್ ಪಿ.ಎನ್.ಮೆನನ್ ಹೇಳಿದರು.

ಜೆಸಿಬಿಎಂ ಕಾಲೇಜಿನಲ್ಲಿ ಮಂಗಳವಾರ ಎನ್‌ಎಸ್‌ಎಸ್ ಮತ್ತು ಎನ್‌ಸಿಸಿ ಆಯೋಜಿಸಿದ್ದ ವಿದ್ಯಾರ್ಥಿಗಳ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದರು.

ಸಾಧನೆ ಮಾಡಲು ಸಾವಿರಾರು ಹಾದಿಗಳಿವೆ. ಆದರೆ ನಾವೇನಾದರೂ ಸಾಧನೆ ಮಾಡಬೇಕು. ಎತ್ತರಕ್ಕೆ ಬೆಳೆಯ ಬೇಕೆಂಬ ಭಾವ ವಿದ್ಯಾರ್ಥಿಗಳಲ್ಲಿ ಮೂಡಿದರೆ ಅವರು ಜಗತ್ತನ್ನು ಗೆಲ್ಲಬಲ್ಲರು ಎಂದರು.

ತಾಲ್‌ಸೈನಿಕ್ ಶಿಬಿರದಲ್ಲಿ ಭಾಗವಹಿಸಿದ್ದ ನಿತಿನ್, ಗಣರಾಜೋತ್ಸವ ಪರೇಡ್‌ನಲ್ಲಿ ಭಾಗ ವಹಿಸಿದ್ದ ಶರಣ್ಯ, ಕಾರ್ತಿಕ್, ಕಾವ್ಯ ಕರ್ನಲ್ ಪಿ.ಎನ್.ಮೆನನ್ ಅವರನ್ನು ಸನ್ಮಾನಿಸಲಾಯಿತು.

ಸಿಪಿಐ ಸುಧೀರ್ ಹೆಗಡೆ, ಡಾ. ಎಚ್.ಸಿ. ವೀರಪ್ಪ ಗೌಡ, ಡಾ. ಸಿ.ವಿ.ಗಿರಿಧರ ಶಾಸ್ತ್ರಿ, ಕುಮಾರಸ್ವಾಮಿ, ಎನ್‌ಎಸ್‌ಎಸ್ ಅಧಿಕಾರಿಗಳಾದ ಲಕ್ಷ್ಮೀನಾರಾಯಣ್, ಪ್ರಶಾಂತ್ ಉಪಸ್ಥಿತರಿದ್ದರು.

Scanned by CamScanner

ವಿಜಯ ಕರ್ನಾಟಕ VK ON SUNDAY III 7 ಫೆಬ್ರವರಿ 2016, ಶಿವಮೊಗ್ಗ

ಸಾಂಸ್ಕೃತಿಕ, ಕ್ರೀಡಾ ಚಟುವಟಿಕೆಗಳ ಸಮಾರೋಪ

ಶೃಂಗೇರಿ: ವಿದ್ಯಾರ್ಥಿಗಳ ಕಲಿಕೆಗೆ ಆಟಿಪಾಯ ಮುಖ್ಯ ಎಂದು ಆದಿಚುಂಚನಗಿರಿ ಶಾಖಾಮಠದ ಶ್ರೀ ಗುಣನಾಥ ಸ್ವಾಮೀಜಿ ಹೇಳಿದರು.

ಅವರು ಬುಧವಾರ ಆದಿಚುಂಚನಗಿರಿ ಶಿಕ್ಷಣ ಸಂಸ್ಥೆಯ ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳ ಸಮಾರೋಪ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ವಿದ್ಯಾರ್ಥಿಗಳು ಪ್ರತಿ ಹಂತದಲ್ಲೂ ತಮ್ಮೊಳಗಿರುವ ಕ್ರಿಯಾಶೀಲತೆಗೆ ಹೆಚ್ಚಿನ ಒತ್ತು ನೀಡಬೇಕು. ಸಾಧನೆ ಎಂಬುದು ವಿದ್ಯಾರ್ಥಿಗಳ ಮೂಲಮಂತ್ರವಾಗಬೇಕು. ಸಾವಿರ ಮೆಟ್ಟಲು ಹತ್ತುವ ಸಾಮರ್ಥ್ಯ ನಮ್ಮಲಿದೆ ಎಂಬ ಆತ್ಮವಿಶ್ವಾಸ ಹೊಂದಿರುವರು. ನಾಳಿನ ಭವಿಷ್ಯದ ಅತ್ಯುತ್ತಮ ರೂವಾರಿಯಾಗುತ್ತಾರೆ. ಪೋಷಕರು ಮತ್ತು ಶಿಕ್ಷಕರು ಪ್ರತಿಭೆಗಳನ್ನು ಗುರುತಿಸಿ ವಿಶೇಷ ಪ್ರೋತ್ಸಾಹ ನೀಡಬೇಕು. ವಿದ್ಯಾರ್ಥಿಗಳು ಫೇಸ್ ಬುಕ್, ವಾಟ್ಸಪ್ ಮೊದಲಾದುವುಗಳಿಂದ ದೂರವಿದ್ದು ಬದುಕಿನಲ್ಲಿ ಸಾಧನೆ ಮಾಡುವುದು ಪ್ರಾಮುಖ್ಯ ಎಂದರು.

ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಕಲ್ಕುಳಿ ವಿಠ್ಠಲ ಹೆಗ್ಡೆ ಅವರನ್ನು ಶ್ರೀಗಳು ಗೌರವಿಸಿದರು.

ಕಾರ್ಯಕ್ರಮದಲ್ಲಿ ಶ್ರೀ ಜೆಸಿಬಿಎಂ ಕಾಲೇಜಿನ ಪ್ರಾಚಾರ್ಯ ಎಚ್.ಸಿ.ವೀರಪ್ಪಗೌಡ ಮತ್ತು ನಿವೃತ್ತ ನೌಕರರ ಸಂಘದ ಅಧ್ಯಕ್ಷ ಎನ್.ಜಿ.ರಾಮೇಗೌಡ, ಬಿಎಡ್ ಕಾಲೇಜಿನ ಪ್ರಾಚಾರ್ಯ ಕೆ.ಸಿ.ನಾಗೇಶ್, ಮುಖ್ಯ ಶಿಕ್ಷಕ ಎಚ್.ಎಂ.ಕಿರಣ್, ಲೀಲಾ ಉಪಾಧ್ಯಾಯ, ಬಿಜಿಎಸ್ ಪಿ.ಇ.ಕಾಲೇಜಿನ ಹಿರಿಯ ಉಪನ್ಯಾಸಕ ಕೆ.ಜಿ.ಎನ್.ಶಾಸ್ತ್ರಿ ಹಾಜರಿದ್ದರು.



ಶೃಂಗೇರಿ ಆದಿಚುಂಚನಗಿರಿ ಶಿಕ್ಷಣ ಸಂಸ್ಥೆಯ ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳ ಸಮಾರೋಪ ಸಮಾರಂಭವನ್ನು ಶ್ರೀ ಗುಣನಾಥ ಸ್ವಾಮೀಜಿ ಉದ್ಘಾಟಿಸಿದರು.

Scanned by CamScanner

ವಿಜಯ ಕರ್ನಾಟಕ VK ಗುರುವಾರ, 28 ಜನವರಿ 2016, ಶಿವಮೊಗ್ಗ

ಬೇಸಿಗೆಯಲ್ಲಿ ವಿದ್ಯುತ್ ಕಡಿತ ಅನಿವಾರ್ಯ

ಕೃಂಗೇರಿ: ಬೇಸಿಗೆಯಲ್ಲಿ ಹೆಚ್ಚು ವಿದ್ಯುತ್ ಬೇಡಿಕೆ ಬರುತ್ತಿದ್ದು, ಅಗತ್ಯದಷ್ಟು ಪೂರೈಕೆ ಇಲ್ಲವಾದಾಗ ವಿದ್ಯುತ್ ಕಡಿತ ಅನಿವಾರ್ಯವಾಗುತ್ತಿದೆ ಎಂದು ಮೆಸ್ಕಾಂ ಅಧೀಕ್ಷಕ ಎಂಜಿನಿಯರ್ ವಿಜಯಕುಮಾರ್ ಹೇಳಿದರು.

ಪಟ್ಟಣದ ಶ್ರೀಜೆಸಿಬಿಎಂ ಕಾಲೇಜಿನಲ್ಲಿ ಬುಧವಾರ ವಿದ್ಯುತ್ ಸೇವೆಗಳ ಬಗ್ಗೆ ಏರ್ಪಡಿಸಿದ್ದ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು. ಚಿಕ್ಕಮಗಳೂರು ಜಿಲ್ಲೆ ಬಯಲು ಮತ್ತು ಮಲೆನಾಡಿನ ಪ್ರದೇಶವನ್ನು ಒಳಗೊಂಡಿದ್ದು, ಮಲೆನಾಡಿನಲ್ಲಿ ಬೇಸಿಗೆಯಲ್ಲಿ ಮಾತ್ರ ಹೆಚ್ಚು ವಿದ್ಯುತ್ ಬಳಕೆಯಾಗುತ್ತಿದೆ. ಜಲವಿದ್ಯುತ್, ಉಷ್ಣವಿದ್ಯುತ್ ಉತ್ಪಾದಿಸಲಾಗುತ್ತಿದ್ದು, ಕೊರತೆಯಾಗುವ ವಿದ್ಯುತ್ ಅನ್ನು ಖಾಸಗಿ ಕಂಪನಿಗಳಿಂದಲೂ ಖರೀದಿಸಲಾಗುತ್ತಿದೆ. ಕೊರತೆ ವಿದ್ಯುತ್ ಸರಿದೂಗಿಸಲು ಹೊಂದಾಣಿಕೆ ಆಧಾರದಲ್ಲಿ ಮನೆ ಬಳಕೆ ಹಾಗೂ ಮೂರು ಫೇಸ್ ವಿದ್ಯುತ್ ನೀಡಲಾಗುತ್ತಿದೆ. ವಿದ್ಯುತ್ ಲೈನ್‌ಗಳನ್ನು ಸುಸ್ಥಿತಿಯಲ್ಲಿಡಲು ಮರಗಳನ್ನು ಕಡಿಯಬೇಕಿದೆ. ಆದರೆ, ಅರಣ್ಯ ಇಲಾಖೆ ಇದಕ್ಕೆ ಅನುಮತಿ ನೀಡುವುದಿಲ್ಲ. ಆದ್ದರಿಂದ ಲೈನ್‌ಗೆ ಸಮೀಪದ ಮರಗಳನ್ನು ಮಾತ್ರ ತೆಗೆಯಲಾಗುತ್ತಿದೆ. ರಾಜ್ಯದ ಐದು ವಿದ್ಯುತ್ ನಿಗಮಗಳಲ್ಲಿ ಈ ವರ್ಷ ಉತ್ತಮ ನಿರ್ವಹಣೆಗಾಗಿ ಮೆಸ್ಕಾಂ ಪ್ರಶಸ್ತಿ ಪಡೆದಿದೆ ಎಂದರು.

ಸಾಗರ ಬಳಕೆದಾರರ ವೇದಿಕೆಯ ಕೆ.ಎನ್.ವೆಂಕಟಗಿರಿ ಮಾತನಾಡಿ, ಶೇ.30 ವಿದ್ಯುತ್ ಜಲ ವಿದ್ಯುತ್ ಸ್ಥಾವರ, ಶೇ.30 ವಿದ್ಯುತ್ ಉಷ್ಣ ಸ್ಥಾವರದಿಂದ ಪಡೆಯಲಾಗುತ್ತಿದ್ದು, ಉಳಿದ ವಿದ್ಯುತ್‌ನ್ನು ಖಾಸಗಿಯಾಗಿ ಪಡೆಯಲಾಗುತ್ತಿದೆ. ವಿದ್ಯುತ್ ಬಳಕೆದಾರರು ತಮಗಿರುವ ಹಕ್ಕಿನ ಬಗ್ಗೆ ಮಾಹಿತಿ ಪಡೆದಿರಬೇಕು. ವಿದ್ಯುತ್ ದರ ಏರಿಕೆ ಸಂದರ್ಭ ಇಲಾಖೆಯೂ ಮೊದಲು ಗ್ರಾಹಕರಿಗೆ ತಿಳಿಸಿ, ಗ್ರಾಹಕರ ಅಹವಾಲು ಸ್ವೀಕರಿಸಿ ನಂತರ ಪರಿಷ್ಕರಣೆ ಮಾಡುತ್ತಿದೆ. 15 ವರ್ಷಗಳಲ್ಲಿ ವಿದ್ಯುತ್ ಪೂರೈಕೆ ಮತ್ತು ಸೇವೆಗಳಲ್ಲಿ ಅಮೂಲಾಗ್ರ ಬದಲಾವಣೆ ಆಗಿದೆ.

ಕಾರ್ಯಕ್ರಮವನ್ನು ಎಂ.ಎಂ. ಪ್ರಭಾಕರ ಕಾರಂತ್ ಉದ್ಘಾಟಿಸಿದರು. ಕಾಲೇಜಿನ ಪ್ರಾಚಾರ್ಯ ಡಾ.ಎಚ್.ಸಿ.ವೀರಪ್ಪಗೌಡ ಅಧ್ಯಕ್ಷತೆ ವಹಿಸಿದ್ದರು. ಚಿಕ್ಕಮಗಳೂರು ಕಾರ್ಯಪಾಲಕ ಎಂಜಿನಿಯರ್ ಯು.ಎನ್.ನಟರಾಜ, ವಿದ್ಯಾರ್ಥಿ ಮುಖಂಡ ರಕ್ಷಿತ್ ಉಪಸ್ಥಿತರಿದ್ದರು. ಗ್ರಾಹಕರ ಹಿತ ಕಾಯಲಿರುವ ನೀತಿ ನಿಯಮಗಳ ಬಗ್ಗೆ ಗೋಪಾಲಕೃಷ್ಣ ಬಾರಂಗಿ, ವಿದ್ಯುಚ್ಛಕ್ತಿ ಸಮಸ್ಯೆಗಳು-ಪರಿಹಾರ ಹೇಗೆ ಬಗ್ಗೆ ಎಂ.ಆರ್.ಎನ್. ಹೆಗಡೆ ಮಾತನಾಡಿದರು.

ಸಾಗರ ಬಳಕೆದಾರರ ವೇದಿಕೆ, ರೋಟರಿ ಕ್ಲಬ್ ಮತ್ತು ಜೆಸಿಬಿಎಂ ಕಾಲೇಜು ಆಶ್ರಯದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

ತಲಗಾರು ನಾಗೇಶ್ ನಿರೂಪಿಸಿ, ನಾಗರಾಜ್ ವಂದಿಸಿದರು.



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ವಿದ್ಯುತ್ ಸೇವೆಗಳ ಬಗ್ಗೆ ಬುಧವಾರ ಏರ್ಪಡಿಸಿದ್ದ ಕಾರ್ಯಾಗಾರದಲ್ಲಿ ಮೆಸ್ಕಾಂ ಅಧೀಕ್ಷ ಎಂಜಿನಿಯರ್ ವಿಜಯಕುಮಾರ್ ಮಾತನಾಡಿದರು.

Scanned by CamScanner

28.1.16

ಪ್ರಜಾ ವಾಣಿ ಗುರುವಾರ • ಜನವರಿ 28, 2016

ಸಂಕ್ಷಿಪ್ತ ಸುದ್ದಿ



ಕೆ.ಎಸ್. ಶರಣ್ಯಾ



ಕಾರ್ತೀಕ್

ದೆಹಲಿ ಪೆರೇಡ್: ಜೆಸಿಬಿಎಂ ವಿದ್ಯಾರ್ಥಿಗಳು

ಶೃಂಗೇರಿ:ಜೆ.ಸಿ.ಬಿ.ಎಂ.ಕಾಲೇಜಿನ ಎನ್.ಸಿ.ಸಿ.ಕೆಡೆಟ್ಸ್ ಕೆ.ಎಸ್. ಶರಣ್ಯಾ (ದ್ವಿತೀಯ ಬಿ.ಎಸ್ಸಿ.) ಮತ್ತು ಎಸ್.ಆರ್.ಕಾರ್ತೀಕ್ (ದ್ವಿತೀಯ ಬಿ.ಕಾಂ.) ಮಂಗಳವಾರ ನವ ದೆಹಲಿಯಲ್ಲಿ ನಡೆದ ಗಣರಾಜ್ಯೋತ್ಸವ ಪಥಸಂಚಲನದಲ್ಲಿ ಭಾಗವಹಿಸಿ ಕ್ಲಿಷ್ಟಕರ ವಾಗಿರುವ ಎಲ್ಲಾ ಎಂಟು ಶಿಬಿರಗಳಲ್ಲೂ ಆಯ್ಕೆಯಾಗಿ ಸಾಧನೆ ಮಾಡಿದ್ದಾರೆ.

ಇವರಿಗೆ ಕಾಲೇಜಿನ ಎನ್.ಸಿ.ಸಿ.ಅಧಿಕಾರಿ ಲೆಫ್ಟಿನೆಂಟ್ ಡಾ.ಕುಮಾರಸ್ವಾಮಿ ಉಡುಪ, ಉಡುಪಿಯ 21 ಕರ್ನಾಟಕ ಬೆಟಾಲಿಯನ್ ಕಮಾಂಡಿಂಗ್ ಆಫೀಸರ್ ಕರ್ನಲ್ ಪಿ.ಎನ್.ಮೆನನ್, ಕಾಲೇಜಿನ ಪ್ರಾಂಶುಪಾಲರು, ಭೋದಕ, ಭೋದ ಕೇತರ ಸಿಬ್ಬಂದಿ ವರ್ಗ, ಪೋಷಕರು ಅಭಿನಂದನೆ ಸಲ್ಲಿಸಿದ್ದಾರೆ.

Scanned by CamScanner

ವಿಜಯ ಕರ್ನಾಟಕ VK 24 ಜನವರಿ 2016, ಶಿವಮೊ

ಬದುಕಿನ ಮೌಲ್ಯ ಸಾರುವ ವಚನ ಸಾಹಿತ್ಯ

ವಿಕ ಚಿತ್ರಲೋಕ



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ಅಂಬಿಗರ ಚೌಡಯ್ಯ ಜಯಂತಿ ಕಾರ್ಯಕ್ರಮವನ್ನು ಕಾಲೇಜಿನ ಪ್ರಾಚಾರ್ಯ ಡಾ.ಎಚ್.ಸಿ.ವೀರಪ್ಪಗೌಡ ಉದ್ಘಾಟಿಸಿದರು.

ಶೃಂಗೇರಿ: ವಚನ ಸಾಹಿತ್ಯದ ಮೂಲಕ ಮಾನವೀಯ ಮೌಲ್ಯಗಳನ್ನು ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು ಎಂದು ನಿವೃತ್ತ ಪ್ರಾಧ್ಯಾಪಕ ಪ್ರೊ. ಕೆ.ಪುಟ್ಟಯ್ಯ ಹೇಳಿದರು.

ಅವರು ಬುಧವಾರ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ಜೆಸಿಬಿಎಂ ಕಾಲೇಜಿನಲ್ಲಿ ಅಂಬಿಗರ ಚೌಡಯ್ಯ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ತಹಸೀಲ್ದಾರ್ ಶಾರದಾಂಬಾ ಮಾತನಾಡಿ, ವಚನಕಾರರ ಮಹತ್ವ ಮತ್ತು ಅವರ ಮೌಲ್ಯಗಳನ್ನು ವಿದ್ಯಾರ್ಥಿಗಳು ಅಳವಡಿಸಿಕೊಳ್ಳಬೇಕೆಂದು ಹೇಳಿದರು.

ಕಾಲೇಜಿನ ಪ್ರಾಚಾರ್ಯ ಡಾ. ಎಚ್.ಸಿ.ವೀರಪ್ಪಗೌಡ ಕಾರ್ಯಕ್ರಮ ಉದ್ಘಾಟಿಸಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಎನ್.ಜಿ.ರಾಘವೇಂದ್ರ ಸ್ವಾಗತಿಸಿದರು. ಬಿ.ಡಿ.ಸಂತೋಷ್ ನಿರೂಪಿಸಿ, ಜ್ಯೋತಿ ಕಾಕತ್ಕರ್ ವಂದಿಸಿದರು.

Scanned by CamScanner

ದೇಶ ಕಂಡ ಮಹಾನ್ ಚೇತನ ವಿವೇಕಾನಂದರು

ಶೃಂಗೇರಿ: ದೇಶ ಕಂಡ ಮಹಾನ್ ಚೇತನ ಸ್ವಾಮಿ ವಿವೇಕಾನಂದರು ಎಂದು ಕುವೆಂಪು ವಿವಿಯ ರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ.ಕೇಶವಯ್ಯ ಹೇಳಿದರು.

ಅವರು ಇತ್ತೀಚೆಗೆ ಶ್ರೀ ಜೆಸಿಬಿಎಂ ಕಾಲೇಜಿನಲ್ಲಿ ರಾಷ್ಟ್ರೀಯ ಯುವ ಸಪ್ತಾಹದ ಅಂಗವಾಗಿ ಏರ್ಪಡಿಸಿದ್ದ ಪುಸ್ತಕ ಪ್ರದರ್ಶನ ಉದ್ಘಾಟಿಸಿ ಮಾತನಾಡಿದರು.

ನಾಡಿನ ಯುವ ಪ್ರತಿನಿಧಿಗಳ ಕಣ್ಣಲ್ಲಿ ಹೇಗೆ ಕಂಡಿದ್ದಾರೆ ಎಂಬ ಅವರ ಮನದಾಳದ ಚಿಂತನೆಗಳು ಇಲ್ಲಿ ಅಕ್ಷರ ರೂಪ ಪಡೆದಿದೆ. ಪುಸ್ತಕ ಪ್ರದರ್ಶನದ ಮೂಲಕ ಸ್ವಾಮಿ ವಿವೇಕಾನಂದರ ಬಗ್ಗೆ ಹೆಚ್ಚು ವಿಷಯಗಳನ್ನು ತಿಳಿಯಬಹುದಾಗಿದೆ. ಅವರ ತತ್ವಗಳನ್ನು ಇಂದಿನ ಯುವ ಜನತೆ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಕಾಲೇಜಿನ ಪ್ರಾಚಾರ್ಯ ಡಾ.ಎಚ್.ಸಿ.ವೀರಪ್ಪಗೌಡ ಅಧ್ಯಕ್ಷತೆ ವಹಿಸಿದ್ದರು. ಪಿಯು ವಿಭಾಗದ ಪ್ರಾಚಾರ್ಯ ಡಾ.ಸಿ.ವಿ.ಗಿರಿಧರ ಶಾಸ್ತ್ರಿ ಡಾ.ಎಚ್. ವಿಷ್ಣುವರ್ಧನ್, ಎನ್‌ಎಸ್‌ಎಸ್ ಅಧಿಕಾರಿಗಳಾದ ಎನ್.ಎಚ್.ಲಕ್ಷ್ಮೀನಾರಾಯಣ, ಎ.ಜಿ.ಪ್ರಶಾಂತ್ ಮತ್ತು ಗ್ರಂಥಪಾಲಕ ಎಚ್.ಇ.ಪ್ರಸನ್ನ ಕುಮಾರ್ ಹಾಜರಿದ್ದರು.

Scanned by CamScanner

ಕನ್ನಡಪ್ರಭ
ಶುಕ್ರವಾರ 18.12.2015

ಭಾವಾಂತರಂಗ: ಸಮಗ್ರ ಪ್ರಶಸ್ತಿ

• **ಕನ್ನಡಪ್ರಭ ವಾರ್ತೆ** ಶೃಂಗೇರಿ

ಇಲ್ಲಿನ ಶ್ರೀ ಜೆಸಿಬಿಎಂ ಕಾಲೇಜಿನಲ್ಲಿ ಆಯ್ದ ಪದವಿ ಪೂರ್ವ ಕಾಲೇಜುಗಳ ಸಾಂಸ್ಕೃತಿಕ ಸ್ಪರ್ಧೆ ಭಾವಾಂತರಂಗ ಸ್ಪರ್ಧೆಯಲ್ಲಿ ಶ್ರೀ ಜೆಸಿಬಿಎಂ ಕಾಲೇಜಿನ ವಿದ್ಯಾರ್ಥಿಗಳು ವಿವಿಧ ವಿಭಾಗಗಳಲ್ಲಿ ಉತ್ತಮ ಪ್ರದರ್ಶನ ನೀಡಿ ಸತತ 3ನೇ ಬಾರಿ ಸಮಗ್ರ ಪ್ರಶಸ್ತಿಯನ್ನು ಗೆಲ್ಲುವುದರ ಮೂಲಕ ಹ್ಯಾಟ್ರಿಕ್ ಸಾಧನೆ ಮಾಡಿದ್ದಾರೆ. ಸುರಭಿ ಭಾವಗೀತೆಯಲ್ಲಿ ಪ್ರಥಮ, ಇಂಚರ ಮತ್ತು ತಂಡ ಸಿನಿಮಾ ನೃತ್ಯ (ಸಮೂಹ) ಪ್ರಥಮ. ಪ್ರದೀಪ್ ನಿರೂಪಣೆಯಲ್ಲಿ ದ್ವೀತಿಯ, ನೇಹ ಸಿನಿಮಾ ನೃತ್ಯ (ಏಕವ್ಯಕ್ತಿ) ದ್ವೀತಿಯ, ದೀಪ್ತಿ ಜನಪದ ಗೀತೆ (ತೃತೀಯ), ಸ್ಥಾನ ಗಳಿಸಿ ಕಾಲೆಜಿಗೆ ಕೀರ್ತಿ ತಂದಿದ್ದಾರೆ. ಈ ಸ್ಪರ್ಧೆಯಲ್ಲಿ ಬಾಳೆಹೊನ್ನೂರು, ಜಯಪುರ, ಕೊಪ್ಪ ಶೃಂಗೇರಿ ಸೇರಿದಂತೆ ಏಳು ಕಾಲೇಜುಗಳು ಭಾಗವಹಿಸಿದ್ದವು.

Scanned by CamScanner

ಜೆಸಿಬಿಎಂ ಕಾಲೇಜಿಗೆ ಸಮಗ್ರ ಪ್ರಶಸ್ತಿ

ಶೃಂಗೇರಿ: ಪಟ್ಟಣದ ಜೆಸಿಬಿಎಂ ಕಾಲೇಜಿನಲ್ಲಿ ಇತ್ತೀಚೆಗೆ ಏರ್ಪಡಿಸಿದ್ದ ಪದವಿ ಪೂರ್ವ ಕಾಲೇಜುಗಳ ಭಾವಾಂತರಂಗ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಜೆಸಿಬಿಎಂ ಕಾಲೇಜು ವಿದ್ಯಾರ್ಥಿಗಳು ಸತತ ಮೂರನೇ ಬಾರಿಗೆ ಸಮಗ್ರ ಪ್ರಶಸ್ತಿ ಪಡೆದಿದ್ದಾರೆ.

ಭಾವಗೀತೆಯಲ್ಲಿ ಸುರಭಿ ಪ್ರಥಮ, ಸಿನಿಮಾ ನೃತ್ಯದಲ್ಲಿ ಇಂಚರಾ ಹಾಗೂ ತಂಡ ಪ್ರಥಮ, ಪ್ರದೀಪ್ ನಿರೂಪಣೆಯಲ್ಲಿ ದ್ವಿತೀಯ, ಏಕವ್ಯಕ್ತಿ ಸಿನಿಮಾ ನೃತ್ಯದಲ್ಲಿ ನೇಹಾ ದ್ವಿತೀಯ, ಜನಪದ ಗೀತೆಯಲ್ಲಿ ದೀಪ್ತಿ ತೃತೀಯ ಸ್ಥಾನ ಗಳಿಸಿದ್ದಾರೆ. ಬಾಳೆಹೊನ್ನೂರು, ಜಯಪುರ, ಕೊಪ್ಪ, ಶೃಂಗೇರಿ ಸೇರಿ ಒಟ್ಟು 7 ಕಾಲೇಜುಗಳ ವಿದ್ಯಾರ್ಥಿಗಳು ಭಾವಾಂತರಂಗ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು.



ಶೃಂಗೇರಿ ಜೆಸಿಬಿಎಂ ಕಾಲೇಜು ಆಯೋಜಿಸಿದ್ದ ಭಾವಾಂತರಂಗ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಸಮಗ್ರ ಪ್ರಶಸ್ತಿ ಪಡೆದ ವಿದ್ಯಾರ್ಥಿಗಳೊಂದಿಗೆ ಜೆಸಿಬಿಎಂ ಕಾಲೇಜು ಪ್ರಾಚಾರ್ಯರು ಹಾಗೂ ಅಧ್ಯಾಪಕ ವೃಂದ.

ವಿಜಯವಾಣಿ - 20-12-15

Scanned by CamScanner

ಪ್ರಜಾವಾಣಿ 10.12.15

ಸಾಂಸ್ಕೃತಿಕ ಸ್ಪರ್ಧೆ: ವಲಯ ಮಟ್ಟಕ್ಕೆ ಆಯ್ಕೆ

ಪ್ರಜಾವಾಣಿ ವಾರ್ತೆ

ಶೃಂಗೇರಿ: ಜಿಲ್ಲಾ ಮಟ್ಟದ ಪದವಿಪೂರ್ವ ಕಾಲೇಜುಗಳ ಸಾಂಸ್ಕೃತಿಕ ಸಹ ಪಠ್ಯೇತರ ಚಟುವಟಿಕೆ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಜೆಸಿಬಿಎಂ ಕಾಲೇಜಿನ ಪದವಿ ಪೂರ್ವ ವಿಭಾಗದ ಆರು ವಿದ್ಯಾರ್ಥಿಗಳು ವಿಜೇತರಾಗಿ ವಲಯ ಮಟ್ಟಕ್ಕೆ ಆಯ್ಕೆಯಾಗಿದ್ದರೆ.

ಕಾಲೇಜಿನ ಕೆ. ಮನೋಜ್ ಚರ್ಚಾ ಸ್ಪರ್ಧೆ (ದ್ವಿತೀಯ), ಎಚ್.ಎಂ. ರಮಾನಂದ್ ಕನ್ನಡ ಪ್ರಬಂಧ(ಪ್ರಥಮ) ಎಚ್.ಜಿ. ದೀಪ್ತಿ ಜಾನಪದ ಗೀತೆ (ಪ್ರಥಮ) ಸಿ.ಎಸ್. ಸುರಭಿ ಭಾವಗೀತೆ (ದ್ವಿತೀಯ) ಗೌರಮ್ಮ ಈರಪ್ಪ ಅರಳಿಕಟ್ಟಿ ವಿಜ್ಞಾನ ಭಾಷಣ (ಪ್ರಥಮ) ಎಂ.ಬಿ. ಭಾವನ ಭಟ್ ವಿಜ್ಞಾನ ಭಾಷಣ (ತೃತೀಯ) ಪಡೆದು ವಲಯ ಮಟ್ಟಕ್ಕೆ ಆಯ್ಕೆಯಾಗಿದ್ದು, ವಿದ್ಯಾರ್ಥಿಗಳನ್ನು ಕಾಲೇಜಿನ ಪ್ರಾಚಾರ್ಯ ಗಿರಿಧರ ಶಾಸ್ತ್ರಿ ಅಭಿನಂದಿಸಿದ್ದಾರೆ.



ಜಿಲ್ಲಾ ಮಟ್ಟದ ಪದವಿ ಪೂರ್ವ ಕಾಲೇಜುಗಳ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಜಯಗಳಿಸಿ ವಲಯ ಮಟ್ಟಕ್ಕೆ ಆಯ್ಕೆಯಾದ ಶೃಂಗೇರಿ ಜೆಸಿಬಿಎಂ ಕಾಲೇಜಿನ ಪದವಿಪೂರ್ವ ವಿಭಾಗದ ವಿದ್ಯಾರ್ಥಿಗಳು.

Scanned by CamScanner

ವಿಜಯ ಕರ್ನಾಟಕ VK ಶುಕ್ರವಾರ, 11 ಡಿಸೆಂಬರ್ 2



ಚಿಕ್ಕಮಗಳೂರಿನಲ್ಲಿ ನಡೆದ ಜಿಲ್ಲಾ ಮಟ್ಟದ ಪದವಿ ಪೂರ್ವ ಕಾಲೇಜುಗಳ ಸಾಂಸ್ಕೃತಿಕ ಸಹ ಪಠ್ಯೇತರ ಚಟುವಟಿಕೆ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಶೃಂಗೇರಿ ಶ್ರೀ ಜೆಸಿಬಿಎಂ ಕಾಲೇಜಿನ ವಿದ್ಯಾರ್ಥಿಗಳು ವಿಜೇತರಾಗಿ ವಲಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

Scanned by CamScanner

ವಾರ್ತೆ ಪತ್ರಿಕೆ 10.12.15

ವಿಶ್ವಕ್ಕೆ ದೊಡ್ಡ ಪಿಡುಗಾದ ಏಡ್ಸ್ ಬಗ್ಗೆ ಜಾಗೃತಿ ವಹಿಸಬೇಕು

ಡಾ.ಲಕ್ಷ್ಮೀನಾರಾಯಣ್

ಶೃಂಗೇರಿ: ಇಲ್ಲಿನ ಶ್ರೀ ಜೆ.ಸಿ.ಬಿ.ಎಂ. ಕಾಲೇಜಿನಲ್ಲಿ ವಿಶ್ವ ಏಡ್ಸ್ ದಿನಾಚರಣೆ ಕಾರ್ಯಕ್ರಮವು ಇತ್ತೀಚೆಗೆ ನಡೆಯಿತು. ಕಾರ್ಯಕ್ರಮದಲ್ಲಿ ಮಾತನಾಡಿದ ಶ್ರೀ ಶಾರದ ಧನ್ವಂತರಿ ಆಸ್ಪತ್ರೆಯ ವೈದ್ಯಾಧಿಕಾರಿ ಡಾ.ಲಕ್ಷ್ಮೀನಾರಾಯಣ್, ವಿಶ್ವಕ್ಕೆ ದೊಡ್ಡ ಪಿಡುಗಾದ ಏಡ್ಸ್ ಬಗ್ಗೆ ಜಾಗೃತಿ ವಹಿಸಿ ಇದರ ವಿರುದ್ಧ ಹೆಜ್ಜೆ ಇಡಬೇಕು. ಸಾರ್ವಜನಿಕರಲ್ಲಿ ಜಾಗರೂಕತೆ ಮೂಡಿಸುವ ಇಂತಹ ಕಾರ್ಯಕ್ರಮಗಳು ನಿರಂತರವಾಗಿ ನಡೆಯಬೇಕು ಎಂದು ಹೇಳಿದರು. ಹೆಚ್.ಐ.ವಿ. ಸೋಂಕು ಬಂದ ಮೇಲೆ ವಿನ್ನರಾಗುವುದಕ್ಕಿಂತ ಅದು ಬರದಂತೆ ಮುನ್ನೆಚ್ಚರಿಕೆ ವಹಿಸುವುದು ಉತ್ತಮ. ಇದರ ಬಗ್ಗೆ ಅನುಮಾನವಿದ್ದರೆ ಸರ್ಕಾರಿ ಆಸ್ಪತ್ರೆಯಲ್ಲಿ ಉಚಿತವಾಗಿ ಲಭ್ಯವಿರುವ ಸೌಲಭ್ಯಗಳನ್ನು ಬಳಸಿಕೊಂಡು ಸಂಶಯ ಬಗೆಹರಿಸಿಕೊಳ್ಳಬಹುದು ಎಂದರು. ಡಾ.ಎಲ್ಟೋಸ್ ವರ್ಗೀಸ್ ಮಾತನಾಡಿ, ಕಾಯಿಲೆಗಳ ರಾಜ ಏಡ್ಸ ಆಗಿದೆ. ಆದರೆ ಏಡ್ಸ್ ಬಂದ ವ್ಯಕ್ತಿಯನ್ನು ಕೀಳರಿಮೆ ಮಾಡಬಾರದು. ಅವನಿಗೆ ಸಮಾಜದಲ್ಲಿ ಗೌರವಯುತವಾಗಿ ಬಾಳುವ ಹಕ್ಕಿದೆ. ರೋಗ ಬಂದಿರುವ ವ್ಯಕ್ತಿಯನ್ನು ಕಡೆಗಣಿಸದೆ, ಎಲ್ಲರಂತೆ ಬದುಕಲು ಅನುವು ಮಾಡಿಕೊಡಬೇಕು ಎಂದರು. ಕಾರ್ಯಕ್ರಮವನ್ನು ದಂತ ವೈದ್ಯಾಧಿಕಾರಿ ಡಾ.ಅಂಬಿಕಾ ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಜೆ.ಸಿ.ಬಿ.ಎಂ. ಕಾಲೇಜಿನ ಪ್ರಾಚಾರ್ಯ ಡಾ. ಹೆಚ್.ಸಿ.ವೀರಭದ್ರಗೌಡ



ವಹಿಸಿದ್ದರು. ಎನ್.ಎಸ್.ಎಸ್. ಅಧಿಕಾರಿಗಳಾದ ಲಕ್ಷ್ಮೀನಾರಾಯಣ್, ಎ.ಜಿ ಪ್ರಶಾಂತ್ ರೋಟರಿ ಕ್ಲಬ್‌ನ ಸಿದ್ದಪ್ಪ ಹಾಗೂ ಆರೋಗ್ಯ ಇಲಾಖೆಯ ಸಿಬ್ಬಂದಿಗಳು. ಹಾಜರಿದ್ದರು. ಹೆಚ್.ಎಸ್.ಶಾಶ್ವತಿ ಪ್ರಾರ್ಥಿಸಿ, ದಿವ್ಯ ಸ್ವಾಗತಿಸಿ, ಅಷ್ಟಶ್ರೀ ವಂದಿಸಿದರು. ಆರೋಗ್ಯ ಇಲಾಖೆ, ರೋಟರಿ ಕ್ಲಬ್ ಮತ್ತು ಶ್ರೀ ಜೆ.ಸಿ.ಬಿ.ಎಂ.ಕಾಲೇಜ್ ರೆಡ್ ರಿಬ್ಬನ್, ಯುವ ರೆಡ್ ಕ್ರಾಸ್, ಎನ್. ಎಸ್. ಎಸ್. ಘಟಕ ಇವರ ಸಂಯುಕ್ತಾಶ್ರಯದಲ್ಲಿ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮಕ್ಕೆ ಮೊದಲು ವಿದ್ಯಾರ್ಥಿಗಳಿಂದ ಪಟ್ಟಣದಲ್ಲಿ ಜಾಥಾ ನಡೆಯಿತು.

ಇತರರಲ್ಲಿರುವ ತಪ್ಪುಗಳ ಬಗ್ಗೆ ಯೋಚಿಸಬಾರದು. ಅವರು ಮಾಡುವುದು ಒಳ್ಳೆಯದೋ, ಕೆಟ್ಟದೋ.. ಎಂಬುದನ್ನೂ ಚಿಂತಿಸಬಾರದು. ನಮ್ಮ ಲೋಪ-ದೋಷಗಳನ್ನು ನಾವು ನೋಡಿಕೊಳ್ಳಬೇಕು.

Scanned by CamScanner

ಪ್ರಜಾವಾಣಿ ಶನಿವಾರ • ಡಿಸೆಂಬರ್ 5, 2015



ಶೃಂಗೇರಿಯ ಆರೋಗ್ಯ ಇಲಾಖೆ, ರೋಟರಿ ಕ್ಲಬ್ ಮತ್ತು ವಿವಿಧ ಸಂಘಟನೆಯ ಆಶ್ರಯದಲ್ಲಿ ಈಚೆಗೆ ನಡೆದ ವಿಶ್ವ ಏಡ್ಸ ದಿನಾಚರಣೆಯ ಕಾರ್ಯಕ್ರಮದ ಅಂಗವಾಗಿ ಮುಖ್ಯಬೀದಿಯಲ್ಲಿ ಜಾಗೃತಿ ಜಾಥಾ ನಡೆಸಲಾಯಿತು.

Scanned by CamScanner

2 ಗುರುವಾರ
5 ನವೆಂಬರ್ 20
5 NOVEMBER 2015
ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI • SHIVAMOGGA

ಜೆಸಿಬಿಎಂ ಕಾಲೇಜಿಗೆ ರನ್ನರ್‌ಅಪ್ ಪ್ರಶಸ್ತಿ

ಶೃಂಗೇರಿ: ಕುವೆಂಪು ವಿಶ್ವವಿದ್ಯಾಲಯದಲ್ಲಿ ಆಯೋಜಿಸಿದ್ದ ಸಹ್ಯಾದ್ರಿ ಉತ್ಸವದಲ್ಲಿ ಜೆಸಿಬಿಎಂ ಕಾಲೇಜಿನ ವಿದ್ಯಾರ್ಥಿಗಳು ಒಟ್ಟು 23 ಸ್ಪರ್ಧೆಗಳಲ್ಲಿ ಭಾಗವಹಿಸಿ ಏಳು ವಿಭಾಗದಲ್ಲಿ ಬಹುಮಾನ ಪಡೆದಿದ್ದಾರೆ.

ಕಾರ್ತಿಕೇಯ (ಏಕವ್ಯಕ್ತಿ ಪಾಶ್ಚಾತ್ಯ ಗಾಯನ) ಹಾಗೂ ನಿಧಿ ಮತ್ತು ತಂಡ (ಜನಪದ ನೃತ್ಯ) ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದು ದಕ್ಷಿಣ ವಲಯಕ್ಕೆ ಆಯ್ಕೆಯಾಗಿದ್ದಾರೆ.

ಪೂರ್ಣಾನಂದ (ಏಕವ್ಯಕ್ತಿ ಲಘು ಸಂಗೀತ), ಪ್ರಶಾಪ್(ಚರ್ಮವಾದ್ಯ), ದೀಪಕ್(ಮೂಕಾಭಿನಯ) ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಪಡೆದಿದ್ದಾರೆ. ಪ್ರಮೋದ್ ಭಾರದ್ವಾಜ್ (ಚರ್ಚಾಸ್ಪರ್ಧೆ), ವಿಶ್ವನಾಥ್ (ಸ್ಥಳದಲ್ಲಿ ಚಿತ್ರ ಬಿಡಿಸುವ ಸ್ಪರ್ಧೆ) ತೃತೀಯ ಸ್ಥಾನ ಪಡೆದಿದ್ದಾರೆ. ಒಟ್ಟಾರೆ ಪ್ರಶಸ್ತಿ ಗಳಿಕೆಯಲ್ಲಿ ದ್ವಿತೀಯ ಸ್ಥಾನ ಪಡೆದುಕೊಂಡಿದೆ.



ಕುವೆಂಪು ವಿಶ್ವವಿದ್ಯಾಲಯದಲ್ಲಿ ಆಯೋಜಿಸಿದ್ದ ಸಹ್ಯಾದ್ರಿ ಉತ್ಸವದಲ್ಲಿ ರನ್ನರ್‌ಅಪ್ ಪ್ರಶಸ್ತಿ ಪಡೆದ ಶೃಂಗೇರಿಯ ಜೆಸಿಬಿಎಂ ಕಾಲೇಜು ವಿದ್ಯಾರ್ಥಿಗಳು.

Scanned by CamScanner

ಕನ್ನಡಪ್ರಭ
ಮಂಗಳವಾರ 17.11.2015
ತೀರ್ಥಹಳ್ಳಿ

ಮಕ್ಕಳಲ್ಲಿ ಹೊಸತನ ಬೇಕು

ವಿಜ್ಞಾನ ಪ್ರತಿಭಾನ್ವೇಷಣೆ ಕಾರ್ಯಕ್ರಮ ಉದ್ಘಾಟನೆ



ಶೃಂಗೇರಿ ಜೆಸಿಬಿಎ ಕಾಲೇಜಿನಲ್ಲಿ ನಡೆದ ಸಹ್ಯಾದ್ರಿ ವಿಜ್ಞಾನ ಪ್ರತಿಭಾನ್ವೇಷಣೆ ಕಾರ್ಯಕ್ರಮವನ್ನು ಡಾ.ಪ್ರಬುದ್ಧ ಉದ್ಘಾಟಿಸಿದರು.

• **ಕನ್ನಡಪ್ರಭ ವಾರ್ತೆ** ಶೃಂಗೇರಿ

ಪಟ್ಟಣದ ಶ್ರೀ ಜೆಸಿಬಿಎಂ ಕಾಲೇಜಿನಲ್ಲಿ ಸಹ್ಯಾದ್ರಿ ವಿಜ್ಞಾನ ಪ್ರತಿಭಾನ್ವೇಷಣೆ ಕಾರ್ಯಕ್ರಮ ನಡೆಯಿತು.

ಮಂಗಳೂರಿನ ಸಹ್ಯಾದ್ರಿ ಎಂಜಿನಿಯರಿಂಗ್-ಮ್ಯಾನೇಜ್‌ಮೆಂಟ್ ಕಾಲೇಜಿನ ಡಾ.ಪ್ರಬುದ್ಧ ಕಾರ್ಯಕ್ರಮ ಉದ್ಘಾಟಿಸಿ, ವಿದ್ಯಾರ್ಥಿಗಳಲ್ಲಿ ಪ್ರಯೋಗಶೀಲ ಮನಸ್ಸು ಇರಬೇಕು. ಅದನ್ನು ಕ್ರಿಯಾಶೀಲಗೊಳಿಸಿ ಪ್ರತಿಭೆಯನ್ನು ಒರೆಗೆ ಹಚ್ಚಬೇಕು. ಆಗ ಮಾತ್ರ ಸೂಕ್ತ ಪ್ರತಿಭೆ ಹೊರಬರಲು ಸಾಧ್ಯ ಎಂದರು.

ಮಲೆನಾಡಿನಲ್ಲಿ ಅಡಕೆ ಸುಲಿಯುವ ಯಂತ್ರ ಬಂದಿದ್ದು ಇತ್ತೀಚೆಗೆ. ಅದಕ್ಕೆ ಕಾರಣ ಪ್ರಯೋಗಶೀಲತೆ. ನಮ್ಮಲ್ಲಿ ಪ್ರಯೋಗಶೀಲತೆ ಕುಂಟುತ್ತಾ ಸಾಗಿದೆ. ಅದನ್ನು ವೇಗಗೊಳಿಸಲು ಇಂತಹ ಕಾರ್ಯಕ್ರಮಗಳು ಸಹಕಾರಿ ಎಂದು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ನಿಶಾಂತ್, ವಿಜ್ಞಾನ ಪ್ರತಿಭೆ ಅನ್ವೇಷಣೆ ಕಾರ್ಯಕ್ರಮದ ಉದ್ದೇಶ ಹಾಗೂ ಸಹ್ಯಾದ್ರಿ ಕಾಲೇಜಿನ ವಿಜ್ಞಾನ ಕಾರ್ಯಕ್ರಮದ ಮುಂದಿನ ರೂಪುರೇಷೆಗಳನ್ನು ವಿವರಿಸಿದರು.

ಕಾಲೇಜಿನ ಪ್ರಾಂಶುಪಾಲ ಎಚ್.ಸಿ ವೀರಪ್ಪ ಗೌಡ ಅಧ್ಯಕ್ಷತೆ ವಹಿಸಿ, ವೈಜ್ಞಾನಿಕ ಮನೋಭಾವಮೂಡಿಸಲು, ವಿದ್ಯಾರ್ಥಿಗಳ ಪ್ರತಿಭೆ ಗುರುತಿಸಲು ಸಹ್ಯಾದ್ರಿ ಕಾಲೇಜ್ ರವರ ಪ್ರಯತ್ನ ಅಭಿನಂದನಾರ್ಹ ಎಂದರು.

ಆಯೋಜಕರಾದ ಸಹ್ಯಾದ್ರಿ ಕಾಲೇಜ್‌ನ ಗಣಕಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಸುನಿಲ್ ಮತ್ತು ವಿಜ್ಞಾನ ಸಂಘದ ಅಧ್ಯಕ್ಷ ಶ್ರೀನಿವಾಸ್ ಜಿ. ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಉಪನ್ಯಾಸಕರಾದ ಪ್ರಶಾಂತ್ ಕುಮಾರ್ ಸ್ವಾಗತಿಸಿ ಎ.ಜಿ ಪ್ರಶಾಂತ್ ನಿರೂಪಿಸಿದರು. ಶ್ರೀನಿವಾಸ್ ಜಿ. ವಂದಿಸಿದರು. ಪದವಿ ಪೂರ್ವ ವಿದ್ಯಾರ್ಥಿಗಳಿಗೆ ಜ್ಞಾನ ಮಾದರಿ ಸ್ಪರ್ಧೆ ಏರ್ಪಡಿಸಲಾಗಿತ್ತು.

Scanned by CamScanner

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI • SHIVAMOGGA
ಶುಕ್ರವಾರ
13 ನವೆಂಬರ್ 2015
13 NOVEMBER 2015
11
ಶೋಕೆಲ್ ಎಕ್ಸ್ಪ್ರೆ

■ ವಿಜ್ಞಾನ ಮಾದರಿ ಸ್ಪರ್ಧೆಯಲ್ಲಿ ಐಎಫ್‌ಎಸ್ ಅಧಿಕಾರಿ ಡಾ. ಪ್ರಬುದ್ಧ ಅಭಿಮತ

ಪ್ರಯೋಗಶೀಲ ಮನಸ್ಸಿದ್ದರೆ ಪ್ರತಿಭೆ ಅನಾವರಣ

ಶೃಂಗೇರಿ: ವಿದ್ಯಾರ್ಥಿಗಳು ತಮಗಿರುವ ಪ್ರಯೋಗಶೀಲಮನಸ್ಸನ್ನುಕ್ರಿಯಾಶೀಲಗೊಳಿಸಿದರೆ ಪ್ರತಿಭೆ ಹೊರಹೊಮ್ಮಲು ಸಾಧ್ಯ ಎಂದು ಗುಜರಾತ್‌ನ ಐಎಫ್‌ಎಸ್ ಅಧಿಕಾರಿ ಡಾ. ಎಚ್.ಆರ್.ಪ್ರಬುದ್ಧ ಹೇಳಿದರು.

ಜೆಸಿಬಿಎಂ ಕಾಲೇಜಿನಲ್ಲಿ ಕಾಲೇಜಿನ ವಿಜ್ಞಾನ ವಿಭಾಗ, ಮಂಗಳೂರು ಸಹ್ಯಾದ್ರಿ ಇಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ಕಾಲೇಜಿನಿಂದ ಪದವಿಪೂರ್ವ ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ 'ಸಹ್ಯಾದ್ರಿ ಟ್ಯಾಲೆಂಟ್ ಹಂಟ್' ವಿಜ್ಞಾನ ಮಾದರಿ ಸ್ಪರ್ಧೆ ಉದ್ಘಾಟಿಸಿ ಮಾತನಾಡಿದರು.

ಪ್ರತಿಭೆ ಆಂತರ್ಗತವಾದದ್ದು. ಅದಕ್ಕೆ ಸರಿಯಾದ ಪ್ರೋತ್ಸಾಹ ಸಿಕ್ಕಾಗ ಸೃಜನಶೀಲವಾಗಿ ಅನಾವರಣಗೊಳ್ಳುತ್ತದೆ ಎಂದು ಅಭಿಪ್ರಾಯಪಟ್ಟರು.

ಮಲೆನಾಡಿನಲ್ಲಿ ಬಳಕೆಗೆ ಬಂದಿರುವ ಅಡಕೆ ಸುಲಿಯುವ ಯಂತ್ರ ರೂಪಿಸಲು ತಂತ್ರಜ್ಞಾನದ



ಜೆಸಿಬಿಎಂ ಕಾಲೇಜಿನಲ್ಲಿ ಪದವಿಪೂರ್ವ ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ ಸಹ್ಯಾದ್ರಿ ಟ್ಯಾಲೆಂಟ್ ಹಂಟ್ ಸ್ಪರ್ಧೆಯನ್ನು ಡಾ. ಎಚ್.ಆರ್.ಪ್ರಬುದ್ಧ ಉದ್ಘಾಟಿಸಿದರು.

ಆವಿಷ್ಕಾರದ ಜತೆ ಪ್ರಯೋಗಶೀಲತೆ ಮುಖ್ಯ ಕಾರಣ. ಸಾಕಷ್ಟು ಜನರಿಗೆ ತಂತ್ರಜ್ಞಾನದ ಅರಿವು ಇದೆ. ಈ ಅರಿವನ್ನು ಪ್ರಯೋಗಶೀಲ ಮನೋಭಾವದತ್ತ ವಾಲಿಸಿಕೊಂಡರೆ ವೈಜ್ಞಾನಿಕ ಸಾಧನೆ ಮಾಡಬಹುದು. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳಿಗೆ ಸಾಕಷ್ಟು ಉತ್ತಮ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಿರುವುದು ಶ್ಲಾಘನೀಯ ಎಂದರು.

ಪ್ರಾಚಾರ್ಯ ಎಚ್.ಸಿ.ವೀರಪ್ಪ ಗೌಡ, ಸಹ್ಯಾದ್ರಿ ಕಾಲೇಜಿನ ಗಣಕಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಸುನೀಲ್, ಶ್ರೀನಿವಾಸ್, ಪ್ರಶಾಂತ್, ಪ್ರಶಾಂತ್‌ಕುಮಾರ್, ನಿಶಾಂತ್ ಇದ್ದರು.

Scanned by CamScanner

ಸಹ್ಯಾದ್ರಿ ಉತ್ಸವ, ಛಾಯಾಚಿತ್ರ ಸ್ಪರ್ಧೆ, ಕೆ.ಜಿ. ವಿಶ್ವನಾಥ್ ತೃತೀಯ



ಶಂಕರಘಟ್ಟ: ಇಲ್ಲಿನ ಕುವೆಂಪು ವಿಶ್ವವಿದ್ಯಾಲಯದ ಆವರಣದಲ್ಲಿ ಇತ್ತೀಚೆಗೆ ನಡೆದ ಸಹ್ಯಾದ್ರಿ ಉತ್ಸವದಲ್ಲಿ, ಶೃಂಗೇರಿ ಶ್ರೀ ಜೆ. ಸಿ. ಬಿ. ಎಂ. ಕಾಲೇಜಿನ ತೃತೀಯ ಬಿ.ಕಾಂ ವಿದ್ಯಾರ್ಥಿ ಕೆ.ಜಿ. ವಿಶ್ವನಾಥ್, ಸ್ಥಳದಲ್ಲೆ ಛಾಯಾಚಿತ್ರ ತೆಗೆಯುವ ಸ್ಪರ್ಧೆಯಲ್ಲಿ ಭಾಗವಹಿಸಿ ತೃತೀಯ ಸ್ಥಾನವನ್ನು ಪಡೆದಿದ್ದಾರೆ. ಈ ಪ್ರತಿಭಾವಂತ ವಿದ್ಯಾರ್ಥಿ ಪಟ್ಟಣದ ಹೆಸರಾಂತ ಛಾಯಗ್ರಾಹಕರಾಗಿದ್ದ ದಿ.ಗಣಪತಿಭಟ್ ರವರ ಸುಪುತ್ರರಾಗಿದ್ದಾರೆ. ಇವರ ಈ ಮಹತ್ತರ ಸಾಧನೆಗೆ ಕಾಲೇಜಿನ ಪ್ರಾಂಶುಪಾಲರಾದ ಡಾ.ಹೆಚ್.ಸಿ. ವೀರಪ್ಪಗೌಡರು ಅಭಿನಂದಿಸಿದ್ದಾರೆ.

Scanned by CamScanner

ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕತೆ ಬೆಳೆಸಿ

ನಿಮ್ಮ ಪತ್ರಿಕೋದ

■ ವಿಕ ಸುದ್ದಿಲೋಕ, ಶೃಂಗೇರಿ

ಮಲೆನಾಡಿನಲ್ಲಿ ಅಡಕೆ ಸುಲಿಯುವ ಯಂತ್ರ ಬಂದಿದ್ದು ಇತ್ತೀಚೆಗೆ. ಅದಕ್ಕೆ ಕಾರಣ ಪ್ರಯೋಗಶೀಲತೆ, ನಮ್ಮಲ್ಲಿ ಪ್ರಯೋಗಶೀಲತೆ ಕುಂಟುತ್ತಾ ಸಾಗಿದೆ ಎಂದು ಐಎಫ್‌ಎಸ್ ಅಧಿಕಾರಿ ಡಾ. ಎಚ್.ಆರ್.ಪ್ರಬುದ್ಧ ಹೇಳಿದರು.

ಅವರು ಮಂಗಳೂರಿನ ಸಹ್ಯಾದ್ರಿ ಎಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ಕಾಲೇಜು, ವಿಜ್ಞಾನ ಸಂಘ ಆಶ್ರಯದಲ್ಲಿ ಜೆಸಿಬಿಎಂ ಕಾಲೇಜಿನಲ್ಲಿ ಪದವಿಪೂರ್ವ ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ ವಿಜ್ಞಾನ ಮಾದರಿ ಸ್ಪರ್ಧೆ ಉದ್ಘಾಟಿಸಿ ಮಾತನಾಡಿದರು.

ಪ್ರಯೋಗಶೀಲ ಮನಸ್ಸು ಇಂದಿನ ವಿದ್ಯಾರ್ಥಿಗಳಲ್ಲಿ ಯಥೇಚ್ಛವಾಗಿರುತ್ತದೆ. ಅದನ್ನು ಕ್ರಿಯಾಶೀಲಗೊಳಿಸಿ ಪ್ರತಿಭೆಯನ್ನು ಒರೆಗೆ ಹಚ್ಚಬೇಕು. ಆಗ, ಸೂಕ್ತ ಪ್ರತಿಭೆ ಹೊರಬರಲು ಸಾಧ್ಯ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಕಾಲೇಜಿನ ಪ್ರಾಚಾರ್ಯ ಡಾ.ಎಚ್.ಸಿ.ವೀರಪ್ಪಗೌಡ, ವೈಜ್ಞಾನಿಕ ಮನೋಭಾವ ಮೂಡಿಸಲು ಹಾಗೂ ವಿದ್ಯಾರ್ಥಿಗಳ ಪ್ರತಿಭೆ ಗುರುತಿಸಲು ಸಹ್ಯಾದ್ರಿ ಕಾಲೇಜ್ ಅವರ ಪ್ರಯತ್ನ ಅಭಿನಂದನಾರ್ಹ ಎಂದರು.



ಶೃಂಗೇರಿ ಜೆಸಿಬಿಎಂ ಕಾಲೇಜಿನ ಪದವಿಪೂರ್ವ ವಿದ್ಯಾರ್ಥಿಗಳಿಗೆ ಏರ್ಪಡಿಸಲಾಗಿದ್ದ ಸಹ್ಯಾದ್ರಿ ಟ್ಯಾಲೆಂಟ್ ಹಂಟ್ 2015-16 ಸ್ಪರ್ಧೆಯನ್ನು ಡಾ ಎಚ್.ಆರ್.ಪ್ರಬುದ್ಧ ಉದ್ಘಾಟಿಸಿದರು.

ಸಹ್ಯಾದ್ರಿ ಕಾಲೇಜ್‌ನ ಗಣಕಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಸುನೀಲ್ ಮತ್ತು ವಿಜ್ಞಾನ ಸಂಘದ ಅಧ್ಯಕ್ಷ ಜಿ.ವಿ.ಶ್ರೀನಿವಾಸ್ ಹಾಜರಿದ್ದರು.

ಪ್ರಶಾಂತ್ ಕುಮಾರ್ ಸ್ವಾಗತಿಸಿ, ನಿಶಾಂತ್ ಪ್ರಾಸ್ತಾವಿಕ ಮಾತನಾಡಿದರು. ಎ.ಜಿ ಪ್ರಶಾಂತ್ ನಿರೂಪಿಸಿ, ಜಿ.ವಿ.ಶ್ರೀನಿವಾಸ್ ವಂದಿಸಿದರು. ಕಾರ್ಯಕ್ರಮ ಆಯೋಜಿಸಲಾಗಿತ್ತು.

n Media Company Limited, Sy. No.45/2, Savalanga Road, Navule, Shivamogga - 577 204.
erved. Reproduction in whole or part without permission is prohibited.

Vol. 2 Issue no.41

ವಿ-ಕ-15.11-೮

Scanned by CamScanner

ಪ್ರಜಾ ವಾಣಿ ಶುಕ್ರವಾರ • ನವೆಂಬರ್ 13, 2015

ಮನಸ್ಸು ಕ್ರಿಯಾಶೀಲಗೊಂಡಾಗ ಪ್ರತಿಭೆ ಅನಾವರಣ

ಶೃಂಗೇರಿ: ಪ್ರಯೋಗಶೀಲ ಮನಸ್ಸು ಇಂದಿನ ವಿದ್ಯಾರ್ಥಿಗಳಲ್ಲಿ ಯಥೇಚ್ಛವಾಗಿದ್ದು, ಅದನ್ನು ಕ್ರಿಯಾಶೀಲಗೊಳಿಸಿ ಪ್ರತಿಭೆಯನ್ನು ಒರೆಗೆ ಹಚ್ಚಬೇಕು. ಆಗ ಮಾತ್ರ ಸೂಕ್ತ ಪ್ರತಿಭೆ ಹೊರಬರಲು ಸಾಧ್ಯ ಎಂದು ಗುಜರಾತ್ ಅರಣ್ಯಾಧಿಕಾರಿ ಡಾ. ಎಚ್. ಆರ್. ಪ್ರಬುದ್ಧ ಹೇಳಿದರು.

ಮಂಗಳೂರು ಸಹ್ಯಾದ್ರಿ ಎಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ಕಾಲೇಜು ಹಾಗೂ ಬಿಸಿಬಿಎಂ ಕಾಲೇಜು ವಿಜ್ಞಾನ ಸಂಘದ ಸಂಯುಕ್ತಾಶ್ರಯದಲ್ಲಿ ಪದವಿಪೂರ್ವ ವಿದ್ಯಾರ್ಥಿಗಳಿಗೆ ಇತ್ತೀಚೆಗೆ ಏರ್ಪಡಿಸಿದ್ದ ವಿಜ್ಞಾನ ಮಾದರಿ ಸ್ಪರ್ಧೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಲೆನಾಡಿನಲ್ಲಿ ಅಡಿಕೆ ಸುಲಿಯುವ ಯಂತ್ರ ಬಂದಿದ್ದು ಇತ್ತೀಚೆಗೆ. ಅದಕ್ಕೆ ಕಾರಣ ಪ್ರಯೋಗಶೀಲತೆ. ನಮ್ಮಲ್ಲಿ ಪ್ರಯೋಗಶೀಲತೆ ಕುಂಟುತ್ತಾ ಸಾಗಿದೆ. ಅದನ್ನು ವೇಗಗೊಳಿಸಲು ಇಂತಹ ಕಾರ್ಯಕ್ರಮಗಳು ಸಹಕಾರಿ ಎಂದರು.



ಶೃಂಗೇರಿ ಬಿಸಿಬಿಎಂ ಕಾಲೇಜಿನ ವಿಜ್ಞಾನ ಸಂಘದಿಂದ ಪದವಿಪೂರ್ವ ವಿದ್ಯಾರ್ಥಿಗಳಿಗೆ ಇತ್ತೀಚೆಗೆ ಏರ್ಪಡಿಸಿದ್ದ ಸಹ್ಯಾದ್ರಿ ಟ್ಯಾಲೆಂಟ್ ಹಂಟ್-201516 ಸ್ಪರ್ಧೆಯನ್ನು ಡಾ.ಎಚ್. ಆರ್.ಪ್ರಬುದ್ಧ ಉದ್ಘಾಟಿಸಿದರು

ವಿಜ್ಞಾನ ಸಂಘದ ನಿಶಾಂತ್ ಅವರು 'ವಿಜ್ಞಾನ ಪ್ರತಿಭೆ ಅನ್ವೇಷಣೆ' ಕಾರ್ಯಕ್ರಮದ ಉದ್ದೇಶ ಹಾಗೂ ಸಹ್ಯಾದ್ರಿ ಕಾಲೇಜಿನ ವಿಜ್ಞಾನ ಕಾರ್ಯಕ್ರಮದ ಮುಂದಿನ ರೂಪುರೇಶೆಗಳನ್ನು ವಿವರಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಬಿಸಿಬಿಎಂ ಕಾಲೇಜಿನ ಪ್ರಾಚಾರ್ಯ ಎಚ್.ಸಿ.ವೀರಪ್ಪಗೌಡ ಮಾತನಾಡಿ, ವೈಜ್ಞಾನಿಕ ಮನೋಭಾವ ಮೂಡಿಸಲು ಹಾಗೂ ವಿದ್ಯಾರ್ಥಿಗಳ ಪ್ರತಿಭೆ ಗುರುತಿಸಲು ಸಹ್ಯಾದ್ರಿ ಕಾಲೇಜಿನವರ ಪ್ರಯತ್ನ ಅಭಿನಂದನಾರ್ಹ ಎಂದರು.

ಸಹ್ಯಾದ್ರಿ ಕಾಲೇಜಿನ ಗಣಕಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಸುನಿಲ್ ಮತ್ತು ವಿಜ್ಞಾನ ಸಂಘದ ಅಧ್ಯಕ್ಷ ಶ್ರೀನಿವಾಸ್ ಜಿ.ವಿ.ಇದ್ದರು. ಉಪನ್ಯಾಸಕ ಪ್ರಶಾಂತ್ ಕುಮಾರ್ ಸ್ವಾಗತಿಸಿ ಎ.ಜಿ ಪ್ರಶಾಂತ್ ನಿರೂಪಿಸಿದರು. ಶ್ರೀನಿವಾಸ್ ಜಿ.ವಿ.ವಂದಿಸಿದರು.

ಇದೇ ಸಂದರ್ಭ ಪದವಿಪೂರ್ವ ವಿದ್ಯಾರ್ಥಿಗಳಿಗೆ 'ವಿಜ್ಞಾನ ಮಾದರಿ ಸ್ಪರ್ಧೆ' ಏರ್ಪಡಿಸಲಾಗಿತ್ತು.

Scanned by CamScanner

ಪ್ರಜಾವಾಣಿ ಭಾನುವಾರ ನವೆಂಬರ್ 8, 2015



ಸಹ್ಯಾದ್ರಿ ಉತ್ಸಾಹದಲ್ಲಿ ಉತ್ತಮ ಸಾಧನೆ ತೋರಿದ ಶೃಂಗೇರಿ ಜೆ.ಸಿ.ಬಿ.ಎಂ. ಕಾಲೇಜಿನ ಸಾಂಸ್ಕೃತಿಕ ತಂಡವನ್ನು ಪ್ರಾಚಾರ್ಯ ಎಚ್.ಸಿ,ವೀರಪ್ಪಗೌಡ ಹಾಗೂ ಆಡಳಿತ ಮಂಡಳಿ ಅಭಿನಂದಿಸಿತು.

ಸಹ್ಯಾದ್ರಿ ಉತ್ಸವ: ಜೆಸಿಬಿಎಂ ದ್ವಿತೀಯ

ಪ್ರಜಾವಾಣಿ ವಾರ್ತೆ

ಶೃಂಗೇರಿ: ಕುವೆಂಪು ವಿಶ್ವವಿದ್ಯಾಲಯ ಸಹ್ಯಾದ್ರಿ ಉತ್ಸವದ ಅಂಗವಾಗಿ ಇತ್ತೀಚಿಗೆ ಏರ್ಪಡಿಸಿದ್ದ ಅಂತರ ಕಾಲೇಜು ಸಾಂಸ್ಕೃತಿಕ ಸಹ್ಯಾದ್ರಿ ಉತ್ಸವದಲ್ಲಿ ಜೆ.ಸಿ.ಬಿ.ಎಂ. ಕಾಲೇಜು ದ್ವಿತೀಯ ಸ್ಥಾನ ಗಳಿಸುವ ಮೂಲಕ ರನ್ನರ್ ಅಫ್ ಪ್ರಶಸ್ತಿ ಪಡೆಯಿತು.

ಸಾಂಸ್ಕೃತಿಕ ಸ್ಪರ್ಧೆಯಲ್ಲಿ 40 ಕಾಲೇಜುಗಳು ಪಾಲ್ಗೊಂಡಿದ್ದು, ಜೆಸಿಬಿಎಂ ಕಾಲೇಜಿನ 32 ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಕಾಲೇಜಿನ ಎಂ.ಎಸ್. ಕಾರ್ತಿಕೇಯನ್ ಪಾಶ್ಚಾತ್ಯ ಗಾಯನ ಹಾಗೂ ನಿಧಿ ಮತ್ತು ತಂಡ ಜನಪದ ನೃತ್ಯದಲ್ಲಿ ಪ್ರಥಮ ಸ್ಥಾನ, ಪೂರ್ಣಾನಂದ ಲಘು ಸಂಗೀತ, ಪ್ರತಾಪ್ ಚರ್ಮವಾದ್ಯ ಹಾಗೂ ದೀಪಕ್ ಮತ್ತು ತಂಡ ಮೂಕಾಭಿನಯದಲ್ಲಿ ದ್ವಿತೀಯ ಸ್ಥಾನ ಪಡೆದರು. ಪ್ರಮೋದ್ ಭಾರದ್ವಾಜ್ ಚರ್ಚಾಸ್ಪರ್ಧೆ ಹಾಗೂ ವಿಶ್ವನಾಥ್ ಸ್ಥಳದಲ್ಲಿ ಛಾಯಾಚಿತ್ರ ಸ್ಪರ್ಧೆಯಲ್ಲಿ ತೃತೀಯ ಸ್ಥಾನ ಗಳಿಸಿದರು.

ಸಹ್ಯಾದ್ರಿ ಉತ್ಸಾಹದಲ್ಲಿ ಉತ್ತಮ ಸಾಧನೆ ತೋರಿದ ಕಾಲೇಜಿನ ಸಾಂಸ್ಕೃತಿಕ ತಂಡವನ್ನು ಪ್ರಾಚಾರ್ಯ ಎಚ್.ಸಿ,ವೀರಪ್ಪಗೌಡ ಹಾಗೂ ಆಡಳಿತ ಮಂಡಳಿ ಅಭಿನಂದಿಸಿತು.

Scanned by CamScanner

ಸಂಯುಕ್ತ ಕರ್ನಾಟಕ ಗುರುವಾರ, ೮ ನವೆಂಬರ್, 2015, ದಾವಣಗೆರೆ

ಜೆಸಿಬಿಎಂ ಕಾಲೇಜಿಗೆ ರನ್ನರ್ ಅಪ್ ಪ್ರಶಸ್ತಿ



ಕುವೆಂಪು ವಿ.ವಿ.ಯ ಅಂತರಕಾಲೇಜು ಸಹ್ಯಾದ್ರಿ ಉತ್ಸವದ ಸ್ಪರ್ಧೆಗಳಲ್ಲಿ ವಿಜೇತ ಶೃಂಗೇರಿ ಜೆಸಿಬಿಎಂ ಕಾಲೇಜಿನ ವಿದ್ಯಾರ್ಥಿಗಳು.

ಶೃಂಗೇರಿ

ಇತ್ತೀಚೆಗೆ ನಡೆದ ಕುವೆಂಪು ವಿಶ್ವವಿದ್ಯಾಲಯದ ಅಂತರ ಕಾಲೇಜು ಸಹ್ಯಾದ್ರಿ ಉತ್ಸವದಲ್ಲಿ ಶೃಂಗೇರಿಯ ಜೆಸಿಬಿಎಂ ಕಾಲೇಜು ರನ್ನರ್ ಅಪ್ ಪ್ರಶಸ್ತಿಯನ್ನು ಗಳಿಸಿದೆ.

ಕುವೆಂಪು ವಿ.ವಿ.ಯ ಪಠ್ಯೇತರ ಚಟುವಟಿಕೆಗಳ ವಿಭಾಗವು ಈ ಸಹ್ಯಾದ್ರಿ ಉತ್ಸವವನ್ನು ಆಯೋಜಿಸಿತ್ತು. ಇದರಲ್ಲಿನ ಅಂತರ ಕಾಲೇಜುಗಳ ಸಾಂಸ್ಕೃತಿಕ ಸ್ಪರ್ಧಾ ವಿಭಾಗಕ್ಕೆ ಸ್ಥಳೀಯ ಕಾಲೇಜಿನ 32 ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಒಟ್ಟು 32 ಸ್ಪರ್ಧೆಗಳ ಪೈಕಿ ಏಳು ವಿಭಾಗಗಳಲ್ಲಿ ಇಲ್ಲಿಯ ವಿದ್ಯಾರ್ಥಿಗಳು ಬಹುಮಾನ ಪಡೆದರು. ಕಾಲೇಜಿನ ತಂಡದ ನೇತೃತ್ವವನ್ನು ಸಾಂಸ್ಕೃತಿಕ ಚಟುವಟಿಕೆಗಳ ಕಾರ್ಯದರ್ಶಿ ಯಶವಂತಿ ಸಾಲಿಯಾನ್ ಹಾಗೂ ಪ್ರಾಧ್ಯಾಪಕರಾದ ಅಕ್ಷಯ್, ಪ್ರದೀಪ್ ಮತ್ತು ವಾಣಿ ಅಕ್ಷಯ್ ವಹಿಸಿದ್ದರು.

ವಿವಿಧ ಸ್ಪರ್ಧೆಗಳಲ್ಲಿ ಕಾರ್ತಿಕೇಯ ಎಂ.ಎಸ್.(ಪ್ರಥಮ), ನಿಧಿ ಮತ್ತು ತಂಡ (ಪ್ರಥಮ), ಪೂರ್ಣಾನಂದ(ದ್ವಿತೀಯ), ಪ್ರತಾಪ್(ದ್ವಿತೀಯ) ದೀಪಕ್ ಮತ್ತು ತಂಡ(ದ್ವಿತೀಯ), ಪ್ರಮೋದ್ ಭಾರದ್ವಜ್(ತೃತೀಯ), ವಿಶ್ವನಾಥ್(ತೃತೀಯ) ಬಹುಮಾನ ಪಡೆದರು.

ಸ್ಪರ್ಧೆಯಲ್ಲಿದ್ದ 40 ಕಾಲೇಜುಗಳ ನಡುವೆ ಶೃಂಗೇರಿ ಕಾಲೇಜು ದ್ವಿತೀಯ ಸ್ಥಾನ ಪಡೆದುಕೊಂಡು ವಿ.ವಿ.ಮಟ್ಟದ ರನ್ನರ್ ಅಪ್ ಪ್ರಶಸ್ತಿ ಪಡೆಯಿತು. ತಂಡವನ್ನು ಪ್ರಾಂಶುಪಾಲ ಡಾ.ಹೆಚ್.ಸಿ. ವಿರಪ್ಪಗೌಡ ಅಭಿನಂದಿಸಿದ್ದಾರೆ.

Scanned by CamScanner

ವಿಜಯ ಕರ್ನಾಟಕ ವಿ | ಸೋಮವಾರ, 12 ಅಕ್ಟೋಬರ್ 2015, ಶಿವಮೊಗ್ಗ

ಏಕತೆ ಮೂಡಿಸುವ ಅನನ್ಯ ಶಕ್ತಿ ಧರ್ಮಕ್ಕಿದೆ: ಪ್ರೊ.ಜೋಗನ್

ಶೃಂಗೇರಿ: ಧಾರ್ಮಿಕ ಹಾಗೂ ರಾಜಕೀಯ ತತ್ವಗಳನ್ನು ಒಗ್ಗೂಡಿಸುವ ಮಹತ್ತರ ಶಾಕ್ತಿಯನ್ನು ನಿರ್ವಹಿಸುತ್ತಾ ಬಂದ ಧರ್ಮ, ಹೊಸತನ್ನವನ್ನು ನೀಡುತ್ತಾ ಬಂದಿದೆ ಎಂದು ಕುವೆಂಪು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಜೋಗನ್ ಶಂಕರ್ ಹೇಳಿದರು.

ಅವರು ಶನಿವಾರ ಚಿಟಿಬಿಎಂ ಕಾಲೇಜಿನಲ್ಲಿ ಮಠ-ಮಾನ್ಯಗಳ ಜಾತ್ಯತೀತ ನಿಲುವು ಕುರಿತ ವಿಚಾರ ಸಂಕಿರಣ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು. ಧರ್ಮ ವಿವಿಧತೆಯಲ್ಲಿ ಏಕತೆ ಒಗ್ಗೂಡಿಸಲು ಇರುವ ಅನನ್ಯ ಶಕ್ತಿ. ಸಾಮಾಜಿಕ ವ್ಯವಸ್ಥೆಗಳನ್ನು ಬೇರೆ ಬೇರೆ ಮಾಡುವುದು ಧರ್ಮವಲ್ಲ ಉನ್ನತವಾದ ಮೌಲ್ಯಗಳನ್ನು ನೀಡುವ, ಸಾಮಾಜದಲ್ಲಿ ಆಕ್ಷಯಿಶ್ವತವನ್ನು ತುಂಬುವ ಧರ್ಮ ಪರಂಪರೆಯ ದ್ಯೋತಕವಾಗಿ ಎಲ್ಲರ ಮನಸ್ಸುಗಳನ್ನು ಸೆಳೆಯುವಲ್ಲಿ ಯಶಸ್ಸು ಕಂಡಿದೆ ಎಂದರು.

ಧರ್ಮವನ್ನು ವಿವಿಧ ದೃಷ್ಟಿಕೋನದಿಂದ ನೋಡಿದಾಗ ಜಾತ್ಯತೀತ ನಿಲುವುಗಳನ್ನು ಸಮಾಜದಲ್ಲಿ ಅನಾವರಣಗೊಳಿಸಿದೆ. ಸಾಮಾಜಿಕ ನಿಯಂತ್ರಣವನ್ನು ತರುವಲ್ಲಿ ವಿಶಿಷ್ಟ ಪಾತ್ರ ವಹಿಸಿದ ಧರ್ಮ, ಮಾನವನ ನೈತಿಕತೆ, ಆಧ್ಯಾತ್ಮಿಕತೆ,



ಶೃಂಗೇರಿ ಚಿಟಿಬಿಎಂ ಕಾಲೇಜಿನಲ್ಲಿ ನಡೆದ ಮಠ-ಮಾನ್ಯಗಳ ಜಾತ್ಯತೀತ ನಿಲುವು ಕುರಿತ ವಿಚಾರ ಸಂಕಿರಣದ ಸಮಾರೋಪದಲ್ಲಿ ಕುವೆಂಪು ವಿ.ವಿ.ಯ ಕುಲಪತಿ ಪ್ರೊ.ಜೋಗನ್ ಶಂಕರ್ ಮಾತನಾಡಿದರು.

ಧಾರ್ಮಿಕತೆಯನ್ನು ಎತ್ತರಿಸುವಲ್ಲಿ ಮಹತ್ತರ ಪಾತ್ರ ವಹಿಸಿದೆ. ಹಲವಾರು ಪ್ರಶ್ನಾತೀತ ನಿಲುವಿಗೆ ಉತ್ತರ ನೀಡುವಲ್ಲಿ ಕಾಯಿದೆ,ಕಾನೂನುಗಳ ಕಟ್ಟುಕಟ್ಟಳೆ ಮನುಷ್ಯ-ಮನುಷ್ಯರ ನಡುವಿನ ಸಂಬಂಧಗಳಿಗೆ ಹೊಸತನದ ಮೌಲ್ಯವನ್ನು ನೀಡುವಲ್ಲಿ ಧರ್ಮ ಮುತುವರ್ಜಿ ವಹಿಸುತ್ತಾ ಬಂದಿದೆ ಎಂದರು.

ಚಿಟಿಬಿಎಂ ಪದವಿಪೂರ್ವ ಕಾಲೇಜು ಪ್ರಾಚಾರ್ಯ ಡಾ.ಸಿ.ವಿ.ಗಿರಿಧರಶಾಸ್ತ್ರಿ ಮಾತನಾಡಿ, ಸನಾತನ ಧರ್ಮ ಹಾಗೂ ಭಾರತೀಯ ತತ್ವಶಾಸ್ತ್ರ ಮೌಲ್ಯಗಳನ್ನು ವಿಶ್ವದಲ್ಲಿ ಸಾರಿದ ಏಕೈಕ ಧಾರ್ಮಿಕ ಸಂಸ್ಥೆ ಶ್ರೀಶಾರದಾಪೀಠಂ. ಇದಮಿತ್ಥಂ ಎಂಬ ನಿರ್ಣಯವನ್ನು ಹೇಳುವ ಸಾಮರ್ಥ್ಯ ಇಲ್ಲಿರುವ ಜಗದ್ಗುರು ಪರಂಪರೆಗೆ ಇದೆ ಎಂದರು.

ಸಮಾಜ ಮತ್ತು ಧರ್ಮವನ್ನು ಒಗ್ಗೂಡಿಸಿ ಏಕತೆಯೇ ನಮ್ಮ ಮೌಲ್ಯ ಎಂಬುದನ್ನು ವಿಶಿಷ್ಟವಾಗಿರಿಸಿದ ಏಕೈಕ ಧಾರ್ಮಿಕ ಸಂಸ್ಥೆ ಶ್ರೀಶಾರದಾಪೀಠ ಎಂದ ಅವರು, ಧರ್ಮದ ಕುರಿತು ಅಕಾಡೆಮಿ ವಲಯಗಳಲ್ಲಿ ಚರ್ಚೆ ನಡೆದಾಗ ಸಮಾಜದಲ್ಲಿ ಆರೋಗ್ಯಕರ ವಾತಾವರಣ ಕಾಣಬಹುದು ಎಂದರು. ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಚಾರ್ಯ ಡಾ.ಎಚ್.ಸಿ.ವೀರಭದ್ರಗೌಡ ಮಾತನಾಡಿ, ಶೃಂಗೇರಿ ಸಂಸ್ಥಾನ ವಿಜಯನಗರದ ಅಮ್ಮಡಿ ಹರಿಹರನ ಕಾಲವಾದ 1377ರಲ್ಲಿ 'ಮೂರುಸಾವಿರದ ಮೂರು ಜಡಹದ ಸೀಮೆ' ಎಂದು ಪ್ರಸಿದ್ಧಿಗೆ ಬಂದಿದೆ. ಅಂದಿನಿಂದ ಇಂದಿನವರೆಗೂ ಇಲ್ಲಿನ ಧಾರ್ಮಿಕ ಸಂಸ್ಥೆಯಾಡಳಿತ ವ್ಯವಸ್ಥೆ ಗುರುಪರಂಪರೆ ಏಕತೆಯ ಪರಿಕಲ್ಪನೆಗೆ ಆದ್ಯತೆ ನೀಡುತ್ತಾ ಬಂದಿದೆ ಎಂದರು. ಕಾಲೇಜಿನ ಪ್ರಾಧ್ಯಾಪಕರಾದ ಪ್ರಕಾಶ್, ದತ್ತಾತ್ರೇಯ ಮಾರ್ಪಳ್ಳಿ ಉಪಸ್ಥಿತರಿದ್ದರು.

Scanned by CamScanner

ಸಂಯುಕ್ತ ಕರ್ನಾಟಕ
ಭಾನುವಾರ | 11 | ಅಕ್ಟೋಬರ್ | 2015 | ದಾವಣಗೆರೆ

ಧರ್ಮದ ಆಚಾರಕ್ಕಿಂತ ನೈತಿಕತೆಯೇ ಮುಖ್ಯ



ಶೃಂಗೇರಿಯ ಜೆಸಿಬಿಎಂ ಕಾಲೇಜಿನ ವಿಚಾರ ಸಂಕಿರಣವನ್ನು ಆಚಾರ್ಯ ಸ್ವಾಮಿ ನಿತ್ಯಸ್ಥನಂದಜೀ ಮಹಾರಾಜ್ ಉದ್ಘಾಟಿಸಿ ಮಾತನಾಡಿದರು.

ಶೃಂಗೇರಿ

ಜೆಸಿಬಿಎಂ ಕಾಲೇಜಿನಲ್ಲಿ ಯುಜಿಸಿಯಿಂದ ಆಯೋಜಿಸಿದ್ದ ವಿಚಾರ ಸಂಕಿರಣವನ್ನು ಕೋಲ್ಕೊತ್ತ ಬೇಲೂರಿನ ಸ್ವಾಮಿ ವಿವೇಕಾನಂದ ಮಠದ ಪ್ರಶಿಕ್ಷಣ ಸಂಸ್ಥೆ ಆಚಾರ್ಯ ಸ್ವಾಮಿ ನಿತ್ಯಸ್ಥನಂದಜೀ ಮಹಾರಾಜ್ ಉದ್ಘಾಟಿಸಿದರು.

ಶ್ರೀಮಠದ ಜಾತ್ಯಾತೀತ ನಿಲುವಿನ ಹಿನ್ನೆಲೆಯಲ್ಲಿ ಯಾವುದೇ ಧರ್ಮದ ಆಚಾರಗಳಿಗಿಂತ ನೈತಿಕತೆಯೇ ಮುಖ್ಯವಾದುದು ಎಂದು ತಿಳಿಸಿದರು. ವಿಚಾರ ಸಂಕಿರಣದ ಮುನ್ನೋಟದ ಕುರಿತು ಮಾತನಾಡಿದ ಪ್ರೊ. ಪಿ.ಎಸ್.ನರಸಿಂಹಮೂರ್ತಿ ಯಾವುದೇ ಮಠ ಮಾನ್ಯಗಳ ಧಾರ್ಮಿಕ ಆಚರಣೆಯಲಿ ಸಾಮಾಜಿಕ ಕಳಕಳಿ ಮುಖ್ಯವಾಗಿರಬೇಕು ಎಂದರು.

ಕಾಲೇಜಿನ ಪ್ರಾಂಶುಪಾಲ ಡಾ.ಹೆಚ್.ಸಿ. ವೀರಪ್ಪಗೌಡರು ಬರೆದ 'ಚಾರಿತ್ರಿಕ ಹಿನ್ನೆಲೆಯಲ್ಲಿ ಶೃಂಗೇರಿ ಮಹಾಸಂಸ್ಥಾನದ ಆರ್ಥಿಕ ಅಧ್ಯಯನ' ಗ್ರಂಥವನ್ನು ನಿತ್ಯಸ್ಥನಂದಜೀ ಮಹಾರಾಜರು ಬಿಡುಗಡೆ ಮಾಡಿದರು. ವಿದ್ಯಾರ್ಥಿ ಕ್ಷೇಮಪಾಲನಾ ಅಧಿಕಾರಿ ದತ್ತಾತ್ರೇಯ ಮಾರ್ಪಳ್ಳಿ ಪುಸ್ತಕದ ವಿಮರ್ಷಿಸಿದರು. ಪ್ರಕಾಶಕ ಛಾಯಾಪತಿ ಪುಸ್ತಕ ಹಾಗು ಪ್ರಕಾಶನದ ಬಗ್ಗೆ ಮಾತನಾಡಿದರು. ಸಿ.ವಿ.ಗಿರಿಧರಶಾಸ್ತ್ರೀ ಪರಿಚಯಿಸಿದರು. ಸಂಕಿರಣದ ಸಂಚಾಲಕ ಡಾ.ಕೆ.ಪಿ. ಪ್ರಕಾಶ್ ವಂದಿಸಿದರು.

Scanned by CamScanner

ಶ್ರೀ ಜೆ.ಸಿ.ಬಿ.ಎಂ. ಕಾಲೇಜಿನ ಕಣ್ಮಣಿ ಕೃಷ್ಣಪ್ಪಯ್ಯ



ಶ್ರೀ ಜೆ.ಸಿ.ಬಿ.ಎಂ ಕಾಲೇಜಿನಲ್ಲಿ ಪ್ರಾಚಾರ್ಯರಾಗಿ ದೀರ್ಘಕಾಲ ಸೇವೆ ಸಲ್ಲಿಸಿ ಜನಾನುರಾಗಿಗಳಾಗಿದ್ದು ಅನೇಕ ಶಿಷ್ಯ ಪರಂಪರೆಯನ್ನು ಬೆಳೆಸಿದ್ದ ಕಾಲೇಜಿನ ಪೂರ್ವತೋಮುಖ ಅಭಿವೃದ್ಧಿಯ ರೂವಾರಿಯಾಗಿದ್ದವರು ಪ್ರೊ. ಎಂ.ಕೃಷ್ಣಪ್ಪಯ್ಯನವರು ಕಾಲೇಜು ಪ್ರಾರಂಭವಾದಂದಿನಿಂದ ಮೂವತ್ತು ವರ್ಷಗಳ ಕಾಲ ಸಾರ್ಥಕ ಸೇವೆಸಲ್ಲಿಸಿ ಸಾರ್ವಜನಿಕರ ಮನ್ನಣೆಗೆ ಪಾತ್ರರಾಗಿದ್ದ ಶ್ರೀಯುತರು ವಿದ್ಯಾರ್ಥಿಗಳ ಪ್ರಗತಿ ಹಾಗೂ ಹಿತರಕ್ಷಣೆಗಾಗಿ ಸಂಪೂರ್ಣವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಯುವ ಅಧ್ಯಾಪಕರಿಗೆ ಪ್ರೀತಿಯಿಂದ ಮಾರ್ಗದರ್ಶನ ಮಾಡಿ ಧೈರ್ಯ ತುಂಬಿ ಯಶಸ್ವಿ ಅಧ್ಯಾಪಕರಾಗಲು ಪ್ರೇರಕರಾಗಿದ್ದರು. ಗಂಭೀರ ಚಿಂತನೆ, ಕೋಮಲ ಅಂತರಂಗ ಶ್ರೀಯುತರು ಶಿಸ್ತಿನ ಪ್ರತಿಮೂರ್ತಿಯಾಗಿದ್ದು, ನುಡಿದಂತೆ ನಡೆಯುವ ಮಹಾನೀಯರು. ಶ್ರೀಯುತರಿಗೆ ಕಾಲೇಜಿನ ಮೇಲಿದ್ದ ಅಭಿಮಾನ ನಿರಂತರವಾದುದು. ಅವರ ರೀತಿ ನೀತಿಗಳು, ಪ್ರೀತಿ ವಿಶ್ವಾಸಗಳು ಸದಾ ಮಾರ್ಗದರ್ಶಕವೂ, ಪ್ರೇರಕವೂ ಆಗಿವೆ. ದೃಢ ಮೈಕಟ್ಟು, ಸರಳ ಬಿಡುಗೆ-ತೊಡುಗೆ ಗಂಭೀರ ನಡೆ ಇದು ಕೃಷ್ಣಪ್ಪಯ್ಯನವರ ಬಹಿರಂಗ ನೋಟ ಆದರೆ ಅಂತರಂಗದಲ್ಲಿ ಅವರದು ಅತ್ಯಂತ ಮೃದು ಸ್ವಭಾವ, ಪರೋಪಕಾರ, ವಿದಾರ್ಯ, ಮಿತಭಾಷಿ ಮೃದುಮಾತು, ಕಾರ್ಯದಕ್ಷತೆ ವಿಕ್ಷಣ ಪ್ರಜ್ಞೆ ಅವರ ವ್ಯಕ್ತಿತ್ವಕ್ಕೆ ಮೆರಗನ್ನಾತ್ತಿರುವ ಸದ್ಗುಣಗಳು. ದಣಿವರಿಯದ ದುಡಿಮೆ, ಅಸಾಧಾರಣ ಸೃಜನ ಶಕ್ತಿ, ಸೂಕ್ಷ್ಮ ವಿವೇಚನೆ, ಮುತ್ಸದ್ದಿತನ, ಶಿಸ್ತು ಪ್ರೇಮ, ವಿಶಿಷ್ಟ ಆಡಳಿತ ವೈಖರಿ ನಿಜಕ್ಕೂ ಅನುಕರಣೀಯ.

ಶ್ರೀ ಎಂ ಕೃಷ್ಣಪ್ಪಯ್ಯನವರು 1941ರ ಮಾರ್ಚ್ 12 ರಂದು ಜನಿಸಿದರು. ಬಂಟ್ವಾಳ ತಾಲ್ಲೂಕು ಕಲ್ಲಡ್ಕ ಬಳಿ ಇರುವ ಅಮ್ಮುರ್ ಗ್ರಾಮದ ಮಣ್ಕರ ಎಂಬ ಪಟ್ಟಿ ಅವರ ಜನ್ಮಸ್ಥಳ. ತಂದೆ ಆನಂತಯ್ಯ, ತಾಯಿ ಲಕ್ಷ್ಮಿ. ತಂದೆ ಪ್ರಾಥಮಿಕ ಶಾಲೆಯ ಉಪಾಧ್ಯಾಯರಾಗಿದ್ದರು ಶ್ರೀ ಕೃಷ್ಣಪ್ಪಯ್ಯನವರದು ತುಂಬಿದ ಕುಟುಂಬ. ಅವರಿಗೆ ನಾಲ್ವರು ಸೋದರ ಸೋದರಿಯರು. ಇದೇ ಅವರಿಗೆ ಎಲ್ಲರೊಡನೆ ಹೊಂದಿಕೊಂಡು ಬಾಳಲು ಪ್ರೇರಕ ಶಕ್ತಿಯಾಗಿರಬೇಕು. ಪುಟ್ಟೂರಿನ ಸ್ವಾಭಾವಿಕ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಮುಗಿಸಿದ ಶ್ರೀಯುತರು ಬಂಟ್ವಾಳದ ಎಸ್ ವಿ ಎಸ್ ವೈಧಶಾಲೆಯಲ್ಲಿ ಓದನ್ನು ಮುಂದುವರಿಸಿ 1957ರಲ್ಲಿ ಎಸ್.ಎಸ್.ಎಲ್.ಸಿಯಲ್ಲಿ ಉತ್ತೀರ್ಣರಾದರು ಹಿಯಿಸಿ ಮತ್ತು ಪದವಿ ಪರೀಕ್ಷೆಗಳಿಗಾಗಿ ಮಂಗಳೂರಿನ ಸೈಂಟ್ ಅಲೋಷಿಯಸ್ ಕಾಲೇಜಿನಲ್ಲಿ ಅಧ್ಯಯನವನ್ನು ಮುಂದುವರಿಸಿದ ಶ್ರೀಯುತರು 1961ರಲ್ಲಿ ಬಿ ಎಸ್ಸಿ ಪದವೀಧರರಾದರು. 1961-62ರಲ್ಲಿ ಮಣಿಪಾಲದ ತಾಂತ್ರಿಕ ವಿದ್ಯಾಲಯದಲ್ಲಿ 'ಡೆಮಾನ್‌ಸ್ಟ್ರೇಟರ್' ಆಗಿ ಸೇವೆಸಲ್ಲಿಸಿದರು. ಬಳಿಕ 1962-64 ನಡುವೆ ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಭೌತಶಾಸ್ತ್ರ ಸ್ನಾತಕೋತ್ತರ ಅಧ್ಯಯನದಲ್ಲಿ ತೊಡಗಿದ ಶ್ರೀಯುತರು ಎಂ ಎಸ್ ಸಿ ಪದವಿಯನ್ನು ಗಳಿಸಿದರು. ಶ್ರೀಯುತರ ಸೇವಾಮಹತ್ವವನ್ನರಿತ ಮಣಿಪಾಲದ ಅಕಾಡೆಮಿ 1965ರ ಆಗಸ್ಟ್ 21ರಂದು ಕೃಷ್ಣಪ್ಪಯ್ಯನವರನ್ನು ಶೃಂಗೇರಿಯಶ್ರೀ ಜೆ ಸಿ ಬಿ ಎಂ ಕಾಲೇಜಿನಲ್ಲಿ ಭೌತಶಾಸ್ತ್ರ ಉಪನ್ಯಾಸಕರಾಗಿ ನೇಮಕಮಾಡಿತು. ಶೃಂಗೇರಿ ಕೇವಲ ಮಲೆನಾಡಲ್ಲ, ಮಳೆಯ ನಾಡೂ ಆಗಿತ್ತು. ಹೊಸವಾಗಿಬಂದ್ಯಾನಕ ಜಾಗಿ ಬಂದವನನ್ನು ದಿಕ್ಕುಗೆಡಿಸುವಂತಹ ಕುಂಭದ್ರೋಣ ಮಳೆ ಅಂದಿನ ದಿನಗಳಲ್ಲಿ. ಜೊತೆಗೆ ಶೃಂಗೇರಿಯ ಕಾಲೇಜು ಆಗ ಇನ್ನೂ ಶೈಶವಾವಸ್ಥೆಯಲ್ಲಿತ್ತು. ಪ್ರೌಢಶಿಕ್ಷಣವಿಲ್ಲದ ಅಧ್ಯಾಪಕರು ಹಾಗೂ ಕೆಲವೇ ವಿದ್ಯಾರ್ಥಿಗಳನ್ನೊಳಗೊಂಡಿದ್ದ ಕಾಲೇಜುಯುವ ಹೃದಯವನ್ನು ಉತ್ಸಾಹಗೊಳಿಸುವಂತೇನೂ ಇರಲಿಲ್ಲ. ಆದರೆ ಇಂತಹ ವಾತಾವರಣದಲ್ಲಿಯೂ ಕಾಲೇಜಿನ ಭೌತಶಾಸ್ತ್ರ ವಿಭಾಗವನ್ನು ಹಂತ ಹಂತವಾಗಿ ಅಭಿವೃದ್ಧಿಗೆ ತಂದ ಶ್ರೀ ಕೃಷ್ಣಪ್ಪಯ್ಯನವರು ಜನಪ್ರಿಯ ಅಧ್ಯಾಪಕರಾಗಿಯೂ ರೂಪುಗೊಂಡರು.

1970ರಲ್ಲಿ ಲೀಡರ್ ಹುದ್ದೆಗೆ ಬಡ್ತಿ ಪಡೆದ ಶ್ರೀಯುತರು ಕಾಲೇಜಿನ ಅಭಿವೃದ್ಧಿ ಕಾರ್ಯಗಳಲ್ಲಿ ಪ್ರಮುಖ ಪಾತ್ರ ವಹಿಸತೊಡಗಿದರು.ಪ್ರೊ. ಎಸ್ ಬಿ ಎಸ್ ಮೂರ್ತಿಗಳ ಅನಾರೋಗ್ಯದ ಕಾರಣ ಹಲವು ತಿಂಗಳ ಕಾಲ ಕಾಲೇಜಿನ ಆಡಳಿತವನ್ನು ನಡೆಸಿದರು ಮುಂದೆ ಅವರು ಯಶಸ್ವಿ ಪ್ರಾಚಾರ್ಯರಾಗಿ ಅಧಿಕಾರ ವಹಿಸಿಕೊಂಡ ಶ್ರೀ ಕೃಷ್ಣಪ್ಪಯ್ಯನವರ ಸುಮಾರು 18 ವರ್ಷಗಳು ಸುದೀರ್ಘ ಕಾಲ ಈ ಮುದ್ದೆಯಲ್ಲಿದ್ದುಕಾಲೇಜಿನ ಸರ್ವತೋಮುಖ ಅಭಿವೃದ್ಧಿಗೆ ಕಾರಣೀಭೂತರಾದರು.

"ಶೃಂಗೇರಿಯ ಜಗದ್ಗುರು ಚಂದ್ರಶೇಖರ ಭಾರತಿ ಸ್ಮಾರಕ ಕಾಲೇಜು ಮಲೆನಾಡಿನ ಪ್ರತಿಷ್ಠಿತ ವಿದ್ಯಾ ಸಂಸ್ಥೆ. ಆಗಿನ ಮೈಸೂರು ವಿಶ್ವವಿದ್ಯಾನಿಲಯ ಈಗಿನ ಕುವೆಂಪು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿಯೇ ಅತೀ ಪ್ರತಿಷ್ಠಿತ ಕಾಲೇಜುಗಳಲ್ಲಿ ಒಂದು. ಸಾವಿರಾರು ವಿದ್ಯಾರ್ಥಿಗಳು ಒಂದು ಶೈಕ್ಷಣಿಕ ವರ್ಷದಲ್ಲಿ ದಾಖಲಾಗುತ್ತಿದ್ದ ಇತಿಹಾಸವಿರುವ ಈ ಕಾಲೇಜಿನಲ್ಲಿ ಹಲವು ಪ್ರಾಂಶುಪಾಲರು ಯಶಸ್ವಿಯಾಗಿ ಕಾರ್ಯನಿರ್ವಹಿಸಿದ್ದಾರೆ. ಇದರಲ್ಲಿ ಎಂ. ಕೃಷ್ಣಪ್ಪಯ್ಯನವರು ಸಹ ಒಬ್ಬರು. ತನ್ನ ಶಿಸ್ತುಗಾರ ನಡವಳಿಕೆಗೆ ಹೆಸರಾಗಿದ್ದ ಶ್ರೀಯುತರು ಇತ್ತೀಚೆಗೆ ಬಂಟ್ವಾಳ ಸಮೀಪದ ಕಲ್ಲಡ್ಕದಲ್ಲಿ ನಿಧನರಾದರು. ಅವರ ನೆನಪಿನಲ್ಲಿ ಕಾಲೇಜಿನ ಈಗಿನ ಪ್ರಾಂಶುಪಾಲ ಪ್ರೊ. ವೀರಪ್ಪ ಗೌಡರು ರೈತ ಸಂಗಾತಿಗಾಗಿ ಲೇಖನ ಬರೆದಿದ್ದಾರೆ. ಇದು ಕೃಷ್ಣಪ್ಪಯ್ಯನವರಿಗೆ ನೆನಪಿನ ನುಡಿ ನಮನ."

ಪ್ರಾಚಾರ್ಯರ ಹುದ್ದೆಗೆ ಭಡ್ತಿ, ಗೌರವಗಳನ್ನು ತಂದುಕೊಟ್ಟರು. 1986ರಲ್ಲಿ ಭೌತಶಾಸ್ತ್ರ ಪ್ರಾಧ್ಯಾಪಕರಾಗಿ ಬಡ್ತಿ ಪಡೆದರು ಅವರ ಅಧ್ಯಾಪನ ವೃತ್ತಿಯ ಒಂದು ಪ್ರಮುಖ ಪರ್ವ.

ಕಾಲೇಜು ವಿದ್ಯಾರ್ಥಿಯಾಗಿದ್ದಾಗ ಸೋಷಿಯಲ್ ಸರ್ವೀಸ್ ಲೀಗ್‌ನ ಸದಸ್ಯರಾಗಿ, ಪದವಿ ವಿಕ್ಷಣದ ಹಂತದಲ್ಲಿ ರಾತ್ರಿ ಶಾಲೆಯ ಉಪಾಧ್ಯಾಯರಾಗಿ ಶ್ರೀ ಎಂ.ಕೃಷ್ಣಪ್ಪಯ್ಯನವರು ಸೇವೆ ಸಲ್ಲಿಸಿದ್ದಾರೆ. ಎಸ್.ಎಸ್.ಎಲ್ ಚಟುವಟಿಕೆಗಳಲ್ಲಿ ಅವರು ತೋರಿದ ಆಸಕ್ತಿಗೆ ಇದೇ ಮೂಲ ಪ್ರೇರಣೆಗಳಾಗಿರಬಹುದು. ಗಂಭೀರ ಮನೋಧರ್ಮದವರ ಕ್ರೀಡೆಗಳಲ್ಲಿ ವಿಶೇಷ ಒಲವನ್ನು ಹೊಂದಿಲ್ಲವಾದರೂ ಕೆಲವು ವರ್ಷಗಳು ಅಧ್ಯಾಪಕ ಮಿತ್ರರೊಂದಿಗೆ ಬಾಲ್ ಬ್ಯಾಡ್ಮಿಂಟನ್ ಹಾಗು ಟೆಬಲ್ ಬ್ಯಾಡ್ಮಿಂಟನ್ ಆಟ ಆಡಿದ್ದುಂಟು.

ಕಾಲೇಜಿನ ವಿದ್ಯಾರ್ಥಿನಿಲಯದ ಕಟ್ಟಡ ನಿರ್ಮಾಣಗೊಳ್ಳುವಲ್ಲಿಯೂ ಪ್ರಾಚಾರ್ಯ ಎಂ ಕೃಷ್ಣಪ್ಪಯ್ಯನವರ ಪಾತ್ರ ಹಿರಿದು. ವಿದ್ಯಾರ್ಥಿನಿಲಯದ ವಾರ್ಡನ್ ಆಗಿ ಹಲವಾರು ವರ್ಷಗಳ ಸೇವೆ ಸಲ್ಲಿಸಿದ ಶ್ರೀಯುತರು ತಮ್ಮನೇಮಾಪಧಿಯನ್ನೆಲ್ಲಾ ವಿದ್ಯಾರ್ಥಿನಿಲಯದಲ್ಲಿ ಕಳೆದಿದ್ದಾರೆ. ನಿಲಯದ ವಿದ್ಯಾರ್ಥಿಗಳಿಗೆ ಹಿರಿಯಣ್ಣನಂತೆ ಮಾರ್ಗದರ್ಶನ ನೀಡಿದ್ದಾರೆ. ಇಷ್ಟಾದರೂ ಶ್ರೀ ಕೃಷ್ಣಪ್ಪಯ್ಯನವರು ಸ್ವಂತ ಕುಟುಂಬವನ್ನು ಕಟ್ಟಿಕೊಳ್ಳಲಿಲ್ಲ. ಕುಟುಂಬದ ಮೂಲ ಆಗತ್ಯ ಪ್ರೀತಿ-ವಿಶ್ವಾಸಗಳನ್ನು ಪಂಚಿಕೊಳ್ಳುವುದಕ್ಕಾಗಿಯೇ? ಶ್ರೀ ಕೃಷ್ಣಪ್ಪಯ್ಯನವರಿಗೆ ವಿದ್ಯಾರ್ಥಿ ಸಮುದಾಯವೇ ಪ್ರೀತಿಯ ಮಕ್ಕಳಾಗಿದ್ದರು.ಶ್ರೀ ಜೆ ಸಿ ಬಿ ಎಂ ಕಾಲೇಜೇ ಅವರ ಕುಟುಂಬವಾಗಿತ್ತು. ಒಮ್ಮೆ ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ಬಳುವಳಿಯಲ್ಲಿ ಭಾಗವಹಿಸಿ ಹಲವಾರು ವಿದ್ಯಾರ್ಥಿಗಳು ಲಾಕಪ್ ಸೇರಿದ್ದರು. ರಾತ್ರಿ ಶ್ರೀ ಕೃಷ್ಣಪ್ಪಯ್ಯನವರೇ ವಿದ್ಯಾರ್ಥಿ ನಿಲಯದಿಂದ ಊಟವನ್ನು ತೆಗೆದುಕೊಂಡು ಹೋಗಿ ವಿದ್ಯಾರ್ಥಿಗಳಿಗೆ ತಲುಪಿಸಿ, ಅವರನ್ನು ಕಂಡು 'ಆತಿರೇಕದಿಂದ ಮತ್ತೆಸಬೇಡಿ, ಸ್ನೇಮ್ಯವಾಗಿರಿ' ಎಂದು ಹಿತವಚನ ನೀಡಿದ್ದುದು, ಅವರ ಆಪ್ತ ಶಿಷ್ಯ ಪ್ರೇಮಕ್ಕೆ ಸಾಕ್ಷಿ ಒಮ್ಮೆ ಅವರಿಗೆ 'ಸೀತಾಳ ಸಿಡುಬು' ಕಾಣಿಸಿತ್ತು ಆರು ಸಾಂಕ್ರಾಮಿಕ ಎದುರು ತೀರಾ ಪ್ರಾಚಾರ್ಯರ ವಸತಿಗೃಹದಲ್ಲಿ ವೆಲಸಿ ರುಶ್ರೂಷೆ ಪಡೆದರು. ಆ ದಿನಗಳಲ್ಲಿ ಒಬ್ಬರೇ ಇರಲು ಚಡಪಡಿಸುತ್ತಿದ್ದರು. ಗಾಣಮುಪರಾಗುತ್ತಿದ್ದಂತೆ ಮತ್ತೆ ವಿದ್ಯಾರ್ಥಿ ನಿಲಯದ ಕೊಠಡಿಗೆ ಹಿಂದಿರುಗಿ ಕಾರ್ಯಕ್ಷಕ್ತರಾದದ್ದು ಅವರ ಸಾಂಘಿಕ ಜೀವನ ನಿಷ್ಠೆಗೆ ಸಾಕ್ಷಿಯಾಗಿದೆ.

ಅವರ ಶಿಸ್ತಿನ ಜೀವನ, ಅಧ್ಯಾಪನ ಪ್ರೀತಿ, ಸಮರ್ಥ ನಾಯಕತ್ವ ಎಲ್ಲವೂ ಇಂದು ನೆನಪು ಮಾತ್ರ.

-ಪ್ರೊ. ಹೆಚ್.ಸಿ. ವೀರಪ್ಪ ಗೌಡ
ಪ್ರಾಂಶುಪಾಲರು,ಜೆ.ಸಿ.ಬಿ.ಎಂ. ಕಾಲೇಜು,
ಶೃಂಗೇರಿ.

Scanned by CamScanner

ಚಿಕ್ಕಮಗಳೂರು ಲೋಕಲ್ ಎಕ್ಸ್‌ಪ್ರೆಸ್

ಎಲ್ಲ ಧರ್ಮಗಳೂ ವಿವಿಧತೆಯಲ್ಲಿ ಏಕತೆಯ ಸಂದೇಶ ಸಾರುತ್ತವೆ

■ ಸಮಾಜದಲ್ಲಿ ಜಾತ್ಯತೀತ ನಿಲುವುಗಳ ಅನಾವರಣ ■ ಕುವೆಂಪು ವಿವಿ ಕುಲಪತಿ ಪ್ರೊ. ಜೋಗನ್ ಶಂಕರ್ ಅಭಿಮತ



ಶೃಂಗೇರಿಯಲ್ಲಿ ಏರ್ಪಡಿಸಿದ್ದ ಯಜ್ಞ, ಯಾಗಗಳ ಜಾತ್ಯತೀತ ನಿಲುವುಗಳ ಅನಾವರಣ ವಿಷಯ ಕುರಿತ ಸಂವಾದ ಸಮಾರಂಭದಲ್ಲಿ ಕುವೆಂಪು ವಿವಿ ಕುಲಪತಿ ಪ್ರೊ. ಜೋಗನ್ ಶಂಕರ್ ಮಾತನಾಡಿದರು.

ಮೈಸೂರು ಮಹಾರಾಜರು ಸಂಸ್ಕೃತವನ್ನು ಪೋಷಿಸಿದ್ದರು

ಸಿದ್ಧ ಎಂಬ ಕೆಲವರಿಗೆ ಒಳಾಡಳಿತ ಕುರಿತಾದ್ದು ಇದರ ಗುರುತಿಸುವಿಕೆ

ಮಾಡಿದ್ದರು

ಮೈಸೂರು ಮಹಾರಾಜರು ಸಂಸ್ಕೃತವನ್ನು ಪೋಷಿಸಿದ್ದರು

ಸಿದ್ಧ ಎಂಬ ಕೆಲವರಿಗೆ ಒಳಾಡಳಿತ ಕುರಿತಾದ್ದು ಇದರ ಗುರುತಿಸುವಿಕೆ

ಮಾಡಿದ್ದರು

ಇಡುವ ಹೆಜ್ಜೆಯಲ್ಲಿ ದೃಢ ನಿರ್ಧಾರ ಇರಲಿ



ಶೃಂಗೇರಿಯ ಜೆಸಿಬಿಎಂ ಕಾಲೇಜಿನ ವಿದ್ಯಾರ್ಥಿ ದಿನಾಚರಣೆಯನ್ನು ವೃತ್ತ ನಿರೀಕ್ಷ ಸುಧೀರ್ ಹೆಗ್ಡೆ ಉದ್ಘಾಟಿಸಿ ಮಾತನಾಡಿದರು.

ಶೃಂಗೇರಿ

ಪ್ರತಿಯೊಬ್ಬರಲ್ಲೂ ದೌರ್ಬಲ್ಯಗಳು ಇದ್ದು ಅವನ್ನು ಆತ ಮೆಟ್ಟಿನಿಂತು ಮುಂದುವರಿದಾಗ ಬದುಕು ಸರಿದಾರಿಗೆ ಬರುತ್ತದೆ ಎಂದು ವೃತ್ತನಿರೀಕ್ಷಕ ಸುಧೀರ್ ಹೆಗ್ಡೆ ಹೇಳಿದರು.

ಅಂತಾರಾಷ್ಟ್ರೀಯ ವಿದ್ಯಾರ್ಥಿ ದಿನದ ಅಂಗವಾಗಿ ಜೆಸಿಬಿಎಂ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ವಿದ್ಯಾರ್ಥಿ ದಿನಾಚರಣೆ ಹಾಗೂ ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಜನ್ಮ ದಿನ ಮತ್ತು ವಿವಿಧ ಸ್ಪರ್ಧೆಗಳ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ನಮ್ಮ ಬದುಕಿಗೆ ಅಚಲ ಗುರಿ ಹಾಗೂ ಇಡುವ ಹೆಜ್ಜೆಯಲ್ಲಿ ದೃಢ ನಿರ್ಧಾರ ಇರಬೇಕು. ಸಮಾಜದ ಆದರ್ಶ ವ್ಯಕ್ತಿಯನ್ನು ಮಾದರಿ ಆಗಿ ಇಟ್ಟುಕೊಂಡು ನಮ್ಮ ಸೃಜನಶೀಲತೆಯನ್ನು ಅದರಲ್ಲಿ ಮೇಳೈಸಿದಾಗ ಯಶಸ್ಸನ್ನು ಕಾಣಬಹುದು ಎಂದು ಅವರು ತಿಳಿಸಿದರು.

ಪ್ರಾಚಾರ್ಯ ಹೆಚ್.ಸಿ.ವೀರಪ್ಪಗೌಡ ಅಧ್ಯಕ್ಷತೆ ವಹಿಸಿ ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಬಗ್ಗೆ ಮಾತನಾಡಿದರು.

ವಿದ್ಯಾರ್ಥಿ ಕ್ಷೇಮಪಾಲನಾ ಅಧಿಕಾರಿ ಪ್ರೋ. ದತ್ತಾತ್ರೇಯ ಮಾರ್ಪಳ್ಳಿ ಮತ್ತಿತರರು ಉಪಸ್ಥಿತರಿದ್ದರು.

ವಿದ್ಯಾರ್ಥಿಗಳಿಗಾಗಿ ರಸ ಪ್ರಶ್ನೆ, ವಿಚಾರ ಸಂಕಿರಣ, ವಿಜ್ಞಾನ ಮಾದರಿ ತಯಾರಿ, ಜಾಹೀರಾತಿನ ಹಿನ್ನೆಲೆಗೆ ಅಭಿನಯ ಮತ್ತು ವಿವಿಧ ಆಟೋಟ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ನಿತೀಶ್ ನಾಯಕ ಸ್ವಾಗತಿಸಿದರು. ಶ್ರೀನಿವಾಸ ವಂದಿಸಿದರು.

ಕಸ್ತೂರಿ ಕನ್ನಡ ವಾರ್ತೆ 16-10-15

Scanned by CamScanner

ಕನ್ನಡಪ್ರಭ
ಮಂಗಳವಾರ 13.10.2015
ಶಿವಮೊಗ್ಗ

ಏಕತೆ ಸೃಷ್ಟಿಸುವ ಅನನ್ಯ ಶಕ್ತಿ ಧರ್ಮಕ್ಕಿದೆ

• ಕನ್ನಡಪ್ರಭ ವಾರ್ತೆ ಶೃಂಗೇರಿ

ಸಾಮಾಜಿಕ ವ್ಯವಸ್ಥೆಗಳನ್ನು ಬೇರೆ ಬೇರೆ ಮಾಡುವುದು ಧರ್ಮವಲ್ಲ. ನಿಜವಾದ ಧರ್ಮ ವಿವಿಧತೆಯಲ್ಲಿ ಏಕತೆ ಒಗ್ಗೂಡಿಸಲು ಇರುವ ಅನನ್ಯ ಶಕ್ತಿಯಾಗಿದೆ ಎಂದು ಕುವೆಂಪು ವಿಶ್ವವಿದ್ಯಾನಿಲಯ ಕುಲಪತಿ ಪ್ರೊ. ಜೋಗನ್ ಶಂಕರ್ ಅಭಿಪ್ರಾಯಪಟ್ಟರು.

ಪಟ್ಟಣದ ಜೆ.ಸಿ.ಬಿ.ಎಂ. ಕಾಲೇಜಿನ ಡಾ. ಟಿ.ಎಂ.ಎ. ಪೈ ಸಭಾಂಗಣದಲ್ಲಿ ಆಯೋಜಿಸ ಲಾಗಿದ್ದ 'ಮಠ-ಮಾನ್ಯಗಳ ಜಾತ್ಯ ತೀತ ನಿಲುವು' ಕುರಿತ ವಿಚಾರ ಸಂಕಿರಣ ಸಮಾರೋಪ ಸಮಾರಂಭ ದಲ್ಲಿ ಅವರು ಮಾತನಾಡಿದರು.

ಯಾವುದೇ ಧರ್ಮವಾಗಿರಲಿ ಅದು ಮಾನವೀಯ, ನೈತಿಕ ಮೌಲ್ಯಗಳ ತಳಹದಿ ಹೊಂದಿರ ಬೇಕು. ಉನ್ನತವಾದ ಮೌಲ್ಯಗಳನ್ನು ನೀಡುವ, ಸಾಮಾನ್ಯರಲ್ಲಿ ಆತ್ಮವಿಶ್ವಾಸವನ್ನು ತುಂಬಿಸುವ ಧರ್ಮ ಪರಂಪರೆಯ ದ್ಯೋತಕವಾಗಿ ಎಲ್ಲರ ಮನಸ್ಸು ಗಳನ್ನು ಸೆಳೆಯುವಲ್ಲಿ ಯಶಸ್ಸು ಕಂಡಿದೆ.



ಧರ್ಮವನ್ನು ವಿವಿಧ ದೃಷ್ಟಿಯಿಂದ ನೋಡಿದಾಗ ಜಾತ್ಯತೀತ ನಿಲುವುಗಳನ್ನು ಸಮಾಜದಲ್ಲಿ ಆನಾವರಣಗೊಳಿಸಿದೆ ಎಂದರು.

ಸಾಮಾಜಿಕ ನಿಯಂತ್ರಣ ವನ್ನು ತರುವಲ್ಲಿ ವಿಶಿಷ್ಟ ಪಾತ್ರ ವಹಿಸಿದ ಧರ್ಮ ಮಾನವನ ನೈತಿಕತೆ, ಆಧ್ಯಾತ್ಮಿಕತೆ, ಧಾರ್ಮಿಕತೆಯನ್ನು ಎತ್ತರಿಸುವಲ್ಲಿ ಮಹತ್ತರ ಪಾತ್ರ ವಹಿಸಿದೆ. ಧಾರ್ಮಿಕ ಹಾಗೂ ರಾಜಕೀಯ ತತ್ವಗಳನ್ನು ಒಗ್ಗೂಡಿಸುವ ಮಹತ್ತರ ಪಾತ್ರವನ್ನು ನಿರ್ವಹಿಸುತ್ತಿದೆ. ಹೊಸ ಸತ್ವವನ್ನು ನೀಡುತ್ತಿದೆ.

ಪ್ರಶ್ನಾತೀತ ನಿಲುಗೆ ಉತ್ತರ ನೀಡುವಲ್ಲಿ, ಕಾಯಿದೆ, ಕಾನೂನುಗಳ ಕಟ್ಟಳೆ ನಡುವೆ ಎಲ್ಲರ ನಡುವಿನ ಸಂಬಂಧಗಳಿಗೆ ಹೊಸತನದ ಮೌಲ್ಯವನ್ನು ನೀಡುವಲ್ಲಿ ಧರ್ಮ ಮುತುರ್ವಜಿ ವಹಿಸುತ್ತಿದೆ ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಜೆ.ಸಿ.ಬಿ.ಎಂ. ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಡಾ. ಸಿ.ವಿ. ಗಿರಿಧರ ಶಾಸ್ತ್ರಿ, ಪ್ರಕಾಶ್, ದತ್ತಾತ್ರೇಯ ಮಾರ್ಪಳ್ಳಿ ಮತ್ತಿತರರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲ ಎಚ್.ಸಿ. ವೀರಪ್ಪ ಗೌಡ ಅಧ್ಯಕ್ಷತೆ ವಹಿಸಿದ್ದರು.

Scanned by CamScanner

ಭಾನುವಾರ, 11 ಅಕ್ಟೋಬರ್ 2015, ಶಿವಮೊಗ್ಗ

ವಿಜಯ ಕರ್ನಾಟಕ

ಧರ್ಮದ ಆಚರಣೆಗಿಂತ ನೈತಿಕತೆ ಮುಖ್ಯ

ವಿಕ ಚಿತ್ರಲೋಕ



ಶೃಂಗೇರಿಯ ಶ್ರೀ ಜೆಸಿಬಿಎಂ ಕಾಲೇಜಿನ ವಿಚಾರ ಸಂಕಿರಣವನ್ನು ಆಚಾರ್ಯ ಸ್ವಾಮಿ ನಿತ್ಯಸ್ಥನಂದಜೀ ಮಹಾರಾಜ್ ಉದ್ಘಾಟಿಸಿ ಮಾತನಾಡಿದರು.

ಶೃಂಗೇರಿ: ಶ್ರೀ ಶಾರದಾ ಪೀಠದ ಜಾತ್ಯಾತೀತ ನಿಲುವಿನ ಹಿನ್ನೆಲೆಯಲ್ಲಿ ಯಾವುದೇ ಧರ್ಮದ ಆಚಾರಗಳಿಗಿಂತ ನೈತಿಕತೆಯೆ ಮುಖ್ಯವಾ ಗಿದ್ದು, ಇದು ಎಲ್ಲಾ ಧರ್ಮಗಳ ಸಾರ ಎಂದು ಕೋಲ್ಕತ್ತ ಬೇಲೂರಿನ ಸ್ವಾಮಿ ವಿವೇಕಾನಂದ ಮಠದ ಪ್ರಶಿಕ್ಷಣ ಸಂಸ್ಥೆ ಆಚಾರ್ಯ ಸ್ವಾಮಿ ನಿತ್ಯಸ್ಥನಂದಜೀ ಮಹಾರಾಜ್ ಹೇಳಿದರು.

ಅವರು ಶುಕ್ರವಾರ ಶ್ರೀ ಜೆಸಿಬಿಎಂ ಕಾಲೇಜಿನಲ್ಲಿ ಯುಜಿಸಿಯಿಂದ ಆಯೋಜಿಸಿದ್ದ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದರು.

ಪೀಠಕ್ಕೆ ಬರುವ ಎಲ್ಲಾ ಭಕ್ತರನ್ನು ಸಮಾನ ವಾಗಿ ಕಾಣುತ್ತಿರುವುದರಿಂದ ಪೀಠಕ್ಕೆ ವಿಶೇಷ ವಾದ ಮಹತ್ವವಿದೆ. ಧರ್ಮಾಚರಣೆ ಮುಖ್ಯ ವಾಗಿದ್ದರೂ, ಮನುಷ್ಯತ್ವ ಪ್ರಾಮಾಣಿಕತೆ ಮುಖ್ಯವಾಗಿದೆ ಎಂದರು.

ಪ್ರೊ.ಪಿ.ಎನ್.ನರಸಿಂಹಮೂರ್ತಿ ಮಾತ ನಾಡಿ, ಯಾವುದೇ ಮಠ ಮಾನ್ಯಗಳ ಧಾರ್ಮಿಕ ಆಚರಣೆಯಲ್ಲಿ ಸಾಮಾಜಿಕ ಕಳಕಳಿ ಮುಖ್ಯ ವಾಗಿರಬೇಕು. ಶ್ರೀ ಶಾರದಾ ಪೀಠದಲ್ಲಿ ಇದರ ಪ್ರಾಧಾನ್ಯತೆ ಎದ್ದುಕಾಣುತ್ತದೆ. ಈ ನಿಟ್ಟಿನಲ್ಲಿ ರಾಜ ಮಹಾರಾಜರ ಕೊಡುಗೆ ಅಪಾರ ಎಂದರು.

ಕಾಲೇಜಿನ ಪ್ರಾಂಶುಪಾಲ ಡಾ.ಎಚ್.ಸಿ. ವೀರಪ್ಪಗೌಡರು ಬರೆದ ಚಾರಿತ್ರಿಕ ಹಿನ್ನೆಲೆಯಲ್ಲಿ ಶೃಂಗೇರಿ ಮಹಾಸಂಸ್ಥಾನದ ಆರ್ಥಿಕ ಅಧ್ಯಯನ ಗ್ರಂಥವನ್ನು ನಿತ್ಯಸ್ಥನಂದಜೀ ಮಹಾ ರಾಜರು ಬಿಡುಗಡೆ ಮಾಡಿದರು. ವಿದ್ಯಾರ್ಥಿನಿ ಕ್ಷೇಮಪಾಲನಾ ಅಧಿಕಾರಿ ದತ್ತಾತ್ರೇಯ ಮಾರ್ಪಳ್ಳಿ ಪ್ರಕಾಶಕ ಛಾಯಾಪತಿ ಡಾ.ಸಿ.ವಿ.ಗಿರಿಧರಶಾಸ್ತ್ರಿ ಮಾತನಾಡಿದರು ಸಂಕಿರಣದ ಸಂಚಾಲಕ ಡಾ.ಕೆ.ಪಿ.ಪ್ರಕಾಶ ವಂದಿಸಿದರು.

Scanned by CamScanner

3 ದಿನಗಳ ಹರಿದಾಸ ಕೀರ್ತನೆಗಳ ಕಲಿಕಾ ಶಿಬಿರ



ನರಹರಿತೀರ್ಥರೆ ಆದಿಯಾಗಿ ವ್ಯಾಸರಾಯರು ಪುರಂದರದಾಸರು, ಜಗನ್ನಾಥದಾಸರು, ವಿಜಯದಾಸರು ಇತ್ಯಾದಿ ಸಮಾಜಕ್ಕೆ ಅದ್ಭುತವಾದ ಕೊಡುಗೆಯನ್ನು ನೀಡಿದ್ದಾರೆ. ಮಾನವ ಸಮಾಜದ ಏಳಿಗೆಗೆ ,ಉದ್ಧಾರಕ್ಕೆ ಅಗುಹೂಗುಗಳನ್ನು ತಿಳಿಸುವ ಒಂದು ಮಹಾ ನಿಘಂಟಿನ ನಧಿ ದಾಸಸಾಹಿತ್ಯ. ಆಡು ಮುಟ್ಟದ ಹುಲ್ಲಿಲ್ಲ ದಾಸರು ತಿಳಿಸದ ವಿಷಯವಿಲ್ಲ.

ಪುರಂದರರ ಸಾಹಿತ್ಯವನ್ನು ಪುರಂದರೋಪನಷತ್ತು ಎಂದು ಕರೆಯಲಾಗಿದೆ. ಪುರಂದರರನ್ನು ಕರ್ನಾಟಕ ಸಂಗೀತ ಪಿತಾಮಹ ಎಂದು ಕರೆದು ಇವರ ನಂತರ ಈ ಪಟ್ಟವನ್ನು ಯಾರೂ ಗಳಿಸಲಾಗಲಿಲ್ಲ.

ದಾಸಸಾಹಿತ್ಯದಲ್ಲಿ ಕೇವಲಾ ದೇವತಾ ಪ್ರಾರ್ಥನೆಯಲ್ಲದೆ ಲೋಕೋಕಿ ಲೋಕ ನೀತಿ ಶರಣಾಗತಿ ಕ್ಷೇತ್ರ ಮಹಿಮೆ ಎಲ್ಲ ವಿಷಮಗಳು ಇದೆ ದಾಸ ಸಾಹಿತ್ಯವು ಸರ್ವಕಾಲಕು ನಿತ್ಯ ನೂತನ ನವೀನ.

ಶ್ರೀ ಜೆ ಸಿ ಬಿ ಎಂ ಕೋ ರಾಷ್ಟ್ರೀಯ ಸೇವಾ ಯೋಜನೆ ರೋಟರಿ ಇನ್ನರ್ ವ್ಹೀಲ್ ಕ್ಲಬ್ ಮತ್ತು ಸಮನ್ವಯ ಕಲಾಕೇಂದ್ರ, ಬೆಂಗಳೂರು ಸಂಯುಕ್ತ ಆಶ್ರಯದಲ್ಲಿ 3 ದಿನಗಳ ಅಪರೂಪದ ಹರಿದಾಸ ಕೀರ್ತನೆಗಳ ಕಲಿಕಾ ಶಿಬಿರವನ್ನು ಆಯೋಜಿಸಲಾಯಿತ್ತು ಶಿಬಿರಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಖ್ಯಾತ ಸಂಗೀತಾ ವಿದ್ವಾಂಸರಾದ ವಿದ್ವಾನ್ ತಿರುಮಲೆ ಶ್ರೀನಿವಾಸ್ ರವರು ಆಗಮಿಸಿ ವಿದ್ಯಾರ್ಥಿಗಳಿಗೆ ಹರಿದಾಸ ಕೀರ್ತನೆಗಳನ್ನು ತರಬೇತಿ ನೀಡಿದರು ಈ ಸಂದರ್ಬದಲ್ಲಿ ವಿದ್ಯಾರ್ಥಿಗಳಿಗೆ ದಾಸಸಾಹಿತ್ಯದ ಕುರಿತು ವಿವರಿಸಿದರು ಸುಮಾರು 30 ವಿದಾರ್ಥಿಗಳು ಇದರ ಸದುಪಯೋಗ ಪಡೆದುಕೊಡು ಕೀರ್ತನೆಗಳನ್ನು ಅಭ್ಯಸಿಸಿ ರೋಟರಿಗೆ ಆನಾವರಣ ಗೊಳಿಸಿದರು ಈ ಸಂದರ್ಬದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಡಾ॥ ಹೆಚ್ ಸಿ ವೀರಪ್ಪ ಗೌಡ, ರೋಟರಿ ಇನ್ನರ್ ವ್ಹೀಲ್ ಕ್ಲಬ್‌ನ ಅಧ್ಯಕ್ಷರಾದ ಭಾಗ್ಯವೀರಪ್ಪ ಗೌಡ ಶೃಂಗೇರಿ ಶಾರದ ಸಂಗೀತಾ ಸಭಾದ ವಿದ್ವಾನ್ ನೈಫಿ ಪ್ರಭಾಕರ್ ವಿದ್ವಾನ್ ಶ್ರೀಮತಿ ಸಾವಿತ್ರಿ ಪ್ರಭಾಕರ್, ಎನ್ ಎಸ್ ಎಸ್ ಅಧಿಕಾಗಳಾದ ಶ್ರೀ ಎನ್ ಹೆಚ್ ಲಕ್ಷ್ಮೀನಾರಾಯಣಾ, ಪ್ರಶಾಂತ್ ಮುಂತಾದವರು ಉಪಸ್ಥಿತರಿದ್ದರು.

Scanned by CamScanner

ಪ್ರಜಾವಾಣಿ 5-10-15

ಸೈನಿಕ್ ಶಿಬಿರದಲ್ಲಿ ನಿತಿನ್

ಶೃಂಗೇರಿ: ಪಟ್ಟಣದ ಜೆಸಿಬಿಎಂ ಕಾಲೇಜಿನ ಎನ್.ಸಿ.ಸಿ. ಕೆಡೆಟ್ ಎಂ.ವೈ. ನಿತಿನ್ ಈ ವರ್ಷ ನವದೆಹಲಿಯಲ್ಲಿ ನಡೆದ ಭೂ ಸೇನೆಯ ಥಾಲ್ ಸೈನಿಕ್ ಕ್ಯಾಂಪ್ ನಲ್ಲಿ ಭಾಗವಹಿಸಿ ಕಾಲೇಜಿಗೆ ಕೀರ್ತಿ ತಂದಿರುತ್ತಾನೆ.



ಕಾಲೇಜಿನಲ್ಲಿ ಈ ವರ್ಷ ನೂತನವಾಗಿ ನಿರ್ಮಿಸಿರುವ ಅಬ್ಸಾಕಲ್ ಟ್ರೈನಿಂಗ್ ಕೋರ್ಸ್ ನಲ್ಲಿ ವಿಶೇಷ ತರಬೇತಿ ಪಡೆದು ಫೈರಿಂಗ್, ಮ್ಯಾಪ್ ರೀಡಿಂಗ್ ವಿಭಾಗಗಳಲ್ಲೂ ತನ್ನ ಪ್ರತಿಭೆ ತೋರಿಸಿ ಸತತ ಐದು ಕ್ಯಾಂಪ್‌ಗಳಲ್ಲಿ ಅನುಕ್ರಮವಾಗಿ ಆಯ್ಕೆಯಾಗಿ ಅಂತಿಮವಾಗಿ ದೆಹಲಿಯಲ್ಲಿ ನಡೆಯುವ ಕ್ಯಾಂಪ್ ನಲ್ಲಿ ಭಾಗವಹಿಸಿದ್ದಾನೆ. ಅಂತಿಮ ಬಿ.ಎ. ವಿದ್ಯಾರ್ಥಿ ಆದ ಈತನ ಈ ಸಾಧನೆಗೆ ಪ್ರಾಂಶುಪಾಲರು, ಎನ್.ಸಿ.ಸಿ.ಅಧಿಕಾರಿ ಅಭಿನಂದಿಸಿದ್ದಾರೆ.

Scanned by CamScanner

ನಿಧನ

ಪ್ರೊ. ಎಂ.ಕೃಷ್ಣಪ್ಪಯ್ಯ

ಶೃಂಗೇರಿ: ಜೆಸಿಬಿಎಂ ಕಾಲೇಜಿನ ನಿವೃತ್ತ ಪ್ರಾಚಾರ್ಯ ಎಂ.ಕೃಷ್ಣಪ್ಪಯ್ಯ (74) ಬಂಟ್ವಾಳ ತಾಲೂಕಿನ ಕಲ್ಲಡ್ಕದಲ್ಲಿ ಮಂಗಳವಾರ ನಿಧನರಾದರು. ಮೃತರ ಗೌರವಾರ್ಥ ಮಂಗಳವಾರ ಕಾಲೇಜಿಗೆ ರಜೆ ನೀಡಲಾಗಿತ್ತು. ಅವಿವಾಹಿತ ರಾಗಿದ್ದ ಅವರು 17 ವರ್ಷ ಜೆಸಿಬಿಎಂ ಕಾಲೇಜಿನಲ್ಲಿ ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿದ್ದರು. ಕಾಲೇಜು ಆರಂಭದಲ್ಲಿ 1965ರಲ್ಲಿ ಭೌತಶಾಸ್ತ್ರ ಪ್ರಾಧ್ಯಾಪಕರಾಗಿ ಸೇವೆ ಆರಂಭಿಸಿದ ಅವರು, 1979 ರಿಂದ ಪ್ರಾಚಾರ್ಯರಾಗಿ ಹಾಗೂ ಕಾಲೇಜು ವಿದ್ಯಾರ್ಥಿ ನಿಲಯದ ವಾರ್ಡನ್ ಆಗಿ ಕಾರ್ಯನಿರ್ವಹಿಸಿದ್ದಾರೆ. ಜೆಸಿಬಿಎಂ ಕಾಲೇಜಿನ ಪ್ರಾಚಾರ್ಯ ಡಾ.ಎಚ್.ಸಿ.ವೀರಪ್ಪಗೌಡ, ಪಿಯು ವಿಭಾಗದ ಪ್ರಾಚಾರ್ಯ ಡಾ.ಸಿ.ವಿ.ಗಿರಿಧರಶಾಸ್ತ್ರಿ ಮತ್ತು ಸಿಬ್ಬಂದಿ ಮೃತರ ಅಂತಿಮ ದರ್ಶನ ಪಡೆದರು. ಹರಿಹರಪುರ ಮಠದ ಶ್ರೀಸ್ವಯಂ ಪ್ರಕಾಶ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ, ಆದಿಚುಂಚನಗಿರಿ ಶಾಖಾ ಮಠದ ಶ್ರೀಗುಣನಾಥಸ್ವಾಮೀಜಿ, ಶ್ರೀಮಠದ ಆಡಳಿತಾಧಿಕಾರಿ ಡಾ.ವಿ.ಆರ್.ಗೌರಿಶಂಕರ್ ಸೇರಿದಂತೆ ಹಲವು ಗಣ್ಯರು ಸಂತಾಪ ಸೂಚಿಸಿದ್ದಾರೆ.



ರಾಜೇಶ್ವರಿ ಶಾಂತಯ್ಯ

ಚಿಕ್ಕಮಗಳೂರು: ಮಹಿಳೆಯರ ಪರ ಧ್ವನಿಯಾಗಿದ್ದ ಹಿರಿಯ ಸಾಮಾಜಿಕ ಕಾರ್ಯಕರ್ತೆ ರಾಜೇಶ್ವರಿ ಸಿ.ಶಾಂತಯ್ಯ (79) ಮಂಗಳವಾರ ಹೃದಯಾಘಾತದಿಂದ ನಿಧನರಾದರು. ಅವರಿಗೆ ಓರ್ವ ಪುತ್ರ, ನಾಲ್ವರು ಪುತ್ರಿಯರಿದ್ದಾರೆ. ಅವರು ಟೌನ್ ಮಹಿಳಾ ಸಮಾಜ, ಮಹಿಳಾ ಜಾಗೃತಿ ಸಂಘ, ಕಸ್ತೂರಿಬಾ ಸದನ ಮುಂತಾದ ಸಂಘಟನೆಗಳಲ್ಲಿ ಸೇವೆ ಸಲ್ಲಿಸಿದ್ದರು.

ವಿಜಯವಾಣಿ 7-10-15

ನಿಧನ ವಾರ್ತೆ

ಪ್ರೊ.ಎಂ.ಕೃಷ್ಣಪ್ಪಯ್ಯ

ಶೃಂಗೇರಿ: ಶ್ರೀಜೆಸಿಬಿಎಂ ಕಾಲೇಜಿನ ನಿವೃತ್ತ ಪ್ರಾಚಾರ್ಯ ಎಂ.ಕೃಷ್ಣಪ್ಪಯ್ಯ (74) ಬಂಟ್ವಾಳ ತಾಲೂಕಿನ ಕಲ್ಲಡ್ಕದಲ್ಲಿ ಮಂಗಳವಾರ ನಿಧನರಾದರು.



ಅವಿವಾಹಿತರಾಗಿದ್ದ ಅವರು 17 ವರ್ಷ ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿದ್ದರು. ಕಾಲೇಜಿನ ಆರಂಭದಲ್ಲಿ 1965ರಲ್ಲಿ ಭೌತಶಾಸ್ತ್ರ ಪ್ರಾಧ್ಯಾಪಕರಾಗಿ ಸೇವೆ ಆರಂಭಿಸಿ, 1979ರಿಂದ ಪ್ರಾಚಾರ್ಯರಾಗಿ ಸೇವೆ ಸಲ್ಲಿಸುತ್ತಿದ್ದರು. ಕಾಲೇಜಿನ ವಿದ್ಯಾರ್ಥಿ ನಿಲಯದಲ್ಲಿ ವಾಸ್ತವ್ಯ ಹೂಡಿದ್ದ ಅವರು ಹಾಸ್ಟೆಲ್‌ನ ವಾರ್ಡನ್ ಆಗಿ ಸೇವೆ ಸಲ್ಲಿಸಿದ್ದರು. 1996ರಲ್ಲಿ ನಿವೃತ್ತರಾಗಿ, ತಮ್ಮ ಸಹೋದರರೊಂದಿಗೆ ಕಲ್ಲಡ್ಕದಲ್ಲಿ ವಾಸವಾಗಿದ್ದರು.

ಸಂತಾಪ

ಜೆಸಿಬಿಎಂ ಕಾಲೇಜಿನ ಪ್ರಾಚಾರ್ಯ ಡಾ.ಎಚ್.ಸಿ.ವೀರಪ್ಪ ಗೌಡ, ಪಿಯು ವಿಭಾಗದ ಪ್ರಾಚಾರ್ಯ ಡಾ.ಸಿ.ವಿ.ಗಿರಿಧರ ಶಾಸ್ತ್ರಿ ಮತ್ತು ಸಿಬ್ಬಂದಿ ಮೃತರ ಅಂತಿಮ ದರ್ಶನ ಪಡೆದರು. ಮೃತರ ಗೌರವಾರ್ಥ ಮಂಗಳವಾರ ಕಾಲೇಜಿಗೆ ರಜೆ ನೀಡಲಾಗಿತ್ತು.

ಹರಿಹರಪುರ ಮಠದ ಶ್ರೀಸ್ವಯಂ ಪ್ರಕಾಶ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ,ಆದಿಚುಂಚನಗಿರಿ ಶಾಖಾ ಮಠದ ಶ್ರೀ ಗುಣನಾಥ ಸ್ವಾಮೀಜಿ, ಶ್ರೀಮಠದ ಆಡಳಿತಾಧಿಕಾರಿ ಡಾ.ವಿ. ಆರ್.ಗೌರಿಶಂಕರ್ ಮತ್ತಿತರರು ಸಂತಾಪ ಸೂಚಿಸಿದ್ದಾರೆ.

ರಾಜೇಶ್ವರಿ

ಪ್ರೊ. ಎಂ. ಕೃಷ್ಣಪ್ಪಯ್ಯ

ಶೃಂಗೇರಿ: ಶ್ರೀ ಜೆಸಿಬಿಎಂ ಕಾಲೇಜಿನ ನಿವೃತ್ತ ಪ್ರಾಚಾರ್ಯ ಎಂ. ಕೃಷ್ಣಪ್ಪಯ್ಯ (74) ಬಂಟ್ವಾಳ ತಾಲೂಕಿನ ಕಲ್ಲಡ್ಕದಲ್ಲಿ ಮಂಗಳವಾರ ನಿಧನರಾದರು. ಅವಿವಾಹಿತರಾಗಿದ್ದ ಅವರು 17 ವರ್ಷಗಳು ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿದ್ದರು. ಕಾಲೇಜಿನ ಆರಂಭದಲ್ಲಿ 1965 ರಲ್ಲಿ ಭೌತಶಾಸ್ತ್ರ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಲು ಆರಂಭಿಸಿ,1979 ರಿಂದ ಪ್ರಾಚಾರ್ಯರಾಗಿ ಸೇವೆ ಸಲ್ಲಿಸುತ್ತಿದ್ದರು. ಕಾಲೇಜಿನ ವಿದ್ಯಾರ್ಥಿ ನಿಲಯದಲ್ಲಿ ವಾಸ್ತವ್ಯ ಹೂಡಿದ್ದ ಅವರು ಹಾಸ್ಟೆಲ್‌ನ ವಾರ್ಡನ್ ಆಗಿ ಸೇವೆ ಸಲ್ಲಿಸಿದ್ದರು. 1996ರಲ್ಲಿ ನಿವೃತ್ತರಾದ ಅವರು ನಂತರ ತಮ್ಮ ಸಹೋದರರೊಂದಿಗೆ ಕಲ್ಲಡ್ಕದಲ್ಲಿ ವಾಸವಾಗಿದ್ದರು.

ಕೃತಿ 7-10-15

Scanned by CamScanner

ವಿ. ಕ. 5.10.15

ಥಾಲ್ ಸೈನಿಕ್ ಕ್ಯಾಂಪ್‌ನಲ್ಲಿ ಭಾಗಿ

ಶೃಂಗೇರಿ: ಶ್ರೀಜೆಸಿಬಿಎಂ ಕಾಲೇಜಿನ ಎನ್‌ಸಿಸಿ ಕೆಡೆಟ್ ಎಂ.ವೈ. ನಿತಿನ್ ಅವರು ನವದೆಹಲಿಯಲ್ಲಿನಡೆದ ಭೂ ಸೇನೆಯ ವಿಶೇಷ ಕ್ಯಾಂಪ್, ಥಾಲ್ ಸೈನಿಕ್ ಕ್ಯಾಂಪ್‌ನಲ್ಲಿ ಭಾಗವಹಿಸಿ ಕಾಲೇಜಿಗೆ ಕೀರ್ತಿ ತಂದಿರುತ್ತಾರೆ.



ಕಾಲೇಜಿನಲ್ಲಿ ಈ ಸಾಲಿನಿಂದ ನೂತನವಾಗಿ ಅಳವಡಿಸಿರುವ ಅಬ್ಸಾಲ್ಟ್ ಟ್ರೈನಿಂಗ್ ಕೋರ್ಸ್‌ನಲ್ಲಿ ಇವರು ವಿಶೇಷ ತರಬೇತಿ ಪಡೆದಿದ್ದರು. ಫೈರಿಂಗ್, ಮ್ಯಾಪ್ ರೀಡಿಂಗ್ ವಿಭಾಗಗಳಲ್ಲಿಯೂ ತನ್ನ ಪ್ರತಿಭೆ ತೋರಿಸಿದ ಇವರು ಸತತ ಐದು ಕ್ಯಾಂಪ್‌ಗಳಿಗೆ ಆಯ್ಕೆಯಾಗಿ, ಅಂತಿಮವಾಗಿ ದೆಹಲಿಯಲ್ಲಿ ನಡೆದಿದ್ದ ಕ್ಯಾಂಪ್‌ನಲ್ಲಿ ಭಾಗವಹಿಸಿದ್ದಾರೆ. ಅಂತಿಮ ಬಿ.ಎ. ವಿದ್ಯಾರ್ಥಿ ಆಗಿರುವ ನಿತಿನ್‌ನ ಸಾಧನೆಗೆ ಪ್ರಾಂಶುಪಾಲರು, ಎನ್‌ಸಿಸಿ ಅಧಿಕಾರಿ ಮತ್ತು ಕೆಡೆಟ್ಸ್‌ಗಳು, ಬೋಧಕ ವೃಂದ ಹಾಗೂ ವಿದ್ಯಾರ್ಥಿಗಳು ಅಭಿನಂದಿಸಿದ್ದಾರೆ.

ವಿ. ಕ. 5-10-15

Scanned by CamScanner

ಶೃಂಗೇರಿ: ಗಾಂಧಿ, ಶಾಸ್ತ್ರಿ ಸ್ಮರಣೆ

ಶೃಂಗೇರಿ: ಜೆ.ಸಿ.ಬಿ.ಎಂ ಕಾಲೇಜಿನ ಗ್ರಂಥಾಲಯ ವಿಭಾಗದಲ್ಲಿ ಗಾಂಧೀಜಿ ಅವರ ಜನ್ಮ ದಿನಾಚರಣೆಯನ್ನು ಔಚಿತ್ಯಪೂರ್ಣವಾಗಿ ಆಚರಿಸಲಾಯಿತು.

ಗಾಂಧೀಜಿಯವರ ಭಾವಚಿತ್ರಕ್ಕೆ ವಿದ್ವಾನ್ ತಿರುಮಲೆ ಶ್ರೀನಿವಾಸ, ಕಾಲೇಜಿನ ಪ್ರಾಚಾರ್ಯ ಡಾ.ಎಚ್.ಸಿ ವೀರಭದ್ರಗೌಡ ಪುಷ್ಪಾರ್ಚನೆ ಮಾಡಿದರು. ಇತ್ತೀಚೆಗೆ ಭಿನ್ನ ಅಭಿಪ್ರಾಯ ವೀರಪ್ಪಗೌಡ, ಪ್ರಾಂಶುಪಾಲ ಸಿದ್ದಪ್ಪ, ಡಾ.ಸಿ.ವಿ. ಗಿರಿಧರಶಾಸ್ತ್ರಿ, ಮಲಪಂತಿ ಎಸ್. ಪಾಲಿಯಾನ, ಪ್ರಸನ್ನ ಕುಮಾರ್, ಎನ್‌ಎಸ್‌ಎಸ್ ಅಧಿಕಾರಿ ಲಕ್ಷ್ಮೀನಾರಾಯಣ, ಎಸ್.ಜಿ. ಪ್ರಶಾಂತ್ ಇದ್ದರು.

ಶೃಂಗೇರಿ ವರದಿ: ಗಾಂಧೀಜಿಯವರ ಸಮಗ್ರತೆ ಹಾಗೂ ಶಾಸ್ತ್ರಿಯವರ ಸರಳತೆಯನ್ನು ಇಂದಿನ ಯುವಜನತೆ ಅಳವಡಿಸಿಕೊಳ್ಳಬೇಕಿದೆ ಎಂದು ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಜಾಗೀರಾದಾರ್ ತಿಳಿಸಿದರು.

ಕಾಲೇಜಿನಲ್ಲಿ ನಡೆದ ಗಾಂಧಿ ಜಯಂತಿ ಆಚರಣೆ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಉಪನ್ಯಾಸಕ ಎಂ.ಡಿ ಉಮೇಶ ಮಾತನಾಡಿ, ಲಾಲ್ ಬಹದ್ದೂರ್ ಶಾಸ್ತ್ರಿಯವರ ಜೀವನ ಹಾಗೂ ಅವರು ಹೇಳಿಕೊಟ್ಟ ಜೈ ಜವಾನ್ ಜೈ ಕಿಸಾನ್ ಮಂತ್ರ ಇಂದಿಗೂ ಪ್ರಸ್ತುತ ಎಂದರು.

ಉಪನ್ಯಾಸಕ ವಾಸುದೇವ, ಎಸ್.ಎ. ಸತೀಶ್ ಇದ್ದರು



ಶೃಂಗೇರಿ ಜೆ.ಸಿ.ಬಿ.ಎಂ ಕಾಲೇಜಿನ ಗ್ರಂಥಾಲಯ ವಿಭಾಗದಲ್ಲಿ ಗಾಂಧೀಜಿಯವರ ಜನ್ಮ ದಿನಾಚರಣೆಯ ಅಂಗವಾಗಿ ಗಾಂಧೀಜಿಯವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಾಯಿತು.

Scanned by CamScanner

ನಾಗೇಶ್ ಪತ್ರಿಕೆ : 28-9-15

ಮಹಾನಗರಗಳ ಒತ್ತಡದ ಜೀವನದ ಹೊರತಾಗಿಯೂ ಯುವಕರ ವಲಸೆ ಕನಸು ನಿಂತಿಲ್ಲ: ವಿಲಾಸ್ ನಾಯಕ್

ಶೃಂಗೇರಿ: ಇಲ್ಲಿನ ಶ್ರೀ ಜೆ. ಸಿ. ಬಿ. ಎಂ. ಕಾಲೇಜಿನ ವಾಣಿಜ್ಯ ಸಂಘದ ಉದ್ಘಾಟನಾ ಕಾರ್ಯಕ್ರಮವು ಕಾಲೇಜಿನ ಮುಖ್ಯ ಸಭಾಂಗಣದಲ್ಲಿ ಇತ್ತೀಚೆಗೆ ನಡೆಯಿತು. ಹನುಮಾನ್ ಉದ್ದಿಮೆ ಸಮೂಹದ ಅಧ್ಯಕ್ಷ ವಿಲಾಸ್ ನಾಯಕ್ ಸಂಘವನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ನಾವು ಅಹಂಕಾರವನ್ನು ದೂರಸರಿಸಿ ಧನಾತ್ಮಕ ಮನೋವೃತ್ತಿಯನ್ನು ಬೆಳಸಿಕೊಂಡರೆ ಮಾತ್ರ ಉದ್ಯಮ ಶೀಲತೆ ಅಭಿವೃದ್ಧಿಯಾಗಲು ಸಾಧ್ಯವೆಂದು ಹೇಳಿದರು. ಪ್ರಸ್ತುತ ದಿನಗಳಲ್ಲಿ ಯುವ ಸಮುದಾಯ ಉದ್ಯೋಗವನ್ನು ಅರಸಿಕೊಂಡು ಮಹಾನಗರಗಳಿಗೆ ಹೋಗುವುದು ಸಾಮಾನ್ಯವಾಗಿ ಬಿಟ್ಟಿದೆ. ಆ ಮಹಾನಗರಗಳ ಒತ್ತಡದ ಜೀವನದ ಹೊರತಾಗಿಯೂ ಯುವಕರ ವಲಸೆ ಕನಸು ನಿಂತಿಲ್ಲ. ಈ ಬೆಳವಣಿಗೆ ಬದಲಾಗಿ ಯುವಕರು ತಮ್ಮ ಸೃಜನಶೀಲತೆಯನ್ನು ಉಪಯೋಗಿಸಿಕೊಂಡು ತಾವು ವಾಸಿಸುತ್ತಿರುವ ಪಳ್ಳಿಯಲ್ಲಿ ಉದ್ಯಮವನ್ನು ಪ್ರಾರಂಭಿಸಬೇಕಾಗಿದೆ ಎಂದು ಹೇಳಿದರು. ರಾಷ್ಟ್ರಪ್ರಶಸ್ತಿ ವಿಜೇತ ಶಿಕ್ಷಕರಾದ ಕುದಿ ವಸಂತ ಶೆಟ್ಟಿ ಮಾತನಾಡಿ, ಇಂದು ಮಾಧ್ಯಮಗಳ ಅನಾರೋಗ್ಯಕರ ಪೈಪೋಟಿಯ ನಡುವೆ ಸಂಸ್ಕೃತಿ ಕಾಣೆಯಾಗಿ ವಿಕೃತಿ ರಾರಾಜಿಸುತ್ತಿರುವುದು ದುರಂ

2 ನೇ ಪುಟಕ್ಕೆ...

...1 ನೇ ಪುಟದಿಂದ

ತ. ಇದನ್ನು ನಾವು ಗಂಭೀರವಾಗಿ ಪರಿಗಣಿಸಿ ಎಚ್ಚೆತ್ತುಕೊಳ್ಳಬೇಕಾಗಿದೆ ಎಂದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಚಾರ್ಯ ಡಾ. ಹೆಚ್. ಸಿ.ವೀರಪ್ಪಗೌಡ ವಹಿಸಿದ್ದರು. ಡಾ.ಸಿ.ವಿ. ಗಿರಿಧರ ಶಾಸ್ತ್ರೀ, ಪ್ರೊ. ದತ್ತಾತ್ರೇಯ ಎಂ. ಮಾರ್ಪಳ್ಳಿ, ಪ್ರೊ. ಯಶವಂತಿ ಎಸ್ ಸಾಲಿಯಾನ, ವಾಣಿಜ್ಯ ಸಂಘದ ಅಧ್ಯಕ್ಷ ನಿತೀಶ್ ನಾಯಕ್, ಉಪಾಧ್ಯಕ್ಷ ಪೂರ್ಣಾನಂದ ಉಪಸ್ಥಿತರಿದ್ದರು.

Scanned by CamScanner

ವಿಜಯ ಕರ್ನಾಟಕ VK ಸೋಮವಾರ, 28 ಸೆಪ್ಟೆಂಬರ್ 2015,

ಜೆಸಿಬಿಎಂ ಕಾಲೇಜಿನಲ್ಲಿ ವಾಣಿಜ್ಯ ಸಂಘ ಉದ್ಘಾಟನೆ



ಶೃಂಗೇರಿ ಜೆಸಿಬಿಎಂ ಕಾಲೇಜಿನ ವಾಣಿಜ್ಯ ಸಂಘ ಉದ್ಘಾಟಿಸಿದ ಉದ್ಯಮಿ ವಿಲಾಸ್ ನಾಯಕ್ ಮಾತನಾಡಿದರು.

ಶೃಂಗೇರಿ: ನಾವು ಅಹಂಕಾರವನ್ನು ದೂರ ಸರಿಸಿ ಧನಾತ್ಮಕ ಮನೋವೃತ್ತಿಯನ್ನು ಬೆಳೆಸಿಕೊಂಡರೆ ಮಾತ್ರ ಉದ್ಯಮ ಅಭಿವೃದ್ಧಿಯಾಗಲು ಸಾಧ್ಯ ಎಂದು ಹನುಮಾನ್ ಉದ್ದಿಮೆಗಳ ಸಮೂಹದ ಅಧ್ಯಕ್ಷ ವಿಲಾಸ್ ನಾಯಕ್ ಹೇಳಿದರು.

ಅವರು ಶುಕ್ರವಾರ ಜೆಸಿಬಿಎಂ ಕಾಲೇಜಿನಲ್ಲಿ ನಡೆದ ವಾಣಿಜ್ಯ ಸಂಘದ ಉದ್ಘಾಟನಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಪ್ರಸ್ತುತ ದಿನಗಳಲ್ಲಿ 'ಯುವ ಸಮುದಾಯ ಉದ್ಯೋಗ ಅರಸಿಕೊಂಡು ಮಹಾನಗರಗಳಿಗೆ ಹೋಗುವುದು ಸಾಮಾನ್ಯವಾಗಿದೆ. ಆದರೆ ಅದೇ ಯುವಕರು ತಮ್ಮ ಹಳ್ಳಿಯಲ್ಲಿ ಸೃಜನಶೀಲತೆಯನ್ನು ಉಪಯೋಗಿಸಿಕೊಂಡು ಉದ್ಯಮ ಪ್ರಾರಂಭಿಸಬೇಕಾಗಿದೆ ಎಂದು ಹೇಳಿದರು.

ರಾಷ್ಟ್ರಪ್ರಶಸ್ತಿ ವಿಜೇತ ಶಿಕ್ಷಕ ಕುದಿ ವಸಂತ ಶೆಟ್ಟಿ ಮಾತನಾಡಿ, ಇಂದು ಮಾಧ್ಯಮಗಳ ಅನಾರೋಗ್ಯಕರ ಪೈಪೋಟಿ ನಡುವೆ ಸಂಸ್ಕೃತಿ ಕಾಣೆಯಾಗಿ ವಿಕೃತಿ ರಾರಾಜಿಸುತ್ತಿರುವುದು ದುರಂತ. ಇದನ್ನು ನಾವು ಗಂಭೀರವಾಗಿ ಪರಿಗಣಿಸಿ ಎಚ್ಚೆತ್ತುಕೊಳ್ಳಬೇಕಾಗಿದೆ. ನಮಗಿಂದು ಆಧ್ಯಾತಿಕ ಮತ್ತು ವೈಜ್ಞಾನಿಕ ಭಾಷೆಯ ಅಗತ್ಯತೆ ಇದೆ ಎಂದು ಅಭಿಪ್ರಾಯ ಪಟ್ಟರು.

ಪ್ರಾಂಶುಪಾಲ ಡಾ.ಎಚ್.ಸಿ. ವೀರಪ್ಪಗೌಡ ಅಧ್ಯಕ್ಷತೆ ವಹಿಸಿದ್ದರು. ಪ್ರಾಚಾರ್ಯರಾದ ಡಾ.ಸಿ.ಎ.ಗಿರಿಧರ ಶಾಸ್ತ್ರಿ ವಿದ್ಯಾರ್ಥಿ ಕ್ಷೇಮಪಾಲನಾಧಿಕಾರಿಗಳಾದ ಪ್ರೊ.ದತ್ತಾತ್ರೇಯ ಎಂ. ಮಾರ್ಪಳ್ಳಿ, ವಾಣಿಜ್ಯ ಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ.ಯಶವಂತಿ ಎಸ್. ಸಾಲಿಯಾನ, ವಾಣಿಜ್ಯ ಸಂಘದ ಅಧ್ಯಕ್ಷ ನಿತೀಶ್ ನಾಯಕ್, ಉಪಾಧ್ಯಕ್ಷ ಪೂರ್ಣಾನಂದ ಮತ್ತಿತರರು ಹಾಜರಿದ್ದರು.

Scanned by CamScanner

ಪ್ರಭಾವಣಿ 24-9-15

ಚಿಕ್ಕಮಗಳೂರು ಚಿತ್ರಾವಳಿ



1. ಶೃಂಗೇರಿ ಜೆ.ಸಿ.ಬಿ.ಎಂ ಪದವಿ ಪೂರ್ವ ಕಾಲೇಜು ಚಿಕ್ಕಮಗಳೂರು ಜಿಲ್ಲಾ ಮಟ್ಟದ ಪದವಿ ಪೂರ್ವ ಕಾಲೇಜುಗಳ ಕ್ರೀಡಾಕೂಟದಲ್ಲಿ ಭಾಗವಹಿಸಿ ಷಟಲ್ ಬ್ಯಾಡ್ಮಿಂಟನ್, ಟೇಬಲ್ ಟೆನಿಸ್, ಚೆಸ್ ಪಂದ್ಯಾವಳಿಯಲ್ಲಿ ವಿಜೇತರಾಗಿ ರಾಜ್ಯಮಟ್ಟಕ್ಕೆ ಆಯ್ಕೆಯಾದ ಕ್ರೀಡಾಪಟುಗಳನ್ನು ಕಾಲೇಜಿನ ಪ್ರಾಂಶುಪಾಲರು, ಸಿಬ್ಬಂದಿ ವರ್ಗ, ಆಡಳಿತ ಮಂಡಳಿಯವರು ಅಭಿನಂದಿಸಿದರು.

Scanned by CamScanner

ಪ್ರಜಾವಾಣಿ ದಿನಾಂಕ 24-9-15

ಶಿವಮೊಗ್ಗದಸಹ್ಯಾದ್ರಿವಿಜ್ಞಾನಕಾಲೇಜಿನಲ್ಲಿ ನಡೆದ ಕುವೆಂಪು ವಿಶ್ವವಿದ್ಯಾಲಯದ ಅಂತರ ಕಾಲೇಜು ಟೇಬಲ್ ಟೆನಿಸ್ ಪಂದ್ಯಾವಳಿಯಲ್ಲಿ ಶೃಂಗೇರಿಯ ಶ್ರೀ ಜೆ.ಸಿ.ಬಿ.ಎಂ. ಕಾಲೇಜು ತೃತೀಯ ಸ್ಥಾನ ಗಳಿಸಿದೆ. ತಂಡದ ನಾಯಕ ಕಿಶೋರ್, ಸಂಜಯ್ ಪಾಟೀಲ್, ಮಹಾಂತೇಶ್, ವೀರರಾಜು, ಆಶಿಕ್ ಹೆಗ್ಗಡೆಯವರನ್ನು ಪ್ರಾಂಶುಪಾಲ ಹೆಚ್.ಸಿ. ವೀರಪ್ಪಗೌಡ ಮತ್ತು ದೈಹಿಕ ಶಿಕ್ಷಕ ಲೋಕೇಶ್ ಎಂ.ವಿ. ಅಭಿನಂದಿಸಿದ್ದಾರೆ.



Scanned by CamScanner

ವಿಜಯ ಕರ್ನಾಟಕ 26-9-15



ಶೃಂಗೇರಿ ಶ್ರೀಜೆಸಿಬಿಎಂ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು, ಚಿಕ್ಕಮಗಳೂರಿನಲ್ಲಿ ನಡೆದ ಜಿಲ್ಲಾ ಮಟ್ಟದ ಪದವಿ ಪೂರ್ವ ಕಾಲೇಜುಗಳ ಕ್ರೀಡಾಕೂಟದ ಷಟಲ್ ಬ್ಯಾಡ್ಮಿಂಟನ್, ಟೇಬಲ್ ಟೆನ್ನಿಸ್, ಚೆಸ್ ಪಂದ್ಯಾವಳಿಯಲ್ಲಿ ವಿಜೇತರಾಗಿ ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ವಿಜೇತರನ್ನು ಕಾಲೇಜು ಪ್ರಾಂಶುಪಾಲರು, ಸಿಬ್ಬಂದಿ ವರ್ಗ, ಆಡಳಿತ ಮಂಡಳಿ ಅಭಿನಂದಿಸಿದ್ದಾರೆ.

ಶಿ-ಕ 26-9-15

Scanned by CamScanner

ವಿಜಯ ಕರ್ನಾಟಕ 25.9.15



ಶಿವಮೊಗ್ಗದಲ್ಲಿ ನಡೆದ ಕುವೆಂಪು ವಿಶ್ವವಿದ್ಯಾಲಯದ ಅಂತರ ಕಾಲೇಜು ಟೇಬಲ್ ಟೆನ್ನಿಸ್ ಪಂದ್ಯಾವಳಿಯಲ್ಲಿ ಶೃಂಗೇರಿ ಜೆಸಿಬಿಎಂ ಕಾಲೇಜು ತೃತೀಯ ಸ್ಥಾನ ಪಡೆದುಕೊಂಡಿದೆ. ಕಿಶೋರ್ (ನಾಯಕ), ಸಂಜಯ್ ಪಾಟೀಲ್, ಮಹಾಂತೇಶ್, ವೀರರಾಜು, ಆಶಿಕ್ ಹೆಗ್ಗಡೆ ತಂಡದಲ್ಲಿದ್ದರು. ಪ್ರಾಚಾರ್ಯ ಎಚ್.ಸಿ.ವೀರಪ್ಪಗೌಡ, ದೈಹಿಕ ಶಿಕ್ಷಣ ನಿರ್ದೇಶಕ ಎಂ.ವಿ.ಲೋಕೇಶ್ ಇದ್ದಾರೆ.

Scanned by CamScanner

ಜೆಸಿಬಿಎಂ ಕಾಲೇಜಿನಲ್ಲಿ ಸಾಂಸ್ಕೃತಿಕ ಸೌರಭ



ಶೃಂಗೇರಿಯ ಜೆಸಿಬಿಎಂ ಕಾಲೇಜಿನಲ್ಲಿ ನಡೆದ ಸಾಂಸ್ಕೃತಿಕ ಸೌರಭವನ್ನು ಕೇಂದ್ರ ಸಾಹಿತ್ಯ ಅಕಾಡೆಮಿ ಸದಸ್ಯ ಡಾ.ಜಯಪ್ರಕಾಶ್ ಮಾವಿನಕುಳಿ ಉದ್ಘಾಟಿಸಿದರು.

ಶೃಂಗೇರಿ: ಕೇಂದ್ರ ಸಾಹಿತ್ಯ ಅಕಾಡೆಮಿ ಯಿಂದ ಸ್ಥಳೀಯ ಶ್ರೀ ಜೆಸಿಬಿಎಂ ಕಾಲೇಜಿನಲ್ಲಿ ಸಾಂಸ್ಕೃತಿಕ ಸೌರಭ ಕಾರ್ಯಕ್ರಮ ನಡೆಯಿತು.

ಅಕಾಡೆಮಿ ಸದಸ್ಯ ಡಾ.ಜಯಪ್ರಕಾಶ್ ಮಾವಿನಕುಳಿ ಕಾರ್ಯಕ್ರಮ ಉದ್ಘಾಟಿಸಿ ದರು. ನಿವೃತ್ತ ಪ್ರಾಧ್ಯಾಪಕ ಪ್ರೊ. ಕೆ.ಪುಟ್ಟಯ್ಯ ಮತ್ತು ಕೋಣಂದೂರಿನ ಶರಾವತಿ ಕಾಲೇಜು ಉಪನ್ಯಾಸಕಿ ಡಾ.ಪಾರ್ವತಿ ಕಾದಂಬರಿಗಳ ಉಗಮ ಮತ್ತು ಬೆಳವಣಿಗೆ ಕುರಿತು ಮಾತನಾಡಿದರು. ಸಣ್ಣ ಕಥೆಗಳ ಬಗ್ಗೆ ಸಹ್ಯಾದ್ರಿ ಕಾಲೇಜಿನ ಪ್ರಾಧ್ಯಾಪಕ ಡಾ.ಮೋಹನ ಚಂದ್ರಗುತ್ತಿ ಉಪನ್ಯಾಸ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಡಾ.ಎಚ್.ಸಿ.ವೀರಪ್ಪಗೌಡ ಮಾತನಾಡಿ, ಸಾಹಿತ್ಯಾಭ್ಯಾಸ ಜನರಲ್ಲಿ ಸಂತೋಷ, ನೆಮ್ಮದಿಗೆ ಸಹಕಾರಿಯಾಗಿದೆ. ಸಾಹಿತ್ಯದ ವಿವಿಧ ಪ್ರಕಾರಗಳಾದ ಕಾವ್ಯ, ಕಾದಂಬರಿ ಹಾಗೂ ಸಣ್ಣ ಕಥೆ ಕುರಿತ ಸಾಂಸ್ಕೃತಿಕ ಸೌರಭ ವಿದ್ಯಾರ್ಥಿಗಳಲ್ಲಿ ಓದು ಬೆಳೆಸುವ ಪ್ರೇರಣೆಯ ಸಾರ್ಥಕ ಕಾರ್ಯಕ್ರಮ ವಾಗಬೇಕು ಎಂದರು.

ಕಾರ್ಯಕ್ರಮ ದಲ್ಲಿ ಕನ್ನಡ ವಿಭಾಗದ ಎಚ್.ಜಿ.ಅನಿತಾ, ರಶ್ಮಿ, ಸಂತೋಷ ಹಾಗೂ ನಾಗೇಂದ್ರ ಹಾಜರಿದ್ದರು. ಸಂಜಯ್ ಸ್ವಾಗತಿಸಿ, ಕಾವ್ಯ ನಿರೂಪಿಸಿದರು.

ವಿಜಯ ಕರ್ನಾಟಕ ದಿ-7-12

Scanned by CamScanner

ನಲಾಕೇಶ್ ಪತ್ರಿಕೆ. ಪುಟ 16 ಕಾಲಂ 3ರಂ

ಪತ್ರಿಕೆ

ದಿನಾಂಕ : 18 - 06 - 2015

ಕುವೆಂಪು ವಿ.ವಿ. ಅರ್ಥಶಾಸ್ತ್ರ ಅಧ್ಯಾಪಕ ಸಂಘ ಅಧ್ಯಕ್ಷರಾಗಿ ಡಾ. ಹೆಚ್.ಸಿ. ವೀರಪ್ಪಗೌಡ ಆಯ್ಕೆ.



ಶಿವಮೊಗ್ಗ: ಇಲ್ಲಿನ ಸಹ್ಯಾದ್ರಿ ಕಲಾ, ವಾಣಿಜ್ಯ ಕಾಲೇಜಿನಲ್ಲಿ, ಕುವೆಂಪು ವಿಶ್ವವಿದ್ಯಾನಿಲಯ ಅರ್ಥಶಾಸ್ತ್ರ ಅಧ್ಯಾಪಕರ ಸಂಘದ ಸಭೆಯು ಜೂನ್. 12 ರಂದು ನಡೆಯಿತು. ಸಭೆಯಲ್ಲಿ ಸಂಘಕ್ಕೆ ನೂತನ ಪದಾಧಿಕಾರಿಗಳ ಆಯ್ಕೆ ನಡೆಸಲಾಯಿತು. ಅಂತೆಯೇ ಶೃಂಗೇರಿ, ಶ್ರೀ ಜೆ.ಸಿ. ಬಿ.ಎಂ. ಕಾಲೇಜಿನ ಪ್ರಾಚಾರ್ಯರಾದ ಡಾ. ಹೆಚ್. ಸಿ. ವೀರಪ್ಪಗೌಡರವರು ಅಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆಯಾದರು. ಉಳಿದಂತೆ ಉಪಾಧ್ಯಕ್ಷರುಗಳಾಗಿ ಹೊಳೆಹೊನ್ನೂರು, ಸರ್ಕಾರಿ ಪ್ರಥಮದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ. ಕೆ.ಆರ್. ಬೋಗೆಶ್, ಮೂಡಿಗೆರೆ, ಸರ್ಕಾರಿ ಪ್ರಥಮದರ್ಜೆ ಕಾಲೇಜಿನ ಅರ್ಥಶಾಸ್ತ್ರ ಪ್ರಾಧ್ಯಾಪಕ ಪ್ರೊ.ಲಕ್ಷ್ಮೀಕಾಂತ, ಶಿವಮೊಗ್ಗ, ಡಿ.ವಿ.ಎಸ್.ಕಾಲೇಜಿನ ಪ್ರಭಾಕರ್, ಕಾರ್ಯದರ್ಶಿಯಾಗಿ ಭದ್ರಾವತಿ, ಸರ್ ಎಂ.ವಿ.ಸರ್ಕಾರಿ ಕಾಲೇಜಿನ ನಾಸಿರ್‌ಖಾನ್, ಸಹಕಾರ್ಯದರ್ಶಿಯಾಗಿ ಶಿಕಾರಿಪುರ, ಸರ್ಕಾರಿ ಪ್ರಥಮದರ್ಜೆ ಕಾಲೇಜು ಅರ್ಥಶಾಸ್ತ್ರ ಪ್ರಾಧ್ಯಾಪಕಿ ಪ್ರೊ.ನೇತ್ರಾವತಿ, ಖಜಾಂಚಿಯಾಗಿ ಶಿವಮೊಗ್ಗ, ಸಹ್ಯಾದ್ರಿ ಕಲಾ ಕಾಲೇಜಿನ ಅರ್ಥಶಾಸ್ತ್ರ ಪ್ರಾಧ್ಯಾಪಕ ಡಾ. ಶಾಂಭಶಿವ, ಶಿವಮೊಗ್ಗ ಜಿಲ್ಲಾ ಸಂಘಟನಾ ಕಾರ್ಯದರ್ಶಿಯಾಗಿ ಶಂಕರಘಟ್ಟ ಎಸ್.ಎಂ.ಆರ್.ವಿಶ್ವವಿದ್ಯಾಲಯ ಕಾಲೇಜಿನ ಅರ್ಥಶಾಸ್ತ್ರ ಪ್ರಾಧ್ಯಾಪಕ ಪ್ರೊ ಶ್ರೀನಿವಾಸ್, ಚಿಕ್ಕಮಗಳೂರು ಜಿಲ್ಲಾ ಸಂಘಟನಾ ಕಾರ್ಯದರ್ಶಿಯಾಗಿ ಕಡೂರು ಸರ್ಕಾರಿ ಪ್ರಥಮದರ್ಜೆ ಕಾಲೇಜಿನ ಉಪನ್ಯಾಸಕರಾದ ಚಂದ್ರಮೌಳಿ ಆಯ್ಕೆಯಾಗಿದ್ದಾರೆ.

Scanned by CamScanner

ಶೃಂಗೇರಿ, ಗುರುನಮನ–ದತ್ತಿ ಉಪನ್ಯಾಸ



ಶೃಂಗೇರಿ: ಇಲ್ಲಿನ ಶ್ರೀ ಜೆ.ಸಿ.ಬಿ.ಎಂ. ಕಾಲೇಜಿನಲ್ಲಿ ಹಳೆ ವಿದ್ಯಾರ್ಥಿ ಸಂಘದ ವತಿಯಿಂದ ಡಾ.ಕೆ.ಬಿ.ರಾಮಕೃಷ್ಣರಾವ್ ದತ್ತಿ ಉಪನ್ಯಾಸ ಮತ್ತು ಗುರುನಮನ ಕಾರ್ಯಕ್ರಮವು ಸೆ. 5 ರಂದು ಯಶಸ್ವಿಯಾಗಿ ನಡೆಯಿತು. ಕಾಲೇಜಿನ ಮುಖ್ಯ ಸಭಾಂಗಣದಲ್ಲಿ ನಡೆದ ಈ ಕಾರ್ಯಕ್ರಮವನ್ನು ಬೆಂಗಳೂರು ವಿ.ವಿ. ಯ ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ.ಹೆಚ್.ಶಶಿಕಲಾ ರವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳ ಬಾಳಿಗೆ ದಾರಿ ದೀಪವಾಗಿರುವ ಗುರುವಿಗೆ ಭಾರತೀಯ ಪರಂಪರೆಯಲ್ಲಿ ವಿಶಿಷ್ಟ ಸ್ಥಾನವಿದೆ ಎಂದು ಹೇಳಿದರು. ಪ್ರಾವೀಣ್ಯತೆ ಮತ್ತು ಸಾಮಾರ್ಥ್ಯವನ್ನು ಪಡೆದಿರುವ ಗುರುವನ್ನು ಎಷ್ಟು ತಟ್ಟುತ್ತೇವೋ ಶಿಷ್ಯ ಅವರ ಸಾಮಾರ್ಥ್ಯಕ್ಕೆ ಅನುಗುಣವಾಗಿ ಪ್ರತಿಫಲ ಪಡೆಯುತ್ತಾನೆ. ಗುರು ಎಂದರೆ ಗುರುತ್ವಾಕರ್ಷಣೆ ಬಹಳ ತೂಕ, ಮೌಲ್ಯ ಇರುವಂಥಹದ್ದು. ಅಂಥಹ ಗುರುವಿಗೆ ನಮನ ಸಲ್ಲಿಸುವುದು ಸರ್ವರ ಆದ್ಯ ಕರ್ತವ್ಯವಾಗಿದೆ ಎಂದರು. ಶಿವಮೊಗ್ಗ ಪಿ.ಎ.ಸಿ.ಇ. ಕಾಲೇಜಿನ ಪ್ರಾಚಾರ್ಯ ಪ್ರೊ. ರಘುನಾಥನ್ ಮಾತನಾಡಿ, ಅದ್ವೈತ ತಾತ್ವಿಕವಾದ ವಿಭಿನ್ನ ರೀತಿಯಲ್ಲಿ ತನ್ನ ತತ್ವಗಳನ್ನು ಪಾಶ್ಚಿಮಾತ್ಯ ಜಗತ್ತಿಗೆ ಪರಿಚಯಿಸಿ.

2 ನೇ ಪುಟಕ್ಕೆ...

ಶೃಂಗೇರಿ, ಗುರುನಮನ–ದತ್ತಿ ಉಪನ್ಯಾಸ

...1 ನೇ ಪುಟದಿಂದ

ಪ್ರೇರಣ ಶಕ್ತಿಯಾಗಿ ಮುಂಚೂಣಿಯಲ್ಲಿದ್ದವರು ಡಾ.ಸರ್ವಪಲ್ಲಿ ರಾಧಾಕೃಷ್ಣನ್. ಅಂಥಹವರಿಗೆ ನಮನ ಸಲ್ಲಿಸಬೇಕಾಗಿರುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದರು. ಕಾಲೇಜು ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಹೆಚ್.ಟಿ.ರಮೇಶ್ ಸಭಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಕಾಲೇಜಿನ ಉಪನ್ಯಾಸಕರು, ಸಿಬ್ಬಂದಿಗಳಿಗೆ ಹಾಗು ಹಳೆ ವಿದ್ಯಾರ್ಥಿ ಸಂಘದ ಪೂರ್ವಾಧ್ಯಕ್ಷರಿಗೆ ಗೌರವ ಸಮರ್ಪಿಸಲಾಯಿತು. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸಹಾಯಧನ ವಿತರಣೆ, ಸಂಘಕ್ಕೆ ದೇಣಿಗೆ ನೀಡಿದ ಹಿರಿಯ ವಿದ್ಯಾರ್ಥಿಗಳಿಗೆ ಹಾಗೂ 50 ನೇ ವರ್ಷಕ್ಕೆ ಪಾದಾರ್ಪಣೆಮಾಡಿದ ಸಂಘದ ಆಡಳಿತ ಮಂಡಳಿಗೆ ಗೌರವ ಸಮರ್ಪಿಸಲಾಯಿತು. ಇದೇ ಸಂದರ್ಭದಲ್ಲಿ ಕಾಲೇಜಿನಲ್ಲಿ ಆರಂಭಿಸಿರುವ ಸಿ.ಇ.ಟಿ.ಗೆ ತರಬೇತಿ ನೀಡುವ ತರಗತಿಯನ್ನು ಡಾ.ನಿರ್ಮಲ ಉದ್ಘಾಟಿಸಿದರು. ದೀಪ್ತಿ ಪ್ರಾರ್ಥಿಸಿದರೆ, ಕಾಲೇಜಿನ ಪ್ರಾಚಾರ್ಯ ಡಾ.ಹೆಚ್.ಸಿ.ವೀರಪ್ಪಗೌಡ ಸ್ವಾಗತಿಸಿದರು. ಮಂಜುನಾಥಗೌಡ, ಕೆ.ಟಿ.ಮಂಜುನಾಥ್, ದಿನೇಶ್ ಕೆಟ್ಟಿ, ಶ್ರುತಿ ನಿರೂಪಿಸಿದರು. ಎ.ಜಿ. ಪ್ರಶಾರಿತ್ ವಂದಿಸಿದರು.

Scanned by CamScanner

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI « SHIVAMOGGA
12 | ಗುರುವಾರ 31 ಮಾರ್ಚ್ 2016



ರಾಯಚೂರು	41	24
ಕಲಬುರಗಿ	38	25
ಹುಬ್ಬಳ್ಳಿ-ಧಾರವಾಡ	37	20
ಮಂಗಳೂರು	35.4	26
ಮೈಸೂರು	35.8	20.8

ಕಲೆ ಮೂಲಕ ಮನುಷ್ಯನ ಕ್ರಿಯಾಶೀಲತೆ ಅನಾವರಣ

ಶೃಂಗೇರಿ: ಕಲೆ ಮೂಲಕ ಮನುಷ್ಯನ ಕ್ರಿಯಾಶೀಲತೆ ಅನಾವರಣಗೊಳ್ಳುತ್ತದೆ ಎಂದು ಮೇಣಿ ಸರ್ಕಾರಿ ಪ್ರಥಮದರ್ಜೆ ಕಾಲೇಜಿನ ಪ್ರಾಚಾರ್ಯೆ ಆಶಾಲತಾ ಹೇಳಿದರು.

ಜೆಸಿಬಿವರ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಶೃಂಗ ಸಂಭ್ರಮ ಅಂತರಕಾಲೇಜು ಸಾಂಸ್ಕೃತಿಕ ಸ್ಪರ್ಧೆ ಉದ್ಘಾಟಿಸಿ ಮಾತನಾಡಿದರು.

ಕಲೆ ಕೇವಲ ಪ್ರವೃತ್ತಿಯಾಗಿ ಉಳಿದಿಲ್ಲ. ಅದನ್ನೊಂದು ಪ್ರತಿಭೆಯಾಗಿ ಮಾರಿಕೆಯಲ್ಲಾಗಿದೆ. ಈ ಮೂಲಕ ಹೆಸರು, ಸ್ಥಾನ, ಹಣಗಳಿಸಲಾಗುತ್ತಿದೆ ಎಂದರು.

ಸಾಂಸ್ಕೃತಿಕ ಚಟುವಟಿಕೆಗಳು ವಿಕೃತಿ ಕೇಂದ್ರಿತವಾಗದೆ ಗುಂಪುಗಳಲ್ಲಿ ನಡೆದರೆ ಪ್ರೀತಿ, ವಿಶ್ವಾಸ, ಮೌಲ್ಯ ಮತ್ತು ಜವಾಬ್ದಾರಿ ಕಲಿಸುತ್ತದೆ. ಸಹನೆ, ಸ್ವೀಕರಿಸುವ ಮನೋಭಾವ ಬೆಳೆಯುತ್ತದೆ. ಸೃಜನಶೀಲ ಮನಸ್ಸುಗಳು ಅನಾವರಣಗೊಂಡು ಸಮಾಜಕ್ಕೆ



ಶೃಂಗ ಸಂಭ್ರಮ ಕಾರ್ಯಕ್ರಮದಲ್ಲಿ 'ಕೈ ತುತ್ತು-ಭಾವನೆಗಳ ಕೂತ್ತು' ಲೇಖನಗಳ ಸಂಗ್ರಹ ಬಿಡುಗಡೆಗೊಳಿಸಲಾಯಿತು.

ಉನ್ನತ ಕೊಡುಗೆ ನೀಡುವಲ್ಲಿ ಸಹಕಾರಿಯಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಪ್ರಾಚಾರ್ಯ ಡಾ. ಎಚ್.ಸಿ.ವೀರಪ್ಪ ಗೌಡ ಮಾತನಾಡಿ, ಸಾಂಸ್ಕೃತಿಕ ಸಂಭ್ರಮಗಳು ನಮ್ಮಲ್ಲಿ ಉತ್ಕೃಷ್ಟ ಸಾಂಸ್ಕೃತಿಕ ಮನಸ್ಸನ್ನು ಬೆಳೆಸುತ್ತವೆ. ಶಿಕ್ಷಣದ ಬೇರುಗಳು ಕಹಿಯಾದರೆ ನೀಡುವ ಶಿಕ್ಷಣ ನಿಷ್ಪಯೋಗಿಯಾಗುತ್ತದೆ ಎಂದರು.

ಸಭಾ ಕಾರ್ಯಕ್ರಮದ ನಂತರ ನಡೆದ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಕುವೆಂಪು ವಿಶ್ವವಿದ್ಯಾಲಯ ವ್ಯಾಪ್ತಿಯ 10 ಕಾಲೇಜುಗಳು ಭಾಗವಹಿಸಿದ್ದವು. ಇದೇ ಸಂದರ್ಭದಲ್ಲಿ ಕಾಲೇಜಿನ ದ್ವಿತೀಯ ಬಿಎಸ್ಸಿ ವಿದ್ಯಾರ್ಥಿ ನಾಗರಾಜ ಕೆಡೆಯಮರ 'ಕೈ ತುತ್ತು - ಭಾವನೆಗಳ ಮೊತ್ತ' ಎಂಬ ಸಾಮರ್ಥ್ಯಕ ಲೇಖನಗಳ ಸಂಗ್ರಹ ಬಿಡುಗಡೆಗೊಳಿಸಲಾಯಿತು.

ವಿದ್ಯಾರ್ಥಿ ಕ್ಷೇಮಪಾಲನಾಧಿಕಾರಿ ಪ್ರೊ ದತ್ತಾತ್ರೇಯ ಮಾರ್ಕೈ ಸಾಂಸ್ಕೃತಿಕ ಸಂಚಾಲಕಿ ಧನುಷಾಂತಿ ಎಸ್.ಸಾಲಿಯಾನ್, ವಿದ್ಯಾರ್ಥಿ ನಾಯಕ ಪ್ರೀತಿಸ್ವಾಮಿ ಜಿ.ಪಿ.ಸಿಂಗೆ ನಾಯಕ್, ರಾಜೀವ್ ಮತ್ತಿತರರು ಉಪಸ್ಥಿತರಿದ್ದರು.

Scanned by CamScanner

ಪತ್ರಿಕೆ ದಿನಾಂಕ : 28 - 09 - 2015

ಶೃಂಗೇರಿ:ಎನ್.ಎಸ್.ಎಸ್. ದಿನಾಚರಣೆ



ಶೃಂಗೇರಿ: ಇಲ್ಲಿನ ಶ್ರೀ ಜೆ.ಸಿ.ಬಿ.ಎಂ. ಕಾಲೇಜಿನಲ್ಲಿ ಎನ್.ಎಸ್.ಎಸ್. ದಿನಾಚರಣೆಯನ್ನು ಇತ್ತೀಚೆಗೆ ಆಚರಿಸಲಾಯಿತು. ಈ ಕುರಿತ ಸಭಾ ಕಾರ್ಯಕ್ರಮದಲ್ಲಿ ಮಾತನಾಡಿದ ಕಿರುತೆರೆ ನಿರ್ದೇಶಕ ರಮೇಶ್ ಬೇಗಾರ್, ಪ್ರತಿಯೊಬ್ಬರು ಸಹಬಾಳ್ವೆಯನ್ನು ರೂಡಿಸಿಕೊಳ್ಳಲು ಪ್ರೇರೆಪಿಸುವ.. ಆ ಮೂಲಕ ನಿರಪೇಕ್ಷೆಯನ್ನು ಸಾಧಿಸುವಂತೆ ಮಾಡುವ ಸಾಧನವೇ ಸೇವೆಯಾಗಿದೆ. ಆದರೆ ದೂರದರ್ಶನವೆಂಬ ದೃಶ್ಯ ಮಾಧ್ಯಮದ ಪ್ರಭಾವ ದಿಂದಾಗಿ ಮಲೆನಾಡಿನ ಯುವ ಸಮುದಾಯದಲ್ಲಿ ದಿನದಿಂದ ದಿನಕ್ಕೆ ತಮ್ಮಲ್ಲಿನ ಸಂಸ್ಕೃತಿ ಮಾಯವಾ ಗಿ ಹೊಸದೊಂದು ಸಂಸ್ಕೃತಿ ಆವರಿಸುತ್ತಿದೆ. ಈ ರೀತಿ ದೇಸಿ ಸಂಸ್ಕೃತಿಯ ಮೆಲಾಗುತ್ತಿರುವ ಪ್ರಭಾರ ಬಹುದೊಡ್ಡ ಅಪಾಯ ಎಂದು ಅವರು ಅಭಿಪ್ರಾಯಪಟ್ಟರು. ವಿದ್ಯಾರ್ಥಿ ಕ್ಷೇಮಪಾಲ ನಾಧಿಕಾರಿಗಳಾದ ಪ್ರೊ. ದತ್ತಾತ್ರೇಯ ಎಂ. ಮಾರ್ಪಳ್ಳಿ ಮಾತನಾಡಿ, ರಾಷ್ಟ್ರ ನಿರ್ಮಾಣದಲ್ಲಿ ಯುವ ಜನತೆ ಸಕ್ರಿಯವಾಗಿ ತೊಡಗಿಕೊಳ್ಳಬೇಕಾ ಗಿದೆ ಅದಕ್ಕಾಗಿ ಮಹತ್ಮಾ ಗಾಂಧೀಜಿಯವರ ಕನಸಿನಂತೆ ಸೇವೆಯನ್ನು ಸಾಧನವಾಗಿ ಬಳಸಿ ಕೊಳ್ಳಬೇಕಾಗಿದೆ ಎಂದು ಹೇಳಿದರು. ಸಭಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲ ಡಾ. ಹೆಚ್. ಸಿ. ವೀರಪ್ಪಗೌಡ ವಹಿಸಿದ್ದರು.

Scanned by CamScanner

ಪ್ರಜಾವಾಣಿ ಸೋಮವಾರ • ಅಕ್ಟೋಬರ್ 19, 2015

ದೌರ್ಬಲ್ಯ ಮೆಟ್ಟಿ ನಿಲ್ಲಲು ಅಧಿಕಾರಿ ಸಲಹೆ

ಪ್ರಜಾವಾಣಿ ವಾರ್ತೆ

ಶೃಂಗೇರಿ: 'ಪ್ರತಿ ವ್ಯಕ್ತಿಯಲ್ಲೂ ದೌರ್ಬಲ್ಯಗಳಿರುವುದು ಸಹಜ. ಅದನ್ನು ಮೆಟ್ಟಿ ನಿಂತಾಗ ಬದುಕು ಸರಿದಾರಿಗೆ ಬರುತ್ತದೆ' ಎಂದು ಸಿಪಿಐ ಸುಧೀರ್ ಹೆಗಡೆ ಹೇಳಿದರು.

ಮಾಜಿ ರಾಷ್ಟ್ರಪತಿ ಎಪಿಜೆ ಅಬ್ದುಲ್ ಕಲಾಂ ಅವರ ಜನ್ಮದಿನದ ಅಂಗವಾಗಿ ಜೆ.ಸಿ. ಬಿ. ಎಂ ಕಾಲೇಜಿನಲ್ಲಿ ಇತ್ತೀಚೆಗೆ ನಡೆದ ವಿವಿಧ ಸ್ಪರ್ಧೆಗಳಿಗೆ ಬಹುಮಾನ ನೀಡಿ ಅವರು ಮಾತನಾಡಿದರು.

'ಸಮಾಜದ ಆದರ್ಶ ವ್ಯಕ್ತಿಗಳನ್ನು ಮಾದರಿಯಾಗಿಟ್ಟುಕೊಳ್ಳಬೇಕು. ಸೃಜನಶೀಲತೆಯ ಮೂಲಕ ಬದುಕಿನಲ್ಲಿ ಯಶಸ್ಸು ಸಾಧಿಸಬೇಕು' ಎಂದರು.

ಡಾ. ಎಚ್. ಸಿ. ವೀರಪ್ಪ ಗೌಡ ಅಧ್ಯಕ್ಷತೆ ವಹಿಸಿದ್ದರು. ವಿದ್ಯಾರ್ಥಿ ಕ್ಷೇಮಪಾಲನಾಧಿಕಾರಿ ಪ್ರೊ ದಕ್ಷಾತ್ರೇಯಿ ಮಾರ್ಪಳ್ಳಿ, ಪೂರ್ಣಾನಂದ, ನಿತೀಶ್ ನಾಯಿಕ್, ಶ್ರೀನಿವಾಸ್ ಮತ್ತಿತ್ತರಿದ್ದರು.

ವಿದ್ಯಾರ್ಥಿಗಳಿಗೆ ರಸಪ್ರಶ್ನೆ, ವಿಚಾರ ಸಂಕಿರಣ, ವಿಜ್ಞಾನ ಮಾದರಿ ತಯಾರಿಕೆ, ಜಾಹೀರಾತು ಸಂಬಂಧಿ ಅಭಿನಯ ಮೊದಲಾದ ಸ್ಪರ್ಧೆಗಳನ್ನು, ವಿವಿಧ ಆಟೋಟಗಳನ್ನು ಆಯೋಜಿಸಲಾಗಿತ್ತು.



ಮಾಜಿ ರಾಷ್ಟ್ರಪತಿ ಎಪಿಜೆ ಅಬ್ದುಲ್ ಕಲಾಂ ಅವರ ಜನ್ಮದಿನದ ಅಂಗವಾಗಿ ಶೃಂಗೇರಿ ಜೆ.ಸಿ.ಬಿ.ಎಂ ಕಾಲೇಜಿನಲ್ಲಿ ಇತ್ತೀಚೆಗೆ ನಡೆದ ವಿವಿಧ ಸ್ಪರ್ಧೆಗಳಿಗೆ ಸಿಪಿಐ ಸುಧೀರ್ ಹೆಗಡೆ ಬಹುಮಾನ ನೀಡಿ ಮಾತನಾಡಿದರು.

Scanned by CamScanner

ವಿಜಯ ಕರ್ನಾಟಕ VK ಸೋಮವಾರ, 28 ಸೆಪ್ಟೆಂಬರ್ 2015

ನಿರಪೇಕ್ಷ ಸಾಧನವೆ ಸೇವೆ

ಶೃಂಗೇರಿ: ನಮ್ಮನ್ನು ಸಹಬಾಳ್ವೆ ನಡೆಸುವಂತೆ ಪ್ರೇರೆಪಿಸುವ ಮೂಲಕ, ನಿರಪೇಕ್ಷೆಯನ್ನು ಸಾಧಿಸುವಂತೆ ಮಾಡುವ ಸಾಧನವೇ ಸೇವೆ ಎಂದು ಕಿರುತೆರೆ ನಿರ್ದೇಶಕ ರಮೇಶ್ ಬೇಗಾರ್ ಹೇಳಿದರು.

ಅವರು ಇತ್ತೀಚೆಗೆ ಜೆಸಿಬಿಎಂ ಕಾಲೇಜಿನಲ್ಲಿ ಎನ್ನೆಸ್ಸೆಸ್ ದಿನಾಚರಣೆ ಅಂಗವಾಗಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದರು.

ಮಲೆನಾಡಿನ ಯುವ ಸಮುದಾಯದಲ್ಲಿ ದಿನದಿಂದ ದಿನಕ್ಕೆ ದೂರದರ್ಶನವೆಂಬ ದೃಶ್ಯ ಮಾಧ್ಯಮದ ಪ್ರಭಾವದಿಂದಾಗಿ ಇಲ್ಲಿನ ಸಂಸ್ಕೃತಿ ಮಾಯವಾಗಿ ಹೊಸದೊಂದು ಸಂಸ್ಕೃತಿ ಆವರಿಸುತ್ತಿದೆ. ಈ ರೀತಿ ದೇಸಿ ಸಂಸ್ಕೃತಿ ಮೇಲಾಗುತ್ತಿರುವ ಪ್ರಹಾರ ಬಹುದೊಡ್ಡ ಅಪಾಯವಾಗಿದೆ ಎಂದರು.

ವಿದ್ಯಾರ್ಥಿ ಕ್ಷೇಮಪಾಲನಾಧಿಕಾರಿಗಳಾದ ಪ್ರೊ.ದತ್ತಾತ್ರೇಯ ಎಂ.ಮಾರ್ಪಳ್ಳಿ ಮಾತನಾಡಿ, ರಾಷ್ಟ್ರ ನಿರ್ಮಾಣದಲ್ಲಿ ಯುವ ಜನತೆ ಸಕ್ರಿಯವಾಗಿ ತೊಡಗಿಕೊಳ್ಳಬೇಕಾಗಿದೆ. ಅದಕ್ಕಾಗಿ ಮಹಾತ್ಮ ಗಾಂಧೀಜಿಯವರ ಕನಸಿನಂತೆ ಸೇವೆಯನ್ನು ಸಾಧನವಾಗಿ ಉಪಯೋಗಿಸಬೇಕಾಗಿದೆ ಎಂದು ಹೇಳಿದರು.

ಡಾ.ಎಚ್.ಸಿ.ವೀರಪ್ಪಗೌಡ ಅಧ್ಯಕ್ಷತೆ ವಹಿಸಿದ್ದರು. ಕಾಲೇಜಿನ ಎನ್ನೆಸ್ಸೆಸ್ ಅಧಿಕಾರಿಗಳಾದ ಎನ್.ಎಚ್.ಲಕ್ಷ್ಮೀನಾರಾಯಣ ಮತ್ತು ಎ.ಜಿ.ಪ್ರಶಾಂತ್, ಪ.ಪೂ. ಕಾಲೇಜಿನ ಪ್ರಾಚಾರ್ಯ ಡಾ.ಸಿ.ವಿ. ಗಿರಿಧರಶಾಸ್ತ್ರೀ, ಗ್ರಂಥಪಾಲಕ ಪ್ರಸನ್ನ ಕುಮಾರ್ ಮತ್ತಿತರರು ಹಾಜರಿದ್ದರು. ಈ ಸಂದರ್ಭ ವಿದ್ಯಾರ್ಥಿಗಳಿಗೆ ಸ್ಪರ್ಧೆ ನಡೆಯಿತು.



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ಎನ್ನೆಸ್ಸೆಸ್ ದಿನಾಚರಣೆ ಅಂಗವಾಗಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ರಮೇಶ್ ಬೇಗಾರ್ ಮಾತನಾಡಿದರು.

Scanned by CamScanner

ವಿಜಯ ಕರ್ನಾಟಕ 14.9.15

ವೈಚಾರಿಕತೆಯ ಹೆಸರಿನಲ್ಲಿ ಅಶಾಂತಿ: ಸ್ವಾಮೀಜಿ

ಶೃಂಗೇರಿ: ನನ್ನ ನಂಬುಗೆಯಿರುವುದು ಯುವ ಜನಾಂಗದ ಮೇಲೆ ಎಂಬ ವಿವೇಕಾನಂದರ ಮಾತು ಸಮಾಜ ಹಾಗೂ ಸ್ವಾತಂತ್ರ್ಯದ ಬಗೆಗೆ ಯುವ ಸಮುದಾಯದ ಹೊಣೆಗಾರಿಕೆಯನ್ನು ನೆನಪಿಸುತ್ತದೆ ಎಂದು ತುಮಕೂರಿನ ಶ್ರೀ ರಾಮಕೃಷ್ಣ ವಿವೇಕಾನಂದ ಶಾರದ ಆಶ್ರಮದ ಸ್ವಾಮಿ ವೀರೇಶಾನಂದಾಜೀ ಮಹಾರಾಜ್ ಹೇಳಿದರು.

ಅವರು ಶುಕ್ರವಾರ ಜೆಸಿಬಿಎಂ ಕಾಲೇಜಿನಲ್ಲಿ ಆಯೋಜಿಸಿದ್ದ ಸೇವೆ, ವ್ಯಕ್ತಿ ಮತ್ತು ಸಮಾಜ ಸ್ವಾಮಿ ವಿವೇಕಾನಂದ ಮತ್ತು ಮಹಾತ್ಮಗಾಂಧಿಯವರ ದೃಷ್ಟಿಯಲ್ಲಿ ಎಂಬ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಮಾತನಾಡಿದರು.

ಸಮಾಜದಲ್ಲಿ ಬುದ್ದಿ ಜೀವಿಗಳೆಂದು ಕರೆಸಿಕೊಂಡಿರುವವರು ವೈಜ್ಞಾನಿಕತೆಯ ಹೆಸರಿನಲ್ಲಿ ವಿಗ್ರಹಾರಾಧನೆ ಮೂಢನಂಬಿಕೆ ಎಂಬ ಹೊಸದೊಂದು ಮೂಢ ನಂಬಿಕೆಯನ್ನು ಸಮುದಾಯದಲ್ಲಿ ತುಂಬುತ್ತಿದ್ದಾರೆ. ಧರ್ಮಗ್ರಂಥವನ್ನು ಸುಡಬೇಕೆಂಬ ಅವೈಜ್ಞಾನಿಕ ಹೇಳಿಕೆಗಳ ಮೂಲಕ ಸಮುದಾಯವೊಂದರ ನಂಬಿಕೆಗಳ ಬುಡಕ್ಕೆ ಕೈ ಹಾಕಿ ಸಮಾಜದಲ್ಲಿ ಅಶಾಂತಿ ಹಬ್ಬಿಸುತ್ತಿದ್ದಾರೆ ಎಂದು ಅವರು ವಿಷಾದ ವ್ಯಕ್ತಪಡಿಸಿದರು.

ಬೆಂಗಳೂರಿನ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಡಾ.ಪ್ರೊ.ಶ್ರೀನಿವಾಸಯ್ಯ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಪ್ರಸ್ತುತ ದಿನಗಳಲ್ಲಿ ಜನ ಸಮುದಾಯ ಕೇವಲ ಅಕ್ಷರಸ್ಥರಾಗುತ್ತಿದ್ದು, ಪ್ರಜ್ಞಾವಂತಿಕೆ, ಬುದ್ದಿವಂತಿಕೆ ಕಾಣುತ್ತಿಲ್ಲ; ನಾವೆಲ್ಲಾ ಗಾಂಧೀಜಿಯವರ ಚಿಂತನೆ, ಸತ್ಯ, ಅಹಿಂಸೆ ಎಂಬ ಅಸ್ತ್ರಗಳ ಬಗ್ಗೆ ಯೋಜಿಸಬೇಕಿದೆ ಎಂದರು.

ಕಾಲೇಜಿನ ಪ್ರಾಚಾರ್ಯ ಡಾ. ಎಚ್.ಸಿ.ವೀರಪ್ಪಗೌಡ ಅಧ್ಯಕ್ಷತೆ ವಹಿಸಿದ್ದರು. ಪದವಿ ಪೂರ್ವ ಪ್ರಾಂಶುಪಾಲ ಡಾ.ಸಿ.ವಿ.ಗಿರಿಧರಶಾಸ್ತ್ರಿ, ಡಾ.ಕುಂದನ್ ಬಸವರಾಜ್, ಅರುಣ್ ಪೂಜಾರ್, ಅನಂತ ಪದ್ಮನಾಭ ಭಟ್, ಎನ್ಎಸ್ಎಸ್ ಅಧಿಕಾರಿಗಳಾದ ಎನ್. ಎಚ್.ಲಕ್ಷ್ಮೀನಾರಾಯಣ, ಎ.ಜಿ. ಪ್ರಶಾಂತ್ ಮತ್ತಿತರರು ಹಾಜರಿದ್ದರು.



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ 'ಸೇವೆ, ವ್ಯಕ್ತಿ ಮತ್ತು ಸಮಾಜ ಸ್ವಾಮಿ ವಿವೇಕಾನಂದ ಮತ್ತು ಮಹಾತ್ಮಗಾಂಧಿಯವರ ದೃಷ್ಟಿಯಲ್ಲಿ' ಕುರಿತ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಸ್ವಾಮಿ ವೀರೇಶಾನಂದಾಜೀ ಮಹಾರಾಜ್ ಮಾತನಾಡಿದರು.

ಯೋಗರಾಜ್ ಅಭಿನಂದಿಸಿದ್ದರು.

ಪ್ರಕ
7-9-15

ರಾಜ್ಯ ಮಟ್ಟಕ್ಕೆ ಆಯ್ಕೆ



ಶೃಂಗೇರಿ: ಚಿಕ್ಕಮಗಳೂರಿನಲ್ಲಿ ನಡೆದ ಜಿಲ್ಲಾಮಟ್ಟದ ಕಾಲೇಜು ವಿಭಾಗದ ಚೆಸ್ ಪಂದ್ಯಾವಳಿಯಲ್ಲಿ ಶ್ರೀ ಜೆಸಿಬಿಎಂ ಕಾಲೇಜಿನ ವಿದ್ಯಾರ್ಥಿನಿ ಎಂ.ಎಸ್. ಅರ್ಚನಾ ಪ್ರಥಮ ಸ್ಥಾನ ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಇವರು ಮೇಣಸೆಯ ಎಂ.ಎಸ್.ಶಿವಶಂಕರ್ ಮತ್ತು ಗಿರಿಜಾಲಕ್ಷ್ಮೀ ಅವರ ಪುತ್ರಿ.

Scanned by CamScanner

ವಿಜಯ ಕರ್ನಾಟಕ ಶುಕ್ರವಾರ ೧೫ ಸೆಪ್ಟೆಂಬರ್ ೨೦೧೫

ಕಲೆ ಇಲ್ಲದೆ ಜೀವನವಿಲ್ಲ: ಭಾವನಾ

ಶೃಂಗೇರಿ: ಕಲೆ ಇಲ್ಲದೇ ಜೀವನವಿಲ್ಲ, ವಿದ್ಯಾರ್ಥಿಗಳು ಸಾಂಸ್ಕೃತಿಕ ಚಟುವಟಿಕೆಗೆ ವೇದಿಕೆಯಾಗಿರುವ ಕಲಾ ಸಂಘದ ಮೂಲಕ ತಮ್ಮ ಪ್ರತಿಭೆಯನ್ನು ಉನ್ನತಕ್ಕೆ ಏರಿಸಿಕೊಳ್ಳಬಹುದು ಎಂದು ಬಾಲಭವನದ ಅಧ್ಯಕ್ಷೆ ಹಾಗೂ ಚಿತ್ರನಟಿ ಭಾವನಾ ಹೇಳಿದರು.

ಅವರು ಗುರುವಾರ ಶ್ರೀಜೆಸಿಬಿಎಂ ಕಾಲೇಜಿನಲ್ಲಿ ಕಲಾ ಸಂಘ ಉದ್ಘಾಟಿಸಿ ಮಾತನಾಡಿ, ಮಲೆನಾಡಿನ ಭಾಗದಿಂದ ಈವರೆಗೂ ಸಾಕಷ್ಟು ಕಲಾವಿದರು, ಸಾಹಿತಿಗಳು ಬಂದಿದ್ದು, ಇಲ್ಲಿ ಕಲೆಯ ಬೆಳವಣಿಗೆಗೆ ಉತ್ತಮ ಅವಕಾಶಗಳು ಇದೆ. ನಾವು ಕಲಾವಿದರಾಗಿ ಬೆಳೆಯ ಬೇಕಾದರೆ ಅಂಜಿಕೆ,ಕೀಳರಿಮೆ ಬಿಟ್ಟು ಧೈರ್ಯದಿಂದ ಮುನ್ನಗ್ಗಬೇಕು. ಸಂಘಗಳು ಕಲೆಯನ್ನು ಬೆಳೆಸುವ ವೇದಿಕೆಯಾಗಲಿ ಎಂದು ಶುಭ ಹಾರೈಸಿದರು.



ಶೃಂಗೇರಿ ಶ್ರೀಜೆಸಿಬಿಎಂ ಕಾಲೇಜಿನಲ್ಲಿ ಗುರುವಾರ ಕಲಾ ಸಂಘವನ್ನು ಚಿತ್ರನಟಿ ಭಾವನಾ ಉದ್ಘಾಟಿಸಿ ಮಾತನಾಡಿದರು.

ಚಿತ್ರನಟ ವಿಜಯ ರಾಘವೇಂದ್ರ ಮಾತನಾಡಿ, ಪ್ರತಿಭೆಗಳು ಹುಟ್ಟುವ ಸಮಯ ಇದಾಗಿದೆ. ಸಿನಿಮಾದಲ್ಲಿ ಹತ್ತಾರು ವರ್ಷ ದುಡಿದರೂ, ಕಿರುತೆರೆಯ ಜನಪ್ರಿಯತೆ ಮಹತ್ವದ್ದಾಗಿದೆ ಎಂದರು.ಕಲಾ ಸಂಘದ ಉದ್ಘಾಟನೆಗೂ ಮುನ್ನ ಅತಿಥಿಗಳನ್ನು ಮೆರವಣಿಗೆ ಮೂಲಕ ಕರೆದೊಯ್ಯ ಲಾಯಿತು. ಪ್ರಾಚಾರ್ಯ ಡಾ.ಎಚ್.ಸಿ. ವೀರಪ್ಪ ಗೌಡ ಅಧ್ಯಕ್ಷತೆ ವಹಿಸಿದ್ದರು. ಜಿ.ಪಂ. ಮಾಜಿ ಅಧ್ಯಕ್ಷ ಟಿ.ಡಿ. ರಾಜೇಗೌಡ,ವಿದ್ಯಾರ್ಥಿ ಸಂಘದ ಅಧ್ಯಕ್ಷ ರ'ಚಿತ್ ಗೌ ಡ', ಕಾ ರ್ಯ ದ'ರ್ಶಿ ನಾಗಭೂಷಣ್ ಉಪಸ್ಥಿತರಿದ್ದರು.

Scanned by CamScanner

ತಂತ್ರಜ್ಞಾನ ಬೆಳವಣಿಗೆಗೆ ವಿಜ್ಞಾನ ಅಗತ್ಯ



ಶೃಂಗೇರಿಯ ಜೆಸಿಬಿಎಂ ಕಾಲೇಜು ವಿಜ್ಞಾನ ಸಂಘವನ್ನು ಡಿಆರ್‌ಡಿಒ ಮಾಜಿ ನಿರ್ದೇಶಕ ಡಾ.ಪ್ರಹ್ಲಾದ್ ಉದ್ಘಾಟಿಸಿ ಮಾತನಾಡಿದರು.

ಶೃಂಗೇರಿ: ವಿಜ್ಞಾನ ಮತ್ತು ತಂತ್ರಜ್ಞಾನಗಳು ಬೇರೆಯೇ ಆಗಿವೆ. ತಂತ್ರಜ್ಞಾನದ ಬೆಳವಣಿಗೆಗೆ ವಿಜ್ಞಾನವು ಅತ್ಯಗತ್ಯ. ಹೀಗಿದ್ದರೂ ಇತ್ತೀಚಿನ ದಿನಗಳಲ್ಲಿ ಮೂಲ ವಿಜ್ಞಾನ ಕ್ಷೇತ್ರದಲ್ಲಿ ಸಾಕಷ್ಟು ಸಂಶೋಧನೆಗಳು ಆಗುತ್ತಿಲ್ಲ ಎಂದು ಡಿಆರ್‌ಡಿಒ ಮಾಜಿ ನಿರ್ದೇಶಕ ಡಾ.ಪ್ರಹ್ಲಾದ್ ಹೇಳಿದರು.

ಅವರು ಸೋಮವಾರ ಶ್ರೀಜೆಸಿಬಿಎಂ ಕಾಲೇಜಿನ ವಿಜ್ಞಾನ ಸಂಘ ಉದ್ಘಾಟಿಸಿ ಮಾತನಾಡಿದರು. ವಿಜ್ಞಾನ ಮತ್ತು ತಂತ್ರಜ್ಞಾನವು ರಹಸ್ಯ ಜ್ಞಾನವಲ್ಲ. ಅವು ಸಾಮಾನ್ಯ ಜನರ ಮನಸ್ಸನ್ನು ಮುಟ್ಟಿ ಅವರಲ್ಲಿ ಕುತೂಹಲ ಮತ್ತು ಆಸಕ್ತಿ ಬರುವಂತೆ ಪ್ರೇರೇಪಿಸಿದ ಪ್ರಮುಖರಲ್ಲಿ ಡಾ. ಎಪಿಜೆ ಅಬ್ದುಲ್ ಕಲಾಂ ಒಬ್ಬರಾಗಿದ್ದು, ಅವರು ಮಾಡಿರುವ ಸಾಧನೆಗಳು ಅನನ್ಯವಾದವು ಎಂದರು.

ವಿಜ್ಞಾನ ಕ್ಷೇತ್ರದ ಮುಂದುವರಿದ ರಾಷ್ಟ್ರಗಳ ಪಟ್ಟಿಯಲ್ಲಿ ಕಾಣುತ್ತಿರುವ ಭಾರತದಲ್ಲಿ ಬಹು ಪಾಲು ಸ್ವದೇಶಿ ತಂತ್ರಜ್ಞಾನಗಳೇ ಬಳಕೆಯಾಗುತ್ತಿವೆ. ಇದು ಭಾರತವು ರಾಜಕೀಯ ಸ್ವಾತಂತ್ರ್ಯದೊಂದಿಗೆ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲೂ ಸ್ವಾವಲಂಬನೆ ಹೊಂದಿದೆ ಎಂಬುದನ್ನು ಪ್ರತಿಬಿಂಬಿಸುತ್ತದೆ. ಮೂಲವಿಜ್ಞಾನ ಕ್ಷೇತ್ರದೆಡೆಗೆ ವಿದ್ಯಾರ್ಥಿಗಳು ಆಸಕ್ತಿ ಬೆಳೆಸಿಕೊಳ್ಳಬೇಕಾಗಿರುವುದು ಇಂದಿನ ತುರ್ತು ಅಗತ್ಯವಾಗಿದೆ ಎಂದರು.

ಡಾ.ಎ.ಪಿ.ಜೆ. ಕಲಾಂ ಅವರೊಂದಿಗಿನ ತಮ್ಮ 25 ವರ್ಷಗಳ ಒಡನಾಟವನ್ನು ವಿದ್ಯಾರ್ಥಿಗಳೊಂದಿಗೆ ಹಂಚಿಕೊಂಡ ಪ್ರಹ್ಲಾದ್ ಅವರು, ವಿದ್ಯಾರ್ಥಿಗಳೊಂದಿಗೆ ಆಪ್ತ ಸಂವಾದವನ್ನು ನಡೆಸಿಕೊಟ್ಟರು.

ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಡಾ. ಎಚ್.ಸಿ.ವೀರಪ್ಪಗೌಡರು, ನಾವು ನಮ್ಮ ಕರ್ತವ್ಯಗಳನ್ನು ಸಮರ್ಪಕವಾಗಿ ಮಾಡಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಪ.ಪೂರ್ವ ವಿಭಾಗದ ಪ್ರಾಂಶುಪಾಲ ಡಾ.ಸಿ.ವಿ.ಗಿರಿಧರಶಾಸ್ತ್ರಿ, ಪ್ರೊ.ಮುನೀರ್ ಅಹಮದ್ ಖಾನ್, ವಿಜ್ಞಾನ ಸಂಘದ ಅಧ್ಯಕ್ಷ ಜಿ.ವಿ.ಶ್ರೀನಿವಾಸ , ಉಪಾಧ್ಯಕ್ಷ ಸುಮಂತಕುಮಾರ್ ಮತ್ತಿತರರು ಹಾಜರಿದ್ದರು. ನಯನ ಸ್ವಾಗತಿಸಿ, ನಾಗೇಂದ್ರಪ್ರಸಾದ್ ನಿರೂಪಿಸಿ, ರಶ್ಮಿ ವಂದಿಸಿದರು.

ವಿಜಯ ಕರ್ನಾಟಕ ಪತ್ರಿಕೆ 11 ಸೆಪ್ಟೆಂಬರ್ 2015

Scanned by CamScanner

ವಿಜಯವಾಣಿ
26 ಭಾನುವಾರ 6 ಸೆಪ್ಟೆಂಬರ್ 2015
6 SEPTEMBER 2015

ಸುದ್ದಿ ಹನಿ

ಭಾರತೀಯ ಪರಂಪರೆಯಲ್ಲಿ ಗುರುವಿಗೆ ವಿಶಿಷ್ಟ ಸ್ಥಾನ



ಶೃಂಗೇರಿಯಲ್ಲಿ ಆಯೋಜಿಸಿದ್ದ ದತ್ತಿ ಉಪನ್ಯಾಸ ಕಾರ್ಯಕ್ರಮವನ್ನು ಡಾ.ಶಶಿಕಲಾ ಉದ್ಘಾಟಿಸಿದರು.

ಶೃಂಗೇರಿ: ವಿದ್ಯಾರ್ಥಿಗಳ ಬಾಳಿಗೆ ದಾರಿ ದೀಪವಾಗಿರುವ ಗುರುವಿಗೆ ಭಾರತೀಯ ಪರಂಪರೆಯಲ್ಲಿ ವಿಶಿಷ್ಟ ಸ್ಥಾನವಿದೆ ಎಂದು ಬೆಂಗಳೂರು ವಿವಿ ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ. ಎಚ್.ಶಶಿಕಲಾ ಹೇಳಿದರು. ಶನಿವಾರ ಜೆಸಿಬಿಎಂ ಕಾಲೇಜಿನಲ್ಲಿ ಹಳೆ ವಿದ್ಯಾರ್ಥಿ ಸಂಘ ಆಯೋಜಿಸಿದ್ದ ಡಾ.ರಾಮಕೃಷ್ಣರಾವ್ ದತ್ತಿ ಉಪನ್ಯಾಸ ಮತ್ತು ಗುರುನಮನ ಕಾರ್ಯಕ್ರಮದಲ್ಲಿ ಮಾತನಾಡಿದರು. ಗುರುವೆಂದರೆ ಗುರುತ್ವಾಕರ್ಷಣೆ, ತೂಕ, ಮೌಲ್ಯ ಇರುವಂಥವರು. ಅಂತಹ ಗುರುವಿಗೆ ನಮನ ಸಲ್ಲಿಸುವುದು ಪ್ರತಿಯೊಬ್ಬರ ಆದ್ಯ ಕರ್ತವ್ಯವಾಗಿದೆ ಎಂದರು. ಶಿವಮೊಗ್ಗ ಪಿಎಸಿಇ ಕಾಲೇಜಿನ ಪ್ರಾಚಾರ್ಯ ಪ್ರೊ.ರಘುನಾಥನ್ ಮಾತನಾಡಿ, ಅದ್ವೈತ ತಾತ್ವಿಕವಾದ ವಿಭಿನ್ನ ರೀತಿಯಲ್ಲಿ ತತ್ವಗಳನ್ನು ಪಾಶ್ಚಿಮಾತ್ಯ ಜಗತ್ತಿಗೆ ಪರಿಚಯಿಸಿ, ಪ್ರೇರಣಾ ಶಕ್ತಿಯಾಗಿ ಮುಂಚೂಣಿಯಲ್ಲಿದ್ದವರು ಡಾ.ಸರ್ವಪಲ್ಲಿ ರಾಧಾಕೃಷ್ಣನ್. ಅಂಥವರಿಗೆ ನಮನ ಸಲ್ಲಿಸಬೇಕಾದುದು ನಮ್ಮ ಕರ್ತವ್ಯ ಎಂದರು. ಉಪನ್ಯಾಸಕರು, ಸಿಬ್ಬಂದಿಗೆ ಹಳೆ ವಿದ್ಯಾರ್ಥಿ ಸಂಘದಿಂದ ಗೌರವ ಸಮರ್ಪಿಸಲಾಯಿತು. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸಹಾಯಧನ ವಿತರಣೆ, ಸಂಘಕ್ಕೆ ದೇಣಿಗೆ ನೀಡಿದ ಹಿರಿಯ ವಿದ್ಯಾರ್ಥಿಗಳಿಗೆ ಹಾಗೂ 50ನೇ ವರ್ಷದಲ್ಲಿ ಸಂಘದ ಆಡಳಿತ ಮಂಡಳಿಗೆ ಗೌರವ ಸಮರ್ಪಣೆ ನಡೆಯಿತು. ಕಾಲೇಜಿನಲ್ಲಿ ಸಿಇಟಿ ತರಬೇತಿಯನ್ನು ಡಾ.ನಿರ್ಮಲಾ ಉದ್ಘಾಟಿಸಿದರು. ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಎಚ್.ಟಿ.ರಮೇಶ್ ಅಧ್ಯಕ್ಷತೆ ವಹಿಸಿದ್ದರು. ಪ್ರಾಚಾರ್ಯ ಡಾ.ಎಚ್.ಸಿ.ವೀರಪ್ಪ ಗೌಡ, ದೀಪ್ತಿ, ಮಂಜುನಾಥ ಗೌಡ, ಕೆ.ಟಿ.ಮಂಜುನಾಥ್, ದಿನೇಶ್ ಶೆಟ್ಟಿ, ಶ್ರುತಿ, ಎ.ಜಿ.ಶ್ರೀನಿವಾಸ್ ಇದ್ದರು.

Scanned by CamScanner

ಗುರುನಮನ-ದತ್ತಿ ಉಪನ್ಯಾಸ

ಶೃಂಗೇರಿ: ವಿದ್ಯಾರ್ಥಿಗಳ ಬಾಳಿಗೆ ದಾರಿ ದೀಪವಾಗಿರುವ ಗುರುವಿಗೆ ಭಾರತೀಯ ಪರಂಪರೆಯಲ್ಲಿ ವಿಶಿಷ್ಟ ಸ್ಥಾನವಿದೆ ಎಂದು ಬೆಂಗಳೂರು ವಿವಿಯ ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ.ಎಚ್. ಶಶಿಕಲಾ ಹೇಳಿದರು.

ಅವರು ಶನಿವಾರ ಜೆಸಿಬಿಎಂ ಕಾಲೇಜಿನಲ್ಲಿ ಹಳೆ ವಿದ್ಯಾರ್ಥಿ ಸಂಘದಿಂದ ಆಯೋಜಿಸಿದ್ದ ಡಾ.ಕೆ.ಬಿ.ರಾಮಕೃಷ್ಣ ರಾವ್ ದತ್ತಿ ಉಪನ್ಯಾಸ ಮತ್ತು ಗುರುನಮನ ಕಾರ್ಯಕ್ರಮದಲ್ಲಿ ಮಾತನಾಡಿದರು.

ಪ್ರಾವಿಣ್ಯತೆ ಮತ್ತು ಸಾಮರ್ಥ್ಯ ಪಡೆದಿರುವ ಗುರುವನ್ನು ಎಷ್ಟು ತಟ್ಟುತ್ತೇವೋ ಶಿಷ್ಯ ಅವರ ಸಾಮರ್ಥ್ಯಕ್ಕೆ ಅನುಗುಣವಾಗಿ ಪ್ರತಿಫಲ ಪಡೆಯುತ್ತಾನೆ. ಗುರುವೆಂದರೆ ಗುರುತ್ವಾಕರ್ಷಣೆ, ಬಹಳ ತೂಕ, ಮೌಲ್ಯ ಇರುವಂತಹದ್ದು. ಅಂತಹ ಗುರುವಿಗೆ ನಮನ ಸಲ್ಲಿಸುವುದು ಆದ್ಯ ಕರ್ತವ್ಯ ಎಂದರು.

ಶಿವಮೊಗ್ಗ ಪಿಎಸ್‌ಇ ಕಾಲೇಜಿನ ಪ್ರಾಚಾರ್ಯ ಪ್ರೊ.ರಘುನಾಥನ್ ಮಾತನಾಡಿ, ಅದ್ಭುತ ತಾತ್ವಿಕವಾದ ವಿಭಿನ್ನ ರೀತಿಯಲ್ಲಿ ತನ್ನ ತತ್ವಗಳನ್ನು ಪಾಶ್ಚಿಮಾತ್ಯ ಜಗತ್ತಿಗೆ ಪರಿಚಯಿಸಿ, ಪ್ರೇರಣ ಶಕ್ತಿಯಾಗಿ ಮುಂಚೂಣಿಯಲ್ಲಿದ್ದವರು ಡಾ.ಸರ್ವಪಲ್ಲಿ ರಾಧಾಕೃಷ್ಣನ್. ಅಂತಹವರನ್ನು ನಮನ ಸಲ್ಲಿಸಬೇಕಾಗಿರುವುದು ನಮ್ಮ ಕರ್ತವ್ಯ ಎಂದರು.

ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಎಚ್.ಟಿ.ರಮೇಶ್ ಅಧ್ಯಕ್ಷತೆ ವಹಿಸಿದ್ದರು. ಕಾಲೇಜಿನ ಪ್ರಾಚಾರ್ಯ ಡಾ.ಎಚ್.ಸಿ. ವೀರಪ್ಪಗೌಡ ಸ್ವಾಗತಿಸಿದರು. ಕಾರ್ಯಕ್ರಮದಲ್ಲಿ ಕಾಲೇಜಿನ ಉಪನ್ಯಾಸಕರು, ಸಿಬ್ಬಂದಿಗೆ, ಹಳೆ ವಿದ್ಯಾರ್ಥಿ ಸಂಘದ ಪೂರ್ವಾಧ್ಯಕ್ಷರಿಗೆ ಗೌರವ ಸಮರ್ಪಿಸಲಾಯಿತು. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸಹಾಯಧನ ವಿತರಣೆ, ಸಂಘಕ್ಕೆ ದೇಣಿಗೆ ನೀಡಿದ ಹಿರಿಯ ವಿದ್ಯಾರ್ಥಿಗಳಿಗೆ ಹಾಗೂ 50ನೇ ವರ್ಷದಲ್ಲಿ ಸಂಘದ ಅಡಳಿತ ಮಂಡಳಿಗೆ ಗೌರವ ಸಮರ್ಪಿಸಲಾಯಿತು.

ಇದೇ ಸಂದರ್ಭ ಕಾಲೇಜಿನಲ್ಲಿ ಸಿಇಟಿ ತರಗತಿಗಳಿಗೆ ತರಬೇತಿಯನ್ನು ಡಾ.ನಿರ್ಮಲ ಉದ್ಘಾಟಿಸಿದರು.

ದೀಪ್ತಿ ಪ್ರಾರ್ಥಿಸಿ, ಶೃತಿ ನಿರೂಪಿಸಿದರು. ಎ.ಜಿ.ಪ್ರಶಾಂತ್ ವಂದಿಸಿದರು.



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ಹಳೆ ವಿದ್ಯಾರ್ಥಿ ಸಂಘದಿಂದ ಆಯೋಜಿಸಿದ್ದ ಡಾ.ಕೆ.ಬಿ.ರಾಮಕೃಷ್ಣರಾವ್ ದತ್ತಿ ಉಪನ್ಯಾಸ ಮತ್ತು ಗುರುನಮನ ಕಾರ್ಯಕ್ರಮವನ್ನು ಡಾ.ಶಶಿಕಲಾ ಉದ್ಘಾಟಿಸಿದರು.

Scanned by CamScanner

'ಬೌದ್ಧಿಕ ಬೆಳವಣಿಗೆಗೆ ವಿಚಾರ ಸಂಕಿರಣ ಪೂರಕ'

ಪ್ರಜಾವಾಣಿವಾರ್ತೆ

ಶೃಂಗೇರಿ: ವಿಚಾರ ಸಂಕಿರಣಗಳು ವ್ಯಕ್ತಿಯ ಬೌದ್ಧಿಕ ಮತ್ತು ಮಾನಸಿಕ ಬೆಳವಣಿಗೆಗೆ ಪೂರಕವಾಗಿವೆ ಎಂದು ಮಣಿಪಾಲ ವಿವಿ ಕುಲಸಚಿವ ಡಾ.ಜಿ.ಕೆ.ಪ್ರಭು ಹೇಳಿದರು.

ಪಟ್ಟಣದ ಚಂದ್ರಶೇಖರ ಭಾರತೀ ಸ್ಮಾರಕ ಕಾಲೇಜಿನಲ್ಲಿ ನಡೆದ 'ಸಾಹಿತ್ಯ ಕೃತಿಗಳ ಬೋಧನೆಯಲ್ಲಿ ಸಾಹಿತ್ಯ ಸಿದ್ಧಾಂತ' ಕುರಿತ ಶೈಕ್ಷಣಿಕ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿಚಾರ ಸಂಕಿರಣ ಆಯೋಜನೆಯಲ್ಲಿ ಆಯೋಜಕರ ಉದ್ದೇಶ ಮತ್ತು ಭಾಗವಹಿಸುವವರ ಉದ್ದೇಶ ವಿಭಿನ್ನವಾಗಿರುತ್ತವೆ ಆದರೂ ಮಹತ್ವವನ್ನು ಹೆಚ್ಚಿಸುತ್ತದೆ. ನಿತ್ಯದ ಏಕತಾನತೆ ಹೋಗಲಾಡಿಸುವ ಏತಕ್ಕೆ ವಿಷಯ ಪರಿಜ್ಞಾನ ಹೆಚ್ಚಿಸುತ್ತದೆ ಎಂದರು.



ಪಟ್ಟಣದ ಚಂದ್ರಶೇಖರ ಭಾರತೀ ಸ್ಮಾರಕ ಕಾಲೇಜಿನಲ್ಲಿ ನಡೆದ 'ಸಾಹಿತ್ಯ ಕೃತಿಗಳ ಬೋಧನೆಯಲ್ಲಿ ಸಾಹಿತ್ಯ ಸಿದ್ಧಾಂತ' ಕುರಿತಾದ ಶೈಕ್ಷಣಿಕ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದರು.

ಮೈಸೂರು ವಿವಿ ಆಂಗ್ಲ ಭಾಷಾ ವಿಭಾಗದ ಆಧ್ಯಕ್ಷ ಡಾ. ಸಿ.ಪಿ.ರವಿಚಂದ್ರ ಮಾತನಾಡಿ, 'ಸ್ಮಾರ್ಟ್ ಫೋನ್' ಮತ್ತು 'ಕ್ಲೌಡ್ ಸ್ಟೋರೇಜ್' ಪರಿಕಲ್ಪನೆ ಸಾಹಿತ್ಯವನ್ನು ವಿಶ್ವವ್ಯಾಪಿ ಹರಡುವಂತೆ ಮಾಡಿದೆ. ಎಲ್ಲಿ ಬೇಕಾದರೂ ಓದುವ ಪ್ರಕ್ರಿಯೆ ಸಾಧ್ಯವಾಗಿದೆ. ಈ ಹಿನ್ನೆಲೆಯಲ್ಲಿ ಸಾಹಿತ್ಯ ಬೋಧನೆಯ ಪರಿಕಲ್ಪನೆಯೂ ಬದಲಾಗಬೇಕಾಗಿದೆ ಎಂದರು.

ಮಣಿಪಾಲ್ ಅಕಾಡೆಮಿ ಆಫ್ ಜನರಲ್ ಎಜುಕೇಷನ್ ಆಡಳಿತಾಧಿಕಾರಿ ಡಾ.ಎಚ್.ಶಾಂತರಾಮ್ ಮಾತನಾಡಿ, ಸಾಹಿತ್ಯದ ಅಧ್ಯಯನ ಸಿದ್ಧಾಂತಗಳ ಅಧ್ಯಯನಕ್ಕೆ ಸೀಮಿತ ಆಗಬಾರದು. ಸಾಹಿತ್ಯ ಪುಸ್ತಕಗಳ ಅಧ್ಯಯನ ಆಗಬೇಕಿದ್ದು, ಅದರಲ್ಲಿ ಅಡಕವಾಗಿರುವ ಮೌಲ್ಯಗಳನ್ನು ವಿದ್ಯಾರ್ಥಿಗಳು ಅಳವಡಿಸಿಕೊಳ್ಳಬೇಕು ಎಂದರು.

ಪ್ರಾಚಾರ್ಯ ಡಾ.ಎಚ್.ಸಿ. ವೀರಪ್ಪಗೌಡ ಅಧ್ಯಕ್ಷತೆ ವಹಿಸಿದ್ದರು. ಸಂಕಿರಣ ಸಂಯೋಜಕ ಪ್ರೊ. ದತ್ತಾತ್ರೇಯ ಮಾರ್ಪಳ್ಳಿ, ವಿದ್ಯಾ ಗಣೇಶ್, ಡಾ.ಎಂ.ಸ್ವಾಮಿ ಇದ್ದರು ವಿಚಾರ ಸಂಕಿರಣದಲ್ಲಿ ವಿವಿಧ ವಿಶ್ವವಿದ್ಯಾಲಯ ಮತ್ತು ಕಾಲೇಜುಗಳ ಉಪನ್ಯಾಸಕರು ಭಾಗವಹಿಸಿದ್ದರು.

ಪ್ರಜಾವಾಣಿ ಪ್ರಕಟಣೆ ದಿನಾಂಕ 31.10.2015

Scanned by CamScanner

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI - SHIVAMOGGA

ವಿಚಾರ ಸಂಕಿರಣ ಮಾನಸಿಕ ಬೆಳವಣಿಗೆಗೆ ಪೂರಕ

■ ಮಣಿಪಾಲ್ ವಿವಿ ಕುಲಸಚಿವ ಡಾ. ಜಿ.ಕೆ. ಪ್ರಭು ಅಭಿಮತ

ಶೃಂಗೇರಿ: ವಿಚಾರ ಸಂಕಿರಣಗಳು ವ್ಯಕ್ತಿಯ ಬೌದ್ಧಿಕ ಮತ್ತು ಮಾನಸಿಕ ಬೆಳವಣಿಗೆಗೆ ಪೂರಕವಾಗಿವೆ ಎಂದು ಮಣಿಪಾಲ್ ವಿವಿ ಕುಲಸಚಿವ ಡಾ. ಜಿ. ಕೆ. ಪ್ರಭು ಹೇಳಿದರು.

ಪಟ್ಟಣದ ಜಗದ್ಗುರು ಚಂದ್ರಶೇಖರ ಭಾರತೀ ಸ್ಮಾರಕ ವಿದ್ಯಾಲಯದಲ್ಲಿ ನಡೆದ 'ಸಾಹಿತ್ಯ ಕೃತಿಗಳ ಬೋಧನೆಯಲ್ಲಿ ಸಾಹಿತ್ಯ ಸಿದ್ಧಾಂತ' ಕುರಿತಾದ ಶೈಕ್ಷಣಿಕ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದರು.

ವಿಚಾರ ಸಂಕಿರಣ ಆಯೋಜನೆಯಲ್ಲಿ ಆಯೋಜಕರ ಉದ್ದೇಶ ಮತ್ತು ಭಾಗವಹಿಸುವವರ ಉದ್ದೇಶ ವಿಭಿನ್ನವಾಗಿರುತ್ತವೆ ಆದರೂ ಮಹತ್ವವನ್ನು ಹೆಚ್ಚಿಸುತ್ತದೆ. ನಿತ್ಯದ ಏಕತಾನತೆ ಹೋಗಲಾಡಿಸುವ ಜತೆಗೆ ವಿಷಯ ಪರಿಜ್ಞಾನ ಹೆಚ್ಚಿಸುತ್ತದೆ. ವಿದ್ವತ್ ಸಂಸ್ಕೃತಿಗೆ ಮನ್ನಣೆ ನೀಡುತ್ತದೆ ಎಂದು ಪ್ರತಿಪಾದಿಸಿದರು.

ಮೈಸೂರು ವಿವಿ ಆಂಗ್ಲ ಭಾಷಾ ವಿಭಾಗದ ಅಧ್ಯಕ್ಷ ಡಾ। ಸಿ.ಪಿ.ರವಿಚಂದ್ರ ದಿಕ್ಸೂಚಿ ಭಾಷಣ ಮಾಡಿ, ಸಾಹಿತ್ಯ ಸಿದ್ಧಾಂತಗಳ ವಿವಿಧ ಶಾಖೆಗಳ ಮೂಲ ಹಾಗೂ ನೀತಿ ನೆಲೆಗಳ ಸಿಂಹಾವಲೋಕನ ಮಾಡಿ ತಾಂತ್ರಿಕ ಬೆಳವಣಿಗೆ ಹಿನ್ನೆಲೆಯಲ್ಲಿ ಸಾಹಿತ್ಯ, ಸಾಹಿತ್ಯ ಸಿದ್ಧಾಂತ, ವಿಮರ್ಶೆ ಮತ್ತು ಓದಿನ ಪರಿಕಲ್ಪನೆಗಳಲ್ಲಿ ಉಂಟಾಗಿರುವ ಬೆಳವಣಿಗೆಗಳ ಕುರಿತು ವಿಶ್ಲೇಷಿಸಿದರು.

'ಸ್ಮಾರ್ಟ್ ಫೋನ್' ಮತ್ತು 'ಕ್ಲೌಡ್ ಸ್ಟೋರೇಜ್' ಪರಿಕಲ್ಪನೆ ಸಾಹಿತ್ಯವನ್ನು ವಿಶ್ವವ್ಯಾಪಿ ಹರಡುವಂತೆ ಮಾಡಿದೆ. ಎಲ್ಲಿ ಬೇಕಾದರೂ ಓದುವ ಪ್ರಕ್ರಿಯೆ ಸಾಧ್ಯವಾಗಿದೆ. ಈ ಹಿನ್ನೆಲೆಯಲ್ಲಿ ಸಾಹಿತ್ಯ ಬೋಧನೆಯ ಪರಿಕಲ್ಪನೆಯೂ ಬದಲಾಗಬೇಕಾಗಿದೆ ಎಂದರು.

ಮಣಿಪಾಲ್ ಅಕಾಡೆಮಿ ಆಫ್ ಜನರಲ್ ಎಜ್ಯುಕೇಶನ್ ಆಡಳಿತಾಧಿಕಾರಿ ಡಾ. ಎಚ್. ಶಾಂತಾರಾಮ್ ಮಾತನಾಡಿ, ಸಾಹಿತ್ಯದ ಅಧ್ಯಯನ ಸಿದ್ಧಾಂತಗಳ ಅಧ್ಯಯನಕ್ಕೆ ಸೀಮಿತ ಆಗಬಾರದು. ಸಾಹಿತ್ಯ ಪುಸ್ತಕಗಳ ಅಧ್ಯಯನ ಆಗಬೇಕಿದ್ದು, ಅದರಲ್ಲಿ ಅಡಕವಾಗಿರುವ ಮೌಲ್ಯಗಳನ್ನು ವಿದ್ಯಾರ್ಥಿಗಳು ಅಳವಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಪ್ರಾಚಾರ್ಯ ಡಾ. ಎಚ್.ಸಿ.ವೀರಪ್ಪಗೌಡರು ಅಧ್ಯಕ್ಷತೆ ವಹಿಸಿದ್ದರು. ಸಂಕಿರಣದ ಸಂಯೋಜಕ, ಆಂಗ್ಲ ಭಾಷಾ ವಿಭಾಗದ ಮುಖ್ಯಸ್ಥ ಪ್ರೊ. ದತ್ತಾತ್ರೇಯ ಮಾರ್ಪಳ್ಳಿ, ವಿದ್ಯಾ ಗಣೇಶ್, ಡಾ.ಎಂ. ಸ್ವಾಮಿ ಉಪಸ್ಥಿತರಿದ್ದರು. ವಿಚಾರ ಸಂಕಿರಣದಲ್ಲಿ ವಿವಿಧ ವಿಶ್ವವಿದ್ಯಾಲಯ ಮತ್ತು ಕಾಲೇಜುಗಳ ಉಪನ್ಯಾಸಕರು ಭಾಗವಹಿಸಿದ್ದರು.



'ಸಾಹಿತ್ಯ ಕೃತಿಗಳ ಬೋಧನೆಯಲ್ಲಿ ಸಾಹಿತ್ಯ ಸಿದ್ಧಾಂತ' ಶೈಕ್ಷಣಿಕ ವಿಚಾರ ಸಂಕಿರಣವನ್ನು ಮಣಿಪಾಲ ವಿವಿ ಕುಲಸಚಿವ ಡಾ। ಜಿ.ಕೆ.ಪ್ರಭು ಉದ್ಘಾಟಿಸಿದರು.

ಪ್ರಸ್ತುತದಲ್ಲಿ ವಿದ್ಯಾರ್ಥಿಗಳಿಗೆ ನಿಗದಿಪಡಿಸುತ್ತಿರುವ ಸಾಹಿತ್ಯ ಕೃತಿಗಳು ಬಹಳಷ್ಟು ಕಡಿಮೆಯಾಗಿವೆ. ಇದರಿಂದ ವಿದ್ಯಾರ್ಥಿಗಳಲ್ಲಿ ಓದುವ ಆಸಕ್ತಿ ಕುಂದುತ್ತಿದ್ದು, ಶಿಕ್ಷಣ ವ್ಯವಸ್ಥೆಯೂ ಕುಸಿಯುತ್ತಿದೆ. ಶಿಕ್ಷಣವು ಮಾನವನ ಅಂತರಂಗದ ಸಾಮರ್ಥ್ಯವನ್ನು ಹೊರಗೆಡವಬೇಕಿದ್ದು, ಶಿಕ್ಷಣ ತಜ್ಞರು ಇದರ ಕುರಿತು ಸಾಕಷ್ಟು ಚಿಂತನೆ ಮಾಡುವ ಅಗತ್ಯವಿದೆ.

| ಡಾ. ಎಚ್. ಶಾಂತಾರಾಮ್

ದಿನಾಂಕ: 23 ಫೆಬ್ರವರಿ 2015.

Scanned by CamScanner



ಶೃಂಗೇರಿಯ ಚೆಸಿಬಿಎಂ ಕಾಲೇಜಿಲ್ಲಿ ನಡೆದ ಪ್ರತಿಭಾ ದಿನಾಚರಣೆ ಕಾರ್ಯಕ್ರಮವನ್ನು ಶ್ರೀನಿಧಿ ಉದ್ಘಾಟಿಸಿದರು. ಪ್ರಾಚಾರ್ಯ ಎಚ್.ಸಿ. ವೀರಪ್ಪಗೌಡ, ಸಾಂಸ್ಕೃತಿಕ ಕಾರ್ಯದರ್ಶಿಗಳದ ಪ್ರೊ. ಯಶವಂತಿ ಎಸ್. ಸಾಲಿಯಾನ, ವಿದ್ಯಾರ್ಥಿ ನಾಯಕರಾದ ನಿತೀಶ್ ನಾಯಕ್, ರಕ್ಷಿತ್, ಶ್ರೀನಿವಾಸ್ ಮತ್ತಿತರು ಉಪಸ್ಥಿತರಿದ್ದರು.

ಸನ್ಮಾರ್ಗ ದಿನಾಂಕ 19.8.15

Scanned by CamScanner

ಯುವ ಪೀಳಿಗೆಗೆ ಕೊಡುವ ಸಂಸ್ಕೃತಿಯೇ ಶಿಕ್ಷಣ

ಶೃಂಗೇರಿ: ನಾವು ಯುವ ಪೀಳಿಗೆಗೆ ಕೊಡುವ ಸಂಸ್ಕೃತಿಯೇ ಶಿಕ್ಷಣ. ಆ ಶಿಕ್ಷಣವು ಅವರ ಚಾರಿತ್ರ್ಯವನ್ನು ಕಟ್ಟಿಕೊಡಬೇಕು ಎಂದು ಕುವೆಂಪು ವಿಶ್ವವಿದ್ಯಾನಿಲಯದ ಎನ್.ಎಸ್.ಎಸ್ ಕಾರ್ಯಕ್ರಮಗಳ ಸಂಯೋಜನಾಧಿಕಾರಿ ಡಾ.ಕುಂದನ್ ಬಸವರಾಜ್ ಹೇಳಿದರು.

ಅವರು ಶುಕ್ರವಾರ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಆಯೋಜಿಸಿದ್ದ ಎನ್.ಎಸ್.ಎಸ್ ವಾರ್ಷಿಕ ಚಟುವಟಿಕೆಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದರು. ನೈತಿಕತೆ, ಪ್ರಾಮಾಣಿಕತೆ, ಸತ್ಯ, ಅಹಿಂಸೆ, ತ್ಯಾಗ ಮೊದಲಾದ ಮಾನವೀಯ ಮೌಲ್ಯಗಳು ನಮ್ಮ ಜತೆಗಾರರಾಗಬೇಕಿದೆ. ಯುವ ಜನಾಂಗ ಸರಿ ದಾರಿಯಲ್ಲಿ ತೆರಳಿದರೆ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ ಎಂದರು.

ವಾರ್ಷಿಕ ಚಟುವಟಿಕೆಗಳಿಗೆ ಚಾಲನೆ ನೀಡಿ ಮಾತನಾಡಿದ ಶ್ರೀಮಠದ ಅಧಿಕಾರಿ ಶ್ರೀಪಾದರಾವ್, ಮಾನವನ ಬದುಕು ಚಿಂತೆಗಳ ಆಗರವಾಗಿದೆ. ಆ ಶ್ರಮದ ಪ್ರವೃತ್ತಿ ಆರೋಗ್ಯಕರ ಮನಸ್ಸನ್ನು ಸೃಷ್ಟಿಸುತ್ತದೆ ಎಂದರು.

ಕಾಲೇಜಿನ ಎನ್ಸೆಸ್ಸ್ ಘಟಕದಲ್ಲಿ ಶಿಬಿರಾಧಿಕಾರಿಯಾಗಿ ಹಲವು ವರ್ಷ ಸೇವೆ ಸಲ್ಲಿಸಿದ್ದ ಡಾ.ಯು.ಎಸ್.ಶಾಂತಮೂರ್ತಿ ಐತಾಳ್ ಅವರನ್ನು ಎನ್ಸೆಸ್ಸ್ ವತಿಯಿಂದ ಗೌರವಿಸಲಾಯಿತು. ಪ್ರಾಂಶುಪಾಲ ಡಾ. ಎಚ್.ಸಿ. ವೀರಪ್ಪ ಗೌಡ ಅಧ್ಯಕ್ಷತೆ ವಹಿಸಿದ್ದರು. ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಡಾ.ಸಿ.ವಿ. ಗಿರಿ ಧರಶ್ಯಾ, ವಿದ್ಯಾರ್ಥಿ ಕ್ಷೇಮಪಾಲ ನಾಧಿಕಾರಿ ಪ್ರೊ.ದತ್ತಾತ್ರೇಯ ಮಾರ್ಪಳ್ಳಿ, ಜಿ. ಪಂ. ಸದಸ್ಯ ಎಂ.ಎಸ್. ರಂಗನಾಥ್ ಉಪಸ್ಥಿತರಿದ್ದರು. ಎನ್.ಎಸ್.ಎಸ್ ಅಧಿಕಾರಿಗಳಾದ ಎನ್.ಎಚ್. ಲಕ್ಷ್ಮೀನಾರಾಯಣ್ ಸ್ವಾಗತಿಸಿ, ಎ.ಜಿ ಪ್ರಶಾಂತ್ ವಂದಿಸಿದರು.



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಆಯೋಜಿಸಿದ್ದ ಎನ್.ಎಸ್.ಎಸ್ ವಾರ್ಷಿಕ ಚಟುವಟಿಕೆಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಡಾ.ಶಾಂತಮೂರ್ತಿ ಐತಾಳ್ ಅವರನ್ನು ಗೌರವಿಸಲಾಯಿತು.

RNI No. KARKAN/2000/4175

Published for the proprietors, Metropolitan Media Company Limited, by R. J. Prakashan at Sy. No
Regd. Office: Du Parc Trinity, 9th Floor, 17, M.G.Road, Bangalore-560 001 (

Scanned by CamScanner

ಚೆಸ್ ಪಂದ್ಯಾವಳಿ, ಶ್ರೀ ಜೆ.ಸಿ.ಬಿ.ಎಂ. ಕಾಲೇಜಿಗೆ ಪ್ರಶಸ್ತಿ

ಶೃಂಗೇರಿ: ಇಲ್ಲಿನ ಶ್ರೀ ಜೆ.ಸಿ.ಬಿ.ಎಂ. ಕಾಲೇಜಿನ ವಿದ್ಯಾರ್ಥಿಗಳಾದ ನಂದನ್ ಡಿ ಹೆಗ್ಡೆ, ಶಾರುಖ್, ಶ್ರೀನಿವಾಸ್ ಪೈ.ಆರ್., ಅನೂಪ್ ಹೆಚ್.ಆರ್. ಇವರುಗಳು, ಬೀರೂರು ಪಟ್ಟಣದ ತರಳಬಾಳು ಕಲ್ಯಾಣ ಮಂದಿರದ ಆವರಣದಲ್ಲಿ ಇತ್ತೀಚೆಗೆ ನಡೆದ ಕುವೆಂಪು ವಿ.ವಿ.ಯ ಅಂತರ್ ಕಾಲೇಜು ಚೆಸ್ ಪಂದ್ಯಾವಳಿಯಲ್ಲಿ ಭಾಗವಹಿಸಿ ದ್ವಿತೀಯ ಬಹುಮಾನವನ್ನು ಗಳಿಸಿದ್ದಾರೆ. ಸಾಧನೆ ತೋರಿದ ಇವರುಗಳನ್ನು ಕಾಲೇಜಿನ ಪ್ರಾಂಶುಪಾಲ ಡಾ.ಹೆಚ್.ಸಿ.ವೀರಪ್ಪ ಗೌಡ, ದೈಹಿಕ



ಶಿಕ್ಷಣ ನಿರ್ದೇಶಕ ಎಂ.ವಿ. ಲೋಕೇಶ್, ಅಧ್ಯಾಪ
ವೃಂದ ಹಾಗು ಆಡಳಿತ ಮಂಡಳಿ ಅಭಿನಂದಿಸಿ

Scanned by CamScanner

ಸಂಸ್ಕೃತದ ಅಧ್ಯಯನಕ್ಕೆ ಶೃಂಗೇರಿಯು ಸೂಕ್ತ ಸ್ಥಳವಾಗಿದೆ



ಶೃಂಗೇರಿ: ಶ್ರೀ ಜೆ.ಸಿ.ಬಿ.ಎಂ. ಕಾಲೇಜಿನ ಮುಖ್ಯ ಸಭಾಂಗಣದಲ್ಲಿ ಎರಡು ದಿನಗಳ ಕಾಲ "ಸಂಸ್ಕೃತ ಕಾವ್ಯನಿರ್ಮಾಣದಲ್ಲಿ ಆಧುನಿಕ ಪದ್ಧತಿಗಳು" ಎಂಬ ಸಂಸ್ಕೃತ ವಿಚಾರ ಸಂಕೀರ್ಣ ನಡೆಯಿತು. ಈ ಕುರಿತ ಸಭಾ ಕಾರ್ಯಕ್ರಮವನ್ನು ನವದೆಹಲಿಯ ರಾಷ್ಟ್ರೀಯ ಸಂಸ್ಕೃತ ಸಂಸ್ಥಾನದ ಕುಲಪತಿ ಪ್ರೊ. ಪರಮೇಶ್ವರ ನಾರಾಯಣ ಶಾಸ್ತ್ರಿ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಇಂದಿನ ಆಧುನಿಕ ಕಾಲದಲ್ಲೂ ಪ್ರಾಚೀನ ಭಾಷೆಯಾದ ಸಂಸ್ಕೃತದಲ್ಲಿ ಅನೇಕ ಗ್ರಂಥಗಳ ರಚನೆಯಾಗುತ್ತಿವೆ ಎಂದು ಹೇಳಿದರು. ದೇವ ಭಾಷೆಯಾಗಿರುವ ಸಂಸ್ಕೃತದ ಅಧ್ಯಯನಕ್ಕೆ ಪುಣ್ಯಭೂಮಿಯಾದ ಶೃಂಗೇರಿಯು ಸೂಕ್ತ ಸ್ಥಳವಾಗಿದೆ. ಶಾರದಾಂಬೆಯ ಕೃಪೆಯಿಂದ ಈ ಸಂಕೀರ್ಣದಿಂದಾಗಿ ನೂತನ ಸಂಸ್ಕೃತ ಕವಿಗಳ ಸೃಷ್ಟಿಯಾಗಲಿ ಎಂದರು. ಬೆಂಗಳೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕ ರಂಗನಾಥ್ ಮಾತನಾಡಿ, ರಾಷ್ಟ್ರೀಯ ಚಿಂತನೆಗಳು ಸಂಸ್ಕೃತದಲ್ಲಿ ಪಸರಿಸಲಾಗಿದೆ. ಅಂತೆಯೇ ಸಾಹಿತ್ಯದ ವಿವಿಧ ಪ್ರಕಾರಗಳನ್ನು ವಿದ್ಯಾರ್ಥಿಗಳು ಗಮನಿಸಬೇಕು ಎಂದರು. ಶ್ರೀ ಜೆ.ಸಿ.ಬಿ.ಎಂ. ಕಾಲೇಜಿನ ಪ್ರಾಚಾರ್ಯ ಡಾ. ಎಚ್.ಸಿ.ವೀರಪ್ಪಗೌಡ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಂಸ್ಕೃತ ವಿಭಾಗಾಧ್ಯಕ್ಷೆ ಯಶೋದಾ ಸ್ವಾಗತಿಸಿದರೆ, ಕಾಲೇಜಿನ ಪದವಿ ಪೂರ್ವ ವಿಭಾಗದ ಪ್ರಾಚಾರ್ಯ ಡಾ.ಸಿ.ವಿ. ಗಿರಿಧರ ಶಾಸ್ತ್ರಿ ನಿರೂಪಿಸಿದರು. ಸಹ ಸಂಯೋಜಕ ಡಾ. ರಾಘವೇಂದ್ರ ಭಟ್ ವಂದಿಸಿದರು. ಎರಡು ದಿನಗಳ ವಿಚಾರ ಸಂಕೀರ್ಣದಲ್ಲಿ ಇಪ್ಪತ್ತಕ್ಕೂ ಹೆಚ್ಚು ಶೋಧಪತ್ರಗಳು ಮಂಡನೆಯಾದವು. ಕವಿಗೋಷ್ಠಿ ಹಾಗೂ ಡಾ. ರಾಮಕೃಷ್ಣ ಪೆಜತ್ತಾಯ ಅವರ ಅಷ್ಟಾವಧಾನವನ್ನು ಆಯೋಜಿಸಲಾಗಿತ್ತು.

* ದುಃಖಕ್ಕೆ ಪರಮೌಷಧವೆಂದರೆ ಕ್ರಿಯಾಶೀಲತೆ.

Scanned by CamScanner

ಪ್ರಭಾವಿ - 29-7-15

ಯುವ ಪೀಳಿಗಗೆ ಕೊಡುವ ಸಂಸ್ಕೃತಿಯೇ ಶಿಕ್ಷಣ

ಶೃಂಗೇರಿ: ನಾವು ಯುವ ಪೀಳಿಗೆಗೆ ಕೊಡುವ ಸಂಸ್ಕೃತಿಯೇ ಶಿಕ್ಷಣ. ಆ ಶಿಕ್ಷಣವು ಅವರ ಬಾಳಿಕ್ಕೆಮನ್ನು ಕಟ್ಟಿಕೊಡಬೇಕು ಎಂದು ಕುವೆಂಪು ವಿಶ್ವವಿದ್ಯಾನಿಲಯದ ಎನ್.ಎಸ್.ಎಸ್ ಕಾರ್ಯಕ್ರಮಗಳ ಸಂಯೋಜನಾಧಿಕಾರಿ ಡಾ.ಕುಂದನ್ ಬಾಮರಾಜ್ ಹೇಳಿದರು.

ಅವರು ಶುಕ್ರವಾರ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಆಯೋಜಿಸಿದ್ದ ಎನ್.ಎಸ್.ಎಸ್ ವಾರ್ಷಿಕ ಚಟುವಟಿಕೆಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದರು. ನೈತಿಕತೆ, ಪ್ರಾಮಾಣಿಕತೆ, ಸತ್ಯ, ಅಹಿಂಸೆ, ತ್ಯಾಗ ಮೊದಲಾದ ಮಾನವೀಯ ಮೌಲ್ಯಗಳು ನಮ್ಮ ಜತೆಗಾರರಾಗಬೇಕಿದೆ. ಯುವ ಜನಾಂಗವು ದಾರಿಯಲ್ಲಿ ತೆರಳಿದರೆ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ ಎಂದರು.

ವಾರ್ಷಿಕ ಚಟುವಟಿಕೆಗಳಿಗೆ ಚಾಲನೆ ನೀಡಿ ಮಾತನಾಡಿದ ಶ್ರೀಮಠದ ಅಧಿಕಾರಿ ಶ್ರೀನಾಥರಾವ್, ಮಾನವನ ಬದುಕು ಬೆಂಡೆಗಳ ಆಗಾಧವಾಗಿದೆ. ಆ ಶ್ರಮದ ಪ್ರವೃತ್ತಿ ಆರೋಗ್ಯಕರ ಮನಸ್ಸನ್ನು ಸೃಷ್ಟಿಸಬೇಕು ಎಂದರು.

ಕಾಲೇಜಿನ ಎಸ್ಟೇಟ್ ಪಟಿಕದಲ್ಲಿ ಶಿಬಿರಾಧಿಕಾರಿಯಾಗಿ ಹಲವು ವರ್ಷ ಸೇವೆ ಸಲ್ಲಿಸಿದ್ದ ಡಾ.ಯು.ಎಸ್.ಶಾಂತಮೂರ್ತಿ ಐತಾಳ್ ಅವರನ್ನು ಎಸ್ಟೇಟ್ ವತಿಯಿಂದ ಗೌರವಿಸಲಾಯಿತು. ಪ್ರಾಂಶುಪಾಲ ಡಾ. ಎಚ್.ಸಿ. ವೀರಪ್ಪ ಗೌಡ ಅಧ್ಯಕ್ಷತೆ ವಹಿಸಿದ್ದರು. ಮಹಮ್ಮದ್ ಕಾಲೇಜಿನ ಪ್ರಾಂಶುಪಾಲ ಡಾ.ಸಿ.ಎಂ. ನಿರಿ ಪ್ರಾಸ್ತಾವಿಕ ವಿದ್ಯಾರ್ಥಿ ಕ್ಷೇಮಪಾಲನಾಧಿಕಾರಿ ಪ್ರೊ.ಪ್ರಾಕ್ಷೇಮಿ ಮಾರ್ಯಾ ಜೆ. ಪಂ. ಸದ್ಯ ಎಂ.ಎಸ್. ರಂಗನಾಥ್ ಉಪಸ್ಥಿತರಿದ್ದರು. ಎನ್.ಎಸ್.ಎಸ್ ಅಧಿಕಾರಿಗಳಾದ ಎಸ್.ಎಸ್. ಲಕ್ಷ್ಮೀನಾರಾಯಣ ಭಟ್ ಸ್ವಾಗತಿಸಿ, ಎಚ್.ಜಿ. ಪ್ರಶಾಂತ್ ವಂದಿಸಿದರು.



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಆಯೋಜಿಸಿದ್ದ ಎನ್.ಎಸ್.ಎಸ್ ವಾರ್ಷಿಕ ಚಟುವಟಿಕೆಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಡಾ.ಶಾಂತಮೂರ್ತಿ ಐತಾಳ್ ಅವರನ್ನು ಗೌರವಿಸಲಾಯಿತು.

RNI No. KARKAN/2000/4175

Published for the proprietors, Metropolitan
Regd. Office: Du Parc

Scanned by CamScanner

ಪ್ರಜಾವಾಣಿ · 29·7·15



ಶೃಂಗೇರಿ ಜೆ.ಸಿ.ಬಿ.ಎಂ.ಕಾಲೇಜಿಗೆ 2009ರಲ್ಲಿ ಭಾರತರತ್ನ ಡಾ ಎ.ಪಿ.ಜೆ.ಅಬ್ದುಲ್ ಕಲಾಂ ಭೇಟಿ ನೀಡಿದಾಗ ವಿದ್ಯಾರ್ಥಿಗಳ ವಿಜ್ಞಾನದ ಮಾದರಿಗಳನ್ನು ವೀಕ್ಷಿಸಿದರು.(ಸಂಗ್ರಹ ಚಿತ್ರ.)

ಶೃಂಗೇರಿಯಲ್ಲಿ ಕಲಾಂ ನೆನಪು

ಪ್ರಜಾವಾಣಿ ವಾರ್ತೆ

ಶೃಂಗೇರಿ: ಭಾರತರತ್ನ ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಅವರ ನಿಧನಕ್ಕೆ ಜೆ.ಸಿ.ಬಿ.ಎಂ.ಕಾಲೇಜಿನಲ್ಲಿ ತೀವ್ರ ಸಂತಾಪ ವ್ಯಕ್ತಪಡಿಸಲಾಯಿತು.

2009ರಲ್ಲಿ ಅಬ್ದುಲ್ ಕಲಾಂ ಅವರು ಕಾಲೇಜಿಗೆ ಭೇಟಿ ನೀಡಿ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳೊಡನೆ ಸ್ವಲ್ಪ ಸಮಯದಲ್ಲೇ ಸರಳವಾಗಿ ಪ್ರೀತಿಯಿಂದ ಬೆರೆತುದನ್ನು ಇದೇ ಸಂದರ್ಭ ನೆನಪು ಮಾಡಿಕೊಳ್ಳಲಾಯಿತು. ಅವರ ಆದರ್ಶಗಳಿಂದ ಪ್ರೇರಣೆ ಪಡೆದು ಜೀವನದ ಎಲ್ಲಾ ರಂಗಗಳಲ್ಲೂ ಅವರದೇ ಉದಾಹರಣೆಯನ್ನು ಅನುಸರಿಸುವಂತೆಯೂ, 2020ರ ವೇಳೆಗೆ ಭಾರತವನ್ನು ಸಶಕ್ತವನ್ನಾಗಿಸುವ ಅವರ ಕನಸನ್ನು ನನಸಾಗಿಸಲು ಶ್ರಮಿಸಬೇಕೆಂದು ಸಂಕಲ್ಪ ಮಾಡಿ ಮೌನವನ್ನು ಆಚರಿಸಲಾಯಿತು.

ಮೃತರ ಆತ್ಮಕ್ಕೆ ಶಾಂತಿ ದೊರೆಯಲೆಂದು ಪ್ರಾರ್ಥಿಸಿದ ನಂತರ ತರಗತಿಗಳು ಎಂದಿನಂತೆಯೇ ಮುಂದುವರೆದವು.

Scanned by CamScanner

ವಿಜಯ ಕರ್ನಾಟಕ. 29-7-15

ಶ್ರೀ ಜೆಸಿಬಿಎಂ ಕಾಲೇಜಿನಲ್ಲಿ ಸಂತಾಪ

ಶೃಂಗೇರಿ: ಮಾಜಿ ರಾಷ್ಟ್ರಪತಿ ಭಾರತರತ್ನ ಡಾ ಎ.ಪಿ.ಜೆ.ಅಬ್ದುಲ್ ಕಲಾಂ ಅವರ ನಿಧನಕ್ಕಾಗಿ ಶ್ರೀ ಜೆಸಿಬಿಎಂ ಕಾಲೇಜಿನ ಬಳಗ ತೀವ್ರ ಸಂತಾಪ ವ್ಯಕ್ತಪಡಿಸಿದೆ. ಮಂಗಳವಾರ ಕಾಲೇಜಿನಲ್ಲಿ ನಡೆದ ಸಭೆಯಲ್ಲಿ 2009ರಲ್ಲಿ ಕಲಾಂ ಕಾಲೇಜಿಗೆ ಭೇಟಿ ನೀಡಿ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳೊಡನೆ ಇದ್ದ ಅಲ್ಪಕಾಲದಲ್ಲಿಯೇ ಸರಳವಾಗಿ ಪ್ರೀತಿಯಿಂದ ಬೆರೆತುದನ್ನು ನೆನಪು ಮಾಡಿಕೊಳ್ಳಲಾಯಿತು. ಅವರ ಆದರ್ಶಗಳಿಂದ ಪ್ರೇರಣೆ ಪಡೆದು ಜೀವನದ ಎಲ್ಲ ರಂಗಗಳಲ್ಲೂ ಅವರದೇ ಉದಾಹರಣೆಯನ್ನು ಅನುಸರಿಸುವಂತೆಯೂ, 2020ರ ವೇಳೆಗೆ ಭಾರತವನ್ನು ಸಶಕ್ತವನ್ನಾಗಿಸುವ ಅವರ ಕನಸನ್ನು ನನಸಾಗಿಸಲು ಶ್ರಮಿಸಬೇಕೆಂದು ವಿದ್ಯಾರ್ಥಿಗಳಿಗೆ ತಿಳಿಸಿದರು. ಎರಡು ನಿಮಿಷದ ಮೌನಾಚರಣೆ ನಂತರ ತರಗತಿಗಳು ಎಂದಿನಂತೆ ನಡೆಯಿತು.



ಶೃಂಗೇರಿ ಜೆಸಿಬಿಎಂ ಕಾಲೇಜಿಗೆ 2009 ರಲ್ಲಿ ಅಬ್ದುಲ್ ಕಲಾಂ ಭೇಟಿ ನೀಡಿದ್ದ ಸಂದರ್ಭ.

Scanned by CamScanner



ಬೀರೂರು ಪಟ್ಟಣದ ತರಳ ಬಾಳು ಕಲ್ಯಾಣ ಮಂದಿರದಲ್ಲಿ ನಡೆದ ಕುವೆಂಪು ವಿ.ವಿ.ಯ ಅಂತರ್ ಕಾಲೇಜು ಚೆಸ್ ಪಂದ್ಯಾವಳಿಯಲ್ಲಿ ಶೃಂಗೇರಿಯ ಜೆ.ಸಿ.ಬಿ.ಎಂ. ಕಾಲೇಜಿನ ವಿದ್ಯಾರ್ಥಿಗಳಾದ ನಂದನ್ ಡಿ ಹೆಗ್ಡೆ, ಶಾರುಖ್, ಶ್ರೀನಿವಾಸ್ ವೈ.ಆರ್, ಅನೂಪ್ ಎಚ್.ಆರ್. ಇವರು ಕಾಲೇಜನ್ನು ಪ್ರತಿನಿಧಿಸಿ ದ್ವಿತೀಯ ಬಹುಮಾನವನ್ನು ಪಡೆದಿದ್ದಾರೆ. ಪ್ರಾಂಶುಪಾಲ ಡಾ.ಎಚ್.ಸಿ. ವೀರಪ್ಪ ಗೌಡ, ದೈಹಿಕ ಶಿಕ್ಷಣ ನಿರ್ದೇಶಕ ಎಂ.ವಿ.ಲೋಕೇಶ್ ಇದ್ದಾರೆ.

Mangaluru

Scanned by CamScanner

'ಅಷ್ಟಾವಧಾನ' ಕನ್ನಡದ ಶೃಂಗಾರ ಕಾವ್ಯದಲ್ಲಿ ಪ್ರಸ್ತುತ



ಶೃಂಗೇರಿಯ ಶ್ರೀ.ಜೆ.ಸಿ.ಬಿ.ಎಂ.ಕಾಲೇಜಿನಲ್ಲಿ ಏರ್ಪಡಿಸಿದ್ದ ರಾಷ್ಟ್ರೀಯ ಸಂಸ್ಕೃತ ಸಂಗೋಷ್ಠಿಯಲ್ಲಿ ಅಷ್ಟಾವಧಾನ ಕಾರ್ಯಕ್ರಮ ನಡೆಯಿತು.

ಶೃಂಗೇರಿ

ಅಷ್ಟಾವಧಾನವು ಕನ್ನಡದಲೇಖಿಕ 'ಕವಿಕಾಮ'ನ ಶೃಂಗಾರ ಕಾವ್ಯದಲ್ಲಿ ಪ್ರಸ್ತುತವಾಗಿದ್ದು, ಕ್ರಿ.ಶ. 1882ರಿಂದ 1961ರ ವರೆಗೆ ಬೆಳ್ಳಾವೆ ನರಸಿಂಹ ಶಾಸ್ತ್ರಿಗಳು ಅಷ್ಟಾವಧಾನ ನಡೆಸಿರುವುದಕ್ಕೆ ದಾಖಲೆ ಇದೆ ಎಂದು ಶೃಂಗೇರಿಯ ಸಂಸ್ಕೃತ ವಿದ್ಯಾಪೀಠದ ಯುವ ಅವಧಾನಿ ಡಾ.ರಾಮಕೃಷ್ಣ ಪೆಜತ್ತಾಯ ಹೇಳಿದರು.

ಅವರು ಶ್ರೀಜೆ.ಸಿ.ಬಿ.ಎಂ.ಕಾಲೇಜಿನಲ್ಲಿ ಏರ್ಪಡಿಸಿದ್ದ ಎರಡು ದಿನಗಳ ರಾಷ್ಟ್ರೀಯ ಸಂಸ್ಕೃತ ಸಂಗೋಷ್ಠಿಯ ಕೊನೆಯಲ್ಲಿ ನಡೆದ ಅಷ್ಟಾವಧಾನ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

80ರ ದಶಕದಲ್ಲಿ ಶತಾವಧಾನಿ ಆರ್. ಗಣೇಶ್ ಅವರಿಂದ ಕರ್ನಾಟಕದಲ್ಲಿ ಅವಧಾನ ಕಲೆ ಮತ್ತೊಮ್ಮೆ ನೆಲೆಕಂಡು ಅವರಿಂದ ಪ್ರೇರೇಪಣೆಗೊಂಡ ಯುವಸಮೂಹವು, ಈ ಕ್ಷೇತ್ರದಲ್ಲಿ ಸಾಕಷ್ಟು ಆಸಕ್ತಿ ವಹಿಸುತ್ತಿರುವುದು ಸಂಸ್ಕೃತ ಹಾಗೂ ಸಂಸ್ಕೃತಿಯ ಬೆಳವಣಿಗೆಗೆ ಪೂರಕವಾದ ಸಂಗತಿ ಎಂದು ಅವರು ಅಭಿಪ್ರಾಯಪಟ್ಟರು.

ಅವಧಾನದಲ್ಲಿ ಪೃಚ್ಛಕರು ನೀಡಿದ ಪದ್ಯ ವಿಷಯ ಹಾಗೂ ನಿಬಂಧನೆಯ ಅನುಸಾರವಾಗಿ ಅವಧಾನಿಗಳು ರಚಿಸಬೇಕು. ಹೆಜ್ಜೆ ಹೆಜ್ಜೆಗೂ ನಿಷೇಧಾಕ್ಷರಿಯು ನಿರ್ದಿಷ್ಟ ಅಕ್ಷರ ನಿಷೇಧಿಸಿದಾಗ, ಎಚ್ಚರಿಕೆಯಿಂದ ಪದ್ಯಗಳ ಸಮನ್ವಯತೆಗೆ ಒತ್ತು ನೀಡಬೇಕು, ಇದು ಅವಧಾನಿಗಳ ಪ್ರತಿಭೆಗೆ ದೊಡ್ಡ ಸವಾಲು ಎಂದರು.

ಆಕುಕವಿಗೆ ನೀಡಲಾದ ವಿಷಯಗಳನ್ನು ಭಂದಸ್ಸಿನ ಆಧಾರದಲ್ಲಿಯೇ ಪದ್ಯ ರಚಿಸಬೇಕು. ಇಲ್ಲಿ ಯಾವುದೇ ಪುಸ್ತಕ, ಲೇಖನಿ ಬಳಸುವಂತಿಲ್ಲ. ಕವಿಯ ಸ್ಮರಣಶಕ್ತಿಯೇ ಅವನಲ್ಲಿರುವಪರಿಪೂರ್ಣತೆಸಾಕ್ಷಿಯಾಗುತ್ತದೆ. ಪತ್ತಪದಿಯಲ್ಲಿ ಪ್ರಸ್ತುತ ಸಮಸ್ಯೆಕ್ಕೆ ಸಂಬಂಧಿಸದ ಕೊಟ್ಟ ನಾಲ್ಕು ಪದಗಳಿಂದ ನಿರ್ದಿಷ್ಟ ವಿಷಯದ ಕುರಿತು ಒಂದೊಂದು ಸಾಲುಗಳ ಪದ್ಯ ರಚಿಸುವುದು ಸುಲಭದ ಮಾತಲ್ಲ. ಸೃಜನಶೀಲತೆ, ಅಧ್ಯಯನ, ಸೂಕ್ಷ್ಮತೆ, ಹೊಸತನದ ಹುಡುಕಾಟದ ಪರಿಮೂಡಿದಾಗ ಮಾತ್ರ ಅವಧಾನಿ ಜನಮೆಚ್ಚುಗೆ ಗಳಿಸಬಹುದು ಎಂದು ಹೇಳಿದರು.

Scanned by CamScanner

...ದರು. ಕಾರ್ಯದರ್ಶಿ ಗಣೇಶ್ ಮಾತನಾಡಿ,

ವಿಜಯವಾಣಿ ಸುದ್ದಿಜಾಲ 10 ಆಗಸ್ಟ್ 2015

ಅಷ್ಟಾವಧಾನ ಕಲೆಯ ತವರೂರು ಕರ್ನಾಟಕ

■ ಯುವ ಅವಧಾನಿ ಡಾ. ರಾಮಕೃಷ್ಣ ಪೆಜತ್ತಾಯ ಅಭಿಮತ

ಶೃಂಗೇರಿ: ಸಾಹಿತ್ಯಿಕ ಪ್ರಮಾಣದ ಆಧಾರದಲ್ಲಿ ಅಷ್ಟಾವಧಾನವನ್ನು ಕನ್ನಡದ ಲೇಖಕ 'ಕವಿಕಾಮ'ನ ಶೃಂಗಾರ ಶತಕದಲ್ಲಿ ಕಾಣಬಹುದು ಎಂದು ಶೃಂಗೇರಿಯ ಯುವ ಅವಧಾನಿ ಡಾ. ರಾಮಕೃಷ್ಣ ಪೆಜತ್ತಾಯ ಹೇಳಿದರು.

ಪಟ್ಟಣದ ಜೆಸಿಬಿಎಂ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಅಷ್ಟಾವಧಾನ ಕಾರ್ಯಕ್ರಮದಲ್ಲಿ ಮಾತನಾಡಿ, ಅಷ್ಟಾವಧಾನ ಕಲೆಯ ತವರೂರು ಕರ್ನಾಟಕ. ನಂತರ ಇದು ಆಂಧ್ರಪ್ರದೇಶದಲ್ಲಿ ಅಭಿವೃದ್ಧಿ ಪಡೆಯಿತು. ಕರ್ನಾಟಕದಲ್ಲಿ ಕ್ರಿ.ಶ. 1882ರಿಂದ 1961ರವರೆಗೆ ಶ್ರೀಬೆಳ್ಳಾವೆ ನರಸಿಂಹ ಶಾಸ್ತ್ರಿಗಳು ಅವಧಾನ ನಡೆಸುತ್ತಿದ್ದರು ಎಂದರು.

80ರ ದಶಕದಲ್ಲಿ ಶತಾವಧಾನಿ ಆರ್. ಗಣೇಶ್ ಅವರಿಂದ ಕರ್ನಾಟಕದಲ್ಲಿ ಅವಧಾನ ಕಲೆ ಮತ್ತೆ ನೆಲೆ ಕಂಡುಕೊಂಡಿತ್ತು. ಅವರಿಂದ ಪ್ರೇರಿತರಾದ ಯುವ ಸಮೂಹ ಈ ಕ್ಷೇತ್ರದಲ್ಲಿ ಸಾಕಷ್ಟು ಆಸಕ್ತಿ ವಹಿಸುತ್ತಿರುವುದು ಸಂಸ್ಕೃತ ಹಾಗೂ ಸಂಸ್ಕೃತಿ ಬೆಳವಣಿಗೆಗೆ ಪೂರಕ ಸಂಗತಿ ಎಂದರು.



ಶೃಂಗೇರಿಯ ಜೆಸಿಬಿಎಂ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಅಷ್ಟಾವಧಾನ ಕಾರ್ಯಕ್ರಮದಲ್ಲಿ ಡಾ.ಮಹೇಶ್ ಕಾಕತ್ಕರ್ ಮಾತನಾಡಿದರು.

ಅವಧಾನದಲ್ಲಿ ಪೃಚ್ಛಕರು ನೀಡಿದ ಪದ್ಯಗಳನ್ನು ವಿಷಯ ಹಾಗೂ ನಿಬಂಧನೆ ಅನುಸಾರವಾಗಿ ಅವಧಾನಿಗಳು ರಚಿಸಬೇಕು. ಹೆಜ್ಜೆ ಹೆಜ್ಜೆಗೂ ನಿಷೇಧಾಕ್ಷರಿಯಲ್ಲಿ ನಿರ್ದಿಷ್ಟ ಅಕ್ಷರ ನಿಷೇಧಿಸಿದಾಗ ಅವರು ಬಲು ಎಚ್ಚರಿಕೆಯಿಂದ ಪದ್ಯಗಳ ಸಮನ್ವಯತೆಗೆ ಒತ್ತು ನೀಡಬೇಕು. ಪರಸ್ಪರ ಅನ್ವಯವಾಗದ ಹೊಸ ಪದಗಳನ್ನು ನೀಡಿದಾಗ ಅದಕ್ಕೆ ಅರ್ಥಪೂರ್ಣವಾದ ಸಾಲುಗಳನ್ನು ರಚಿಸಬೇಕು. ಇದು ಅವಧಾನಿಗಳ ಪ್ರತಿಭೆಗೆ ದೊಡ್ಡ ಸವಾಲು ಎಂದರು.

ಆಶು ಕವಿತೆಗೆ ನೀಡಲಾದ ವಿಷಯಗಳನ್ನು ಛಂದಸ್ಸಿನ ಆಧಾರದಲ್ಲಿಯೇ ಪದ್ಯ ರಚಿಸಬೇಕು. ಇಲ್ಲಿ ಯಾವುದೇ ಪುಸ್ತಕ, ಲೇಖನಿ ಬಳಸುವಂತಿಲ್ಲ. ಕವಿಯ ಸ್ಮರಣಶಕ್ತಿಯೇ ಅವನಲ್ಲಿರುವ ಪರಿಪೂರ್ಣತೆಗೆ ಸಾಕ್ಷಿ. ದತ್ತಪದಿಯಲ್ಲಿ ಪ್ರಸ್ತುತ ವಿಷಯಕ್ಕೆ ಸಂಬಂಧಿಸದ ನಾಲ್ಕು ಪದಗಳನ್ನು ಕೊಟ್ಟು ನಿರ್ದಿಷ್ಟ ವಿಷಯ ಕುರಿತು ಒಂದೊಂದು ಸಾಲುಗಳ ಪದ್ಯ ರಚಿಸುವುದು ಸುಲಭದ ಮಾತಲ್ಲ ಎಂದು ಹೇಳಿದರು.

Scanned by CamScanner

ಕನ್ನಡಪ್ರಭ ಶನಿವಾರ 8 ಆಗಸ್ಟ್ 2015 ಶನಿವಾರ ಚಿಕ್ಕಮಗಳೂರು

ಸಂಸ್ಕೃತ ಭಾಷೆ ಜ್ಞಾನದ ಭಂಡಾರ

ರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟಿಸಿದ ಪ್ರೊ. ಪರಮೇಶ್ವರ ನಾರಾಯಣ ಶಾಸ್ತ್ರಿ

ಕನ್ನಡಪ್ರಭ ವಾರ್ತೆ, ಶೃಂಗೇರಿ

ಸಾವಿರಾರುವರ್ಷಗಳಪ್ರಾಚೀನತೆಹೊಂದಿರುವ ಸಂಸ್ಕೃತ ಕೇವಲ ಭಾಷೆಯಾಗಿರದೆ ಜ್ಞಾನ ಭಂಡಾರವಾಗಿದೆ ಎಂದು ನವದೆಹಲಿಯ ರಾಷ್ಟ್ರೀಯ ಸಂಸ್ಕೃತ ಸಂಸ್ಥಾನದ ಕುಲಪತಿ ಪ್ರೊ. ಪರಮೇಶ್ವರ ನಾರಾಯಣ ಶಾಸ್ತ್ರಿ ತಿಳಿಸಿದರು.

ಶೃಂಗೇರಿಯ ಜೆಸಿಬಿಎಂ ಕಾಲೇಜಿನಲ್ಲಿ 'ಸಂಸ್ಕೃತ ಕಾವ್ಯ ನಿರ್ಮಾಣದಲ್ಲಿ ಆಧುನಿಕ ಪದ್ಧತಿಗಳು' ರಾಷ್ಟ್ರೀಯ ಸಂಸ್ಕೃತ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದರು.

ಪ್ರಾಚೀನ ಕಾಲದಲ್ಲಿ ಇದು ಜನರ ಆಡುಭಾಷೆಯಾಗಿ ಜನರ ವ್ಯವಹಾರ ಭಾಷೆಯಾಗಿದ್ದಲ್ಲದೆ ರಾಜಾಶ್ರಯವನ್ನು ಪಡೆದಿತ್ತು. ಸಾಹಿತ್ಯ ಧಾರ್ಮಿಕ ಗ್ರಂಥಗಳು, ಮಹಾಕಾವ್ಯಗಳು ಸಂಸ್ಕೃತ ಭಾಷೆಯಲ್ಲಿಯೇ ರಚಿಸಲ್ಪಟ್ಟಿದೆ. ಎಲ್ಲ ಭಾಷೆಗಳ ಬೇರು ಸಂಸ್ಕೃತ ಭಾಷೆಯಾಗಿದೆ. ಇಂತಹ ಶ್ರೀಮಂತ ಭಾಷೆಯನ್ನು ಇಂದು ಇನ್ನಷ್ಟು ಬೆಳೆಸಬೇಕಿದೆ. ದೇವಭಾಷೆಯಾದ ಸಂಸ್ಕೃತದ ಆದ್ಯಯನಕ್ಕೆ ಪುಣ್ಯಭೂಮಿಯಾದ ಶೃಂಗೇರಿಯು ಸೂಕ್ತ ಸ್ಥಳವಾಗಿದೆ. ಆಧುನಿಕ ಕಾಲದಲ್ಲೂ ಪ್ರಾಚೀನ ಭಾಷೆಯಾದ ಸಂಸ್ಕೃತದಲ್ಲಿ ಅನೇಕ ಗ್ರಂಥಗಳ ರಚನೆಯಾಗುತ್ತಿದೆ ಎಂದರು.



ಶೃಂಗೇರಿಯ ಜೆಸಿಬಿಎಂ ಕಾಲೇಜಿನಲ್ಲಿ ಸಂಸ್ಕೃತ ರಾಷ್ಟ್ರೀಯ ವಿಚಾರ ಸಂಕಿರಣವನ್ನು ರಾಷ್ಟ್ರೀಯ ಸಂಸ್ಕೃತ ಸಂಸ್ಥಾನದ ಕುಲಪತಿ ಪ್ರೊ. ಪರಮೇಶ್ವರ ನಾರಾಯಣ ಶಾಸ್ತ್ರಿ ಉದ್ಘಾಟಿಸಿದರು.

ಬೆಂಗಳೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕ ರಂಗನಾಥ್ ಮೊಸನಾತಿ, ಆಧುನಿಕ ಕಾಲವು ಸಂಸ್ಕೃತದ ಸ್ವರ್ಣಯುಗವಾಗಿದೆ. ರಾಷ್ಟ್ರೀಯ ಚಿಂತನೆಗಳು ಸಂಸ್ಕೃತದಲ್ಲಿ ವಿಪುಲವಾಗಿದೆ. ಅನೇಕ ಆಧುನಿಕ ಕವಿಗಳ ಪರಿಚಯವನ್ನು ವಿದ್ಯಾರ್ಥಿಗಳು ಪಡೆದುಕೊಳ್ಳಬೇಕು. ಸಾಹಿತ್ಯದ ವಿವಿಧ ಪ್ರಕಾರಗಳನ್ನು ಗಮನಿಸಬೇಕು ಎಂದರು.

ಪ್ಯಾಂಶುಪಾಲ ವೀರಪ್ಪಗೌಡ ಅಧ್ಯಕ್ಷತೆಯನ್ನು ವಹಿಸಿದ್ದರು. ಸಂಸ್ಕೃತ ವಿಭಾಗಾಧ್ಯಕ್ಷೆ ಯಶೋದಾ ಸ್ವಾಗತಿಸಿದರು. ಡಾ. ಸಿ.ವಿ. ಗಿರಿಧರ ಶಾಸ್ತ್ರಿ ನಿರೂಪಿಸಿದರು. ಸಹ ಸಂಯೋಜಕ ಡಾ. ರಾಘವೇಂದ್ರ ಭಟ್ ವಂದಿಸಿದರು.

Scanned by CamScanner

ವಿಜಯ ಕರ್ನಾಟಕ 10.8.15

ವಲಯಮಟ್ಟದ ಕ್ರೀಡಾಕೂಟವನ್ನು ಶಾಸಕ ಜಿ.ಎಚ್.ಶ್ರೀನಿವಾಸ್ ಉದ್ಘಾಟಿಸಿದರು.

ರಾಷ್ಟ್ರೀಯ ಸಂಸ್ಕೃತ ವಿಚಾರ ಸಂಕಿರಣ ಸಮಾರೋಪ

ವಿ-ಕ 10-8-15

ಶೃಂಗೇರಿ: ಜನ ಸಾಮಾನ್ಯ ಮಾಡುವ ವಿಷಯ ಪ್ರಸ್ತಾವನೆಯನ್ನು ಕವಿ ತನ್ನ ಕಾವ್ಯದ ಮೂಲಕ ಸುಂದರ ರೂಪಕ ನೀಡುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳಬೇಕು ಎಂದು ವಿದ್ವಾಂಸ ಮಹಾಬಲೇಶ್ವರ ಭಟ್ ಹೇಳಿದರು.

ಅವರು ಶನಿವಾರ ಜೆಸಿಬಿಎಂ ಕಾಲೇಜಿನಲ್ಲಿ ರಾಷ್ಟ್ರೀಯ ಸಂಸ್ಕೃತ ವಿಚಾರ ಸಂಕಿರಣ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು. ಪ್ರಾಚೀನ ಕಾಲದ ಕವಿಗಳು ಅಲಂಕಾರ,ಛಂದಸ್ಸುಗಳನ್ನು ಅಧ್ಯಯನ ಮಾಡಿ ಅಂತರಂಗದ ಸಾಮರ್ಥ್ಯವನ್ನು ಬಳಸಿ ಉತ್ತಮ ಕವಿಯಾದರು. ಕಾವ್ಯದ ಗುಣಲಕ್ಷಣಗಳನ್ನು ತಿಳಿಯುವ ಶಾಸ್ತ್ರ ಅಲಂಕಾರ ಶಾಸ್ತ್ರ ಸುಮಾರು 200 ವರ್ಷಗಳ ಕೆಳಗೆ ಸಾಹಿತ್ಯದಲ್ಲಿ ಪ್ರಭುತ್ವ ಪಡೆದ ವಿಮರ್ಶಕರಾದ ಆನಂದವರ್ಧನಾ,ಜಗನ್ನಾಥ ಮತ್ತು ಅಪ್ಪಯ್ಯ ದೀಕ್ಷಿತ್ ಅವರು ಕಾವ್ಯದ ಸೂಕ್ಷ್ಮತೆಯನ್ನು ಅರಿತು ವಿಶಿಷ್ಟವಾದ ಕ್ರಮಗಳನ್ನು ಕವಿತೆಯಲ್ಲಿ ಅಳವಡಿಸಿಕೊಂಡು ಉತ್ತಮ ಕಾವ್ಯ ರಚಿಸಿದರು. ಮೂವರು ಮಹನೀಯರು ನೀಡಿದ ಕಾವ್ಯದ ಅಂಶಗಳನ್ನು ಪ್ರತಿಯೊಬ್ಬ ಕವಿ ಆರ್ಥಮಾಡಿಕೊಳ್ಳಬೇಕು. ಚಿಂತನೆ, ಅಧ್ಯಯನದ ಮುಖಾಂತರ ಬರವಣಿಗೆಯಲ್ಲಿ ಪ್ರೌಢಿಮೆ ಬೆಳೆಸಿಕೊಳ್ಳಬೇಕು. ಕಾವ್ಯಗಳಲ್ಲಿ ಬಳಸುವ ಪ್ರತಿಯೊಂದು ಶಬ್ದಗಳಿಗೆ ಮಹತ್ವ ನೀಡಬೇಕು. ಸಂಸ್ಕೃತದ ಪಂಚಮಹಾಕಾವ್ಯದ ಚಿಂತನಾಶೈಲಿ ಇಂದಿಗೂ ಪ್ರಸ್ತುತ. ಅಲ್ಲಿ ಬಳಸಿರುವ ಪ್ರತಿಯೊಂದು ಪದಗಳಲ್ಲಿ ಲಯವಿದೆ.ಸಮನ್ವಯತೆಯಿದೆ.ಕವಿಯ ಕವಿತ್ವದ ಪ್ರತಿಭೆಯಿದೆ.ಇದನ್ನು ಇಂದಿನ ಕವಿಗಳು ಬಳಸಿಕೊಳ್ಳುವ ಬಗ್ಗೆ ಚಿಂತನೆ ಮಾಡಬೇಕು ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ರಾಜೀವ್ ಗಾಂಧಿ ಸಂಸ್ಕೃತ ಮಹಾ ವಿದ್ಯಾಲಯದ ಪ್ರೊ.ಎ.ಪಿ. ಸಚ್ಚಿದಾನಂದ ಉಡುಪ,ಸಂಸ್ಕೃತದ ನಾಟಕ ಪ್ರಕಾರಗಳು,ಕಾವ್ಯಗಳ ಜತೆಗೆ ವ್ಯಾಸ, ಕಾಳಿದಾಸ, ಭಾಸ ಮೊದಲಾದವರ ಅಮೂಲ್ಯ ಗ್ರಂಥಗಳ ಬಗ್ಗೆ ಪ್ರತಿ ಗೋಷ್ಠಿಯಲ್ಲಿ ಅನಾವರಣಗೊಂಡಿದೆ.ಆಧುನಿಕ ಸಂಸ್ಕೃತ ಕ್ಷೇತ್ರಕ್ಕೆ ಹಲವಾರು ಕವಿಗಳು ಅಮೂಲ್ಯ ಕೊಡುಗೆ ನೀಡುತ್ತಾ ಬಂದಿದ್ದಾರೆ. ಶ್ರೀಚಂದ್ರಶೇಖರ ಭಾರತೀಯವರ ಹೆಸರಿನಲ್ಲಿರುವ ಕಾಲೇಜಿನಲ್ಲಿ ಸಂಸ್ಕೃತ ವಿಚಾರಗಳು ನಡೆದಿದ್ದು ಸಂತಸ ತಂದಿದೆ. ಹೊಸ ಮಾಹಿತಿಗಳನ್ನು ವಿದ್ವಾಂಸರು ನೀಡಿದ್ದು ಇದು ಕವಿಗಳ ಸೃಜನಶೀಲತೆ ಬೆಳೆಸುವಲ್ಲಿ ಸಹಕಾರಿಯಾಗಲಿದೆ ಎಂದರು.

ಕಾರ್ಯಕ್ರಮದ ಸಂಯೋಜಕರಾದ ಡಾ.ಸಿ.ವಿ.ಗಿರಿಧರ ಶಾಸ್ತ್ರಿ,ರಾಘವೇಂದ್ರ ಭಟ್ ಉಪಸ್ಥಿತರಿದ್ದರು.



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಸಂಸ್ಕೃತ ವಿಚಾರ ಸಂಕಿರಣದಲ್ಲಿ ಅಷ್ಟಾವಧಾನ ನಡೆಯಿತು.

Scanned by CamScanner

ಋಣಾತ್ಮಕ ಮನೋವೃತ್ತಿ ಅಪಾಯಕಾರಿ



ಈಗ ಸಣ್ಣಾ ಪುಟ್ಟ ಕೆಲಸಕ್ಕೂ ಜನರಲ್ಲಿ ಪೈಪೋಟಿ ಹೆಚ್ಚಾಗಿದೆ. ಇಂಥ ಸಂದರ್ಭದಲ್ಲಿ ಋಣಾತ್ಮಕ ಮನೋವೃತ್ತಿ ಹೊಂದಿರುವವರು ಮುಂದೆ ಬರುವುದು ಕಷ್ಟ ಎಂದು ಡಾ.ಗಂಗಾಧರ ಮುತ್ತಗಿ ಅಭಿಪ್ರಾಯಪಟ್ಟರು.

ಕೀಳರಿಮೆ ಬಿಟ್ಟರೆ ಸಾಧನೆ ಟ

ಕಳಸದ ಸರ್ಕಾರಿ ಪದವಿಪೂರ್ವ ಕಾಲೇಜಿನ ಪ್ರತಿಭಾ ವೇದಿಕೆ ಉದ್ಘಾಟನೆ



ಮೂಡಿಗೆರೆ ತಾಲೂಕಿನ ಕಳಸದ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಪ್ರತಿಭಾ ವೇದಿಕೆಯನ್ನು ಡಾ. ಗಿರಿಧರ ಶಾಸ್ತ್ರಿ ಉದ್ಘಾಟಿಸಿದರು.

ಕನ್ನಡಪ್ರಭ ವಾರ್ತೆ, ಮೂಡಿಗೆರೆ

ಜ್ಞಾನದೊಂದಿಗೆ ಕೌಶಲ್ಯವು ವ್ಯಕ್ತಿತ್ವವನ್ನು ರೂಪಿಸುತ್ತದೆ ಎಂದು ಶೃಂಗೇರಿಯ ಜೆಸಿಬಿಎಂ ಕಾಲೇಜಿನ ಪ್ರಾಂಶುಪಾಲ ಡಾ. ಗಿರಿಧರ ಶಾಸ್ತ್ರಿ ತಿಳಿಸಿದರು.

ತಾಲೂಕಿನ ಕಳಸ ಪಟ್ಟಣದ ಶ್ರೀನಿವಾಸ ಕಲ್ಯಾಣ ಮಂಟಪದಲ್ಲಿ ಸರ್ಕಾರಿ ಪದವಿಪೂರ್ವ ಕಾಲೇಜಿನ ಪ್ರತಿಭಾ ವೇದಿಕೆಯನ್ನು ಉದ್ಘಾಟಿಸಿ ಮಾತನಾಡಿ, ಸಮಾಜಕ್ಕೆ ಕಂಟಕಪ್ರಾಯರಾಗಿರುವುದು ವಿದ್ಯಾವಂತರೇ ಹೊರತು ಅವಿದ್ಯಾವಂತರಲ್ಲ ಎಂದರು.

ಕಾಲೇಜು ಅಭಿವೃದ್ಧಿ ಸಮಿತಿ ಅಧ್ಯಕ್ಷ ಸಂತೋಷ್ ಹಿನಾರಿ ಮಾತನಾಡಿ, ಶಿಸ್ತು ಹಾಗೂ ಸತತ ಪರಿಶ್ರಮವಿದ್ದಾಗ ಮಾತ್ರ ಉತ್ತಮ ವಿದ್ಯಾರ್ಥಿಯಾಗಿ ಹೊರಹೊಮ್ಮಲುಸಾಧ್ಯ. ಜನಪ್ರತಿನಿಧಿಗಳ ಹಾಗೂ ಶಿಕ್ಷಕವೃಂದದ ಶ್ರಮದಿಂದ ಕಾಲೇಜು ಪ್ರಗತಿ ಪಥದಲ್ಲಿ ಸಾಗಿದೆ ಎಂದರು.

ತಾಪಂ ಸದಸ್ಯೆ ಅನ್ನಪೂರ್ಣ ಶ್ರೀಧರ್, ಕಾಲೇಜು ಪ್ರಾಂಶುಪಾಲ ಅರುಣ್‌ಕುಮಾರ್ ಮಾತನಾಡಿದರು. ಈ ಸಂದರ್ಭದಲ್ಲಿ 2014-15ರ ಸಾಲಿನಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಾದ ಕಮಲ, ಪೂರ್ಣಿಮಾ ಇವರನ್ನು ಗೌರವಿಸಲಾಯಿತು.

ಗ್ರಾಪಂ ಅಧ್ಯಕ್ಷೆ ರತಿ ರವೀಂದ್ರ, ಉಪಾಧ್ಯಕ್ಷ ಮಹಮ್ಮದ್ ರಫೀಕ್, ರಂಗನಾಥ್, ಭಾಸ್ಕರ್, ಅಬ್ದುಲ್ ಶುಕುರು, ಜೆಸಿಐ ಅಧ್ಯಕ್ಷ ಸುರೇಂದ್ರ, ಎ.ರಾ. ರಾಧಕೃಷ್ಣ, ರಾಮಮೂರ್ತಿ, ವಿಶುಕುಮಾರ್, ಲೀಲಾವತಿ, ಮುಕುಂದ ಕಿಶೋರ್, ನೂರ್ ಮಹಮ್ಮದ್ ಇದ್ದರು.



ಕನ್ನಡ ಪ್ರಭ ಶನಿವಾರ ೪ ಆಗಸ್ಟ್ 2015.

Scanned by CamScanner

www.skdally.com ಸಂಯುಕ್ತ | ಕರ್ನಾಟಕ 9-8-15

ಸಂಸ್ಕೃತ ಅಧ್ಯಯನಕ್ಕೆ ಶೃಂಗೇರಿ ಸೂಕ್ತಸ್ಥಳ

ಶೃಂಗೇರಿ

ದೇವ ಭಾಷೆಯಾಗಿರುವ ಸಂಸ್ಕೃತದ ಅಧ್ಯಯನಕ್ಕೆ ಪುಣ್ಯಭೂಮಿಯಾದ ಶೃಂಗೇರಿಯು ಸೂಕ್ತ ಸ್ಥಳವಾಗಿದೆ ಎಂದು ನವದೆಹಲಿಯ ರಾಷ್ಟ್ರೀಯ ಸಂಸ್ಕೃತ ಸಂಸ್ಥಾನದ ಕುಲಪತಿ ಪ್ರೊ. ಪರಮೇಶ್ವರ ನಾರಾಯಣ ಶಾಸ್ತ್ರಿ ಹೇಳಿದ್ದಾರೆ.

ಇಲ್ಲಿನ ಶ್ರೀ ಜೆ.ಸಿ.ಬಿ.ಎಂ. ಕಾಲೇಜಿನಲ್ಲಿ 2ದಿನಗಳ ಕಾಲ ನಡೆಯಲಿರುವ ಸಂಸ್ಕೃತ ಕಾವ್ಯ ನಿರ್ಮಾಣದಲ್ಲಿ ಆಧುನಿಕ ಪದ್ಧತಿಗಳು ಎಂಬ ಸಂಸ್ಕೃತ ವಿಚಾರ ಸಂಕೀರ್ಣವನ್ನು ಉದ್ಘಾಟಿಸಿ ಮಾತನಾಡಿದರು. ಆಧುನಿಕ ಕಾಲದಲ್ಲೂ ಪ್ರಾಚೀನ ಭಾಷೆಯಾದ ಸಂಸ್ಕೃತದಲ್ಲಿ ಅನೇಕ ಗ್ರಂಥಗಳ ರಚನೆಯಾಗುತ್ತಿವೆ. ಶಾರದಾಂಬೆಯ ಕೃಪೆಯಿಂದ ಈ ಸಂಕೀರ್ಣದಿಂದಾಗಿ ನೂತನ ಸಂಸ್ಕೃತ ಕವಿಗಳ ಸೃಷ್ಟಿಯಾಗಲಿ ಎಂದು ಹಾರೈಸಿದರು.

ವಿಶೇಷ ಭಾಷಣ ಮಾಡಿದ ಬೆಂಗಳೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕ ರಂಗನಾಥ್, ಆಧುನಿಕ ಕಾಲವು ಸಂಸ್ಕೃತದ ಸ್ವರ್ಣಯುಗವಾಗಿದೆ. ರಾಷ್ಟ್ರೀಯ ಚಿಂತನೆಗಳು ಸಂಸ್ಕೃತದಲ್ಲಿ ವಿಪುಲವಾಗಿದೆ. ಅನೇಕ ಆಧುನಿಕ ಕವಿಗಳ ಪರಿಚಯವನ್ನು ವಿದ್ಯಾರ್ಥಿಗಳು ಪಡೆದುಕೊಳ್ಳಬೇಕು. ಸಾಹಿತ್ಯದ ವಿವಿಧ ಪ್ರಕಾರಗಳನ್ನು ಗಮನಿಸಬೇಕು ಎಂದರು. ಪ್ರಾಂಶುಪಾಲ ವೀರಪ್ಪ ಗೌಡ ಅಧ್ಯಕ್ಷತೆ ವಹಿಸಿದ್ದರು. ಪದವಿಪೂರ್ವ ವಿದ್ಯಾಲಯದ ಪ್ರಾಚಾರ್ಯ ಡಾ. ಸಿ. ವಿ. ಗಿರಿಧರ ಶಾಸ್ತ್ರಿ ನಿರೂಪಿಸಿದರು. ಸಂಸ್ಕೃತ ವಿಭಾಗಾಧ್ಯಕ್ಷೆ ಯಶೋದಾ ಸ್ವಾಗತಿಸಿದರು. ಸಹಸಂಯೋಜಕ ಡಾ. ರಾಘವೇಂದ್ರ ಭಟ್ ವಂದಿಸಿದರು.



ಶೃಂಗೇರಿಯ ಶ್ರೀಜೆಸಿಬಿಎಂ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ 2 ದಿನಗಳ ಸಂಸ್ಕೃತ ಕಾವ್ಯ ರಚನೆಯ ವಿಚಾರ ಸಂಕೀರ್ಣವನ್ನು ಪ್ರೊ.ಪರಮೇಶ್ವರ ನಾರಾಯಣ ಶಾಸ್ತ್ರಿಯವರು ಉದ್ಘಾಟಿಸಿದರು.

2 ದಿನಗಳ ವಿಚಾರ ಸಂಕೀರ್ಣದಲ್ಲಿ ಇಪ್ಪತ್ತಕ್ಕೂ ಹೆಚ್ಚು ಶೋಧಪತ್ರಗಳ ಮಂಡನೆಯಾಗಲಿದ್ದು ಇದಲ್ಲದೇ ಕವಿಗೋಷ್ಠಿ ಹಾಗೂ ಡಾ. ರಾಮಕೃಷ್ಣ ಪೆಜತ್ತಾಯ ಅವರ ಕಷ್ಟಾವಧಾನವನ್ನು ಆಯೋಜಿಸಲಾಗಿದೆ.

Scanned by CamScanner

ಸಂಯುಕ್ತ ಕರ್ನಾಟಕ 8-8-15

ಭಾವಗೀತೆಗೆ ನೂರು ವರ್ಷಗಳ ಇತಿಹಾಸವಿದೆ

ಶೃಂಗೇರಿ

ಭಾವಗೀತೆಯು ಆಂತರಾಳದಿಂದ ಹೊರಹೊಮ್ಮುವ ಸೌಂದರ್ಯ ಲಹರಿಯಾಗಿದೆ. ಕನ್ನಡ ಭಾವಗೀತೆ ಪರಂಪರೆಗೆ ನೂರು ವರ್ಷಗಳ ಇತಿಹಾಸವಿದೆ ಎಂದು ಕೊಪ್ಪದ ನ್ಯಾಯವಾದಿ ಸುಧೀರ್ ಕುಮಾರ್ ಮುರೊಳ್ಳಿ ಹೇಳಿದರು.

ಅವರು ಶ್ರೀ ಜೆ.ಸಿ.ಬಿ.ಎಂ. ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನಾ ಘಟಕವು ಕಲ್ಕುಟ್ಟಿ ಮುಸ್ತಕದ ಮನೆ, ರೋಟರಿ ಕ್ಲಬ್ ಮತ್ತು ಇನ್ನರ್‌ವೀಲ್ ಕ್ಲಬ್‌ಮೊಂದಿಗೆ ಆಯೋಜಿಸಿದ್ದ ಗೀತಸಂಚಾರ ಕಾರ್ಯಕ್ರಮದಲ್ಲಿ ಹೆಚ್. ಎಂ.ನಾಗರಾಜರಾವ್‌ರವರ ನೂರನೇ ಸಿ.ಡಿ. ಈ ಪ್ರೇಮ ಮಳೆಯಲ್ಲಿ ವಿಷಯ ಕುರಿತು ಮಾತನಾಡಿದರು.

ಎಲ್ಲರಿಗೂ ಭಾವಗೀತೆಗಳನ್ನು ಬರೆಯಲಾಗುವುದಿಲ್ಲ. ಆದೇ ರೀತಿ ಬರೆದಿದೆಲ್ಲವೂ ಭಾವಗೀತೆಯಾಗಲಾರದು. ಕುವೆಂಪು, ದ.ರಾ.ಬೇಂದ್ರೆ ಮೊದಲಾದ ಪ್ರತಿಭಾವಂತರ ಕವನಗಳು ಜನಸಾಮಾನ್ಯರಿಗೂ ತಲುಪುವ ನಿಟ್ಟಿನಲ್ಲಿ ಯಶಸ್ವಿಯಾಗಿವೆ. ಗೀತೆಯ ಲಹರಿಯು ಚಿರಕಾಲ ಉಳಿಯಬೇಕಾದರೆ ಅಧ್ಯಯನ, ಅನುಭವ, ಸೂಕ್ಷ್ಮತೆ ಮುಖ್ಯ. ಈ ನಿಟ್ಟಿನಲ್ಲಿ ನಾಗರಾಜರಾವ್ ಕಲ್ಕುಟ್ಟಿಯವರು ಪರಂಪರೆಯೊಂದಿಗೆ ಗಟ್ಟಿಯಾಗಿ ನಿಲ್ಲಬಹುದಾದ ಭಾವಗೀತೆಗಳನ್ನು ಬರೆದು, ಸ್ವರಸಂಯೋಜಿಸಿ, ಹಾಡಿದ್ದಾರೆ ಎಂದರು.



ಶೃಂಗೇರಿಯ ಶ್ರೀ ಜೆ.ಸಿ.ಬಿ.ಎಂ. ಕಾಲೇಜಿನಲ್ಲಿ ನಡೆದ ಗೀತಸಂಚಾರ ಕಾರ್ಯಕ್ರಮವನ್ನು ಚಿತ್ರನಟಿ ಅನುಶ್ರೀ ಉದ್ಘಾಟಿಸಿದರು.

ಚಿತ್ರನಟಿ ಅನುಶ್ರೀ ಮಾತನಾಡಿ, ಶಾರದಾಂಬೆಯ ನೆಲದಲ್ಲಿ ಜನಿಸಿದ ಭಾವಗೀತೆಗಳು ಯಶಸ್ಸು ಕಾಣಲಿ ಎಂದು ಹಾರೈಸಿದಲ್ಲದೆ ಕಿರುತೆರೆ, ಹಿರಿತೆರೆಯ ಆಕರ್ಷಣೆಗಿಂತ ಬದುಕು ಮುಖ್ಯ. ವಿದ್ಯಾರ್ಥಿ ಜೀವನಕ್ಕೆ ಗೌರವ ನೀಡಿದರೆ ಭವಿಷ್ಯದ ಜೀವನ ಅರ್ಥ ಪಡೆದುಕೊಳ್ಳುತ್ತದೆ ಎಂದಳು.

ಡಾ. ಸಿ.ವಿ. ಗಿರಿಧರಶಾಸ್ತ್ರಿ ಮಾತನಾಡಿ, ನಮ್ಮ ಸಂಸ್ಥೆಯಲ್ಲಿ ಓದಿದ ವಿದ್ಯಾರ್ಥಿಯೊಬ್ಬ ಕಲೆಯನ್ನು ಪ್ರವೃತ್ತಿಯಾಗಿ ಬೆಳೆಸಿಕೊಂಡು ನೂರನೇ ಸಿ.ಡಿ. ಹೊರತಂದಿರುವುದು ಸಂಸ್ಥೆಗೆ ಹೆಮ್ಮೆಯ ವಿಷಯವಾಗಿದೆ ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಚಾರ್ಯ ಡಾ. ಹೆಚ್.ಸಿ. ವೀರಪ್ಪಗೌಡ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ನಿರಂತರವಾಗಿ ಭಾಗವಹಿಸುತ್ತಾ ವಿದ್ಯಾಭ್ಯಾಸದಲ್ಲೂ ಚಿನ್ನದ ಪದಕಗಳೊಂದಿಗೆ ರ್‍ಯಾಂಕ್‌ನ್ನು ಗಳಿಸಿದ ನಾಗರಾಜರಾವ್ ಎನ್.ಎಸ್.ಎಸ್ ನ ಮಾದರಿ ಸದಸ್ಯ. ಇವರ ಸಾಧನೆಯು ವಿದ್ಯಾರ್ಥಿ ಸಮುದಾಯಕ್ಕೆ ಸ್ಫೂರ್ತಿ ತುಂಬಲಿದೆ ಎಂದರು.

ಇನ್ನರ್‌ವೀಲ್ ಕ್ಲಬ್ ಅಧ್ಯಕ್ಷೆ ಭಾಗ್ಯವೀರಪ್ಪಗೌಡ ಸಿ.ಡಿ.ಯನ್ನು ಅನಾವರಣಗೊಳಿಸಿದರು. ಅರ್ಚನಾರಾವ್, ವೈಷ್ಣವಿ ನಾಗರಾಜ್ ಅವರ ಗೀತಗಾಯನ ಸಭಿಕರನ್ನು ರಂಜಿಸಿತು.

ಜಿ.ಪಂ ಸದಸ್ಯ ಬಿ.ಶಿವಶಂಕರ್, ಉಪನ್ಯಾಸಕ ಲಕ್ಷ್ಮೀನಾರಾಯಣ್ ವೇದಿಕೆಯಲ್ಲಿದ್ದರು. ಸಮಾರಂಭದಲ್ಲಿ ಅನುಶ್ರೀ, ಸುಧೀರ್‌ಕುಮಾರ್ ಮುರೊಳ್ಳಿ ಹಾಗೂ ಅರ್ಚನಾರಾವ್‌ರವನ್ನು ಕಲ್ಕುಟ್ಟಿ ಮುಸ್ತಕದ ಮನೆಯವತಿಯಿಂದ ಸನ್ಮಾನಿಸಲಾಯಿತು. ಎನ್.ಎಸ್.ಎಸ್ ಅಧಿಕಾರಿ ಎ.ಜಿ.ಪ್ರಶಾಂತ್ ಸ್ವಾಗತಿಸಿ, ನಾಗರಾಜರಾವ್ ಕಲ್ಕುಟ್ಟಿ ನಿರೂಪಿಸಿ ವಂದಿಸಿದರು.

Scanned by CamScanner

ಚೆಸ್: ಸಾಗರ ಕಾಲೇಜು ಪ್ರಥಮ

ಪ್ರಜಾವಾಣಿ ವಾರ್ತೆ

ಬೀರೂರು: ಕುವೆಂಪು ವಿಶ್ವವಿದ್ಯಾಲಯ ಅಂತರ ಕಾಲೇಜು ಚೆಸ್ ಪಂದ್ಯಾವಳಿಯ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ವಿಭಾಗದ ಎರಡೂ ಪ್ರಶಸ್ತಿಗಳು ಸಾಗರದ ಕಾಲೇಜುಗಳ ಪಾಲಾಗಿದೆ.

ಬೀರೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆಶ್ರಯದಲ್ಲಿ ಪಟ್ಟಣದ ತರಳ ಬಾಳು ಕಲ್ಯಾಣ ಮಂದಿರದಲ್ಲಿ ಗುರು ವಾರ ಮುಕ್ತಾಯವಾದ ಪಂದ್ಯಾವಳಿಯಲ್ಲಿ ಬಾಲಕರ ವಿಭಾಗದಲ್ಲಿ ಸಾಗರದ ಎಲ್‌ಬಿ, ಅಂಡ್ ಎಸ್‌ಬಿಎಸ್ ಅಗ್ರಸ್ಥಾನ ಗಳಿಸಿದರೆ ಬಾಲಕಿಯರ ವಿಭಾಗದಲ್ಲಿ ಇಂದಿರಾಗಾಂಧಿ ಸರ್ಕಾರಿ ಪ್ರಥಮದರ್ಜೆ ಕಾಲೇಜು ಗೆಲುವಿನ ನಗೆ ಬೀರಿತು.

ಬಾಲಕರ ವಿಭಾಗದಲ್ಲಿ ದ್ವಿತೀಯ ಸ್ಥಾನ ಶೃಂಗೇರಿಯ ಜೆಸಿಬಿಎಂ ಕಾಲೇಜಿನ ಪಾಲಾದರೆ ಆತಿಥೇಯ ಬೀರೂರು ಕಾಲೇಜು ತೃತೀಯ ಸ್ಥಾನ ಪಡೆಯಿತು. ಬಾಲಕಿಯರ ವಿಭಾಗದಲ್ಲಿ ಶಿವಮೊಗ್ಗದ ಸಹ್ಯಾದ್ರಿ ವಿಜ್ಞಾನ ಕಾಲೇಜು ದ್ವಿತೀಯ ಮತ್ತು ಶಿವಮೊಗ್ಗದ್ದೇ ಆದ ಎಟಿಎನ್‌ಸಿ ಕಾಲೇಜು ತೃತೀಯ ಸ್ಥಾನ ಗಳಿಸಿತು.



ಬೀರೂರು ಪಟ್ಟಣದ ತರಳಬಾಳು ಕಲ್ಯಾಣಮಂದಿರದಲ್ಲಿ ನಡೆದ ಕುವೆಂಪು ವಿವಿ ಅಂತರ ಕಾಲೇಜು ಚೆಸ್ ಪಂದ್ಯಾವಳಿಯಲ್ಲಿ ವಿಜೇತರಾದ ಶಿವಮೊಗ್ಗ ಜಿಲ್ಲೆ ಸಾಗರದ ಎಲ್‌ಬಿ ಅಂಡ್ ಎಸ್‌ಬಿಎಸ್ ಕಾಲೇಜು ವಿದ್ಯಾರ್ಥಿಗಳು ಅತಿಥಿಗಳೊಂದಿಗೆ ಇದ್ದಾರೆ.

ಎರಡು ದಿನಗಳ ಕಾಲ ನಡೆದ ಪಂದ್ಯಾವಳಿಯಲ್ಲಿ 32 ಕಾಲೇಜುಗಳ 150ಕ್ಕೂ ಹೆಚ್ಚು ಸ್ಪರ್ಧಿಗಳು ಪಾಲ್ಗೊಂಡರು. ಮುಕ್ತಾಯ ಸಮಾರಂಭದಲ್ಲಿ ಬೀರೂರು ಜಿಎಫ್‌ಜಿಸಿ ಪ್ರಾಂಶುಪಾಲ ಡಾ.ಎಸ್.ಆರ್.ವೈದ್ಯ, ವಿಶ್ವವಿದ್ಯಾಲಯ ದೈಹಿಕ ಶಿಕ್ಷಣ ಉಪ ನಿರ್ದೇಶ ಜಿ.ಎಸ್.ನಾಗರಾಜ್ ಮತ್ತು ಪುರಸ ಸದಸ್ಯ ಎಸ್.ಎಸ್.ದೇವರಾಜ್ ಪ ತೋಷಕ ವಿತರಿಸಿದರು. ಕಾಲೇ ಅಭಿವೃದ್ಧಿ ಸಮಿತಿ ಸದಸ್ಯ ರವಿಶಂಕ ಇತರರು ಇದ್ದಾರೆ.

Scanned by CamScanner

ಅರ್ಜಿ ಆಹ್ವಾನ

ಶೃಂಗೇರಿ: ಜೆ.ಸಿ.ಬಿ.ಎಂ. ಕಾಲೇಜು ಸ್ನಾತ ಕೋತ್ತರ ಅರ್ಥಶಾಸ್ತ್ರ ಅಧ್ಯಯನ ಕೇಂದ್ರ ಅರ್ಹ ವಿದ್ಯಾರ್ಥಿ ಗಳಿಂದ ಅರ್ಥಶಾಸ್ತ್ರ ಸ್ನಾತಕೋತ್ತರ ತರಗತಿಗಳಿಗೆ ಪ್ರವೇಶಾತಿಗೆ ಪಡೆಯಲು ಅರ್ಜಿ ಆಹ್ವಾನಿಸಿದೆ.

ಆಸಕ್ತ ಅರ್ಹ ವಿದ್ಯಾರ್ಥಿಗಳು ಕಾಲೇಜಿನ ಕಚೇರಿಯಲ್ಲಿ ಅರ್ಜಿಯನ್ನು ಪಡೆದು ಪ್ರವೇಶವನ್ನು ಪಡೆಯಲು ಕೋರಿದೆ. ಪ್ರವೇಶಾತಿ ಪ್ರಾರಂಭವಾಗಿದ್ದು, ಆಸಕ್ತರು ಕಾಲೇ ಜನ್ನು ಸಂಪರ್ಕಿಸಲು ಪ್ರಾಂಶುಪಾಲ ಡಾ.ಎಚ್.ಸಿ.ವೀರಪ್ಪಗೌಡ ಮನವಿ ಮಾಡಿದ್ದಾರೆ.

Scanned by CamScanner

ಶುಕ್ರವಾರ, 7 ಆಗಸ್ಟ್ 2015, ಶಿವಮೊಗ್ಗ

ವಿಜಯ ಕರ್ನಾಟಕ

ರಾಷ್ಟ್ರೀಯ ವಿಚಾರ ಗೋಷ್ಠಿ

ಶೃಂಗೇರಿ: ಶ್ರೀಜೆಸಿಬಿಎಂ ಕಾಲೇಜಿನ ಸಂಸ್ಕೃತ ವಿಭಾಗದಲ್ಲಿ ಆ.7 ಮತ್ತು 8 ರಂದು ವಿ.ವಿ.ಅನುದಾನ ಆಯೋಗ ಪ್ರಾಯೋಜಿತ ಎರಡು ದಿನಗಳ ರಾಷ್ಟ್ರೀಯ ವಿಚಾರ ಗೋಷ್ಠಿ ಆಯೋಜಿಸಲಾಗಿದೆ.

ಸಂಸ್ಕೃತ ಕಾವ್ಯ ರಚನೆಯಲ್ಲಿ ಆಧುನಿಕ ದೃಷ್ಟಿಕೋನ ಮತ್ತು ಕವಿ ಗೋಷ್ಠಿಯನ್ನೊಳಗೊಂಡಿರುವ ಈ ಕಾರ್ಯಕ್ರಮವನ್ನು ನವದೆಹಲಿಯ ರಾಷ್ಟ್ರೀಯ ಸಂಸ್ಕೃತ ಸಂಸ್ಥಾನದ ಕುಲಪತಿ ಪ್ರೊ.ಪರಮೇಶ್ವರ ನಾರಾಯಣ ಶಾಸ್ತ್ರಿ ಉದ್ಘಾಟಿಸಲಿದ್ದಾರೆ. ಪ್ರಾಚಾರ್ಯ ಪ್ರೊ.ಎಚ್.ಸಿ.ವೀರಪ್ಪಗೌಡ ಅಧ್ಯಕ್ಷತೆ ವಹಿಸುವರು.

ಆಧುನಿಕ ಕಾವ್ಯದ ವಸ್ತುವಿಚಾರ, ರಚನಾ ಸಾಮಗ್ರಿ, ಛಂದೋ ವಿಚಾರ ಗೋಷ್ಠಿಗಳನ್ನು ಈ ಕ್ಷೇತ್ರದಲ್ಲಿನ ಶಿಕ್ಷಣ ತಜ್ಞರು ನಡೆಸಿಕೊಡಲಿದ್ದಾರೆ. ಇದಲ್ಲದೇ ಕವಿಗೋಷ್ಠಿ ಮತ್ತು ಅಷ್ಟಾವಧಾನ ಕಾರ್ಯಕ್ರಮ ಏರ್ಪಡಿಸಲಾಗಿದೆ. ಆ.8ರಂದು ನಡೆಯುವ ಸಮಾರೋಪ ಸಮಾರಂಭದಲ್ಲಿ ಅಷ್ಟಾವಧಾನಿ ಆರ್.ಗಣೇಶ್ ಸಮಾರೋಪ ಭಾಷಣ ಮಾಡಲಿದ್ದಾರೆ. ವಿದ್ವಾನ್ ಮಹಾಬಲೇಶ್ವರ ಭಟ್ಟ ಭಾಗವಹಿಸಲಿದ್ದು, ರಾಜೀವ್‌ಗಾಂಧಿ ಸಂಸ್ಕೃತ ವಿದ್ಯಾಪೀಠದ ಪ್ರಾಚಾರ್ಯ ಪ್ರೊ.ಎ.ಪಿ.ಸಚ್ಚಿದಾನಂದ ಅಧ್ಯಕ್ಷತೆ ವಹಿಸುವರು.

ಕಾರ್ಯಕ್ರಮದಲ್ಲಿ ಸ್ಥಳೀಯ ಪಂಡಿತರೊಂದಿಗೆ ತ್ರಿಶೂರ್, ಬೆಂಗಳೂರು, ಉಡುಪಿ, ಪುರಿ, ತಿರುಪತಿ, ಮುಂಬಯಿ, ಮೈಸೂರು ಹಾಗೂ ಮೇಲುಕೋಟೆಯಿಂದ ವಿದ್ವಾಂಸರು ಪಾಲ್ಗೊಳ್ಳುವರು ಎಂದು ಪ್ರಕಟಣೆ ತಿಳಿಸಲಾಗಿದೆ.

Scanned by CamScanner



ಬೀರೂರಿನ ತರಳ ಬಾಳು ಕಲ್ಯಾಣ ಮಂದಿರದಲ್ಲಿ ನಡೆದ ಕುವೆಂಪು ವಿ.ವಿ.ಯ ಅಂತರ ಕಾಲೇಜು ಚೆಸ್ ಪಂದ್ಯಾವಳಿಯಲ್ಲಿ ಶೃಂಗೇರಿಯ ಶ್ರೀ ಜೆಸಿಬಿಎಂ ಕಾಲೇಜಿನ ವಿದ್ಯಾರ್ಥಿಗಳಾದ ನಂದನ್.ಡಿ.ಹೆಗ್ಡೆ, ಶಾರುಖ್, ಆರ್.ಶ್ರೀನಿವಾಸ್ ಪೈ, ಎಚ್.ಆರ್.ಅನೂಪ್ ಕಾಲೇಜನ್ನು ಪ್ರತಿನಿಧಿಸಿ ದ್ವಿತೀಯ ಬಹುಮಾನ ಗಳಿಸಿದ್ದಾರೆ.

Scanned by CamScanner

ವಿಜಯವಾಣಿ - ೩೧-೭-೧೫

ದೇಶದ ಅಭಿವೃದ್ಧಿಗೆ ಎಲ್ಲರೂ ಕೈಜೋಡಿಸಿ

ಶೃಂಗೇರಿ: ಮಾಜಿ ರಾಷ್ಟ್ರಪತಿ ಅಬ್ದುಲ್ ಕಲಾಂ ನಿಧನಕ್ಕೆ ತಾಲೂಕಿನ ವಿವಿಧೆಡೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಜೆಸಿಬಿಎಂ ಕಾಲೇಜು ಪ್ರಚಾರ್ಯ ಡಾ.ವೀರಪ್ಪ ಗೌಡ ಮಾತನಾಡಿ, ದೇಶದ ಪ್ರಾಮಾಣಿಕ ವ್ಯಕ್ತಿಯೊಬ್ಬರನ್ನು ನಾವು ಕಳೆದು ಕೊಂಡಿದ್ದೇವೆ ಎಂದರು. ಪಪಂ ಸದಸ್ಯೆ ಸುಮಾ ಸೋಮಶೇಖರ್, ಪತ್ರಕರ್ತ ಶೃಂಗೇರಿ ಸುಬ್ಬಣ್ಣ ಇದ್ದರು.

ತಾಪಂ, ಗ್ರಾಪಂ, ತಾಲೂಕು ಕಚೇರಿ, ಶಾಲಾಕಾಲೇಜು ಹಾಗೂ , ಆಟೋ ಚಾಲಕರು ಮತ್ತು ಮಾಲೀಕರ ಸಂಘಗಳು ಶ್ರದ್ಧಾಂಜಲಿ ಸಲ್ಲಿಸಿದರು.



ಶೃಂಗೇರಿಯ ಜೆಸಿಬಿಎಂ ಕಾಲೇಜಿಗೆ ಭೇಟಿ ನೀಡಿದ್ದ ಅಬ್ದುಲ್ ಕಲಾಂ.

Scanned by CamScanner

ಜೆ.ಸಿ.ಬಿ.ಎಂ. ಕಾಲೇಜು- ಉದ್ಘಾಟನೆ

ಶೃಂಗೇರಿಯಲ್ಲಿ ಗೀತ ಗಾಯನ ಶಿಬಿರ

ಪ್ರಜಾವಾಣಿ ವಾರ್ತೆ

ಶೃಂಗೇರಿ: ವಿದ್ಯೆಯ ಜೊತೆಯಲ್ಲೇ ಸೇವಾ ಸಂಸ್ಥೆಗಳಲ್ಲಿ ನಮ್ಮನ್ನು ನಾವು ತೊಡಗಿಸಿ ಕೊಳ್ಳುವುದರಿಂದ ನಮ್ಮ ಸರ್ವತೋ ಮುಖ ಬೆಳವಣಿಗೆಯಾಗುತ್ತದೆ ಎಂದು ಶಿಕ್ಷಕ ಬಿ.ಎಲ್. ರವಿಕುಮಾರ್ ಹೇಳಿದರು.

ಜೆ.ಸಿ.ಬಿ.ಎಂ. ಕಾಲೇಜು, ರೋಟರಿ ಕ್ಲಬ್ ಹಾಗೂ ಎನ್‌ಎಸ್‌ಎಸ್ ಘಟಕ ಸಂಯುಕ್ತವಾಗಿ ಕಾಲೇಜಿನ ಟಿ.ಎಂ.ಎ.ಪೈ ಸಭಾಂಗಣದಲ್ಲಿ ಏರ್ಪಡಿಸಿದ್ದ ಗೀತ ಗಾಯನ ತರಬೇತಿ ಶಿಬಿರ ಉದ್ಘಾಟಿಸಿ ಮಾತನಾಡಿದರು. ಚದುರಿ ಹೋಗಬಹುದಾದ ಯುವಶಕ್ತಿಗೆ ಸೂಕ್ತ ಮಾರ್ಗದರ್ಶನ ನೀಡಿ, ಅವರಿಗೆ ಸಾಮಾಜಿಕ ಜವಾಬ್ದಾರಿಯನ್ನು ಎನ್.ಎಸ್.ಎಸ್. ನೀಡುತ್ತದೆ ಧ್ಯೇಯೋದ್ದೇಶಗಳುಳ್ಳ ರಾಷ್ಟ್ರೀಯ ಸೇವಾ ಯೋಜನೆಯ ಗೀತೆಗಳು ನಮಗೆ ಸೃಜನಶೀಲ ವ್ಯಕ್ತಿತ್ವ ನೀಡುತ್ತದೆ ಎಂದರು.



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ಏರ್ಪಡಿಸಿದ್ದ ಗೀತಗಾಯನ ತರಬೇತಿ ಶಿಬಿರದಲ್ಲಿ ಬಿ.ಎಲ್.ರವಿಕುಮಾರ್ ಮಾತನಾಡಿದರು.

ಗಾಯಕ ಎಚ್.ಎಂ. ನಾಗರಾಜ ರಾವ್ ಕಲ್ಕುಟ್ಟೆ ಮಾತನಾಡಿ, ಸೇವಾ ಗೀತೆಗಳು ಕೇವಲ ಕಂಠಪಾಠದ ಸ್ವರೂಪದಲ್ಲಿರದೇ ಅಂತರಂಗವನ್ನು ರೂಪಗೊಳಿಸುವ ರೀತಿಯಲ್ಲಿ ಭಾವನಾತ್ಮಕವಾಗಿ ಮೂಡಿ ಬಂದರೆ ಸಮರ್ಪಣಾಭಾವ ತಾನಾಗಿ ಮೂಡುತ್ತದೆ ಎಂದರು.

ಪ್ರಾಚಾರ್ಯ ಡಾ.ಹೆಚ್.ಸಿ. ವೀರಪ್ಪ ಗೌಡ ಅಧ್ಯಕ್ಷತೆ ವಹಿಸಿದ್ದರು.

ಉಪನ್ಯಾಸಕರಾದ ಚೇತನ್ ಮತ್ತು ಆದಿತ್ಯ ಎನ್. ಎಸ್.ಎಸ್. ಅಧಿಕಾರಿ ಲಕ್ಷ್ಮೀನಾರಾಯಣ್, ಪ್ರಶಾಂತ್ ಉಪಸ್ಥಿತರಿದ್ದರು.

Scanned by CamScanner

ಪ್ರಜಾವಾಣಿ ಜುಲೈ 22 2015

ಇಂಗ್ಲಿಷ್ ಕಲಿಕೆಯಿಂದ ವ್ಯವಹಾರ ಸುಲಭ

ಪ್ರಜಾವಾಣಿ ವಾರ್ತೆ

ಶೃಂಗೇರಿ: ಇಂಗ್ಲಿಷ್ ಕಲಿಕೆಯಿಂದ ವ್ಯವಹಾರ ಸುಗಮವಾಗಲಿದ್ದು, ಎಲ್ಲಾ ರಂಗಗಳಲ್ಲೂ ಸಮನ್ವಯ ಸಾಧಿಸಲು ಸಾಧ್ಯ ಎಂದು ಜೆ.ಸಿ.ಬಿ.ಎಂ ಕಾಲೇಜಿನ ಪದವಿಪೂರ್ವ ವಿಭಾಗದ ಪ್ರಾಂಶುಪಾಲ ಸಿ.ವಿ. ಗಿರಿಧರಶಾಸ್ತ್ರಿ ಹೇಳಿದರು.

ಈಚೆಗೆ ಕಿಗ್ಗಾದ ಅಭಿನವ ರಮಾನಂದ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ಆಂಗ್ಲಭಾಷಾ ಕಲಿಕ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಇಂಗ್ಲಿಷ್ ಅನ್ನು ಒಂದು ಭಾಷೆಯಾಗಿ ಕಲಿಯಬೇಕು. ಇದು ನಮಗೆ ಶೈಕ್ಷಣಿಕ, ಉದ್ಯೋಗ, ಸಾರ್ವಜನಿಕ ವಲಯದಲ್ಲಿ ಗುರುತಿಸಿಕೊಳ್ಳಲು ಸಹಾಯ ಮಾಡುತ್ತದೆ ಪ್ರೌಢಶಾಲಾ ವಿದ್ಯಾರ್ಥಿಗಳು ಭಾಷೆಗಳನ್ನು ಕಲಿಯಲು ಹೆಚ್ಚಿನ ಆಸಕ್ತಿಯನ್ನು ಬೆಳಸಿಕೊಳ್ಳಬೇಕು ಎಂದರು



ಶೃಂಗೇರಿ ತಾಲೂಕಿನ ಶುಕ್ರವಾರ ಕಿಗ್ಗಾದ ಅಭಿನವ ರಮಾನಂದ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ಆಂಗ್ಲ ಭಾಷಾ ಕಲಿಕಾ ಶಿಬಿರವನ್ನು ಸಿ.ವಿ.ಗಿರಿಧರಶಾಸ್ತ್ರಿ ಉದ್ಘಾಟಿಸಿದರು.

ಬೆಂಗಳೂರಿನ ಯುಕ್ ಫಾರ್ ಸೇವಾ ಸಂಸ್ಥೆ, ಜೆ.ಸಿ.ಬಿ.ಎಂ ಕಾಲೇಜಿನ ಎಸ್.ಎಸ್.ಎಸ್ ಘಟಕ, ಚಿನ್ಮೈ ಸೇವಾ ಚಕ್ರ ಸಂಯುಕ್ತವಾಗಿ ಆಯೋಜಿಸಿರುವ ಈ ವಿನೂತನ ಕಾರ್ಯಕ್ರಮಗಳು ವರ್ಷ ಪೂರ್ತಿ ನಡೆಯಲಿವೆ ಎಂದು ಶಿಕ್ಷಕ ಬಿ.ಎಲ್ ರವಿಕುಮಾರ್ ಹೇಳಿದರು.

ಎನ್.ಎಸ್.ಎಸ್ ಅಧಿಕಾರಿ ಎ.ಪಿ ಪ್ರಶಾಂತ್, ಆಂಗ್ಲ ಉಪನ್ಯಾಸಕಿ ಸರ್ವದಾ, ಎನ್.ಆರ್. ಪೂರ್ಣಿಮ, ಕಿರಣ್, ಓಂ ಪ್ರಕಾಶ್, ಅಂಜನಪ್ಪ ಉಪಸ್ಥಿತರಿದ್ದರು.

Scanned by CamScanner

ಪ್ರವೇಶಕ್ಕೆ ಅರ್ಜಿ ಆಹ್ವಾನ

ಶೃಂಗೇರಿ: ಇಲ್ಲಿನ ಜೆಸಿಬಿಎಂ ಕಾಲೇಜು ಸ್ನಾತಕೋತ್ತರ ಅರ್ಥಶಾಸ್ತ್ರ ಅಧ್ಯಯನ ಕೇಂದ್ರ ಶೃಂಗೇರಿ ತಾಲೂಕಿನ ಬಿಎ ಪದವೀಧರ ವಿದ್ಯಾರ್ಥಿಗಳಿಂದ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ವಿದ್ಯಾರ್ಥಿಗಳು ಕಾಲೇಜು ಕಚೇರಿಯಲ್ಲಿ ಅರ್ಜಿ ಪಡೆದು ಸಲ್ಲಿಸಬಹು ಎಂದು ಪ್ರಾಚಾರ್ಯ ಡಾ. ಎಚ್.ಸಿ.ವೀರಪ್ಪಗೌಡ ತಿಳಿಸಿದ್ದಾರೆ.

Scanned by CamScanner

ಕನ್ನಡ ಪ್ರಭ

11-6-15

ಮುಂದಿನ ಪೀಳಿಗೆಗೆ ಪರಿಸರ ರಕ್ಷಿಸಿ

ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ನಾಗೇಶ್ ಕಾಮತ್

ಕನ್ನಡಪ್ರಭ ವಾರ್ತೆ, ಶೃಂಗೇರಿ

ಪರಿಸರ ನೈರ್ಮಲ್ಯ ಕಾಪಾಡುವುದರಿಂದ ಉತ್ತಮ ಆರೋಗ್ಯ ಹೊಂದಲು ಸಾಧ್ಯ. ಸುಖಕರ ಜೀವನ ನಡೆಸಬೇಕಿದ್ದರೆ ಪ್ರತಿಯೊಬ್ಬರಲ್ಲೂ ಪರಿಸರ ಕಾಳಜಿ ಮೂಡಬೇಕು ಎಂದು ಎಂದು ಪಟ್ಟಣ ಪಂಚಾಯಿತಿ ಮಾಜಿ ಅಧ್ಯಕ್ಷ ನಾಗೇಶ್ ಕಾಮತ್ ಹೇಳಿದರು.

ಹಸಿರು ಇರುವ ಪ್ರದೇಶ ಕಾಂಕ್ರೀಟೀಕರಣಗೊಳ್ಳುತ್ತಿದೆ. ಪ್ರಕೃತಿ ನೀಡಿರುವ ಅತ್ಯಮೂಲ್ಯ ಪರಿಸರವನ್ನು ಮುಂದಿನ ಪೀಳಿಗೆ ಹಿತದೃಷ್ಟಿಯಿಂದ ರಕ್ಷಿಸಬೇಕಾದ ಅನಿವಾರ್ಯತೆ ಇದೆ. ಈ ಬಗ್ಗೆ ಎಲ್ಲರಲ್ಲೂ ಜಾಗೃತಿ ಮೂಡಬೇಕು.



ಶೃಂಗೇರಿ ಜೆ.ಸಿ.ಬಿ.ಎಂ. ಕಾಲೇಜಿನ ಆವರಣದಲ್ಲಿ ಆಯೋಜಿಸಲಾಗಿದ್ದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮಕ್ಕೆ ನಾಗೇಶ್ ಕಾಮತ್ ಸಸಿ ನೆಡುವುದರ ಮೂಲಕ ಚಾಲನೆ ನೀಡಿದರು.

ಪಟ್ಟಣದ ಶ್ರೀ ಜೆ.ಸಿ.ಬಿ.ಎಂ. ಕಾಲೇಜಿನ ಆವರಣದಲ್ಲಿ ಆಯೋಜಿಸಲಾಗಿದ್ದ ವಿಶ್ವ ಪರಿಸರ ದಿನಾಚಾರಣೆ ಕಾರ್ಯಕ್ರಮದಲ್ಲಿ, ಬದುಕಲು ಅಗತ್ಯವಿರುವ ನೀರು, ಗಾಳಿ,ಬೆಳಕು, ಆಹಾರ ಇತ್ಯಾದಿಗಳು ಪ್ರಕೃತಿಯಿಂದ ಪಡೆಯುತ್ತಿದ್ದೇವೆ. ಆದರೆ, ಸ್ವಾರ್ಥಿಗಳಿಂದಾಗಿ ಪರಿಸರ ನೈರ್ಮಲ್ಯ ಹಾಳಾಗುತ್ತಿದೆ ಎಂದರು.

ಇಂದು ವಿಪರೀತ ಪ್ರಮಾಣದಲ್ಲಿ ಅರಣ್ಯ ನಾಶವಾಗುತ್ತಿದೆ. ಜಲ ಸಂಪತ್ತು ಮಲಿನವಾಗುತ್ತಿದೆ. ಎಲ್ಲೆಂದರಲ್ಲಿ ತ್ಯಾಜ್ಯ ವಸ್ತುಗಳನ್ನು ವಿಲೇವಾರಿ ಮಾಡುತ್ತಿರುವುದರಿಂದ ಪರಿಸರ ಹಾಳಾಗುತ್ತಿದೆ. ಹಸಿರು ಇರುವ ಪ್ರದೇಶ ಕಾಂಕ್ರೀಟೀಕರಣಗೊಳ್ಳುತ್ತಿದೆ. ಪ್ರಕೃತಿ ನೀಡಿರುವ ಅತ್ಯಮೂಲ್ಯ ಪರಿಸರ ಮುಂದಿನ ಪೀಳಿಗೆ ಹಿತದೃಷ್ಟಿಯಿಂದ ರಕ್ಷಿಸಬೇಕಾದ ಅನಿವಾರ್ಯತೆ ಇದೆ. ಈ ಬಗ್ಗೆ ಎಲ್ಲರಲ್ಲೂ ಜಾಗೃತಿ ಅವಶ್ಯ ಎಂದರು.

ಪರಿಸರ ಸಂರಕ್ಷಣೆ ಮಾಡಿದರೆ ಶುದ್ಧಗಾಳಿ, ನೀರು ದೊರಕುವುದರಿಂದ ಉತ್ತಮ ಆರೋಗ್ಯಕ್ಕೆ ಸಹಕಾರಿಯಾಗುತ್ತದೆ. ವಿಶ್ವದಲ್ಲಿ ಜನರಿಗೆ,ಇರುವುದೊಂದೇ ಭೂಮಿ. ಅದನ್ನು ಸಂರಕ್ಷಿಸುವುದು ಎಲ್ಲರ ಮೇಲಿನ ಮಹತ್ತರ ಜವಾಬ್ದಾರಿ ಎಂದರು. ಪ್ರಾಂಶುಪಾಲ ಎಚ್.ಸಿ. ವೀರಪ್ಪಗೌಡ, ಡಾ. ಸಿ.ವಿ. ಗಿರಿಧರಶಾಸ್ತ್ರಿ, ವೇಣುಮಾಧವ ನಾಯಕ್, ಪ್ರಶಾಂತ್ ಸಿದ್ದಪ್ಪ ಮತ್ತಿತರರು ಉಪಸ್ಥಿತರಿದ್ದರು.

Scanned by CamScanner

ನಾಗೇಶ್ ಪತ್ರಿಕೆ 11-6-15

ಪತ್ರಿಕೆ ದಿನಾಂಕ : 11 - 06 - 2015

ಪ್ರತಿಯೊಬ್ಬರೂ ಪರಿಸರದ ಕಾಳಜಿ ಬೆಳಸಿಕೊಳ್ಳಬೇಕು

ಶೃಂಗೇರಿ: ಇಲ್ಲಿನ ಶ್ರೀ ಜೆ.ಸಿ.ಬಿ.ಎಂ. ಕಾಲೇಜಿನಲ್ಲಿ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮ ಇತ್ತೀಚೆಗೆ ಯಶಸ್ವಿಯಾಗಿ ನಡೆಯಿತು. ಸಸಿಯೊಂದನ್ನು ನೆಡುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದ ಶೃಂ.ಪ.ಪಂ.ಸದಸ್ಯ ನಾಗೇಶ್ ಕಾಮತ್ ಮಾತನಾಡಿ, ಪ್ರಕೃತಿ ನಮಗೆ ಅತ್ಯಂತ ಅಮೂಲ್ಯ ಪರಿಸರವನ್ನು ನೀಡಿದ್ದು ಅದನ್ನು ಕಾಪಾಡಿಕೊಂಡು ಮುಂದಿನ ಪೀಳಿಗೆಗೆ ಸ್ವಚ್ಛ ಹಸಿರು ಪರಿಸರವನ್ನು ಉಳಿಸ ಬೇಕಾಗಿರುವದು ನಮ್ಮ ಕರ್ತವ್ಯವಾಗಿದೆ. ಹಾಗೆಯೇ ಪರಿಸರ ಸಂರಕ್ಷಣೆಯಲ್ಲಿ ಯುವಕರ ಪಾತ್ರ ಬಹಳ ಮುಖ್ಯವಾಗಿದೆ ಎಂದು ಹೇಳಿದರು. ಗಿಡಗಳು ನಮ್ಮ ಜೀವನದ ಅವಿಭಾಜ್ಯ ಅಂಗವಾಗಿದೆ. ಆದರೆ ಮನುಷ್ಯರ ದುರಾಸೆಯಿಂದ ಅರಣ್ಯ ಪ್ರದೇಶ ದಿನದಿಂದ ದಿನಕ್ಕೆ ಕಡಿಮೆಯಾಗಿ, ಹಸಿರು ಇರುವ ಪ್ರದೇಶ ಕಾಂಕ್ರೀಟಿಕರಣಗೊಳ್ಳುತ್ತಿದೆ. ಗಿಡಗಳನ್ನು ನೆಟ್ಟು ಪೋಷಿಸಿ, ಬೆಳಸಬೇಕು. ಪ್ರತಿಯೊಬ್ಬರೂ ಪರಿಸರದ ಕಾಳಜಿ ಬೆಳಸಿಕೊಳ್ಳಬೇಕು ಎಂದರು. ಕಾಲೇಜಿನ ಪ್ರಾಚಾರ್ಯ ಡಾ.ಹೆಚ್.ಸಿ.ವೀರಪ್ಪ ಗೌಡ ಮಾತನಾಡಿ, ಇಂದಿನ ದಿನದಲ್ಲಿ ಪ್ರತಿಯೊಬ್ಬರು ಪ್ರಕೃತಿ ಬಗ್ಗೆ ಕಾಳಜಿ ವಹಿಸಬೇಕಾಗಿರುವುದು ಅನಿವಾರ್ಯವಾಗಿದೆ. ಪರಿಸರ ಸಂರಕ್ಷಣೆಯನ್ನು ಮಾಡಿದರೆ, ಶುದ್ಧ ಗಾಳಿ, ನೀರು ದೊರಕುತ್ತದೆ. ಇದು ಉತ್ತಮ ಆರೋಗ್ಯಕ್ಕೆ ಸಹಕಾರಿಯಾಗಿದೆ. ಪರಿಸರವನ್ನು ಬೆಳೆಸಿ ಉಳಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ವಿಶ್ವದ 700 ಕೋಟಿ ಜನರಿಗೆ ಇರುವುದೊಂದೆ ಭೂಮಿ. ಅದನ್ನು ಸಂರಕ್ಷಿಸವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದರು. ಕಾಲೇಜಿನ ಪ.ಪೂ. ವಿಭಾಗದ ಪ್ರಾಚಾರ್ಯ ಡಾ.ಸಿ.ವಿ. ಗಿರಿಧರ ಶಾಸ್ತ್ರೀ, ವೇಣುಮಾಧವ ನಾಯಕ್, ಸಿದ್ದಪ್ಪ, ಎನ್.ಎಸ್.ಎಸ್. ಅಧಿಕಾರಿ ಪ್ರಶಾಂತ್ ಉಪಸ್ಥಿತರಿದ್ದರು.



Scanned by CamScanner

ಶೃಂಗೇರಿ ಜೂ. 21, ಅಂತಾರಾಷ್ಟ್ರೀಯ ಯೋಗದಿನ ಆಚರಣೆ

ಶೃಂಗೇರಿ: ಇಲ್ಲಿನ ಶ್ರೀ ಜೆ.ಸಿ.ಬಿ.ಎಂ ಕಾಲೇಜು, ರೋಟರಿ ಕ್ಲಬ್ ಮತ್ತು ಪತಂಜಲಿ ಯೋಗ ಶಿಕ್ಷಣ ಸಮಿತಿಯ ಸಂಯುಕ್ತ ಆಶ್ರಯದಲ್ಲಿ ಜೂ. 21 ರಂದು ಶ್ರೀ ಜೆ.ಸಿ.ಬಿ.ಎಂ ಕಾಲೇಜು ಆವರಣದಲ್ಲಿ ಅಂತರಾಷ್ಟ್ರೀಯ ಯೋಗದಿನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಅಂದು ಬೆಳಿಗ್ಗೆ 7 ರಿಂದ ರಾತ್ರಿ 7.30 ರ ವರೆಗೆ ನಡೆಯುವ ಈ ಕಾರ್ಯಕ್ರಮದಲ್ಲಿ ಆಸಕ್ತರೆಲ್ಲರೂ ಪಾಲ್ಗೊಳ್ಳಬಹುದಾಗಿದೆ. ಇದಕ್ಕೆ ಪೂರ್ವಭಾವಿ ತರಬೇತಿಯು ಶಾರದಾ ನಗರದ ರೋಟರಿ ಭವನದಲ್ಲಿ ಪ್ರತಿನಿತ್ಯ ಬೆಳಿಗ್ಗೆ 6 – 7 ರ ವರೆಗೆ ನಡೆಸಲಾಗುತ್ತಿದೆ. ತಾಲ್ಲೂಕು ಮಟ್ಟದ ಈ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ಕೋರಲಾಗಿದೆ. ಆಸಕ್ತರು ನಿಯೋಜಿತ ರೋಟರಿ ಕ್ಲಬ್ ಅಧ್ಯಕ್ಷ ಡಾ.ಹೆಚ್.ಸಿ.ವೀರಪ್ಪಗೌಡ. (9448344630). ಪತಂಜಲಿ ಯೋಗ ಶಿಕ್ಷಣ ಸಮಿತಿ ಉಪಾಧ್ಯಕ್ಷ ನಾಗೇಶ್ ಕಾಮತ್ (9448407737) ರವರನ್ನು ಸಂಪರ್ಕಿಸಬಹುದಾಗಿದೆ.

Scanned by CamScanner

11-6-15 ನಾಗೇಶ್ ಪತ್ರಿಕೆ

ರೋಟರಿ ಕ್ಲಬ್ ವತಿಯಿಂದ, ಪರಿಸರ ಸ್ನೇಹಿ ಬಟ್ಟೆ ಚೀಲ ವಿತರಣೆ



ಶೃಂಗೇರಿ: ವಿಶ್ವ ಪರಿಸರ ದಿನಾಚರಣೆ ಅಂಗವಾಗಿ, ಶೃಂಗೇರಿ ರೋಟರಿ ಕ್ಲಬ್ ವತಿಯಿಂದ ಪರಿಸರ ಸ್ನೇಹಿ ಬಟ್ಟೆ ಚೀಲಗಳನ್ನು ಇತ್ತೀಚೆಗೆ ವಿತರಿಸಲಾಯಿತು. ಈ ಸಂದರ್ಭದಲ್ಲಿ ಶೃಂ.ಪ.ಪಂ. ಮಾಜಿ ಅಧ್ಯಕ್ಷರು ಹಾಗು ಹಾಲಿ ಸದಸ್ಯರುಆಗಿರುವ ನಾಗೇಶ್ ಕಾಮತ್ ಮಾತನಾಡಿ, ಘನತ್ಯಾಜ್ಯವಸ್ತುಗಳ ನಿರ್ವಹಣೆ ಅಂಗವಾಗಿ ಪ್ಲಾಸ್ಟಿಕ್ ಚೀಲಗಳನ್ನ ತ್ಯಜಿಸಿ ಪರಿಸರ ಸ್ನೇಹಿ ಬಟ್ಟೆ ಚೀಲಗಳನ್ನು ಬಳಸಿ ಎಂಬ ಸಂದೇಶದ ಮೂಲಕ "ಮನೆಗೊಂದು ಚೀಲ ಪ್ಲಾಸ್ಟಿಕ್ ನಿಂದ ದೂರ " ಘೋಷಣೆ ಅಡಿ ಪರಿಸರ ಸ್ನೇಹಿ ಚೀಲಗಳನ್ನು 600 ಎನ್.ಸಿ.ಸಿ. ಕೆಡೆಟ್‌ಗಳಿಗೆ ವಿತರಿಸಲಾಗುತ್ತಿದೆ ಎಂದರು. ಪ್ಲಾಸ್ಟಿಕ್ ಮಣ್ಣಿನಲ್ಲಿ ಕರಗದೆ ಇರುವುದರಿಂದ ಮಣ್ಣಿನ ಪಲವತ್ತತೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಆದ್ದರಿಂದ ಪ್ಲಾಸ್ಟಿಕ್ ಚೀಲದ ಬದಲಿಗೆ ಬಟ್ಟೆ ಚೀಲಗಳನ್ನು ಬಳಸುವಂತೆ ಅವರು ತಳಿಸಿದರು. ರೋಟರಿ ಕ್ಲಬ್ ನ ನಿಯೋಜಿತ ಅಧ್ಯಕ್ಷರಾದ ಡಾ. ಹೆಚ್.ಸಿ. ವೀರಪ್ಪ ಗೌಡ ರವರು ಪರಿಸರ ಸ್ನೇಹಿ ಚೀಲಗಳನ್ನು 21 ಕರ್ನಾಟಕ ಬೆಟಾಲಿಯನ್ ಕಾಮೈಡಿಂಗ್ ಅಫಿಸರ್ ರವರಿಗೆ ಹಸ್ತಾಂತರಿಸಿದರು.

Scanned by CamScanner

ವಿಜಯವಾಣಿ 12-6-15

ಮಿತ ಪ್ಲಾಸ್ಟಿಕ್ ಬಳಕೆಯಿಂದ ಪರಿಸರ ಸ್ವಚ್ಛತೆ

ವಿಕ ಚಿತ್ರಲೋಕ

ವಿಕ ಸುದ್ದಿಲೋಕ, ಶೃಂಗೇರಿ

ಪ್ಲಾಸ್ಟಿಕ್ ಪರಿಸರಕ್ಕೆ ಮಾರಕವಾಗಿದ್ದು ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡುವುದರಿಂದ ಪರಿಸರವು ಸ್ವಚ್ಛತೆ ಕಾಪಾಡಿಕೊಳ್ಳಲು ಸಾಧ್ಯವಾಗಲಿದೆ ಎಂದು ಪ.ಪಂ. ಸದಸ್ಯ ನಾಗೇಶ್ ಕಾಮತ್ ಹೇಳಿದರು.

ಅವರು ಇತ್ತೀಚೆಗೆ ಜೆಸಿಬಿಎಂ ಕಾಲೇಜಿನಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಪರಿಸರ ಸ್ನೇಹಿ ಚೀಲಗಳನ್ನು ವಿತರಿಸಿ ಮಾತನಾಡಿದರು. ನಾವು ದಿನ ನಿತ್ಯ ಅಂಗಡಿಯಿಂದ ಸಾಮಗ್ರಿಗಳನ್ನು ಖರೀದಿಸುವ ಸಂದರ್ಭ ಮನೆಯಿಂದ ಬಟ್ಟೆ ಚೀಲವನ್ನು ಕೊಂಡೊಯ್ಯುವ ಅಭ್ಯಾಸ ರೂಢಿಸಿಕೊಳ್ಳಬೇಕು. ಇದರಿಂದ ಅಂಗಡಿಯಲ್ಲಿ ಪ್ಲಾಸ್ಟಿಕ್ ಚೀಲಗಳನ್ನು ಬಳಸದಂತೆ ಮಾಡಬಹುದಾಗಿದೆ. ಪ್ಲಾಸ್ಟಿಕ್‌ನಿಂದ ಉಂಟಾಗುವ ಹಾನಿ ಬಗ್ಗೆ ಪ್ರತಿಯೊಬ್ಬರಲ್ಲಿ ಜಾಗೃತಿ ಆಗಬೇಕು ಎಂದರು.

ರೋಟರಿ ಕ್ಲಬ್ ನಿಯೋಜಿತ ಅಧ್ಯಕ್ಷೆ ಡಾ.



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ಪರಿಸರ ಸ್ನೇಹಿ ಚೀಲಗಳನ್ನು 21 ಕರ್ನಾಟಕ ಬೆಟಾಲಿಯನ್ ಅಧಿಕಾರಿಗೆ ಡಾ.ವೀರಪ್ಪಗೌಡ ಹಸ್ತಾಂತರಿಸಿದರು.

ಎಚ್.ಸಿ.ವೀರಪ್ಪ ಗೌಡ ಅವರು ಪರಿಸರ ಸ್ನೇಹಿ ಚೀಲಗಳನ್ನು 21 ಕರ್ನಾಟಕ ಬೆಟಾಲಿಯನ್ ಅಧಿಕಾರಿಗೆ ಹಸ್ತಾಂತರಿಸಿದರು. 'ಮನೆಗೊಂದು ಚೀಲ ಪ್ಲಾಸ್ಟಿಕ್‌ನಿಂದ ದೂರ' ಘೋಷಣೆ ಅಡಿ 600 ಎಸ್‌ಟಿಸಿ ಕೆಡೆಟ್‌ಗಳಿಗೆ ಪರಿಸರ ಸ್ನೇಹಿ ಚೀಲಗಳನ್ನು ವಿತರಿಸಲಾಯಿತು.

Scanned by CamScanner

ವಿಜಯವಾಣಿ - 11-6-15

ಪ್ಲಾಸ್ಟಿಕ್ ಬಳಕೆಯಿಂದ ಪರಿಸರಕ್ಕೆ ಧಕ್ಕೆ

ಶೃಂಗೇರಿ: ಆಧುನಿಕ ಯುಗದಲ್ಲಿ ಪ್ಲಾಸ್ಟಿಕ್ ಸಂಸ್ಕೃತಿ ಹೆಚ್ಚುತ್ತಿದ್ದು, ಪರಿಸರ ಮಾಲಿನ್ಯಕ್ಕೆ ಪ್ಲಾಸ್ಟಿಕ್ ಬಳಕೆ ಪ್ರಮುಖ ಕಾರಣ ಎಂದು ಪಪಂ ಮಾಜಿ ಅಧ್ಯಕ್ಷ ನಾಗೇಶ್ ಕಾಮತ್ ಹೇಳಿದರು.

ಜೆಸಿಬಿಎಂ ಕಾಲೇಜಿನಲ್ಲಿ ಬುಧವಾರ ರೋಟರಿ ಸಂಸ್ಥೆ ಹಮ್ಮಿಕೊಂಡಿದ್ದ ಪರಿಸರ ಸ್ನೇಹಿ ಚೀಲ ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಭೂಮಿಯ ಉಷ್ಣಾಂಶ ಹೆಚ್ಚಿಸುವ, ಮಣ್ಣಿನ ಫಲವತ್ತತೆಯಲ್ಲಿ ವ್ಯತಿರಿಕ್ತ ಪರಿಣಾಮ ಬೀರುವ ಪ್ಲಾಸ್ಟಿಕ್‌ನ್ನು ದೂರವಿರಿಸಿ ಬಟ್ಟೆ ಚೀಲಗಳನ್ನು ಹೆಚ್ಚಾಗಿ ಬಳಸಬೇಕು ಎಂದು ಸಲಹೆ ನೀಡಿದರು.

ಪ್ರಕೃತಿಯೊಂದಿಗೆ ಅವಿನಾಭಾವ ಸಂಬಂಧ ಇರಿಸಿಕೊಂಡ ನಾವು ಪರಿಶುದ್ಧವಾದ ಗಾಳಿ, ಬೆಳಕಿನೊಂದಿಗೆ ಬದುಕು ನಿರ್ವಹಿಸಬೇಕಾದರೆ ಘನತ್ಯಾಜ್ಯ ವಸ್ತುಗಳನ್ನು ಕಡಿಮೆ ಬಳಕೆ ಮಾಡಬೇಕು ಎಂದು ಹೇಳಿದರು.

600 ಎನ್‌ಸಿಸಿ ಕೆಡೆಟ್‌ಗಳಿಗೆ ಪರಿಸರ ಸ್ನೇಹಿ ಚೀಲ ವಿತರಿಸಲಾಯಿತು. ರೋಟರಿ ಸಂಸ್ಥೆ ನಿಯೋಜಿತ ಅಧ್ಯಕ್ಷ ಡಾ. ಎಚ್.ಸಿ.ವೀರಪ್ಪಗೌಡ ಇದ್ದರು.



ಜೆಸಿಬಿಎಂ ಕಾಲೇಜಿನಲ್ಲಿ 21 ಕರ್ನಾಟಕ ಬೆಟಾಲಿಯನ್ ಕಮಾಂಡಿಂಗ್ ಆಫೀಸರ್‌ಗೆ ರೋಟರಿ ನಿಯೋಜಿತ ಅಧ್ಯಕ್ಷ ಡಾ. ಎಚ್.ಸಿ.ವೀರಪ್ಪಗೌಡ ಪರಿಸರ ಸ್ನೇಹಿ ಚೀಲ ಹಸ್ತಾಂತರಿಸಿದರು.

Scanned by CamScanner

■ ಸುತ್ತಮುತ್ತಲಿನ ಪರಿಸರದಲ್ಲಿ ನೀರು ನಿಲ್ಲದಂತೆ ಎಚ್ಚರ ವಹಿಸಿ ■ ಆರೋಗ್ಯ ಇಲಾಖೆ ಸಿಬ್ಬಂದಿ ಸುಧಾಕರ್ ಸಲಹೆ

ಶುಚಿತ್ವ ಕಾಪಾಡಿದರೆ ಕಾಯಿಲೆಗಳು ದೂರ

ಹೊಸಗೋಡು: ಮಲೇರಿಯಾ ಸೊಳ್ಳೆಯಿಂದ ಉತ್ಪತ್ತಿಯಾಗುವ ಖಾಯಿಲೆ ಆಗಿರುವುದರಿಂದ ಮನೆ ಸುತ್ತಮುತ್ತ ನೀರು ನಿಲ್ಲದಂತೆ ಎಚ್ಚರ ವಹಿಸಬೇಕು ಎಂದು ಆರೋಗ್ಯ ಇಲಾಖೆ ಸಿಬ್ಬಂದಿ ಸುಧಾಕರ್ ಸಲಹೆ ನೀಡಿದರು.

ಹೆಸರಾಂತ ಪಪ್ಪಾ ಕಾರ್ಖಾನೆ, ಚೀನಾ, ದೋಹಾ ಸಕ್ಕರೆ ಉತ್ಪಾದನೆಯಲ್ಲಿ ಸಾಧನೆ ಮಾಡಿರುವ ಕಾರ್ಖಾನೆಯಲ್ಲಿ ಇಂದು ಮಲೇರಿಯಾ ವಿರೋಧಿ ಮಾಸಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಸಾರ್ವಜನಿಕ ವಲಯದಲ್ಲಿ ಎಲ್ಲೇ ಆಗಲಿ ಚರಂಡಿ ಸಂಗ್ರಹವಾಗುವ ನೀರಿನಲ್ಲಿ ಮಲೇರಿಯಾ ರೋಗಾಣು ಉತ್ಪತ್ತಿಯಾಗುತ್ತದೆ. ಇವುಗಳ ನಿಯಂತ್ರಣದ ಮಾಹಿತಿ ಜತೆಗೆ ಸಾರ್ವಜನಿಕರಿಗೆ ಜಾಗೃತಿ ಮೂಡಿಸಲು ಸಹಕರಿಸಬೇಕು ಎಂದರು.

ಮಲೇರಿಯಾ ನಿಯಂತ್ರಣದ ಕುರಿತು ಹೆಚ್ಚಿನ ಪೊಲಿ ಕಾರ್ಯಾಗಾರ, ರೋಗದ ಮತ್ತು ರೋಗಿಗಳ ಪತ್ತೆಕಾರ್ಯ ವಿದ್ಯಾರ್ಥಿಗಳು ಪಡೆದಿರುವ ಮಾಹಿತಿಯನ್ನು ಮುಖ್ಯೋಪಾಧ್ಯಾಯರಿಗೆ ಹಸ್ತಾಂತರಿಸಿದರು.

ಪ್ರಾಚಾರ್ಯ ಡಾ.ವೀರಪ್ಪಗೌಡ, ಡಾ.ಎ.ವಿ.ಗಿರಿಧರ ಕಪ್ಪ, ದೊಡ್ಡ ಪಟ್ಟಣದ ಅಧಿಕಾರಿ ಕೆ.ಎಸ್ ಸಂತೋಷಮೂರ್ತಿ, ಪ್ರೌಢ ಶಿಕ್ಷಣ ನಿರ್ದೇಶಕ ಎಂ.ವಿ.ರೋಹಿತ್, ಡಾ.ವೆಂಕಟೇಶ್, ಡಾ.ಅನಿಲ್‌ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.



ಮಲೇರಿಯಾ ವಿರೋಧಿ ಮಾಸಾಚರಣೆ ಅಂಗವಾಗಿ ಕೃಂಗೇರಿಯಲ್ಲಿ ಹಮ್ಮಿಕೊಂಡಿದ್ದ ಜಾಗೃತಿ ಜಾಥಾದಲ್ಲಿ ಕಾಲೇಜು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

Scanned by CamScanner

ಪ್ರಜಾವಾಣಿ ಕನ್ನಡ ದಿನಪತ್ರಿಕೆ ಜೂನ್ 8, 2015

21ರಂದು ಯೋಗ ದಿನ

ಶೃಂಗೇರಿ: ಇಲ್ಲಿನ ಜೆ.ಸಿ.ಬಿ.ಎಂ ಕಾಲೇಜು, ರೋಟರಿ ಕ್ಲಬ್ ಮತ್ತು ಪತಂಜಲಿ ಯೋಗ ಶಿಕ್ಷಣ ಸಮಿತಿಯ ಆಶ್ರಯದಲ್ಲಿ ಜೂನ್ 21ರಂದು ಕಾಲೇಜು ಆವರಣದಲ್ಲಿ ಅಂತರರಾಷ್ಟ್ರೀಯ ಯೋಗ ದಿನವನ್ನು ಹಮ್ಮಿಕೊಳ್ಳಲಾಗಿದೆ.

ಬೆಳಿಗ್ಗೆ 7 ರಿಂದ 7.30 ರವರೆಗೆ ನಡೆಯುವ ಈ ಕಾರ್ಯಕ್ರಮದಲ್ಲಿ ಆಸಕ್ತರೆಲ್ಲರೂ ಪಾಲ್ಗೊಳ್ಳಬಹುದಾಗಿದೆ. ಇದಕ್ಕೆ ಪೂರ್ವಭಾವಿ ತರಬೇತಿಯು ಶಾರದಾ ನಗರದ ರೋಟರಿ ಭವನದಲ್ಲಿ ನಿತ್ಯ ಬೆಳಿಗ್ಗೆ 6-ರಿಂದ 7 ರವರೆಗೆ ನಡೆಸಲಾಗುತ್ತಿದೆ. ಆಸಕ್ತರು ಕಾಲೇಜಿನ ಪ್ರಾಚಾರ್ಯ ಮತ್ತು ನಿಯೋಜಿತ ರೋಟರಿ ಕ್ಲಬ್ ಅಧ್ಯಕ್ಷ ಎಚ್.ಸಿ. ವೀರಪ್ಪಗೌಡ. (9448344630), ಪತಂಜಲಿ ಯೋಗ ಶಿಕ್ಷಣ ಸಮಿತಿ ಉಪಾಧ್ಯಕ್ಷ ನಾಗೇಶ್ ಕಾಮತ್ (94484 07737) ಸಂಪರ್ಕಿಸಲು ಕೋರಲಾಗಿದೆ.

ಹೇಳಿಕೆ

Scanned by CamScanner

ಶೃಂಗೇರಿಯಲ್ಲಿ ಎನ್‌ಸಿಸಿ ಶಿಬಿರ

ಕನ್ನಡಪ್ರಭ ವಾರ್ತೆ, ಶೃಂಗೇರಿ

ಕರ್ನಾಟಕ ಬೆಟಾಲಿಯನ್ ಎನ್‌ಸಿಸಿ (ಭೂ ಯುವ ಸೇನಾ ದಳ) ಉಡುಪಿ ವ್ಯಾಪ್ತಿಯ ಶಾಲಾ ಕಾಲೇಜುಗಳ ಸಂಯುಕ್ತ ವಾರ್ಷಿಕ ತರಬೇತಿ ಶಿಬಿರ ಶೃಂಗೇರಿಯ ಜೆಸಿಬಿಎಂ ಕಾಲೇಜಿನಲ್ಲಿ ಮೇ 20 ರಿಂದ ನಡೆಯುತ್ತಿದೆ.

ಶಿಬಿರದಲ್ಲಿ ಉಡುಪಿ, ದಕ್ಷಿಣ ಕನ್ನಡ ಮತ್ತು ಚಿಕ್ಕಮಗಳೂರು ಜಿಲ್ಲೆಗಳ ಕುಂದಾಪುರ, ಬಸ್ರೂರು, ಬ್ರಹ್ಮಾವರ, ನಿಟ್ಟೆ, ಕಟಪಾಡಿ, ಶಿರ್ವ, ಶೃಂಗೇರಿ, ಬೆಳ್ಮಣ್ಣು, ಕಾರ್ಕಳ, ಬಾಳೇಹೊನ್ನೂರು, ಕಲ್ಯಾಣಪುರ ಪ್ರದೇಶಗಳ ಶಾಲಾ ಕಾಲೇಜುಗಳ ಎನ್‌ಸಿಸಿ, ಭೂ ಸೈನ್ಯ ಭಾಗಗಳ ಒಟ್ಟು 555 ಹಿರಿಯ, ಕಿರಿಯ ಪುರುಷ ಮತ್ತು ಮಹಿಳಾ ಎನ್‌ಸಿಸಿ ಕೆಡೆಟ್‌ಗಳು ಮತ್ತು 25 ಅಧಿಕಾರಿಗಳು ಪಾಲ್ಗೊಂಡಿದ್ದಾರೆ.

ಯುವ ಸೇನಾನಿಗಳನ್ನು ಎನ್‌ಸಿಸಿ ಪರೀಕ್ಷೆಗೆ ತಯಾರುಗೊಳಿಸುವ ಜೊತೆಗೆ ಅವರಲ್ಲಿ ವ್ಯಕ್ತಿತ್ವ ವಿಕಸನ ಮತ್ತು ನಾಯಕತ್ವ ಬೆಳವಣಿಗೆ ರೂಪಿಸುವುದು ಶಿಬಿರದ ಮುಖ್ಯ ಉದ್ದೇಶ. ಜತೆಗೆ ಕೆಡೆಟ್‌ಗಳಲ್ಲಿ ಸಮುದಾಯ ಸೇವೆ ಮತ್ತು ನಾಗರಿಕ ಪ್ರಜ್ಞೆ ಮೂಡಿಸಲಾಗುತ್ತಿದೆ.

ಕವಾಯತು, ಭೂಪಟ ಅಧ್ಯಯನ, ವಿಶೇಷ ಪಥಸಂಚಲನ, ಶೂಟಿಂಗ್, ಅಣಕು ಯುದ್ಧದ ಪ್ರದರ್ಶನ, ಮತ್ತು 2015ರ ಥಾಲ್ ಸೈನಿಕ್ ಮತ್ತು 2016ರ ಗಣರಾಜ್ಯೋತ್ಸವದ ಪಥಸಂಚಲನಕ್ಕೆ ಸಿದ್ದಗೊಳಿಸುವುದು ಜೊತೆಗೆ ಕೆಡೆಟ್‌ಗಳಿಗೆ ಎ,ಬಿ, ಮತ್ತು 'ಸಿ' ಸರ್ಟಿಫಿಕೇಟ್ ಪರೀಕ್ಷೆಗಳಿಗೆ ತರಬೇತಿ ನೀಡಲಾಗುತ್ತಿದೆ.

ಇದಲ್ಲದೆ ಸಾಂಸ್ಕೃತಿಕ, ಕ್ರೀಡೆ, ಪಥಸಂಚಲನ, ಶಸ್ತ್ರಾಭ್ಯಾಸ ಮತ್ತು ಫೈರಿಂಗ್‌ನಲ್ಲಿ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ಹಾಗೂ ಜೂನ್ 21 ರ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಪ್ರಯುಕ್ತ ಪ್ರತಿದಿನ ಬೆಳಗ್ಗೆ ಎಲ್ಲ ಕೆಡೆಟ್ಸ್‌ಗಳಿಗೆ ಯೋಗ ತರಬೇತಿ ನೀಡಲಾಗುವುದು.

ವನಮಹೋತ್ಸವ ಕಾರ್ಯಕ್ರಮದೊಂದಿಗೆ ಪರಿಸರ ಜಾಗೃತಿಯನ್ನೂ ಮೂಡಿಸಲಾಗುವುದು. ಶಿಬಿರ ಮೇ 29 ರಂದು ಸಮಾಪನಗೊಳ್ಳುವುದು.

Scanned by CamScanner

ಕ. ಪ್ರ: 16-4-15

ನ್ಯಾಯ, ಸಮಾನತೆ, ಸಹಜೀವನ ಅಂಬೇಡ್ಕರ್

ಶೃಂಗೇರಿಯಲ್ಲಿ ನಡೆದ ರಾಜ್ಯಮಟ್ಟದ ಎನ್ನೆಸ್ಸೆಸ್ ಶಿಬಿರದಲ್ಲಿ ಡಾ. ಕೆ.ಪಿ.ಪ್ರಕಾಶ್ ಅ

ಕ.ಪ್ರ.ವಾರ್ತೆ, ಶೃಂಗೇರಿ, ಏ. 15

ಇಂದಿನ ಸರ್ಕಾರಗಳಿಗೆ ಅಂಬೇಡ್ಕರ್ ಜನ್ಮದಿನಾಚರಣೆ ಎನ್ನುವ ಕಾರ್ಯಕ್ರಮ ಅದ್ಭುತವಾಗಿ ಎನಿಸುತ್ತದೆ. ಆದರೆ ಅದಕ್ಕೆ ಪೂರಕವಾಗಿ ಆಚರಣೆಯಲ್ಲಿ ಎಲ್ಲೂ ಬದ್ಧತೆ ಪ್ರದರ್ಶಿಸುತ್ತಿಲ್ಲ ಎಂದು ಶ್ರೀ ಜೆಸಿಬಿಎಂ ಕಾಲೇಜಿನ ಇತಿಹಾಸ ವಿಭಾಗದ ಮುಖ್ಯಸ್ಥ ಡಾ। ಕೆ.ಪಿ. ಪ್ರಕಾಶ್ ಅಭಿಪ್ರಾಯಪಟ್ಟರು.

ಕರ್ನಾಟಕ ಸರ್ಕಾರ, ಕುವೆಂಪು ವಿಶ್ವವಿದ್ಯಾನಿಲಯ, ಶ್ರೀ ಜೆಸಿಬಿಎಂ ಕಾಲೇಜು ಮತ್ತು ರಾಷ್ಟ್ರೀಯ ಸೇವಾ ಯೋಜನೆ ಆಶ್ರಯದಲ್ಲಿ ಶ್ರೀ ಜೆಸಿಬಿಎಂ ಕಾಲೇಜಿನ ಆವರಣದಲ್ಲಿ ನಡೆಯುತ್ತಿರುವ 7 ದಿನಗಳ ರಾಜ್ಯಮಟ್ಟದ ಎನ್ನೆಸ್ಸೆಸ್ ವಿಶೇಷ ಶಿಬಿರದ ಅಂಗವಾಗಿ ಮಂಗಳವಾರ ಹಮ್ಮಿಕೊಂಡಿದ್ದ ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.



ಅಂಬೇಡ್ಕರ್ ಅವರಿಗೆ ನ್ಯಾಯ, ಸಮಾನತೆ, ಸಹಜೀವನ ಅಸ್ತ್ರಗಳಾಗಿದ್ದವು. ತಮ್ಮ ಪ್ರಖರ ವಿಚಾರಧಾರೆ ಮನುಪ್ರಣೀತ ಸಮಾಜ ಮತ್ತು ಇಸ್ಲಾಂ ಭಜಕ ನೀತಿಗಳನ್ನು ಕಟುವಾಗಿ ವಿರೋಧಿಸಿದವರು. ಸಮಾಜದಲ್ಲಿ ಬೇರೂರಿದ್ದ ಜಾತೀಯತೆ, ಅಸ್ಪೃಶ್ಯತೆಯ ಕಾವನ್ನು ದೂರಮಾಡಲು ಪ್ರಯತ್ನಿಸಿದ ಮಹಾನ್ ಚೇತನ ಎಂದು ಬಣ್ಣಿಸಿದರು.

ಪ್ರಸ್ತುತ ದಿನಗಳಲ್ಲಿ ನಗರೀಕರಣ, ವಾಣಿಜ್ಯೀಕರಣ, ಬಂಡವಾಳಶಾಹಿತ್ವ ಪಾಶ್ಚಿಮಾತ್ಯ

> ಅಂಬೇಡ್ಕರ್ ಅವರಿಗೆ ನ್ಯಾಯ, ಸಮಾನತೆ, ಸಹಜೀವನ ಅಸ್ತ್ರಗಳಾಗಿದ್ದವು. ತಮ್ಮ ಪ್ರಖರ ವಿಚಾರಧಾರೆ ಮನುಪ್ರಣೀತ ಸಮಾಜ ಮತ್ತು ಇಸ್ಲಾಂ ಭಜಕ ನೀತಿಗಳನ್ನು ಕಟುವಾಗಿ ವಿರೋಧಿಸಿದವರು. ಸಮಾಜದಲ್ಲಿ ಬೇರೂರಿದ್ದ ಜಾತೀಯತೆ, ಅಸ್ಪೃಶ್ಯತೆಯ ಕಾವನ್ನು ದೂರಮಾಡಲು ಪ್ರಯತ್ನಿಸಿದ ಮಹಾನ್ ಚೇತನ
>
> ■ ಡಾ। ಕೆ.ಪಿ. ಪ್ರಕಾಶ್

ಸಂಸ್ಕೃತಿಮೊದಲಾದ ಭ್ರಮೆ
ಕಲ್ಪನೆಯಲ್ಲಿ ಸಮಾನತೆ, ಸ
ಧರ್ಮ ಮಾಯವಾಗುತ್ತಿದೆ.
ದುರಂತ ಸ್ಥಿತಿಗೆ ತಲುಪಿದೆ
ಚಳವಳಿ ಮತ್ತು ಅಸಮಾನ
ಅಂಬೇಡ್ಕರ್ ಸಾಂಕೇತಿಕವಾ
ಅಲ್ಲೆಲ್ಲೂ ಅಂಬೇಡ್ಕರ್ ವಿಚಾ
ಆದರ್ಶಗಳು ಕಾಣದೇ
ದುರಂತ ಎಂದರು.

ಎಚ್.ಸಿ.ವೀರಪ್ಪಗೌಡ,
ಎನ್.ಎಚ್. ಲಕ್ಷ್ಮೀನಾರಾ
ಸಹ ಶಿಬಿರಾಧಿಕಾರಿಗಳಾದ
ಭಾರದ್ವಾಜ್, ಲೋಕೇ
ವಿದ್ಯಾಗಣೇಶ್ ಮತ್ತಿತರರು

ಕಾರ್ಯಕ್ರಮದಲ್ಲಿ ಸು
ಅಭಿಲಾಷ್ ಸ್ವಾಗತಿಸಿದರು.
ಲೋಹಿತ್ ವಂದಿಸಿದರು.

ಭ್ರಮೆ ಬಿಟ್ಟು ವಾಸ್ತವಕ್ಕೆ ಬನ್ನಿ

ಶೃಂಗೇರಿ : ಧೂಮಪಾನ, ಮದ್ಯಪಾನ ಮಾಡುವುದನ್ನು ಫ್ಯಾಷನ್ ಎಂದು ಭಾವಿಸಿರುವ ಯುವ ಸಮುದಾಯಕ್ಕೆ ಅದರ ಫಲವಾದ ಕ್ಯಾನ್ಸರ್‌ನ ದುಷ್ಪರಿಣಾಮಗಳ ಬಗ್ಗೆ ಗೊತ್ತಿಲ್ಲ ಎಂದು ರಾಷ್ಟ್ರೀಯ ವಿಪತ್ತು ನಿರ್ವಹಣಾ ತಂಡದ ಸದಸ್ಯ ಡಾ.ವಿ.ಎಲ್.ಎನ್. ಕುಮಾರ್ ಹೇಳಿದರು.

ಅವರು ಮಂಗಳವಾರ ಶ್ರೀ ಜೆಸಿಬಿಎಂ ಕಾಲೇಜಿನ ಎನ್ನೆಸ್‌ಎಸ್ ರಾಜ್ಯ ಮಟ್ಟದ ವಾರ್ಷಿಕ ಶಿಬಿರವನ್ನಲ್ಲಿ ಆಯೋಜಿಸಿದ್ದ ಯುವ ಜನತೆ ಆರೋಗ್ಯ ಮತ್ತು ಜೀವನ ಕೌಶಲ್ಯಗಳು ಎಂಬ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಮಾತನಾಡಿದರು. ಅತಿಯಾದ ಪಾಶ್ಚಿಮಾತ್ಯದ ಅನುಕರಣೆಯಲಿ ಜ್ಞಾನವಲ್ಲ, ಗೊತ್ತು ಪಿಡಿದು ನಿರ್ಲಕ್ಷ್ಯದ ಮಸ್ತುವಾಗಿದೆ. ಆ ನಿಟ್ಟಿನಲ್ಲಿ ಜಾಗೃತಿ ಕಾರ್ಯಾಗಾರಗಳನ್ನು ಹಮ್ಮಿಕೊಳ್ಳ ಬೇಕಾದ ತುರ್ತು ಸಮುದಾಯದಲ್ಲಿದೆ. ಪ್ರಸ್ತುತ ದಿನಗಳಲ್ಲಿ ಅಪಘಾತಗಳ ಸಂಖ್ಯೆ ದಿನದಿಂದ ದಿನಕ್ಕೆ ದಿಗಿಕೆಯಾಗುತ್ತಿದೆ.

ಅಪಘಾತಗಳಿಂದ ಸಂಭವಿಸುವ ಸಾವುಗಳಲ್ಲಿ ಬಹುಪಾಲು ಯುವಕರದ್ದೇ ಆಗಿದೆ. ಇದಕ್ಕೆಲ್ಲಾ ಕಾರಣ ಯುವ ಸಮುದಾಯದ ಅತಿವೇಗ ಎಮ್ಮುವ ಪೀಡನೆ. ಅವಸರದ ಬದುಕಿನ ಫ್ಯಾಷನ್ನ ಹೆಸರಿನಲ್ಲಿ ಇಂದು ಎಷ್ಟೋ ಯುವಕರು ತಮ್ಮ ಅಮೂಲ್ಯ ಬದುಕನ್ನು ಕಳೆದುಕೊಳ್ಳುತ್ತಿರುವುದು ದುರಂತ ಎಂದು ವಿಷಾದ ವ್ಯಕ್ತಪಡಿಸಿದರು.

ಶಿಬಿರಾಧಿಕಾರಿಗಳಾದ ಎ.ಜಿ. ಪ್ರಶಾಂತ್ ಮತ್ತು ಎನ್.ಹೆಚ್. ಲಕ್ಷ್ಮೀನಾರಾಯಣ, ಸಹ ಶಿಬಿರಾಧಿಕಾರಿಗಳಾದ ಭಾರದ್ವಾಜ್, ಲೋಕೇಶ್, ರಾಘವೇಂದ್ರ, ಸುರೇಶ್, ಅಶ್ವಿನಿ, ವಿದ್ಯಾಗಣೇಶ್, ಪ್ರಸನ್ನಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

Scanned by CamScanner

ಜೆಸಿಬಿಎಂ ಕಾಲೇಜು ಸುವರ್ಣ ಮಹೋತ್ಸವ

ಶೃಂಗೇರಿ: ಶ್ರೀ ಜೆಸಿಬಿಎಂ ಕಾಲೇಜು ಆರಂಭವಾಗಿ 50ನೇ ವರ್ಷಕ್ಕೆ ಕಾಲಿಟ್ಟಿದ್ದು, ವರ್ಷವಿಡಿ ಸುವರ್ಣ ಮಹೋತ್ಸವದ ವರ್ಷಾಚರಣೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಜೆಸಿಬಿಎಂ ಕಾಲೇಜಿನ ಪ್ರಾಚಾರ್ಯ ಡಾ.ಎಚ್.ಸಿ. ವೀರಪ್ಪಗೌಡ ಹೇಳಿದರು.

ಅವರು ಗುರುವಾರ ಕಾಲೇಜಿನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಾಲೇಜಿನಲ್ಲಿ ಸುಮಾರು 1300 ವಿದ್ಯಾರ್ಥಿಗಳಿದ್ದು ಪದವಿ ವಿಭಾಗದಲ್ಲಿ ಶೇ.95 ಹಾಗೂ ಪಿಯು ವಿಭಾಗದಲ್ಲಿ ಶೇ.90 ಫಲಿತಾಂಶ ಬಂದಿದೆ. ಸುವರ್ಣ ಸಂಭ್ರಮದ ವರ್ಷಾಚರಣೆ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ವಿಚಾರಗೋಷ್ಠಿ, ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಜೀವವೈವಿಧ್ಯತಾ ಕಾರ್ಯಾಗಾರ,ಬೆಟಗೇರಿ ಕೃಷ್ಣಶರ್ಮ, ಕುವೆಂಪು,ದ.ರಾ.ಬೇಂದ್ರೆ ಅವರ ಭಾವಭೂತಿ ಕಾರ್ಯಕ್ರಮ,ಜಾನಪದ ಹಾಗೂ ಸಂವಾದ,ಜಿಲ್ಲಾಮಟ್ಟದ ಕವಿಗಳ ಕವಿಗೋಷ್ಠಿ, ಆಟೊ ಚಾಲಕರ ತರಬೇತಿ ಹಾಗೂ ಅವರ ಮಕ್ಕಳ ಶೈಕ್ಷಣಿಕ ಪ್ರಗತಿ ಮತ್ತು ಆರೋಗ್ಯದ ಬಗ್ಗೆ ತರಬೇತಿ, ವೈದ್ಯಕೀಯ,ರಕ್ತದಾನ,ದಂತ ತಪಾಸಣೆ ಶಿಬಿರ,ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯ ಮಟ್ಟದ ನಾಯಕತ್ವ ಶಿಬಿರ ಸೇರಿದಂತೆ ಸ್ವಚ್ಛಭಾರತ ಆಂದೋಲನ ಅಂಗವಾಗಿ ಗಾಂಧಿಜಯಂತಿ ಹಾಗೂ ಗಣರಾಜ್ಯೋತ್ಸವ ದಿನದಂದು ಕು.ರಾ.ಉ ವನದ ವ್ಯಾಪ್ತಿಯಲ್ಲಿ ರಾಷ್ಟ್ರೀಯ ಹೆದ್ದಾರಿ13ರ ರಸ್ತೆಯಲ್ಲಿ ಶ್ರಮದಾನ ಮೂಲಕ ಕಸ ಪ್ಲಾಸ್ಟಿಕ್ ವಿಲೇವಾರಿ ಸೇರಿದಂತೆ ಹತ್ತು ಹಲವಾರು ಕಾರ್ಯ ಕ್ರಮಗಳನ್ನು ಆಯೋಜಿಸಲಾಗಿದೆ ಎಂದರು.

ಇದೀಗ ಕಾಲೇಜಿನಲ್ಲಿ ಎನ್.ಎಸ್.ಎಸ್ ರಾಜ್ಯಮಟ್ಟದ ಒಂದುವಾರದ ಶಿಬಿರ ಆಯೋಜಿಸಲಾಗಿದೆ. ಶಿಬಿರದಲ್ಲಿ 11ವಿಶ್ವವಿದ್ಯಾನಿಲಯಗಳಿಂದ 75 ಕಾಲೇಜಿನ ಸುಮಾರು250 ಶಿಬಿರಾರ್ಥಿಗಳು ಪಾಲ್ಗೊಂಡಿದ್ದಾರೆ. ಮೇ 4ರಿಂದ ಎನ್.ಸಿ.ಸಿ ಶಿಬಿರ ನಡೆಯಲಿದೆ ಎಂದರು.

ಪಿಯು ಕಾಲೇಜಿನ ಪ್ರಾಚಾರ್ಯ ಡಾ.ಸಿ.ವಿ.ಗಿರಿಧರಶಾಸ್ತ್ರಿ, ಎನ್ಎಸ್ಎಸ್ ಅಧಿಕಾರಿಗಳಾದ ಪ್ರಶಾಂತ್, ಲಕ್ಷ್ಮೀನಾರಾಯಣ್ ಉಪಸ್ಥಿತರಿದ್ದರು.

ವಿಜಯ ಕರ್ನಾಟಕ
45/2, ಸಮಳಂಗ ರಸ್ತೆ, ಸವುಲೆ,
ಶಿವಮೊಗ್ಗ - 577 204.
ಫೋನ್: 277434, ಫ್ಯಾಕ್ಸ್: 08182-277395
E-mail: smgeditor@vijaykarnataka.com
ಜಾಹೀರಾತು :
ಫೋ.08182-271848, 849, ಫ್ಯಾಕ್ಸ್: 08182-225983
E-mail: smgadvt@vijaykarnataka.com
ಚಿಕ್ಕಮಗಳೂರು ಕಚೇರಿ
ತಮ್ಮಯ್ಯ ಕಾಂಪ್ಲೆಕ್ಸ್, ಜನಪದಂ ಪಕ್ಕದಲ್ಲಿ
ಹಕ್ಕಿಪಿಕ್ಕಿ ಎಂ.ಜಿ.ರಸ್ತೆ. ಫೋ: 08262-235354

Scanned by CamScanner

ಮೌಲ್ಯಯುತ ಬದುಕಿನಿಂದ ಜೀವನ ಸಾರ್ಥಕ

■ ರಾಘಣ್ಣ ಅವರ ಕಲೆ ಬಗೆಗಿನ ಪ್ರೀತಿ ಯುವ ಪೀಳಿಗೆಗೆ ಮಾದರಿ ■ ರಮೇಶ್ ಬೇಗಾರ್ ಅಭಿಮತ

ಶೃಂಗೇರಿ: ಗಾಯಕ ಗರ್ತಿಕೆರೆ ರಾಘಣ್ಣ ಕಲೆಯ ಬಗ್ಗೆ ಹೊಂದಿರುವ ಪ್ರೀತಿ, ಗೌರವ, ಅಭಿಮಾನ ಅನುಕರಣೀಯ. ಅವರು ಬದುಕಿನಲ್ಲಿ ಅಳವಡಿಸಿಕೊಂಡಿರುವ ಮೌಲ್ಯಗಳು ಯುವ ಪೀಳಿಗೆಗೆ ಮಾದರಿ ಎಂದು ರಂಗ ನಿರ್ದೇಶಕ ರಮೇಶ್ ಬೇಗಾರ್ ತಿಳಿಸಿದರು.

ಜೆಸಿಬಿಎಂ ಕಾಲೇಜು ಆವರಣದಲ್ಲಿ ಏರ್ಪಡಿಸಿರುವ ಏಳು ದಿನಗಳ ರಾಜ್ಯಮಟ್ಟದ ವಿಶೇಷ ಶಿಬಿರದಲ್ಲಿ 'ಗರ್ತಿಕೆರೆ ರಾಘಣ್ಣ-ಒಂದು ಅನುಭವ' ಕುರಿತು ಮಾತನಾಡಿದರು.

ಕೇವಲ ಅಂಕ ಗಳಿಕೆ, ಪ್ರಮಾಣಪತ್ರಕ್ಕಾಗಿ ಶಿಕ್ಷಣ ಪಡೆಯುತ್ತಿರುವ ಪ್ರಸ್ತುತ ಯುವ ಸಮುದಾಯದಲ್ಲಿ ಕೌಶಲ್ಯಗಳು ಕ್ಷೀಣಿಸಿವೆ. ಕಲೆ, ಸಾಹಿತ್ಯ, ಸಂಸ್ಕೃತಿ, ಪರಂಪರೆ, ಜನಪದದ ಬಗೆಗಿನ ಆಸಕ್ತಿ ಮಾಯವಾಗಿದೆ.



ಶೃಂಗೇರಿ ಜೆಸಿಬಿಎಂ ಕಾಲೇಜಿನ ಎನ್‌ಎಸ್‌ಎಸ್ ಶಿಬಿರದಲ್ಲಿ ಗಾಯಕ ಗರ್ತಿಕೆರೆ ರಾಘಣ್ಣ ಅವರನ್ನು ಸನ್ಮಾನಿಸಲಾಯಿತು.

ಯುವ ಪೀಳಿಗೆಯಲ್ಲಿ ಕಲೆ ಬಗ್ಗೆ ಆಸಕ್ತಿ ಮೂಡಿಸಬೇಕಾದ್ದು ಪ್ರತಿಯೊಬ್ಬರ ಕರ್ತವ್ಯ ಎಂದರು.

ರಾಘಣ್ಣ ಅವರೊಂದಿಗೆ ರಮೇಶ್ ಬೇಗಾರ್ ಸಂವಾದ ನಡೆಸಿದರು. ಒಂದಷ್ಟು ಜನಪ್ರಿಯ ಗೀತೆಗಳನ್ನು ಗರ್ತಿಕೆರೆ ರಾಘಣ್ಣ ಮತ್ತು ಅವರ ಪುತ್ರಿ ಶ್ರೀದೇವಿ ಹಾಡಿದರು. ಇದಕ್ಕೆ ಶಿಬಿರಾರ್ಥಿಗಳೂ ದನಿಗೂಡಿಸಿದರು. ಶಿಬಿರಾರ್ಥಿಗಳೊಂದಿಗೆ ರಾಘಣ್ಣ ಸಂವಾದ ನಡೆಸಿದರು.

ಕಾಲೇಜಿನ ವತಿಯಿಂದ ಗರ್ತಿಕೆರೆ ರಾಘಣ್ಣ ಅವರನ್ನು ಸನ್ಮಾನಿಸಲಾಯಿತು. ನಾದಬ್ರಹ್ಮ ಸಂಗೀತ ಕಾಲೇಜು ಪ್ರಾಂಶುಪಾಲ, ಶಿಬಿರಾಧಿಕಾರಿಗಳಾದ ಎನ್.ಎಸ್. ಲಕ್ಷ್ಮಣನಾರಾಯಣ್, ಎ.ಜಿ.ಪ್ರಕಾಶ್, ರೋಹಿತ್, ಪ್ರಸನ್ನಕುಮಾರ್, ಅಭಿಷೇ, ವಿದ್ಯಾ ಗಣೇಶ್, ಕಿರಣ್, ಕಾಕ್ಷತಿ ಮತ್ತಿತರರು ಉಪಸ್ಥಿತರಿದ್ದರು.

ವಿಜಯವಾಣಿ 23-4-15

Scanned by CamScanner

ಕನ್ನಡ ಪ್ರಭ ಗಣರಾಜ್ಯ 23 ಏಪ್ರಿಲ್ ೨೦೧೨

ಕನ್ನಡಪ್ರಭ



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ನಡೆದ ರಾಜ್ಯಮಟ್ಟದ ಎಸ್ ಎಸ್ ಎಸ್ ವಿಶೇಷ ಶಿಬಿರದಲ್ಲಿ ಗಾಯಕ ಗರ್ತಿಕೆರೆ ರಾಘಣ್ಣ ಅವರನ್ನು ಸನ್ಮಾನಿಸಲಾಯಿತು.

Scanned by CamScanner

'ಮನು ಪ್ರಣೀತ ಮೌಲ್ಯಗಳನ್ನು ದಿಕ್ಕರಿಸಿದವರು ಅಂಬೇಡ್ಕರ್'

ಶೃಂಗೇರಿ

ನ್ಯಾಯ, ಸಮಾನತೆ, ಸಹಜೀವನ ಮೊದಲಾದ ಅಸ್ತ್ರಗಳು ಮತ್ತು ತಮ್ಮ ಪ್ರಖರವಾದ ವಿಚಾರಧಾರೆಯಿಂದ ಮನುಪ್ರಣೀತ ಸಮಾಜ ಮತ್ತು ಇಸ್ಲಾಂ ವಿಭಜಕ ನೀತಿಗಳನ್ನು ಕಟುವಾಗಿ ವಿರೋಧಿಸಿದವರು ಡಾ ಬಿ.ಆರ್. ಅಂಬೇಡ್ಕರ್ ಎಂದು ಇತಿಹಾಸ ವಿಭಾಗದ ಮುಖ್ಯಸ್ಥ ಡಾ. ಕೆ.ಪಿ. ಪ್ರಕಾಶ್ ಅಭಿಪ್ರಾಯಪಟ್ಟರು.

ಕುವೆಂಪು ವಿಶ್ವವಿದ್ಯಾನಿಲಯ, ಶ್ರೀ ಜೆ.ಸಿ.ಬಿ.ಎಂ. ಕಾಲೇಜು ಮತ್ತು ರಾಷ್ಟ್ರೀಯ ಸೇವಾ ಯೋಜನೆಯ ಸಂಯುಕ್ತಾಶ್ರಯದಲ್ಲಿ ಶ್ರೀ ಜೆ.ಸಿ.ಬಿ.ಎಂ. ಕಾಲೇಜಿನ ಆವರಣದಲ್ಲಿ ಹಮ್ಮಿಕೊಂಡಿರುವ ವಿಶೇಷ ಶಿಬಿರದ ಅಂಗವಾಗಿ ಹಮ್ಮಿಕೊಂಡಿದ್ದ ಡಾ. ಬಿ.ಆರ್. ಅಂಬೇಡ್ಕರ್‌ರವರ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪ್ರಸ್ತುತ ದಿನಗಳಲ್ಲಿ ನಗರೀಕರಣ, ವಾಣಿಜ್ಯೀಕರಣ, ಬಂಡವಾಳಶಾಹಿತ್ವ, ಪಾಶ್ಚಿಮಾತ್ಯ ಸಂಸ್ಕೃತಿ ಮೊದಲಾದ ಭ್ರಮೆಯ ಆಧುನೀಕರಣದ ಕಲ್ಪನೆಯಲ್ಲಿ ಸಮಾನತೆ, ಸಹಜೀವನ, ಮಾನವಧರ್ಮ ಮಾಯವಾಗಿ ಸಮಾಜ ಅತ್ಯಂತ ದುರಂತ ಸ್ಥಿತಿಗೆ ತಲುಪಿದೆ ಎಂದರು.



ಶೃಂಗೇರಿಯಲ್ಲಿ ನಡೆದ ಅಂಬೇಡ್ಕರ್ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಕಾಲೇಜಿನ ಇತಿಹಾಸ ವಿಭಾಗದ ಮುಖ್ಯಸ್ಥರಾದ ಡಾ.ಕೆ.ಪಿ. ಪ್ರಕಾಶ್ ಮಾತನಾಡಿದರು.

ಜಿ.ಪಂ ಸದಸ್ಯ ಶೃಂಗೇರಿ ಶಿವಣ್ಣ ಮಾತನಾಡಿ, ಅಂಬೇಡ್ಕರ್ ಒಬ್ಬ ಸಂಘಟನಾ ಚತುರ ಎಂದು ಹೇಳಿದರು. ಇಂದಿನ ಯುವ ಸಮುದಾಯ ತನ್ನ ಆಲಸ್ಯವನ್ನು ತೊರೆದು ತಮ್ಮತಮ್ಮ ಜವಾಬ್ದಾರಿಯನ್ನು ಅರಿತು ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು.

ಅಂಬೇಡ್ಕರ್‌ರವರ ಭಾವಚಿತ್ರಕ್ಕೆ ಪುಷ್ಪನಮನವನ್ನು ಸಲ್ಲಿಸಲಾಯಿತು. ಕಾರ್ಯಕ್ರಮದಲ್ಲಿ ಪದವಿ ಕಾಲೇಜಿನ ಪ್ರಾಂಶುಪಾಲರಾದ ಡಾ॥ ಹೆಚ್.ಸಿ. ವೀರಪ್ಪ ಗೌಡ, ಶಿಬಿರಾಧಿಕಾರಿಗಳಾದ ಎನ್.ಹೆಚ್. ಲಕ್ಷ್ಮೀನಾರಾಯಣ್ ಮತ್ತು ಎ.ಜೆ. ಪ್ರಶಾಂತ್, ಸಹ ಶಿಬಿರಾಧಿಕಾರಿಗಳಾದ ಪ್ರಸನ್ನಕುಮಾರ್, ಭಾರದ್ವಾಜ್, ಲೋಕೇಶ್, ಅಶ್ವಿನಿ, ವಿದ್ಯಾಗಣೇಶ್ ಮತ್ತಿತರರು ಉಪಸ್ಥಿತರಿದ್ದರು. ಸುಪ್ರೀತಾ ಪ್ರಾರ್ಥಿಸಿ, ಅಭಿಲಾಷ್ ಸ್ವಾಗತಿಸಿ, ಲೋಹಿತ್ ವಂದಿಸಿದರು. ಕಾರ್ಯಕ್ರಮವನ್ನು ಆದಿತ್ಯ ನಿರೂಪಿಸಿದರು.

ಸಂಯುಕ್ತ ಕರ್ನಾಟಕ ಗುರುವಾರ 16 ಏಪ್ರಿಲ್ 2015

Scanned by CamScanner

ಸುದ್ದಿ 2 ನಿಮಿಷ

ಎನ್‌ಸಿಸಿ ಶಿಬಿರಕ್ಕೆ ಹರ್ಡಲ್ಸ್ ಟ್ರ್ಯಾಕ್

ಶೃಂಗೇರಿ: ಜೆ.ಸಿ.ಎಂ ಕಾಲೇಜಿನ ಸುವರ್ಣ ಮಹೋತ್ಸವದ ಅಂಗವಾಗಿ ಮೊದಲ ಬಾರಿಗೆ ಎನ್.ಸಿ.ಸಿ ವಾರ್ಷಿಕ ಶಿಬಿರ ನಡೆಸಲು ನಿರ್ಧರಿಸಿದ್ದು, ಶಿಬಿರಕ್ಕಾಗಿ ₹1.50ಲಕ್ಷ ವೆಚ್ಚದಲ್ಲಿ ಹರ್ಡಲ್ಸ್ ಟ್ರ್ಯಾಕ್ ಸಿದ್ದಪಡಿಸಲಾಗಿದೆ ಎಂದು ಕಾಲೇಜು ಪ್ರಾಚಾರ್ಯ ಡಾ. ಎಚ್.ಸಿ ವೀರಪ್ಪಗೌಡ ತಿಳಿಸಿದರು.ಅವರು ಗುರುವಾರ ಕಾಲೇಜಿನಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಸುವರ್ಣ ಮಹೋತ್ಸವದಲ್ಲಿ ಸಾಹಿತ್ಯ. ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಚಟುವಟಿಕೆ ನಡೆಸಿದ ಕಾಲೇಜು ಇದೇ 19ರವರೆಗೆ ರಾಷ್ಟ್ರೀಯ ಸೇವಾ ಯೋಜನೆಯ ರಾಜ್ಯ ಮಟ್ಟದ ವಿಶೇಷ ಶಿಬಿರ ನಡೆಯಲಿದ್ದು, ಶಿಬಿರದಲ್ಲಿ 11 ವಿ.ವಿಗಳ 75 ಕಾಲೇಜಿನ 250 ಶಿಬಿರಾರ್ಥಿಗಳು ಪಾಲ್ಗೊಂಡಿದ್ದಾರೆ. ಎನ್.ಸಿ.ಸಿ ವಾರ್ಷಿಕ ಶಿಬಿರ ಪ್ರತಿವರ್ಷ ಉಡುಪಿಯಲ್ಲಿ ನಡೆಯುತ್ತಿತ್ತು. ಆದರೆ ಈ ಬಾರಿ ಮೊದಲ ಬಾರಿಗೆ ಮೇ 20ರಿಂದ 29ರವರೆಗೆ ಶೃಂಗೇರಿಯಲ್ಲಿ ನಡೆಯಲಿದ್ದು, ಶಿಬಿರಕ್ಕೆ ಅಗತ್ಯವಾದ ಫೈರ್ ರೇಂಜ್ ಹಾಗೂ ಹರ್ಡಲ್ಸ್ ಟ್ರ್ಯಾಕ್ ಸಿದ್ದಪಡಿಸಲಾಗಿದೆ ಎಂದರು ಕಾಲೇಜಿನಲ್ಲಿ ಪದವಿ ವಿಭಾಗದಲ್ಲಿ 715 ಪದವಿ ಪೂರ್ವ ವಿಭಾಗದಲ್ಲಿ 695 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು, ಉತ್ತಮ ಫಲಿತಾಂಶ ಪಡೆಯುತ್ತಿದೆ. ಕಳೆದ ವರ್ಷ ಆರಂಭಿಸಿರುವ ಸ್ನಾತಕೋತ್ತರ ವಿಭಾಗದಲ್ಲಿ ಶೇ 100 ಫಲಿತಾಂಶ ಬಂದಿದೆ. ಪರಿಸರ ನೈರ್ಮಲ್ಯ, ಯೋಗ, ಶಿಕ್ಷಣ, ವ್ಯಕ್ತಿತ್ವ ವಿಕಸನ ಹಾಗೂ ನಾಯಕತ್ವ ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ತರಬೇತಿ ಶಿಬಿರ ಕಾಲೇಜು ಏರ್ಪಡಿಸಿ ವಿದ್ಯಾರ್ಥಿಗಳಿಗೆ ಉತ್ತಮ ತರಬೇತಿ ನೀಡಲಾಗಿದೆ ಎಂದು ಹೇಳಿದರು.



Scanned by CamScanner

ಚೆಸ್ ಪಂದ್ಯಾವಳಿ, ಶ್ರೀ ಜೆ.ಸಿ.ಬಿ.ಎಂ. ಕಾಲೇಜಿಗೆ ಪ್ರಶ

ಶೃಂಗೇರಿ: ಇಲ್ಲಿನ ಶ್ರೀ ಜೆ.ಸಿ.ಬಿ.ಎಂ. ಕಾಲೇಜಿನ ವಿದ್ಯಾರ್ಥಿಗಳಾದ ನಂದನ್ ಡಿ ಹೆಗ್ಡೆ, ಶಾರುಖ್, ಶ್ರೀನಿವಾಸ್ ಪೈ.ಆರ್., ಅನೂಪ್ ಹೆಚ್.ಆರ್. ಇವರುಗಳು, ಬೀರೂರು ಪಟ್ಟಣದ ತರಳಬಾಳು ಕಲ್ಯಾಣ ಮಂದಿರದ ಆವರಣದಲ್ಲಿ ಇತ್ತೀಚೆಗೆ ನಡೆದ ಕುವೆಂಪು ವಿ.ವಿ.ಯ ಅಂತರ್ ಕಾಲೇಜು ಚೆಸ್ ಪಂದ್ಯಾವಳಿಯಲ್ಲಿ ಭಾಗವಹಿಸಿ ದ್ವಿತೀಯ ಬಹುಮಾನವನ್ನು ಗಳಿಸಿದ್ದಾರೆ. ಸಾಧನೆ ತೋರಿದ ಇವರುಗಳನ್ನು ಕಾಲೇಜಿನ ಪ್ರಾಂಶುಪಾಲ ಡಾ.ಹೆಚ್.ಸಿ.ವೀರಪ್ಪ ಗೌಡ, ದೈಹಿಕ



ಶಿಕ್ಷಣ ನಿರ್ದೇಶಕ ಎಂ.ವಿ. ಲೋಕೇಶ್, ಅಧ್ಯಾಪಕವೃಂದ ಹಾಗು ಆಡಳಿತ ಮಂಡಳಿ ಅಭಿನಂದಿಸಿದೆ.

Scanned by CamScanner

ಸಂಸ್ಕೃತದ ಅಧ್ಯಯನಕ್ಕೆ ಶೃಂಗೇರಿಯು ಸೂಕ್ತ ಸ್ಥಳವಾಗಿದೆ



ಶೃಂಗೇರಿ: ಶ್ರೀ ಜೆ.ಸಿ.ಬಿ.ಎಂ. ಕಾಲೇಜಿನ ಮುಖ್ಯ ಸಭಾಂಗಣದಲ್ಲಿ ಎರಡು ದಿನಗಳ ಕಾಲ "ಸಂಸ್ಕೃತ ಕಾವ್ಯನಿರ್ಮಾಣದಲ್ಲಿ ಆಧುನಿಕ ಪದ್ಧತಿಗಳು" ಎಂಬ ಸಂಸ್ಕೃತ ವಿಚಾರ ಸಂಕೀರ್ಣ ನಡೆಯಿತು. ಈ ಕುರಿತ ಸಭಾ ಕಾರ್ಯಕ್ರಮವನ್ನು ನವದೆಹಲಿಯ ರಾಷ್ಟ್ರೀಯ ಸಂಸ್ಕೃತ ಸಂಸ್ಥಾನದ ಕುಲಪತಿ ಪ್ರೊ. ಪರಮೇಶ್ವರ ನಾರಾಯಣ ಶಾಸ್ತ್ರಿ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಇಂದಿನ ಆಧುನಿಕ ಕಾಲದಲ್ಲೂ ಪ್ರಾಚೀನ ಭಾಷೆಯಾದ ಸಂಸ್ಕೃತದಲ್ಲಿ ಅನೇಕ ಗ್ರಂಥಗಳ ರಚನೆಯಾಗುತ್ತಿವೆ ಎಂದು ಹೇಳಿದರು. ದೇವ ಭಾಷೆಯಾಗಿರುವ ಸಂಸ್ಕೃತದ ಅಧ್ಯಯನಕ್ಕೆ ಪುಣ್ಯಭೂಮಿಯಾದ ಶೃಂಗೇರಿಯು ಸೂಕ್ತ ಸ್ಥಳವಾಗಿದೆ. ಶಾರದಾಂಬೆಯ ಕೃಪೆಯಿಂದ ಈ ಸಂಕೀರ್ಣದಿಂದಾಗಿ ನೂತನ ಸಂಸ್ಕೃತ ಕವಿಗಳ ಸೃಷ್ಟಿಯಾಗಲಿ ಎಂದರು. ಬೆಂಗಳೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕ ರಂಗನಾಥ್ ಮಾತನಾಡಿ, ರಾಷ್ಟ್ರೀಯ ಚಿಂತನೆಗಳು ಸಂಸ್ಕೃತದಲ್ಲಿ ವಿಪುಲವಾಗಿದೆ. ಅಂತೆಯೇ ಸಾಹಿತ್ಯದ ವಿವಿಧ ಪ್ರಕಾರಗಳನ್ನು ವಿದ್ಯಾರ್ಥಿಗಳು ಗಮನಿಸಬೇಕು ಎಂದರು. ಶ್ರೀ ಜೆ.ಸಿ.ಬಿ.ಎಂ. ಕಾಲೇಜಿನ ಪ್ರಾಚಾರ್ಯ ಡಾ. ಎಚ್.ಸಿ.ವೀರಪ್ಪಗೌಡ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಂಸ್ಕೃತ ವಿಭಾಗಾಧ್ಯಕ್ಷೆ ಯಶೋದಾ ಸ್ವಾಗತಿಸಿದರೆ, ಕಾಲೇಜಿನ ಪದವಿ ಪೂರ್ವ ವಿಭಾಗದ ಪ್ರಾಚಾರ್ಯ ಡಾ.ಸಿ.ವಿ. ಗಿರಿಧರ ಶಾಸ್ತ್ರಿ ನಿರೂಪಿಸಿದರು. ಸಹ ಸಂಯೋಜಕ ಡಾ. ರಾಘವೇಂದ್ರ ಭಟ್ ವಂದಿಸಿದರು. ಎರಡು ದಿನಗಳ ವಿಚಾರ ಸಂಕೀರ್ಣದಲ್ಲಿ ಇಪ್ಪತ್ತಕ್ಕೂ ಹೆಚ್ಚು ಶೋಧಪತ್ರಗಳು ಮಂಡನೆಯಾದವು. ಕವಿಗೋಷ್ಠಿ ಹಾಗೂ ಡಾ. ರಾಮಕೃಷ್ಣ ಪೆಜತ್ತಾಯ ಅವರ ಅಷ್ಟಾವಧಾನವನ್ನು ಆಯೋಜಿಸಲಾಗಿತ್ತು.

* ದುಃಖಕ್ಕೆ ಪರಮೌಷಧವೆಂದರೆ ಕ್ರಿಯಾಶೀಲತೆ.

Scanned by CamScanner

ಉದಯವಾಣಿ ರಾಜ್ಯಗಳ
ಮಂಗಳವಾರ | ಅಕ್ಟೋಬರ್ | 17 | 2014

CHK 5

ಚಿಕ್ಕಮಗಳೂರು

ಜೆಸಿಬಿಎಂ ಕಾಲೇಜಿನಲ್ಲಿ ಕಾರ್ಯಾಗಾರ



ಕೊಂಗೇರು ಜೆಬಿಎಂ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಮಕ್ಕಳ ಕ್ಷೇತ್ರಣ ಪ್ರಗತಿಯಲ್ಲಿ ಆಟೋ ಚಾಲಕರ ಕಾತ್ರ ಒಂದು ದಿನದ ಕಾರ್ಯಾಗಾರವನ್ನು ಡಾ। ಎಚ್.ಸಿ. ಮಹದೇವಪ್ಪ ಉದ್ಘಾಟಿಸಿದರು.

ಕೊಂಗೇರು ಆಟೋ ಚಾಲಕರು ತಮ್ಮ ಬಳಿಗೆ ಪ್ರಯಾಣಿಸುವ ಶಾಲಾ ಮಕ್ಕಳನ್ನು ಸುರಕ್ಷಿತವಾಗಿ ಶಾಲೆಗೆ ಕರೆದುಕೊಂಡು ಹೋಗಲು ಅಗತ್ಯ ಎಚ್ಚರಿಕೆ ವಹಿಸಬೇಕು ಎಂದು ಜೆಬಿಎಂ ಕಾಲೇಜಿನ ಪ್ರಾಚಾರ್ಯ ಡಾ। ಎಚ್.ಸಿ. ಮಹದೇವಪ್ಪ ತಿಳಿಸಿದರು.

ಜಿಲ್ಲೆಯಲ್ಲಿ ಜೆಬಿಎಂ ಕಾಲೇಜನ್ನು ಮಕ್ಕಳ ಕ್ಷೇತ್ರಣ ಪ್ರಗತಿಯಲ್ಲಿ ಆಟೋ ಚಾಲಕರ ಪಾತ್ರ ಕುರಿತ ಒಂದು ದಿನದ ಕಾರ್ಯಾಗಾರ ಆಯೋಜಿಸಿದೆ ಎಂದು ತಿಳಿಸಿದರು.

ಮಕ್ಕಳ ಸಹಿತ ದೊಡ್ಡ ಅಪಘಾತ ಸಂಭವಿಸಿದ ನಂತರ ಅವರನ್ನು ಶಾಲೆಗಳಲ್ಲಿ ಕರೆತರುವಲ್ಲಿ ಹೆಚ್ಚಿನ ಕಾಳಜಿ ವಹಿಸಲಾಗಿದೆ. ಸುರಕ್ಷಿತ ಪ್ರಯಾಣಕ್ಕಾಗಿ ಸಂಚಾರ ನಿಯಮಗಳನ್ನು ಪಾಲಿಸಬೇಕು. ಆಟೋ ಚಾಲಕರಿಗೆ ಶೈಕ್ಷಣಿಕವಾಗಿ ಸಹಾಯ ಮಾಡಲು ಒಂದು ಉತ್ತಮ ಕಾರ್ಯಕ್ರಮ ರೂಪಿಸಲಾಗಿದೆ. ಈ ಕಾರ್ಯಕ್ರಮಕ್ಕೆ ಸಂಸ್ಥೆಯ ಸಂಪೂರ್ಣ ಸಹಕಾರವಿದೆ ಎಂದರು.

ಮುಖ್ಯಅತಿಥಿ ಎಸ್ಪಿ ಅಣ್ಣಾಮಲೈ ಸಂಚಾರಿ ನಿಯಮ ಪಾಲನೆ ಕುರಿತು ಮಾತನಾಡಿದರು. ಸಂಚಾರ ಪೊಲೀಸ್ ಠಾಣೆಯ ಪಿಎಸ್‌ಐ ಮಂಜುನಾಥ್ ಸಂಚಾರಿ ನಿಯಮಗಳ ಬಗ್ಗೆ ಮಾಹಿತಿ ನೀಡಿದರು.

ಆಟೋ ಚಾಲಕರ ಸಂಘದ ಅಧ್ಯಕ್ಷ ಕೆ.ಎ. ಅಬ್ದುಲ್ಲಾ ಅಧ್ಯಕ್ಷತೆ ವಹಿಸಿದ್ದರು. ಕಾಲೇಜಿನ ವಿದ್ಯಾರ್ಥಿ ಅಧಿಕಾರಿಗಳಾದ ಚಿತ್ರಾ ಪ್ರಾರ್ಥಿಸಿದರು. ಸ್ವಾಗತಿಸಿದರು. ಪ್ರೊ। ಮಲ್ಲಿಕಾರ್ಜುನ ಎಸ್ ಹೊಸಮನಿ ವಂದಿಸಿದರು.

Scanned by CamScanner

ಹುಲಿಕಲ್ ನಟರಾಜ್ ರವರಿಂದ ಪವಾಡ ರಹಸ್ಯ ಬಯಲು

ಶೃಂಗೇರಿ: ಇಲ್ಲಿನ ಶ್ರೀ ಜೆ.ಸಿ.ಬಿ.ಎಂ ಕಾಲೇಜಿನ ಮುಖ್ಯ ಸಭಾಂಗಣದಲ್ಲಿ, ಹುಲಿಕಲ್ ನಟರಾಜ್ ರವರ "ಪವಾಡ ರಹಸ್ಯ ಬಯಲು" ಕಾರ್ಯಕ್ರಮ. ಇತ್ತೀಚೆಗೆ ನಡೆಯಿತು. ಹುಲಿಕಲ್ ರವರು ಮೂರು ಗಂಟೆಗಳ ಕಾಲ ಪ್ರೇಕ್ಷಕರನ್ನು ಮನಸೂರೆಗೊಳಿಸುವ ಕಾರ್ಯಕ್ರಮ ನೀಡಿ ನಕಲಿ ಪವಾಡ ಪುರುಷರ ಪವಾಡಗಳ ರಹಸ್ಯಗಳನ್ನು ಬಯಲು ಮಾಡಿದರು. ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘವು ಈ ಕಾರ್ಯಕ್ರಮವನ್ನು ಆಯೋಜಿಸಿತ್ತು. ಇದೇ ಸಂದರ್ಭದಲ್ಲಿ ಡಾ. ಹೆಚ್.ಸಿ.ವೀರಪ್ಪಗೌಡ, ಡಾ. ವೆಂಕಟೇಶ್, ಬಿ.ಎಲ್.ಶರಶ್ಚಂದ್ರ, ಡಾ.ಎನ್.ಜಿ. ರಾಘವೇಂದ್ರ ಹಾಗೂ ಹುಲಿಕಲ್ ನಟರಾಜ್ ರವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಹೆಚ್.ಹೆಚ್.ದಿನೇಶ್ ರವರು ವಹಿಸಿದ್ದರು. ಶರಾವತಿ ಹೆಗ್ಡೆ ಪ್ರಾರ್ಥಿಸಿದರು. ವಿಜಯ್ ಕುಮಾರ್ ಸ್ವಾಗತಿಸಿದರು. ರಾಜೀವ್ ಹಾಗೂ ಶರಾವತಿ ದಿನೇಶ್ ಕಾರ್ಯಕ್ರಮ ನಿರೂಪಿಸಿದರು.

Scanned by CamScanner

ಆಟೋ ಚಾಲಕರ ಸೇವಾ ಮನೋಭಾವ ಮಾದರಿ

'ಮಕ್ಕಳ ಶೈಕ್ಷಣಿಕ ಪ್ರಗತಿಯಲ್ಲಿ ಆಟೋ ಚಾಲಕರ ಪಾತ್ರ' ಕಾರ್ಯಾಗಾರ

ಶೃಂಗೇರಿ: ಪಟ್ಟಣದಲ್ಲಿ ಆಟೋ ಚಾಲಕರು ಕಳೆದ 50 ವರ್ಷಗಳಿಂದಲೂ ಕಾಲೇಜಿನ ಪ್ರಗತಿ ಹಾಗೂ ವಿದ್ಯಾರ್ಥಿ-ಅಧ್ಯಾಪಕರುಗಳ ತಮ್ಮದೇ ಆದ ರೀತಿ ಸೇವೆ ನೀಡುತ್ತಿದ್ದಾರೆ ಎಂದು ಜೆಸಿಬಿಎಂ ಕಾಲೇಜಿನ ಪ್ರಾಚಾರ್ಯ ಡಾ. ಎಚ್.ಸಿ. ವೀರಪ್ಪಗೌಡ ಹೇಳಿದರು.

ಜೆಸಿಬಿಎಂ ಕಾಲೇಜಿನಲ್ಲಿ 'ಮಕ್ಕಳ ಶೈಕ್ಷಣಿಕ ಪ್ರಗತಿಯಲ್ಲಿ ಆಟೋ ಚಾಲಕರ ಪಾತ್ರ' ಕುರಿತು ಏರ್ಪಡಿಸಿದ್ದ ಒಂದು ದಿನದ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ಮಕ್ಕಳೇ ನಮಗೆ ದೊಡ್ಡ ಆಸ್ತಿ. ಹಾಗಾಗಿ ಮಕ್ಕಳಿಗೆ ಉತ್ತಮ ಶಿಕ್ಷಣ ಮತ್ತು ಸಂಸ್ಕಾರ ನೀಡಿ ಉತ್ತಮ ಪ್ರಜೆಗಳನ್ನಾಗಿ ರೂಪಿಸುವಲ್ಲಿ ತಂದೆ ತಾಯಿಯರ ಪಾತ್ರ ಅನನ್ಯ ಎಂದ ಅವರು, ಕಾಲೇಜಿನ ಸುವರ್ಣ ಮಹೋತ್ಸವ ಸಂದರ್ಭದಲ್ಲಿ ಆಟೋ ಚಾಲಕರಿಗೆ ಕೃತಜ್ಞತೆ ತಿಳಿಸುವ ಹಾಗೂ ಅವರಿಗೊಂದು ಉತ್ತಮ ಕಾರ್ಯಕ್ರಮ ನೀಡಬೇಕೆಂಬ ಇರಾದೆಯಿಂದ ಈ ಕಾರ್ಯಾಗಾರ ಆಯೋಜಿಸಲಾಗಿದೆ ಎಂದು ಹೇಳಿದರು.



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ 'ಮಕ್ಕಳ ಶೈಕ್ಷಣಿಕ ಪ್ರಗತಿಯಲ್ಲಿ ಆಟೋ ಚಾಲಕರ ಪಾತ್ರ' ಕುರಿತು ಏರ್ಪಡಿಸಿದ್ದ ಕಾರ್ಯಾಗಾರವನ್ನು ಡಾ. ಎಚ್.ಸಿ. ವೀರಪ್ಪಗೌಡ ಉದ್ಘಾಟಿಸಿದರು.

ಪ್ರಾಚಾರ್ಯ ಡಾ. ಸಿ.ಗಿರಿಧರ ಶಾಸ್ತ್ರಿ ಮಾತನಾಡಿ, ಇಲ್ಲಿನ ಆಟೋ ಚಾಲಕರ ಸೇವೆ ರಾಜ್ಯಕ್ಕೆ ಮಾದರಿ. ಎಲ್ಲ ವರ್ಗದ ಜನರು ಇಷ್ಟ ಪಡುವ ರೀತಿ ಸೇವಾ ಮನೋಭಾವದಿಂದ ದುಡಿಯುತ್ತಿದ್ದಾರೆ. ಈ ಕಾರ್ಯ ಶ್ಲಾಘನೀಯ. ಆಟೋ ಚಾಲಕರು ಮತ್ತು ನಾಗರಿಕರ ನಡುವೆ ಉತ್ತಮ ಸಂಬಂಧವಿದ್ದು ಯಾವುದೇ ಗೊಂದಲ ಉಂಟಾಗದಂತೆ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ ಎಂದರು.

ಮಂಗಳೂರಿನ ಸಿಎಸ್ಎಚ್ಆರ್ಡಿ ಸಂಸ್ಥೆಯ ರಾಷ್ಟ್ರೀಯ ತರಬೇತುದಾರರಾದ ಮೇಜರ್ ರಾಧಾಕೃಷ್ಣ ಎಂ. ಅವರು ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿ ತರಬೇತಿ ನೀಡಿದರು.

ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ, ಆಂತರಿಕ ಗುಣಮಟ್ಟ ಕೋಶ ಹಾಗೂ ಸಿಎಸ್ಎಚ್ಆರ್ಡಿ ಮಂಗಳೂರಿನ ಆಶ್ರಯದಲ್ಲಿ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಆಟೋ ಚಾಲಕರ ಸಂಘದ ಅಧ್ಯಕ್ಷ ಜಿ.ಜಿ. ಚಂದ್ರಕೀರ್ತಿ, ಎನ್ಎಸ್ಎಸ್ ಅಧಿಕಾರಿ ಲಕ್ಷ್ಮೀನಾರಾಯಣ, ಪ್ರಶಾಂತ್, ಪ್ರೊ. ದತ್ತಾತ್ರೇಯ ಎಂ.ಮಾರ್ಪಳ್ಳಿ ಇದ್ದರು.

Scanned by CamScanner

ಇಂದಿನಿಂದ ರಾಷ್ಟ್ರೀಯ ಕಾರ್ಯಾಗಾರ

ಶೃಂಗೇರಿ: ಮಾನವ ಸಂಪನ್ಮೂಲ ಲೆಕ್ಕಾಚಾರದಲ್ಲಿ ಪ್ರಸ್ತುತ ಉದ್ಭವಿಸುತ್ತಿರುವ ಪ್ರವೃತ್ತಿಗಳ ಬಗ್ಗೆ ರಾಷ್ಟ್ರೀಯ ಕಾರ್ಯಗಾರ ಶ್ರೀ ಜೆಸಿಬಿಎಂ ಕಾಲೇಜಿನಲ್ಲಿ 16, 17 ರಂದು ನಡೆಯಲಿದೆ.

17 ರಂದು ಅಕಾಡೆಮಿ ಆಫ್ ಜನರಲ್ ಎಜುಕೇಷನ್ ಮಣಿಪಾಲದ ಡಾ। ಎಚ್.ಎಸ್.ಬಲ್ಲಾಳ್ ಉದ್ಘಾಟಿಸುವರು. ಕಾರ್ಯಗಾರದಲ್ಲಿ ದಿಕ್ಸೂಚಿ ಭಾಷಣವನ್ನು ಡಾ। ಶೇಖರ್ ಎಸ್.ಅಯ್ಯರ್ ಮಾಡಲಿದ್ದಾರೆ. ಮಣಿಪಾಲ ಅಕಾಡೆಮಿಯ ಆಡಳಿತಾಧಿಕಾರಿ ಡಾ। ಎಚ್.ಶಾಂತರಾಂ ಅಧ್ಯಕ್ಷತೆ ವಹಿಸಲಿದ್ದಾರೆ.

ಅ.18 ರಂದು ಸಮಾರೋಪದಲ್ಲಿ ಸಮಾರೋಪ ಭಾಷಣವನ್ನು ಮಣಿಪಾಲದ ಡಾ। ಆರ್.ಸಿ.ನಟರಾಜನ್ ಮಾಡಲಿದ್ದು ಅತಿಥಿಗಳಾಗಿ ವಿಜ್ಞಾನಿ ಡಾ। ಟಿ.ಎನ್.ಪ್ರಕಾಶ್ ಕಮ್ಮರಡಿ ಭಾಗವಹಿಸಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಚಾರ್ಯ ಡಾ। ಎಚ್.ಸಿ.ವೀರಪ್ಪಗೌಡ ವಹಿಸಲಿದ್ದಾರೆ. ಎರಡು ದಿನ ವಿವಿಧ ವಿಷಯಗಳ ಬಗ್ಗೆ ತಜ್ಞರು ಉಪನ್ಯಾಸ ನೀಡಲಿದ್ದಾರೆ.

ಉದಯವಾಣಿ ಗೊಂಬೆಲಾಕ ಹೆಬ್ಬಾರ
16 2014

Scanned by CamScanner

ರಾಜ್ಯ ಮಟ್ಟದ ಕಾರ್ಯಾಗಾರ

ಶೃಂಗೇರಿ: ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಜೀವ ವೈವಿಧ್ಯತೆ ಬಗ್ಗೆ ರಾಜ್ಯ ಮಟ್ಟದ ಒಂದು ದಿನ ಕಾರ್ಯಾಗಾರವನ್ನು ಅ.16ರಂದು ಬೆಳಗ್ಗೆ 10 ಕ್ಕೆ ಜೆಸಿಬಿಎಂ ಕಾಲೇಜಿನಲ್ಲಿ ಆಯೋಜಿಸಲಾಗಿದೆ.

ಕುದುರೆಮುಖ ವನ್ಯಜೀವಿ ವಿಭಾಗ ಮತ್ತು ಶ್ರೀ ಜೆಸಿಬಿಎಂ ಕಾಲೇಜು ಜಂಟಿಯಾಗಿ ಆಯೋಜಿಸಿರುವ ಈ ಕಾರ್ಯಾಗಾರದಲ್ಲಿ ವಿವಿಧ ವಿಷಯಗಳ ಬಗ್ಗೆ ತಜ್ಞರಿಂದ ವಿಷಯಗಳು ಮಂಡನೆಯಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ವಿಜಯ ಕರ್ನಾಟಕ ಉದಯವಾಣಿ

Scanned by CamScanner



ಶೃಂಗೇರಿಯ ಜೆಸಿಬಿಎಂ ಕಾಲೇಜಿನ ಎನ್‌ಎಸ್‌ಎಸ್ ವಿದ್ಯಾರ್ಥಿಗಳು ವಿದ್ಯಾರಣ್ಯಪುರ ಗ್ರಾಮದಲ್ಲಿ ಮಹಾತ್ಮ ಗಾಂಧಿ ಶತಮಾನೋತ್ಸವದ ಅಂಗವಾಗಿ ನಿರ್ಮಿಸಿದ್ದ ಬಾವಿ ಹೂಳು ತೆಗೆದಿದ್ದನ್ನು ಶ್ರಮದಾನದ ಮೂಲಕ ಸ್ವಚ್ಛಗೊಳಿಸಿದರು.

(ಬಾಳೆಹೊನ್ನೂರು ಚಿತ್ರ)

Scanned by CamScanner

ಜೆಸಿಬಿಎಂನಲ್ಲಿ ವ್ಯಕ್ತಿತ್ವ ವಿಕಸನ ಶಿಬಿರ

ವಿಕ ಚಿತ್ರಸುದ್ದಿ

ಕ್ಯಾಂಪಸ್

ಶೃಂಗೇರಿ: ವಿದ್ಯಾರ್ಥಿಗಳು ಜೀವನದಲ್ಲಿ ಯಶಸ್ಸು ಗಳಿಸಲು ತಮ್ಮ ವ್ಯಕ್ತಿತ್ವವನ್ನು ಉತ್ತಮಪಡಿಸಿಕೊಳ್ಳುವ ಆಗತ್ಯವಿದೆ ಎಂದು ಜೆಸಿಬಿಎಂ ಕಾಲೇಜಿನ ಹಳೆ ವಿದ್ಯಾರ್ಥಿ ಸಂಘದ ಸದಸ್ಯ ಬಾಳೆಮನೆ ನಟರಾಜ್ ಹೇಳಿದರು.

ಅವರು ಬುಧವಾರ ಶ್ರೀ ಜೆಸಿಬಿಎಂ ಕಾಲೇಜ ನಲ್ಲಿ ಕಾಲೇಜಿನ ಹಳೆ ವಿದ್ಯಾರ್ಥಿ ಸಂಘ ಮತ್ತು ರಾಷ್ಟ್ರೀಯ ಸೇವಾ ಯೋಜನೆ ಆಶ್ರಯದಲ್ಲಿ ನಡೆದ ಎರಡು ದಿನಗಳ ವ್ಯಕ್ತಿತ್ವ ವಿಕಸನ ಶಿಬಿರ ಉದ್ಘಾಟಿಸಿ ಮಾತನಾಡಿದರು.

ಸ್ಪರ್ಧಾತ್ಮಕ ಯಾವುದೇ ಕ್ಷೇತ್ರದಲ್ಲಿ ಪ್ರವೇಶಿಸಲು ನಮ್ಮ ನಡವಳಿಕೆ, ವ್ಯಕ್ತಿತ್ವವನ್ನು ಬದಲಿಸುವ ರೀತಿ ಮುಖ್ಯವಾಗುತ್ತದೆ. ಇದಕ್ಕಾಗಿ ಕಲ್ಲಿನಿಂದ ಮಾರ್ಗದರ್ಶನದ ಆಗತ್ಯವಿದ್ದು, ಇಲ್ಲಿ ಎರಡು ದಿನಗಳ ಶಿಬಿರದಲ್ಲಿ ಮಾಹಿತಿ ನೀಡಲಾಗುವುದು ಎಂದರು.



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ಎರಡು ದಿನಗಳ ವ್ಯಕ್ತಿತ್ವ ವಿಕಸನ ಶಿಬಿರವನ್ನು ಹಳೆ ವಿದ್ಯಾರ್ಥಿ ಸಂಘದ ಬಾಳೆಮನೆ ನಟರಾಜ್ ಉದ್ಘಾಟಿಸಿದರು.

ಹಳೇ ವಿದ್ಯಾರ್ಥಿ ಸಂಘದ ಅಧ್ಯಕ್ಷ ಐಟಿ ರಮೇಶ್ ಅಧ್ಯಕ್ಷತೆ ವಹಿಸಿ ಮಾತನಾಡಿ, ವಿದ್ಯಾರ್ಥಿಗಳೆಲ್ಲರೂ ಸರಕಾರಿ ಮತ್ತು ಸರಕಾರೇತರ ಉದ್ಯೋಗಗಳನ್ನು ಅರಸಿ ಹೋಗದೇ ತಮ್ಮ ಆರಿವಿನಿಂದ, ಕೌಶಲ್ಯದಿಂದ ಕೃಷಿಯನ್ನು ಉದ್ಯೋಗವನ್ನಾಗಿ ಆರಿಸಿ ದೇಶದ ಆಹಾರ ಸಮಸ್ಯೆ ಹೋಗಲಾಡಿಸುವುದರ ಜತೆಗೆ ಆರ್ಥಿಕ ಪ್ರಗತಿ ಸಾಧಿಸಬೇಕು ಎಂದು ಹೇಳಿದರು.

ಸಂಪನ್ಮೂಲ ವ್ಯಕ್ತಿಗಳಾಗಿ ಮುಬ್ಬಳ್ಳಿಯ ಸುನಿಲ್ ಮತ್ತು ಅನಿಲ್ ಪಾಲ್ಗೊಂಡಿದ್ದರು.

ಸಮಾರೋಪದಲ್ಲಿ ಜೆಸಿಬಿಎಂ ಕಾಲೇಜಿನ ಪಿಯು ವಿಭಾಗದ ಪ್ರಾಚಾರ್ಯ ಡಾ.ಸಿ.ವಿ. ಗಿರಿಧರಶಾಸ್ತ್ರಿ, ಹಳೇ ವಿದ್ಯಾರ್ಥಿ ಸಂಘದ ನಿಕಟ ಪೂರ್ವ ಅಧ್ಯಕ್ಷ ಸಿದ್ದಪ್ಪ, ನಿರ್ದೇಶಕ ಉಮೇಶ್ ಪುದುವಾಳ್, ಉಪಾಧ್ಯಕ್ಷ ದಿನೇಶ್ ಕೆಟ್ಟಿ ಮಿಥಲ ಹೆಗ್ಡೆ, ಚೆನ್ನಕೇಶವ, ಉಮೇಶ್ ಜಾಲ್ಕೊಂಡಿದ್ದರು.

ಕೆ.ಟಿ.ಮಂಜುನಾಥ ಸ್ವಾಗತಿಸಿ, ಶ್ರೀ ರಾಂ ಹೆಗ್ಡೆ ವಂದಿಸಿ, ಪ್ರಶಾಂತ್ ನಿರೂಪಿಸಿದರು.

Scanned by CamScanner

'ಎನ್ನೆಸ್ಸೆಸ್‌ನಿಂದ ವ್ಯಕ್ತಿತ್ವ ಬೆಳವಣಿಗೆ'



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ಎನ್ನೆಸ್ಸೆಸ್ ಆಯೋಜಿಸಿದ್ದ ಗಾಣಾಭಿಜೇಕ ಕಾರ್ಯಕ್ರಮವನ್ನು ಶಿಕ್ಷಕ ವಿವೇಕಾನಂದ ಉದ್ಘಾಟಿಸಿದರು.

ಶೃಂಗೇರಿ: ವಿದ್ಯಾರ್ಥಿ ಜೀವನದಲ್ಲಿ ಎನ್ನೆಸ್ಸೆಸ್ ನಂತರ ಸಮಾಜಮುಖಿ ಯೋಜನೆಗಳಲ್ಲಿ ಭಾಗವಹಿಸಿ ವ್ಯಕ್ತಿತ್ವ ಬೆಳೆಸಿಕೊಳ್ಳಬೇಕು ಎಂದು ಸಿ.ವಿ.ಪೂ ಕಾಲೇಜು ಶಿಕ್ಷಕ, ಗಾಯಕ ವಿವೇಕಾನಂದ ಹೇಳಿದರು.

ಅವರು ಭಾನುವಾರ ಶ್ರೀ ಜೆಸಿಬಿಎಂ ಕಾಲೇಜಿನಲ್ಲಿ ಎನ್ನೆಸ್ಸೆಸ್ ಆಯೋಜಿಸಿದ್ದ ಗಾಣಾಭಿಜೇಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಸಮಾಜಮುಖಿ ಬದುಕು ಮನುಷ್ಯನನ್ನು ಶಾಶ್ವತವಾಗಿರಿಸುತ್ತದೆ. ನೂರು ಬಾರಿ ಒಂದು ಸುಳ್ಳು ಹೇಳಿದರೆ ಅದೇ ಸತ್ಯ ಎಂದು ನಂಬುತ್ತಾಳೆ. ಆದರೆ ಒಂದು ಸತ್ಯವನ್ನು ಒಂದೇ ಬಾರಿ ಹೇಳಿದರೆ ಅದೇ ಶಾಶ್ವತವಾಗುತ್ತದೆ. ಮನುಷ್ಯ ಸಾಂಸ್ಕೃತಿಕ ಚಟುವಟಿಕೆಗಳಿಂದ ಕ್ರಿಯಾಶೀಲತೆ, ಸೃಜನಶೀಲತೆಯಿಂದ ಅಮರನಾಗುವುದು. ಎನ್ನೆಸ್ಸೆಸ್ ಗೀತೆಗಳ ಧ್ಯೇಯೋದ್ದೇಶಗಳು ಗ್ರಾಮೋದ್ಧಾರದ ಜತೆಗೆ, ದೇಶೋದ್ಧಾರದ ಪರಿಕಲ್ಪನೆ ಇಟ್ಟುಕೊಂಡಿದೆ ಎಂದರು.

ಸಂಪನ್ಮೂಲ ವ್ಯಕ್ತಿ ನಾಗರಾಜರಾವ್ ಮೊಕಾಸಿ, ಪ್ರತಿಯೊಬ್ಬರು ಕಾಲೇಜು ಜೀವನದಲ್ಲಿ ಬರುವ ಅವಕಾಶಗಳನ್ನು ಧನಾತ್ಮಕವಾಗಿ ಬಳಸಿಕೊಂಡಾಗ ಯಶಸ್ಸು ಗಳಿಸುವುದು ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಕಾಲೇಜಿನ ಪ್ರಾಚಾರ್ಯ ಡಾ.ಎಚ್.ಸಿ.ವೀರಪ್ಪಗೌಡ, ಆರ್ಥಿಕ ಶ್ರೀಮಂತಿಕೆಗಿಂತ ನಮ್ಮೂರು, ನಮ್ಮ ಕಾಲೇಜು, ನಮ್ಮ ಜನ ಎಂಬ ಹೃದಯ ಶ್ರೀಮಂತಿಕೆ ಮುಖ್ಯ. ಸುವರ್ಣ ಮಹೋತ್ಸವ ಸಂಭ್ರಮದಲ್ಲಿರುವ ಈ ಸರ್ಕಾರಿ ಕಾಲೇಜಿನ ಹಳೆ ವಿದ್ಯಾರ್ಥಿಗಳು ಕಾರ್ಯಕ್ರಮಗಳು ನಡೆಯಲಿವೆ ಎಂದರು.

ಕಾರ್ಯಕ್ರಮದಲ್ಲಿ ಎನ್ನೆಸ್ಸೆಸ್ ಅಧಿ [illegible] ಎನ್ನೆಸ್ಸೆಸ್ ಗೀತೆಗಳ ಕಾರಿಗಳಾದ ಎ.ಜಿ.ಪ್ರಭಾಕರ್, ಎಸ್.ಎಚ್. [illegible] ಶಿಬಿರಾರ್ಥಿಗಳು ಹಾಜರಿದ್ದರು.

Scanned by CamScanner

ಸಂಗೀತಕ್ಕೆ ಕಾಳಿಂಗರಾವ್ ಕೊಡುಗೆ ಅಪಾರ: ಶಿವಣ್ಣ

■ ಶೃಂಗೇರಿಯ ಜೆಸಿಬಿಎಂ ಕಾಲೇಜಿನ ಟಿಎಂಎ ಪೈ ಸಭಾಂಗಣದಲ್ಲಿ ಜಿಲ್ಲಾಮಟ್ಟದ ಗೀತಗಾಯನ ಉತ್ಸವ ಕಾರ್ಯಕ್ರಮ

ಶೃಂಗೇರಿ: ಕನ್ನಡ ಸುಗಮ ಸಂಗೀತಕ್ಕೆ ದಿ. ಕಾಳಿಂಗರಾವ್ ಹಾಗೂ ಆ ಕ್ಷೇತ್ರಕ್ಕೆ ಜನಪ್ರಿಯತೆ ಒದಗಿಸುವಲ್ಲಿ ಕವಿ ಕೆ. ಎಸ್. ನರಸಿಂಹಸ್ವಾಮಿ ಅವರ ಸಾಧನೆಗಳು ಚಿರಕಾಲ ಸ್ಮರಣೀಯ ಎಂದು ಸಾಹಿತಿ, ಜಿಪಂ ಸದಸ್ಯ ಶೃಂಗೇರಿ ಶಿವಣ್ಣ ಅವರು ಅಭಿಪಾಯಪಟ್ಟರು.

ಇಲ್ಲಿನ ಜೆಸಿಬಿಎಂ ಕಾಲೇಜಿನ ಟಿಎಂಎ ಪೈ ಸಭಾಂಗಣದಲ್ಲಿ ಜಿಲ್ಲಾಮಟ್ಟದ ಗೀತಗಾಯನ ಉತ್ಸವವನ್ನು ಉದ್ಘಾಟಿಸಿ ಮಾತನಾಡಿದರು.

ಮಲೆನಾಡು ಅದರಲ್ಲೂ ಚಿಕ್ಕಮಗಳೂರು ಜಿಲ್ಲೆಯಲ್ಲಿ ಅಸಂಖ್ಯ ಸುಗಮ ಸಂಗೀತ ಕಲಾವಿದರಿದ್ದು, ಅವರೆಲ್ಲಾ ಏಕ ವೇದಿಕೆಯಲ್ಲಿ ಅನಾವರಣಗೊಳ್ಳಲು ಇಂಥ ಗಾಯನೋತ್ಸವಗಳು ನೆರವಾಗಲಿದೆ ಎಂದರು.

ಮನಸೂರೆಗೊಂಡ ಗೀತಗಾಯನ: ಎ.ಜಿ. ಶಿವಾನಂದ ಭಟ್ ಹೇರೂರು ಇವರು ಹಾಡಿದ 'ಅಂತಿಂಥ ಹೆಣ್ಣು ನೀನಲ್ಲ' ಹಾಡಿನೊಂದಿಗೆ ಗೀತಗಾಯನ ಪ್ರಾರಂಭಗೊಂಡು ನಂತರ ಬಾರಯ್ಯ ಬೆಳದಿಂಗಳೇ, ಒಂದಿರುಳು ಕನಸಿನಲಿ, ರಾಯರು ಬಂದರು ಮಾವನ ಮನೆಗೆ, ಹೆಂಡತಿಯೊಬ್ಬಳು ಮನೆಯೊಳಗಿದ್ದರೆ ಮುಂತಾದ ಹಾಡುಗಳನ್ನು ರೇಖಾ ಪ್ರೇಂಕುಮಾರ್, ಭಾಗ್ಯಶ್ರೀ, ಜಗದೀಶ್ ಕಣದಮನೆ, ಸಾಧ್ವಿನಿ, ಪ್ರಣವ್ ದೇವಧರ್ ಮುಂತಾದವರು ಪ್ರಸ್ತುತಪಡಿಸಿದರು.

ಹಿನ್ನೆಲೆಯಲ್ಲಿ ಎಂ.ಕೆ. ಶ್ರೀನಿಧಿ, ಭಾರ್ಗವ ಕೊಪ್ಪ, ಹರ್ಷ, ರಮೇಶ್ ಉಪಾಧ್ಯ, ಹರೀಶ್ ಡೋಂಗ್ರೆ ಮೊದಲಾದವರು ಸಹಕರಿಸಿದರು. ಹೆಗ್ಗದ್ದೆ ಶಿವಾನಂದರಾವ್ ನಿರೂಪಿಸಿ, ಪ್ರಶಾಂತ್ ಸ್ವಾಗತಿಸಿ, ರಮೇಶ್ ಬೇಗಾರ್ ವಂದಿಸಿದರು.

Scanned by CamScanner

ಪ್ರ, ವಾ 20-3-15

'ಎಲ್ಲಾ ಜ್ಞಾನದ ಬೇರು ಜಾನಪದ'

ಪ್ರಜಾವಾಣಿ ವಾರ್ತೆ

ಶೃಂಗೇರಿ: ಜಾನಪದವನ್ನು ಅಧ್ಯಯನ ಮಾಡಿ ಪದವಿ ಪುರಸ್ಕಾರ ಪಡೆದು ಉನ್ನತ ಹುದ್ದೆಗೇರಿದವರು ಜಾನಪದದ ಬಗ್ಗೆ ಒಂದಕ್ಷರವನ್ನು ಬರೆಯದಿರುವುದು ವಿಷಾದಕರ ಎಂದು ಹಿರಿಯ ಜಾನಪದ ಗಾಯಕ ಅಪ್ಪಗೆರೆ ತಿಮ್ಮರಾಜು ಹೇಳಿದರು.

ಇಲ್ಲಿನ ಜೆ.ಸಿ.ಬಿ.ಎಂ. ಕಾಲೇಜಿನ ಟಿ.ಎಂ.ಎ.ಪೈ ಸಭಾಂಗಣದಲ್ಲಿ ಗುರುವಾರ ಹೊಂಬಾಳೆ ಪ್ರತಿಭಾ ರಂಗ ಮತ್ತು ಕನ್ನಡ ಸಂಸ್ಕೃತಿ ಇಲಾಖೆ ಏರ್ಪಡಿಸಿದ್ದ ಜಾನಪದ-ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಎಲ್ಲಾ ಜ್ಞಾನದ ಬೇರು ಜಾನಪದ. ಇಂದಿನ ಯುವ ಜನಾಂಗ ಜಾನಪದದ ಬಗ್ಗೆ ಆಸಕ್ತಿ ತಾಳದೆ ಪಾಶ್ಚಿಮಾತ್ಯ ಸಂಗೀತ ಕುಂಬಿಕೊಂಡಿದ್ದು, ಅವರ ಹೃದಯಗಳಲ್ಲಿ ಜಾನಪದವನ್ನು ಮೇಲಿದೆ ಎಂದರು. 1936ರಲ್ಲಿ ಚಿಗುರಿಸುವ ಗುರುತರ ಜವಾಬ್ದಾರಿ ನಮ್ಮ ಮೈಸೂರು ಮಹಾರಾಜರು ಕಡೂರಿನಲ್ಲಿ ಜಾನಪದ ಸಮ್ಮೇಳನ ಏರ್ಪಡಿಸಿದ್ದರು. ಹಿರಿಯ ಜನಪದರಾದ ಕೆ.ಆರ್.ಲಿಂಗಪ್ಪ, ಗೋರೂರು ಚೆನ್ನಬಸಪ್ಪ, ವಿ.ಸೀತಾರಾಮಯ್ಯ, ಖರೀ ಖಾನ್ ಮೊದಲಾದವರು ಪಾಲ್ಗೊಂಡಿದ್ದನ್ನು ಸ್ಮರಿಸಿದರು.

ಜಾನಪದ ಗಾಯಕ ಬಾನಂದೂರು ಕೆಂಪಯ್ಯ ಕಾರ್ಯಕ್ರಮ ಉದ್ಘಾಟಿಸಿದರು. ಕಾಲೇಜು ಪ್ರಾಚಾರ್ಯ ಡಾ.ಹೆಚ್.ಸಿ.ವೀರಪ್ಪ ಗೌಡ ಅಧ್ಯಕ್ಷತೆ ವಹಿಸಿದ್ದರು. ಜೆ.ಸಿ.ಬಿ.ಎಂ. ಕಾಲೇಜು ಭಾರತೀ ತೀರ್ಥ ಸಾಂಸ್ಕೃತಿಕ ಮತ್ತು ಜಾನಪದ ಅಧ್ಯಯನ ಕೇಂದ್ರದ ಸಹಯೋಗದಲ್ಲಿ ನಡೆದ ಕಾರ್ಯಕ್ರಮದಲ್ಲಿ ಹೊಂಬಾಳೆ ಪ್ರತಿಭಾ ರಂಗದ ಎಚ್.ಪಲ್ಗುಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ತ್ಯಾಗರಾಜ್, ಜಾನಪದ ಗಾಯಕಿ ರತ್ನಾ ಸಕಲೇಶಪುರ ಮೊದಲಾದವರು ಪಾಲ್ಗೊಂಡರು.



ಶೃಂಗೇರಿ ಜೆ.ಸಿ.ಬಿ.ಎಂ. ಕಾಲೇಜಿನ ಟಿ.ಎಂ.ಎ.ಪೈ ಸಭಾಂಗಣದಲ್ಲಿ ಗುರುವಾರ ಹೊಂಬಾಳೆ ಪ್ರತಿಭಾ ರಂಗ ಮತ್ತು ಕನ್ನಡ ಸಂಸ್ಕೃತಿ ಇಲಾಖೆ ಏರ್ಪಡಿಸಿದ್ದ ಜನಪದ-ಸಂವಾದ ಕಾರ್ಯಕ್ರಮವನ್ನು ಜನಪದ ಗಾಯಕ ಬಾನಂದೂರು ಕೆಂಪಯ್ಯ ಉದ್ಘಾಟಿಸಿದರು.

Scanned by CamScanner

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
ಚಿಕ್ಕಮಗಳೂರು ಲೋಕಲ್ ಎಕ್ಸ್‌ಪ್ರೆಸ್

ಸಾಗರ ಇಂದಿರಾಗಾಂಧಿ ಕಾಲೇಜಿಗೆ ಟೀಂ ಚಾಂಪಿಯನ್ ಪ್ರಶಸ್ತಿ

■ ಕುವೆಂಪು ವಿವಿ ಆಂತರಕಾಲೇಜು ಮಹಿಳಾ ಕ್ರೀಡಾಕೂಟ ■ ಚಿಕ್ಕಮಗಳೂರು, ಶಿವಮೊಗ್ಗದ 350 ಕ್ರೀಡಾಪಟುಗಳು ಭಾಗಿ

ಭದ್ರಾವತಿ: ಕುವೆಂಪು ವಿವಿ ಆಂತರ ಕಾಲೇಜು ಮಹಿಳಾ ಕ್ರೀಡಾಕೂಟದ ಟೀಂ ಚಾಂಪಿಯನ್ ಪ್ರಶಸ್ತಿಯನ್ನು ಸಾಗರದ ಇಂದಿರಾಗಾಂಧಿ ಸರ್ಕಾರಿ ಪ್ರಥಮದರ್ಜೆ ಕಾಲೇಜು ವಿದ್ಯಾರ್ಥಿನಿಯರು ಗೆದ್ದುಕೊಂಡಿದ್ದಾರೆ.

ನಗರದ ಹೊಸಮನೆಬೈಪಾಸ್‌ನಲ್ಲಿರುವ ಸರ್ ಎಂ.ವಿ.ಸರ್ಕಾರಿ ವಿಜ್ಞಾನ ಕಾಲೇಜಿನಲ್ಲಿ ಮೂರು ದಿನಗಳ ಕಾಲ ನಡೆದ ಕ್ರೀಡಾಕೂಟದಲ್ಲಿ ಚಿಕ್ಕಮಗಳೂರು, ಶಿವಮೊಗ್ಗ ಜಿಲ್ಲೆಯ ಕಾಲೇಜುಗಳ 350 ಕ್ರೀಡಾಪಟುಗಳು ಭಾಗವಹಿಸಿದ್ದರು.

ವಿಜೇತರಿಗೆ ಕಾಲೇಜಿನ ಎಂ.ಜಿ.ಅಪ್ಪಾಜಿ ಪ್ರಶಸ್ತಿ ವಿತರಿಸಿದರು. ಪ್ರಾಚಾರ್ಯ ಭೈರಪ್ಪ ಬಿ.ಜಿ ಅಧ್ಯಕ್ಷತೆ ವಹಿಸಿದ್ದರು. ಡಿಡಿಪಿಐ ಸರ್ವಮಂಗಳ ಎಸ್.ಕುಮಾರ್, ಕಾಲೇಜು ಸರ್ವಸದಸ್ಯ ಗಿರೀಶ್, ಬಿ.ಇ.ಒ ಎಸ್.ಎಂ.ಪ್ರಕಾಶ್, ನಗರಸಭೆ ಸದಸ್ಯರಾದ ಬಿ.ಕೆ.ನಾರಾಯಣಿ, ಎಂ.ರಾಮು, ಮುಖ್ಯಶಿಕ್ಷಕಿ ಸಾವಿತ್ರಿ, ಶ್ರೀಧರ್, ಮಲ್ಲೇಗೌಡ, ಲಕ್ಷ್ಮಿ ನಾರಾಯಣ್, ರಾಜು, ಪ್ರೊ. ಜಿ.ಕೆ.ನಾಯ್ಕ, ಮಮತಾ, ಕವಿತಾಪ್ರಕಾಶ್ ಇದ್ದರು.



ಚಾಂಪಿಯನ್ ಪ್ರಶಸ್ತಿ ಪಡೆದ ಸಾಗರದ ಇಂದಿರಾಗಾಂಧಿ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿನಿಯರು.

ವಿಜೇತರ ವಿವರ

ಥ್ರೋಬಾಲ್: 1. ಸಾಗರದ ಇಂದಿರಾಗಾಂಧಿ ಸರ್ಕಾರಿ ಪ್ರಥಮದರ್ಜೆ ಕಾಲೇಜು, 2. ಹೊಸನಗರದ ಕೊಡಚಾದ್ರಿ ಪ್ರಥಮದರ್ಜೆ ಕಾಲೇಜು, 3. ಶಿವಮೊಗ್ಗದ ಎನ್‌ಇಎಸ್ ಕಾಲೇಜು, 4. ಶಿವಮೊಗ್ಗದ ಸಹ್ಯಾದ್ರಿ ಕಲಾ ಮತ್ತು ವಾಣಿಜ್ಯ ಕಾಲೇಜು.

ಥ್ರೋಬಾಲ್: 1. ಹೊಸನಗರದ ಕೊಡಚಾದ್ರಿ ಪ್ರಥಮದರ್ಜೆ ಕಾಲೇಜು, 2. ಇಂದಿರಾಗಾಂಧಿ ಪ್ರಥಮದರ್ಜೆ ಕಾಲೇಜು, 3. ತೀರ್ಥಹಳ್ಳಿಯ ಸರ್ಕಾರಿ ಪ್ರಥಮದರ್ಜೆ ಕಾಲೇಜು, 4. ಚಿಕ್ಕಮಗಳೂರಿನ ಎಂಇಎಸ್ ಕಾಲೇಜು.

ಬಾಲ್‌ಬ್ಯಾಡ್ಮಿಂಟನ್: 1. ಕೊಪ್ಪದ ಕಾಲೇಜು, 2. ತೀರ್ಥಹಳ್ಳಿ ಸರ್ಕಾರಿ ಪ್ರಥಮದರ್ಜೆ ಕಾಲೇಜು, 3. ಚಿಕ್ಕಮಗಳೂರಿನ ಎಸ್‌ಜೆಸಿ ಮಹಿಳಾ ಕಾಲೇಜು, 4. ಶಿವಮೊಗ್ಗದ ಸಹ್ಯಾದ್ರಿ ಕಲಾ ಮತ್ತು ವಾಣಿಜ್ಯ ಕಾಲೇಜು.

ಖೋ-ಖೋ: 1. ಇಂದಿರಾಗಾಂಧಿ ಕಾಲೇಜು, 2. ಸಮರ್ಥ ಶಿವಮೊಗ್ಗ ಮಹಿಳಾ ಕಾಲೇಜು, 3. ಚಿಕ್ಕಮಗಳೂರು ಸರ್ ಎಂ.ವಿ.ಕಲಾ ಮತ್ತು ವಾಣಿಜ್ಯ ಕಾಲೇಜು, 4. ತೀರ್ಥಹಳ್ಳಿ ಸರ್ಕಾರಿ ಪ್ರಥಮದರ್ಜೆ ಕಾಲೇಜು.

ಕ್ಯಾರಂಬೋರ್ಡ್: 1. ಇಂದಿರಾಗಾಂಧಿ ಕಾಲೇಜು, 2. ಶಿವಮೊಗ್ಗದ ಜಯನಗರ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, 3. ಸರ್ ಎಂ.ವಿ.ಕಲಾ ಮತ್ತು ವಾಣಿಜ್ಯ ಕಾಲೇಜು, 4. ಕುವೆಂಪು ವಿವಿ ಕಾಲೇಜು.

ಸ್ಕಿಪ್ಪಿಂಗ್ ಬಾಲ್: 1. ಇಂದಿರಾಗಾಂಧಿ ಕಾಲೇಜು, 2. ಶಿವಮೊಗ್ಗದ ಜಯನಗರ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, 3. ಸರ್ ಎಂ.ವಿ.ಕಲಾ ಮತ್ತು ವಾಣಿಜ್ಯ ಕಾಲೇಜು, 4. ಕುವೆಂಪು ವಿವಿ ಕಾಲೇಜು.

ಶಟಲ್‌ಕಾಕ್: 1. ಇಂದಿರಾಗಾಂಧಿ ಕಾಲೇಜು, 2. ಚಿಕ್ಕಮಗಳೂರಿನ ಎಸ್‌ಜೆಸಿ ಮಹಿಳಾ ಕಾಲೇಜು, 3. ಶಿವಮೊಗ್ಗದ ಜಯನಗರ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, 4. ಸರ್ ಎಂ.ವಿ.ಕಲಾ ಮತ್ತು ವಾಣಿಜ್ಯ ಕಾಲೇಜು. ಕಬಡ್ಡಿ: 1. ಕುವೆಂಪು ವಿವಿ ಕಾಲೇಜು, 2. ಸರ್ ಎಂ.ವಿ.ಕಲಾ ಮತ್ತು ವಾಣಿಜ್ಯ ಕಾಲೇಜು, 3. ಕೊಪ್ಪದ ಸರ್ಕಾರಿ ಪ್ರಥಮದರ್ಜೆ ಕಾಲೇಜು, 4. ಶ್ರೀಮತಿ ಬಾಲಾಜಿ ಮಹಿಳಾ ಕಾಲೇಜು. ಥ್ರೋಬಾಲ್: 1. ಸರ್ ಎಂ.ವಿ.ಕಲಾ ಮತ್ತು ವಾಣಿಜ್ಯ ಕಾಲೇಜು, 2. ಚಿಕ್ಕಮಗಳೂರಿನ ಎಸ್‌ಜೆಸಿ ಮಹಿಳಾ ಕಾಲೇಜು, 3. ಇಂದಿರಾಗಾಂಧಿ ಕಾಲೇಜು, 4. ಸರ್ ಎಂ.ವಿ.ಕಲಾ ಮತ್ತು ವಾಣಿಜ್ಯ ಕಾಲೇಜು.

Scanned by CamScanner

10 ವರ್ಷಗಳ ಹಿಂದೆ ವರದಿಯಾಗಿದ್ದ ವಿಷಯವಾಗಿ

ಚಿಕ್ಕಮಗಳೂರು ಲೋಕಲ್ ಎಕ್ಸ್‌ಪ್ರೆಸ್

ಶೃಂಗೇರಿ ಜೆಸಿಬಿಎಂ ಕಾಲೇಜಿಗೆ ಅಗ್ರಸ್ಥಾನ

■ ಕುವೆಂಪು ವಿಶ್ವವಿದ್ಯಾಲಯ ಮಟ್ಟದ ಅಂತರ ಕಾಲೇಜು ಸಾಂಸ್ಕೃತಿಕ ಸ್ಪರ್ಧೆ

ಚಿಕ್ಕಮಗಳೂರು: ಇಲ್ಲಿನ ಐಡಿಜಿಎಸ್ ಕಾಲೇಜಿನಲ್ಲಿ ಏರ್ಪಡಿಸಿದ್ದ ಕುವೆಂಪು ವಿಶ್ವವಿದ್ಯಾಲಯ ಮಟ್ಟದ ಅಂತರ ಕಾಲೇಜು ಸಾಂಸ್ಕೃತಿಕ ಸ್ಪರ್ಧೆ 'ಐಡಿಜಿಎಸ್ ಸಾಂಸ್ಕೃತಿಕ ವೈಭವ-2015'ರಲ್ಲಿ ಶೃಂಗೇರಿಯ ಜೆಸಿಬಿಎಂ ಕಾಲೇಜು ತಂಡ ಅಗ್ರಸ್ಥಾನ ಗಳಿಸಿದೆ.

ಪ್ರಾಥಮಿಕ ಶಿಕ್ಷಣದಲ್ಲಿ ಕನ್ನಡ ಭಾಷಾ ಮಾಧ್ಯಮ ಕಡ್ಡಾಯ ಕುರಿತ ಚರ್ಚಾ ಸ್ಪರ್ಧೆಯಲ್ಲಿ ಶೃಂಗೇರಿಯ ಜೆಸಿಬಿಎಂ ಕಾಲೇಜಿನ ಪ್ರಮೋದ್ ಭಾರಧ್ವಾಜ್ ಪ್ರಥಮ, ಶಿರಾಳಕೊಪ್ಪ ಕದಂಬ ಪದವಿ ಕಾಲೇಜಿನ ಎಸ್.ಸಂತೋಷ ದ್ವಿತೀಯ, ಚಿಕ್ಕಮಗಳೂರು ಎಂಇಎಸ್ ಕಾಲೇಜಿನ ಬಿ.ಎನ್.ನಮನ ತೃತೀಯ, ಎಂಇಎಸ್‌ನ ಮಾನವಿಗೆ ಸಮಾಧಾನಕರ ಬಹುಮಾನ.

ಭಾವಗೀತೆ ಸ್ಪರ್ಧೆ: ಶೃಂಗೇರಿಯ ಜೆಸಿಬಿಎಂ ಕಾಲೇಜಿನ ಪೂರ್ಣಾನಂದ ಪ್ರಥಮ, ಚಿಕ್ಕಮಗಳೂರು ಎಂಇಎಸ್ ಕಾಲೇಜಿನ ದೀಪ್ತಿರಾಜ್ ದ್ವಿತೀಯ, ತರೀಕೆರೆ ಸರ್ಕಾರಿ



ಚಿಕ್ಕಮಗಳೂರಿನ ಐಡಿಎಸ್‌ಜಿ ಕಾಲೇಜಿನಲ್ಲಿ ಏರ್ಪಡಿಸಿದ್ದ ಸಾಂಸ್ಕೃತಿಕ ವೈಭವ ಕಾರ್ಯಕ್ರಮದಲ್ಲಿ ಸ್ಪರ್ಧಾ ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ.

ಪದವಿ ಕಾಲೇಜಿನ ಅಂಜನಾ ವಸಿಷ್ಠ ತೃತೀಯ, ಆತಿಥೇಯ ಐಡಿಎಸ್‌ಜಿ ಕಾಲೇಜಿನ ರಮ್ಯ ಎಸ್.ರಾವ್‌ಗೆ ಸಮಾಧಾನಕರ ಬಹುಮಾನ.

ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳ 14 ಪದವಿ ಕಾಲೇಜುಗಳ 45 ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ಉಪನ್ಯಾಸಕರಾದ ವಿರೂಪಾಕ್ಷ, ಶಿವಕುಮಾರ್ ಮತ್ತು ಎನ್.ಆರ್.ಆರಾಧ್ಯ ತೀರ್ಪುಗಾರರಾಗಿ ಕಾರ್ಯ ನಿರ್ವಹಿಸಿದ್ದರು.

ನಗರಸಭಾ ಸದಸ್ಯ ಕೆ.ಎಂ.ಕೃಷ್ಣಮೂರ್ತಿ ಸಮಾರೋಪ ಕಾರ್ಯಕ್ರಮದಲ್ಲಿ ಮಾತನಾಡಿ, ಸಾಂಸ್ಕೃತಿಕತೆ ಮನಸ್ಸನ್ನು ಮುದಗೊಳಿಸುತ್ತದೆ. ಕನಕ, ಪುರಂದರ, ಬಸವ, ಸರ್ವಜ್ಞರಂತಹ ಹಲವರು ಸಾಹಿತ್ಯ, ಸಂಗೀತದ ಮೂಲಕ ನಾಡನ್ನು ಭಕ್ತಿ ಪರವಶಗೊಳಿಸಿದ್ದಾರೆ ಎಂದರು.

ಪ್ರಾಚಾರ್ಯೆ ಜರೀನಾ ಕೌಸರ್ ಅಧ್ಯಕ್ಷತೆ ವಹಿಸಿ ಮಾತನಾಡಿ, ಸ್ಪರ್ಧಾ ಮನೋಭಾವ ಬಹುಮಾನಕ್ಕಷ್ಟೇ ಸೀಮಿತವಾಗದೆ ಜೀವನಪೂರ್ತಿ ಇರಬೇಕು. ಶಿಸ್ತು, ತಾಳ್ಮೆ, ಗುರುಹಿರಿಯರನ್ನು ಗೌರವಿಸುವ ಮನೋಭಾವ ಬೆಳೆಸಿಕೊಳ್ಳಬೇಕು ಎಂದರು.

ಸಾಂಸ್ಕೃತಿಕ ವೇದಿಕೆ ಸಂಚಾಲಕ ಡಾ. ಕೆ.ಎ.ರಾಜಣ್ಣ ಮಾತನಾಡಿ, ಸೋಲು ಗೆಲುವನ್ನು ಕ್ರೀಡಾತ್ಮಕವಾಗಿ ತೆಗೆದುಕೊಳ್ಳಬೇಕು. ತಪ್ಪು ತಿದ್ದಿಕೊಂಡು ನಡೆದಾಗ ಮುಂದೆ ಯಶಸ್ಸು ನಮ್ಮದಾಗುತ್ತದೆ ಎಂದು ಹೇಳಿದರು.

ಗ್ರಂಥಪಾಲಕ ನರೇಂದ್ರ, ಕಾಲೇಜು ಸಾಂಸ್ಕೃತಿಕ ವೇದಿಕೆ ಸದಸ್ಯ ಡಾ. ಕೆ.ಎಂ.ಜಗದೀಶ್, ಉಪನ್ಯಾಸಕರಾದ ಚಾಂದಿನಿ, ಪ್ರೊ. ಕೆ.ಸಿ.ಜಗದೀಶ್, ಪ್ರೊ. ಯು.ಸಿ.ಮಹೇಶ್, ಪ್ರೊ. ಮರಿಯಾ ಪಿಂಟೋ ಮತ್ತಿತರರಿದ್ದರು.

Scanned by CamScanner

ಮನಸ್ಸು-ಹೃದಯ ತಟ್ಟುವ ಕಾವ್ಯ

■ ಕವಿತೆ ನೀಡುವ ಮಾನಸಿಕ, ಆಂತರಿಕ ಶಕ್ತಿ ಅಗಾಧ ■ ಕವಯತ್ರಿ ಸುಕನ್ಯಾ ಅಭಿಮತ

ಶೃಂಗೇರಿ: ಕವಿತೆ ಎಂಬುದು ಸಂವೇದನೆ. ಆದಕ್ಕೆ ಅಕ್ಷರ ರೂಪದೊಂದಿಗೆ ಇಂಪಾದ ಪದಗಳನ್ನು ಜೋಡಿಸಿದಾಗ ಉತ್ತಮ ಕವಿತೆ ಆರಂಭವಾಗುತ್ತದೆ ಎಂದು ಕವಯತ್ರಿ ಸುಕನ್ಯಾ ಕಳಸ ಹೇಳಿದರು.

ಪಟ್ಟಣದ ಜೆಸಿಬಿಎಂ ಕಾಲೇಜಿನಲ್ಲಿ ಬುಧವಾರ ಕಾಲೇಜಿನ ಕಲಾ ಸಂಘ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಜಿಲ್ಲಾ ಮಟ್ಟದ ಕವಿಗೋಷ್ಠಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಬರವಣಿಗೆಯಲ್ಲಿ ಭೌತಿಕ ಕಸರತ್ತು ಮುಖ್ಯ. ಕಾವ್ಯಕ್ಕೆ ಹೃದಯ ಭಾಷೆ ಮುಖ್ಯ. ಜಾನಪದ ಹಾಡುಗಳಲ್ಲಿ ಕಾವ್ಯದ ಬೇರಿದೆ. ಇದರಿಂದಾಗಿಯೇ ಅವು ಸುಲಭವಾಗಿ ಹೃದಯ ತಟ್ಟುತ್ತವೆ ಎಂದರು.

ಕವಿತೆಯಲ್ಲಿ ಜೀವಂತಿಕೆ, ಸಮಾಜಮುಖಿ ಚಿಂತನೆಗಳು ಇದ್ದಾಗ ಅದು ಓದುಗರ ಮನಸ್ಸನ್ನು ತಟ್ಟುತ್ತದೆ. ಕವಿತೆ ತಾಯಿಯಿದ್ದಂತೆ ಮನಸ್ಸು ಹಾಗೂ ಹೃದಯವನ್ನು ಬೆಸೆಯುವ ಅದ್ಭುತ ಶಕ್ತಿ ಅದಕ್ಕಿದೆ. ಸಂಪತ್ತು ಬಾಹ್ಯ ಶ್ರೀಮಂತಿಕೆ ನೀಡಬಲ್ಲದೇ ಹೊರತು ಆತ್ಮತೃಪ್ತಿ ನೀಡಲು ಸಾಧ್ಯವಿಲ್ಲ. ಆದರೆ ಕವಿತೆ ನೀಡುವ ಮಾನಸಿಕ, ಆಂತರಿಕ ಶಕ್ತಿ ಎಲ್ಲಕ್ಕಿಂತ ಮಿಗಿಲಾದುದು ಎಂದು ಪ್ರತಿಪಾದಿಸಿದರು.



ಶೃಂಗೇರಿಯ ಜೆಸಿಬಿಎಂ ಕಾಲೇಜಿನಲ್ಲಿ ನಡೆದ ಜಿಲ್ಲಾ ಮಟ್ಟದ ಕವಿಗೋಷ್ಠಿಯಲ್ಲಿ ಕವಯತ್ರಿ ಸುಕನ್ಯಾ ಕಳಸ ಅವರನ್ನು ಸನ್ಮಾನಿಸಲಾಯಿತು.

ಜೆಸಿಬಿಎಂ ಕಾಲೇಜು ಪ್ರಾಚಾರ್ಯ ಡಾ. ಎಚ್.ಸಿ.ವೀರಪ್ಪಗೌಡ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಸಹಜ ಬರವಣಿಗೆಯುಳ್ಳ ಸಾಹಿತ್ಯ ಮನಸ್ಸಿಗೆ ಮುದ ನೀಡುತ್ತದೆ. ಭೌತಿಕ ವಸ್ತುಗಳನ್ನು ನಾವು ಕೂಡಿಟ್ಟರೆ ಜವಾಬ್ದಾರಿ, ಆತಂಕ ಜಾಸ್ತಿ. ಸಾಂಸ್ಕೃತಿಕ ಹಾಗೂ ಸಾಹಿತ್ಯ ಮೌಲ್ಯಗಳನ್ನು ಗಳಿಸಿಕೊಂಡರೆ ಅಂತರಂಗದ ಸಂಪತ್ತನ್ನು ವೃದ್ಧಿಸಿ ಸಂತೃಪ್ತಿ ಕಾಣಲು ಸಾಧ್ಯ ಎಂದರು.

ಜೆಸಿಬಿಎಂ ವಲಯ ಕಾಲೇಜು ಪ್ರಾಚಾರ್ಯ ಡಾ. ಗಿರಿಧರ ಶಾಸ್ತ್ರಿ ಮಾತನಾಡಿ, ಕವಿ ಅದವನಿಗೆ ಸೂಕ್ಷ್ಮತೆ ಇರಬೇಕು. ಭಾಷಾ ಪ್ರೌಢಿಮೆಯಿಂದ ಕಾವ್ಯ ರುಚಿಸಬೇಕು. ಅಂಥ ಕವಿತೆ ಹೆಚ್ಚು ಮೌಲ್ಯ ಪಡೆಯುತ್ತದೆ ಎಂದು ಹೇಳಿದರು.

ಯುವ ಕವಿಗಳಾದ ರೂಪ, ಕಿರಣ್, ಅವಿನಾಶ್ ಕೋಟ್ಯಾನ್, ಸಂಪತ್ ಸಿರಿಮನೆ, ಕೊಪ್ಪದ ಸುಬ್ರಹ್ಮಣ್ಯ, ನಮನ, ಯೋಗಾನಂದ, ದೀಪ ಬೆಟ್ಟಗೆರೆ, ನಂದೀಶ್, ನವೀನ್ ಪೈಸ್ಯಮ್ಮ, ಸುಕನ್ಯಾ ಅಣ್ಣಾಪುರ, ಗಣೇಶ್, ರಕ್ಷಿತಾ, ಎಸ್.ಶ್ರುತಿ ಕವನ ವಾಚಿಸಿದರು.

ಸಾಹಿತಿ ಎಚ್.ಎಂ.ನಾಗರಾಜರಾವ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ರಮೇಶ್, ಚುಟುಕು ಸಾಹಿತ್ಯ ಪರಿಷತ್ ತಾಲೂಕು ಅಧ್ಯಕ್ಷೆ ಜ್ಯೋತಿ ಉಪಸ್ಥಿತರಿದ್ದರು.

ಕುವೆಂಪು, ಚಂದ್ರಶೇಖರ ಕಂಬಾರ, ಜಿ.ಎಸ್. ಶಿವರುದ್ರಪ್ಪ, ದ.ರಾ.ಬೇಂದ್ರೆ ಮುಂತಾದ ಕವಿಗಳು ನಮಸ್ಸಯತೆ ಸಾಧಿಸಿ ಕಾವ್ಯ ಕಟ್ಟಿದ್ದರು. ತಮ್ಮ ಅನುಭವಗಳಿಗೆ ಮೂರ್ತರೂಪ ನೀಡುತ್ತ ಚಿಂತನ ಶೀಲತೆಯಿಂದ ಕವಿತೆ ಬರೆದರು. ಅಂಥ ಹಿರಿಯ ಕವಿಗಳನ್ನು ಆದರ್ಶವಾಗಿಟ್ಟುಕೊಂಡು ಯುವ ಕವಿಗಳು ಅಧ್ಯಯನಶೀಲರಾಗಿ ಕವಿತೆ ಬರೆದಾಗ ಉತ್ತಮ ಕಾವ್ಯ ಹೊರಹೊಮ್ಮಲು ಸಾಧ್ಯ.

ಎಚ್.ಎಂ. ನಾಗರಾಜ್, ಸಾಹಿತಿ

Scanned by CamScanner

ಕ. ಪ್ರ. 28.2.15



ಪ್ರತಿಭಾ ಪರೀಕ್ಷೆ ಐದನೇ ರ್‍ಯಾಂಕ್

ಬಾಳೆಹೊನ್ನೂರು: 2014 ನೇ ಸಾಲಿಗಾಗಿ ಚಿತ್ರದುರ್ಗದ ಸಿರಿಗನ್ನಡ ಪ್ರಕಾಶನದಿಂದ ನಡೆದ ಹದಿನಾಲ್ಕನೇ ರಾಜ್ಯ ಮಟ್ಟದ ಕನ್ನಡ ಪ್ರತಿಭಾ ಪರೀಕ್ಷೆಯಲ್ಲಿ ಇಲ್ಲಿನ ಜೆಸಿಬಿಎಂ ಪದವಿ ಪೂರ್ವ ಕಾಲೇಜಿನ ದ್ವಿತೀಯ ಪಿಯುಸಿ ವಿದ್ಯಾರ್ಥಿನಿ ಎಚ್.ಎಸ್.ಶಾಂಭವಿ ಐದನೇ ರ್‍ಯಾಂಕ್ ಗಳಿಸಿ ಚಿನ್ನದ ಪದಕ ಪಡೆದಿದ್ದಾರೆ. ಈಕೆ ಮೂಡಿಗೆರೆ ತಾಲೂಕು ಮಾವಿನಕೆರೆ ಗ್ರಾಮ ಹೊರಟಿಮನೆಯ ಕೃಷಿಕ, ಬುದ್ದಳೆಗಾರ ಎಚ್.ಕೆ.ಸುಬ್ರಹ್ಮಣ್ಯ ಮತ್ತು ಗಾಯತ್ರಿ ದಂಪತಿ ಪುತ್ರಿ.

Scanned by CamScanner

ಪ್ರಾಧ್ಯಾಪಕರ ಸಮಾವೇಶ ನಾಳೆ

ವಿ.ಕ ೨೫-೨೪

ಶೃಂಗೇರಿ: ಜೆಸಿಬಿಎಂ ಕಾಲೇಜಿನಲ್ಲಿ ಮಾ.1ರಂದು ಅಕಾಡೆಮಿ ಆಫ್ ಜನರಲ್ ಎಜುಕೇಷನ್ ವ್ಯಾಪ್ತಿಯ ಕಾಲೇಜುಗಳ ಪ್ರಾಧ್ಯಾಪಕರ ಸಮಾವೇಶ ಆಯೋಜಿಸಲಾಗಿದೆ. ಅಕಾಡೆಮಿ ಅಧ್ಯಕ್ಷ ಎಚ್.ಎಸ್.ಬಲ್ಲಾಳ್ ಅಧ್ಯಕ್ಷತೆ ವಹಿಸಲಿದ್ದು, ರಿಜಿಸ್ಟ್ರಾರ್ ಡಾ.ರಾಮದಾಸ್ ಕಾರ್ಯಕ್ರಮ ಉದ್ಘಾಟಿಸುವರು. ಬೆಂಗಳೂರಿನ ಜೈನ್ ವಿವಿ ಹ್ಯೂಮೆನ್ ನೆಟ್‌ವರ್ಕಿಂಗ್ ಅಕಾಡೆಮಿ ನಿರ್ದೇಶಕ ಪ್ರೊ.ಕೆ.ರಘೋತ್ತಮರಾವ್, ಮಣಿಪಾಲ ವಿವಿ ರಿಜಿಸ್ಟ್ರಾರ್ ಡಾ. ಜಿ.ಕೆ.ಪ್ರಭು, ಅಕಾಡೆಮಿ ಆಡಳಿತಾಧಿಕಾರಿ ಡಾ. ಎಚ್.ಶಾಂತಾರಾಂ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

Scanned by CamScanner

ಉದಯವಾಣಿ ಸುದ್ದಿಮಾಧ್ಯಮ ಫೆಬ್ರವರಿ 23, 2015



ಸಾಂಸ್ಕೃತಿಕ ಸ್ಪರ್ಧೆ

ಶೃಂಗೇರಿ: ಜಿಸಿಬಿಎಂ ಕಾಲೇಜಿನ ಸುವರ್ಣಶೃಂಗ ಸಂಭ್ರಮದ ಅಂಗವಾಗಿ ಆಯೋಜಿಸಿದ್ದ ಅಂತರ್‌ಕಾಲೇಜು ಸಾಂಸ್ಕೃತಿಕ ಸ್ಪರ್ಧೆಯನ್ನು ಉದ್ಘಾಟಿಸಿ ಮೀಗಾ ಶ್ರೀನಿವಾಸ ಮಾತನಾಡಿದರು.

Scanned by CamScanner



ಅಭಿನಂದನೆ

ಶೃಂಗೇರಿ:
ಹೊಸನಗರದಲ್ಲಿ ನಡೆದ
ಕುವೆಂಪು ವಿವಿ ಅಂತರ್
ಕಾಲೇಜು ವಾಲಿಬಾಲ್
ಪಂದ್ಯಾವಳಿಯಲ್ಲಿ
ಜೆಸಿಬಿಎಂ ಕಾಲೇಜಿನ
ವಿದ್ಯಾರ್ಥಿಗಳು ತೃತೀಯ
ಸ್ಥಾನ ಗಳಿಸಿದ್ದು
ಪ್ರಾಚಾರ್ಯ ಡಾ।
ವೀರಪ್ಪ ಗೌಡ
ಅಭಿನಂದಿಸಿದರು.

Scanned by CamScanner

ಜೀವನದಲ್ಲಿ ಆತ್ಮವಿಶ್ವಾಸ ಬೆಳೆಸಿಕೊಳ್ಳಿ

■ ವಿಕ ಸುದ್ದಿಲೋಕ ಶೃಂಗೇರಿ

ಗುರಿ ಹಾಗೂ ಗುರುವಿಲ್ಲದ ಜೀವನ ವ್ಯರ್ಥ. ತಮ್ಮೊಳಗಿನ ಪ್ರತಿಭೆಯನ್ನು ಅನಾವರಣಗೊಳಿಸಿದಾಗ ಮಾತ್ರ ಆತ್ಮವಿಶ್ವಾಸ ಬೆಳೆಯಲು ಸಾಧ್ಯ ಎಂದು ಉದ್ಯಮಿ ಮೀಗಾ ಶ್ರೀನಿವಾಸ್ ಹೇಳಿದರು.

ಅವರು ಶುಕ್ರವಾರ ಜೆಸಿಬಿಎಂ ಕಾಲೇಜಿನ ಸುವರ್ಣಶೃಂಗ ಸಂಭ್ರಮದ ಅಂಗವಾಗಿ ಆಯೋಜಿಸಿದ್ದ ಅಂತರ ಕಾಲೇಜು ಸಾಂಸ್ಕೃತಿಕ ಸ್ಪರ್ಧೆ ಉದ್ಘಾಟಿಸಿ ಮಾತನಾಡಿದರು.

ಕ್ಯಾಂಪಸ್

ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಗುರಿ ಇಟ್ಟುಕೊಳ್ಳಬೇಕು. ಆ ಧ್ಯೇಯವನ್ನು ತಲುಪಲು ಛಲದಿಂದ ಹೋರಾಟ ನಡೆಸಬೇಕು. ಆಗ ಮಾತ್ರ ಬದುಕಿಗೆ ಅರ್ಥವಿರುತ್ತದೆ. ಸಾಂಸ್ಕೃತಿಕ ಅಭಿವೃದ್ಧಿ ಬಗ್ಗೆ ಬೆಳೆಸುವುದು ಯುವ ಪೀಳಿಗೆಯವರ ಪ್ರಮುಖ ಕರ್ತವ್ಯವಾಗಿದೆ. ಇಂತಹ ಮನೋಭಾವನೆಯಿಂದ ಅಂತರಿಕ ಹಾಗೂ ಮಾನಸಿಕ ಬೆಳವಣಿಗೆಯಾಗುತ್ತದೆ ಎಂದರು.

ವಿಕ ಸುದ್ದಿಲೋಕ



ಶೃಂಗೇರಿ ಜೆಸಿಬಿಎಂ ಕಾಲೇಜಿನ ಸುವರ್ಣಶೃಂಗ ಸಂಭ್ರಮದ ಅಂಗವಾಗಿ ಆಯೋಜಿಸಿದ್ದ ಅಂತರ ಕಾಲೇಜು ಸಾಂಸ್ಕೃತಿಕ ಸ್ಪರ್ಧೆಯನ್ನು ಉದ್ಘಾಟಿಸಿ ಮೀಗಾ ಶ್ರೀನಿವಾಸ್ ಮಾತನಾಡಿದರು.

ಕಾಲೇಜಿನ ವ್ಯವಸ್ಥಾಪಕ ಡಾ.ಎಸ್. ಸ್ವಾಮಿರಾವ್ ಡಾ.ಸಿ.ವಿ.ಗುರುಪ್ರಸಾದ್ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ಪ್ರಥಮ ಬಿ.ವೀರಭದ್ರಗೌಡ ಅಧ್ಯಕ್ಷತೆ ವಹಿಸಿದ್ದರು. ಕನ್ನಡ ಪ್ರಾಧ್ಯಾಪಕಿ ಅನಿತಾ ಮೆಳ್ಳೋಡು ಸ್ವಾಗತವನ್ನು ಸಾಗರದ ಇಂದಿರಾಗಾಂಧಿ ಜೆಸಿಬಿಎಂ ಸಹಪೂರ್ವ ಕಾಲೇಜಿನ ಪ್ರಾಂಶುಪಾಲರು. ಪದಿನೆಟು ಕಾಲೇಜುಗಳು ಕಾಲೇಜು ಪಡೆಯುತ್ತು.

Scanned by CamScanner

ವಿಕಸನ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಸಲಹೆಸಿ, ದರ್ಶನ ಬಲಬಿಸಿದ್ದರು.

ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಪ್ರಕಟವಾಗಿರುವ ಚಿತ್ರ

ವಿಕಚಿತ್ರಲೋಕ



ಹೊಸನಗರದಲ್ಲಿ ಇತ್ತೀಚೆಗೆ ನಡೆದ ಎರಡು ದಿನದ ಕುವೆಂಪು ವಿಶ್ವವಿದ್ಯಾನಿಲಯ ಅಂತರ ಕಾಲೇಜು ವಾಲಿಬಾಲ್ ಪಂದ್ಯಾವಳಿಯಲ್ಲಿ ಶೃಂಗೇರಿ ಜೆಸಿಬಿಎಂ ಕಾಲೇಜಿನ ವಿದ್ಯಾರ್ಥಿಗಳು ತೃತೀಯ ಸ್ಥಾನ ಗಳಿಸಿದ್ದು, ಪ್ರಾಚಾರ್ಯ ಡಾ.ವೀರಪ್ಪಗೌಡ ಅಭಿನಂದಿಸಿದರು.

Scanned by CamScanner

ಸ್ಪರ್ಧಾತ್ಮಕ ಮನೋಭಾವ ಅವಶ್ಯ

ಸುವರ್ಣ ಶೃಂಗ ಸಂಭ್ರಮ ಕಾರ್ಯಕ್ರಮದಲ್ಲಿ ಶ್ರೀನಿವಾಸ್



ಶೃಂಗೇರಿ ಜೆಸಿಬಿಎಂ ಕಾಲೇಜಿನ ಸುವರ್ಣ ಶೃಂಗ ಸಂಭ್ರಮ ಕಾರ್ಯಕ್ರಮದಲ್ಲಿ ಶ್ರೀನಿವಾಸ್ ಮಾತನಾಡಿದರು.

ಶೃಂಗೇರಿ: ಸಮಾಜದಲ್ಲಿ ಕಲೆ, ಸಂಸ್ಕೃತಿ, ಸಾಹಿತ್ಯಗಳು ವ್ಯಕ್ತಿತ್ವ ಅರಳಿಸಿ, ಹೊಳಪು ತರುತ್ತವೆ ಎಂದು ಶ್ರೀನಿವಾಸ್ ಎಚ್. ಅಭಿಪ್ರಾಯಪಟ್ಟರು.

ಪಟ್ಟಣದ ಶ್ರೀ ಜೆಸಿಬಿಎಂ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಸುವರ್ಣ ಶೃಂಗ ಸಂಭ್ರಮ ಅಂತರ ಕಾಲೇಜು ಸಾಂಸ್ಕೃತಿಕ ಸ್ಪರ್ಧೆ ಉದ್ಘಾಟಿಸಿ, ಇಂದು ಪ್ರತಿ ಕ್ಷೇತ್ರದಲ್ಲಿ ಸ್ಪರ್ಧೆ ಅನಿವಾರ್ಯ. ಇಂಥ ಸಂದರ್ಭ ವಿದ್ಯಾರ್ಥಿಗಳು ಅರಿವು ಹೆಚ್ಚಿಸಿಕೊಂಡು ಮುನ್ನಡೆಯಬೇಕು ಎಂದರು.

ಸಾಂಸ್ಕೃತಿಕ, ಕ್ರೀಡಾ, ಸಾಹಿತ್ಯ ಚಟುವಟಿಕೆಗಳು ಬಿಡುವು ದೊರಕಿಸಿಕೊಳ್ಳಲು ಸಹಕಾರಿಯಾಗಿವೆ. ವಿದ್ಯಾರ್ಥಿಗಳು ಒಮ್ಮೆಯಾದರೂ ಭೇಟಿ ನೀಡಿ ಸಾಧಕರ ಪುಸ್ತಕಗಳನ್ನು ಓದಿ ಸಾಮಾನ್ಯ ಜ್ಞಾನ ಹೆಚ್ಚಿಸಿಕೊಳ್ಳಬೇಕು. ಮೊಬೈಲ್ ಮೋಹ ಬಿಟ್ಟು, ಸಮಯ ಪರಿಪಾಲಕರಾಗುವುದನ್ನು ಬೆಳೆಸಿಕೊಳ್ಳಬೇಕು. ಉತ್ತಮ ಸಂಸ್ಕೃತಿ ಮಾನವೀಯತೆಯನ್ನು ಉನ್ನತಿಗೆ ಕೊಂಡೊಯ್ಯುತ್ತದೆ. ಸ್ಪರ್ಧೆಗಳಲ್ಲಿ ಭಾಗವಹಿಸಿ ಹಮ್ಮಿರುವ ವಿವಿಧ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳಬೇಕು. ಸೋಲು ಗೆಲುವು ಮುಖ್ಯವಲ್ಲ, ಸಿಗುವ ಅವಕಾಶಗಳನ್ನು ಸದುಪಯೋಗ ಮಾಡಿಕೊಳ್ಳಬೇಕು ಎಂದರು.

ಜೆಸಿಬಿಎಂ ಕಾಲೇಜಿನ ವ್ಯವಸ್ಥಾಪಕ ಎಚ್.ಸಿ. ವೀರಭದ್ರಗೌಡ ಅಧ್ಯಕ್ಷತೆ ವಹಿಸಿದ್ದರು. ಜೆಸಿಬಿಎಂ ಪದವಿಪೂರ್ವ ಕಾಲೇಜಿನ ವ್ಯವಸ್ಥಾಪಕಿ ಡಾ. ಸಿ.ಎಂ.ಗಿರಿಧರಶಾಸ್ತ್ರಿ ಅನಿತಾ ಮತ್ತಿತರರು ಉಪಸ್ಥಿತರಿದ್ದರು.

ಸ್ಪರ್ಧೆಯಲ್ಲಿ ಒಟ್ಟು 17 ಕಾಲೇಜುಗಳ ತಂಡಗಳು ಪಾಲ್ಗೊಂಡಿದ್ದವು. ಸಾಗರದ ಇಂದಿರಾ ಗಾಂಧಿ ಕಾಲೇಜು ಸಮಗ್ರ ಪ್ರಶಸ್ತಿ ಪಡೆದುಕೊಂಡಿತು.

Scanned by CamScanner



ಶೃಂಗೇರಿ: ಬಿಜಿಎಸ್ ಶಿಕ್ಷಣ ಸಂಸ್ಥೆ ಆವರಣದಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮಕ್ಕಳು ಓದು ಮತ್ತು ಚಿಂತನೆ ಗೋಷ್ಠಿಯಲ್ಲಿ ಜೆಸಿಬಿಎಂ ಕಾಲೇಜಿನ ವಿದ್ಯಾರ್ಥಿ ಕಿರಣ ಕವನ ವಾಚಿಸಿದರು.

ಅಂಕ ಗಳಿಕೆಯೊಂದೇ ಗುರಿಯಾಗದಿರಲಿ

ಶೃಂಗೇರಿ: ಮಕ್ಕಳಿಗೆ ಪಠ್ಯ ಪುಸ್ತಕ ಓದುವ ಅಗತ್ಯವಿದೆ. ಅದು ಜ್ಞಾನವನ್ನು ನೀಡಬಹುದು. ನಿರಂತರ ಜ್ಞಾನ ಎಲ್ಲರಿಗೂ ಬೇಕಾಗಿರುವ ಪ್ರಾಮುಖ್ಯ ಅಂಶ. ಅದನ್ನು ಇಂದಿನ ಶಿಕ್ಷಣ ಪದ್ಧತಿಯಲ್ಲಿ ಕೇವಲ ಅಂಕ ಗಳಿಸುವುದೊಂದೆ ಗುರಿಯಾಗಿದೆ ಎಂದು ಜೆಸಿಬಿಎಂ ಕಾಲೇಜಿನ ವಿದ್ಯಾರ್ಥಿ ಕಿರಣ ಹೇಳಿದರು.

ಅವರು ಭಾನುವಾರ ಕಸಾಪ ಸಮ್ಮೇಳನದಲ್ಲಿ ಓದು ಮತ್ತು ಚಿಂತನೆ ಎಂಬ ವಿಷಯದ ಪ್ರಬಂಧ ಮಂಡಿಸಿ ಮಾತನಾಡಿದರು.

ಓದು ಸಂಸ್ಕಾರ ಮತ್ತು ಸಂಸ್ಕೃತಿಯನ್ನು ಕಲಿಸಬೇಕು. ವಿಚಾರವನ್ನು ತಿಳಿದುಕೊಂಡು ವೇದಿಕೆಯಲ್ಲಿ ಅದನ್ನು ಮಂಡಿಸಿ ಕೈ ಚಪ್ಪಾಳೆ ಗಿಟ್ಟಿಸುವ ಪ್ರವೃತ್ತಿ ಹೆಚ್ಚಿದೆ. ವಿಚಾರವನ್ನು ಮಂಡಿಸುವರು ಅದನ್ನು ಜೀವನದಲ್ಲಿ ಆಚರಿಸಬೇಕು. ತಂದೆ, ತಾಯಿಯನ್ನು ಗೌರವಿಸದ ಶಿಕ್ಷಣದಿಂದ ಸಾವು ಪಡೆಯುವ ಹಸಿಲ್ಲ ಕೂಸ್ಕ ರಾಗಾಗಿ ವೃದ್ಧಾಶ್ರಮ ತಲೆ ಎತ್ತಿ ನಿಂತಿವೆ. ಸ್ಪರ್ಧಿಸುವ ಮನೋಭಾವ ನಮ್ಮಲ್ಲಿ ಕಡಿಮೆಯಾಗಿದೆ. ಸಮಾಜದ ಬಗ್ಗೆ ನಮಗೇಕೆ? ಎಂಬ ಸ್ವಾರ್ಥದ ಚಿಂತನೆಗಳಿಂದ ನಾವು ದೂರವಾದಾಗ ಮಾತ್ರ ಸಮಾಜದ ಜಟಿಲ ಸಮಸ್ಯೆಗಳು ದೂರವಾಗಲು ಸಾಧ್ಯ. ಶಿಕ್ಷಣ ಎಂದರೆ ಡಿಗ್ರಿ, ಡಿಗ್ರಿ ಅಂತರಾಳದಲ್ಲಿದೆ. ಅದನ್ನು ಪರಿಶೋಧಿಸಿದಾಗ ಚಿಂತನೆಗಳು ಮೂಡಲು ಸಾಧ್ಯ ಎಂದರು.

ಸಮ್ಮೇಳನಾಧ್ಯಕ್ಷ ಶೃಂಗೇರಿ ರಾಮಣ್ಣ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಪ್ರಬಂಧ ಮಂಡಿಸಿದರು. ಡಾ.ಎಲ್ಲೂಸ್.ಬಿ.ಪಿಗಾಸಿಗೆ ಸೇವಾ ಪುರಸ್ಕಾರ ನೀಡಿ ಗೌರವಿಸಲಾಯಿತು.

Scanned by CamScanner

ಎನ್‌ಸಿಸಿ ಕೆಡೆಟ್‌ಗಳಿಂದ ಸ್ವಚ್ಛತಾ ಅಭಿಯಾನ

ಶೃಂಗೇರಿ: ಸ್ವಚ್ಛ ಭಾರತ ಅಭಿಯಾನ ಕಾರ್ಯಕ್ರಮದಡಿ ಎಲ್ಲರೂ ಪೇಟೆ ಪಟ್ಟಣ ಇತರೆ ಸ್ಥಳಗಳನ್ನು ಮಾತ್ರ ಸ್ವಚ್ಛಗೊಳಿಸುತ್ತಿದ್ದೇವೆ. ಆದರೆ ಈ ರೀತಿ ವನ್ಯಜೀವಿಗಳ ಸ್ಥಳಗಳಲ್ಲಿ ಶ್ರಮದಾನ ಮಾಡುವುದರಿಂದ ಪ್ಲಾಸ್ಟಿಕ್‌ನಿಂದ ವನ್ಯಜೀವಿಗಳಿಗಾಗುವ ತೊಂದರೆ ಸ್ವಲ್ಪಮಟ್ಟಗೆ ತಡೆಯಬಹುದು ಎಂದು ವನ್ಯಜೀವಿ ವಿಭಾಗದ ವಲಯಾರಣ್ಯಾಧಿಕಾರಿ ಸುಬ್ರಮಣ್ಯ ಹೇಳಿದರು.

ಅವರು ಕೆರೆಕಟ್ಟೆಯಲ್ಲಿ ಶ್ರೀ ಜೆಸಿಬಿಎಂ ಕಾಲೇಜಿನ ಎನ್‌ಸಿಸಿ ಕೆಡೆಟ್‌ಗಳು ಗಣರಾಜ್ಯೋತ್ಸವ ಅಂಗವಾಗಿ ಕುದುರೆಮುಖ ರಾಷ್ಟ್ರೀಯ ಉದ್ಯಾನವನದಲ್ಲಿ ನಡೆಸಿದ ಸ್ವಚ್ಛ ಭಾರತ ಅಭಿಯಾನ ಕಾರ್ಯಕ್ರಮದಲ್ಲಿ ಮಾತನಾಡಿದರು.

ಪರಿಸರದ ಸ್ವಚ್ಛತೆ ಕಾಪಾಡುವುದು ಮುಖ್ಯವಾಗಿದ್ದು, ಇದರಿಂದ ಪ್ರಾಣಿಗಳಿಗೆ ನೈಸರ್ಗಿಕ ಅರಣ್ಯ ದೊರಕುತ್ತವೆ ಎಂದರು.

ಕಾರ್ಯಕ್ರಮದಲ್ಲಿ 60 ಕೆಡೆಟ್‌ಗಳು ವಿವಿಧ ತಂಡಗಳಾಗಿ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯಲ್ಲಿ ಸಂಚರಿಸಿ ರಸ್ತೆಯ ಎರಡು ಬದಿ ಬಿದ್ದಿರುವ ಪ್ಲಾಸ್ಟಿಕ್ ಮತ್ತು ಬಾಟಲಿಗಳನ್ನು 182 ಚೀಲಗಳಲ್ಲಿ ಸಂಗ್ರಹಿಸಿದರು.

ನಂತರ ಎಲ್ಲ ಕೆಡೆಟ್‌ಗಳು ಹನುಮನ ಗುಂಡಿ ಜಲಪಾತಕ್ಕೆ ಚಾರಣ ಮಾಡಿದರು. ಕಾರ್ಯಕ್ರಮದಲ್ಲಿ ಎನ್‌ಸಿಸಿ ಅಧಿಕಾರಿ ಲೆಫ್ಟಿನೆಂಟ್ ಡಾ. ಕುಮಾರಸ್ವಾಮಿ ಉಡುಪ ಹಾಗೂ ವನ್ಯಜೀವಿ ವಿಭಾಗದ ಸಿಬ್ಬಂದಿ ಹಾಜರಿದ್ದರು.



ಶೃಂಗೇರಿ ಜೆಸಿಬಿಎಂ ಕಾಲೇಜಿನ ಎನ್‌ಸಿಸಿ ಕೆಡೆಟ್‌ಗಳು ಶ್ರಮದಾನದ ಮೂಲಕ ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಮೂಲಕ ಹಾದು ಹೋಗುವ ರಸ್ತೆಯನ್ನು ಸ್ವಚ್ಛಗೊಳಿಸಿದರು.

Scanned by CamScanner

ಪ್ರಜಾವಾಣಿ ಕನ್ನಡ ದಿನಪತ್ರಿಕೆ ಮಂಗಳವಾರ 10 ಫೆಬ್ರುವರಿ 2015

ಜೆಸಿಬಿಎಂ ಕಾಲೇಜಿನಲ್ಲಿ ಕ್ಯಾಂಪಸ್ ಸಂದರ್ಶನ

ಶೃಂಗೇರಿ: ಜೆಸಿಬಿಎಂ ಕಾಲೇಜಿನಲ್ಲಿ ಇನ್ಫೋಸಿಸ್ ಸಂಸ್ಥೆಯಿಂದ ನಡೆದ ಕ್ಯಾಂಪಸ್ ಸಂದರ್ಶನದಲ್ಲಿ ರಾಜ್ಯದ ವಿವಿಧ ಕಾಲೇಜಿನ 350ಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಕಾರ್ಯಕ್ರಮವನ್ನು ಕಾಲೇಜಿನ ಪ್ರಾಂಶುಪಾಲ ಡಾ.ಎಚ್.ಸಿ.ವೀರಪ್ಪ ಗೌಡ ಉದ್ಘಾಟಿಸಿ ಮಾತನಾಡಿ, ಎಲ್ಲ ವಿದ್ಯಾರ್ಥಿಗಳು ಸಂದರ್ಶನದ ಸಮರ್ಪಕವಾಗಿ ಪಡಿಸಿಕೊಂಡು ಅವರ ವೃತ್ತಿ ಜೀವನದ ಭದ್ರ ಬುನಾದಿ ಹಾಕಿಕೊಳ್ಳುವಂತೆ ತಿಳಿಸಿದರು.

ಸುವರ್ಣ ಮಹೋತ್ಸವದ ಈ ಸಂದರ್ಭ ಮಲೆನಾಡಿನ ನಮ್ಮ ಕಾಲೇಜಿಗೆ ಇನ್‌ಫೋಸಿಸ್ ಸಂಸ್ಥೆ ಭೇಟಿ ನೀಡಿ ನಮ್ಮ ವಿದ್ಯಾರ್ಥಿಗಳ ಆಯ್ಕೆಗೆ ನೆರವಾಗಿದ್ದು ಬೇರೆ ಸಂಸ್ಥೆಗಳೂ ಮಲೆನಾಡಿನತ್ತ ಮುಖ ಮಾಡುವಂತೆ ಮಾಡಿದೆ ಎಂದರು. ಮುಂದಿನ ದಿನಗಳಲ್ಲಿ ಕಾಲೇಜಿಗೆ ಹಲವಾರು ಸಂಸ್ಥೆಗಳು ಕ್ಯಾಂಪಸ್ ಆಯ್ಕೆಗಾಗಿ ಆಗಮಿಸುತ್ತವೆ ಎಂದು ವಿದ್ಯಾರ್ಥಿಗಳನ್ನು ತಿಳಿಸಿದರು.

ವಿವಿಧ ಕಾಲೇಜುಗಳ 31 ವಿದ್ಯಾರ್ಥಿಗಳು ಆಯ್ಕೆಯಾಗಿದ್ದು, ಜೆಸಿಬಿಎಂ ಕಾಲೇಜಿನ 15 ವಿದ್ಯಾರ್ಥಿಗಳ ಆಯ್ಕೆ ವಿಶೇಷವಾಗಿರುತ್ತದೆ. ಆಯ್ಕೆಯಾದ ಎಲ್ಲ ವಿದ್ಯಾರ್ಥಿಗಳನ್ನು ಕಾಲೇಜಿನ ಆಡಳಿತ ಮಂಡಳಿ ಹಾಗೂ ಕಾಲೇಜಿನ ಪರವಾಗಿ ಪ್ರಾಂಶುಪಾಲ ಡಾ.ಎಚ್.ಸಿ.ವೀರಪ್ಪ ಗೌಡ ಹಾಗೂ ಪ್ಲೇಸ್‌ಮೆಂಟ್ ಸೆಲ್‌ನ ಅಧಿಕಾರಿ ದೇವದಾಸ್ ಹಾಗೂ ಎಲ್ಲ ಪದಾಧಿಕಾರಿಗಳು ಹಾಜರಿದ್ದರು.



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ಕ್ಯಾಂಪಸ್ ಸಂದರ್ಶನ ಅಂಗವಾಗಿ ನಡೆದ ಕಾರ್ಯಕ್ರಮವನ್ನು ಪ್ರಾಚಾರ್ಯ ಡಾ.ಎಚ್.ಸಿ.ವೀರಪ್ಪಗೌಡ ಉದ್ಘಾಟಿಸಿದರು.

Scanned by CamScanner

ಸಮಗ್ರ ಪ್ರಶಸ್ತಿ

ಕ-ಪ್ರೆ. 14-2-15



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ಶೃಂಗ ಸಂಭ್ರಮ ಆಯ್ದ ಅಂತರ್ ಕಾಲೇಜು ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಸಾಗರ ಕಾಲೇಜಿನ ತಂಡ ಸಮಗ್ರ ಪ್ರಶಸ್ತಿ ಗಳಿಸಿತು.

Scanned by CamScanner

'ಭಾವಬುತ್ತಿ' ಭಾವಗೀತೆಗಳ ಗಾಯನಕ್ಕೆ ಚಾಲನೆ

ಶೃಂಗೇರಿ: ಕನ್ನಡ ಸಾಹಿತ್ಯ ಸಂದರ್ಭದ ಮಹತ್ವದ ಕವಿಗಳ ರಚನೆಗಳನ್ನು ಯುವ ಪೀಳಿಗೆ ತಿಳಿಯಲು ಸುಗಮ ಸಂಗೀತವು ಅತ್ಯುತ್ತಮ ಕಲಾ ಮಾಧ್ಯಮವಾಗಿದೆ ಎಂದು ರಂಗಕರ್ಮಿ ರಮೇಶ ಬೇಗಾರ್ ಹೇಳಿದರು.

ಅವರು ಶನಿವಾರ ಜೆಸಿಬಿಎಂ ಕಾಲೇಜಿನಲ್ಲಿ ನಡೆದ ವರಕವಿ ದರಾ ಬೇಂದ್ರೆ ಜಯಂತಿ ಅಂಗವಾಗಿ ಏರ್ಪಡಿಸಿದ್ದ ಭಾವಬುತ್ತಿ ಭಾವಗೀತೆಗಳ ಗಾಯನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಸಾಂಸ್ಕೃತಿಕ ಸಂಘಟನೆಗಳು ಹೆಚ್ಚು ಹೆಚ್ಚು ವೈವಿಧ್ಯಮಯ ಕಾರ್ಯಕ್ರಮಗಳನ್ನು ಕಾಲೇಜಿನಂತಹ ಯುವ ಸಮುದಾಯವನ್ನು ಕೇಂದ್ರೀಕರಿಸಿ ಹಮ್ಮಿಕೊಳ್ಳುವುದರಿಂದ ಕಲೆಗಳು ಮುಂದಿನ ತಲೆಮಾರಿಗೆ ಮಾದರಿಯಾಗುತ್ತವೆ. ಮಾತ್ರವಲ್ಲ ಆಧುನಿಕ ಕಾಲಪ್ರಹಾರದಲ್ಲಿ ಕುಸಿಯುತ್ತಿರುವ ಸಾಂಸ್ಕೃತಿಕ ಮೌಲ್ಯಗಳನ್ನು ಕಾಪಾಡುವ ಕಾರ್ಯವು ನಡೆಯುತ್ತದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಕಾಲೇಜಿನ ಪ್ರಾಚಾರ್ಯ ಡಾ.ಎಚ್.ಸಿ.ಲೋಕೇಶ್, ಕಾಲೇಜಿನ ಸುವರ್ಣ ಮಹೋತ್ಸವ ವರ್ಷದಲ್ಲಿ ೫೦ ಸರಣಿ ಕಾರ್ಯಕ್ರಮಗಳ ಗುರಿ ಹೊಂದಿದ್ದು, ಇದಕ್ಕೆ ಸಹಕರಿಸುತ್ತಿರುವ ಭಾರತಿ ತೀರ್ಥ ಸಾಂಸ್ಕೃತಿಕ ಟ್ರಸ್ಟ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಕೃತಜ್ಞತೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಪರಿಸರ ಪತ್ರಿಕೋದ್ಯಮ ಪ್ರಶ್ನಿ ಪುರಸ್ಕೃತ ದೀಪಕ್ ಸಾಗರ್ ಹಾಗೂ ರಾಜ್ಯ ಯುವ ಪ್ರಶ್ನಿ ಪುರಸ್ಕೃತ ಗಾಯಕಿ ಪಿ.ಜಿ.ಸಹನಾ ಉಪಸ್ಥಿತರಿದ್ದರು.

ಭಾರತಿ ತೀರ್ಥ ಸಾಂಸ್ಕೃತಿಕ ಟ್ರಸ್ಟ್ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಜಾನಪದ ಅಧ್ಯಯನ ಕೇಂದ್ರ ಟ್ರಸ್ಟ್ ಸಂಯುಕ್ತಾಶ್ರಯದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಬಂದುರಾವ್, ಅರ್ಪಣಾ ಪ್ರಾರ್ಥಿಸಿ, ಪಿ.ಜಿ.ಪ್ರಶಾಂತ್ ಸ್ವಾಗತಿಸಿ, ಕಿರಣ್ ನಿರೂಪಿಸಿದರು. ಮನಸೆಳೆದ ಭಾವಬುತ್ತಿ ನಂತರ ದೀಪಕ್ ಸಾಗರ್ ಅವರ ನಿರೂಪಣೆಯ ಪಿ.ಜಿ.ಸಹನಾ ಬೇಂದ್ರೆಯವರ ಗೀತೆಗಳನ್ನು ಹಾಡಿದರು.



ಶೃಂಗೇರಿ: ಜೆಸಿಬಿಎಂ ಕಾಲೇಜಿನಲ್ಲಿ ನಡೆದ ವರಕವಿ ದ.ರಾ. ಬೇಂದ್ರೆ ಜಯಂತಿ ಅಂಗವಾಗಿ ಏರ್ಪಡಿಸಿದ್ದ ಭಾವಬುತ್ತಿ ಭಾವಗೀತೆಗಳ ಗಾಯನ ಕಾರ್ಯಕ್ರಮವನ್ನು ರಂಗಕರ್ಮಿ ರಮೇಶ್ ಬೇಗಾರ್ ಉದ್ಘಾಟಿಸಿದರು.

Scanned by CamScanner

ಸುಗಮ ಸಂಗೀತ ಅತ್ಯುತ್ತಮ ಮಾಧ್ಯಮ



ಚಿಕ್ಕಮಗಳೂರಿನ ಜೆಸಿಬಿಎಂ ಕಾಲೇಜಿನಲ್ಲಿ ವರಕವಿ ದ.ರಾ. ಬೇಂದ್ರೆ ಜಯಂತಿ ಅಂಗವಾಗಿ ಆಯೋಜಿಸಿದ್ದ ಭಾವಗೀತೆಗಳ ಗಾಯನ ಕಾರ್ಯಕ್ರಮ 'ಭಾವಬುತ್ತಿ'ಯನ್ನು ರಂಗಕರ್ಮಿ ರಮೇಶ್‌ಬೇಗಾರ್ ಉದ್ಘಾಟಿಸಿದರು.

ಕೃಂಗೇರಿ, ಫೆ.3: ಕನ್ನಡ ಸಾಹಿತ್ಯದಲ್ಲಿನ ಕವಿಗಳ ಕಾವ್ಯ ರಚನೆಗಳನ್ನು ಯುವ ಪೀಳಿಗೆಗೆ ತಿಳಿಸಿಕೊಡಲು ಸುಗಮ ಸಂಗೀತವು ಅತ್ಯುತ್ತಮ ಮಾಧ್ಯಮವಾಗಿದೆ ಎಂದು ರಂಗಕರ್ಮಿ ರಮೇಶ್‌ಬೇಗಾರ್ ಹೇಳಿದರು.

ಜೆಸಿಬಿಎಂ ಕಾಲೇಜಿನಲ್ಲಿ ವರಕವಿ ದ.ರಾ. ಬೇಂದ್ರೆ ಜಯಂತಿ ಅಂಗವಾಗಿ ಭಾರತೀತೀರ್ಥ ಸಾಂಸ್ಕೃತಿಕ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಜಾನಪದ ಅಧ್ಯಯನ ಕೇಂದ್ರ ಸಂಯುಕ್ತವಾಗಿ ಆಯೋಜಿಸಿದ್ದ ಭಾವಗೀತೆಗಳ ಗಾಯನ ಕಾರ್ಯಕ್ರಮ 'ಭಾವಬುತ್ತಿ'ಯನ್ನು ಉದ್ಘಾಟಿಸಿ ಮಾತನಾಡಿದರು.

ಸಾಂಸ್ಕೃತಿಕ ಸಂಘಟನೆಗಳು ಯುವ ಸಮುದಾಯವಿರುವ ಕಾಲೇಜನ್ನು ಕೇಂದ್ರೀಕರಿಸಿ ವೈವಿಧ್ಯಮಯ ಕಾರ್ಯಕ್ರಮಗಳನ್ನು ಹೆಚ್ಚಾಗಿ ಹಮ್ಮಿಕೊಳ್ಳುವುದರಿಂದ ಮುಂದಿನ ತಲೆಮಾರಿಗೆ ಕಲೆ ಮಾದರಿಯಾಗುತ್ತದೆ. ಇದರಿಂದ ಆಧುನಿಕ ಕಾಲಪ್ರವಾಹದಲ್ಲಿ ಕುಸಿಯುತ್ತಿರುವ ಸಾಂಸ್ಕೃತಿಕ ಮೌಲ್ಯಗಳನ್ನು ಕಾಪಾಡಿದಕಾರ್ಯ ಮಾಡಿದಂತೆ ಸಹ ಆಗುತ್ತದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಡಾ.ಎಚ್.ಸಿ.ವೀರಪ್ಪಗೌಡ ಮಾತನಾಡಿ,ಕಾಲೇಜಿನ ಸುವರ್ಣ ಮಹೋತ್ಸವ ವರ್ಷದಲ್ಲಿ 50 ಸರಣಿ ಕಾರ್ಯಕ್ರಮಗಳ ಗುರಿ ಹೊಂದಿದ್ದು, ಭಾರತೀತೀರ್ಥ ಸಾಂಸ್ಕೃತಿಕ ಟ್ರಸ್ಟ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಸಹಕರಿಸುತ್ತಿದೆ ಎಂದರು.

ಪರಿಸರ ಪತ್ರಿಕೋದ್ಯಮ ಪ್ರಶಸ್ತಿ ಪುರಸ್ಕೃತ ದೀಪಕ್ ಸಾಗರ್ ಹಾಗೂ ರಾಜ್ಯ ಯುವ ಪ್ರಶಸ್ತಿ ಪುರಸ್ಕೃತ ಗಾಯಕಿ ಪಿ.ಜಿ.ಸಹನಾ ಉಪಸ್ಥಿತರಿದ್ದರು. ಎ.ಜಿ.ಪ್ರಶಾಂತ್ ಸ್ವಾಗತಿಸಿ, ಕಿರಣ್ ನಿರೂಪಿಸಿದರು.

ಮನಸೆಳೆದಭಾವಬುತ್ತಿ:ಸಭಾಕಾರ್ಯಕ್ರಮದ ನಂತರ ದೀಪಕ್ ಸಾಗರ್ ನಿರೂಪಣೆಯಲ್ಲಿ ಪಿ.ಜಿ.ಸಹನಾ ಅವರು ಬೇಂದ್ರೆಯವರ ಗೀತೆಗಳನ್ನು ಹಾಡಿದರು.

Scanned by CamScanner

ಶ್ರೀ ಜೆ.ಸಿ.ಬಿ.ಎಂ. ಕಾಲೇಜಿನ 15 ವಿದ್ಯಾರ್ಥಿಗಳು ಇನ್‌ಫೋಸಿಸ್ ಸಂಸ್ಥೆಗೆ ಆಯ್ಕೆ



ಶೃಂಗೇರಿ: ಇಲ್ಲಿನ ಶ್ರೀ ಜೆ.ಸಿ.ಬಿ.ಎಂ. ಕಾಲೇಜಿನಲ್ಲಿ ಇನ್‌ಫೋಸಿಸ್ ಸಂಸ್ಥೆಯವರು ಕ್ಯಾಂಪಸ್ ಸಂದರ್ಶನವನ್ನು ಇತ್ತೀಚೆಗೆ ನಡೆಸಿದರು. ಸಂದರ್ಶನದಲ್ಲಿ ರಾಜ್ಯದ ವಿವಿಧ ಕಾಲೇಜಿನ 350 ಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಈ ಕುರಿತ ಸಭಾ ಕಾರ್ಯಕ್ರಮವನ್ನು ಕಾಲೇಜಿನ ಪ್ರಾಂಶುಪಾಲರಾದ ಡಾ. ಹೆಚ್.ಸಿ. ವೀರಪ್ಪ ಗೌಡರವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಎಲ್ಲಾ ವಿದ್ಯಾರ್ಥಿಗಳು ಈ ಸಂದರ್ಶನವನ್ನು ಸದುಪಯೋಗ ಪಡಿಸಿಕೊಂಡು ಅವರ ಪೃಥ್ವಿ ಜೀವನಕ್ಕೆ ಭದ್ರ ಬುನಾದಿಯನ್ನು ಹಾಕಿಕೊಳ್ಳಬೇಕೆಂದು ಕರೆನೀಡಿದರು. ಸುವರ್ಣ ಮಹೋತ್ಸವದ ಈ ಸಂದರ್ಭದಲ್ಲಿ ಮಲೆನಾಡಿನ ನಮ್ಮ ಕಾಲೇಜಿಗೆ ಇನ್‌ಫೋಸಿಸ್ ಸಂಸ್ಥೆಯು ಭೇಟಿ ನೀಡಿ ನಮ್ಮ ವಿದ್ಯಾರ್ಥಿಗಳ ಆಯ್ಕೆಗೆ ನೆರವಾಗಿದ್ದು, ಬೇರೆ ಸಂಸ್ಥೆಗಳೂ ಮಲೆನಾಡಿನತ್ತ ಮುಖ ಮಾಡುವಂತೆ ಮಾಡಿವೆ ಎಂದರು. ಮುಂದಿನ ದಿನಗಳಲ್ಲಿ ಕಾಲೇಜಿಗೆ ಹಲವಾರು ಸಂಸ್ಥೆಗಳು ಕ್ಯಾಂಪಸ್ ಆಯ್ಕೆಗಾಗಿ ಆಗಮಿಸುತ್ತವೆ ಎಂಬ ಮಾಹಿತಿಯನ್ನು ನೀಡಿದರು. ಈ ಸಂದರ್ಶನದಲ್ಲಿ 31 ವಿದ್ಯಾರ್ಥಿಗಳು ಆಯ್ಕೆಯಾಗಿದ್ದು, ಅದರಲ್ಲಿ ಶ್ರೀ ಜೆ.ಸಿ.ಬಿ.ಎಂ. ಕಾಲೇಜಿನ 15 ವಿದ್ಯಾರ್ಥಿಗಳು ಆಯ್ಕೆಯಾಗಿರುವುದು ವಿಶೇಷವಾಗಿರುತ್ತದೆ. ಆಯ್ಕೆಯಾದ ಎಲ್ಲಾ ವಿದ್ಯಾರ್ಥಿಗಳನ್ನು ಕಾಲೇಜಿನ ಆಡಳಿತ ಮಂಡಳಿ ಹಾಗೂ ಕಾಲೇಜಿನ ಪರವಾಗಿ ಪ್ರಾಂಶುಪಾಲರಾದ ಡಾ: ಹೆಚ್.ಸಿ.ವೀರಪ್ಪ ಗೌಡ ಹಾಗೂ ಪ್ಲೇಸ್‌ಮೆಂಟ್ ಸೆಲ್ ನ ಅಧಿಕಾರಿಗಳಾದ ಶ್ರೀ ದೇವದಾಸ್ ರವರು ಹಾಗೂ ಎಲ್ಲಾ ಪದಾಧಿಕಾರಿಗಳು ಅಭಿನಂದಿಸಿದ್ದಾರೆ.

Scanned by CamScanner

ಭಾರತೀಯ ಸಂಸ್ಕೃತಿ ನಮಗೆ ಅಪಾರವಾದ ಮೌಲ್ಯಗಳನ್ನು ನೀಡಿದೆ

ಡಾ.ವಿಷ್ಣುವರ್ಧನ್

ಶೃಂಗೇರಿ: ಇಲ್ಲಿನ ಶ್ರೀ ಜೆ.ಸಿ.ಬಿ.ಎಂ. ಕಾಲೇಜಿನ ಪದವಿಪೂರ್ವ ವಿಭಾಗದ ವಾರ್ಷಿಕೋತ್ಸವ ಸಮಾರಂಭವು ಕಾಲೇಜಿನ ಮಿಥಿಲಾಂಗಣದಲ್ಲಿ ಡಿ. 30 ರಂದು ನಡೆಯಿತು. ಸಭಾ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು ಮಾತನಾಡಿದ ಚಿಕ್ಕಮಗಳೂರಿನ ಎಂ.ಇ.ಎಸ್. ಕಾಲೇಜಿನ ಪ್ರಾಂಶುಪಾಲರಾದ ಡಾ.ವಿಷ್ಣುವರ್ಧನ್, ಒಂದು ಭವ್ಯಪರಂಪರೆಯನ್ನು ಹೊಂದಿರುವ ಶೃಂಗೇರಿ ಕ್ಷೇತ್ರದ ಇತಿಹಾಸವು ಮಕ್ಕಳ ಭವಿಷ್ಯಕ್ಕೆ ಭದ್ರವಾದ ಬುನಾದಿಯನ್ನು ಕಲ್ಪಿಸಿಕೊಡುವಲ್ಲಿ ಯಶಸ್ವಿಯಾಗುತ್ತದೆ ಎಂದು ಕೇಳಿದರು. ಭಾರತೀಯ ಸಂಸ್ಕೃತಿ ನಮಗೆ ಅಪಾರವಾದ ಮೌಲ್ಯಗಳನ್ನು ನೀಡಿವೆ. ಮಾನವೀಯತೆ, ನೈತಿಕತೆಯ ಮುಖಾಂತರ ಹಿರಿಯರು ದೇಶವನ್ನು ಕಟ್ಟಿದ್ದಾರೆ. ಸಂಸ್ಕೃತಿಯನ್ನು ಉಳಿಸಿದ್ದಾರೆ. ಅಂತಹ ಅಮೂಲ್ಯವಾದ ಮೌಲ್ಯಗಳನ್ನು ಉಳಿಸಿ ಬೆಳೆಸುವ ಕಡೆಗೆ ನಾವೆಲ್ಲರೂ ಹೆಚ್ಚಿನ ಗಮನ ನೀಡಬೇಕಾಗಿದೆ ಎಂದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಶ್ರೀ ಜೆ.ಸಿ.ಬಿ.ಎಂ. ಕಾಲೇಜಿನ ಪದವಿ ವಿಭಾಗದ ಪ್ರಾಚಾರ್ಯ ಡಾ.ಎಚ್.ಸಿ.ವೀರಪ್ಪಗೌಡ, ಇಂದಿನ ಯುವಪೀಳಿಗೆಯವರು ತಂತ್ರಜ್ಞಾನಕ್ಕೆ ಮರುಳಾಗಿ ಸಾಂಸ್ಕೃತಿಕ ಪರಂಪರೆಯನ್ನು ಮರೆಯುತ್ತಿದ್ದಾರೆ. ನಮ್ಮ ಸಂಸ್ಕೃತಿಯನ್ನು ಉಳಿಸಿ, ಬೆಳಸಬೇಕಾದ ಜವಾಬ್ದಾರಿ ಯುವ ಜನಾಂಗದ ಮೇಲಿದೆ ಎಂದರು. ಕಾಲೇಜಿನ ಪದವಿಪೂರ್ವ ವಿಭಾಗದ ಪ್ರಾಚಾರ್ಯ ಡಾ.ಸಿ.ವಿ.ಗಿರಿಧರಶಾಸ್ತ್ರಿ ಉಪಸ್ಥಿತರಿದ್ದರು.



Scanned by CamScanner



ಶೃಂಗೇರಿಯ ಜೆಸಿಬಿಎಂ ಕಾಲೇಜಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಾಂಶುಪಾಲ ಡಾ.ಎಚ್.ಸಿ.ವೀರಪ್ಪಗೌಡ ವಂದನೆ ಸ್ವೀಕರಿಸಿದರು.(ಬಾಳೆಹೊನ್ನೂರು ಚಿತ್ರ)

ಶೃಂಗೇರಿ: ಉಡುಪಿ ಪೂರ್ಣಪ್ರಜ್ಞ ಕಾಲೇಜಿಗೆ ಸಮಗ್ರ ಪ್ರಶಸ್ತಿ

ಶೃಂಗೇರಿ(ಬಾಳೆಹೊನ್ನೂರು): ಇಲ್ಲಿನ ಜೆಸಿಬಿಎಂ ಕಾಲೇಜಿನಲ್ಲಿ ಸುವರ್ಣ ಮಹೋತ್ಸವ ಅಂಗವಾಗಿ ನಡೆದ ಎರಡು ದಿನಗಳ ಎನ್‌ಸಿಸಿ ವಿಶೇಷ ಶಿಬಿರದಲ್ಲಿ ಉಡುಪಿಯ ಪೂರ್ಣ ಪ್ರಜ್ಞ ಕಾಲೇಜು ಸಮಗ್ರ ಪ್ರಶಸ್ತಿ ಪಡೆಯಿತು.

ಉಡುಪಿಯ 21 ಬೆಟಾಲಿಯನ್ ನ 9 ಕಾಲೇಜುಗಳ 250 ಕೆಡೆಟ್ಸ್ ಗಳು ಭಾಗವಹಿಸಿದ್ದರು. ಕಾಲೇಜಿನ ಮೈದಾನದಲ್ಲಿ ನಿರ್ಮಿಸಿದ ಅಬ್ ಸ್ಟಗಲ್ ಟ್ರೈನಿಂಗ್ ಕೋರ್ಸ್ ನ ಉದ್ಘಾಟನೆಯನ್ನು ಕಮಾಂಡಿಂಗ್ ಆಫೀಸರ್ ಕರ್ನಲ್ ಪಿ.ಎನ್.ಮೆನನ್ ನೆರವೇರಿಸಿದರು.

ಇದೇ ವೇಳೆ ಕೆಡೆಟ್‌ಗಳಿಗಾಗಿ ಆಯೋಜಿಸಿದ್ದ ಎನ್ ಸಿಸಿ ಹಾಡು , ದೇಶಭಕ್ತಿ ಗೀತೆ , ಸಮೂಹ ನೃತ್ಯ ಸೇರಿದಂತೆ ನಡೆದ ಹತ್ತು ವಿವಿಧ ಸ್ಪರ್ಧೆಗಳಲ್ಲಿ ಉಡುಪಿಯ ಪೂರ್ಣ ಪ್ರಜ್ಞಾ ಕಾಲೇಜು ಸಮಗ್ರ ಪ್ರಶಸ್ತಿಗೆ ಪಾತ್ರವಾಯಿತು.

ಪದವಿ ಕಾಲೇಜಿನ ಪ್ರಾಂಶುಪಾಲ ಡಾ.ಎಚ್.ಸಿ.ವೀರಪ್ಪಗೌಡ , ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಗಿರಿಧರ ಶಾಸ್ತ್ರಿ, ಎನ್‌ಸಿಸಿ ಅಧಿಕಾರಿ ಡಾ.ಕುಮಾರ ಸ್ವಾಮಿ ಉಡುಪ, ವೃತ್ತ ನಿರೀಕ್ಷಕ ಸುಧೀರ್ ಹೆಗಡೆ ಇದ್ದರು.

ಪ್ರಜಾವಾಣಿ 15-1-15

Scanned by CamScanner

ಮನುಜರೆಲ್ಲರೂ ಒಂದೇ ಜಾತಿಯೆಂಬ ವಿಶಾಲತೆಯಿದ್ದರೆ ದೇಶದ ಸಮೃದ್ಧಿಯಾಗುತ್ತದೆ:ಡಾ.ಹೆಚ್.ಸಿ.ವೀರಪ್ಪಗೌಡ

ಶೃಂಗೇರಿ: ತಾಲೂಕಿನ ವಿದ್ಯಾರಣ್ಯಪುರದ ಸ.ಹಿ.ಪ್ರಾ.ಪಾಠಶಾಲೆಯಲ್ಲಿ ಹೊಮ್ಮಿಕೊಂಡಿದ್ದ ಶೃಂಗೇರಿ ಶ್ರೀ ಜೆ.ಸಿ.ಬಿ.ಎಂ. ಕಾಲೇಜಿನ ಎನ್.ಎಸ್.ಎಸ್. ವಾರ್ಷಿಕ ವಿಶೇಷ ಶಿಬಿರದ ಸಮಾರೋಪ ಸಮಾರಂಭವು ಡಿ. 27 ರಂದು ಯಶಸ್ವಿಯಾಗಿ ನಡೆಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕಾಲೇಜಿನ ಪ್ರಾಚಾರ್ಯ ಡಾ.ಹೆಚ್.ಸಿ.ವೀರಪ್ಪಗೌಡ ಮಾತನಾಡಿ, ಎನ್.ಎಸ್.ಎಸ್. ಶಿಬಿರದಲ್ಲಿ ಸಕ್ರಿಯವಾಗಿ ಭಾಗವಹಿಸುವುದರಿಂದ ಪರಸ್ಪರ ಅರಿವು ಉಂಟಾಗುತ್ತದೆ. ಒಗ್ಗೂಡಿ ಕಾರ್ಯನಿರ್ವಹಿಸಿದಾಗ ಜಾತಿ, ಮತ ಎಂಬ ಬೇದಭಾವ ಮರೆಯಾಗುತ್ತದೆ. ಮನುಜರೆಲ್ಲರೂ ಒಂದೇ ಜಾತಿಯೆಂಬ ವಿಶಾಲತೆಯಿದ್ದರೆ ದೇಶದ ಸಮೃದ್ಧಿಯಾಗುತ್ತದೆ. ಸತ್ಯ ಪ್ರಾಮಾಣಿಕತೆಯನ್ನು ವಿದ್ಯಾರ್ಥಿಗಳು ಅಳವಡಿಸಿಕೊಂಡರೆ ಜೀವನ ಯಶಸ್ವಿಯಾಗುತ್ತದೆ ಎಂದರು. ಸಮಾರಂಭದಲ್ಲಿ ಶ್ರೀ ಮಠದ ಅಧಿಕಾರಿ ಶ್ರೀಪಾದರಾವ್, ಜೆ.ಪಂ ಸದಸ್ಯರಾದ ಎಂಎಸ್.ರಂಗನಾಥ್, ಬಿ.ಶಿವಶಂಕರ್, ಶ್ರೀ ಜೆ.ಸಿ.ಬಿ.ಎಂ. ಕಾಲೇಜಿನ ಪ.ಪೂ ಕಾಲೇಜಿನ ಪ್ರಾಚಾರ್ಯ ಡಾ.ಸಿ.ವಿ.ಗಿರಿಧರ ಶಾಸ್ತ್ರೀ, ಸ್ವಾಗತ ಸಮಿತಿ ಗೌರವಾಧ್ಯಕ್ಷ ಲಕ್ಷ್ಮಣ ಬಾಪಟ್, ಅಧ್ಯಕ್ಷ ಚಂದ್ರಶೇಖರ್, ಉಷಾರಾಮಚಂದ್ರಸ್ವಾಮಿ, ವಿ.ಗ್ರಾ.



ಪಂ. ಉಪಾಧ್ಯಕ್ಷ ಗಿರಿಯಪ್ಪ ಗೌಡ, ಎನ್.ಎಸ್.ಎಸ್. ಅಧಿಕಾರಿಗಳಾದ ಎ.ಜಿ.ಪ್ರಶಾಂತ್, ಎನ್.ಹೆಚ್.ಲಕ್ಷ್ಮೀನಾರಾಯಣ್ ಮುಂತಾದವರು ಉಪಸ್ಥಿತರಿದ್ದರು. ಶಿಬಿರಾರ್ಥಿಗಳ ಪರವಾಗಿ ಬಿಂದುರಾಣಿ, ಅವಿನಾಶ್ ಅನಿಸಿಕೆ ವ್ಯಕ್ತಪಡಿಸಿದರು. ಮಣಿಕಂಠ ವರದಿ ವಾಚಿಸಿದರು.

ದೇಶಭಕ್ತಿಗೀತೆ ಗಾಯನದಲ್ಲಿ ಪ್ರಥಮ

ಶೃಂಗೇರಿ: ತಾಲೂಕಿನ ಕುಂಚೇಬೈಲು ಸ.ಹಿ.ಪ್ರಾ ಶಾಲೆಯ ವಿದ್ಯಾರ್ಥಿಗಳಾದ ಮಾನಸ ವಿಭಾ, ಸಂಜಿತಾ, ಮಂದಾರ, ವಂದನ, ರಂಜಿತ್ ಮಾರ್, ವಿದ್ಯಾ ಇವರುಗಳು, ತರೀಕೆರೆಯಲ್ಲಿ ಇತ್ತೀಚೆಗೆ ನಡೆದ ಜಿಲ್ಲಾ ಮಟ್ಟದ ಪ್ರಾಥಮಿಕ ಶಾಲೆಗಳ ಪ್ರತಿಭಾ ಕಾರಂಜಿಯಲ್ಲಿ ಭಾಗವಹಿಸಿ, ದೇಶಭಕ್ತಿಗೀತೆ ಗಾಯನದಲ್ಲಿ ಪ್ರಥಮ ಸ್ಥಾನ ಗಳಿಸಿರುತ್ತಾರೆ.

Scanned by CamScanner

ವನ್ಯಜೀವಿಧಾಮಗಳು ಪ್ಲಾಸ್ಟಿಕ್ ಮುಕ್ತವಾಗಲಿ



ಶೃಂಗೇರಿ ಕುದುರೆಮುಖ ರಾಷ್ಟ್ರೀಯ ಉದ್ಯಾನವನದಲ್ಲಿ ಸ್ವಚ್ಛ ಭಾರತ ಅಭಿಯಾನದಲ್ಲಿ ಅರಣ್ಯಾಧಿಕಾರಿ ಸುಬ್ರಮಣ್ಯ ಮಾತನಾಡಿದರು.

ಶೃಂಗೇರಿ: ನಾವು ಮನೆ, ಪಟ್ಟಣಗಳ ಸುತ್ತಮುತ್ತ ಪ್ಲಾಸ್ಟಿಕ್ ತ್ಯಾಜ್ಯಗಳನ್ನು ತೆಗೆದು ಪರಿಸರವನ್ನು ಸ್ವಚ್ಛಗೊಳಿಸುತ್ತೇವೆ. ಆದರೆ, ವನ್ಯಜೀವಿಗಳು ವಾಸಿಸುವಲ್ಲಿ ಎಲ್ಲೆಂದರಲ್ಲಿ ಪ್ಲಾಸ್ಟಿಕ್, ತ್ಯಾಜ್ಯ ಎಸೆಯುತ್ತೇವೆ. ಪಟ್ಟಣ ಪ್ಲಾಸ್ಟಿಕ್ ಮುಕ್ತವಾದಂತೆ ವನ್ಯಜೀವಿಧಾಮಗಳು ಪ್ಲಾಸ್ಟಿಕ್ ಮುಕ್ತವಾಗಬೇಕೆಂದು ಕೆರೆಕಟ್ಟೆ ವನ್ಯಜೀವಿ ವಿಭಾಗದ ಅರಣ್ಯಾಧಿಕಾರಿ ಸುಬ್ರಮಣ್ಯ ಅಭಿಪ್ರಾಯಪಟ್ಟರು.

ಕುದುರೆಮುಖ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯಲ್ಲಿ ಜೆಸಿಬಿಎಂ ಕಾಲೇಜಿನ ಎನ್‌ಸಿಸಿ ಘಟಕ, ಕುದುರೆಮುಖ ರಾಷ್ಟ್ರೀಯ ಉದ್ಯಾನವನ ಕೆರೆಕಟ್ಟೆ ವನ್ಯಜೀವಿ ವಿಭಾಗದ ಆಶ್ರಯದಲ್ಲಿ ಸ್ವಚ್ಛ ಭಾರತ ಅಭಿಯಾನ ಶ್ರಮದಾನ ಕಾರ್ಯಕ್ರಮದಲ್ಲಿ ಮಾತನಾಡಿದರು. ವನ್ಯಜೀವಿಗಳು ನಮ್ಮಂತೆ ಬದುಕಬೇಕು. ಮನುಷ್ಯ ಉತ್ತಮವಾಗಿ ಬದುಕಲು ಹೇಗೆ ಉತ್ತಮ ವಾತಾವರಣದ ಅಗತ್ಯವಿದೆಯೋ ಹಾಗೆಯೇ ಪ್ರಾಣಿಗಳಿಗೆ ಒಳ್ಳೆಯ ಪರಿಸರಬೇಕು ಎಂದರು.

ಕಾಲೇಜಿನ ಎನ್‌ಸಿಸಿ ಘಟಕದ ಸುಮಾರು 60 ಕೆಡೆಟ್ಸ್‌ಗಳು ವಿವಿಧ ತಂಡಗಳಾಗಿ ಸುಮಾರು 65 ಕಿಲೋಮೀಟರ್ ಸಂಚರಿಸಿ ಪ್ಲಾಸ್ಟಿಕ್ ತ್ಯಾಜ್ಯಗಳನ್ನು ಸಂಗ್ರಹಿಸಿ ಸ್ವಚ್ಛಗೊಳಿಸಿದರು. ಎನ್‌ಸಿಸಿ ಘಟಕದ ಅಧಿಕಾರಿ ಡಾ. ಕುಮಾರ ಸ್ವಾಮಿ ಉಡುಪ ಮತ್ತಿತರರು ಉಪಸ್ಥಿತರಿದ್ದರು.

Scanned by CamScanner

ವಿಜಯವಾಣಿ 29 ಜನವರಿ 2015 ಗುರುವಾರ

ರಾಷ್ಟ್ರೀಯ ಉದ್ಯಾನ ವ್ಯಾಪ್ತಿಯಲ್ಲಿ ಸ್ವಚ್ಛತಾ ಕಾರ್ಯ

65 ಕಿಮೀ ದೂರದ ಪ್ಲಾಸ್ಟಿಕ್ ಆಯ್ದ ಎನ್‌ಸಿಸಿ ಕೆಡೆಟ್ಸ್‌ಗಳು ■ ಸ್ವಚ್ಛ ಭಾರತಕ್ಕೆ ಸಾಥ್

ಶೃಂಗೇರಿ: ಜೆಸಿಬಿಎಂ ಕಾಲೇಜಿನ ಎನ್‌ಸಿಸಿ ಕೆಡೆಟ್ಸ್‌ಗಳು ರಾಷ್ಟ್ರೀಯ ಉದ್ಯಾನ ವ್ಯಾಪ್ತಿಯಲ್ಲಿ 65 ಕಿಮೀ ಸಂಚರಿಸಿ ಸ್ವಚ್ಛತಾ ಕಾರ್ಯ ನಡೆಸಿದರು.

ಕೆರೆಕಟ್ಟೆ ವನ್ಯಜೀವಿ ವಿಭಾಗದ ಸಹಯೋಗದಲ್ಲಿ ಸ್ವಚ್ಛ ಭಾರತ ಅಭಿಯಾನದಡಿ ಸ್ವಚ್ಛತೆ ಕಾರ್ಯಕ್ಕೆ ಕೈ ಜೋಡಿಸಿದ ಎನ್‌ಸಿಸಿ ಕೆಡೆಟ್ಸ್‌ಗಳು ರಾಷ್ಟ್ರೀಯ ಉದ್ಯಾನ ವ್ಯಾಪ್ತಿಯಲ್ಲಿ ಅಷ್ಟೂದೂರ ಸಂಚರಿಸಿ ರಸ್ತೆ ಬದಿ ಬಿದ್ದ ಪ್ಲಾಸ್ಟಿಕ್, ಬಾಟಲಿ ಆಯ್ದರು. 182ಕ್ಕೂ ಹೆಚ್ಚು ಬಗೆಯ ತ್ಯಾಜ್ಯವನ್ನು ಸಂಗ್ರಹಿಸಿ ಸ್ವಚ್ಛಗೊಳಿಸಿದರು. ಬಳಿಕ ಎಲ್ಲ ಕೆಡೆಟ್ಸ್‌ಗಳು ಹನುಮನ ಗುಂಡಿ ಜಲಪಾತಕ್ಕೆ ಚಾರಣಗೈದರು.



ಜೆಸಿಬಿಎಂ ಕಾಲೇಜಿನ ಎನ್‌ಸಿಸಿ ಕೆಡೆಟ್ಸ್‌ಗಳು ರಾಷ್ಟ್ರೀಯ ಉದ್ಯಾನ ವ್ಯಾಪ್ತಿಯಲ್ಲಿ ಸ್ವಚ್ಛತಾ ಅಭಿಯಾನ ನಡೆಸಿದರು.

ಸ್ವಚ್ಛ ಭಾರತ ಅಭಿಯಾನದಡಿ ಗ್ರಾಮೀಣ ಪ್ರದೇಶದ ಸ್ವಚ್ಛತೆಗೆ ಆದ್ಯತೆ ನೀಡಬೇಕು. ಪಟ್ಟಣಗಳಲ್ಲಿ ಸ್ವಚ್ಛತಾ ಕಾರ್ಯಕ್ರಮ ನಿರಂತರ ನಡೆಯುತ್ತದೆ ಎಂದು ಕೆರೆಕಟ್ಟೆ ವಲಯ ಅರಣ್ಯಾಧಿಕಾರಿ ಸುಬ್ರಹ್ಮಣ್ಯ ಹೇಳಿದರು.

ಪರಿಸರ ರಕ್ಷಣೆಗಾಗಿ ಮೊದಲು ವನ್ಯಜೀವಿಗಳು ವಾಸಿಸುವ ಸ್ಥಳಗಳನ್ನು ಗಣನೆಗೆ ತೆಗೆದುಕೊಳ್ಳವುದು ಮುಖ್ಯ. ವನ್ಯಜೀವಿಗಳ ಸ್ಥಳಗಳಲ್ಲಿ ಶ್ರಮದಾನ ಮಾಡುವುದರಿಂದ ಪ್ಲಾಸ್ಟಿಕ್‌ನಿಂದ ವನ್ಯಜೀವಿಗಳಿಗಾಗುವ ತೊಂದರೆ ತಡೆಯಬಹುದು ಎಂದರು.

ಕಾರ್ಯಕ್ರಮದಲ್ಲಿ ಎನ್‌ಸಿಸಿ ಅಧಿಕಾರಿ ಲೆಫ್ಟಿನೆಂಟ್ ಡಾ. ಕುಮಾರಸ್ವಾಮಿ ಉಡುಪ ಹಾಗೂ ವನ್ಯಜೀವಿ ವಿಭಾಗದ ಸಿಬ್ಬಂದಿ ಇದ್ದರು.

Scanned by CamScanner

ಉದಯವಾಣಿ ಕನ್ನಡ ದಿನಪತ್ರಿಕೆ 17, 2013

ಎನ್‌ಸಿಸಿ ಕೆಡೆಟ್‌ಗಳಿಗೆ ವಿಶೇಷ ಕಾರ್ಯಾಗಾರ

ಶೃಂಗೇರಿ: ಶ್ರೀ ಜೆಸಿಬಿಎಂ ಕಾಲೇಜಿನ ಸುವರ್ಣ ಮಹೋತ್ಸವದ ಅಂಗವಾಗಿ ಅಂತರ ಕಾಲೇಜು ಎನ್‌ಸಿಸಿ ಕೆಡೆಟ್‌ಗಳಿಗೆ ಎರಡು ದಿನಗಳ ವಿಶೇಷ ಕಾರ್ಯಾಗಾರ ಸ್ಪರ್ಧೆಗಳು ನಡೆಯಿತು.

ಒಂಬತ್ತು ಕಾಲೇಜುಗಳ 230 ಎನ್‌ಸಿಸಿ ಕೆಡೆಟ್ಸ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಹತ್ತು ಸ್ಪರ್ಧೆಗಳನ್ನು ಆಯೋಜಿಸಲಾಗಿದ್ದು, ಉಡುಪಿಯ ಪೂರ್ಣಪ್ರಜ್ಞಾ ಕಾಲೇಜು ಸಮಗ್ರ ಪ್ರಶಸ್ತಿ ಗಳಿಸಿತು.

ಎನ್‌ಸಿಸಿ ನೂತನ ತರಬೇತಿ ಕಾರ್ಯಕ್ರಮವನ್ನು ಉಡುಪಿಯ 21 ಕರ್ನಾಟಕ ಬೆಟಾಲಿಯನ್‌ನ ಕಮಾಂಡಿಂಗ್ ಆಫೀಸರ್ ಕರ್ನಲ್ ಪಿ.ಎನ್. ಮೆನನ್ ನೆರವೇರಿಸಿದರು.

ಪದವಿ ಹಾಗೂ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಡಾ। ಎಚ್.ಸಿ. ವೀರಪ್ಪ ಗೌಡ, ಡಾ। ಸಿ.ವಿ. ಗಿರಿಧರ ಶಾಸ್ತ್ರಿ ಎನ್‌ಸಿಸಿ ಅಧಿಕಾರಿ ಲೆಫ್ಟಿನೆಂಟ್ ಡಾ। ಕುಮಾರಸ್ವಾಮಿ ಉಡುಪ ಉಪಸ್ಥಿತರಿದ್ದರು. ಸಮಾರೋಪ ಸಮಾರಂಭದಲ್ಲಿ ವೃತ್ತ ನಿರೀಕ್ಷಕ ಸುಧೀರ್ ಹೆಗಡೆ ಪಾಲ್ಗೊಂಡರು.



ಶೃಂಗೇರಿ: ಜೆಸಿಬಿಎಂ ಕಾಲೇಜಿನಲ್ಲಿ ನಡೆದ ಅಂತರ ಕಾಲೇಜು ಎನ್‌ಸಿಸಿ ಕೆಡೆಟ್‌ಗಳಿಗೆ ಎರಡು ದಿನಗಳ ವಿಶೇಷ ಕಾರ್ಯಾಗಾರದ ಸಮಾರೋಪ ಕಾರ್ಯಕ್ರಮದಲ್ಲಿ ಪಿಎಸ್‌ಐ ಸುಧೀರ ಎಂ. ಹೆಗಡೆ ಮಾತನಾಡಿದರು.

Scanned by CamScanner

ವಿಜಯವಾಣಿ ಕನ್ನಡ ದಿನಪತ್ರಿಕೆ, 27.7.14

'ಎನ್ನೆಸ್ಸೆಸ್‌ನಿಂದ ಜೀವನ ಪಾಠ'



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ದೈನಂದಿನ ಚಟುವಟಿಕೆಯ ಕಾರ್ಯಕ್ರಮವನ್ನು ಶ್ರೀಪಾದರಾವ್ ಉದ್ಘಾಟಿಸಿದರು.

ಶೃಂಗೇರಿ: ಸೇವೆ ಕೇವಲ ಪ್ರಮಾಣ ಪತ್ರಕ್ಕಾಗಿ ಸೀಮಿತವಾಗಬಾರದು. ಪ್ರತಿಯೊಬ್ಬರಲ್ಲಿ ಸೇವಾ ಮನೋಭಾವನೆ ಬೆಳೆಯಬೇಕು ಎಂದು ಶ್ರೀ ಮಠದ ಅಧಿಕಾರಿ ಶ್ರೀ ಪಾದರಾವ್ ಹೇಳಿದರು.

ಅವರು ಗುರು ವಾರ ಜೆಸಿಬಿಎಂ ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ದೈನಂದಿನ ಚಟುವಟಿಕೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಎನ್ನೆಸ್ಸೆಸ್ ಶಿಬಿರ ಕೇವಲ ಶ್ರಮದಾನಕ್ಕೆ ಮೀಸಲಾಗಿ ರದೆ, ವ್ಯಕ್ತಿತ್ವ ವಿಕಸನ, ಪ್ರತಿಭಾ ಪ್ರದರ್ಶನಕ್ಕೆ ಉತ್ತಮ ವೇದಿಕೆಯಾಗಿದೆ. ಉತ್ತಮ ಪ್ರದರ್ಶನವು ವಿದ್ಯಾರ್ಥಿಗಳ ಭವಿಷ್ಯಕ್ಕೆ ಪೂರಕವಾಗಿದ್ದು, ಎನ್ನೆಸ್ಸೆಸ್ ಶಿಬಿರಗಳಿಂದ ಹಲವಾರು ಹೊಸ ವಿಷಯಗಳು, ಹೊಸ ಸ್ನೇಹಿತರನ್ನು ಪಡೆಯಬಹುದಾಗಿದೆ. ಮನೆ ವಾತಾವರಣದಿಂದ ಹೊರ ಬಂದು ವಾರ್ಷಿಕ ಶಿಬಿರದಲ್ಲಿ ಭಾಗವಹಿಸಿದಲ್ಲಿ ಜೀವನದ ಒಂದು ವಿಶೇಷ ಅನುಭವ ಮತ್ತು ಜೀವನದ ಪಾಠ ಕಲಿಸಲಿದೆ ಎಂದರು.

ಜಿ.ಪಂ. ಸದಸ್ಯ ಎಂಎಸ್.ರಂಗನಾಥ್ ಮಾತನಾಡಿ, ವಿದ್ಯಾರ್ಥಿಗಳು ಯಾವುದೇ ಪ್ರತಿಫಲವಿಲ್ಲದೇ ಮನಃ ಪೂರ್ವಕವಾಗಿ ಸೇವೆ ಮಾಡಬೇಕು. ಪತ್ಯ ಕ್ರಮವೆ ಹೊರತಾಗಿ ದೈನಂದಿನ ಬದುಕನ್ನು ಕಲಿಸುವ ಎನ್ನೆಸ್ಸೆಸ್ ವಿದ್ಯಾರ್ಥಿಗಳಿಗೆ ಅವಶ್ಯಕವಾಗಿದೆ ಎಂದರು.

ಕಾಲೇಜಿನ ಪ್ರಾಚಾರ್ಯ ಡಾ. ಎಚ್.ಸಿ.ವೀರಪ್ಪಗೌಡ ಅಧ್ಯಕ್ಷತೆ ವಹಿಸಿದ್ದರು. ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಡಾ.ಸಿ.ಪಿ.ಗಿರಿಧರಶಾಸ್ತ್ರಿ ಹಾಜರಿದ್ದರು.

ಎನ್ನೆಸ್ಸೆಸ್ ಅಧಿಕಾರಿ ಎಸ್.ಎಚ್. ಲಕ್ಷ್ಮೀನಾರಾಯಣ ಸ್ವಾಗತಿಸಿದರು. ವಿ.ಐಶ್ವರ್ಯ, ಬಿ.ಜಿ.ಆಶ್ರಯ ನಿರೂಪಿಸಿ, ಎ.ಜಿ.ಪ್ರಶಾಂತ್ ವಂದಿಸಿದರು.

Scanned by CamScanner

ಎಚ್‌ಐವಿ ಪೀಡಿತರಿಗೆ ಆತ್ಮವಿಶ್ವಾಸ ಮೂಡಿಸಿ

■ ವಿಕ ಸುದ್ದಿಲೋಕ, ಶೃಂಗೇರಿ

ಎಚ್‌ಐವಿ ಸೋಂಕು ಪೀಡಿತರಿಗೆ ಆತ್ಮವಿಶ್ವಾಸ ತುಂಬುವ, ರೋಗದ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮದಲ್ಲಿ ಯುವ ಜನಾಂಗ ತಮ್ಮನ್ನು ತೊಡಗಿಸಿಕೊಳ್ಳಬೇಕು ಎಂದು ತಾಲೂಕು ಮುಖ್ಯ ವೈದ್ಯಾಧಿಕಾರಿ ಡಾ.ವೆಂಕಟೇಶ್ ಹೇಳಿದರು.

ಅವರು ಸೋಮವಾರ ಜೆಸಿಬಿಎಂ ಕಾಲೇಜಿನಲ್ಲಿ ಆಯೋಜಿಸಿದ್ದ ವಿಶ್ವ ಏಡ್ಸ್ ದಿನಾಚರಣೆ ಉದ್ಘಾಟಿಸಿ ಮಾತನಾಡಿದರು. ಎಚ್‌ಐವಿಯನ್ನು ಹಿಮ್ಮೆಟ್ಟಿಸುವ ನಿಟ್ಟಿನಲ್ಲಿ ರಾಜಕೀಯ ಬದ್ಧತೆ, ಹಣಕಾಸಿನ ವ್ಯವಸ್ಥೆ, ಕಾರ್ಯತಂತ್ರ, ಯೋಜನೆಗಳು ಹಾಗೂ ಔಷಧಿಗಳ ಬೆಲೆ ಇಳಿಕೆಯ ಮುಖಾಂತರ ಸೋಂಕು ಪೀಡಿತರ ಸಂಖ್ಯೆ ಇಳಿಮುಖವಾಗುತ್ತಿದೆ. ಎಚ್‌ಐವಿ ಪೀಡಿತರನ್ನು ಅಸ್ಪೃಶ್ಯತೆಯಿಂದ ನೋಡುವ ದೃಷ್ಟಿಕೋನ ಬದಲಾವಣೆಯಾಗಬೇಕಿದೆ. ಆಗ ಮಾತ್ರ ಆಚರಿಸುವ ದಿನಾಚರಣೆಗೆ ಅರ್ಥಪೂರ್ಣ ಮುನ್ನುಡಿ ಬರೆಯಬಹುದಾಗಿದೆ ಎಂದರು.

ಕ್ಯಾಂಪಸ್

2013ರ ಸಮೀಕ್ಷೆ ಪ್ರಕಾರ ವಿಶ್ವದಲ್ಲಿ 3.5ಕೋಟಿ ಜನರು ಸೋಂಕಿಗೆ ತುತ್ತಾಗಿ ಬದುಕು ಸವೆಯುತ್ತಿದ್ದಾರೆ. ಅದರಲ್ಲಿ 32ಲಕ್ಷ ಮಕ್ಕಳು ಎಂಬುದು ಅತ್ಯಂತ ವಿಷಾದನೀಯ. ಸೋಂಕಿತರನ್ನು ಬೆಂಬಲಿಸುವ, ಅವರಿಗೂ ಸಮಾಜದಲ್ಲಿ ಬದುಕುವ ಹಕ್ಕಿದೆ ಎಂಬುದನ್ನು ಹೇಳುವ ಮಾನವೀಯತೆ ಸಮುದಾಯದಲ್ಲಿರಬೇಕು. ಸಂಘ-ಸಂಸ್ಥೆಗಳು ಗ್ರಾಮೀಣ ಭಾಗದಲ್ಲಿ ಇದರ ಪ್ರಯುಕ್ತ ಜಾಗೃತಿ ಮೂಡಿಸಬೇಕು. ಅಸುರಕ್ಷಿತ ಲೈಂಗಿಕತೆ, ಚುಚ್ಚುಮದ್ದು ತೆಗೆದುಕೊಳ್ಳುವಾಗ ವಹಿಸುವ ಜಾಗ್ರತೆಯ ಬಗ್ಗೆ ಎಲ್ಲರೂ ಒಗ್ಗೂಡಿ ಕಾರ್ಯನಿರ್ವಹಿಸಬೇಕು. ಎಚ್‌ಐವಿ ಬಾಧಿತರಲ್ಲಿ ಭಾರತ ದೇಶ ಮೂರನೇ ಸ್ಥಾನದಲ್ಲಿದೆ ಎಂದರು.



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ವಿಶ್ವ ಏಡ್ಸ್ ದಿನಾಚರಣೆಯನ್ನು ಮುಖ್ಯ ವೈದ್ಯಾಧಿಕಾರಿ ಡಾ.ವೆಂಕಟೇಶ್ ಉದ್ಘಾಟಿಸಿದರು.

ಕಾರ್ಯಕ್ರಮದ ಮೊದಲು ಕಾಲೇಜು ವಿದ್ಯಾರ್ಥಿಗಳು ಕಾಲೇಜಿನಿಂದ ಕೆಪಿಆರ್ ರಸ್ತೆಯವರೆಗೆ ಜಾಥಾ ಕಾರ್ಯಕ್ರಮ ನಡೆಯಿತು. ಪ್ರಾಚಾರ್ಯ ಡಾ.ವೀರಪ್ಪಗೌಡ ಅಧ್ಯಕ್ಷತೆ ವಹಿಸಿದರು. ಡಾ.ಅನಿತ್‌ಕುಮಾರ್.ಜೆಸಿಬಿಎಂ ಸೆ.ಪೂರ್ವ ಕಾಲೇಜಿನ ಪ್ರಾಚಾರ್ಯ ಡಾ.ಸಿ.ವಿ.ಗಿರಿಧರಶಾಸ್ತ್ರಿ ಎನ್ಸೆಸ್ಸ್ ಅಧಿಕಾರಿ ಪ್ರಶಾಂತ್ ಉಪಸ್ಥಿತರಿದ್ದರು.

Scanned by CamScanner

ವಿ.ಕ. 3.12.14.

ಜೆಸಿಬಿಎಂಗೆ 2 ರ್‍ಯಾಂಕ್

ಶೃಂಗೇರಿ: ಕುವೆಂಪು ವಿಶ್ವವಿದ್ಯಾನಿಲಯವು ಜೂನ್ -ಜುಲೈನಲ್ಲಿನಡೆಸಿದ ಅಂತಿಮ ವಾಣಿಜ್ಯ ಪದವಿ ಪರೀಕ್ಷೆಯಲ್ಲಿಶ್ರೀ ಜೆಸಿಬಿಎಂ ಕಾಲೇಜಿಗೆ ಎರಡು ರ್‍ಯಾಂಕ್‌ಗಳು ಬಂದಿದೆ. ಕೆ.ಎ. ಚೈತ್ರಾ ಅವರು 1500 ಅಂಕಗಳಿಗೆ 1414 (ಶೇ.94.27) ಮತ್ತು ಕೆ.ಎನ್..ಪನ್ನಗೇಂದ್ರ ಅವರು 1500 ಅಂಕಗಳಿಗೆ 1414 (ಶೇ. 94.27) ಅಂಕಗಳಿಸಿ ಒಂಬತ್ತನೇ ರ್‍ಯಾಂಕ್ ಹಂಚಿಕೊಂಡಿದ್ದಾರೆ. ರ್‍ಯಾಂಕ್ ವಿಜೇತರಿಗೆ ಕಾಲೇಜಿನ ಪ್ರಾಚಾರ್ಯ ಮತ್ತು ಅಧ್ಯಾಪಕ ವೃಂದ,ಆಡಳಿತ ಮಂಡಳಿ ಅಭಿನಂದಿಸಿದೆ.

Scanned by CamScanner

ಪ್ರಜಾವಾಣಿ
25 ಜನವರಿ 2015
ಭಾನುವಾರ

ಚಿಕ್ಕಮಗಳೂರು ಲೋಕಲ್ ಎಕ್ಸ್‌ಪ್ರೆಸ್

ಮೌಲ್ಯಯುತ ಬದುಕಿಗೆ ಸಂಗೀತ ಪೂರಕ

ಶೃಂಗೇರಿ: ಸಗಮ ಸಂಗೀತದಿಂದ ಮಾನಸಿಕ ನೆಮ್ಮದಿ ದೊರೆಯುವುದಲ್ಲದೆ ಮೌಲ್ಯಯುತ ಬದುಕು ಕಟ್ಟಿಕೊಳ್ಳಬಹುದು ಎಂದು ಜಿಪಂ ಸದಸ್ಯ ಶೃಂಗೇರಿ ಶಿವಣ್ಣ ಹೇಳಿದರು.

ಬಿಸಿಎಂ ಕಾಲೇಜಿನ ಟಿಎಂಎ ಪೈ ಸಭಾಂಗಣದಲ್ಲಿ ಶ್ರೀ ಭಾರತೀ ತೀರ್ಥ ಸಾಂಸ್ಕೃತಿಕ ಮತ್ತು ಜಾನಪದ ಅಧ್ಯಯನ ಕೇಂದ್ರ, ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ರಾಷ್ಟ್ರೀಯ ಸೇವಾ ಯೋಜನೆ ಘಟಕದ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ ಗೀತ ಗಾಯನ ಉತ್ಸವಕ್ಕೆ ಚಾಲನೆ ನೀಡಿ ಮಾತನಾಡಿದರು.

ಕವಿ ಕಾಳಿಂಗರಾವ್, ಕೆ.ಎಸ್.ನರಸಿಂಹಸ್ವಾಮಿ ಸೇರಿದಂತೆ ಹಲವು ಪ್ರತಿಭಾನ್ವಿತರು ಸುಗಮ ಸಂಗೀತಕ್ಕೆ ನೀಡಿದ ಕೊಡುಗೆ ಅನನ್ಯ. ಈ ಸಂದರ್ಭದಲ್ಲಿ ಅವರ ಸಾಧನೆ ಚಿರಕಾಲ ಸ್ಮರಣೀಯ ಎಂದರು.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಸುಗಮ ಸಂಗೀತ ಕಲಾವಿದರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಅವರೆಲ್ಲ ಏಕ



ಶೃಂಗೇರಿಯಲ್ಲಿ ಜಿಲ್ಲಾ ಮಟ್ಟದ ಗೀತಗಾಯನ ಉತ್ಸವ ನಡೆಯಿತು.

ವೇದಿಕೆಯಲ್ಲಿ ಅನಾವರಣಗೊಳ್ಳಲು ಇಂತಹ ಗಾಯನೋತ್ಸವಗಳು ಪೂರಕ. ಸಾಹಿತ್ಯಿಕ ಮೌಲ್ಯವನ್ನು ಹೊಂದಿರುವ ಈ ಕಾರ್ಯಕ್ರಮ ವಿದ್ಯಾರ್ಥಿ ಸಮುದಾಯಕ್ಕೆ ತಲುಪಿಸುವ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಶ್ರಮಿಸಬೇಕಿದೆ ಎಂದು ಹೇಳಿದರು.

ಎ.ಜಿ.ಶಿವಾನಂದ ಭಟ್ ಹೇರೂರು ಅವರ ಅಂತಿಂಥ ಹೆಣ್ಣು ನೀನಲ್ಲ ಹಾಡಿನೊಂದಿಗೆ ಗೀತಾ ಗಾಯನ ಪ್ರಾರಂಭಗೊಂಡಿತು. ಬಳಿಕ ಬಾರಯ್ಯ ಬೆಳದಿಂಗಳೇ, ಒಂದಿರುಳು ಕನಸಿನಲಿ, ರಾಯರು ಬಂದರು ಮಾವನ ಮನೆಗೆ, ಹೆಂಡತಿಯೊಬ್ಬಳು ಮನೆಯೊಳಗಿದ್ದರೆ ಹಾಡುಗಳನ್ನು ರೇಖಾ ಪ್ರೇಮ್‌ಕುಮಾರ್, ಭಾಗ್ಯಶ್ರೀ, ಜಗದೀಶ್ ಕಣದಮನೆ, ಸಾದ್ವಿನಿ, ಪ್ರವೀಣ್ ದೇವಧರ್ ಪ್ರಸ್ತುತಪಡಿಸಿದರು. ಹಿನ್ನೆಲೆಯಲ್ಲಿ ಎಂ.ಕೆ. ಶ್ರೀನಿಧಿ, ಭಾರ್ಗವ ಕೊಪ್ಪ ಸಹಕರಿಸಿದರು.

ಎಚ್.ಸಿ.ವೀರಪ್ಪ ಗೌಡ, ಸಿ.ವಿ.ಗಿರಿಧರ ಶಾಸ್ತ್ರಿ, ಮಾಕೋಡು ಗಣಪತಿ ಇದ್ದರು.

Scanned by CamScanner



Scanned by CamScanner

ಆಧುನಿಕತೆಯಿಂದ ಜಾನಪದಕ್ಕೆ ವಿಕೃತರೂಪ

ಶೃಂಗೇರಿ: ಆಧುನಿಕತೆಯ ಪ್ರಹಾರದಿಂದ ಮೂಲ ಜಾನಪದ ಪರಂಪರೆಗೆ ವಿಕೃತ ರೂಪಾಂತರದ ಆತಂಕ ಎದುರಾಗಿದೆ ಎಂದು ಜಾನಪದ ವಿದ್ವಾಂಸ ಡಾ. ಬಾನಂದೂರು ಕೆಂಪಯ್ಯ ತಿಳಿಸಿದರು.

ತಾಲೂಕಿನ ಜೆಸಿಬಿಎಂ ಕಾಲೇಜು, ಶ್ರೀ ಭಾರತೀತೀರ್ಥ ಸಾಂಸ್ಕೃತಿಕ ಮತ್ತು ಜಾನಪದ ಅಧ್ಯಯನ ಕೇಂದ್ರ ಟ್ರಸ್ಟ್, ಬೆಂಗಳೂರಿನ ಹೊಂಬಾಳೆ ಪ್ರತಿಭಾರಂಗ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಶ್ರಯದಲ್ಲಿ ಏರ್ಪಡಿಸಿದ್ದ ಜಾನಪದ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿ, ಯುವಪೀಳಿಗೆಗೆ ತಲುಪುವಂಥ ಶುದ್ಧ ಜಾನಪದ ಕಾರ್ಯಕ್ರಮಗಳನ್ನು ಹೆಚ್ಚಾಗಿ ರೂಪಿಸಬೇಕಿದೆ ಎಂದರು.

ಚರ್ಮ ವಾದ್ಯಗಳಲ್ಲಿ ಮೂಲ ಸೊಗಡಿನ ನಾದ ತರಂಗಗಳಿದ್ದು, ಕೇಳುಗರ ಹೃದಯ ಮತ್ತು ಮನಸ್ಸುಗಳನ್ನು ಗೆಲ್ಲುವಲ್ಲಿ ಯಶಸ್ವಿಯಾಗಿತ್ತು. ಆ



ಶೃಂಗೇರಿಯಲ್ಲಿ ಏರ್ಪಡಿಸಿದ್ದ ಜಾನಪದ ಸಂವಾದ ಕಾರ್ಯಕ್ರಮದಲ್ಲಿ ಡಾ. ಬಾನಂದೂರು ಕೆಂಪಯ್ಯ ಮಾತನಾಡಿದರು.

ಜಾಗವನ್ನು ಪ್ಲಾಸ್ಟಿಕ್ ವಾದ್ಯ ಪರಿಕರಗಳು ಆಕ್ರಮಿಸುತ್ತಿವೆ. ಇದರಿಂದ ಜಾನಪದವು ಕುಲಾಂತರವಾಗಿ ಅದರ ದೇಸಿತನಕ್ಕೆ ಧಕ್ಕೆ ಬರುತ್ತಿದೆ ಎಂದು ವಿಷಾದಿಸಿದರು.

ಜಾನಪದ ಹಾಡುಗಾರ ಅಬ್ಬಿಗೆರೆ ರಾಜು ಮಾತನಾಡಿ, ಕೆಲ ಬುದ್ಧಿವಂತರ ವಲಯ ಜಾನಪದ ಕಲೆಯನ್ನು ಕೇವಲ ಡಾಕ್ಟರೇಟ್ ಪದವಿ ಪಡೆಯಲಷ್ಟೇ ಬಳಸಿಕೊಂಡಿದೆ. ಬಳಿಕ ತಮ್ಮ ಅಸ್ತಿತ್ವ ಕಾಯ್ದುಕೊಳ್ಳಲು ಕಲೆ ಬಗ್ಗೆ ಅಸಡ್ಡೆ ಮನೋಭಾವನೆ ಹೊಂದಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕಲಾವಿದ ತಿಮ್ಮರಾಜು ಮಾತನಾಡಿ, ಬೆಟ್ಟಗೆರೆ ಕೃಷ್ಣ ಶರ್ಮಾ, ಎ.ಸೀತಾರಾಮಯ್ಯ, ಕೆ.ಆರ್.ಲಿಂಗಪ್ಪನಂಥ ಜ್ಞಾನಿಗಳ ಜಾನಪದ ಸೇವೆಯನ್ನು ನಾವು ಸ್ಮರಿಸದೇ ಕೇವಲ ಅದನ್ನು ಪ್ರಚಾರ ಮತ್ತು ಸ್ಥಾನಮಾನ ಪಡೆಯಲು ಬಳಸುತ್ತಿರುವುದು ಸರಿಯಲ್ಲ ಎಂದರು.

Scanned by CamScanner

ಅದಮ್ಯ ಚೇತನದ ಅರಿವಿಗಾಗಿ ಯುಗಾದಿ ಆಚರಣೆ

ಹರಿಹರಪುರ(ಕೊಪ್ಪತಾ.): ನಮ್ಮೊಳಗಿನ ಅದಮ್ಯ ಚೇತನದ ಅರಿವಿಗಾಗಿ ಯುಗಾದಿಯನ್ನು ಆಚರಿಸಲಾಗುತ್ತದೆ ಎಂದು ಶೃಂಗೇರಿಯ ಜೆಸಿಬಿಎಂ ಪಿಯು ಕಾಲೇಜು ಪ್ರಾಚಾರ್ಯ ಡಾ.ಸಿ.ವಿ.ಗಿರಿಧರ ಶಾಸ್ತ್ರೀ ತಿಳಿಸಿದರು.

ಪಟ್ಟಣದ ಶ್ರೀ ದಕ್ಷಹರ ಸೋಮೇಶ್ವರ ದೇವಸ್ಥಾನ ಆವರಣದಲ್ಲಿ ಶನಿವಾರ ನಡೆದ ನಾದವಸಂತ ಜ್ಞಾನ-ಗಾನ-ನಾಟ್ಯ-ಕುಂಚ ಕಾರ್ಯಕ್ರಮದಲ್ಲಿ ಅವರು ಉಪನ್ಯಾಸ ನೀಡಿದರು.

ಯುಗಾದಿ ಎಂದರೆ ಹೊಸಯುಗದ ಆರಂಭ ಎಂದರ್ಥ. ಅಂದು ಬ್ರಾಹ್ಮೀ ಮುಹೂರ್ತದಲ್ಲಿ ಎದ್ದು ಸ್ನಾನ ಮಾಡಿ ಹಿರಿಯರ ಆಶೀರ್ವಾದ ಪಡೆದು, ತುಪ್ಪದಲ್ಲಿ ನೆನಸಿದ ಬೇವನ್ನು ತಿಂದು, ಸ್ನೇಹಿತರೊಂದಿಗೆ ಸಂತೋಷವನ್ನು ಅನುಭವಿಸಬೇಕು. ಇಲ್ಲಿ ಬ್ರಾಹ್ಮೀ ಮಹೂರ್ತವು ಸತ್ವ ಗುಣವನ್ನು, ವೃದ್ಧರ ಆಶೀರ್ವಾದ ಶಕ್ತಿಯನ್ನು, ತುಪ್ಪವು ಸ್ನೇಹ ಭಾವನೆಯನ್ನು, ಇತರರೊಂದಿಗೆ ಬೆರೆಯುವುದು ಸಮಷ್ಟಿ ಸುಖವನ್ನು ಪ್ರತಿನಿಧಿಸುತ್ತದೆ. ನಂತರ ಪಂಚಾಂಗ ಶ್ರವಣದಿಂದ ಆತ್ಮೋನ್ನತಿ ಸಾಧನೆ ಬಗ್ಗೆ ಅರಿವು ಮೂಡಬೇಕು. ಒಟ್ಟಾರೆ ಪರಬ್ರಹ್ಮ ವಸ್ತುವಿನ ಸ್ಮರಣೆ ಮಾಡುವ ಉದ್ದೇಶದಿಂದ ಈ ಹಬ್ಬವನ್ನು ಆಚರಿಸಲಾಗುತ್ತದೆ ಎಂದರು. ಅವರನ್ನು ಶ್ರೀಮಠದ ವ್ಯವಸ್ಥಾಪಕ ಕೃಷ್ಣಮೂರ್ತಿ ಗೌರವಿಸಿದರು.

ಕಾರ್ಯಕ್ರಮವನ್ನು ಸ್ಥಳೀಯ ರೋಟರಿ ಸಮುದಾಯದಳದ ಅಧ್ಯಕ್ಷ ಕೇಶವಮೂರ್ತಿ ಉದ್ಘಾಟಿಸಿದರು. ನಾದಸಿರಿ ಸುಗಮ ಸಂಗೀತ ವೃಂದದ ಮಾರ್ಗದರ್ಶಕ ಮಾಕೋಡು ಗಣಪತಿ, ಮೃದಂಗ ವಿದ್ವಾನ್ ಸೊರಳಿ ಗಣೇಶ್ ಮೂರ್ತಿ ಹಾಜರಿದ್ದರು.

ಶೃಂಗೇರಿಯ ರಾಜೀವ್‌ಗಾಂಧಿ ಸಂಸ್ಕೃತ ಕಾಲೇಜಿನ ವೇದಾಂತ ಉಪನ್ಯಾಸಕ ಡಾ.ಶ್ರೀಕರ ಗೋಚವ್ಳಿ ಅವರನ್ನು ಗೌರವಿಸಲಾಯಿತು.

ವೈಕುಂಠಪುರದ ವಿದ್ವಾನ್ ಮುರಳೀಧರ ಭಟ್ ಪಂಚಾಂಗ ಪಠಣದ ಮೂಲಕ ಶ್ರೀಮನ್ಮಥ ನಾಮ ಸಂವತ್ಸರದ ಶುಭಾಶಯವನ್ನು ಹಂಚಿಸಿದರು.

ನಂತರ ನಡೆದ ಗಾನ ವಸಂತ ಕಾರ್ಯಕ್ರಮದಲ್ಲಿ ಚಿಳಂಮನು ಗಣೇಶ್ ಪ್ರಸಾದ್, ವಿನಯ್, ಪ್ರತಿಮಾ, ಸಾಧ್ವಿನಿ ಮತ್ತಿತರರು ಭಕ್ತಿ -ಭಾವಗೀತೆಗಳನ್ನು ಹಾಡಿದರು. ಉಳುವೆಬೈಲಿನ ಸುಮನಾ, ಕಾವ್ಯ, ಸಿದ್ದರಮಠದ ಎಂ.ರಶ್ಮಿ, ಪ್ರಗೇಶಾ ಮತ್ತು ಪದ್ಮಶ್ರೀ ಭರತನಾಟ್ಯ ಪ್ರದರ್ಶಿಸಿದರು.

ಹರಿಹರಪುರದ ರಾಧಿಕಾ, ರಾಜಗೋಪಾಲ್, ಜಯಶ್ರೀ ಗಣೇಶ್, ಸಂದೇಶ್ ಚಿತ್ರಕಲೆಯನ್ನು ಅಭಿವ್ಯಕ್ತಪಡಿಸಿದರು.

ಕೊಪ್ಪದ ಎಂ.ಕೆ.ಶ್ರೀನಿಧಿ, ಭಾರ್ಗವ, ಹರೀಶ್ ಡೋಂಗ್ರೆ, ವಿನೀಪ್ ಹಿನ್ನೆಲೆ ಸಹಕಾರ ನೀಡಿದರು. ಸಂಪಗೋಡು ಗುರುಮೂರ್ತಿ ನಿರೂಪಿಸಿದರು.

ಶೃಂಗೇರಿಯ ನಾದಸಿರಿ ಸುಗಮ ಸಂಗೀತ ವೃಂದ, ರೋಟರಿ ಸಮುದಾಯ ದಳ ಸಹಯೋಗದಲ್ಲಿ ಕಾರ್ಯಕ್ರಮ ನಡೆಸಲಾಯಿತು.

ಕಾರ್ಯಕ್ರಮದಲ್ಲಿ ದೇವಸ್ಥಾನದ ದ್ವಾರದ ಬಳಿ ಮಟಾಣಿ ಮಕ್ಕಳು ಸಾರ್ವಜನಿಕರಿಗೆ ಬೇವು ಬೆಲ್ಲ ವಿತರಿಸಿದರು.



ಕೊಪ್ಪತಾಲೂಕು ಹರಿಹರಪುರದ ಶ್ರೀ ದಕ್ಷಹರ ಸೋಮೇಶ್ವರ ದೇವಸ್ಥಾನ ಆವರಣದಲ್ಲಿ ನಡೆದ ನಾದ ವಸಂತ ಜ್ಞಾನ-ಗಾನ-ನಾಟ್ಯ-ಕುಂಚ ಕಾರ್ಯಕ್ರಮದಲ್ಲಿ ಶೃಂಗೇರಿ ಜೆಸಿಬಿಎಂ ಪಿಯು.ಕಾಲೇಜು ಪ್ರಾಚಾರ್ಯ ಡಾ.ಸಿ.ವಿ.ಗಿರಿಧರ ಶಾಸ್ತ್ರೀ ಅವರನ್ನು ಶ್ರೀಮಠದ ವ್ಯವಸ್ಥಾಪಕ ಕೃಷ್ಣಮೂರ್ತಿ ಗೌರವಿಸಿದರು.

Scanned by CamScanner

ರಾಜ್ಯ ಮಟ್ಟದ ವಿಚಾರ ಸಂಕಿರಣ

ಪಶ್ಚಿಮಘಟ್ಟ ಪ್ರದೇಶ ರಕ್ಷಿಸಿ

ವಿಕ ಚಿಕ್ಕಮಗಳೂರು

ವಿಕ ಸುದ್ದಿಲೋಕ, ಕೃಷ್ಣಗಿರಿ

ಅತ್ಯಂತ ಸೂಕ್ಷ್ಮ ಪ್ರದೇಶವಾಗಿರುವ ಪಶ್ಚಿಮ ಘಟ್ಟ ಭಾಗ ಈ ಪ್ರದೇಶದಲ್ಲಿರುವ ಪ್ರಾಣಿ ಸಂಕುಲಗಳನ್ನು ರಕ್ಷಿಸಬೇಕಾಗಿದೆ ಎಂದು ಕುಮಾರಿಯು ವನ್ಯಜೀವಿ ವಿಭಾಗದ ಉಪ ವನ್ಯ ಸಂರಕ್ಷಣಾಧಿಕಾರಿ ಡಾ.ರಮೇಶ್ ಕುಮಾರ್ ಹೇಳಿದರು.

ಕ್ಯಾಂಪಸ್

ಅವರು ಗುರುವಾರ ಶ್ರೀ ಜೆಸುಐಟ್ ಕಾಲೇಜಿನಲ್ಲಿ ಕುಮಾರಿಯು ರಾಷ್ಟ್ರೀಯ ಉದ್ಯಾನವನದ ಜೀವ ವೈವಿಧ್ಯತೆ ಬಗ್ಗೆ ಆಯೋಜಿಸಿದ್ದ ಒಂದು ದಿನದ ರಾಜ್ಯ ಮಟ್ಟದ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದರು.

ರಾಷ್ಟ್ರೀಯ ಉದ್ಯಾನವನದಲ್ಲಿರುವ ಕಲ್ಲು ಹೂವುಗಳು, ಜಾಮೆ ಸಸ್ಯಗಳು, ಹೂ ಬಿಡುವ ಸಸ್ಯಗಳು, ಸ್ಥಳೀಯ ಪ್ರಾಣಿಗಳು, ಉರಗಗಳು ಅಳಿವಿನ ಅಂಚಿನಲ್ಲಿದೆ. ಈ ಪ್ರದೇಶದಲ್ಲಿ ಮಾನವ ಮತ್ತು ಪ್ರಾಣಿಯ ಸಂಘರ್ಷ ಅನಾಹುತಗಳು ಉಂಟಾಗುತ್ತಿವೆ. ಇದನ್ನು ರಕ್ಷಿಸಲು ಕ್ರಮ ಕೈಗೊಳ್ಳುವುದು ಅನಿವಾರ್ಯವಾಗಿದೆ. ಪಶ್ಚಿಮ ಘಟ್ಟ ಪ್ರದೇಶದಲ್ಲಿ ಅರಣ್ಯ ಪ್ರದೇಶವನ್ನು ಬೆಳೆಸುವುದು ಅಗತ್ಯವಾಗಿದ್ದು, ಈ ನಿಟ್ಟಿನಲ್ಲಿ ಎಲ್ಲ ಜಾಗೃತಿ ಹಾಗೂ ಸೂಕ್ಷ್ಮ ಕಾಯಿದೆ ಆಗಬೇಕಿದೆ ಎಂದರು.

ಈ ಸಂದರ್ಭ ವಿಜ್ಞಾನದ ವಿವಿಧ ವಿದ್ಯಾರ್ಥಿಗಳು ಕುಮಾರಿಯು ರಾಷ್ಟ್ರೀಯ ಉದ್ಯಾನವನದ ಜೀವ ವೈವಿಧ್ಯತೆ ಬಗ್ಗೆ ನಡೆಸಿದ ಸಂಶೋಧನೆಯ ಪುಸ್ತಕ ಬಿಡುಗಡೆ ಮಾಡಲಾಯಿತು. ಪ್ರಾಚಾರ್ಯ ಡಾ.ಎಚ್ ಸಿ ಅಧಿಕಾರಿ ಲೆಫ್ಟಿನೆಂಟ್ ಡಾ.ಕುಮಾರಸ್ವಾಮಿ ಹೆಬ್ಬಾರ್ ನಿರೂಪಿಸಿದರು.



ಕೃಷ್ಣಗಿರಿ ಶ್ರೀ ಜೆಸುಐಟ್ ಕಾಲೇಜಿನಲ್ಲಿ ಕುಮಾರಿಯು ರಾಷ್ಟ್ರೀಯ ಉದ್ಯಾನವನದ ಜೀವ ವೈವಿಧ್ಯತೆ ಬಗ್ಗೆ ಕುಕ್ರವಾರ ಆಯೋಜಿಸಿದ್ದ ಒಂದು ದಿನದ ರಾಜ್ಯ ಮಟ್ಟದ ವಿಚಾರ ಸಂಕಿರಣವನ್ನು ಡಾ.ರಮೇಶ್ ಕುಮಾರ್ ಉದ್ಘಾಟಿಸಿದರು.

Scanned by CamScanner

10.9.14

ಅನುದಾನಿತ ಕಾಲೇಜುಗಳಿಗೆ ಸರಕಾರಿ ಶುಲ್ಕದಲ್ಲಿ ಪಾಲು

ಶೃಂಗೇರಿ: ಅನುದಾನಿತ ಕಾಲೇಜುಗಳ ಅಭಿವೃದ್ಧಿಗೆ ಸರಕಾರಿ ಶುಲ್ಕದಲ್ಲಿ ಶೇ.50 ಭಾಗ ನೀಡುವ ಮಹತ್ವದ ನಿರ್ಣಯವನ್ನು ಸರಕಾರ ಕೈಗೊಂಡಿದೆ ಎಂದು ಉನ್ನತ ಶಿಕ್ಷಣ ಸಚಿವ ಆರ್.ವಿ.ದೇಶಪಾಂಡೆ ಹೇಳಿದರು.

ಅವರು ಮಂಗಳವಾರ ಶ್ರೀ ಜೆಸಿಬಿಎಂ ಕಾಲೇಜಿನ ಸುವರ್ಣ ಮಹೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಅನುದಾನಿತ ಕಾಲೇಜುಗಳು ಸಹ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದು ಅಧ್ಯಾಪಕರ ನೇಮಕ ಮತ್ತಿತರ ಕೊರತೆಗಳನ್ನು ಎದುರಿಸುತ್ತವೆ. ಇದಕ್ಕೆ ಸರಕಾರಿ ಕಾಲೇಜುಗಳು ಸಹ ಹೊರತಾಗಿಲ್ಲ. ಸರಕಾರ ಹಂತಹಂತವಾಗಿ ಸಮಸ್ಯೆಗಳ ಪರಿಹಾರಕ್ಕಾಗಿ ಕ್ರಮ ಕೈಗೊಳ್ಳುತ್ತಿದೆ. ಸ್ಪರ್ಧಾತ್ಮಕ ಕಾಲದಲ್ಲಿರುವ ನಾವು ಶಿಕ್ಷಣಕ್ಕೆ ಮೊದಲ ಆದ್ಯತೆ ನೀಡಬೇಕಿದ್ದು ಇದಕ್ಕೆ ಸರಕಾರ ಹಾಗೂ ಶಿಕ್ಷಣ ಸಂಸ್ಥೆಗಳ ಮೇಲೆ ಹೆಚ್ಚಿನ ಜವಾಬ್ದಾರಿ ಇದೆ. ದೇಶದಲ್ಲಿ ಆರ್ಥಿಕ ಬಡತನವಿರಬಹುದು, ಆದರೆ ಜ್ಞಾನದ ಕೊರತೆಯಿಲ್ಲ. ಈ ಹಿಂದೆ ಗಣಕ ಯಂತ್ರ ಮತ್ತಿತರ ಆಧುನಿಕ ಸೌಲಭ್ಯಗಳು ಇರಲಿಲ್ಲ. ಆದರೆ ಈಗ ಎಲ್ಲ ಸವಲತ್ತು, ಸೌಲಭ್ಯಗಳು ಎಲ್ಲೆಡೆಯಿಂದ ಲಭ್ಯವಿದ್ದು ಇದರ ಪ್ರಯೋಜನವನ್ನು ವಿದ್ಯಾರ್ಥಿಗಳು ಪಡೆದುಕೊಳ್ಳಬೇಕು. ಶಿಕ್ಷಣ ಪಡೆಯುವುದು ಕೇವಲ ಸರಕಾರಿ ಉದ್ಯೋಗ ಹೊಂದುವುದಕ್ಕೆ ಎಂಬುದು ಸರಿಯಲ್ಲ. ಬದಲಾಗಿ ಸ್ವಯಂ ಉದ್ಯೋಗಕ್ಕೂ ಆದ್ಯತೆ ನೀಡಬೇಕಾಗಿದ್ದು, ಶಿಕ್ಷಣ ಸಂಸ್ಥೆಗಳು ಮತ್ತು ಸರಕಾರ ಸೃಷ್ಟಿಸುವ ಜವಾಬ್ದಾರಿ ಇದೆ ಎಂದರು.

ದೊಡ್ಡ ಸುದ್ದಿ

ಶಿಕ್ಷಣವು ಕೇವಲ ಉದ್ಯೋಗಕ್ಕಾಗಿ ಮೀಸಲಾಗುತ್ತಿದ್ದು ವಿದ್ಯಾರ್ಥಿಗಳು ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆಗಳಿಂದ ದೂರವಾಗುತ್ತಿದ್ದಾರೆ. ಅಂಕ ಪಡೆಯುವುದರೊಂದಿಗೆ ಸಾಮಾನ್ಯ ಜ್ಞಾನ, ದೇಶ ಮತ್ತು ವಿಶ್ವದ ಆಗುಹೋಗುಗಳ ಬಗ್ಗೆ ಹೆಚ್ಚಿನ ಗಮನ ಅಗತ್ಯವಾಗಿದ್ದು, ಇದರತ್ತ ವಿದ್ಯಾರ್ಥಿಗಳ ಗಮನ ಇರಬೇಕು. ದೇಶದಲ್ಲಿ ಶೇ.80ರಷ್ಟು ಜನರು ಉನ್ನತ ಶಿಕ್ಷಣದಿಂದ ದೂರವಿದ್ದು, ಹೆಚ್ಚಿನ ಜನರು ಉನ್ನತ ಶಿಕ್ಷಣ ಪಡೆಯಲು ಇನ್ನೂ ಸಾಧ್ಯವಾಗುತ್ತಿಲ್ಲ. ಸರಕಾರ ಗುಣಮಟ್ಟದ ಶಿಕ್ಷಣ ನೀಡಲು ಬದ್ಧವಾಗಿದೆ. ಶಿಕ್ಷಣವಿಲ್ಲದಿದ್ದರೆ ಈಗ ಜೀವನ ವ್ಯರ್ಥವಾಗಿದ್ದು, ಸ್ಪರ್ಧಾತ್ಮಕ ಯುಗದಲ್ಲಿ ನಾವು ಸ್ಪರ್ಧಿಸಬೇಕಾಗಿದೆ. ಇದಕ್ಕಾಗಿ ವಿಶ್ವ ಮಟ್ಟದಲ್ಲಿ ಸ್ಪರ್ಧೆ ಅನಿವಾರ್ಯವಾಗಿದೆಯಾದರೂ ಶಿಕ್ಷಣವೂ ಎಲ್ಲರಿಗೂ ದೊರಕುವಂತಿರಬೇಕು. ಅರವತ್ತರ ದಶಕದಲ್ಲಿ ಮಲೆನಾಡಿನ ಮೂಲೆ ಯಲ್ಲಿ ಶಿಕ್ಷಣ ಸಂಸ್ಥೆ ಪ್ರಾರಂಭಿಸಿದ ಮಹನೀಯ ರನ್ನು ನಾವು ನೆನಪು ಮಾಡಿಕೊಳ್ಳಬೇಕು ಎಂದು ಸಚಿವರು ಹೇಳಿದರು.



ಶೃಂಗೇರಿ ಜೆಸಿಬಿಎಂ ಕಾಲೇಜಿನ ಸುವರ್ಣ ಮಹೋತ್ಸವ ಕಾರ್ಯಕ್ರಮವನ್ನು ಮಂಗಳವಾರ ಸಚಿವ ಆರ್.ವಿ.ದೇಶಪಾಂಡೆ ಉದ್ಘಾಟಿಸಿದರು. ಶ್ರೀ ಮಠದ ಆಡಳಿತಾಧಿಕಾರಿ ಡಾ.ಗೌರೀಶಂಕರ್ ಮತ್ತಿತರರು ಹಾಜರಿದ್ದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಶ್ರೀ ಮಠದ ಆಡಳಿತಾಧಿಕಾರಿ ಡಾ.ವಿ.ಆರ್.ಗೌರಿಶಂಕರ್, 50 ವರ್ಷಗಳನ್ನು ಪೂರೈಸಿರುವ ಕಾಲೇಜು ಮಲೆನಾಡಿನ ಸಾವಿರಾರು ವಿದ್ಯಾರ್ಥಿಗಳಿಗೆ ಜೀವನ ನೀಡಿದೆ. ಇಲ್ಲಿ ಕಾಲೇಜು ಆರಂಭದಿಂದ ಈ ಭಾಗದ ವಿದ್ಯಾರ್ಥಿಗಳಿಗೆ ಉತ್ತಮ ಅವಕಾಶ ದೊರಕಿ ಉದ್ಯೋಗವನ್ನು ಪಡೆದಿದ್ದಾರೆ ಎಂದರು. ಮಣಿಪಾಲ ಅಕಾಡೆಮಿ ಜನರಲ್ ಎಜುಕೇಷನ್‌ನ ಡಾ.ಎಚ್.ಶಾಂತರಾಮ್ ಮಾತನಾಡಿ, ವಿದ್ಯಾರ್ಥಿಗಳು ಉತ್ತಮ ವ್ಯಕ್ತಿತ್ವ ರೂಪಿಸಿಕೊಂಡು ಭವಿಷ್ಯವನ್ನು ಉಜ್ವಲಗೊಳಿಸಿಕೊಳ್ಳಬೇಕು. ಸುವರ್ಣ ಮಹೋತ್ಸವ ಆಚರಿಸಿಕೊಳ್ಳುತ್ತಿರುವ ಕಾಲೇಜು ಕಳೆದ ವರ್ಷ ನ್ಯಾಕ್ ಸಂಸ್ಥೆಯಿಂದ ಎ ಶ್ರೇಣಿ ಪಡೆದಿದ್ದು, ಕುವೆಂಪು ವಿವಿಯಿಂದಲೂ ಉತ್ತಮ ಕಾಲೇಜು ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ ಎಂದರು.

ಸುವರ್ಣ ಮಹೋತ್ಸವ ಸಮಿತಿ ಅಧ್ಯಕ್ಷೆ ಅನಂತಪದ್ಮನಾಭ ಭಟ್, ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷೆ ಎಚ್.ಟಿ.ರಮೇಶ್ ಉಪಸ್ಥಿತರಿದ್ದರು. ಪ್ರಾಚಾರ್ಯ ಡಾ.ಎಚ್.ಸಿ.ವೀರಭದ್ರಗೌಡ ಸ್ವಾಗತಿಸಿದರು. ಕೆ.ಎಸ್.ಚಂದ್ರಶೇಖರರಾವ್ ವ್ಯಾಸ್ತವಿಕ ಮಾತನಾಡಿದರು. ಡಾ.ಸಿ.ಪಿ. ಗಿರಿಧರಶಾಸ್ತ್ರಿ ನಿರೂಪಿಸಿ, ಟಿ.ಕೆ.ಪರಾಶರ ವಂದಿಸಿದರು.

Scanned by CamScanner

ವಿಜಯ ಕರ್ನಾಟಕ ಸೋಮವಾರ 20 ಅ, 2014

ಮಾನವ ಸಂಪನ್ಮೂಲ ಸದ್ಬಳಕೆಯಿಂದ ಅಭಿವೃದ್ಧಿ ಸಾಧ್ಯ

ಕ್ಯಾಂಪಸ್



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ಎರಡು ದಿನಗಳ ರಾಷ್ಟ್ರೀಯ ಕಾರ್ಯಾಗಾರವನ್ನು ಮೈಸೂರು ವಿ.ವಿ.ಯ ಡಾ.ಆರ್.ಇಂದಿರಾ ಉದ್ಘಾಟಿಸಿದರು.

ಶೃಂಗೇರಿ: ಮಾನವ ಸಂಪನ್ಮೂಲವನ್ನು ದೇಶ ಸದುಪಯೋಗಪಡಿಸಿಕೊಂಡಲ್ಲಿ ಅಭಿವೃದ್ಧಿ ಹೊಂದಲು ಸಹಾಯಕವಾಗಲಿದ್ದು, ಅಭಿವೃದ್ಧಿಗೆ ಯಾವ ತಂತ್ರಗಳನ್ನು ಬಳಸಿಕೊಂಡು ಪ್ರಗತಿಯತ್ತ ಮುನ್ನಡೆಯಲು ಸಾಧ್ಯ ಎಂಬುದನ್ನು ಕಂಡುಕೊಳ್ಳಬೇಕಿದೆ ಎಂದು ಮೈಸೂರು ವಿ.ವಿ.ಯ ಡಾ.ಆರ್. ಇಂದಿರಾ ಹೇಳಿದರು.

ಅವರು ಶುಕ್ರವಾರ ಶ್ರೀ ಜೆಸಿಬಿಎಂ ಕಾಲೇಜಿನಲ್ಲಿ ಎರಡು ದಿನಗಳ ರಾಷ್ಟ್ರೀಯ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ಮಾನವ ಸಂಪನ್ಮೂಲ ಲೆಕ್ಕಾಚಾರದಲ್ಲಿ ಪ್ರಸ್ತುತ ಉದ್ಭವಿಸುತ್ತಿರುವ ಪ್ರಮುಖ ಸವಿಧ ಶಜ್ಞರು ವಿಷಯದ ಬಗ್ಗೆ ಪ್ರಬಂಧ ಮಂಡಿಸಲಿದ್ದಾರೆ. ಆದಾಯ ಮತ್ತು ವೆಚ್ಚಗಳ ಲೆಕ್ಕಾಚಾರ ಅಗತ್ಯವಾಗಿದ್ದು, ಇದರ ಸಮರ್ಪಕ ಮಾಹಿತಿ ಇದ್ದರೆ ಅಭಿವೃದ್ಧಿಗೆ ಸಹಾಯಕವಾಗುತ್ತದೆ. ಅಭಿವೃದ್ಧಿಯು ಕೇವಲ ನಗರ ಮತ್ತು ಪಟ್ಟಣ ಪ್ರದೇಶಗಳಿಗೆ ಸೀಮಿತವಾಗದೆ ಗ್ರಾಮೀಣ ಪ್ರದೇಶಗಳಿಗೂ ತಲುಪಬೇಕಿದ್ದು, ಇದರಿಂದ ದೇಶದ ಅಭಿವೃದ್ಧಿ ಸಾಧ್ಯ ಎಂದರು.

ಕಾರ್ಯಾಗಾರದ ದಿಕ್ಸೂಚಿ ಭಾಷಣ ಮಾಡಿದ ಮೈಸೂರಿನ ಡಾ.ಶೇಖರ್. ಎಸ್.ಅಯ್ಯರ್, ಕೆಲಸದಲ್ಲಿ ಚುರುಕುತನ ಅಗತ್ಯವಾಗಿದ್ದು, ಸೇವೆ ಎಂಬುದು ವೇಗ ಪಡೆದುಕೊಳ್ಳಬೇಕಿದೆ. ಇದರೊಂದಿಗೆ ಗುಣಮಟ್ಟ ಕಾಯ್ದುಕೊಳ್ಳುವ ಅಗತ್ಯವಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಮಣಿಪಾಲ ಅಕಾಡೆಮಿ ಆಫ್ ಜನರಲ್ ಎಜುಕೇಷನ್‌ನ ಡಾ.ಎಚ್. ಶಾಂತರಾಂ, ಮನುಷ್ಯರಿಗೆ ಪ್ರತಿಯೊಂದು ಅಂಗಾಂಗವು ಮುಖ್ಯವಾಗಿದ್ದು, ಒಂದು ಬೆರಳಿಗೆ ಹಾನಿಯಾದರೂ ಅದರ ಕಷ್ಟವನ್ನು ಆತ ಅನುಭವಿಸಬೇಕು. ಅದೇ ರೀತಿ ದೇಶ ಅಭಿವೃದ್ಧಿಯಾಗಲು ಪ್ರತಿಯೊಬ್ಬರೂ ತಮ್ಮದೇ ಆದ ಕೊಡುಗೆ ನೀಡಬೇಕು. ವಿದ್ಯಾರ್ಥಿಗಳು ಕಾರ್ಯಾಗಾರದಲ್ಲಿ ಮಂಡಿಸುವ ಪ್ರಬಂಧಗಳ ಲಾಭ ಪಡೆದುಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಚಾರ್ಯ ಡಾ.ವೀರಪ್ಪಗೌಡ, ಪಿಯು ಕಾಲೇಜಿನ ಪ್ರಾಚಾರ್ಯ ಡಾ.ಸಿ.ವಿ.ಗಿರಿಧರಶಾಸ್ತ್ರಿ ಹಾಜರಿದ್ದರು. ಯಶವಂತಿ ಎಸ್.ಸಾಲ್ಯಾನ್ ಸ್ವಾಗತಿಸಿದರು. ಪದ್ಮಿನಿ ನಡಿಲೂರ್ ವಂದಿಸಿದರು.

Scanned by CamScanner

ವಿಭಾಗೀಯ ಮಟ್ಟಕ್ಕೆ ಆಯ್ಕೆ

ಶೃಂಗೇರಿ: ಚಿಕ್ಕಮಗಳೂರಿನಲ್ಲಿ ನಡೆದ ಜಿಲ್ಲಾ ಮಟ್ಟದ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಜೆಸಿಬಿಎಂ ಕಾಲೇಜಿನ ವಿದ್ಯಾರ್ಥಿಗಳು ಉತ್ತಮ ಪ್ರದರ್ಶನ ನೀಡಿ 6 ವಿಭಾಗಗಳಲ್ಲಿ ಜಯ ಗಳಿಸಿ ವಿಭಾಗೀಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಭಾವಗೀತೆಯಲ್ಲಿ ಕಾವ್ಯ ಪ್ರಥಮ, ಜಾನಪದಗೀತೆ- ದೀಪ್ತಿ, ಚರ್ಚಾಸ್ಪರ್ಧೆ- ಪ್ರದೀಪ್, ವಿಜ್ಞಾನ ಭಾಷಣ-ಪ್ರಿಯ ಪ್ರಥಮ ಸ್ಥಾನ ಗಳಿಸಿದ್ದು, ಭಾವಗೀತೆಯಲ್ಲಿ ಸುರಭಿ ದ್ವಿತೀಯ, ಏಕಪಾತ್ರಾಭಿನಯದಲ್ಲಿ ಶ್ರೀರಾಮ್ ಅಂಗೀರಸ ದ್ವಿತೀಯ ಸ್ಥಾನ ಗಳಿಸಿದ್ದಾರೆ.

ವಿಭಾಗೀಯ ಮಟ್ಟಕ್ಕೆ ಆಯ್ಕೆ

Scanned by CamScanner

ವಿಭಾಗೀಯ ಮಟ್ಟಕ್ಕೆ ವಿದ್ಯಾರ್ಥಿಗಳ ಆಯ್ಕೆ

ಶೃಂಗೇರಿ: ಚಿಕ್ಕಮಗಳೂರಿನಲ್ಲಿ ಜಿಲ್ಲಾ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳಿಗೆ ನಡೆಸಲಾದ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಜೆಸಿಬಿಎಂ ಕಾಲೇಜಿನ ವಿದ್ಯಾರ್ಥಿಗಳು ಎಲ್ಲ ವಿಭಾಗಗಳಲ್ಲಿ ಅತ್ಯುತ್ತಮ ಪ್ರದರ್ಶನ ನೀಡುವ ಮೂಲಕ ಆರು ವಿಭಾಗಗಳಲ್ಲಿ ಜಯಗಳಿಸಿ ವಿಭಾಗೀಯ ಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ. ಎಚ್.ಕೆ. ಕಾವ್ಯ, ದ್ವಿತೀಯ ಪಿಯುಸಿ ಭಾವಗೀತೆ ಪ್ರಥಮ, ಕು. ದೀಪ್ತಿ ಪ್ರಥಮ ಪಿಯುಸಿ ಜಾನಪದಗೀತೆ ಪ್ರಥಮ, ಪ್ರದೀಪ್ ಪ್ರಥಮ ಪಿಯುಸಿ ಚರ್ಚಾ ಸ್ಪರ್ಧೆ ಪ್ರಥಮ, ಕು. ಪ್ರಿಯಜ್ಞಾನ ಭಾಷಣ ಪ್ರಥಮ, ಕು. ಸುರಭಿ ಭಾವಗೀತೆ ದ್ವಿತೀಯ, ಕು. ಶ್ರೀರಾಮ್ ಆಂಗೀರಸ ಏಕಪಾತ್ರಾಭಿನಯ ದ್ವಿತೀಯ ಸ್ಥಾನ ಗಳಿಸಿರುತ್ತಾರೆ. ವಿಜೇತ ವಿದ್ಯಾರ್ಥಿಗಳನ್ನು ಪ್ರಾಚಾರ್ಯರು, ಉಪನ್ಯಾಸಕ ವರ್ಗ, ಆಡಳಿತ ಮಂಡಳಿ ಅಭಿನಂದಿಸಿದೆ.

Scanned by CamScanner

ಸಾಂಸ್ಕೃತಿಕ ಸ್ಪರ್ಧೆ: ಜೆಸಿಬಿಎಂ ಕಾಲೇಜಿಗೆ ಸಮಗ್ರ ಪ್ರಶಸ್ತಿ

ಶೃಂಗೇರಿ: ಡಿ.16 ರಂದು ಚಿಕ್ಕಮಗಳೂರಿನಲ್ಲಿ ನಡೆದ ಜಿಲ್ಲಾ ಮಟ್ಟದ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳಿಗೆ ನಡೆಸಲಾದ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಶ್ರೀ ಜೆ.ಸಿ.ಬಿ.ಎಂ. ಕಾಲೇಜಿನ ವಿದ್ಯಾರ್ಥಿಗಳು ಎಲ್ಲಾ ವಿಭಾಗಗಳಲ್ಲಿ ಅತ್ಯುತ್ತಮ ಪ್ರದರ್ಶನ ನೀಡುವ ಮೂಲಕ ಆರು ವಿಭಾಗಗಳಲ್ಲಿ ಜಯಗಳಿಸಿ ವಿಭಾಗೀಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ದ್ವಿತೀಯ ಪಿಯುನ ಎಚ್.ಕೆ.ಕಾವ್ಯ ಭಾವಗೀತೆಯಲ್ಲಿ ಪ್ರಥಮ, ಪ್ರಥಮ ಪಿಯುನ ದೀಪ್ತಿ ಜಾನಪದಗೀತೆಯಲ್ಲಿ ಪ್ರಥಮ, ಪ್ರಥಮ.ಪಿಯುನ ಪ್ರದೀಪ್ ಚರ್ಚಾಸ್ಪರ್ಧೆ ಪ್ರಥಮ, ಪ್ರಿಯ ವಿಜ್ಞಾನ ಭಾಷಣ ಸ್ಪರ್ಧೆಯಲ್ಲಿ ಪ್ರಥಮ, ಸುರಭಿ ಭಾವಗೀತೆ ಸ್ಪರ್ಧೆಯಲ್ಲಿ ದ್ವಿತೀಯ, ಶ್ರೀರಾಮ್ ಅಂಗೀರಸ ಏಕಪಾತ್ರಾಭಿನಯದಲ್ಲಿ ದ್ವಿತೀಯ ಸ್ಥಾನ ಗಳಿಸಿರುತ್ತಾರೆ. ಪ್ರಶಸ್ತಿ ಗಳಿಸಿದ ವಿಧ್ಯಾರ್ಥಿಗಳನ್ನು ಪದವಿ ಪ್ರಾಂಶುಪಾಲ ಡಾ। ಎಚ್.ಸಿ.ವೀರಪ್ಪ ಗೌಡ ಮತ್ತು ಪದವಿ ಪೂರ್ವ ವಿಭಾಗದ ಪ್ರಾಚಾರ್ಯ ಡಾ। ಗಿರಿಧರ ಶಾಸ್ತ್ರೀ ಹಾಗೂ ಆಡಳಿತ ಮಂಡಳಿ ಅಭಿನಂದಿಸಿದೆ.

Scanned by CamScanner

ವಿಭಾಗೀಯ ಮಟ್ಟಕ್ಕೆ ಜೆಸಿಬಿಎಂ ವಿದ್ಯಾರ್ಥಿಗಳು ಆಯ್ಕೆ

ಶೃಂಗೇರಿ (ಬಾಳೆಹೊನ್ನೂರು): ಚಿಕ್ಕಮಗಳೂರಿನಲ್ಲಿ ಇತ್ತೀಚೆಗೆ ನಡೆದ ಜಿಲ್ಲಾ ಮಟ್ಟದ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಜೆಸಿಬಿಎಂ ಕಾಲೇಜಿನ ವಿದ್ಯಾರ್ಥಿಗಳು ಆರು ವಿಭಾಗದಲ್ಲಿ ಜಯಗಳಿಸಿ ವಿಭಾಗೀಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ದ್ವಿತೀಯ ಪಿಯುಸಿ ಎಚ್.ಕೆ.ಕಾವ್ಯ ಭಾವ ಗೀತೆ (ಪ್ರಥಮ), ಪ್ರಥಮ ಪಿಯುಸಿ ದೀಪ್ತಿ. ಜಾನಪದ ಗೀತೆ (ಪ್ರಥಮ), ಪ್ರದೀಪ್ ಚರ್ಚಾ ಸ್ಪರ್ಧೆ (ಪ್ರಥಮ). ಪ್ರಿಯಾ ವಿಜ್ಞಾನ ಭಾಷಣ (ಪ್ರಥಮ), ಸುರಭಿ ಭಾವಗೀತೆ (ದ್ವೀತೀಯ), ಶ್ರೀರಾಮ್ ಅಂಗೀರಸ ಏಕಪಾತ್ರಾಭಿನಯದಲ್ಲಿ ದ್ವಿತೀಯ ಸ್ಥಾನ ಪಡೆದಿದ್ದಾರೆ ಎಂದು ಪದವಿ ವಿಭಾಗದ ಪ್ರಾಚಾರ್ಯ ಎಚ್.ಸಿ.ವೀರಪ್ಪಗೌಡ ತಿಳಿಸಿದ್ದಾರೆ. ಪದವಿ ಪೂರ್ವಕಾಲೇಜಿನ ಪ್ರಾಂಶುಪಾಲ ಗಿರಿಧರ ಶಾಸ್ತ್ರೀ ಎಲ್ಲರನ್ನೂ ಅಭಿನಂದಿಸಿದ್ದಾರೆ.

ಪ್ರಜಾವಾಣಿ - 23-12-14

Scanned by CamScanner

ವಿಜ್ಞಾನ ಸಂಘ ಉದ್ಘಾಟನೆ



ಶೃಂಗೇರಿ: ಶ್ರೀ ಜೆಸಿಬಿಎಂ ಕಾಲೇಜು ವಿಜ್ಞಾನ ಸಂಘವನ್ನು ಉದ್ಘಾಟಿಸಿ ಡಾ। ಅನಂತಪದ್ಮನಾಭ ಭಟ್ಟ ಮಾತನಾಡಿದರು.

ಶೃಂಗೇರಿ: ಶ್ರೀ ಜೆಸಿಬಿಎಂ ಕಾಲೇಜಿನ ವಿಜ್ಞಾನ ಸಂಘವನ್ನು ಉಡುಪಿ ಪೂರ್ಣಪ್ರಜ್ಞಾ ಕಾಲೇಜಿನ ಡಾ।ಅನಂತಪದ್ಮನಾಭ ಭಟ್ಟ ಉದ್ಘಾಟಿಸಿದರು.

ನಂತರ ವಂಡರ್ಸ್ ಆಫ್ ಕಾಸ್ಮಾಸ್ ಎಂಬ ವಿಷಯದ ಕುರಿತು ಮಾತನಾಡಿ, ಸೌರವ್ಯೂಹ, ಭೂಮಿ ಹಾಗೂ ಇತರ ಗ್ರಹಗಳ ನಡುವಿನ ಸಾಮ್ಯತೆ ಮತ್ತು ಭಿನ್ನತೆ, ನಕ್ಷತ್ರ, ನಿಹಾರಿಕೆ ಹಾಗೂ ಖಗೋಳ ವಿಜ್ಞಾನಕ್ಕೆ ಭಾರತೀಯ ವಿಜ್ಞಾನಿಗಳು ನೀಡಿರುವ ಕೊಡುಗೆಗಳ ಬಗ್ಗೆ ಸ್ಲೈಡ್ ಮೂಲಕ ವಿವರಿಸಿದರು.

ಪ್ರಾಂಶುಪಾಲ ಡಾ। ಎಚ್.ಸಿ.ವೀರಪ್ಪಗೌಡ ಅಧ್ಯಕ್ಷತೆ ವಹಿಸಿದ್ದರು. ವಿದ್ಯಾರ್ಥಿ ಕ್ಷೇಮಪಾಲನಾ ಅಧಿಕಾರಿ ಪ್ರೊ।ದತ್ತಾತ್ರೇಯ ಎಂ. ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಪ.ಪೂ. ಕಾಲೇಜು ಪ್ರಾಂಶುಪಾಲ ಡಾ। ಸಿ.ವಿ.ಗಿರಿಧರ ಶಾಸ್ತ್ರಿ, ಪ್ರೊ। ಮನೀರ್ ಅಹಮದ್ ಖಾನ್, ವಿಜ್ಞಾನ ಸಂಘದ ಅಧ್ಯಕ್ಷ ಕೃಷ್ಣ ಕಾರ್ತಿಕ್ ಭಟ್ ಹಾಗೂ ಉಪಾಧ್ಯಕ್ಷ ಶ್ರವಣ್ ಕುಮಾರ್ ಉಪಸ್ಥಿತರಿದ್ದರು.

ಅನುಶ್ರೀ ಹೆಬ್ಬಾರ್ ನಿರೂಪಿಸಿದರು. ಸ್ವಾತಿ ಪಿ.ಎಲ್. ಸ್ವಾಗತಿಸಿ, ಸನ್ನಿದಿ ಇ.ಕೆ. ವಂದಿಸಿದರು.

ಉಸಂವಾಣಿ - 9-9-14

Scanned by CamScanner

ದಕ್ಷಿ ಉಪನ್ಯಾಸ ■ ಉಪನ್ಯಾಸಕ ಮೊದಲು ಸಾಧಕನಾಗಬೇಕು. ನಂತರ ಸಾರ್ಥಕ, ಶೋಧಕನಾಗಿ ಬೋಧಕನಾಗಬೇಕು

ಬೆಳಕಿನೆಡೆಗೆ ಶಿಷ್ಯನನ್ನು ಕೊಂಡೊಯ್ಯುವವನೆ ಗುರು

ಶೃಂಗೇರಿ: ಜೆಸಿಬಿಎಂ ಕಾಲೇಜಿನಲ್ಲಿ ಹಳೆ ವಿದ್ಯಾರ್ಥಿ ಸಂಘ ಆಯೋಜಿಸಿದ್ದ ಗುರುನಮನ ಹಾಗೂ ಡಾ। ಕೆ.ಬಿ.ರಾಮಕೃಷ್ಣ ರಾವ್ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದರು.

ಉಪನ್ಯಾಸಕ ಮೊದಲು ಸಾಧಕನಾಗಬೇಕು. ನಂತರ ಸಾರ್ಥಕ, ಶೋಧಕನಾಗಿ ಬೋಧಕನಾಗಬೇಕು. ವಿದ್ಯಾರ್ಥಿಗಳು ಬೆಳಕಿನ ಕಿಡಿಗಳ ಕುಡಿಗಳಾಗಬೇಕು. ಆದರೆ ಕಿಡಿಗಳು ಬೆಂಕಿಯ ಕಿಡಿಗಳಾಗುವಾರದು. ಮನುಷ್ಯನ ಕೊಳೆ ತೊಳೆಯುವಂತಹ ಕೆಲಸ ಗುರುವಿನಿಂದಾಗಬೇಕು. ಜಗತ್ತಿನಲ್ಲಿ ಗುರುವಿಗೆ ವಿಶಿಷ್ಟವಾದ ಸ್ಥಾನಮಾನ ಇದೆ. ಬೆಳಕನ್ನು ನೀಡ ಶಕ್ತಂಶಹವನೆ ಗುರು' ಆದಿ ಶಂಕರರು ನದಾ ಕಾಲ ಶಿಷ್ಯರ ಅಭ್ಯುದಯಕ್ಕೆ ಕಾರಣಭೂತರಾದವರು. ಸದ್ಗುರುವಿನ ಮಾರ್ಗದರ್ಶನದಲ್ಲಿ ಮುನ್ನಡೆದು ಸಾಧನೆ ಮಾಡಬೇಕು ಎಂದರು.

ಇಂದಿನ ಶಿಕ್ಷಣ ಉದ್ಯೋಗ ಮತ್ತು ಸಂಪಾದನೆಗಾಗಿ ಎಂಬಂತಾಗಿದೆ. ಸಂಸ್ಕಾರಕ್ಕಾಗಿ ಶಿಕ್ಷಣವಾಗಬೇಕು. ಇಂದಿನ ವಿದ್ಯಾರ್ಥಿಗಳಲ್ಲಿ ಸಿದ್ಧ ಪ್ರಶ್ನೆಗೆ ಸಿದ್ಧ ಉತ್ತರ ಇರುತ್ತದೆ. ಜ್ಞಾನದ ಕೊರತೆ ಇದೆ. ಕೇವಲ ಹೆಚ್ಚು ಅಂಕ ಗಳಿಸಿದ ಮಾತ್ರಕ್ಕೆ ಆತ ಬುದ್ಧಿವಂತನಾಗುವುದಿಲ್ಲ. ಬುದ್ಧಿ ಜಡವಾದರೆ ಹೃದಯ ಜಡವಾಗುತ್ತದೆ. ಹೃದಯಕ್ಕೆ ಬೆಲೆ ಕೊಡಬೇಕು. ವಿದ್ಯಾರ್ಥಿಗಳು ಜಾಗೃತರಾಗಬೇಕು. ಎಂದು ಮುದ್ರಾಡಿ ಹೇಳಿದರು. ಕಷ್ಟಗಳನ್ನು ಕಾಣುವ ಶಕ್ತಿ ಬೆಳೆಸಿಕೊಳ್ಳಬೇಕು. ಇಂದಿಗೆ ವಿದ್ಯೆ ಬುದ್ಧಿಗಷ್ಟೆ ಬೆಲೆ ಬಂದಿದೆ. ಪರಿಣಾಮ ವಿನಯ, ಕ್ರಮೆ ಮರೆಯಾಗಿದೆ. ಸಂಸ್ಕೃತಿ ಸಮಾಜ ಮಾಯವಾಗಿದೆ. ಜೋಡಣೆ ಬಂದಿದೆ ಆದರೆ ಸಾಧನೆ ಹೋಗಿದೆ. ಸಂಸ್ಕಾರ ಕುಸಿದಿದೆ, ಸಂಸ್ಕಾರ ಸಿದ್ಧಿ ಬೇಕು. ಕಲಿ ಇರುವುದೇ ಬಾಗುವುದಕ್ಕಾಗಿ, ಕಲಿ ಮೂಡುವುದಕ್ಕಾಗಿ ಆದರೆ ಕಲಿ ಬೀಗುವುದಕ್ಕಾಗಿ ಅಲ್ಲ ಎಂದು ಮುದ್ರಾಡಿ ಹೇಳಿದರು. ಕಾರ್ಯಕ್ರಮದಲ್ಲಿ ಉದ್ಯಮಿ ವೆಂಕಟೇಶಮೂರ್ತಿ, ಮಂಗಳೂರಿನಲ್ಲಿ ಕರ್ತವ್ಯದಲ್ಲಿರುವ ಡಿವೈಎಸ್‌ಪಿ ಕೆ.ಎಂ.ಶಾಂತಪ್ಪ ಕೆರೆ ಉಪಸ್ಥಿತರಿದ್ದರು.

ಕೆ.ಎನ್.ವೀರಭದ್ರಗೌಡ ಮತ್ತು ಭೈರಪ್ಪಾಜಿ ಸ್ಮಾರಕ ಸಹಾಯಧನವನ್ನು ವಿತರಿಸಲಾಯಿತು.

ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಎಚ್. ಎಸ್.ಸಿದ್ದಪ್ಪ ಅಧ್ಯಕ್ಷತೆ ವಹಿಸಿದ್ದರು. ಜೆಸಿಬಿಎಂ ಕಾಲೇಜಿನ ಪ್ರಾಚಾರ್ಯ ಡಾ।ಎಚ್.ಸಿ.ವೀರೇಶ್ವರಗೌಡ ಸ್ವಾಗತಿಸಿ,ಎಚ್. ಎಂ.ವಂಜುನಾಥಗೌಡ,ಕರುಣ್ಮವಂಕಪ್ಪ ವೆಂಕಟ್ಟ ನಿರೂಪಿಸಿ,ಕೆ.ಟಿ.ಮಂಜುನಾಥ್ ವಂದಿಸಿದರು.



ಶೃಂಗೇರಿ: ಜೆಸಿಬಿಎಂ ಕಾಲೇಜಿನಲ್ಲಿ ಹಳೆ ವಿದ್ಯಾರ್ಥಿ ಸಂಘ ಆಯೋಜಿಸಿದ್ದ ಗುರುನಮನ ಹಾಗೂ ಡಾ। ಕೆ.ಬಿ.ರಾಮಕೃಷ್ಣ ರಾವ್ ದತ್ತಿ ಉಪನ್ಯಾಸ ಕಾರ್ಯಕ್ರಮವನ್ನು ಸಾಹಿತಿ ಅಂಬಾತನಯ ಮುದ್ರಾಡಿ ಉದ್ಘಾಟಿಸಿದರು.

ಉದಯವಾಣಿ ಉದಯವಾಣಿ ಸೋಮವಾರ ದಿನಾಂಕ 6.2.12

Scanned by CamScanner

ವಿಜಯವಾಣಿ 10 ಡಿಸೆಂಬರ್ 2014 ಬುಧವಾರ SHIMOGA

ಉನ್ನತ ಶಿಕ್ಷಣ ಉಚಿತವಾಗಿ ನೀಡಲು ಚಿಂತನೆ

■ ಉನ್ನತ ಶಿಕ್ಷಣ ಸಚಿವ ಆರ್.ವಿ.ದೇಶಪಾಂಡೆ ಮಾಹಿತಿ ■ ಶೃಂಗೇರಿ ಜೆಸಿಬಿಎಂ ಕಾಲೇಜಿನ ಸುವರ್ಣಮಹೋತ್ಸವ

ಶಿಕ್ಷಣಕ್ಕೆ ಹಣವು ವಿದ್ಯಾರ್ಥಿಗಳು ಉನ್ನತ ಶಿಕ್ಷಣದಿಂದ ವಂಚಿತರಾಗುತ್ತಿರುವ ಹಿನ್ನೆಲೆಯಲ್ಲಿ ಉನ್ನತ ಶಿಕ್ಷಣವನ್ನು ಉಚಿತವಾಗಿ ನೀಡಲು ಈಗಾಗಲೆ ಚಿಂತನೆ ನಡೆದಿದೆ ಎಂದು ಉನ್ನತ ಶಿಕ್ಷಣ ಹಾಗೂ ಮಾನವೀಯತೆ ಖಾತೆ ಸಚಿವ ಆರ್.ವಿ.ದೇಶಪಾಂಡೆ ತಿಳಿಸಿದರು.

ಶೃಂಗೇರಿಯಲ್ಲಿ ಮಂಗಳವಾರ ಜೆಸಿಬಿಎಂ ಕಾಲೇಜಿನ ಸುವರ್ಣಮಹೋತ್ಸವ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು.

ಇಂದಿನ ಯುಗ ಜ್ಞಾನಕ್ಕೆ ಪ್ರಾಶಸ್ತ್ಯವಾಗಿದ್ದು, ಗುಣಮಟ್ಟದ ಶಿಕ್ಷಣ ನೀಡುವುದು ಹಾಗೂ ವಿದ್ಯಾರ್ಥಿಗಳ ಭವಿಷ್ಯವನ್ನು ಉಜ್ವಲವಾಗಿ



ಶೃಂಗೇರಿ ಜೆಸಿಬಿಎಂ ಕಾಲೇಜು ಸುವರ್ಣ ಮಹೋತ್ಸವ ಸಮಾರಂಭವನ್ನು ಶೃಂಗೇರಿ ಶ್ರೀಮಠದ ಆಡಳಿತಾಧಿಕಾರಿ ಡಾ. ವಿ.ಆರ್.ಗೌರಿಶಂಕರ್ ಉದ್ಘಾಟಿಸಿದರು.

ರೂಪಿಸುವಲ್ಲಿ ಸರ್ಕಾರ ಹಾಗೂ ಶಿಕ್ಷಣ ಸಂಸ್ಥೆಗಳ ಪಾತ್ರ ಬಹಳ ಮುಖ್ಯ. ಈ ನಿಟ್ಟಿನಲ್ಲಿ ವಿತ್ತ ಮಾರುಕಟ್ಟೆಯಲ್ಲಿ ಎದುರಾಗುತ್ತಿರುವ ಸವಾಲುಗಳನ್ನು ನಾವು ಸಿದ್ಧರಾಗಬೇಕಿದೆ. ಈ ಹಿನ್ನೆಲೆಯಲ್ಲಿ ಉಚಿತವಾಗಿ ಉನ್ನತ ಶಿಕ್ಷಣ ನೀಡುವ ಬಗ್ಗೆ ಯೋಚಿಸಲಾಗಿದೆ ಎಂದರು.

ಹೊಸಪೇಟೆಯ ಮುಕ್ಕುಂದಾ ಕಾಲೇಜಿಗೆ ಸೇರಿದ ತಕ್ಷಣ ತಮ್ಮ ಬಳಿಯಿದ್ದ ಮೂರಿಯಂತೆಂದು ತಿಳಿದುಕೊಳ್ಳಬಾರದು. ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಮೂಡಿಸಬೇಕು. ಉತ್ತಮ ಚಾರಿತ್ರ್ಯ ನಿರ್ಮಾಣವಾಗಬೇಕು. ಈ ಹಿನ್ನೆಲೆಯಲ್ಲಿ ಶಿಕ್ಷಕರು ವಿದ್ಯಾರ್ಥಿಗಳ ಕನಸು ಏನೆಂಬುದನ್ನು ಅರಿತುಕೊಂಡು ಅದನ್ನು ಪೂರೈಸುವ ಪಣತೊಡಲು ಕಾರ್ಯಪ್ರವೃತ್ತರಾಗಬೇಕು.

ಉನ್ನತ ಶಿಕ್ಷಣ ಸಚಿವ

ಆಗಿನ ಕಾಲದಲ್ಲಿ ಇಷ್ಟೊಂದು ಶಿಕ್ಷಣ ಸಂಸ್ಥೆಗಳು ಇರಲಿಲ್ಲ. ಆರ್ಥಿಕ ಸಮಸ್ಯೆಯೂ ಇದ್ದ ಕಾರಣ ಎಷ್ಟೋ ಉನ್ನತ ಶಿಕ್ಷಣ ಪಡೆಯಲು ಇದ್ದಾಗುತ್ತಿರಲಿಲ್ಲ. ಅದಕ್ಕೆ ಇಂದು ಸರ್ಕಾರ ಹಾಗೂ ಇಷ್ಟೊಂದು ಖಾಸಗಿ ಶಿಕ್ಷಣ ಸಂಸ್ಥೆಗಳು ಗುಣಮಟ್ಟದ ಶಿಕ್ಷಣ ನೀಡುತ್ತಿವೆ. ಶಿಕ್ಷಣ ಸಂಸ್ಥೆಗಳ ಬೆಳವಣಿಗೆ ಉದ್ದೇಶದಿಂದ ಅನುದಾನಿತ ಶಿಕ್ಷಣ ಸಂಸ್ಥೆಗಳು ಸಲ್ಲಿಸುವ ಕೇ.100ರಷ್ಟು ಖರ್ಚಿನಲ್ಲಿ ಮಾತ್ರ ಸರ್ಕಾರ ಭರಿಸುತ್ತಿದೆ. ಉಳಿದ ಕೇ.50ರಷ್ಟು ಮೊತ್ತವನ್ನು ಆಯಾ ಶಿಕ್ಷಣ ಸಂಸ್ಥೆಯ ಅಭಿವೃದ್ಧಿಗೆ ಬಳಸಿಕೊಳ್ಳಲಾಗುವುದು ಎಂದರು.

ಶಿಕ್ಷಣ ಎಂಬುದು ಮಾರಾಟಕ್ಕಿಟ್ಟ ಸರಕಾಗಿದೆ. ಶಿಕ್ಷಣದ ಸಂಪೆ ಉದ್ಯೋಗ ಗಳಿಸುವ ಯುವ ಜನತೆಗೆ ಉದ್ಯೋಗವನ್ನು ದೊರೆಯುವಂತಾಗಬೇಕು. ಇದರಿಂದ ದೇಶಕ್ಕೆ ಉತ್ತಮ ಭವಿಷ್ಯ ದೊರೆಯಲಿದೆ ಭಾರತ ಬುದ್ಧಿಜೀವಿಗಳ ದಾಸ್ತಿ ಇದ್ದರೂ ಬಡತನವಿದ್ದರೂ ಬುದ್ಧಿವಂತಿಕೆಗೆ ಕೊರತೆ ಇಲ್ಲ. ಈ ನಿಟ್ಟಿನಲ್ಲಿ ಶಿಕ್ಷಣವು ಬಡ ಜನರಿಗೆಸಲು ನೀಡಲು ಸಿಮಿತವಾಗದೆ ಸಾಮಾನ್ಯ ಪ್ರಜ್ಞೆ ಹೆಚ್ಚಿಸುವ ನಿಟ್ಟಿನಲ್ಲಿ ವರವಾಗಬೇಕು ಎಂದರು.

Scanned by CamScanner

ವಿಜ್ಞಾನ ಕಲಿಕೆ ಕಷ್ಟದ ವಿಷಯವಲ್ಲ

ಕೃಂಗೇರಿ : ಸಾಧನೆಗೆ ಅಸಕ್ತ ವಲಯವೂ ಮತ್ತು ತೊಡಗಿಕೊಳ್ಳುವಿಕೆ ಮುಖ್ಯವಾಗುತ್ತದೆ. ವಿಜ್ಞಾನವೆಂದರೆ ಅತ್ಯಂತ ಕಷ್ಟಕರವಾದ ವಿಷಯ ಎಂಬ ಭ್ರಮೆಯಿಂದ ವಿದ್ಯಾರ್ಥಿಗಳು ಹೊರಬರಬೇಕು ಎಂದು ಜೆಸಿಬಿಎಂ ಕಾಲೇಜಿನ ರಸಾಯನಶಾಸ್ತ್ರ ವಿಭಾಗದ ಉಪನ್ಯಾಸಕ ಪ್ರಶಾಂತ್ ಹೇಳಿದರು.

ಬುಧವಾರ ಸರಕಾರಿ ಪ್ರೌಢಶಾಲೆ ತೊಡೆಹಡ್ಲುವಿನಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯ ಅಂಗವಾಗಿ ಆಯೋಜಿಸಲಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ವಿಜ್ಞಾನದ ವಿದ್ಯಾರ್ಥಿಗಳಿಗೆ ವೀಕ್ಷಣಾ ಸಾಮರ್ಥ್ಯ ಆಳವಾಗಿರಬೇಕು. ವೀಕ್ಷಣೆ ಹಾಗೂ ಸೂಕ್ಷ್ಮ ತೆಯಿಂದ ಆಸಕ್ತಿ ಅರಳುತ್ತದೆ.



ತೊಡೆಹಡ್ಲುವಿನಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯ ಅಂಗವಾಗಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಜೆಸಿಬಿಎಂ ಕಾಲೇಜಿನ ವಿಜ್ಞಾನ ಉಪನ್ಯಾಸಕ ಪ್ರಶಾಂತ್ ಮಾತನಾಡಿದರು.

ಆಸಕ್ತಿಯಿಂದ ಅಭ್ಯಾಸ ಸಾಧ್ಯವಾಗುತ್ತದೆ. ವಿಜ್ಞಾನ ಕ್ಷೇತ್ರವನ್ನು ಕ್ರಮಿಸಿಕೊಂಡಿರುವ ಭಾರತೀಯ ವಿಜ್ಞಾನಿ ಗಳಾದ ಸರ್ ಸಿ.ವಿ. ರಾಮನ್, ಜಗದೀಶ್‌ಚಂದ್ರ ಬೋಸ್, ವಿಕ್ರಮ್ ಸಾರಾಭಾಯ್, ಅಬ್ದುಲ್ ಕಲಾಮ್ ಅವರು ಚಿಕ್ಕ ವಯಸ್ಸಿನಲ್ಲಿ ಸಂಶೋಧನಾ ಆಸಕ್ತಿ ಬೆಳೆಸಿಕೊಂಡು ವಿಜ್ಞಾನಕ್ಕೆ ಮಹತ್ವ ಕೊಟ್ಟಿಗೆ ನೀಡಿದ್ದಾರೆ ಎಂದರು. ಶಾಲಾಭಿವೃದ್ಧಿ ಸಮಿತಿಯ ಸದಸ್ಯರಾದ ಮಾಮುದೇವ ಬಡಕೆರೆ ಅಧ್ಯಕ್ಷತೆ ವಹಿಸಿದ್ದರು.

ಶಾಲಾ ಮುಖ್ಯಶಿಕ್ಷಕರಾದ ಡಿ. ಬಸವಂತಪ್ಪ ದೈಹಿಕ ಶಿಕ್ಷಕರಾದ ಬಿ. ಯೋಜಿ, ಸಿದ್ದರಾಜು ಮತ್ತು ಎಸ್. ಗುರುಮೂರ್ತಿ ಹಾಜರಿದ್ದರು.

Scanned by CamScanner

ಜೆಸಿಬಿಎಂ ಕಾಲೇಜಿನಲ್ಲಿ ಕಾರ್ಯಾಗಾರ

ಆಟೊ ಚಾಲಕರ ಸೇವೆ ಅಮೂಲ್ಯವಾದುದು

ವಿಶ ಸುದ್ದಿಲೋಕ ಶೃಂಗೇರಿ

ಆಟೊ ಚಾಲಕರು ಕಳೆದ ಐವತ್ತು ವರ್ಷಗಳಿಂದಲೂ ಕಾಲೇಜಿನ ಪ್ರಗತಿಯಲ್ಲಿ, ವಿದ್ಯಾರ್ಥಿಗಳ ಹಾಗೂ ಅಧ್ಯಾಪಕರುಗಳಿಗೆ ತಮ್ಮದೇ ಆದ ರೀತಿಯಲ್ಲಿ ಸೇವೆಯನ್ನು ನೀಡುತ್ತಾ ಬಂದಿದ್ದಾರೆ ಎಂದು ಜೆಸಿಬಿಎಂ ಕಾಲೇಜಿನ ಪ್ರಾಚಾರ್ಯ ಡಾ.ಎಚ್.ಸಿ.ವೀರಪ್ಪಗೌಡ ಹೇಳಿದರು.

ಮಂಗಳವಾರ ಜೆಸಿಬಿಎಂ ಕಾಲೇಜಿನಲ್ಲಿ 'ಮಕ್ಕಳ ಶೈಕ್ಷಣಿಕ ಪ್ರಗತಿಯಲ್ಲಿ ಆಟೊ ಚಾಲಕರ ಪಾತ್ರ' ಒಂದು ದಿನದ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿ, ನಮ್ಮ ಮಕ್ಕಳೇ ನಮಗೆ ದೊಡ್ಡ ಆಸ್ತಿ. ನಮ್ಮ ಮಕ್ಕಳಿಗೆ ಉತ್ತಮವಾದ ಶಿಕ್ಷಣವನ್ನು ಸಂಸ್ಕಾರವನ್ನು ನೀಡಿ ಉತ್ತಮ ಪ್ರಜೆಗಳನ್ನಾಗಿ ರೂಪಿಸುವಲ್ಲಿ ತಂದೆ ತಾಯಿಗಳಿಗೆ ನಮ್ಮದಿ ಹಾಗೂ ಸಮಾಜದಲ್ಲಿ ಉತ್ತಮ ಸ್ಥಾನ ಲಭಿಸುತ್ತದೆ ಎಂದು ಹೇಳಿದರು.

ಪಿಯುಸಿ ವಿಭಾಗದ ಪ್ರಾಚಾರ್ಯ ಡಾ.ಸಿ.ಗಿರಿಧರಶಾಸ್ತ್ರಿ ಮಾತನಾಡಿ, ಇಲ್ಲಿನ ಆಟೊ ಚಾಲಕರ ಸೇವೆ ರಾಷ್ಟ್ರಕ್ಕೆ ಮಾದರಿಯಾದುದು. ಎಲ್ಲ ವರ್ಗದ ಜನರು ಇಷ್ಟ ಪಡುವ ರೀತಿಯಲ್ಲಿ ಸೇವಾ ಮನೋಭಾವದಿಂದ ಮಾಡಿಯುತ್ತಿದ್ದಾರೆ. ಈ ಕಾರ್ಯ ಅಕ್ಷರಶಃ ಶ್ಲಾಘನೀಯವಾದುದು. ಆಟೊ ಚಾಲಕರು ಮತ್ತು ನಾಗರೀಕರ ನಡುವೆ ಉತ್ತಮವಾದ ಸಂಬಂಧವಿದ್ದು ಯಾವುದೇ ಗೊಂದಲಗಳು ಉಂಟಾಗದಂತೆ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ ಎಂದರು.



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ 'ಮಕ್ಕಳ ಶೈಕ್ಷಣಿಕ ಪ್ರಗತಿಯಲ್ಲಿ ಆಟೊ ಚಾಲಕರ ಪಾತ್ರ' ಒಂದು ದಿನದ ಕಾರ್ಯಾಗಾರವನ್ನು ಡಾ.ಎಚ್.ಸಿ.ವೀರಪ್ಪಗೌಡ ಉದ್ಘಾಟಿಸಿದರು.

ಮಂಗಳೂರಿನ ಸಿ.ಎಲ್.ಎಚ್.ಆರ್.ಡಿ ಸಂಸ್ಥೆಯ ರಾಷ್ಟ್ರೀಯ ತರಬೇತುದಾರರೆಂಬರ್ ಎಂ ರಾಧಾಕೃಷ್ಣ ಸಂಪನ್ಮೂಲವ್ಯಕ್ತಿಗಳಾಗಿ ತರಬೇತಿಯನ್ನು ನೀಡಿದರು. ಕಾರ್ಯಕ್ರಮವನ್ನು ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ, ಕೊಪ್ಪ ಅಂಚಲಿಕ ಗುಣಮಟ್ಟ ಕೋಶ, ಹಾಗೂ ಸಿಎಲ್ ಎಚ್ ಆರ್ ಡಿ ಮಂಗಳೂರು ಇವರುಗಳ ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಲಾಗಿತ್ತು. ಎಸ್.ಎನ್.ಎಸ್. ಅಧಿಕಾರಿಗಳಾದ ಶ್ರೀನಿವಾಸಯ್ಯ ಸ್ವಾಗತಿಸಿ, ಪ್ರಾಂತ ನಿರೂಪಿಸಿ, ಪ್ರೊ ದಯಾಶ್ರೀಯವರು ವಂದಿಸಿದರು.

Scanned by CamScanner

ವೀರಯೋಧರ ನೆನಪು ಪ್ರತಿಯೊಬ್ಬರ ಕರ್ತವ್ಯ

ಶೃಂಗೇರಿ: ಹದಿನೈದು ವರ್ಷಗಳ ಹಿಂದೆ ಕಾರ್ಗಿಲ್ ರಕ್ಷಣೆಗೆ ಪ್ರಾಣಾರ್ಪಣೆ ಮಾಡಿದ ವೀರಯೋಧರನ್ನು ನೆನಪು ಮಾಡಿಕೊಳ್ಳಬೇಕಾಗಿರುವುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯ ಎಂದು ಕಾರ್ಕಳದ ವಕೀಲ ಸುರತ್‌ಕುಮಾರ್ ಹೇಳಿದರು.

ಅವರು ಇಲ್ಲಿನ ಜೆಸಿಐಎಂ ಕಾಲೇಜಿನಲ್ಲಿ ನಡೆದ ಕಾರ್ಗಿಲ್ ವಿಜಯ ದಿವಸ್, ರಕ್ತದಾನ ಶಿಬಿರ ಮತ್ತು ವನಮಹೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಯೋಧರ ತ್ಯಾಗ ಬಲಿದಾನವನ್ನು ನಿರ್ಲಕ್ಷಿಸದೆ ಸೂಕ್ತವಾದ ರೀತಿಯಲ್ಲಿ ನಮನ ಸಲ್ಲಿಸಬೇಕಿದೆ ಎಂದರು.

ಉಪನಿರೀಕ್ಷಕ ಕುಮಾರಸ್ವಾಮಿ ಮಾತನಾಡಿ, ಆಪರೇಷನ್‌ಗಳು ಕೆಲವು ಮಾತ್ರ ಓದಗುತ್ತದೆ. ಇದನ್ನು ಸರಿಯಾಗಿ ಬಳಸಿಕೊಂಡಲ್ಲಿ ಮಾತ್ರ ಬಳಿಗೆ ಹೊಂದಲು ಸಾಧ್ಯ ಎಂದರು.

ಪೌರಾಯುಕ್ತ ಅಹಮದ್‌ಖಾನ್ ಅಧ್ಯಕ್ಷತೆ ವಹಿಸಿದ್ದರು. ಪ.ಪೂರ್ವ ಕಾಲೇಜಿನ ಪ್ರಾಚಾರ್ಯ ಡಾ.ಸಿ.ವಿ.ಗಿರಿಧರಶಾಸ್ತ್ರಿ, ಎಸ್ಪೈಸ್ ಅಧಿಕಾರಿಗಳಾದ ಎ.ಜಿ.ಪ್ರಸಾದ್, ಡಾ.ಇ.ಎಸ್.ಕುಮಾರಸ್ವಾಮಿ ಉಪಸ್ಥಿತರಿದ್ದರು. ಆರಂಭದಲ್ಲಿ ವಿದ್ಯಾರ್ಥಿನಿ ವಿ.ಎಲ್.ಸ್ವಾತಿ, ಎಚ್.ಎನ್.ಜ್ಯೋತಿ ನಿರೂಪಿಸಿದರು.

ಇದಕ್ಕೂ ಮೊದಲು ಕಾರ್ಗಿಲ್ ಧ್ವಜಾರೋಹಣ ಮತ್ತು ಸೈನಿಕರಿಗೆ ಆಯೋಜಿಸಿದ್ದ ರಕ್ತದಾನ ಶಿಬಿರದಲ್ಲಿ 35 ಯುನಿಟ್ ರಕ್ತ ಸಂಗ್ರಹವಾಯಿತು. ನಂತರ ವನಮಹೋತ್ಸವ ಕಾರ್ಯಕ್ರಮಕ್ಕೆ ದೈಹಿಕ ಶಿಕ್ಷಣ ವಿಭಾಗದ ಎಂ.ವಿ.ರೋಹಿತ್ ಚಾಲನೆ ನೀಡಿದರು. ವಿವಿಧ ಜಾತಿಯ ಸಸಿಗಳನ್ನು ನೆಡಲಾಯಿತು.



ಶೃಂಗೇರಿ ಜೆಸಿಐಎಂ ಕಾಲೇಜಿನಲ್ಲಿ ನಡೆದ ಕಾರ್ಗಿಲ್ ವಿಜಯ ದಿವಸ್, ರಕ್ತದಾನ ಶಿಬಿರ ಮತ್ತು ವನಮಹೋತ್ಸವದಲ್ಲಿ ಗಿಡ ನೆಡಲಾಯಿತು.

Scanned by CamScanner

ವಾಲಿಬಾಲ್ ಪಂದ್ಯಾವಳಿ, ಶ್ರೀ ಜೆ.ಸಿ.ಬಿ.ಎಂ. ಕಾಲೇಜಿಗೆ ತೃತೀಯ ಸ್ಥಾನ

ಶಿವಮೊಗ್ಗ ಜಿಲ್ಲೆಯ ಹೊಸನಗರದಲ್ಲಿ ಇತ್ತೀಚೆಗೆ ನಡೆದ ಕುವೆಂಪು ವಿಶ್ವವಿದ್ಯಾನಿಲಯ ಅಂತರ್ ಕಾಲೇಜು ವಾಲಿಬಾಲ್ ಪಂದ್ಯಾವಳಿಯಲ್ಲಿ ಶೃಂಗೇರಿಯ ಶ್ರೀ ಜೆ.ಸಿ.ಬಿ.ಎಂ. ಕಾಲೇಜಿನ ತಂಡವು ತೃತೀಯ ಸ್ಥಾನವನ್ನು ಪಡೆದಿದೆ. ಪ್ರಶಸ್ತಿ ಪಡೆದ ಎಲ್ಲಾ ಕ್ರೀಡಾಪಟುಗಳನ್ನು ಹಾಗು ದೈಹಿಕ ಶಿಕ್ಷಕರಾದ ಎಂ.ವಿ. ಲೋಕೇಶ್ ರವರನ್ನು ಕಾಲೇಜಿನ ಪ್ರಾಂಶುಪಾಲರಾದ ಡಾ. ಹೆಚ್. ಸಿ. ವೀರಪ್ಪ ಗೌಡ ಅಭಿನಂದಿಸಿದ್ದಾರೆ.

Scanned by CamScanner

ವಿಶ್ವ ಏಡ್ಸ್ ದಿನಾಚರಣೆಯಲ್ಲಿ ಡಾ. ವೆಂಕಟೇಶ್ ಆತಂಕ



ಶೃಂಗೇರಿಯ ಜೆಸಿಬಿಎಂ ಕಾಲೇಜಿನಲ್ಲಿ ಆಯೋಜಿಸಿದ್ದ ವಿಶ್ವ ಏಡ್ಸ್ ದಿನಾಚರಣೆಯನ್ನು ಮುಖ್ಯ ವೈದ್ಯಾಧಿಕಾರಿ ಡಾ. ವೆಂಕಟೇಶ್ ಉದ್ಘಾಟಿಸಿದರು.

ಶೃಂಗೇರಿ: ಎಚ್‌ಐವಿ ಬಾಧಿತರಲ್ಲಿ ಭಾರತ ಮೂರನೇ ಸ್ಥಾನದಲ್ಲಿದೆ. ಪ್ರತಿಯೊಬ್ಬರಲ್ಲೂ ಈ ರೋಗದ ಬಗ್ಗೆ ಅರಿವು ಮೂಡಿಸುವ ಕೆಲಸವಾದಾಗ ಇದನ್ನು ನಿಯಂತ್ರಣಕ್ಕೆ ತರಬಹುದು ಎಂದು ತಾಲೂಕು ಮುಖ್ಯ ವೈದ್ಯಾಧಿಕಾರಿ ಡಾ. ವೆಂಕಟೇಶ್ ಹೇಳಿದರು.

ಜೆಸಿಬಿಎಂ ಕಾಲೇಜಿನಲ್ಲಿ ಸೋಮವಾರ ಆಯೋಜಿಸಿದ್ದ ವಿಶ್ವ ಏಡ್ಸ್ ದಿನಾಚರಣೆ ಉದ್ಘಾಟಿಸಿ ಮಾತನಾಡಿ, 2013ರ ಸಮೀಕ್ಷೆ ಪ್ರಕಾರ ವಿಶ್ವದಲ್ಲಿ 3.5 ಕೋಟಿ ಜನರು ಈ ಸೋಂಕಿಗೆ ತುತ್ತಾಗಿದ್ದಾರೆ. ಅದರಲ್ಲಿ 32 ಲಕ್ಷ ಮಕ್ಕಳೂ ಸೇರಿದ್ದಾರೆ ಎಂದು ಕಳವಳ ವ್ಯಕ್ತಪಡಿಸಿದರು.

ಎಚ್‌ಐವಿ ಪೀಡಿತರನ್ನು ಅಸ್ಪೃಶ್ಯತೆಯಿಂದ ನೋಡುವ ದೃಷ್ಟಿಕೋನ ಬದಲಾದಾಗ ಏಡ್ಸ್ ದಿನಾಚರಣೆಗೆ ಅರ್ಥಪೂರ್ಣ ಮುನ್ನುಡಿ ಬರೆಯಬಹುದು. ಸೋಂಕಿತರಿಗೂ ಸಮಾಜದಲ್ಲಿ ಬದುಕುವ ಹಕ್ಕಿದೆ ಎಂಬುದನ್ನು ಹೇಳುವ ಮಾನವೀಯತೆ ಸಮಾಜದಲ್ಲಿ ಮೂಡಬೇಕು. ಏಡ್ಸ್ ಪೀಡಿತರಲ್ಲಿ ಆತ್ಮವಿಶ್ವಾಸ ತುಂಬುವುದು ಹಾಗೂ ರೋಗದ ಬಗ್ಗೆ ಅರಿವು ಮೂಡಿಸಲು ಯುವ ಜನತೆ ಮುಂದಾಗಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮಕ್ಕೂ ಮುನ್ನ ಕಾಲೇಜು ವಿದ್ಯಾರ್ಥಿಗಳು ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಜಾಗೃತಿ ಜಾಥಾ ನಡೆಸಿದರು.

ಪ್ರಾಚಾರ್ಯ ಡಾ. ವೀರಪ್ಪಗೌಡ, ಡಾ. ಅನಿತ್‌ಕುಮಾರ್, ಜೆಸಿಬಿಎಂ ಕಾಲೇಜಿನ ಪ್ರಾಚಾರ್ಯ ಡಾ. ಸಿ.ವಿ. ಗಿರಿಧರ ಶಾಸ್ತ್ರಿ, ಎನ್‌ಎಸ್‌ಎಸ್ ಅಧಿಕಾರಿ ಪ್ರಶಾಂತ್ ಮತ್ತಿತರರು ಇದ್ದರು.

Scanned by CamScanner

ಎಷಾದ ವ್ಯಕ್ತಿ ಪಡಿಸಿದರು.

ಅಂತರ ಕಾಲೇಜು ಸ್ಪರ್ಧೆ

ಶೃಂಗೇರಿ ಜೆಸಿಬಿಎಂ ಕಾಲೇಜು ಪ್ರಥಮ

ಚಿಕ್ಕಮಗಳೂರು: ನಗರದ ಐಡಿಎಸ್‌ಜಿ. ಕಾಲೇಜಿನಲ್ಲಿ ಇತ್ತೀಚೆಗೆ ನಡೆದ ಕುವೆಂಪು ವಿಶ್ವವಿದ್ಯಾನಿಲಯ ಮಟ್ಟದ ಅಂತರ ಕಾಲೇಜುಗಳ ಸಾಂಸ್ಕೃತಿಕ ಸ್ಪರ್ಧೆ 'ಐ.ಡಿ.ಎಸ್.ಜಿ. ಸಾಂಸ್ಕೃತಿಕ ವೈಭವ' ದಲ್ಲಿ ಶೃಂಗೇರಿ ಜೆಸಿಬಿಎಂ ಕಾಲೇಜು ತಂಡ ಮೊದಲನೆಯ ಸ್ಥಾನ ಪಡೆಯಿತು.

ಚರ್ಚಾ ಸ್ಪರ್ಧೆಯಲ್ಲಿ ಪ್ರಮೋದ ಭಾರಧ್ವಾಜ್ ಮತ್ತು ಭಾವಗೀತೆ ಸ್ಪರ್ಧೆ ಯಲ್ಲಿ ಪೂರ್ಣಾನಂದ ಪ್ರಥಮ ಸ್ಥಾನ ಗಳಿಸುವ ಮೂಲಕ ಜೆಸಿಬಿಎಂ ಕಾಲೇಜು ಅಗ್ರಸ್ಥಾನ ಪಡೆಯಲು ಕಾರಣರಾದರು.

'ಪ್ರಾಥಮಿಕ ಶಿಕ್ಷಣದಲ್ಲಿ ಕನ್ನಡ ಭಾಷಾ ಮಾಧ್ಯಮ ಕಡ್ಡಾಯ' ವಿಷಯ ಕುರಿತ ಚರ್ಚಾ ಸ್ಪರ್ಧೆಯಲ್ಲಿ ಶಿರಾಳ ಕೊಪ್ಪ ಕದಂಬ ಪದವಿ ಕಾಲೇಜಿನ ಎನ್. ಸಂತೋಷ ದ್ವಿತೀಯ, ನಗರದ ಎಂಇಎಸ್ ಕಾಲೇಜಿನ ಬಿ.ಎನ್. ನಮನಾ ತೃತೀಯ ಸ್ಥಾನ ಹಾಗೂ ಇದೇ ಕಾಲೇಜಿನ ಮಾನವಿ ಸಮಾಧಾನಕರ ಬಹುಮಾನಕ್ಕೆ ತೃಪ್ತಿ ಪಡಬೇಕಾಯಿತು.

ಭಾವಗೀತೆ ಸ್ಪರ್ಧೆಯಲ್ಲಿ ನಗರದ ಎಂ.ಇ.ಎಸ್. ಕಾಲೇಜಿನ ದೀಪ್ತಿರಾಜ್ ದ್ವಿತೀಯ, ತರೀಕೆರೆ ಸರ್ಕಾರಿ ಪದವಿ ಕಾಲೇಜಿನ ಅಂಜನಾ ವಸಿಷ್ಠ ತೃತೀಯ ಸ್ಥಾನ



ಚಿಕ್ಕಮಗಳೂರಿನ ಐಡಿಎಸ್‌ಜಿ ಕಾಲೇಜಿನಲ್ಲಿ ಈಚೆಗೆ ನಡೆದ ಅಂತರ ಕಾಲೇಜುಗಳ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳು ಬಹುಮಾನ ಸ್ವೀಕರಿಸಿದರು.

ಗಳಿಸಿದರೆ, ಅತಿಥೇಯ ಐಡಿ ಎಸ್‌ಜಿ ಕಾಲೇಜಿನ ರಮ್ಯ ಎಸ್. ರಾವ್‌ಗೆ ಸಮಾಧಾನಕರ ಬಹುಮಾನ ದೊರೆಯಿತು. ಈ ಸಾಂಸ್ಕೃತಿಕ ವೈಭವದಲ್ಲಿ ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳ 14 ಪದವಿ ಕಾಲೇಜುಗಳಿಂದ 45 ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ನಗರಸಭಾ ಮಾಜಿ ಅಧ್ಯಕ್ಷ ಎಚ್.ಡಿ. ತಮ್ಮಯ್ಯ ಸ್ಪರ್ಧೆಗಳನ್ನು ಉದ್ಘಾಟಿಸಿದರು. ನಗರಸಭಾ ನಾಮ ಕರಣ ಸದಸ್ಯ ಕೆ.ಎಂ.ಕೃಷ್ಣಮೂರ್ತಿ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು. ಪ್ರಾಂಶುಪಾಲ ರಾದ ಜರೀನಾಕೌಸರ್ ಅಧ್ಯಕ್ಷತೆ ವಹಿಸಿದ್ದರು. ಸಾಂಸ್ಕೃತಿ ವೇದಿಕೆಯ ಸಂಚಾಲಕ ಕೆ.ಎ.ರಾಜಣ್ಣ, ಸಹ ಸಂಚಾ ಲಕ ಗ್ರಂಥಪಾಲಕ ನರೇಂದ್ರ ಮಾತನಾಡಿದರು. ಕಾಲೇಜು ಸಾಂಸ್ಕೃತಿಕ ವೇದಿಕೆ ಸದಸ್ಯ ಕೆ.ಎಂ.ಜಗದೀಶ್, ಉಪ ನ್ಯಾಸಕರರಾದ ಚಾಂದಿನಿ, ಕೆ.ಸಿ.ಜಗ ದೀಶ್, ಯು.ಸಿ.ಮಹೇಶ್, ಮರಿಯಾ ಪಿಂಟೋ ಇದ್ದರು. ವಿದ್ಯಾರ್ಥಿನಿಯ ರಾದ ರಮ್ಯಾ, ದಿವ್ಯಾ ಇದ್ದರು.

Scanned by CamScanner



ಶೃಂಗೇರಿ ಜೆ.ಸಿ.ಬಿ.ಎಂ. ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ಕಲಾಸಂಘ ಏರ್ಪಡಿಸಿದ್ದ ಉಪನ್ಯಾಸ ಕಾರ್ಯಕ್ರಮದಲ್ಲಿ ಸಾಹಿತಿ ಕಿರಣಕೆರೆ ಉಮೇಶ್ಚಂದ್ರ ಉಪನ್ಯಾಸ ನೀಡಿದರು.

Scanned by CamScanner

'ಸತ್ಪಥದಲ್ಲಿ ಸಾಗುವಂತೆ ಮಾಡಿದ ಕುವೆಂಪು ಸಾಹಿತ್ಯ'

ಪ್ರಜಾವಾಣಿ ವಾರ್ತೆ

ಶೃಂಗೇರಿ: ಕುವೆಂಪು ಅವರ ಚಿಂತನೆಯಾದ ಸರ್ವೋದಯ ಕರ್ನಾಟಕದ ಪುನರ್ ಏಕೀಕರಣದ ತಿರುಳು. ಅವರ ಸಾಹಿತ್ಯ ಜನರ ಜೀವನವನ್ನು ಬದಲಿಸಿ, ಸತ್ಪಥದಲ್ಲಿ ಸಾಗುವಂತೆ ಮಾಡಿದೆ ಎಂದು ಸಾಹಿತಿ ಕಿರಣಕೆರೆ ಉಮೇಶ್ಚಂದ್ರನ್ ಹೇಳಿದರು.

ಇಲ್ಲಿನ ಜೆ.ಸಿ.ಬಿ.ಎಂ. ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ಕಲಾ ಸಂಘ ಸುವರ್ಣ ವರ್ಷಾಚರಣೆ ಅಂಗವಾಗಿ ಏರ್ಪಡಿಸಿದ್ದ 'ಕುವೆಂಪು ಒಂದು ನಮನ' ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು 'ಮಾತನಾಡಿದರು. ಮಲೆನಾಡಿನ ಪ್ರಕೃತಿ ಸೊಬಗನ್ನು ತಮ್ಮ ಸಾಹಿತ್ಯದಲ್ಲಿ ಉತ್ಕೃಷ್ಟವಾಗಿ ಚಿತ್ರಿಸಿದ ಕೀರ್ತಿ ಕುವೆಂಪು ಅವರಿಗೆ ಸಲ್ಲುತ್ತದೆ ಎಂದರು.

ಪ್ರಾಚಾರ್ಯ ಡಾ.ಎಚ್.ಸಿ.ವೀರಪ್ಪ ಗೌಡ ಮಾತನಾಡಿ, ಕುವೆಂಪು ಅವರ ಕೃತಿಗಳು, ಸಾಹಿತಿಗಳು ವಿದ್ಯಾರ್ಥಿಗಳ ಅಧ್ಯಯನಕ್ಕೆ ಅಪಾರ ಜ್ಞಾನ ಭಂಡಾರವಾಗಿದ್ದು, ವಿದ್ಯಾರ್ಥಿಗಳು ಅಧ್ಯಯನಶೀಲರಾಗಬೇಕು ಎಂದರು.

ಇತಿಹಾಸ ವಿಭಾಗದ ಮುಖ್ಯಸ್ಥ ಕೆ.ಪಿ.ಪ್ರಕಾಶ್, ವಿದ್ಯಾರ್ಥಿ ಕ್ಷೇಮ ಪಾಲನಾ ಅಧಿಕಾರಿ ಪ್ರೊ.ದತ್ತಾತ್ರೇಯ ಎಂ. ಮಾರ್ಪಳ್ಳಿ, ಎನ್.ಎಸ್.ಎಸ್. ಅಧಿಕಾರಿ ಲಕ್ಷ್ಮೀನಾರಾಯಣ್, ಪ್ರಶಾಂತ್, ವಿದ್ಯಾರ್ಥಿ ನಾಯಕರಾದ ಕಿರಣ್, ಲಿಖಿತ್ ಕೆ. ಶೆಟ್ಟಿ ಮೊದಲಾದವರಿದ್ದರು.



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ಇನ್ಫೊಸಿಸ್ ಸಂಸ್ಥೆ ಏರ್ಪಡಿಸಿದ ಕ್ಯಾಂಪಸ್ ಸಂದರ್ಶನವನ್ನು ಪ್ರಾಚಾರ್ಯ ಡಾ.ಎಚ್.ಸಿ. ವೀರಪ್ಪಗೌಡ ಉದ್ಘಾಟಿಸಿದರು.

Scanned by CamScanner

ಶೃಂಗೇರಿ: ಕ್ಯಾಂಪಸ್ ಸಂದರ್ಶನ 31 ವಿದ್ಯಾರ್ಥಿಗಳ ಆಯ್ಕೆ

ಶೃಂಗೇರಿ: ಇಲ್ಲಿನ ಜೆಸಿಬಿಎಂ ಕಾಲೇಜಿನಲ್ಲಿ ಇನ್ಫೊಸಿಸ್ ಸಂಸ್ಥೆ ಶನಿವಾರ ನಡೆಸಿದ ಕ್ಯಾಂಪಸ್ ಸಂದರ್ಶನದಲ್ಲಿ ರಾಜ್ಯದ ವಿವಿಧ ಕಾಲೇಜಿನ 350 ಹೆಚ್ಚಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಆಯ್ಕೆಯಾದ 31 ವಿದ್ಯಾರ್ಥಿಗಳಲ್ಲಿ 15 ವಿದ್ಯಾರ್ಥಿಗಳು ಜೆ.ಸಿ.ಬಿ.ಎಂ. ಕಾಲೇಜಿನ ವಿದ್ಯಾರ್ಥಿಗಳಾಗಿದ್ದಾರೆ.

ಕಾಲೇಜಿನ ಪ್ರಾಚಾರ್ಯ ಡಾ.ಎಚ್.ಸಿ. ವೀರಪ್ಪಗೌಡ ಮಾತನಾಡಿ, ಇನ್ಫೊಸಿಸ್ ಸಂಸ್ಥೆಯ ಈ ಪ್ರಯತ್ನದಿಂದಾಗಿ ಬೇರೆ ಸಂಸ್ಥೆಗಳು ಮಲೆನಾಡಿನತ್ತ ಮುಖ ಮಾಡುವಂತಾಗಿದೆ. ವಿದ್ಯಾರ್ಥಿಗಳು ಸಂದರ್ಶನವನ್ನು ಸದ್ಬಳಕೆ ಮಾಡಿಕೊಂಡು ವೃತ್ತಿ ಜೀವನದ ಭದ್ರ ಬುನಾದಿ ಹಾಕಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಇನ್ಫೊಸಿಸ್ ಸಂಸ್ಥೆಯ ಪ್ಲೇಸ್‌ಮೆಂಟ್ ಸೆಲ್ ಅಧಿಕಾರಿ ದೇವದಾಸ್ ಇದ್ದರು.

Scanned by CamScanner

ವಿ.ಸ. ೦೭/೦೭/೧೫

ಎನ್‌ಸಿಸಿ ಕೆಡೆಟ್ಸ್‌ಗಳಿಂದ ಸ್ವಚ್ಛತಾ ಅಭಿಯಾನ

ಶೃಂಗೇರಿ: ಸ್ವಚ್ಛ ಭಾರತ ಅಭಿಯಾನ ಕಾರ್ಯಕ್ರಮದಡಿ ಎಲ್ಲರೂ ಪೇಟೆ ಪಟ್ಟಣ ಇತರೆ ಸ್ಥಳಗಳನ್ನು ಮಾತ್ರ ಸ್ವಚ್ಛಗೊಳಿಸುತ್ತಿದ್ದೇವೆ. ಆದರೆ ಈ ರೀತಿ ವನ್ಯಜೀವಿಗಳ ಸ್ಥಳಗಳಲ್ಲಿ ಶ್ರಮದಾನ ಮಾಡುವುದರಿಂದ ಪ್ಲಾಸ್ಟಿಕ್‌ನಿಂದ ವನ್ಯಜೀವಿಗಳಿಗಾಗುವ ತೊಂದರೆ ಸ್ವಲ್ಪಮಟ್ಟಿಗೆ ತಡೆಯಬಹುದು ಎಂದು ವನ್ಯಜೀವಿ ವಿಭಾಗದ ವಲಯಾರಣ್ಯಾಧಿಕಾರಿ ಸುಬ್ರಮಣ್ಯ ಹೇಳಿದರು.

ಅವರು ಕರೆಕಟ್ಟೆಯಲ್ಲಿ ಶ್ರೀ ಜೆಸಿಬಿಎಂ ಕಾಲೇಜಿನ ಎನ್‌ಸಿಸಿ ಕೆಡೆಟ್ಸ್‌ಗಳು ಗಣರಾಜ್ಯೋತ್ಸವ ಅಂಗವಾಗಿ ಕುದುರೆಮುಖ ರಾಷ್ಟ್ರೀಯ ಉದ್ಯಾನವನದಲ್ಲಿ ನಡೆಸಿದ ಸ್ವಚ್ಛ ಭಾರತ ಅಭಿಯಾನ ಕಾರ್ಯಕ್ರಮದಲ್ಲಿ ಮಾತನಾಡಿದರು.

ಪರಿಸರದ ಸ್ವಚ್ಛತೆ ಕಾಪಾಡುವುದು ಮುಖ್ಯವಾಗಿದ್ದು, ಇದರಿಂದ ಪ್ರಾಣಿಗಳಿಗೆ ನೈಸರ್ಗಿಕ ಅರಣ್ಯ ದೊರಕುತ್ತದೆ ಎಂದರು.

ಕಾರ್ಯಕ್ರಮದಲ್ಲಿ 60 ಕೆಡೆಟ್ಸ್‌ಗಳು ವಿವಿಧ ತಂಡಗಳಾಗಿ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯಲ್ಲಿ ಸಂಚರಿಸಿ ರಸ್ತೆಯ ಎರಡು ಬದಿ ಬಿದ್ದಿರುವ ಪ್ಲಾಸ್ಟಿಕ್ ಮತ್ತು ಬಾಟಲಿಗಳನ್ನು 182 ಚೀಲಗಳಲ್ಲಿ ಸಂಗ್ರಹಿಸಿದರು.

ನಂತರ ಎಲ್ಲ ಕೆಡೆಟ್ಸ್‌ಗಳು ಹನುಮನ ಗುಂಡಿ ಜಲಪಾತಕ್ಕೆ ಚಾರಣ ಮಾಡಿದರು. ಕಾರ್ಯಕ್ರಮದಲ್ಲಿ ಎನ್‌ಸಿಸಿ ಅಧಿಕಾರಿ ಲೆಫ್ಟಿನೆಂಟ್ ಡಾ. ಕುಮಾರಸ್ವಾಮಿ ಉಡುಪ ಹಾಗೂ ವನ್ಯಜೀವಿ ವಿಭಾಗದ ಸಿಬ್ಬಂದಿ ಹಾಜರಿದ್ದರು.



ಶೃಂಗೇರಿ ಜೆಸಿಬಿಎಂ ಕಾಲೇಜಿನ ಎನ್‌ಸಿಸಿ ಕೆಡೆಟ್ಸ್‌ಗಳು ಶ್ರಮದಾನದ ಮೂಲಕ ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಮೂಲಕ ಹಾದು ಹೋಗುವ ರಸ್ತೆಯನ್ನು ಸ್ವಚ್ಛಗೊಳಿಸಿದರು.

Scanned by CamScanner



ಶೃಂಗೇರಿ ಜೆಸಿಬಿಎಂ ಕಾಲೇಜಿನ ಎನ್ ಎಸ್ ಎಸ್ ವಿದ್ಯಾರ್ಥಿಗಳು ಕೆವಿಆರ್ ರಸ್ತೆಯನ್ನು ಶ್ರಮದಾನದ ಮೂಲಕ ಸ್ವಚ್ಛಗೊಳಿಸಿದರು.

ಉದಯವಾಣಿ 28/5/15

Scanned by CamScanner

ಎನ್ನೆಸ್ಸೆಸ್‌ನಿಂದ ಉತ್ತಮ ವ್ಯಕ್ತಿತ್ವ ನಿರ್ಮಾಣ: ಶಿವಕುಮಾರ್

ಶೃಂಗೇರಿ: ವಿದ್ಯಾರ್ಥಿ ಜೀವನದಲ್ಲಿ ಎನ್ನೆಸ್ಸೆಸ್ ನಂತರ ಸಮಾಜಮುಖಿ ಯೋಜನೆಗಳಲ್ಲಿ ಭಾಗವಹಿಸಿ ನಾವುಗಳು ವ್ಯಕ್ತಿತ್ವ ಬೆಳೆಸಿಕೊಳ್ಳಬೇಕು ಎಂದು ಸ.ಪ.ಪೂ ಕಾಲೇಜು ಶಿಕ್ಷಕ ಗಾಯಕ ಶಿವಕುಮಾರ್ ಹೇಳಿದರು.

ಜೆಸಿಬಿಎಂ ಕಾಲೇಜಿನಲ್ಲಿ ಎನ್ನೆಸ್ಸೆಸ್ ವತಿಯಿಂದ ಆಯೋಜಿಸಲಾಗಿದ್ದ ಗಾನಾಭಿಷೇಕ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸಮಾಜಮುಖಿ ಬದುಕು ಮನುಷ್ಯನನ್ನು ಶಾಶ್ವತವಾಗಿರಿಸುತ್ತದೆ. ನೂರು ಬಾರಿ ಒಂದು ಸುಳ್ಳು ಹೇಳಿದರೆ ಅದೇ ಸತ್ಯ ಎಂದು ನಂಬುತ್ತಾರೆ. ಆದರೆ ಒಂದು ಸತ್ಯವನ್ನು ಒಂದೇ ಬಾರಿ ಹೇಳಿದರೆ ಅದೇ ಶಾಶ್ವತವಾಗುತ್ತದೆ. ಮನುಷ್ಯ ಸಾಂಸ್ಕೃತಿಕ ಚಟುವಟಿಕೆಗಳಿಂದ ಕ್ರಿಯಾಶೀಲತೆ, ಸೃಜನಶೀಲತೆಯಿಂದ ಅಮರರಾಗಬಹುದು. ಎನ್ನೆಸ್ಸೆಸ್ ಗೀತೆಗಳ ಧ್ಯೇಯೋದ್ದೇಶಗಳು ಗ್ರಾಮೋದ್ಧಾರದ ಜೊತೆಗೆ, ದೇಶೋದ್ಧಾರದ ಪರಿಕಲ್ಪನೆ ಇಟ್ಟುಕೊಂಡಿದೆ ಎಂದರು.

ಸಂಪನ್ಮೂಲ ವ್ಯಕ್ತಿ ನಾಗರಾಜರಾವ್ ಮಾತನಾಡಿ, ಪ್ರತಿಯೋರ್ವರು ಕಾಲೇಜು ಜೀವನದಲ್ಲಿ ಬರುವ ಅವಕಾಶಗಳನ್ನು ಧನಾತ್ಮಕವಾಗಿ ಬಳಸಿಕೊಂಡಾಗ ಯಶಸ್ಸು ಗಳಿಸಬಹುದು ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಕಾಲೇಜಿನ ಪ್ರಾಚಾರ್ಯ ಡಾ। ಎಚ್.ಸಿ. ವೀರಪ್ಪಗೌಡ,ಆರ್ಥಿಕ ಶ್ರೀಮಂತಿಕೆಗಿಂತ ನಮ್ಮೂರು, ನಮ್ಮ ಕಾಲೇಜು, ನಮ್ಮ ಜನ ಎಂಬ ಹೃದಯ ಶ್ರೀಮಂತಿಕೆ ಮುಖ್ಯ. ಸುವರ್ಣ ವರ್ಷವಾಗಿರುವ ಈ ವರ್ಷ ವಿಭಿನ್ನ ಕಾರ್ಯಕ್ರಮಗಳು ನಡೆಯಲಿವೆ ಎಂದರು.

ಎನ್ನೆಸ್ಸೆಸ್ ಅಧಿಕಾರಿಗಳಾದ ಎ.ಜಿ. ಪ್ರಶಾಂತ್,ಎನ್.ಎಚ್. ಲಕ್ಷ್ಮೀನಾರಾಯಣ ಇದ್ದರು.

ಕಿರಣ್ ಸ್ವಾಗತಿಸಿದರು. ಶಾಶ್ವತಿ ನಿರೂಪಿಸಿದರು. ಆಶ್ರಯ ವಂದಿಸಿದರು. ನಂತರ ಎಚ್.ಎಂ. ನಾಗರಾಜರಾವ್ ಎನ್ನೆಸ್ಸೆಸ್ ಗೀತೆಗಳ ಸಮೂಹ ಗಾಯನ ತರಬೇತಿ ನೀಡಿದರು.



ಶೃಂಗೇರಿ: ಜೆಸಿಬಿಎಂ ಕಾಲೇಜಿನಲ್ಲಿ ಎನ್ನೆಸೆಸ್ ವತಿಯಿಂದ ಆಯೋಜಿಸಿದ್ದ ಗಾನಾಭಿಷೇಕ ಕಾರ್ಯಕ್ರಮವನ್ನು ಶಿಕ್ಷಕ ಶಿವಕುಮಾರ್ ಉದ್ಘಾಟಿಸಿದರು.

Scanned by CamScanner

ಸುಸಂಸ್ಕೃತ ಸಮಾಜ ನಿರ್ಮಾಣಕ್ಕೆ ಸುಮನಸ್ಸು ಅಗತ್ಯ

ಶೃಂಗೇರಿ: ಸುಸಂಸ್ಕೃತ ಸಮಾಜ ನಿರ್ಮಾಣಕ್ಕೆ ಸುಮನಸ್ಸು ಅಗತ್ಯ ಎಂದು ಸರ್ಕಾರಿ ಪಪೂ ಕಾಲೇಜು ಪ್ರಾಚಾರ್ಯ ಎ.ಡಿ. ಉಮೇಶ್ ಹೇಳಿದರು.

ಜೆಸಿಬಿಎಂ ಕಾಲೇಜಿನ ಸುವರ್ಣ ಸಂಭ್ರಮಾಚರಣೆ ಅಂಗವಾಗಿ ಏರ್ಪಡಿಸಿದ್ದ ಅಂತರ ಕಾಲೇಜು ಸಾಂಸ್ಕೃತಿಕ ಸ್ಪರ್ಧೆಗಳ ಭಾವತರಂಗ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ಸಮಾಜ ರೂಪಿಸುವ ಜವಾಬ್ದಾರಿ ವಿದ್ಯಾರ್ಥಿಗಳ ಮೇಲಿದೆ ಎಂದು ಹೇಳಿದರು.

ಜೀವನದಲ್ಲಿ ಸಿಗುವ ಉತ್ತಮ ಅವಕಾಶ ಕಳೆದುಕೊಂಡರೆ ಮತ್ತೆ ಸಾಧನೆ ಮಾಡುತ್ತೇವೆಂದರೂ ಅವಕಾಶ ಸಿಗುವುದಿಲ್ಲ. ಇದನ್ನರಿತು ಸಿಕ್ಕಿರುವ ಅವಕಾಶಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಸಮಾಜದ ಅವಿಭಾಜ್ಯ ಅಂಗವಾಗಿರುವ ನಾವುಗಳು ಉತ್ತಮ ಸಮಾಜ ನಿರ್ಮಿಸುವ ಪಣ ತೊಡಬೇಕು. ಶಿಕ್ಷಣ ಬದುಕು ಕಟ್ಟಿಕೊಳ್ಳಲು ಸಹಕರಿಸುತ್ತದೆ. ಜತೆಗೆ ಸಮಾಜದಲ್ಲಿ ನಾವು ಹೇಗೆ ಬದುಕಬೇಕು ಎಂಬುದನ್ನು ಮೌಲ್ಯ ಹೇಳಿಕೊಡುತ್ತದೆ. ನಮ್ಮ ಹಿರಿಯರ ಅಮೂಲ್ಯ ಸಂಸ್ಕೃತಿಯನ್ನು ನಾವು ಮತ್ತೆ ಅನಾವರಣಗೊಳಿಸಿ ದೇಶದ ಪ್ರಗತಿಗೆ ಎಲ್ಲರೂ ಒಗ್ಗಟ್ಟಾಗಿ ದುಡಿಯಬೇಕಿದೆ ಎಂದು ಹೇಳಿದರು.

ಪ್ರಾಚಾರ್ಯ ಡಾ. ಎಚ್.ಸಿ. ವೀರಪ್ಪಗೌಡ ಅಧ್ಯಕ್ಷತೆ ವಹಿಸಿದ್ದರು. ಪ್ರಮುಖರಾದ ಡಾ. ಗಿರಿಧರ ಶಾಸ್ತ್ರಿ, ಶಿವಮೂರ್ತಿ, ರಶ್ಮಿ ಮತ್ತಿತರರಿದ್ದರು.



ಶೃಂಗೇರಿಯ ಜೆಸಿಬಿಎಂ ಕಾಲೇಜು ಸುವರ್ಣ ಸಂಭ್ರಮಾಚರಣೆ ಅಂಗವಾಗಿ ಏರ್ಪಡಿಸಿದ್ದ ಅಂತರ ಕಾಲೇಜು ಸಾಂಸ್ಕೃತಿಕ ಸ್ಪರ್ಧೆಗಳ ಭಾವತರಂಗ ಸ್ಪರ್ಧೆಯಲ್ಲಿ ಸಮಗ್ರ ಪ್ರಶಸ್ತಿ ಪಡೆದ ಜೆಸಿಬಿಎಂ ಕಾಲೇಜು ವಿದ್ಯಾರ್ಥಿಗಳು.

ವಿಜಯವಾಣಿ ೫ ಜನವರಿ ೨೦೧೫ ಗುರುವಾರ

Scanned by CamScanner

ಪ್ರಜಾವಾಣಿ ಶುಕ್ರವಾರ ಜನವರಿ 9 2015



ಶೃಂಗೇರಿಯ ಜೆಸಿಬಿಎಂ ಕಾಲೇಜಿನ ಸುವರ್ಣ ಸಂಭ್ರಮಾಚರಣೆ ಅಂಗವಾಗಿ ನಡೆದ ಅಂತರ ಕಾಲೇಜು ಸಾಂಸ್ಕೃತಿಕ ಸ್ಪರ್ಧೆಗಳ ಭಾವಾಂತರಂಗ ಕಾರ್ಯಕ್ರಮದಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿ ಸಮಗ್ರ ಪ್ರಶಸ್ತಿ ಪಡೆದ ಕಾಲೇಜಿನ ತಂಡದೊಂದಿಗೆ ಪ್ರಾಂಶುಪಾಲ ಡಾ.ಎಚ್.ಸಿ.ವೀರಪ್ಪಗೌಡ ಹಾಗೂ ಡಾ.ಸಿ.ವಿ.ಗಿರಿಧರ ಶಾಸ್ತ್ರೀ ಇದ್ದರು. (ಬಾಳೆಹೊನ್ನೂರು ಚಿತ್ರ)

Scanned by CamScanner

ವಾರ್ತೆಗಳ ವಿಭಾಗ 16-1-15

ಎನ್.ಸಿ.ಸಿ. ವಿಶೇಷ ಕಾರ್ಯಕ್ರಮ

ಶೃಂಗೇರಿ: ಇಲ್ಲಿನ ಶ್ರೀ ಜೆ.ಸಿ.ಬಿ.ಎಂ.ಕಾಲೇಜಿಲ್ಲಿ ಕಾಲೇಜಿನ ಸುವರ್ಣ ಮಹೋತ್ಸವ ಅಂಗವಾಗಿ ಎನ್. ಸಿ.ಸಿ.ವತಿಯಿಂದ ಎರಡು ದಿನಗಳ ವಿಶೇಷ ಕಾರ್ಯ ಕ್ರಮ ಇತ್ತೀಚೆಗೆ ನಡೆಯಿತು. ಉಡುಪಿಯ 21 ಕರ್ನಾ ಟಕ ಬೆಟಾಲಿಯನ್‌ನ 9 ಕಾಲೇಜುಗಳಿಂದ ಸುಮಾರು 230 ಕೆಡೆಟ್ಸ್‌ಗಳು ಭಾಗವಹಿಸಿದ್ದವು. ಉಡುಪಿಯ ಪೂರ್ಣಪ್ರಜ್ಞಾ ಕಾಲೇಜು ಸಮಗ್ರ ಪ್ರಶಸ್ತಿ ಪಡೆಯಿತು. ಉಡುಪಿಯ 21 ಕರ್ನಾಟಕ ಬೆಟಾಲಿಯನ್‌ನ ಕಮಾಂ ಡಿಂಗ್ ಆಫೀಸರ್ ಕರ್ನಲ್ ಪಿ.ಎನ್.ಮೆನನ್, ಪದವಿ ಕಾಲೇಜಿನ ಪ್ರಾಂಶುಪಾಲರಾದ ಡಾ.ಹೆಚ್.ಸಿ.ವೀರಪ್ಪ ಗೌಡ, ಶೃಂಗೇರಿಯ ವೃತ್ತ ನಿರೀಕ್ಷಕ ಸುಧೀರ್ ಹೆಗಡೆ, ಡಾ.ಸಿ.ವಿ.ಗಿರಿಧರ ಶಾಸ್ತ್ರಿ, ಎನ್.ಸಿ.ಸಿ.ಅಧಿಕಾರಿಯಾದ ಡಾ. ಕುಮಾರಸ್ವಾಮಿ ಉಡುಪ ಉಪಸ್ಥಿತರಿದ್ದರು.

Scanned by CamScanner

21ರಿಂದ ವಿದ್ಯಾರಣ್ಯಪುರದಲ್ಲಿ ಎನ್.ಎಸ್.ಎಸ್ ಶಿಬಿರ

ಕೃಂಗೇರಿ, ಡಿ. 17: ಜೆಸಿಬಿಎಂ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ವಿಬಿಳ ತಾಲ್ಲೂಕಿನ ವಿದ್ಯಾರಣ್ಯಪುರದ ಸ.ಹಿ.ಪ್ರಾಥಮಿಕ ಪಾಠಶಾಲೆಯಲ್ಲಿ ಡಿ. 21ರಿಂದ 27ರವರೆಗೆ ಹಮ್ಮಿಕೊಳ್ಳಲಾಗಿದೆ.

ಡಿ.21ರ ಸಂಜೆ 4.30ಕ್ಕೆ ಶಾಸಕರು ಕಾರ್ಯಕ್ರಮ ಉದ್ಘಾಟಿಸಲಿದ್ದು ಮುಖ್ಯ ಅತಿಥಿಗಳಾಗಿ ಶ್ರೀಮಠದ ಆಡಳಿತಾಧಿಕಾರಿ ಡಾ.ವಿ.ಆರ್.ಗೌರೀ ಶಂಕರ್, ಡಾ.ಸಿ.ಪಿ.ಗಿರಿಧರಶಾಸ್ತ್ರೀ ಮುಂತಾದ ಗಣ್ಯರು ಆಗಮಿಸುವರು. ಪ್ರಾಚಾರ್ಯ ಡಾ. ಹೆಚ್.ಸಿ.ವೀರಪ್ಪಗೌಡ ಅಧ್ಯಕ್ಷತೆ ವಹಿಸುವರು.

ವ್ಯಕ್ತಿತ್ವ ವಿಕಸನ ಕಾರ್ಯಗಾರ, ವಕೀಲ ಸುಧೀರ್‌ಕುಮಾರ್ ಮೂರೊಳ್ಳಿಯವರಿಂದ 'ಮಲೆನಾಡು ಭಾಷೆ ಉಳಿಸೋಣ' ವಿಚಾರ ಸಂಕಿರಣ, ತಾಲ್ಲೂಕು ಛಾಯಾಗ್ರಹಕರ ಸಂಘದಿಂದ "ಅಪರೂಪದ ಛಾಯಾಚಿತ್ರ ಪ್ರದರ್ಶನ",ಪೋಲಿಸ್ ಸರ್ಕಲ್ ಇನ್ಸ್‌ಪೆಕ್ಟರ್ ಸುಧೀರ್ ಹೆಗಡೆ 'ಸೈಬರ್ ಕ್ರೈಂ ಮಾಹಿತಿ ಕಾರ್ಯಾಗಾರ, ಡಾ.ನವೀನ್‌ಕುಮಾರ್, 'ನೀವೇ ನಿಮ್ಮ ಭವಿಷ್ಯದ ಶಿಲ್ಪಿಗಳು, ಉಡುಪಿಯ ನಿವೃತ್ತ ಪ್ರಾಧ್ಯಾಪಕ ಡಾ. ಜಿ.ಎಸ್.ರಾಮಚಂದ್ರರವರಿಂದ 'ವಿದ್ಯಾರಣ್ಯಪುರ ಗ್ರಾಮದ ಬಗ್ಗೆ ಮಾಹಿತಿ. ಬಾಳೆಹೊನ್ನೂರು ಬಿ.ಜಿ.ಎಸ್.ಕಾಲೇಜಿನ ಪ್ರಾಧ್ಯಾಪಕ ಸುರೇಶ್‌ರವರಿಂದ 'ಕುವೆಂಪು ಸಾಹಿತ್ಯದಲ್ಲಿ ರಾಮಾಯಣ ದರ್ಶನಂ, ಮಲೆನಾಡು ವೈಚಾರಿಕತೆ ಮತ್ತು ಆಧ್ಯಾತ್ಮ ವಿಷಯದ ಬಗ್ಗೆ ಉಪನ್ಯಾಸ, ಕಾರ್ಕಳದ ಉಪನ್ಯಾಸಕ ಚಂದ್ರಕಾಂತ ಗೋರೆಯವರಿಂದ 'ಮನಸ್ಸು ಮತ್ತು ಶಿಕ್ಷಣದ ಬಗ್ಗೆ, ನಮ್ಮ ನಡುವಿನ ವಿವಿಧ ಸಸ್ಯಗಳ ಪರಿಚಯ ತೀರ್ಥಹಳ್ಳಿಯ ವಸಂತಿ ಮಂಜುನಾಥ್ ಉಪನ್ಯಾಸ, ಬೆಂಗಳೂರಿನ ಪ್ರೊ.ಜಿ.ಬಿ.ವಿವರಾಜು ಮಹಾತ್ಮಾ ಗಾಂಧೀಜಿ ಒಂದು ನೆನಪು ಎಂಬುದರ ಬಗ್ಗೆ ಉಪನ್ಯಾಸ ಕಾರ್ಯಕ್ರಮಗಳು ನಡೆಯಲಿವೆ.

ಸಂಜೆ ಪ್ರತಿದಿನ 6.30ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮ.

ಡಿ.27ರಂದು ಬೆಳಿಗ್ಗೆ 11.30ಕ್ಕೆ ಸಮಾರೋಪ ಭಾಷಣ,ಶ್ರೀಮಠದ ಆಡಳಿತಾಧಿಕಾರಿ ಡಾ.ವಿ.ಆರ್. ಗೌರೀಶಂಕರ್ ನೆರವೇರಿಸಲಿದ್ದಾರೆ ಎಂದು ಎನ್.ಎಸ್.ಎಸ್ ಅಧಿಕಾರಿ ಎ.ಜಿ.ಪ್ರಶಾಂತ್ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

Scanned by CamScanner

ರಾಷ್ಟ್ರೀಯ ಏಕತಾ ದಿವಸ ಆಚರಣೆ



ಶೃಂಗೇರಿ ಜೆ.ಸಿ.ಬಿ.ಎಂ. ಕಾಲೇಜಿನಲ್ಲಿ ಸರ್ದಾರ್ ವಲ್ಲಭಬಾಯ್ ಪಟೇಲ್‌ರವರ ಜನ್ಮದಿನದ ಅಂಗವಾಗಿ ರಾಷ್ಟ್ರೀಯ ಏಕತಾ ದಿವಸ ಕಾರ್ಯಕ್ರಮದಲ್ಲಿ ಡಾ. ಪ್ರಕಾಶ್ ಕೆ.ಪಿ. ಮಾತನಾಡಿದರು.

ಶೃಂಗೇರಿ, ನ. 2: ವಿವಿಧತೆಯಲ್ಲಿ ಏಕತೆ ಕಾಣುವ ವಿಶಾಲ ಹೃದಯಗಳು ದೇಶ ಕಂಡ ಅಭೂತಪೂರ್ವಕ ನಾಯಕರಾದ ಮಹಾತ್ಮಾ ಗಾಂಧೀಜೀ ಮತ್ತು ಉಕ್ಕಿನ ಮನುಷ್ಯ ಸರದಾರ್ ವಲ್ಲಭ ಬಾಯಿ ಪಾಟೇಲ್ ಅವರು ನಡುವೆ ಅವಿನಾಭಾವ ಸಂಭಂಧವಿತ್ತು ಎಂದು ಡಾ.ಪ್ರಕಾಶ್ ಕೆ.ಪಿ. ಹೇಳಿದರು.

ಅವರು ಜೆ.ಸಿ.ಬಿ.ಎಂ. ಕಾಲೇಜಿನಲ್ಲಿ ರಾಷ್ಟ್ರೀಯ ಏಕತಾ ದಿವಸ ಕಾರ್ಯಕ್ರಮದಲ್ಲಿ ರಾಷ್ಟ್ರದ ಎಲ್ಲೆಡೆ ಸರ್ದಾರ್ ಪಾಟೇಲರ 139ನೇ ಜನ್ಮ ದಿನದ ಪ್ರಯುಕ್ತ ಸ್ವಾತಂತ್ರ್ಯಾನಂತರ ದೇಶದ ಏಕ್ಯತೆಗಾಗಿ ಪಟೇಲ್ ರವರು ತಮ್ಮ ದಕ್ಷತೆಯಿಂದ ನಿರ್ವಹಿಸಿದ ಕಾರ್ಯದಿಂದಾಗಿ ಇಂದು ಭಾರತ ಒಂದು ದೊಡ್ಡ ಸಂಪದ್ಭರಿತ ರಾಷ್ಟ್ರವಾಗಿ ಉದಯಿಸಿದೆ ಎಂದು ಹೇಳಿದರು.

ಕಾಲೇಜಿನ ಪ್ರಾಚಾರ್ಯ ಡಾ. ಹೆಚ್.ಸಿ. ವೀರಪ್ಪ ಗೌಡ, ಅಧ್ಯಾಪಕ ಸಂಘದ ಅಧ್ಯಕ್ಷ ಪ್ರೊ. ಯಶವಂತಿ ಎಸ್. ಸಾಲಿಯಾನ್, ಪ್ರೊ. ದತ್ತಾತ್ರೇಯ ಮಾರ್ಪಳ್ಳಿ ಉಪಸ್ಥಿತರಿದ್ದರು. ಡಾ. ಎಂ. ಸ್ವಾಮಿ ರಾಷ್ಟ್ರೀಯ ಏಕತಾ ದಿವಸದ ಪ್ರತಿಜ್ಞಾವಿಧಿಯನ್ನು ಬೋಧಿಸಿದರು.

Scanned by CamScanner

ಜೆಸಿಬಿಎಂ ಕಾಲೇಜಿನಲ್ಲಿ ಏಕತಾ ದಿನ ಆಚರಣೆ

ಶೃಂಗೇರಿ: ಶ್ರೀ ಜೆಸಿಬಿಎಂ ಕಾಲೇಜಿನಲ್ಲಿ ಸರ್ದಾರ್ ವಲ್ಲಬಬಾಯ್ ಪಟೇಲ್ ಅವರ ಜನ್ಮದಿನದ ಅಂಗವಾಗಿ ರಾಷ್ಟ್ರೀಯ ಏಕತಾ ದಿವಸವನ್ನು ಆಚರಿಸಲಾಯಿತು. ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದ ಡಾ।ಕೆ.ಪಿ.ಪ್ರಕಾಶ್, ಸ್ವತಂತ್ರ್ಯಾನಂತರ ದೇಶದ ಐಕ್ಯತೆಗಾಗಿ ಪಟೇಲ್ ರವರು ದಕ್ಷತೆಯಿಂದ ನಿರ್ವಹಿಸಿದ ಕಾರ್ಯದಿಂದಾಗಿ ಇಂದು ಭಾರತ ಒಂದು ದೊಡ್ಡ ರಾಷ್ಟ್ರವಾಗಿ ಹೊರಹೊಮ್ಮಿದೆ. ಬ್ರಿಟೀಷರು ಸ್ವತಂತ್ರ ನೀಡಿದ ನಂತರ ಸಣ್ಣಸಣ್ಣ ಪ್ರಾಂತ್ಯಗಳಾಗಿ ಹಂಚಿಹೋಗಿದ್ದ ಭಾರತವನ್ನು ಒಗ್ಗೂಡಿಸುವಲ್ಲಿ ಮಹತ್ತರ ಪಾತ್ರವನ್ನು ಪಟೇಲ್ ನಿರ್ವಹಿಸಿದ ರೀತಿಯನ್ನು ತಿಳಿಸಿದರು. ಸಮಾರಂಭದಲ್ಲಿ ಕಾಲೇಜಿನ ಪ್ರಾಚಾರ್ಯ ಡಾ। ಎಚ್.ಸಿ. ವೀರಪ್ಪಗೌಡ, ಕಾಲೇಜು ಅಧ್ಯಾಪಕ ಸಂಘದ ಅಧ್ಯಕ್ಷ ಪ್ರೊ।ಯಶವಂತಿ ಎಸ್. ಸಾಲಿಯಾನ್, ವಿದ್ಯಾರ್ಥಿ ಕ್ಷೇಮಪಾಲನಾಧಿಕಾರಿ ಪ್ರೊ। ದತ್ತಾತ್ರೇಯ ಮಾರ್ಪಳ್ಳಿ ಉಪಸ್ಥಿತರಿದ್ದರು.

ಸಭೆಯಲ್ಲಿ ರಾಷ್ಟ್ರೀಯ ಏಕತಾ ದಿವಸದ ಪ್ರತಿಜ್ಞಾವಿಧಿಯನ್ನು ಡಾ।ಎಂ. ಸ್ವಾಮಿ ಬೋಧಿಸಿದರು.



ಶೃಂಗೇರಿ: ಶ್ರೀ ಜೆಸಿಬಿಎಂ ಕಾಲೇಜಿನಲ್ಲಿ ನಡೆದ ರಾಷ್ಟ್ರೀಯ ಏಕತಾ ದಿವಸ ಕಾರ್ಯಕ್ರಮದಲ್ಲಿ ಡಾ। ಕೆ.ಪಿ. ಪ್ರಕಾಶ ಮಾತನಾಡಿದರು.

Scanned by CamScanner

ಸುವರ್ಣ ಮಹೋತ್ಸವ: ಕಟ್ಟಡ ನಿರ್ಮಾಣಕ್ಕೆ ಸಹಕರಿಸಲು ಮನವಿ

ಅಜ್ಜಂಪುರ, ಜ.10: ಶೃಂಗೇರಿಯ ಚಂದ್ರಶೇಖರಭಾರತೀಮೆಮೋರಿಯಲ್ ಕಾಲೇಜು 50 ವರ್ಷ ಪೂರ್ಣಗೊಳಿಸಿದ ಹಿನ್ನೆಲೆಯಲ್ಲಿ ನಡೆಯಲಿರುವ ಸುವರ್ಣ ಮಹೋತ್ಸವದ ಶಾಶ್ವತ ನೆನಪಿನಾರ್ಥವಾಗಿ ಕೈಗೊಂಡಿರುವ ಅಡಳಿತ ಸಮುಚ್ಚಯ, ಅತಿಥಿ ಭವನ, ಸಭಾ-ಭವನ ನಿರ್ಮಾಣಕ್ಕೆ ಧನ ಸಹಾಯ ನೀಡುವಂತೆ ಕಾಲೇಜಿನ ಪ್ರಾಂಶುಪಾಲ ಡಾ.ವೀರಪ್ಪ ಗೌತಮನವಿ ಮಾಡಿದರು.

ಜೀರಲಿಂಗೇಶ್ವರ ಸಮುದಾಯ ಭವನದಲ್ಲಿ ನಡೆದ ಶೃಂಗೇರಿಯ ಚಂದ್ರಶೇಖರ ಭಾರತೀ ಮೆಮೋರಿಯಲ್ ಕಾಲೇಜಿನ ಹಳೇ ಮತ್ತು ಹಾಲಿ ವ್ಯಾಸಾಂಗ ಮಾಡುತ್ತಿರುವ ವಿದ್ಯಾರ್ಥಿಗಳ ಮತ್ತು ಪೋಷಕರ ಸಭೆಯಲ್ಲಿ ಅವರು ಮಾತನಾಡಿದರು.

ಪ್ರಸ್ತುತ ಕಾಲೇಜಿಗೆ ಸೇರುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಯೂ ಹೆಚ್ಚಾಗಿದ್ದು, ಕೊಠಡಿ, ವಸತಿ ನಿಲಯದ ಅವಶ್ಯವಿದೆ. ಈಗಾಗಿ ಸೊಸದಾಗಿ ಅಡಳಿತ ಸಮುಚ್ಚಯ, ಸಭಾ-ಭವನ, ಅತಿಥಿ ಭವನ ನಿರ್ಮಿಸಲು ಮುಂದಾಗಿದ್ದು, ಸುಮಾರು 9 ಕೋಟಿ ವೆಚ್ಚ ತಗುಲಲಿದೆ. ಇದಕ್ಕೆ ಕಾಲೇಜಿನಲ್ಲಿ ವ್ಯಾಸಾಂಗ ಮಾಡುತ್ತಿರುವ ವಿದ್ಯಾರ್ಥಿ, ಪೋಷಕರು, ಸಾರ್ವಜನಿಕರು ಆರ್ಥಿಕ ಸಹಾಯ ನೀಡುವಂತೆ ಕೋರಿದರು.



ಅಜ್ಜಂಪುರದಲ್ಲಿ ನಡೆದ ಶೃಂಗೇರಿಯ ಚಂದ್ರಶೇಖರ ಭಾರತೀ ಮೆಮೋರಿಯಲ್ ಸ್ಮಾರಕ ಕಾಲೇಜಿನ ವ್ಯಾಸಾಂಗ ಮಾಡುತ್ತಿರುವ ಮತ್ತು ಶಿಕ್ಷಣ ಪೂರೈಸಿರುವ ವಿದ್ಯಾರ್ಥಿ ಮತ್ತು ಪೋಷಕರ ಸಭೆಯಲ್ಲಿ ಪ್ರಾಚಾರ್ಯ ಗಿರಿಧರ್ ಮಾತನಾಡಿದರು.

ಉಪನ್ಯಾಸಕ ಶಿವಮೂರ್ತಿ ಮಾತನಾಡಿ, ಕಾಲೇಜು ಸಾರ್ಥಕ 50 ವಸಂತ ಪೂರ್ತಿಗೊಳಿಸಿರುವ ಹಿನ್ನೆಲೆಯಲ್ಲಿ ವಿಚಾರ ಸಂಕಿರಣ, ಕಾರ್ಯಾಗಾರ, ಸಾಂಸ್ಕೃತಿಕ ಸ್ಪರ್ಧೆ, ಕ್ರೀಡೋತ್ಸವದ ಚಟುವಟಿಕೆ ಆಯೋಜಿಸಲಾಗಿದೆ. ಬಳಿಕ 2015ರ ಏಪ್ರಿಲ್‌ನಲ್ಲಿ ಸುವರ್ಣ ಮಹೋತ್ಸವದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದ್ದು, ಎಲ್ಲರೂ ಭಾಗವಹಿಸುವಂತೆ ಮನವಿ ಮಾಡಿದರು.

ಪ್ರಾಚಾರ್ಯ ಗಿರಿಧರ್ ಶಾಸ್ತ್ರಿ, ಗ್ರಾಮ ಪಂಚಾಯ್ತಿ ಮಾಜಿ ಅಧ್ಯಕ್ಷ ರಾಜಶೇಖರಪ್ಪ, ಗ್ರಾಪಂ ಸದಸ್ಯೆ ಚಿತ್ರಾವತಿ, ಚಿಂತನ ಪೌಂಡೇಶನ್ ಚನ್ನಪ್ಪ, ನಿವೃತ್ತ ಶಿಕ್ಷಕ ಪುಟ್ಟಸ್ವಾಮಿ ಮತ್ತಿತರರಿದ್ದರು.

Scanned by CamScanner

ಸುವರ್ಣ ಮಹೋತ್ಸವ: ಕಟ್ಟಡ ನಿರ್ಮಾಣಕ್ಕೆ ಶ್ರೀರ್ಮಾನ

ಆಜ್ಜಂಪುರ: ಶೃಂಗೇರಿಯ ಚಂದ್ರಶೇಖರ ಭಾರತೀ ಮೆಮೋರಿಯಲ್ ಕಾಲೇಜು ಐವತ್ತು ವರ್ಷ ಪೂರ್ಣಗೊಳಿಸಿದ ಹಿನ್ನೆಲೆಯಲ್ಲಿ ನಡೆಯಲಿರುವ ಸುವರ್ಣ ಮಹೋತ್ಸವ ದ ಶಾಶ್ವತ ನೆನಪಿಗಾಗಿ ಕೈಗೊಂಡಿರುವ ಆಡಳಿತ ಸಮುಚ್ಚಯ, ಅತಿಥಿಭವನ, ಸಭಾಭವನ ನಿರ್ಮಾಣಕ್ಕೆ ಧನ ಸಹಾಯ ನೀಡುವಂತೆ ಕಾಲೇಜಿನ ಪ್ರಾಂಶುಪಾಲ ಡಾ। ವೀರಪ್ಪ ಗೌಡ ಮನವಿ ಮಾಡಿದರು.

ಆಜ್ಜಂಪುರದ ಬೀರಲಿಂಗೇಶ್ವರ ಸಮುದಾಯ ಭವನದಲ್ಲಿ ಸೋಮವಾರ ನಡೆದ ಶೃಂಗೇರಿ ಚಂದ್ರಶೇಖರ ಭಾರತೀ ಮೆಮೋರಿಯಲ್ ಕಾಲೇಜಿನ ಹಳೆ ಮತ್ತು ಹಾಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಮತ್ತು ಪೋಷಕರ ಸಭೆಯಲ್ಲಿ, ಅವರು ಮಾತನಾಡಿದರು.

ಪಶ್ಚಿಮ ಘಟ್ಟಗಳ ಸುಂದರ ಪರಿಸರದಲ್ಲಿನ ಶಾರಾದಾಂಬೆಯ ನೆಲೆಯಲ್ಲಿರುವ ಜಗದ್ಗುರು ಭಾರತೀ ಮೆಮೋರಿಯಲ್ ಕಾಲೇಜು ಅತ್ಯುತ್ತಮ ಶಿಕ್ಷಣ ಮತ್ತು ಶಿಸ್ತಿನಿಂದಾಗಿ, ಅನೇಕ ಪ್ರಶಸ್ತಿ, ಪುರಸ್ಕಾರಗಳನ್ನು ಪಡೆಯುತ್ತಿದೆ. ಆ ಮೂಲಕ ರಾಜ್ಯ ಮತ್ತು ವಿಶ್ವವಿದ್ಯಾಲಯ ಮಟ್ಟದಲ್ಲೂ ಅತ್ಯುತ್ತಮ ಕಾಲೇಜು ಎಂಬ ಹೆಸರು ಪಡೆದಿದೆ. ಪ್ರಸ್ತುತ ಕಾಲೇಜಿಗೆ ಸೇರುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಯೂ ಹೆಚ್ಚಾಗಿದ್ದು ಕೊಠಡಿ, ವಸತಿ ನಿಲಯದ ಅವಶ್ಯಕತೆಯಿದೆ. ಈಗಾಗಿ ಹೊಸದಾಗಿ ಆಡಳಿತ ಸಮುಚ್ಚಯ, ಸಭಾಭವನ, ಅತಿಥಿ ಭವನ ನಿರ್ಮಿಸಲು ಮುಂದಾಗಿದ್ದು ಸುಮಾರು 9 ಕೋಟಿ ವೆಚ್ಚ ತಗುಲಲಿದೆ. ಇದಕ್ಕೆ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ, ಪೋಷಕರು, ಸಾರ್ವಜನಿಕರು ಆರ್ಥಿಕ ಸಹಾಯ ನೀಡುವಂತೆ ಕೋರಿದರು.



ಆಜ್ಜಂಪುರ: ಬೀರಲಿಂಗೇಶ್ವರ ಭವನದಲ್ಲಿ ನಡೆದ ಶೃಂಗೇರಿಯ ಚಂದ್ರಶೇಖರ ಭಾರತೀ ಮೆಮೋರಿಯಲ್ ಸ್ಮಾರಕ ಕಾಲೇಜಿನ ವಿದ್ಯಾರ್ಥಿ, ಮತ್ತು ಪೋಷಕರ ಸಭೆಯಲ್ಲಿ, ಪ್ರಾಚಾರ್ಯ ಗಿರಿಧರ್ ಮಾತನಾಡಿದರು.

ಆಜ್ಜಂಪುರದ ಹಲವಾರು ವಿದ್ಯಾರ್ಥಿಗಳು ಕಾಲೇಜಿನಲ್ಲಿ ವ್ಯಾಸಂಗ ಮಾಡುವ ಮೂಲಕ ಆಜ್ಜಂಪುರ-ಶೃಂಗೇರಿ ನಡುವಿನ ಬಾಂಧವ್ಯ ಗಟ್ಟಿಗೊಳಿಸಿದ್ದಾರೆ. ಪ್ರಸ್ತುತ ಕಾಲೇಜಿನ ಸರ್ವತೋಮುಖ ಅಭಿವೃದ್ಧಿಗೆ ಕೈಗೊಂಡಿರುವ ಕಟ್ಟಡ ನಿರ್ಮಾಣದಲ್ಲಿಯೂ ಕೈಜೋಡಿಸಲು ಮುಂದಾಗಬೇಕು ಎಂದರು.

ಸುವರ್ಣ ಮಹೋತ್ಸವದ ಹಿನ್ನೆಲೆಯಲ್ಲಿ ಬಿಜಾರ ಗಂಗಿರೆಡ್ಡಿ, ಕಾರ್ಯಾಗಾರ, ಸಾಂಸ್ಕೃತಿಕ ಸ್ಪರ್ಧೆ, ಕ್ರೀಡೋತ್ಸವ ಮುಂತಾದ ಚಟುವಟಿಕೆ ಆಯೋಜಿಸಲಾಗಿದೆ. ಜನವರಿ 2015ರ ಫೆಬ್ರವರಿಯಲ್ಲಿ ಸುವರ್ಣ ಮಹೋತ್ಸವದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ ಎಂದರು.

ಗ್ರಾಪಂ ಮಾಜಿ ಅಧ್ಯಕ್ಷ ರಾಜಶೇಖರಪ್ಪ ಗ್ರಾಪಂನಿಂದ ಚಿತ್ರಾವತಿ, ಚಿಂತನ ಫೌಂಡೇಶನ್‌ನ ಚನ್ನಪ್ಪ ಸಿದ್ಧಪ್ಪ ಶಿಕ್ಷಕ ಮುಟ್ಟಿಸ್ವಾಮಿ, ಕಾಲೇಜಿನ ವಿದ್ಯಾರ್ಥಿಗಳು, ಪೋಷಕರು ಇದ್ದರು.

Scanned by CamScanner



ಉದ್ಘಾಟನೆ

ಶೃಂಗೇರಿಯ ಜೆಸಿಬಿಎಂ ಕಾಲೇಜಿನಲ್ಲಿ ಮಂಗಳೂರಿನ ಸಹ್ಯಾದ್ರಿ ಎಂಜಿನಿಯರಿಂಗ್ ಮತ್ತು ಮ್ಯಾನೇಜ್ ಮೆಂಟ್ ಕಾಲೇಜು ಆಯೋಜಿಸಿದ್ದ ಸಹ್ಯಾದ್ರಿ 'ಟ್ಯಾಲೆಂಟ್ ಹಂಟ್' ಕಾಮರ್ಯಕ್ರಮವನ್ನು ನಿವೃತ್ತ ಪ್ರಾಧ್ಯಾಪಕ ಜೆ.ಎಸ್.ಶಾನುಭಾಗ್ ಇತ್ತೀಚೆಗೆ ಉದ್ಘಾಟಿಸಿದರು. ಪ್ರಾಂಶುಪಾಲ ವೀರಪ್ಪಗೌಡ ಇದ್ದರು. (ಬಾಳೆಹೊನ್ನೂರು ಚಿತ್ರ)

Scanned by CamScanner

ಅಜ್ಜಂಪುರ: ಜೆಸಿಬಿಎಂ ಕಾಲೇಜು ಪೋಷಕರ ಸಭೆ

■ ವಿಕ ಸುದ್ದಿಲೋಕ, ಅಜ್ಜಂಪುರ

ಶೃಂಗೇರಿ ಜೆಸಿಬಿಎಂ ಕಾಲೇಜು ಮಕ್ಕಳ ಶೈಕ್ಷಣಿಕ ಪ್ರಗತಿ ಜತೆಗೆ ಉತ್ತಮ ನಡವಳಿಕೆಗೆ ಪ್ರಥಮ ಆದ್ಯತೆ ನೀಡುತ್ತದೆ ಎಂದು ಕಾಲೇಜು ಪ್ರಾಚಾರ್ಯ ಡಾ. ವೀರಪ್ಪಗೌಡ ಹೇಳಿದರು.

ಕಾಲೇಜು ಸುವರ್ಣ ಮಹೋತ್ಸವ ಹಿನ್ನೆಲೆಯಲ್ಲಿ ಸೋಮವಾರ ಪಟ್ಟಣದ ವೀರಲಿಂಗೇಶ್ವರ ಸಮುದಾಯ ಭವನದಲ್ಲಿ ನಡೆದ ಕಾಲೇಜು ವಿದ್ಯಾರ್ಥಿ ಪೋಷಕರ ಸಭೆಯಲ್ಲಿ ಅವರು ಮಾತನಾಡಿ, ಶೃಂಗೇರಿ ಪೀಠ ಸಾಮರಸ್ಯಕ್ಕೆ ಹೆಸರುವಾಸಿಯಾಗಿದ್ದು, ಸಾತ್ವಿಕತೆ ಅಡಗಿತ ಹೊಂದಿದೆ.

ಉನ್ನತ ಶಿಕ್ಷಣ ಎಲ್ಲರಿಗೂ ದೊರಕಿಸಿಕೊಡಲು 50 ವರ್ಷಗಳ ಹಿಂದೆ ಪ್ರಾರಂಭವಾದ ಶ್ರೀಜಗದ್ಗುರು ಚಂದ್ರಶೇಖರ ಭಾರತೀ ಸ್ಮಾರಕ ಕಾಲೇಜು ಅತ್ಯುತ್ತಮ ಶಿಕ್ಷಣ, ಶಿಸ್ತುಗಳಿಂದಾಗಿ, ಅನೇಕ ಪ್ರಶಸ್ತಿಗಳನ್ನು ಪಡೆಯುತ್ತಾ ಪ್ರಗತಿ ಪಥದಲ್ಲಿ ಮುನ್ನಡೆದಿದೆ. ಯುಜಿಸಿ ಅಂಗಸಂಸ್ಥೆ ನ್ಯಾಕ್ ನಿಂದ ಎ ಶ್ರೇಣಿಯನ್ನು ಪಡೆದು ರಾಜ್ಯ ಹಾಗೂ ವಿಶ್ವವಿದ್ಯಾಲಯದ ಮಟ್ಟದಲ್ಲಿ ಅತ್ಯುತ್ತಮ ಕಾಲೇಜು ಎಂದು ಹೆಸರಾಗಿದೆ. ಪದವಿಪೂರ್ವ ಕಾಲೇಜು ಎ ಶ್ರೇಣಿ ಹೊಂದಿದೆ ಎಂದರು.

ಕಾಲೇಜು ಸಾರ್ಥಕ 50 ವರ್ಷ ಪೂರೈಸುತ್ತಿರುವ ಹಿನ್ನೆಲೆಯಲ್ಲಿ ವರ್ಷಪೂರ್ತಿ ವಿವಿಧ ಸಂಕಿರಣ, ಕಾರ್ಯಾಗಾರ, ಸಾಂಸ್ಕೃತಿಕ ಸ್ಪರ್ಧೆ, ಕ್ರೀಡೋತ್ಸವ ಮೊದಲಾದ ಚಟುವಟಿಕೆಗಳನ್ನು ಆಯೋಜಿಸುವುದರೊಂದಿಗೆ ಶಾಶ್ವತ ನೆನಪಿಗಾಗಿ ಅಡಳಿತ ಸಮುಚ್ಚಯ, ಅತಿಥಿ ಭವನ, ಸಭಾ ಭವನಗಳನ್ನು ನಿರ್ಮಿಸಲು ನಿರ್ಧರಿಸಲಾಗಿದೆ ಎಂದರು.



ಅಜ್ಜಂಪುರದಲ್ಲಿ ಸೋಮವಾರ ನಡೆದ ಶೃಂಗೇರಿ ಜೆಸಿಬಿಎಂ ಕಾಲೇಜು ಪೋಷಕರ ಸಭೆಯಲ್ಲಿ ಪ್ರಾಚಾರ್ಯ ಡಾ. ಗಿರಿಧರ ಶಾಸ್ತ್ರಿ ಮಾತನಾಡಿದರು.

ಪದವಿ ಪೂರ್ವ ಕಾಲೇಜು ಪ್ರಾಚಾರ್ಯ ಡಾ. ಗಿರಿಧರ್ ಶಾಸ್ತ್ರಿ ಮಾತನಾಡಿ, 34ನೇ ಜಗದ್ಗುರುಗಳಾದ ಚಂದ್ರಶೇಖರ ಭಾರತೀ ಸ್ವಾಮೀಜಿ ಜೀವನ್ಮುಖಿಯಾಗಿದ್ದರು. 120 ಕಿ.ಮೀ. ದೂರದ ಶಿವಮೊಗ್ಗ-ಚಿಕ್ಕಮಗಳೂರಿಗೆ ಪೋಷಕರು ತಮ್ಮ ಮಕ್ಕಳನ್ನು ಸೇರುಸುತ್ತಿದ್ದನ್ನು ಕಂಡು 50 ವರ್ಷಗಳ ಹಿಂದೆ ಶಿಕ್ಷಣ ಸಂಸ್ಥೆ ಪ್ರಾರಂಭಿಸಿದ್ದರು. ಇಂದು ಶಿಕ್ಷಣ ವ್ಯಾಪಾರೀಕರಣವಾಗಿದ್ದು ಇದನ್ನು ತೊಡೆದು ಹಾಕಲು ಮಠ ಶ್ರಮಿಸುತ್ತಿದೆ ಎಂದರು.

ಶಾವರೆಕರ ಗ್ರಾ.ಪಂ. ಮಾಜಿ ಅಧ್ಯಕ್ಷ ರಾಜ ಶೇಖರಪ್ಪ ಮಾತನಾಡಿ, ಸಂಸ್ಥೆಯಲ್ಲಿ ಗಿರಿಧರ ಶಾಸ್ತ್ರಿಗಳು ಅಡಳಿತಾಧಿಕಾರಿ, ಆಪ್ತ ಕಾರ್ಯದರ್ಶಿ, ಪ್ರಾಂಶುಪಾಲರಾಗಿ ಅವಿರತ ಸೇವೆ ಸಲ್ಲಿಸುತ್ತಿರುವುದರಿಂದ ಮಠ ಶಿಕ್ಷಣ ಕ್ಷೇತ್ರದಲ್ಲಿ ಪ್ರಗತಿ ಸಾಧಿಸುತ್ತಿದೆ. ಮಠದ ಒಸ್ತು ಬಿದ್ದ ಜೀವನಕ್ಕೆ, ಶಿಕ್ಷಣಕ್ಕೆ ಮಕ್ಕಳು ತೊಂದಿಕೊಂಡರೆ ಅವರ ಮುಂದಿನ ಭವಿಷ್ಯ ಉಜ್ವಲವಾಗುತ್ತದೆ ಎಂದು ಹೇಳಿದರು.

ಗ್ರಾ.ಪಂ. ಸದಸ್ಯೆ ಚಿತ್ರಾವತಿ, ಪೋಷಕರ ಪರವಾಗಿ ಜಿ.ಚನ್ನಪ್ಪ, ಉಮೇಶ್‌ನಾಯಕ್, ಗುತ್ತಿಗೆದಾರ ಅಣ್ಣಪ್ಪ ಮಾತನಾಡಿದರು. ಉಪನ್ಯಾಸಕರಾದ ಅಕ್ಷಯ, ಪ್ರದೀಪ್, ಲೋಕೇಶ್ ಹಾಜರಿದ್ದರು. ಹ. ಮಟ್ಟಸ್ವಾಮಿ ಸ್ವಾಗತಿಸಿ, ಶಿವಮೂರ್ತಿ ವಂದಿಸಿದರು.

ವಿಜಯ ಕರ್ನಾಟಕ 12-11-14

Scanned by CamScanner

ಯೋಗ ತರಬೇತಿ ಶಿಬಿರ

ಶೃಂಗೇರಿ: ಜೆಸಿಬಿಎಂ ಕಾಲೇಜಿನಲ್ಲಿ ಯುವ ರೆಡ್‌ಕ್ರಾಸ್, ಸ್ವಾಮಿ ವಿವೇಕಾನಂದ ವೆಲ್‌ನೆಸ್ ಸೆಂಟರ್, ಚಿಕ್ಕಮಗಳೂರಿನ ಎಂಇಎಸ್ ಕಾಲೇಜಿನ ಆಶ್ರಯದಲ್ಲಿ ಮಾಸಿಕ ಯೋಗ ತರಬೇತಿ ಶಿಬಿರದ ಸಮಾರೋಪ ಕಾರ್ಯಕ್ರಮ ನಡೆಯಿತು.

ಪಪಂ ಸದಸ್ಯ ನಾಗೇಶ ಕಾಮತ್ ಮಾತನಾಡಿ, ಯೋಗ ಅಭ್ಯಾಸದಿಂದ ಜೀವನ ಲವಲವಿಕೆ ಲಭಿಸುವುದಲ್ಲದೇ ಏಕಾಗ್ರತೆ ಮೂಡುತ್ತದೆ ಎಂದರು.

ಸ್ವಾಮಿ ವಿವೇಕಾನಂದ ಜಿಲ್ಲಾ ವೆಲ್‌ನೆಸ್ ಸೆಂಟರ್‌ನ ಸಂಯೋಜಕ ಡಾ। ವಿಷ್ಣುವರ್ಧನ ಮಾತನಾಡಿ, ಜಿಲ್ಲೆಯಲ್ಲಿ ನಮ್ಮ ಸಂಸ್ಥೆ ವತಿಯಿಂದ ಅನೇಕ ಯೋಗ ತರಬೇತಿ ಶಿಬಿರ ಆಯೋಜಿಸಲಾಗಿದೆ. ಮುಂದಿನ ದಿನಗಳಲ್ಲಿ ಇಲ್ಲಿನ ಹಿರಿಯ ನಾಗರಿಕರಿಗೆ ಯೋಗ ತರಬೇತಿ ಆಯೋಜಿಸುವ ಉದ್ದೇಶ ಹೊಂದಲಾಗಿದೆ ಎಂದರು. ಕಾಲೇಜಿನ ಪ್ರಾಚಾರ್ಯ ಡಾ। ಎಚ್.ಸಿ. ವೀರಪ್ಪಗೌಡ ಅಧ್ಯಕ್ಷತೆ ವಹಿಸಿದ್ದರು. ಯುವ ರೆಡ್‌ಕ್ರಾಸ್ ಅಧಿಕಾರಿಗಳಾದ ಎ.ಜಿ. ಪ್ರಶಾಂತ, ಪ್ರೊ। ಎಂ. ಸ್ವಾಮಿ, ಯಶವಂತ ಎಸ್. ಸಾಲಿಯಾನ ಉಪಸ್ಥಿತರಿದ್ದರು. ತರಬೇತಿಯಲ್ಲಿ ಯೋ[illegible] ಗುರು ಹರೀಶಕುಮಾರ, ಸುಮ[illegible] ಯೋಗ ಶಿಕ್ಷಣ ನೀಡಿದ್ದರು.



ಶೃಂಗೇರಿ: ಜೆಸಿಬಿಎಂ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಮಾಸಿಕ ಯೋಗ ತರಬೇತಿ ಶಿಬಿರದ ಸಮಾರೋಪ ಕಾರ್ಯಕ್ರಮದಲ್ಲಿ ನಾಗೇಶ ಕಾಮತ್ ಮಾತನಾಡಿದರು. ಉದಯವಾಣಿ 23-10-14

Scanned by CamScanner

ಸಾಂಸ್ಕೃತಿಕ ವೈಭವದಲ್ಲಿ ಜೆಸಿಬಿಎಂಗೆ ಅಗ್ರಸ್ಥಾನ

ವಿಕಸುದ್ದಿಟೋಕ ಚಿಕ್ಕಮಗಳೂರು

ಐಡಿಎಸ್‌ಜಿ ಸಾಂಸ್ಕೃತಿಕ ವೈಭವ ಸ್ಪರ್ಧೆಯಲ್ಲಿ ಶೃಂಗೇರಿಯ ಜೆಸಿಬಿಎಂ ಕಾಲೇಜು ತಂಡ ಅಗ್ರಸ್ಥಾನ ಗಳಿಸಿದೆ.

ಚರ್ಚಾ ಸ್ಪರ್ಧೆಯಲ್ಲಿ ಪ್ರಮೋದ ಭಾರದ್ವಜ ಮತ್ತು ಭಾವಗೀತೆ ಸ್ಪರ್ಧೆಯಲ್ಲಿ ಪೂರ್ಣಾನಂದ ಪ್ರಥಮಸ್ಥಾನ ಗಳಿಸುವ ಮೂಲಕ ಜೆಸಿಬಿಎಂ ಕಾಲೇಜಿನ ಹಿರಿಮೆ ಎತ್ತಿಹಿಡಿದರು.

ಪ್ರಾಥಮಿಕ ಶಿಕ್ಷಣದಲ್ಲಿ ಕನ್ನಡಭಾಷಾ ಮಾಧ್ಯಮ ಕಡ್ಡಾಯ ಕುರಿತ ಚರ್ಚಾ ಸ್ಪರ್ಧೆಯಲ್ಲಿ ಶಿರಾಳಕೊಪ್ಪ ಕದಂಬ ಪದವಿ ಕಾಲೇಜಿನ ಎನ್.ಸಂತೋಷ ದ್ವಿತೀಯ, ನಗರದ ಎಂಇಎಸ್ ಕಾಲೇಜಿನ ಬಿ.ಎನ್.ನಮನಾ ತೃತೀಯಸ್ಥಾನ ಗಳಿಸಿದರು. ಸಮಾಧಾನಕರ ಬಹುಮಾನ ಎಂಇಎಸ್‌ನ ಮೊನವಿ ಪಾಲಾಯಿತು.

ಭಾವಗೀತೆ ಸ್ಪರ್ಧೆಯಲ್ಲಿ ನಗರದ ಎಂಇಎಸ್ ಕಾಲೇಜಿನ ದೀಪ್ತಿರಾಜ್ ದ್ವಿತೀಯ, ತರೀಕೆರೆ ಸರಕಾರಿ ಪದವಿ ಕಾಲೇಜಿನ ಅಂಜನಾ ವಿಷ್ಣ ತೃತೀಯ ಸ್ಥಾನ ಗಳಿಸಿದರೆ, ಆತಿಥೇಯ ಐಡಿಎಸ್‌ಜಿ ಕಾಲೇಜಿನ ರಮ್ಯ ಎಸ್. ರಾವ್ ಸಮಾಧಾನಕರ ಬಹುಮಾನಕ್ಕೆ ತೃಪ್ತಿಪಡಬೇಕಾಯಿತು.

ಐಡಿಎಸ್‌ಜಿ ಸರಕಾರಿ ಕಾಲೇಜಿನ ಸಾಂಸ್ಕೃತಿಕ ವೇದಿಕೆ, ಕುವೆಂಪು ವಿಶ್ವವಿದ್ಯಾಲಯ ಮಟ್ಟದ ಅಂತರಕಾಲೇಜುಗಳ ಸಾಂಸ್ಕೃತಿಕ ಸ್ಪರ್ಧೆಯನ್ನು ಇತ್ತೀಚೆಗೆ ಕಾಲೇಜಿನ ಸಭಾಂಗಣದಲ್ಲಿ ಆಯೋಜಿಸಿತ್ತು. ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳ 14 ಪದವಿ ಕಾಲೇಜುಗಳ ಸುಮಾರು 45 ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ಉಪನ್ಯಾಸಕರಾದ ವಿರೂಪಾಕ್ಷ, ಶಿವಕುಮಾರ ಮತ್ತು ಎನ್.ಆರ್.ಆರಾಧ್ಯ ತೀರ್ಪುಗಾರರಾಗಿದ್ದರು.

ಸಮಾರೋಪ ಸಮಾರಂಭದಲ್ಲಿ ನಗರಸಭೆ ಸದಸ್ಯ ಕೆ.ಎಂ.ಕೃಷ್ಣಮೂರ್ತಿ ಮಾತನಾಡಿದರು.

ಕಾಲೇಜು ವ್ಯಾಂಶುಪಾಲೆ ಜರೀನಾ ಕೌಸರ್ ಅಧ್ಯಕ್ಷತೆ ವಹಿಸಿದ್ದರು. ಸಾಂಸ್ಕೃತಿ ವೇದಿಕೆ ಸಂಚಾಲಕರಾದ ಡಾ.ಕೆ.ಎ. ರಾಜಣ್ಣ ಮತ್ತು ಸಹಸಂಚಾಲಕ ನರೇಂದ್ರ, ಕಾಲೇಜು ಸಾಂಸ್ಕೃತಿಕ ವೇದಿಕೆ ಸದಸ್ಯರಾದ ಡಾ. ಕೆ.ಎಂ. ಜಗದೀಶ್ ಮತ್ತಿತರರು ಹಾಜರಿದ್ದರು.



ಚಿಕ್ಕಮಗಳೂರಿನ ಐಡಿಎಸ್‌ಜಿ ಕಾಲೇಜಿನಲ್ಲಿ ಇತ್ತೀಚೆಗೆ ಹಮ್ಮಿಕೊಂಡಿದ್ದ ಸಾಂಸ್ಕೃತಿಕ ವೈಭವ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಗಣ್ಯರು ಪ್ರಶಸ್ತಿ ಪ್ರದಾನ ಮಾಡಿದರು.

ವಿಜಯ ಕರ್ನಾಟಕ
45/2, ಸಾಳೆಂಗ ರಸ್ತೆ, ಸವಳಿ,
ಶಿವಮೊಗ್ಗ - 577 204.
ಫೋನ್: 227434, ಫ್ಯಾಕ್ಸ್: 08182-277395
E-mail: vijayakarnataka@vijayakarnataka.com
ಚಿಕ್ಕಮಗಳೂರು ಕಚೇರಿ
ಕಾಫಿ ಕಾಂಪ್ಲೆಕ್ಸ್, ಜಯಪುರ ಕಾಂಪ್ಲೆಕ್ಸ್
ಮಲ್ಲೇಶ್ವರ, ಎಂ.ಜಿ.ರಸ್ತೆ, ಫೋನ್: 08262-225354

Scanned by CamScanner

ಕನ್ನಡಪ್ರಭ

ಶಿವಮೊಗ್ಗ | ಭಾನುವಾರ, 19 ಆಕ

ಪಶ್ಚಿಮ ಘಟ್ಟ ಜೀವ ವೈವಿಧ್ಯ ಸಂರಕ್ಷಿಸಿ: ಡಾ. ರಮೇಶ್

ಶೃಂಗೇರಿ: ವಿನಾಶದ ಅಂಚಿನಲ್ಲಿರುವ ಪಶ್ಚಿಮ ಘಟ್ಟಗಳಲ್ಲಿರುವ ಅಪರೂಪದ ಸಸ್ಯ ಪ್ರಭೇದ ಹಾಗೂ ಜೀವ ವೈವಿಧ್ಯ ಸಂರಕ್ಷಿಸಿ ಉಳಿಸುವ ಕೆಲಸ ನಡೆಯಬೇಕಿದೆ ಎಂದು ಕುದುರೆಮುಖ ವನ್ಯಜೀವಿ ಉಪ ಅರಣ್ಯಾಧಿಕಾರಿ ಡಾ. ರಮೇಶ್ ತಿಳಿಸಿದರು.

ಪಟ್ಟಣದ ಜೆಸಿಬಿಎಂ ಕಾಲೇಜಿನ ಡಾ. ಟಿ.ಎಂ.ಎ. ಪೈ ಸಭಾಂಗಣದಲ್ಲಿ ಕುದುರೆಮುಖ ವನ್ಯಜೀವಿ ವಿಭಾಗ ಹಾಗೂ ಜೆಸಿಬಿಎಂ ಕಾಲೇಜಿನ ಸಹಯೋಗದೊಂದಿಗೆ ಕುದುರೆಮುಖ ರಾಷ್ಟ್ರೀಯ ಉದ್ಯಾನವನ ಜೀವವೈವಿಧ್ಯ ಕುರಿತ ವಿಚಾರ ಸಂಕೀರಣ ಹಾಗೂ ಸಂವಾದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಪಶ್ಚಿಮ ಘಟ್ಟ ಪ್ರದೇಶದಲ್ಲಿ ವಿಶೇಷ ಕಾಡುಗಳಿವೆ. ಔಷಧಿ ಸಸ್ಯಗಳಿವೆ. ಅರಿವಿಗೆ ಬಾರದ ಅದೆಷ್ಟೋ ಸಸ್ಯ ಪ್ರಭೇದ, ಜೀವ ಸಂಕುಲ ಇದೆ. ಇಂತಹ ಸಸ್ಯ ಸಂಪತ್ತುಗಳಿಂದ ಕೂಡಿ ಸಂಪದ್ಭರಿತ ಪಶ್ಚಿಮಘಟ್ಟ ಕಾಡುಗಳನ್ನು ಉಳಿಸಿಕೊಳ್ಳುವುದು ಅನಿವಾರ್ಯವಾಗಿದೆ. ವಿದ್ಯಾರ್ಥಿಗಳು, ಸಂಘ ಸಂಸ್ಥೆಗಳು ಈ ನಿಟ್ಟಿನಲ್ಲಿ ಚಿಂತಿಸಬೇಕಿದೆ ಎಂದರು.

ಕಾಲೇಜಿನ ಪ್ರಾಚಾರ್ಯ ಎಚ್.ಸಿ. ವೀರಪ್ಪಗೌಡ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಕೆರೆಕಟ್ಟೆ ವನ್ಯಜೀವಿ ವಿಭಾಗದ ವಲಯಾರಣ್ಯಾಧಿಕಾರಿ ಸುಬ್ರಮಣ್ಯ. ಜೆಸಿಬಿಎಂ ಕಾಲೇಜಿನ ಪ್ರಾಣಿಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಕುಮಾರ ಸ್ವಾಮಿ, ಜೆಸಿಬಿಎಂ ಪದವಿಪೂರ್ವ ಕಾಲೇಜಿನ ಪ್ರಾಚಾರ್ಯ ಡಾ. ಸಿ.ವಿ. ಗಿರಿಧರ ಕಾಸ್ಲಿ ಇತರರು ಉಪಸ್ಥಿತರಿದ್ದರು. ಅನಿತಾ ಹೆಬ್ಬಾರ್ ನಿರೂಪಿಸಿದರು.



Scanned by CamScanner

ಪ್ರಜಾವಾಣಿ. 18 ನೇ oct, 2014 ಶನಿವಾರ

ಉದ್ಘಾಟನೆ

ಶೃಂಗೇರಿಯ ಜೆಸಿಬಿಎಂ ಕಾಲೇಜಿನಲ್ಲಿ ಆಯೋಜಿಸಿದ್ದ ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಜೀವ ವೈವಿಧ್ಯತೆ ಬಗ್ಗೆ ನಡೆದ ವಿಚಾರ ಸಂಕಿರಣವನ್ನು ಕುದುರೆಮುಖ ವನ್ಯ ಜೀವಿ ವಿಭಾಗದ ಉಪ ಆರಣ್ಯ ಸಂರಕ್ಷಣಾಧಿಕಾರಿ ಡಾ.ರಮೇಶ್ ಕುಮಾರ್ ಉದ್ಘಾಟಿಸಿದರು.



Scanned by CamScanner

ಪಶ್ಚಿಮ ಘಟ್ಟದ ಪ್ರಾಣಿ ಸಂಕುಲ ರಕ್ಷಿಸಲು ಸಹಕರಿಸಿ

ಶೃಂಗೇರಿ: ವಿಶಾಲವಾಗಿ ಹರಡಿರುವ ಪಶ್ಚಿಮ ಘಟ್ಟ ಪ್ರದೇಶವೂ ಅತ್ಯಂತ ಸೂಕ್ಷ್ಮ ಪ್ರದೇಶವಾಗಿದ್ದು, ಈ ಪ್ರದೇಶದಲ್ಲಿರುವ ಪ್ರಾಣಿ ಸಂಕುಲಗಳನ್ನು ರಕ್ಷಿಸಬೇಕಾಗಿದೆ ಎಂದು ಕುದುರೆಮುಖ ವನ್ಯಜೀವಿ ವಿಭಾಗದ ಉಪಅರಣ್ಯ ಸಂರಕ್ಷಣಾಧಿಕಾರಿ ಡಾ।ರಮೇಶ ಕುಮಾರ್ ಹೇಳಿದರು.

ಅವರು ಗುರುವಾರ ಶ್ರೀ ಜೆಸಿಬಿಎಂ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಜೀವ ವೈವಿಧ್ಯತೆ ಬಗ್ಗೆ ಒಂದು ದಿನದ ರಾಜ್ಯ ಮಟ್ಟದ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದರು. ರಾಷ್ಟ್ರೀಯ ಉದ್ಯಾನವನದಲ್ಲಿರುವ ಕಲ್ಲುಹೂವುಗಳು, ಹಾವಸೆ ಸಸ್ಯಗಳು, ಹೂ ಬಿಡುವ ಸಸ್ಯಗಳು, ಸಸ್ತನಿ ಪ್ರಾಣಿಗಳು, ಉರಗಗಳು ಅಳಿವಿನ ಅಂಚಿನಲ್ಲಿವೆ. ಈ ಪ್ರದೇಶದಲ್ಲಿ ಮಾನವನ ದಾಳಿಯಿಂದ ಸಾಕಷ್ಟು ಅನಾಹುತಗಳು ಉಂಟಾಗುತ್ತಿದ್ದು, ಇದನ್ನು ರಕ್ಷಿಸಲು ಕ್ರಮ ಕೈಗೊಳ್ಳುವುದು ಅನಿವಾರ್ಯವಾಗಿದೆ. ಪಶ್ಚಿಮ ಘಟ್ಟ ಪ್ರದೇಶದಲ್ಲಿ ಅರಣ್ಯ ಪ್ರದೇಶವನ್ನು ಉಳಿಸುವುದು ಅಗತ್ಯವಾಗಿದ್ದು, ಈ ನಿಟ್ಟಿನಲ್ಲಿ ಜನ ಜಾಗೃತಿ ಅಗತ್ಯವಿದೆ ಎಂದರು. ಈ ಸಂದರ್ಭದಲ್ಲಿ ವಿಜ್ಞಾನದ ಪದವಿ ವಿದ್ಯಾರ್ಥಿಗಳು ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಜೀವ ವೈವಿಧ್ಯತೆ ಬಗ್ಗೆ ನಡೆಸಿದ ಸಂಶೋಧನೆಯ ಪುಸ್ತಕವನ್ನು ಬಿಡುಗಡೆ ಮಾಡಲಾಯಿತು. ಪ್ರಾಚಾರ್ಯ ಡಾ।ಎಚ್.ಸಿ.ವೀರಪ್ಪ ಗೌಡ ಅಧ್ಯಕ್ಷತೆ ವಹಿಸಿದ್ದರು. ಸಸ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಹಾಗೂ ಎನ್.ಸಿ.ಸಿ.ಅಧಿಕಾರಿ ಲೆಫ್ಟಿನೆಂಟ್ ಡಾ। ಕುಮಾರ ಸ್ವಾಮಿ ಉಡುಪ ಪ್ರಾಸ್ತಾವಿಕ ನುಡಿಯೊಂದಿಗೆ ಸ್ವಾಗತಿಸಿದರು. ಕೆರೆಕಟ್ಟೆ ವಲಯ ಅರಣ್ಯಾಧಿಕಾರಿ ಸುಬ್ರಹ್ಮಣ್ಯ ವಂದಿಸಿದರು, ಅನುಶ್ರೀ ಹೆಬ್ಬಾರ್ ನಿರೂಪಿಸಿದರು.



ಶೃಂಗೇರಿ: ಶ್ರೀ ಜೆಸಿಬಿಎಂ ಕಾಲೇಜಿನಲ್ಲಿ ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಜೀವ ವೈವಿಧ್ಯತೆ ಬಗ್ಗೆ ಒಂದು ದಿನದ ರಾಜ್ಯ ಮಟ್ಟದ ವಿಚಾರ ಸಂಕಿರಣವನ್ನು ಡಾ। ರಮೇಶ ಕುಮಾರ್ ಉದ್ಘಾಟಿಸಿದರು.

ಉದಯವಾಣಿ. Oct, 18, 2014 ಕುಪ್ಪ

Scanned by CamScanner

ರಾಷ್ಟ್ರೀಯ ಕಾರ್ಯಾಗಾರ ■ ಹಿರಿಯರು ನೀಡಿ ಹೋದ ಮೌಲ್ಯಗಳನ್ನು ಉಳಿಸಿ ಬೆಳೆಸುವಲ್ಲಿ ನಾವಿಂದು ಸೋತುಹೋಗಿದ್ದೇವೆ: ಡಾ। ಕಮ್ಮರಡಿ ಪ್ರಕಾಶ್

ಲೆಕ್ಕಾಚಾರದ ಜೀವನದಿಂದಾಗಿ ಮರೆಯಾಗುತ್ತಿದೆ ನೆಮ್ಮದಿ

ಕೃಂಗೇರಿ: ಹಿರಿಯರ ಬಾಷ್ಪಾಭಾವ ಮಾಯವಾಗಿ ಮರೆಯಾಗುತ್ತಿದೆ ಎನ್ನಲು ಕ್ಷೇತ್ರಗಳಲ್ಲಿ ಲೆಕ್ಕಾಚಾರದ ಬದುಕು ನಮ್ಮದಾಗಿದೆ. ಹಿಂದೆ ಕಷ್ಟವಿದ್ದರೂ ಹೃದಯ ಶ್ರೀಮಂತಿಕೆ ಇತ್ತು. ಇಂದು ಹಣವಿದೆ, ಹೃದಯ ಬರಡಾಗುತ್ತಿದೆ ಎಂದು ವಿಷಾದಿಸಿದರು ಡಾ। ಕಮ್ಮರಡಿ ಪ್ರಕಾಶ್ ಬೇಸರ ವ್ಯಕ್ತಪಡಿಸಿದರು.

ಅವರು ಶನಿವಾರ ಜೆ.ಸಿ.ಬಿ.ಎಂ ಕಾಲೇಜಿನಲ್ಲಿ ಪದವೀಧರ ವಾಣಿಜ್ಯ ವಿಭಾಗದಲ್ಲಿ ಮೂಡಿದ ಸಂಪನ್ಮೂಲದ ಲೆಕ್ಕಾಚಾರದ ಪ್ರಸ್ತುತತೆಗಳು ಎಂಬ ವಿಷಯದ ಬಗ್ಗೆ ಮಾತನಾಡಿದರು.

ಕೃಷಿಯಲ್ಲಿ ಸಾಂಪ್ರಾಯಿಕ ಬೆಳೆಗಳು ಮರೆಯಾಗುತ್ತಿವೆ. ಜಾಗ್ಯ, ಹೆಸರು ಮುಂತಾದ ಆಹಾರಗಳನ್ನು ಬೆಳೆಸುವ ಕೃಷಿ ಚಟುವಟಿಕೆ ಕುಂಠಿತಗೊಂಡಿದೆ. ಹಿರಿಯರು ಕೃಷಿಗೆ ಒತ್ತು ಕೊಡುತ್ತಿದ್ದರು. ಮಾನವಶ್ರಮದ ಮಹತ್ವವನ್ನು ಅರಿತು ಆಹಾರಗಳನ್ನು ಬಳಸುತ್ತಿದ್ದರು. ಆದರೆ ಆಹಾರಗಳನ್ನು ಬೆಳೆಯಲು ಕೆಲಸಕ್ಕೆ ಜನರೇ ಸಿಗದಾಗಿದ್ದಾರೆ. ಜನರು ಆರೋಗ್ಯದಿಂದ ಇರುತ್ತಿದ್ದರು ಎಂದರು.



ಕೃಂಗೇರಿ: ಜೆ.ಸಿ.ಬಿ.ಎಂ ಕಾಲೇಜಿನಲ್ಲಿ ಮೂಡಿದ ಸಂಪನ್ಮೂಲದ ಲೆಕ್ಕಾಚಾರದ ಪ್ರಸ್ತುತತೆಗಳು ಎಂಬ ವಿಷಯದ ರಾಷ್ಟ್ರೀಯ ಕಾರ್ಯಾಗಾರದಲ್ಲಿ ವಿಷಯ ಡಾ। ಕಮ್ಮರಡಿ ಪ್ರಕಾಶ್ ಮಾತನಾಡಿದರು.

ದೈನಂದಿನ ಜೀವನದಲ್ಲಿ ಸಂಬಂಧಗಳಲ್ಲಿ ವೈವಿಧ್ಯತೆಗಳು ಮರೆಯಾಗುತ್ತಿವೆ. ಅವಿಭಕ್ತ ಕುಟುಂಬಗಳು ಚದುರಿಹೋಗಿವೆ. ಹಿರಿಯರು ನೀಡಿ ಹೋದ ಮೌಲ್ಯಗಳನ್ನು ಉಳಿಸಿ ಬೆಳೆಸುವಲ್ಲಿ ನಾವಿಂದು ಸೋತುಹೋಗಿದ್ದೇವೆ. ಕೃಷಿ, ಶಿಕ್ಷಣ, ಕೈಗಾರಿಕೆ ಹಾಗೂ ವ್ಯಾಪಾರಿಕರಣ ಮುಂತಾದ ಕ್ಷೇತ್ರಗಳಲ್ಲಿ ಮೂಡಿದ ಸಂಪನ್ಮೂಲಗಳ ಬಳಕೆ ಕಡಿಮೆಯಾಗಿದೆ. ಇವರ ಸ್ವಾರ್ಥವನ್ನು ಮಾತ್ರಗಳು ಕಿತ್ತುಕೊಂಡಿದೆ. ಹಿರಿಯರು ನೀಡುತ್ತಿದ್ದ ನಿಷ್ಕಲ್ಮಷ ಪ್ರೀತಿ, ಅಂದು ಲೆಕ್ಕಾಚಾರ ಮಾಡುವ ಮನೋಭಾವ ಇರಲಿಲ್ಲ. ಈಗ ಮುಚ್ಚಾಂದ ಇವರ ಕಡೆ ಲೆಕ್ಕಾಚಾರದಲ್ಲಿ ಕಾಲ ಕಳೆಯುವ ಜನರು ತಮ್ಮ ಬದುಕಿನ ನೆಮ್ಮದಿ ಕಳೆದುಕೊಳ್ಳುತ್ತಿದ್ದಾರೆ. ನಾವೆ ಮಾಡಿಕೊಂಡ ಲೆಕ್ಕಾಚಾರವಲ್ಲದೇ ಲೆಕ್ಕಾಚಾರವಲ್ಲದ ಜೀವನದಲ್ಲಿ ಸಂತೋಷ ಕಂಡುಕೊಳ್ಳಬೇಕು. ಹಿರಿಯರು ಕಂಡುಕೊಂಡಿದ್ದ ಸಂತೋಷ ಮತ್ತು ಸಂತೃಪ್ತಿಯ ಜೀವನ ನಡೆಸಲು ಪ್ರಯತ್ನಿಸಬೇಕು. ಆಗ ಮಾತ್ರ ಮರೆಯಾಗುತ್ತಿರುವ ನೆಮ್ಮದಿಯನ್ನು ಮತ್ತೆ ಪಡೆಯಲು ಸಾಧ್ಯ ಎಂದರು.

ಲೆಕ್ಕಾಚಾರವಲ್ಲದೇ ಶ್ರಮದಿಂದ ಉತ್ಪತ್ತಿ ಇಳುವರಿ, ಹುಟ್ಟುಹಬ್ಬದ ಮುಂತಾದವುಗಳನ್ನು ಮಾಡಿಕೊಳ್ಳುತ್ತಿದ್ದರು. ಸಾಮಯಿಕ ಗೊಬ್ಬರ, ಭೂಮಿಯ ಸಾರವನ್ನು ಹಿಡಿದಿಟ್ಟುಕೊಳ್ಳುವಲ್ಲಿ ಬದುಕಿನ ನೆಮ್ಮದಿ ಕಳೆದುಕೊಳ್ಳುತ್ತಿದ್ದಾರೆ. ನಾವೆ ಮಾಡಿಕೊಂಡ ಲೆಕ್ಕಾಚಾರವಲ್ಲದೇ ಲೆಕ್ಕಾಚಾರವಲ್ಲದ ಜೀವನದಲ್ಲಿ ಸಂತೋಷ ಕಂಡುಕೊಳ್ಳಬೇಕು. ಹಿರಿಯರು ಕಂಡುಕೊಂಡಿದ್ದ ಸಂತೋಷ ಮತ್ತು ಸಂತೃಪ್ತಿಯ ಜೀವನ ನಡೆಸಲು ಪ್ರಯತ್ನಿಸಬೇಕು. ಆಗ ಮಾತ್ರ ಮರೆಯಾಗುತ್ತಿರುವ ನೆಮ್ಮದಿಯನ್ನು ಮತ್ತೆ ಪಡೆಯಲು ಸಾಧ್ಯ ಎಂದರು.

ಜೆ.ಸಿ.ಬಿ.ಎಂ.ಕಾಲೇಜಿನ ಪದವೀಧರ ವಾಣಿಜ್ಯ ವಿಭಾಗದ ಪ್ರಾಧ್ಯಾಪಕಿ ಶ್ರೀಮತಿ ಸುಧಾ ಸ್ವಾಗತಿಸಿದರು. ಪ್ರಾಧ್ಯಾಪಕ ಸುಬ್ರಹ್ಮಣ್ಯ ನಿರೂಪಿಸಿದರು. ಪ್ರಾಧ್ಯಾಪಕಿ ಡಾ। ಸುಧಾಮಣಿ, ಸುಲೋಚನ ಯಾದಾಂಬಿ ಸುಲಿಯಾಣ್ ಉಪಸ್ಥಿತರಿದ್ದರು.

ಉದಯವಾಣಿ ಕೊಡಗು ಮಂಗಳೂರು ಆವೃತ್ತಿ ನವೆಂಬರ್ 30, 2014

Scanned by CamScanner



ಶೃಂಗೇರಿಯಲ್ಲಿ ಏರ್ಪಡಿಸಿದ್ದ 'ಮಾನವ ಸಂಪನ್ಮೂಲ ಲೆಕ್ಕಾಚಾರದ ಪ್ರಸ್ತುತತೆ' ಬಗ್ಗೆ ರಾಜ್ಯ ಕೃಷಿ ಉತ್ಪನ್ನ ಬೆಲೆ ಆಯೋಗದ ಅಧ್ಯಕ್ಷ ಡಾ. ಪ್ರಕಾಶ್ ಕಮ್ಮರಡಿ ಮಾತನಾಡಿದರು.

Scanned by CamScanner



ಶೃಂಗೇರಿ ತಾಲೂಕಿನ ವಿದ್ಯಾರಣ್ಯಪುರದ ಸರ್ಕಾರಿ ಪ್ರೌಢಶಾಲೆಯಲ್ಲಿ ನಡೆದ ಜೆ.ಸಿ.ಐ.ಎಂ ಕಾರ್ಯಾಗಾರದ ವಿಶೇಷ ಚಟುವಟಿಕೆಯಲ್ಲಿ ಶ್ರೀ ಮಠದ ಶ್ರೀಪಾದಂಗಳವರು ಭಾಗವಹಿಸಿದ್ದರು.

ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಿ

ಶೃಂಗೇರಿ, ಡಿ. 23: ವಿದ್ಯಾರ್ಥಿಗಳು ಕೇವಲ ಪಠ್ಯಕ್ಕೆ ಮಾತ್ರ ಸೀಮಿತರಾಗಿ ಪಾಲ್ಗೊಂಡರೆ ಅದು ಮಂದಿನ ದಿನಗಳಲ್ಲಿ ಕಷ್ಟ ಎದುರಿಸಲು ಕಾರಣವಾಗುತ್ತದೆ ಎಂದು ಶ್ರೀ ಮಠದ ಆಡಳಿತ ಶ್ರೀಪಾದಂಗಳವರು ಹೇಳಿದರು.

ಅವರು ತಾಲ್ಲೂಕಿನ ವಿದ್ಯಾರಣ್ಯಪುರ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಲ್ಲಿ ಜೆ.ಸಿ.ಐ.ಎಂ ಕಾರ್ಯಾಗಾರದ ವಿಶೇಷ ಚಟುವಟಿಕೆಯಲ್ಲಿ ಭಾಗವಹಿಸಿ ಮಾತನಾಡಿದರು.

ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ. ನಂತರ ಇಷ್ಟಪಟ್ಟು ಕೋರ್ಸುಗಳಲ್ಲಿ ಶಿಕ್ಷಣವನ್ನು ಪಡೆಯಲು ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸುವುದು ಕೂಡ ಸಹಾಯಕವಾಗಿ ಪರಿಣಮಿಸುತ್ತದೆ ಎಂದರು.

ಕಾರ್ಯಾಗಾರದಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇಕಡಾವಾರು ಅಂಕಗಳಿಸಿದ ಮಕ್ಕಳಿಗೆ ಬಹುಮಾನ ವಿತರಿಸಲಾಯಿತು. ಕಾರ್ಯಾಗಾರದಲ್ಲಿ ಶಿರಸಿ ಹಿರಿಯ ವಿದ್ಯಾರ್ಥಿಗಳಾದ ಸುಮಾರು ೬೫ಕ್ಕೆ ಅಧಿಕ ಮಂದಿ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೆ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಿ ಕೊಡುಗೆ ನೀಡಿದರು.

ಜೆ.ಸಿ.ಐ.ಎಂ ಮಾಜಿ ವಲಯಾಧಿಕಾರಿ ಡಾ. ಶಿವರಾಜ್ ಮಾತನಾಡಿ, ಕಾರ್ಯಾಗಾರದಲ್ಲಿ ಕಲಿತ ವಿಷಯ ವಿದ್ಯಾರ್ಥಿಗಳು ಸಮಾಜದ ಒಳಿತಿಗೆ ಉಪಯೋಗಿಸಿ ಕೊಳ್ಳಬೇಕು ಮಾತ್ರ ಇಂದಿನ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಲ್ಲಿ ಕಷ್ಟವನ್ನು ತಾವು ತೊಡಗಿಸಿಕೊಳ್ಳಬೇಕು ಎಂದು ತಿಳಿಸಿದರು.

ಕಾರ್ಯಕ್ರಮ ವ್ಯವಸ್ಥಾಪಕ ಡಾ. ವೀರಣ್ಣ ಗೌಡ ಅಧ್ಯಕ್ಷತೆ ವಹಿಸಿದ್ದರು. ಜೆಸಿಂ.ಸದಸ್ಯರಾದ ರಂಗನಾಥ್, ಜೆಸಿಂ. ಸದಸ್ಯೆ ಜಿ.ಕೆ.ಪರಮೇಶ್ವರಿ, ರಂಗಕಾರಿಯ ರವಿಕುಮಾರ್, ತಾಪಂ.ಸದಸ್ಯ ಸುಂದರೇಶ್, ವಿದ್ಯಾರಣ್ಯಪುರ ಗ್ರಾಪಂ.ಸದಸ್ಯ ಸಂಜಯ ಪೈ ಜೆಸಿಐ.ಚಂದ್ರಶೇಖರ ಮತ್ತಿ ಇತ್ತರರು ಹಾಜರಿದ್ದರು. ಪ್ರಶಾಂತ್ ನಿರೂಪಿಸಿದರು. ಎಸ್.ಎಸ್.ಎಲ್.ಸಿ. ಅಧಿಕಾರಿ ಲಕ್ಷ್ಮಣಾಚಾರಿಯವರು ಸ್ವಾಗತ ಹಾಗೂ ವಂದಿಸಿದರು.

Scanned by CamScanner

ಎನ್ ಎಸ್ ಎಸ್ ನಿಂದ ಸಮಾಜಮುಖಿ ಕಾರ್ಯ

ಶೃಂಗೇರಿ: ವಿದ್ಯಾರ್ಥಿಗಳು ಎನ್ ಎಸ್ ಎಸ್ ನಂತಹ ಸಮಾಜಮುಖಿ ಕಾರ್ಯದಲ್ಲಿ ತೊಡಗಿಕೊಂಡು ಪಠ್ಯದ ಜತೆ ಪಠ್ಯೇತರ ಚಟುವಟಿಕೆಗಳಲ್ಲೂ ಆಸಕ್ತಿಯಿಂದ ಭಾಗವಹಿಸಿದರೆ ಜೀವನ ಅತ್ಯಂತ ಸುಂದರವಾಗಿ ರೂಪುಗೊಳ್ಳುತ್ತದೆ ಎಂದು ಶ್ರೀ ಮಠದ ಹಿರಿಯ ಅಧಿಕಾರಿ ಶ್ರೀಪಾದ್‌ರಾವ್ ಹೇಳಿದರು.

ತಾಲೂಕಿನ ವಿದ್ಯಾರಣ್ಯಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಜಿಸಿಬಿಎಂ ಕಾಲೇಜಿನ ಎನ್ ಎಸ್ ಎಸ್ ವಾರ್ಷಿಕ ವಿಶೇಷ ಶಿಬಿರ ಉದ್ಘಾಟಿಸಿ ಮಾತನಾಡಿ, ಎನ್ ಎಸ್ ಎಸ್ ಶಿಬಿರ ವಿದ್ಯಾರ್ಥಿಗಳಿಗೆ ವಿಶೇಷ ಅನುಭವ ನೀಡುತ್ತದೆ ಎಂದು ತಿಳಿಸಿದರು.



ಎನ್‌ಎಸ್‌ಎಸ್ ಶಿಬಿರದಲ್ಲಿ ಡಾ. ಕುಂದನ್ ಬಸವರಾಜ್ ಮಾತನಾಡಿದರು.

ಕುವೆಂಪು ವಿವಿ ಎನ್ ಎಸ್ ಎಸ್ ಕಾರ್ಯಕ್ರಮ ಸಂಯೋಜನಾಧಿಕಾರಿ ಡಾ.ಕುಂದನ್ ಬಸವರಾಜ್ ಮಾತನಾಡಿ, ಶಿಕ್ಷಣವನ್ನು ವಿದ್ಯಾರ್ಥಿಗಳು ಸಮಾಜದ ಒಳಿತಿಗೆ ಉಪಯೋಗಿಸಬೇಕು. ಭವ್ಯ ರಾಷ್ಟ್ರ ನಿರ್ಮಾಣಕ್ಕೆ ಮುಂದಾಗಬೇಕು. ಗಾಂಧೀಜಿ ಅವರ ಸ್ವಚ್ಛ ಭಾರತದ ಕನಸು ನನಸು ಮಾಡಬೇಕು ಎಂದು ಹೇಳಿದರು.

ಪ್ರಾಚಾರ್ಯ ಡಾ. ವೀರಭದ್ರಗೌಡ, ಜಿಪಂ ಸದಸ್ಯ ರಂಗನಾಥ್, ಪಪಂ ಸದಸ್ಯ ಟಿ.ಕೆ. ಪರಾಶರ, ರಂಗಕಲಾವಿದ ರವಿಕುಮಾರ್, ತಾಪಂ ಸದಸ್ಯ ಸುಂದರೇಶ್, ವಿದ್ಯಾರಣ್ಯಪುರ ಗ್ರಾಪಂ ಸದಸ್ಯ ನರೇಂದ್ರ ಹೆಗ್ಡೆ, ಬಿ.ಜಿ. ಚಂದ್ರಶೇಖರ್ ಇದ್ದರು.

Scanned by CamScanner

ಪ್ರಜಾವಾಣಿ ದಿನಪತ್ರಿಕೆ ದಿನಾಂಕ 23.12.14

ಮುದ ನೀಡುವ ಸಂಗೀತ ಕಲಿಕೆಗೆ ಕೊನೆಯಿಲ್ಲ



ಶೃಂಗೇರಿಯ ಆರ್ಷ ವಿದ್ಯಾಕೇಂದ್ರದಲ್ಲಿ ಆಯೋಜಿಸಿದ್ದ ಸುಗಮ ಸಂಗೀತ ಕಲಿಕಾ ಶಿಬಿರವನ್ನು ಡಾ.ಎಚ್.ಸಿ.ವೀರಪ್ಪಗೌಡ ಉದ್ಘಾಟಿಸಿದರು.

ಶೃಂಗೇರಿ, ಡಿ. 22: ಕಲೆಗಳನ್ನು ಅಭ್ಯಾಸ ಮಾಡಿ ಅದನ್ನು ಅಭಿವ್ಯಕ್ತಿಸುವುದರಿಂದ ವ್ಯಕ್ತಿತ್ವ ವಿಕಸನಗೊಂಡು ಅಭ್ಯುದಯಕ್ಕೆ ಕಾರಣವಾಗುತ್ತದೆ ಎಂದು ಜೆಸಿಬಿ ಎಂ ಕಾಲೇಜಿನ ಪ್ರಾಚಾರ್ಯ ಡಾ.ಎಚ್.ಸಿ.ವೀರಪ್ಪಗೌಡ ಹೇಳಿದರು.

ಅವರು ಪಟ್ಟಣದ ಆರ್ಷ ವಿದ್ಯಾಕೇಂದ್ರದಲ್ಲಿ ಭಾರತೀತೀರ್ಥ ಸಾಂಸ್ಕೃತಿಕ ಮತ್ತು ಜಾನಪದ ಅಧ್ಯಯನ ಕೇಂದ್ರ, ಜೆಸಿಬಿಎಂ ಕಾಲೇಜು ಎನ್ಎಸ್ಎಸ್ ಘಟಕ ಆಯೋಜಿಸಿದ್ದ ಸುಗಮ ಸಂಗೀತ ಕಲಿಕಾ ಶಿಬಿರವನ್ನು ಉದ್ಘಾಟಿಸಿ ಮಾತನಾಡಿ, ಸಂಗೀತವನ್ನು ಕ್ರಮಬದ್ಧವಾಗಿ ನಾಟಕ ಮತ್ತು ಸಂಗೀತ ಗುರುಗಳಿಂದ ಕಲಿಯುವುದರಿಂದ ಮಾತ್ರ ಶಿಷ್ಯನು ಪೂರ್ಣ ಜ್ಞಾನವನ್ನು ಕಲಿಯಬಹುದು. ಆದರೆ ಸಂಗೀತ ವಿಸ್ತಾರವಾದ ಕ್ಷೇತ್ರವಾಗಿದ್ದು, ಇದರಲ್ಲಿ ಕಲಿಕೆಗೆ ಕೊನೆಯಿಲ್ಲ. ಮನಸ್ಸಿಗೆ ಮುದ ನೀಡುವ ಸಂಗೀತವು ಎಲ್ಲರ ಮನಸಿನಲ್ಲಿ ಚಿರನೀಡುತ್ತದೆ ಎಂದರು.

ಇನ್ನೂ ಪ್ಲೀಲ್ ಆಧ್ಯಕ್ಷೆ ಕೋಟಾ ಸಂಪತ್ ಮಾತನಾಡಿ, ವಿದ್ಯಾರ್ಥಿಯು ಆಸಕ್ತಿಯಿಂದ ಕಲಿತರೆ ಯಾವುದನ್ನು ಕಲಿಯಬಹುದು. ಸಂಗೀತ ಕ್ಷೇತ್ರದಲ್ಲಿ ಸುಗಮ ಸಂಗೀತವು ಎಲ್ಲರಿಗೂ ಆನಂದ ನೀಡುತ್ತದೆ. ಆಸಕ್ತಿಯಿಂದ ಕಲಿಯುವುದು ಮುಖ್ಯವಾಗಿದ್ದು, ಅದರ ಯಶಸ್ಸು ದೊರೆಯುತ್ತದೆ ಎಂದರು.

ಮೋಹನ್ ಸಂಪನ್ನಾಲ್ಲಿ ವ್ಯಕ್ತಿಯಾಗಿ ಶಿಬಿರಾರ್ಥಿಗಳಿಗೆ ಸುಗಮ ಸಂಗೀತ ಕಲಿಕಾ ಶಿಬಿರ ನಡೆಸಿಕೊಟ್ಟರು. ವಿ.ಜಿ.ಪ್ರಶಾಂತ್ ಸ್ವಾಗತಿಸಿದರು. ರಮೇಶ್ ಬೇಗಾರ್ ನಿರೂಪಿಸಿದರು, ಲೋಕೇಶ ವಂದಿಸಿದರು.

Scanned by CamScanner

ಜೆಸಿಬಿಎಂ ಕಾಲೇಜು ಎನ್ನೆಸೆಸ್ ಶಿಬಿರಕ್ಕೆ ಚಾಲನೆ



ಶೃಂಗೇರಿ: ವಿದ್ಯಾರಣ್ಯಪುರದಲ್ಲಿ ಜೆಸಿಬಿಎಂ ಕಾಲೇಜಿನ ವಿಶೇಷ ವಾರ್ಷಿಕ ಶಿಬಿರವನ್ನು ಶ್ರೀಮಠದ ಅಧಿಕಾರಿ ಶ್ರೀಪಾದ ರಾವ್ ಉದ್ಘಾಟಿಸಿದರು.

ಶೃಂಗೇರಿ: ಶಿಬಿರಗಳು ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನದಲ್ಲಿ ವಿಶೇಷ ಅನುಭವವನ್ನು ನೀಡುತ್ತದೆ. ಯಾವುದೇ ಕೆಲಸಗಳಲ್ಲಿ ಪೂರ್ಣ ಮನಸ್ಕರಾಗಿ ನಾವು ಪಾಲ್ಗೊಂಡಿದ್ದರೆ ಅದು ಮುಂದಿನ ದಿನಗಳಲ್ಲಿ ತಮ್ಮ ಯಶಸ್ಸಿಗೆ ಕಾರಣವಾಗುತ್ತದೆ ಎಂದು ಶ್ರೀಮಠದ ಅಧಿಕಾರಿ ಶ್ರೀಪಾದ ರಾವ್ ಹೇಳಿದರು.

ಅವರು ಭಾನುವಾರ ತಾಲೂಕಿನ ವಿದ್ಯಾರಣ್ಯಪುರ ಸ.ಹಿ.ಪ್ರಾಥಮಿಕ ಪಾಠಶಾಲೆಯಲ್ಲಿ ಜೆಸಿಬಿಎಂ ಕಾಲೇಜಿನ ವಿಶೇಷ ವಾರ್ಷಿಕ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು.

ವಿದ್ಯಾರ್ಥಿಗಳು ಎನ್‌ಎಸ್‌ಎಸ್‌ನಂತಹ ಸಮಾಜಮುಖಿ ಕೆಲಸಗಳಲ್ಲಿ ತೊಡಗಿಸಿಕೊಂಡು ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ಆಸಕ್ತಿಯಿಂದ ಭಾಗವಹಿಸಿದಲ್ಲಿ ತಮ್ಮ ಜೀವನ ಸರಿಯಾಗಿ ರೂಪುಗೊಳ್ಳುತ್ತದೆ ಎಂದರು.

ರಾ.ಸೇ.ಯೋ. ಕಾರ್ಯಕ್ರಮ ಕುವೆಂಪು ವಿವಿಯ ಸಂಯೋಜನಾಧಿಕಾರಿ ಡಾ। ಕುಂದನ್ ಬಸವರಾಜ್ ಮಾತನಾಡಿ, ಕಾಲೇಜಿನಲ್ಲಿ ಕಲಿತ ಶಿಕ್ಷಣವನ್ನು ವಿದ್ಯಾರ್ಥಿಗಳು ಸಮಾಜದ ಒಳಿತಿಗಾಗಿ ಉಪಯೋಗಿಸಿಕೊಂಡು ಹಾಗೂ ಇಂತಹ ಎನ್. ಎಸ್.ಎಸ್. ಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಭವ್ಯರಾಷ್ಟ್ರದ ನಿರ್ಮಾಣದಲ್ಲಿ ಸಕ್ರಿಯರಾಗಬೇಕು ಎಂದು ಹೇಳಿದರು.

ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಚಾರ್ಯ ಡಾ। ವೀರಪ್ಪಗೌಡ ವಹಿಸಿದ್ದರು. ಜಿ.ಪಂ.ಸದಸ್ಯ ರಂಗನಾಥ್, ಪ.ಪಂ ಸದಸ್ಯ ಟಿ.ಕೆ.ಪರಾಶರ, ರಂಗಕಲಾವಿದ ರವಿಕುಮಾರ್, ತಾಪಂ ಸದಸ್ಯ ಸುಂದರೇಶ್, ವಿದ್ಯಾರಣ್ಯಪುರ ಗ್ರಾಪಂ ಸದಸ್ಯ ನರೇಂದ್ರ ಹೆಗ್ಡೆ ಬಿ.ಜಿ. ಚಂದ್ರಶೇಖರ್ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

Scanned by CamScanner

ಶಿಬಿರಗಳಿಂದ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನ

ಶೃಂಗೇರಿ: ಶಿಬಿರಗಳು ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನದಲ್ಲಿ ವಿಶೇಷವಾದ ಅನುಭವ ನೀಡುತ್ತದೆ. ಯಾವುದೇ ಕೆಲಸಗಳಲ್ಲಿ ಪೂರ್ಣ ಮನಸ್ಕರಾಗಿ ನಾವು ಪಾಲ್ಗೊಂಡಿದ್ದರೆ ಅದು ಮುಂದಿನ ದಿನಗಳಲ್ಲಿ ತಮ್ಮ ಯಶಸ್ಸಿಗೆ ಕಾರಣವಾಗುತ್ತದೆ ಎಂದು ಶ್ರೀಮಠದ ಅಧಿಕಾರಿ ಶ್ರೀಪಾದರಾವ್ ಹೇಳಿದರು.

ಅವರು ಭಾನುವಾರ ತಾಲೂಕಿನ ವಿದ್ಯಾರಣ್ಯಪುರ ಸ.ಹಿ.ಪ್ರಾಥಮಿಕ ಪಾಠಶಾಲೆಯಲ್ಲಿ ಜೆಸಿಬಿಎಂ ಕಾಲೇಜಿನ ವಿಶೇಷ ವಾರ್ಷಿಕ ಶಿಬಿರ ಉದ್ಘಾಟಿಸಿ ಮಾತನಾಡಿದರು. ವಿದ್ಯಾರ್ಥಿಗಳು ಎನ್ ಎಸ್ ಎಸ್ ನಂತಹ ಸಮಾಜಮುಖಿ ಕೆಲಸಗಳಲ್ಲಿ ತೊಡಗಿಸಿಕೊಂಡು ಪಠ್ಯದ ಜತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ಆಸಕ್ತಿಯಿಂದ ಭಾಗವಹಿಸಿದಲ್ಲಿ ತಮ್ಮ ಜೀವನ ಅತ್ಯಂತ ಸುಂದರವಾಗಿ ರೂಪುಗೊಳ್ಳುತ್ತದೆ ಎಂದರು.

ಕುವೆಂಪು ವಿವಿ ಎನ್ಎಸ್ಎಸ್ ಕಾರ್ಯಕ್ರಮ ಸಂಯೋಜನಾಧಿಕಾರಿ ಡಾ.ಕುಂದನ್ ಬಸವರಾಜ್ ಮಾತನಾಡಿ, ಕಾಲೇಜಿನಲ್ಲಿ ಕಲಿತ ಶಿಕ್ಷಣವನ್ನು ವಿದ್ಯಾರ್ಥಿಗಳು ಸಮಾಜದ ಒಳಿತಿಗಾಗಿ ಉಪಯೋಗಿಸಿಕೊಳ್ಳಬೇಕು ಹಾಗೂ ಇಂತಹ ಎನ್ ಎಸ್ ಎಸ್ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಭವ್ಯರಾಷ್ಟ್ರದ ನಿರ್ಮಾಣದಲ್ಲಿ ಸಕ್ರಿಯರಾಗಬೇಕು. ಸ್ವಚ್ಛ ಭಾರತದ ನಿರ್ಮಾಣ ಕಾರ್ಯದಲ್ಲಿ ಶಿಬಿರಾರ್ಥಿಗಳು ಪಾಲ್ಗೊಂಡು ಗಾಂಧೀಜಿಯವರ ಕನಸು ನನಸಾಗಿಸಬೇಕು. ಶಿಬಿರಾರ್ಥಿಗಳು ಏಕಾಗ್ರತೆ ಮುಖಾಂತರ ಯಶಸ್ಸನ ಮೆಟ್ಟಿಲು ಹತ್ತಬೇಕು. ಜೆಸಿಬಿಎಂ ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಎನ್ ಎಸ್ ಎಸ್ ಸ್ವಯಂ ಸೇವಕರು ವಿಶ್ವವಿದ್ಯಾನಿಲಯ ಮಟ್ಟದಲ್ಲಿ ಉತ್ತಮ ಹೆಸರನ್ನು ಗಳಿಸಿದ್ದಾರೆ. ಈ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗಬೇಕೆಂದು ತಿಳಿಸಿದರು.

ಕಾಲೇಜಿನ ಪ್ರಾಚಾರ್ಯ ಡಾ. ವೀರಪ್ಪಗೌಡ ಅಧ್ಯಕ್ಷತೆ ವಹಿಸಿದ್ದರು. ಜಿ.ಪಂ. ಸದಸ್ಯ ರಂಗನಾಥ್, ಪ.ಪಂ. ಸದಸ್ಯ ಟಿ.ಕೆ.ಪರಾಶರ, ರಂಗಕಲಾವಿದ ರವಿಕುಮಾರ್, ತಾ.ಪಂ. ಸದಸ್ಯ ಸುಂದರೇಶ್, ವಿದ್ಯಾರಣ್ಯಪುರ ಗ್ರಾ.ಪಂ. ಸದಸ್ಯ ನರೇಂದ್ರ ಹೆಗ್ಡೆ ಬಿ.ಜಿ. ಚಂದ್ರಶೇಖರ್ ಮತ್ತಿತರರು ಹಾಜರಿದ್ದರು. ಐಶ್ವರ್ಯ, ಆಶ್ರಯ ನಿರೂಪಿಸಿ, ಎನ್ ಎಸ್ ಎಸ್ ಅಧಿಕಾರಿಗಳಾದ ಲಕ್ಷ್ಮೀನಾರಾಯಣ್ ಸ್ವಾಗತಿಸಿ, ಪ್ರಶಾಂತ್ ವಂದಿಸಿದರು.



ಶೃಂಗೇರಿ ತಾಲೂಕಿನ ವಿದ್ಯಾರಣ್ಯಪುರದಲ್ಲಿ ಜೆಸಿಬಿಎಂ ಕಾಲೇಜಿನ ವಿಶೇಷ ವಾರ್ಷಿಕ ಶಿಬಿರವನ್ನು ಶ್ರೀಮಠದ ಅಧಿಕಾರಿ ಶ್ರೀಪಾದ ರಾವ್ ಉದ್ಘಾಟಿಸಿದರು.

Scanned by CamScanner

ಸಂಪರ್ಕ ಸಬಯುವು.

ಎನ್‌ಎಸ್‌ಎಸ್ ಶಿಬಿರ 21ರಿಂದ

ಶೃಂಗೇರಿ: ವಿದ್ಯಾರಣ್ಯಪುರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಡಿ. 21ರಿಂದ 27 ರವರೆಗೆ ವಿಶೇಷ ವಾರ್ಷಿಕ ಶಿಬಿರ ಹಮ್ಮಿಕೊಳ್ಳಲಾಗಿದೆ. ಶಾಸಕರು ಕಾರ್ಯಕ್ರಮ ಉದ್ಘಾಟಿಸಲಿದ್ದು, ಶ್ರೀಮಠದ ಆಡಳಿತಾಧಿಕಾರಿ ಡಾ. ಗೌರೀಶಂಕರ್, ಡಾ. ಗಿರಿಧರಶಾಸ್ತ್ರಿ, ಪ್ರಾಚಾರ್ಯ ಡಾ. ಎಚ್.ಸಿ. ವೀರಪ್ಪಗೌಡ ಮತ್ತಿತರರು ಭಾಗವಹಿಸಲಿದ್ದಾರೆ. ವಕೀಲ ಸುಧೀರ್ ಕುಮಾರ್ ಮೂರೊಳ್ಳಿ 'ಮಲೆನಾಡು ಭಾಷೆ ಉಳಿಸೋಣ' ವಿಷಯ ಕುರಿತು ಉಪನ್ಯಾಸ ನೀಡಲಿದ್ದಾರೆ. ಸಿಪಿಐ ಸುಧೀರ್ ಹೆಗಡೆ 'ಸೈಬರ್ ಕ್ರೈಂ', ಡಾ. ನವೀನ್‌ಕುಮಾರ್ 'ನೀವೇ ನಿಮ್ಮ ಭವಿಷ್ಯದ ಶಿಲ್ಪಿಗಳು', ಬಾಳೆಹೊನ್ನೂರು ಬಿಜಿಎಸ್ ಕಾಲೇಜಿನ ಪ್ರಾಚಾರ್ಯ ಸುರೇಶ್ 'ಕುವೆಂಪು ಸಾಹಿತ್ಯದಲ್ಲಿ ರಾಮಾಯಣ ದರ್ಶನಂ' ಕುರಿತು ಉಪನ್ಯಾಸ ನೀಡಲಿದ್ದಾರೆ ಎಂದು ಎನ್‌ಎಸ್‌ಎಸ್ ಅಧಿಕಾರಿ ಎ.ಜಿ. ಪ್ರಶಾಂತ್ ತಿಳಿಸಿದ್ದಾರೆ.

18 ಡಿಸೆಂಬರ್ 2014 ಗುರುವಾರ

Scanned by CamScanner

ಅಪರಾಧ ಸಂಖ್ಯೆಯಲ್ಲಿ ಹೆಚ್ಚಳ

■ ವಿಕ ಸುದ್ದಿಲೋಕ ಶೃಂಗೇರಿ

ಅಂತರ್ಜಾಲ ಉಪಯೋಗಿಸುತ್ತಿರುವವರ ಸಂಖ್ಯೆ ಹೆಚ್ಚುತ್ತಿದ್ದು, ಅಪರಾಧಗಳ ಸಂಖ್ಯೆಯೂ ಹೆಚ್ಚುತ್ತಿದೆ ಎಂದು ನಿವೃತ್ತ ಐಪಿಎಸ್ ಅಧಿಕಾರಿ ರವೀಂದ್ರ ನಾಥ್ ಟ್ಯಾಗೋರ್ ಹೇಳಿದರು.

ಅವರು ಗುರುವಾರ ವಿದ್ಯಾರಣ್ಯಪುರದಲ್ಲಿ ಜೆಸಿಬಿಎಂ ಕಾಲೇಜಿನ ಎನ್.ಎಸ್.ಎಸ್ ವಾರ್ಷಿಕ ವಿಶೇಷ ಸೇವಾ ಶಿಬಿರದಲ್ಲಿ ಸೈಬರ್ ಅಪರಾಧ ಕಾರ್ಯಾಗಾರದಲ್ಲಿ ಸಂಪನ್ಮೂಲವ್ಯಕ್ತಿಗಳಾಗಿ ಭಾಗವಹಿಸಿ ಮಾತನಾಡಿ, ವಿದ್ಯಾರ್ಥಿಗಳು ಸೈಬರ್ ಅಪರಾಧಗಳ ಬಗ್ಗೆ ಮಾಹಿತಿ ಯನ್ನು ಹೊಂದಬೇಕಾಗಿರುವುದು ಅತ್ಯವಶ್ಯಕವಾಗಿದೆ. ಇತ್ತೀಚಿನ ದಿನಗಳಲ್ಲಿ ಸೈಬರ್ ಅಪರಾಧ ತುಂಬಾ ಹೆಚ್ಚಾಗಿದ್ದು, ಅದರ ಬಗೆಗಿನ ಅರಿವು ಅಗತ್ಯ. ಎಸ್ ಎಂಎಸ್, ಎಂಎಂಎಸ್, ಇ ಮೇಲ್ ಗಳನ್ನು ಉಪಯೋಗಿಸುವಾಗ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡು ಎಚ್ಚರಿಕೆ ವಹಿಸಿದಲ್ಲಿ ಆಗಬಹುದಾದ ಅನಾಹುತಗಳನ್ನು ತಪ್ಪಿಸಿಕೊಳ್ಳಬಹುದು. ವಿದ್ಯಾರ್ಥಿಗಳು ತಮಾಷೆಗಾಗಿ ಅಥವಾ ಯಾವುದೋ ದ್ವೇಷಗಳಿಂದ ಮಾನಹಾನಿಕರ ಅಂಶಗಳನ್ನು ಒಳಗೊಂಡ ಎಸ್ಎಂಎಸ್ ಗಳನ್ನು ಅಥವಾ ಎಂ.ಎಂ.ಎಸ್. ಗಳನ್ನು ಕಳಿಸಿದಲ್ಲಿ ಅದನ್ನು ಸೈಬರ್ ಅಪರಾಧ ಎಂದು ಪರಿಗಣಿಸಿ ಈಗಿನ ಕಾನೂನಿನ ಪ್ರಕಾರ ಶಿಕ್ಷೆಯನ್ನು ನೀಡಬಹುದೆಂದು ತಿಳಿಸಿದರು.



ಶೃಂಗೇರಿ ವಿದ್ಯಾರಣ್ಯಪುರದಲ್ಲಿ ನಡೆಯುತ್ತಿರುವ ಜೆಸಿಬಿಎಂ ಕಾಲೇಜಿನ ಎನ್.ಎಸ್.ಎಸ್ ವಾರ್ಷಿಕ ವಿಶೇಷ ಸೇವಾ ಶಿಬಿರದಲ್ಲಿ ಸೈಬರ್ ಅಪರಾಧ ವಿಷಯ ಕುರಿತು ನಿವೃತ್ತ ಐ.ಪಿ.ಎಸ್. ಅಧಿಕಾರಿ ರವೀಂದ್ರನಾಥ ಟ್ಯಾಗೋರ್ ಮಾತನಾಡಿದರು.

ಅಧ್ಯಕ್ಷತೆ ಯನ್ನು ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಶೃಂಗೇರಿ ಸುಬ್ರಾಯ ವಹಿಸಿದ್ದರು. ವೇಣು ಮಾಧವ ನಾಯಕ್, ಶಿಬಿರಾಧಿಕಾರಿ ಗಳಾದ ಎನ್. ಎಚ್. ಲಕ್ಷ್ಮೀನಾರಾಯಣ್, ಎಸ್. ಪ್ರಕಾಶ್ ಉಪಸ್ಥಿತರಿದ್ದರು.

Scanned by CamScanner

ಅವಿಭಕ್ತ ಕುಟುಂಬ ವ್ಯಕ್ತಿತ್ವ ಪೂರ್ಣತೆಗೆ ಸಹಕಾರಿ

ಶೃಂಗೇರಿ: ಅವಿಭಕ್ತ ಕುಟುಂಬದಲ್ಲಿ ವಿವಿಧ ವಯೋಮಾನದವರ ಅನುಭವ ದೊರೆಯುವುದರಿಂದ ವ್ಯಕ್ತಿತ್ವದ ಪೂರ್ಣತೆಗೆ ಇದು ಸಹಕಾರಿ ಎಂದು ಎಚ್. ಎಂ.ನಾಗರಾಜ ರಾವ್ ಕಳಚೆ ಹೇಳಿದರು.

ಅವರು ಬುಧವಾರ ಶ್ರೀ ಜೆಸಿಬಿಎಂ ಕಾಲೇಜು ವಿದ್ಯಾರಣ್ಯಪುರದಲ್ಲಿ ಏರ್ಪಡಿಸಿರುವ ಎನ್.ಎಸ್.ಎಸ್ ಶಿಬಿರದಲ್ಲಿ ಯುವಜನತೆ ಮತ್ತು ಕುಟುಂಬ ಸಮ್ಮಿಲನ ಕುರಿತು ಮಾತನಾಡಿದರು.

ತಂದೆ-ತಾಯಿ, ಅಣ್ಣ-ತಮ್ಮಂದಿರು, ಅಕ್ಕ-ತಂಗಿಯರು ಹೀಗೆ ಮನೆಯಲ್ಲಿರುವ ಎಲ್ಲಾ ಸಂಬಂಧಿಕರೂ ಸ್ನೇಹಿತರಾದಾಗ ಕುಟುಂಬದಲ್ಲಿ ಯಾವುದೇ ವೈಮನಸ್ಸುಗಳು ಕಾಡುವುದಿಲ್ಲ. ಶ್ರೇಷ್ಠ ವಾದ ಗುರಿ, ಆತ್ಮವಿಶ್ವಾಸ, ಪ್ರೀತಿಯುಕ್ತವಾದ ನಂಬಿಕೆ ವ್ಯಕ್ತಿಯಲ್ಲಿ ರೂಪುಗೊಳ್ಳಲು ಕುಟುಂಬದ ವಾತಾವರಣ ಮುಖ್ಯಕಾರಣವಾಗುತ್ತದೆ. ಸಾಧನೆ ಎಂದರೆ ವಿದೇಶದಲ್ಲಿ ಕೆಲಸ, ಡಾಕ್ಟರ್, ಎಂಜಿನಿಯರ್, ಮಂತ್ರಿ, ಅಧಿಕಾರಿ ಆಗುವುದಷ್ಟೇ ಅಲ್ಲ ನಾವೀಗ ಆಧುನಿಕತೆಯ ಭರಾಟೆಯಲ್ಲಿ ವ್ಯಕ್ತಿಗಳನ್ನು, ಸಂಬಂಧಗಳನ್ನು ದೂರಮಾಡುತ್ತಾ ಹಣದ ಹಿಂದೆ ಸಾಗುತ್ತಿದ್ದೇವೆ. ಹೊಡೆಗನವರೆದೆದುರು ಮನೆಯು ರಹಸ್ಯ ಸಾಧಿಸರೆ ಅದು ಕ್ಷಮಾರ್ಹವಲ್ಲ ಎಂದರು.

ಬೆಳ್ಳಿಚಾರ್ ಮಾತನಾಡಿ, ಬಡತನ ದೊಂದಿಗೆ ವಿದ್ಯಾಭ್ಯಾಸ ಮಾಡುವ ಗ್ರಾಮೀಣ ಪ್ರದೇಶದ ಯುವಜನತೆ ಸ್ವಪ್ನಗುರುವೊಂದಿಗೆ ಜೀವನ ಸಾಗಿಸಲು ಮನಸ್ಸು ಮಾಡಬೇಕು ಎಂದರು.

ವಿದ್ವಾಂಸನಾದ ಅರುಣ ಭಟ್ ಮಾತನಾಡಿ, ನಗರೀಕರಣದಿಂದ ಪಾಶ್ಚಾತ್ಯ ಸಂಸ್ಕೃತಿಯ ಡಾಳಿಯಿಂದ ಸಹಕುಟುಂಬ ಎನ್ನುವ ನಮ್ಮ ವೇದಮಂತ್ರಗಳು ನಮಗೆ ಮಾದರಿಯಾಗಬೇಕು ಎಂದರು.

ಜಿಲ್ಲಾ ಪರಿಸರ ರಾಯಭಾರಿ ಬಿ. ಎನ್.ನಮನ ಮಾತನಾಡಿ, ಪರಿಸರ ಮತ್ತು ಮಾನವ ಒಟ್ಟಾಗಿ ಸಾಗಿದಾಗ ಮಾತ್ರ ಭೂಮಿಯ ಸಮಸ್ಥಿತಿ ಸಾಧ್ಯ. ಯುವಜನತೆ ಒಂದು ಗಿಡ, ಒಂದು ಗಿಡ, ಒಂದು ಸ್ವಚ್ಛ ಪರಿಸರ ಉಳಿದರೆ ದೇಶ ಪ್ರಗತಿಯತ್ತ ಸಾಗುತ್ತದೆ ಎಂದರು.

ಹೆಗ್ಡೆ ಕೃಷ್ಣಮೂರ್ತಿ ಅಧ್ಯಕ್ಷತೆ ವಹಿಸಿದ್ದರು. ಪ್ರಶಾಂತ್‌ಕುಮಾರ್ ಬಿ.ಎನ್. ವೇದಿಕೆಯಲ್ಲಿದ್ದರು. ಅಂಕಿತ ವ್ಯಾರ್ಥಿಸಿ, ರಾಜೇಶ್ ಸ್ವಾಗತಿಸಿದರು. ಭೂಕೈರಣ್ ನಿರೂಪಿಸಿ, ವಿಘ್ನ ವಂದಿಸಿದರು.



ಶೃಂಗೇರಿ ಜೆಸಿಬಿಎಂ ಕಾಲೇಜು ವಿದ್ಯಾರಣ್ಯಪುರದಲ್ಲಿ ಏರ್ಪಡಿಸಿರುವ ಎನ್.ಎಸ್.ಎಸ್ ಶಿಬಿರದಲ್ಲಿ ಯುವಜನತೆ ಮತ್ತು ಕುಟುಂಬ ಸಮ್ಮಿಲನ ಕುರಿತು ಎಚ್.ಎಂ. ನಾಗರಾಜ ರಾವ್ ಮಾತನಾಡಿದರು.

ವಿಜಯ ಕರ್ನಾಟಕ 29-12-14

Scanned by CamScanner

ನಿಮ್ಮ ಶಕ್ತಿ ಅರಿತು ಮುನ್ನಡೆದರೆ ಯಶಸ್ಸು: ನವೀನ್ ಕುಮಾರ್

ಶೃಂಗೇರಿ: ವಿದ್ಯಾರ್ಥಿಗಳು ತಮ್ಮನ್ನು ತಾವು ಅರ್ಥಮಾಡಿಕೊಂಡು ತಮ್ಮಲ್ಲಿರುವ ಶಕ್ತಿ ಮತ್ತು ದೌರ್ಬಲ್ಯಗಳನ್ನು ಗುರುತಿಸಿಕೊಂಡು ಉತ್ತಮ ದಾರಿಯಲ್ಲಿ ಮುನ್ನಡೆದರೆ ಖಂಡಿತವಾಗಿಯೂ ಯಶಸ್ಸನ್ನನು ಸಾಧಿಸಬಹುದೆಂದು ಎಂದು ರಾಷ್ಟ್ರೀಯ ತರಬೇತುದಾರ ಹೊಸದುರ್ಗದ ನವೀನ್ ಕುಮಾರ್ ತಿಳಿಸಿದರು.

ಅವರು ವಿದ್ಯಾರಣ್ಯಪುರದಲ್ಲಿ ಜೆ.ಸಿ.ಬಿ.ಎಂ. ಕಾಲೇಜಿನ ಎನ್.ಎಸ್.ಎಸ್. ವಿಶೇಷ ಸೇವಾ ಶಿಬಿರದಲ್ಲಿ ನೀವೇ ನಿಮ್ಮ ಭವಿಷ್ಯದ ಶಿಲ್ಪಿಗಳು ಎಂಬ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಮಾತನಾಡಿದರು. ಈಗ ತಮ್ಮ ವ್ಯಕ್ತಿತ್ವವನ್ನು ಬಳಸಿಕೊಳ್ಳಲು ಸಾಕಷ್ಟು ಅವಕಾಶಗಳು ಇದ್ದು ಸಮಯಪಾಲನೆ ಮಹತ್ವ ಉತ್ತಮ ನಾಯಕನ ಗುಣಗಳು ಹಾಗೂ ಮನುಷ್ಯನ ಸರ್ವತೋಮುಖ ಬೆಳವಣಿಗೆಗೆ ಹಾಗೂ ವ್ಯಕ್ತಿತ್ವ ವಿಕಸನಕ್ಕೆ ಪಾತ್ರವಾಗಬಹುದಾದ ಕೆಲವು ಮಾಹಿತಿಗಳನ್ನು ತಿಳಿಸಿದರು. ಜೆ.ಸಿ.ಐ. ಉಪಾಧ್ಯಕ್ಷ ವಿಜಯ್‌ಕುಮಾರ್, ತಾಲೂಕು ಪ್ರೌಢಶಾಲೆ ಶಿಕ್ಷಕರ ಸಂಘದ ಅಧ್ಯಕ್ಷ ಶಿವಕುಮಾರ್ ಉಪಸ್ಥಿತರಿದ್ದರು. ಅಧ್ಯಕ್ಷತೆಯನ್ನು ಶ್ರೀ ಜೆ.ಸಿ.ಬಿ.ಎಂ. ಪ.ಪೂ. ಕಾಲೇಜು ಪ್ರಾಚಾರ್ಯ ಡಾ। ಸಿ.ವಿ. ಗಿರಿಧರಶಾಸ್ತ್ರಿ ವಹಿಸಿದ್ದರು.

Scanned by CamScanner

ಎನ್ ಎಸ್ ಎಸ್ ವಿಶೇಷ ಸೇವಾ ಶಿಬಿರ

ಶೃಂಗೇರಿ: ವಿದ್ಯಾರ್ಥಿಗಳು ಆತ್ಮವಲೋಕನ ಅರ್ಥಮಾಡಿಕೊಂಡು ತಮ್ಮಲ್ಲಿರುವ ಶಕ್ತಿ ಮತ್ತು ದೌರ್ಬಲ್ಯಗಳನ್ನು ಗುರುತಿಸಿಕೊಂಡು ಉತ್ತಮ ದಾರಿಯಲ್ಲಿ ಮುನ್ನಡೆದರೆ ಯಶಸ್ಸು ಸಾಧಿಸಬಹುದು ಎಂದು ರಾಷ್ಟ್ರೀಯ ತರಬೇತುದಾರ ಹೊಸದುರ್ಗದ ನವೀನ್‌ಕುಮಾರ್ ಹೇಳಿದರು.

ಅವರು ವಿದ್ಯಾರಣ್ಯಪುರದಲ್ಲಿ ಜೆಸಿಬಿಎಂ ಕಾಲೇಜಿನ ಎನ್ ಎಸ್ ಎಸ್ ವಿಶೇಷ ಸೇವಾ ಶಿಬಿರದಲ್ಲಿ ನೀವೇ ನಿಮ್ಮ ಭವಿಷ್ಯದ ಶಿಲ್ಪಿಗಳು ಎಂಬ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ಮಾತನಾಡಿದರು.

ಸ್ವ/ಗ ತಮ್ಮ ವ್ಯಕ್ತಿತ್ವವನ್ನು ಬಳಸಿಕೊಳ್ಳಲು ಸಾಕಷ್ಟು ಅವಕಾಶಗಳು ಇದ್ದು, ಸಮಯ ಪಾಲನೆ ಮಹತ್ವ, ಉತ್ತಮ ನಾಯಕನ ಗುಣಗಳು ಹಾಗೂ ಮನುಷ್ಯನ ಸರ್ವತೋಮುಖ ಬೆಳವಣಿಗೆಗೆ ಹಾಗೂ ವ್ಯಕ್ತಿತ್ವ ವಿಕಸನಕ್ಕೆ ಪಾತ್ರವಾಗಬಹುದಾದ ಮಾಹಿತಿ ನೀಡಿದರು.

ಜೆಸಿಐ ಉಪಾಧ್ಯಕ್ಷ ವಿಜಯ್ ಕುಮಾರ್, ತಾಲೂಕು ಪ್ರೌಢಶಾಲೆ ಶಿಕ್ಷಕರ ಸಂಘದ ಅಧ್ಯಕ್ಷ ಶಿವಕುಮಾರ್ ಉಪಸ್ಥಿತರಿದ್ದರು. ಅಧ್ಯಕ್ಷತೆಯನ್ನು ಜೆಸಿಬಿಎಂ ಪ.ಪೂ. ಕಾಲೇಜು ಪ್ರಾಚಾರ್ಯ ಡಾ.ಸಿ.ವಿ. ಗಿರಿಧರಶಾಸ್ತ್ರಿ ವಹಿಸಿದ್ದರು.

Scanned by CamScanner

ಹೆಚ್ಚುತ್ತಿದೆ ಸೈಬರ್ ಕ್ರೈಮ್: ಕಳವಳ



ಶೃಂಗೇರಿ ಅಥವಾ ಜಗತ್ತಿನಲ್ಲಿ ಉಚ್ಚ ಯೋಗಿ ಸುಶಿಕ್ಷಿತರ ಸಂಖ್ಯೆ ಹೆಚ್ಚಿದ್ದು, ಅದರ ಮೂಲಕ ಅಪರಾಧ ಎಸಗುವವರ ಸಂಖ್ಯೆಯೂ ಹೆಚ್ಚಿದೆ ಎಂದು ನಿವೃತ್ತ ಐ.ಪಿ.ಎಸ್. ಅಧಿಕಾರಿ ರವೀಂದ್ರನಾಥ್ ಟ್ಯಾಗೋರ್ ಕಳವಳ ವ್ಯಕ್ತಪಡಿಸಿದರು.

ಅವರು ಗುರುವಾರ ವಿದ್ಯಾರಣ್ಯಪುರದಲ್ಲಿ ಬಿ.ಸಿ.ಬಿ.ಎಂ. ಕಾಲೇಜಿನ ಎಸ್.ಎಸ್.ಎಸ್.ನ ವಾರ್ಷಿಕ ವಿಶೇಷ ಸೇವಾ ಶಿಬಿರದಲ್ಲಿ ಸೈಬರ್ ಅಪರಾಧ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಮಾತನಾಡಿದರು. ವಿದ್ಯಾರ್ಥಿಗಳು ಸೈಬರ್ ಅಪರಾಧಗಳ ಬಗ್ಗೆ ಮಾಹಿತಿಯನ್ನು ಹೊಂದುವುದಕ್ಕಾಗಿರುವುದು ಈ ದಿನಗಳಲ್ಲಿ ಅವಶ್ಯಕವಾಗಿದ್ದು, ಇತ್ತೀಚಿನ ದಿನಗಳಲ್ಲಿ ಸೈಬರ್ ಅಪರಾಧ ಹೆಚ್ಚಾಗಿದ್ದು, ಅದರ ಬಗೆಗಿನ ಅರಿವು ಅಗತ್ಯವಾಗಿದೆ. ಎಸ್.ಎಂ.ಎಸ್., ಎಂ.ಎಂ.ಎಸ್., ಇ ಮೇಲ್‌ಗಳನ್ನು ಉಪಯೋಗಿಸುವಾಗ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡು ಎಚ್ಚರಿಕೆ ವಹಿಸಿದಲ್ಲಿ ಆಗಬಹುದಾದ ಅನಾಹುತಗಳನ್ನು ತಪ್ಪಿಸಿಕೊಳ್ಳಬಹುದು.

ವಿದ್ಯಾರ್ಥಿಗಳು ತಮಾಷೆಗಾಗಿ ಅಥವಾ ಯಾವುದೋ ದುರುದ್ದೇಶಗಳಿಂದ ಮಹಾಪಕ್ಷ ಅಂಶಗಳನ್ನು ಒಳಗೊಂಡ ಎಸ್.ಎಂ.ಎಸ್.ಗಳನ್ನು ಅಥವಾ ಎಂ.ಎಂ.ಎಸ್.ಗಳನ್ನು ಕಳುಹಿಸಿದಲ್ಲಿ ಅದನ್ನು ಸೈಬರ್ ಅಪರಾಧ ಎಂದು ಪರಿಗಣಿಸಿ ಈಗಿನ ಕಾನೂನಿನ ಪ್ರಕಾರ ಶಿಕ್ಷೆಯನ್ನು ನೀಡಬಹುದೆಂದು ತಿಳಿಸಿದರು.

ಅಧ್ಯಕ್ಷತೆಯನ್ನು ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಶೃಂಗೇರಿ ಸುಬ್ಬಣ್ಣಿ ವಹಿಸಿದ್ದರು. ಪೇಣುಮಾಧವ ನಾಯಕ್, ಶಿಬಿರಾಧಿಕಾರಿಗಳಾದ ಎನ್.ಎಚ್. ಲಕ್ಷ್ಮೀನಾರಾಯಣ್, ಎ.ಜಿ. ಪ್ರಶಾಂತ್ ಉಪಸ್ಥಿತರಿದ್ದರು.

ಉದಯವಾಣಿ ದಿನಾಂಕ ದಿನಾಂಕ 24.2.2012

Scanned by CamScanner

ಲೋಕಮತ 29 ಡಿಸೆಂಬರ್ 2014
ಕುದುರಾಡ

ಮಹಾಪುರುಷರ ತತ್ವಾದರ್ಶ ಪಾಲಿಸಿದರೆ ಜೀವನ ಸುಖಮಯ

ಶೃಂಗೇರಿ: ಗಾಂಧೀಜಿ, ವಿವೇಕಾನಂದರಂಥ ಆದರ್ಶ ವ್ಯಕ್ತಿಗಳ ತತ್ವಗಳನ್ನು ಯುವಜನತೆ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಶ್ರೀ ಮಠದ ಹಿರಿಯ ಅಧಿಕಾರಿ ಶ್ರೀಪಾದ ರಾವ್ ಹೇಳಿದರು.

ವಿದ್ಯಾರಣ್ಯಪುರದಲ್ಲಿ ಜೆಸಿಬಿಎಂ ಕಾಲೇಜು ಎನ್.ಎಸ್.ಎಸ್ ವಾರ್ಷಿಕ ವಿಶೇಷ ಶಿಬಿರದ ಸಮಾರೋಪದಲ್ಲಿ ಮಾತನಾಡಿ, ದೇಶದ ಸಂಸ್ಕೃತಿ, ಸಂಸ್ಕಾರ, ರಾಷ್ಟ್ರಪ್ರೇಮವನ್ನು ಯುವಜನತೆ ಕೊಂಚ ಮಟ್ಟಗಾದರೂ ತಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು. ಆಗ ಮಾತ್ರ ಸಮಾಜದಲ್ಲಿ ಸುಖ, ಶಾಂತಿ, ನೆಮ್ಮದಿ ಕಾಣಲು ಸಾಧ್ಯ ಎಂದರು.

ಪರಸ್ಪರ ಅರಿತು ಬದುಕುವುದನ್ನು ರೂಢಿಸಿಕೊಳ್ಳಬೇಕು. ಸಮಾಜದಲ್ಲಿ ಇರುವ ಇತರರನ್ನೂ ಅರಿತು ಯಾರಿಗೂ ತೊಂದರೆಯಾಗದಂತೆ ಬದುಕು ಕಟ್ಟಿಕೊಂಡಲ್ಲಿ ಮಾತ್ರ ಶಿಕ್ಷಣ ಪಡೆದದ್ದು ಸಾರ್ಥಕವಾಗುತ್ತದೆ. ಶಿಕ್ಷಣದ ಮೂಲೋದ್ದೇಶ ಜ್ಞಾನವೃದ್ಧಿ, ಮಕ್ಕಳು ವಿದ್ಯಾರ್ಥಿ ಜೀವನದಲ್ಲಿ ಕಲಿಕೆಗೆ ಹೆಚ್ಚಿನ ಒತ್ತು ನೀಡಬೇಕು. ನಮ್ಮ ಪಾರಂಪರಿಕ ಬದುಕು, ಮಲೆನಾಡ ಕೃಷಿ ಪದ್ಧತಿಗಳನ್ನೂ ಕಲಿತು ಮುಂದಿನ ಪೀಳಿಗೆಗೆ ವರ್ಗಾಯಿಸಬೇಕು ಎಂದು ಸಲಹೆ ನೀಡಿದರು.

ಜೆಸಿಬಿಎಂ ಪ್ರಾಚಾರ್ಯ ಡಾ. ಎಚ್.ಸಿ.ವೀರಪ್ಪ ಗೌಡ ಮಾತನಾಡಿ, ಶಿಬಿರದಲ್ಲಿ ಸಕ್ರಿಯವಾಗಿ ಭಾಗವಹಿಸುವುದರಿಂದ ವಿದ್ಯಾರ್ಥಿಗಳಲ್ಲಿ ಪರಸ್ಪರ ಅರಿವು ಮೂಡುತ್ತದೆ. ಒಗ್ಗೂಡಿ ಕಾರ್ಯನಿರ್ವಹಿಸಿದಾಗ ಜಾತಿ, ಮತ, ಭೇದಭಾವ ಮರೆಯಾಗುತ್ತದೆ. ಸಾಮಾಜಿಕ ಸಾಮರಸ್ಯ ಮೂಡಿಸಲು ಶಿಬಿರಗಳು ಸಹಕಾರಿ ಎಂದು ಹೇಳಿದರು.

ಜಿಪಂ ಸದಸ್ಯರಾದ ರಂಗನಾಥ್, ಶೃಂಗೇರಿ ಶಿವಣ್ಣ, ತಾಪಂ ಉಪಾಧ್ಯಕ್ಷೆ ಗೀತಾ ಶ್ರೀನಿವಾಸ ನಾಯ್ಕ್, ಜೆಸಿಬಿಎಂ ಪದವಿಪೂರ್ವ ಕಾಲೇಜು ಪ್ರಾಚಾರ್ಯ ಡಾ. ಸಿ.ವಿ.ಗಿರಿಧರ ಶಾಸ್ತ್ರಿ, ಸ್ವಾಗತ ಸಮಿತಿ ಗೌರವಾಧ್ಯಕ್ಷ ಲಕ್ಷ್ಮಣ ಬಾಪಟ್, ಕಾರ್ಯದರ್ಶಿ ಬಿ.ಎಲ್.ರವಿಕುಮಾರ್, ಉಪಾ ರಂಗಸ್ವಾಮಿ, ಗ್ರಾಪಂ ಉಪಾಧ್ಯಕ್ಷ ಗಿರಿಯಪ್ಪ ಗೌಡ, ಸ್ವಾಗತ ಸಮಿತಿ ಅಧ್ಯಕ್ಷ ಚಂದ್ರಶೇಖರ್, ಎನ್.ಎಸ್.ಎಸ್ ಅಧಿಕಾರಿಗಳಾದ ಪ್ರಶಾಂತ್, ಲಕ್ಷ್ಮೀನಾರಾಯಣ್ ಮತ್ತಿತರರಿದ್ದರು.



ಶೃಂಗೇರಿ ತಾಲೂಕು ವಿದ್ಯಾರಣ್ಯಪುರದಲ್ಲಿ ಜೆಸಿಬಿಎಂ ಕಾಲೇಜಿನ ಎನ್.ಎಸ್.ಎಸ್ ವಾರ್ಷಿಕ ಶಿಬಿರದ ಸಮಾರೋಪದಲ್ಲಿ ಪ್ರಾಚಾರ್ಯ ಡಾ. ಎಚ್.ಸಿ.ವೀರಪ್ಪ ಗೌಡ ಮಾತನಾಡಿದರು.

Scanned by CamScanner

ಎನ್ನೆಸ್ಸೆಸ್ ವಾರ್ಷಿಕ ವಿಶೇಷ ಶಿಬಿರ ಸಮಾರೋಪ

ಕೃಂಗೇರಿ: ಸಮಾಜದಲ್ಲಿ ಸಾಮರಸ್ಯ, ಸಮೃದ್ಧಿಯನ್ನು ತಾವು ಕಾಣಬೇಕಾದರೆ ಸೇವಾಧೃತಿಯಿಂದ ಪರಸ್ಪರ ವಿಚಾರಕೆಲಸಕ್ಕೆ ಒಬ್ಬರು ಮತ್ತೊಬ್ಬರನ್ನು ಅರ್ಥಮಾಡಿಕೊಂಡು ಜೀವಿಸಬೇಕಾದ ಅನಿವಾರ್ಯತೆ ನಮ್ಮ ಮೇಲಿದೆ ಎಂದು ಶ್ರೀಮಠದ ಅಧಿಕಾರಿ ಶ್ರೀಪಾದ ಕಾವ ಹೇಳಿದರು.

ಅವರು ವಿದ್ಯಾರಣ್ಯಪುರದಲ್ಲಿ ಶೃಂಗೇರಿ ಶ್ರೀ ಜಗದ್ಗುರು ಶಾಂಕರ ಕಾಲೇಜಿನ ಎನ್ನೆಸ್ಸೆಸ್ ವಾರ್ಷಿಕ ವಿಶೇಷ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು.

ಒಳ್ಳೆಯ ವಿಚಾರ, ಮಾತುಗಳನ್ನು ನಾವು ಕಲಿತಾಗ ಅದನ್ನು ಅಳವಡಿಸಿಕೊಳ್ಳಲು ಬಹಳ ಸಮಯ ಜೀವನದಲ್ಲಿ ಅಳವಡಿಸಿಕೊಳ್ಳಬೇಕು.

ಗಾಂಧೀಜಿ, ವಿವೇಕಾನಂದರು ನಿಂತು ಹೋದ ಸಂಸ್ಕೃತಿ, ಸಂಸ್ಕಾರ, ದೇಶಪ್ರೇಮವನ್ನು ಯುವಜನತೆ ಕೊಂಚಮಟ್ಟಿಗಾದರೂ ತಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು. ಶಿಕ್ಷಣದ ಮೂಲ ಉದ್ದೇಶ ಜ್ಞಾನವನ್ನು ಪಡೆದುಕೊಳ್ಳುವುದು. ಅದರ ಜೊತೆಗೆ ಮೌಲ್ಯಾಧಿನೆ ಮಾಡಿಸುವಂತಾದ ಕೃಷಿಯ ಬಗ್ಗೆ ವಿದ್ಯಾರ್ಥಿಗಳು ಹೆಚ್ಚಿನ ಆಸಕ್ತಿ ವಹಿಸಬೇಕಾಗಿದೆ ಎಂದರು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಜೆ.ಸಿ.ಬಿ.ಎಂ ಪ್ರಾಚಾರ್ಯ ಡಾ। ಎಚ್.ಸಿ.ವೀರಪ್ಪಗೌಡ ಮಾತನಾಡಿ, ಶಿಬಿರದಲ್ಲಿ ಸಕ್ರಿಯವಾಗಿ ಭಾಗವಹಿಸುವುದರಿಂದ ಪರಸ್ಪರ ಅರಿವು ಗಾಢವಾಗುತ್ತದೆ. ಒಗ್ಗಟ್ಟಿನ ಕಾರ್ಯ ನಿರ್ವಹಿಸಿದಾಗ ಜಾತಿ,ಮತವೆಂಬ ಬೇಧಭಾವ ಮರೆಯಾಗುತ್ತದೆ.

ಮನುಜರೆಲ್ಲರೂ ಒಂದೇ ಜಾತಿ ಎಂಬ ಏಕಾಂತೆಯಾದ್ದರಿಂದ ಜೀವನ ಸಮೃದ್ಧಿಯಾಗುತ್ತದೆ. ಸತ್ಯ, ಪ್ರಾಮಾಣಿಕತೆ ವಿದ್ಯಾರ್ಥಿಗಳು ಅಳವಡಿಸಿಕೊಂಡಲ್ಲಿ ಜೀವನ ಯಶಸ್ವಿಯಾಗುತ್ತದೆ ಎಂದರು.

ಜಿ.ಪಂ ಸದಸ್ಯರಾದ ರಂಗನಾಥ್,ಬಿ.ವಿಶಂಕರ್,ತಾ.ಪಂ ಉಪಾಧ್ಯಕ್ಷೆ ನೀತಾ ಶ್ರೀನಿವಾಸ ನಾಯ್ಕ್ ಜೆ.ಸಿ.ಬಿ.ಎಂ ಪಿ.ಯೂ ಕಾಲೇಜಿನ ಪ್ರಾಚಾರ್ಯ ಡಾ।ಟಿ.ಎಂ.ಗಿರಿಧರ ಶಾಸ್ತ್ರಿ, ಸ್ವಾಗತ ಸಮಿತಿ ಗೌರವ ಅಧ್ಯಕ್ಷ ಲಕ್ಷ್ಮಣ ಬಾಮಣಿ, ಕಾರ್ಯದರ್ಶಿ ಬಿ.ಎಲ್.ರಮೇಶಮೂರ್ತಿ,ಉಪಾ ರಾಮಚಂದ್ರಸ್ವಾಮಿ, ಗ್ರಾ.ಪಂ ಉಪಾಧ್ಯಕ್ಷ ಗುಂಡಪ್ಪ ಗೌಡ, ಸ್ವಾಗತ ಸಮಿತಿ ಅಧ್ಯಕ್ಷ ಚಂದ್ರಶೇಖರ್.ಎನ್ನೆಸ್ ಅಧಿಕಾರಿಗಳಾದ ಪ್ರಶಾಂತ್, ಲಕ್ಷ್ಮೀನಾರಾಯಣ ಮುಂತಾದವರು ಉಪಸ್ಥಿತರಿದ್ದರು.

ಶಿಬಿರಾರ್ಥಿಗಳ ಪರವಾಗಿ ಚಂದನಾ.ಆರ್.ಎಸ್ ಅನಿಸಿಕೆ ವ್ಯಕ್ತಪಡಿಸಿದರು. ಮಾಣಿಕರ ವರದಿ ವಾಚಿಸಿದರು.



ಶೃಂಗೇರಿ: ವಿದ್ಯಾರಣ್ಯಪುರದಲ್ಲಿ ನಡೆದ ವಾರ್ಷಿಕ ವಿಶೇಷ ಶಿಬಿರದ ಸಮಾರೋಪ ಸಮಾರಂಭದಲ್ಲಿ ಜೆಸಿಬಿಎಂ ಕಾಲೇಜಿನ ಪ್ರಾಚಾರ್ಯ ಡಾ। ಎಚ್.ಸಿ.ವೀರಪ್ಪಗೌಡ ಮಾತನಾಡಿದರು.

Scanned by CamScanner

ಸೈಬರ್ ಅಪರಾಧಗಳ ಅರಿವು ಅವಶ್ಯ



ವಿದ್ಯಾರಣ್ಯಪುರದಲ್ಲಿ ನಡೆಯುತ್ತಿರುವ ಶ್ರೀ ಜೆ.ಸಿ.ಬಿ.ಎಂ. ಕಾಲೇಜಿನ ಎನ್.ಎಸ್.ಎಸ್.ನ ವಾರ್ಷಿಕ ವಿಶೇಷ ಸೇವಾ ಶಿಬಿರದಲ್ಲಿ ಸೈಬರ್ ಅಪರಾಧ ಕಾರ್ಯಾಗಾರದಲ್ಲಿ ನಿವೃತ್ತ ಐ.ಪಿ.ಎಸ್. ಅಧಿಕಾರಿ ರವೀಂದ್ರನಾಥ ಟ್ಯಾಗೋರ್ ಮಾತನಾಡಿದರು.

ಶೃಂಗೇರಿ, ಡಿ. 28: ವಿದ್ಯಾರ್ಥಿಗಳು ಸೈಬರ್ ಅಪರಾಧಗಳ ಬಗ್ಗೆ ಮಾಹಿತಿ ಹೊಂದಬೇಕಾಗಿರುವುದು ಈ ದಿನಗಳಲ್ಲಿ ಅತ್ಯವಶ್ಯಕ. ಇತ್ತೀಚಿನ ದಿನಗಳಲ್ಲಿ ಸೈಬರ್ ಅಪರಾಧ ತುಂಬಾ ಹೆಚ್ಚಾಗಿದ್ದು ಅದರ ಬಗೆಗಿನ ಅರಿವು ಅಗತ್ಯವಾಗಿದೆ. ಎಸ್.ಎಂ.ಎಸ್., ಎಂ.ಎಂ.ಎಸ್., ಇ ಮೇಲ್‌ಗಳನ್ನು ಉಪಯೋಗಿಸುವಾಗ ಮುಂಜಾಗೃತಾ ಕ್ರಮಗಳನ್ನು ಕೈಗೊಂಡು ಎಚ್ಚರಿಕೆ ವಹಿಸಿದಲ್ಲಿ ಆಗಬಹುದಾದ ಅನಾಹುತಗಳನ್ನು ತಪ್ಪಿಸಿಕೊಳ್ಳಬಹುದು ಎಂದು ನಿವೃತ್ತ ಐ.ಪಿ.ಎಸ್. ಅಧಿಕಾರಿ ರವೀಂದ್ರನಾಥ್ ಟ್ಯಾಗೋರ್ ತಿಳಿಸಿದರು.

ಇಲ್ಲಿನ ಶ್ರೀ ಜೆ.ಸಿ.ಬಿ.ಎಂ. ಕಾಲೇಜಿನ ಎನ್.ಎಸ್.ಎಸ್.ನ ವಾರ್ಷಿಕ ವಿಶೇಷ ಸೇವಾ ಶಿಬಿರದಲ್ಲಿ ಶುಕ್ರವಾರ ಸೈಬರ್ ಅಪರಾಧ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಮಾತನಾಡುತ್ತಿದ್ದರು.

ವಿದ್ಯಾರ್ಥಿಗಳು ತಮಾಷೆಗಾಗಿ ಅಥವಾ ಯಾವುದೋ ದುರುದ್ದೇಶಗಳಿಂದ ಋಣಾತ್ಮಕ ಅಂಶಗಳನ್ನು ಒಳಗೊಂಡ ಎಸ್.ಎಂ.ಎಸ್.ಗಳನ್ನು ಅಥವಾ ಎಂ.ಎಂ.ಎಸ್.ಗಳನ್ನು ಕಳಿಸಿದಲ್ಲಿ ಅದನ್ನು ಸೈಬರ್ ಅಪರಾಧ ಎಂದು ಪರಿಗಣಿಸಿ ಈಗಿನ ಕಾನೂನಿನ ಪ್ರಕಾರ ಶಿಕ್ಷೆ ನೀಡಬಹುದೆಂದು ತಿಳಿಸಿದರು.

ಅಧ್ಯಕ್ಷತೆಯನ್ನು ತಾಲ್ಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಶೃಂಗೇರಿ ಸುಬ್ಬಣ್ಣ ವಹಿಸಿದ್ದರು. ವೇಣುಮಾಧವ ನಾಯಕ್, ಶಿಬಿರಾಧಿಕಾರಿಗಳಾದ ಎನ್.ಹೆಚ್. ಲಕ್ಷ್ಮೀನಾರಾಯಣ್, ಎ.ಜಿ. ಪ್ರಶಾಂತ್ ಉಪಸ್ಥಿತರಿದ್ದರು.

Scanned by CamScanner

ಪ್ರಜಾವಾಣಿ ವಾರ್ತೆ 30 ಡಿಸೆಂಬರ್ 2014

ಎನ್ನೆಸ್ಸೆಸ್ ಶಿಬಿರ ಸಮಾರೋಪ

ಶೃಂಗೇರಿ: ಸಮಾಜದಲ್ಲಿ ಸುಖ, ಶಾಂತಿ, ಸಮೃದ್ಧಿ ಕಾಣಲು ಸೌಹಾರ್ದತೆ, ಪರಸ್ಪರ ತಿಳುವಳಿಕೆಯಿಂದ ಮತ್ತೊಬ್ಬರನ್ನು ಅರ್ಥ ಮಾಡಿಕೊಂಡು ಜೀವಿಸಬೇಕಾದ ಅನಿವಾರ್ಯತೆ ನಮ್ಮ ಮೇಲಿದೆ ಎಂದು ಶ್ರೀಮಠದ ಅಧಿಕಾರಿ ಶ್ರೀಪಾದರಾವ್ ಹೇಳಿದರು.

ಅವರು ವಿದ್ಯಾರಣ್ಯಪುರದಲ್ಲಿ ಶನಿವಾರ ಶ್ರೀ ಜೆಸಿಬಿಎಂ ಕಾಲೇಜಿನ ಎನ್ನೆಸ್ಸೆಸ್ ವಾರ್ಷಿಕ ವಿಶೇಷ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು.

ಒಳ್ಳೆಯ ವಿಚಾರ, ವಿಷಯಗಳನ್ನು ಕಲಿತಾಗ ಅದನ್ನು ಅಲ್ಲಿಯೇ ಬಿಡದೆ ನಮ್ಮ ಜೀವನದಲ್ಲಿ ಅಳವಡಿಸಿ ಕೊಳ್ಳಬೇಕು.

ಗಾಂಧೀಜಿ, ವಿವೇಕಾನಂದರು ನೀಡಿ ಹೋದ ಸಂಸ್ಕೃತಿ, ಸಂಸ್ಕಾರ, ದೇಶಪ್ರೇಮವನ್ನು ಯುವಜನತೆ ಕೊಂಚಮಟ್ಟಿಗಾದರೂ ತಮ್ಮ ಬದುಕಿನಲ್ಲಿ ಅಳವಡಿಸಿ ಕೊಳ್ಳಬೇಕು. ಶಿಕ್ಷಣದ ಮೂಲಉದ್ದೇಶ ಜ್ಞಾನ ವೃದ್ಧಿಸಿ ಕೊಳ್ಳುವುದು. ಆದರ ಜತೆಗೆ ಮಲೆನಾಡಿನ ಪಾರಂಪರಿಕವಾದ ಕೃಷಿ ಬಗ್ಗೆ ವಿದ್ಯಾರ್ಥಿಗಳು ಹೆಚ್ಚಿನ ಆಸಕ್ತಿ ವಹಿಸಬೇಕಾಗಿದೆ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಜೆಸಿಬಿಎಂ ಪ್ರಾಚಾರ್ಯ ಡಾ.ಎಚ್.ಸಿ. ವೀರಪ್ಪಗೌಡ ಮಾತನಾಡಿ, ಶಿಬಿರದಲ್ಲಿ ಸಕ್ರಿಯವಾಗಿ ಭಾಗವಹಿಸುವುದರಿಂದ ಪರಸ್ಪರ ಅರಿವು ಉಂಟಾಗುತ್ತದೆ. ಒಗ್ಗೂಡಿ ಕಾರ್ಯನಿರ್ವಹಿಸಿದಾಗ ಜಾತಿ, ಮತವೆಂಬ ಬೇಧಭಾವ ಮರೆಯಾಗುತ್ತದೆ. ಮನುಜರೆಲ್ಲರೂ ಒಂದೇ ಜಾತಿ ಎಂಬ ವಿಶಾಲತೆಯಿದ್ದರೆ ದೇಶದ ಸಮೃದ್ಧಿಯಾಗುತ್ತದೆ. ಸತ್ಯ, ಪ್ರಾಮಾಣಿಕತೆ ವಿದ್ಯಾರ್ಥಿಗಳು ಅಳವಡಿಸಿಕೊಂಡರೆ ಜೀವನ ಯಶಸ್ವಿಯಾಗುತ್ತದೆ ಎಂದರು.

ಸಮಾರಂಭದಲ್ಲಿ ಜಿ.ಪಂ. ಸದಸ್ಯರಾದ ರಂಗನಾಥ್, ಬಿ.ಶಿವಶಂಕರ್, ತಾ.ಪಂ. ಉಪಾಧ್ಯಕ್ಷೆ ಗೀತಾಶ್ರೀನಿವಾಸ ನಾಯ್ಕ್, ಜೆಸಿಬಿಎಂ ಪ.ಪೂ. ಕಾಲೇಜಿನ ಪ್ರಾಚಾರ್ಯ ಡಾ.ಸಿ.ವಿ.ಗಿರಿಧರ ಶಾಸ್ತ್ರಿ, ಸ್ವಾಗತ ಸಮಿತಿ ಗೌರವಾಧ್ಯಕ್ಷ ಲಕ್ಷ್ಮಣ ಬಾಪಟ್, ಕಾರ್ಯದರ್ಶಿ ಬಿ.ಎಲ್.ರವಿಕುಮಾರ್, ಉಷಾರಾಮ ಚಂದ್ರಸ್ವಾಮಿ, ಗ್ರಾ.ಪಂ. ಉಪಾಧ್ಯಕ್ಷ ಗಿರಿಯಪ್ಪ ಗೌಡ, ಸ್ವಾಗತ ಸಮಿತಿ ಅಧ್ಯಕ್ಷ ಚಂದ್ರಶೇಖರ್, ಎನ್ನೆಸ್ಸೆಸ್ ಅಧಿಕಾರಿಗಳಾದ ಪ್ರಶಾಂತ್, ಲಕ್ಷ್ಮೀನಾರಾಯಣ್ ಮತ್ತಿತರರು ಹಾಜರಿದ್ದರು. ಶಿಬಿರಾರ್ಥಿಗಳ ಪರವಾಗಿ ಬಿಂದುರಾಣಿ, ಅವಿನಾಶ್ ಅನಿಸಿಕೆ ವ್ಯಕ್ತಪಡಿಸಿದರು.



ಶೃಂಗೇರಿಯ ತಾಲೂಕಿನ ವಿದ್ಯಾರಣ್ಯಪುರದಲ್ಲಿ ಶನಿವಾರ ನಡೆದ ವಾರ್ಷಿಕ ವಿಶೇಷ ಶಿಬಿರದ ಸಮಾರೋಪ ಸಮಾರಂಭದಲ್ಲಿ ಜೆಸಿಬಿಎಂ ಕಾಲೇಜಿನ ಪ್ರಾಚಾರ್ಯ ಡಾ.ಎಚ್.ಸಿ. ವೀರಪ್ಪಗೌಡ ಮಾತನಾಡಿದರು.

Scanned by CamScanner

ನಾಡುರ ಟೈಮ್ಸ್

■ ಮಲೆನಾಡ ಗ್ರಾಮೀಣ ಪ್ರದೇಶವು ರಂಗಭೂಮಿ ಚಟುವಟಿಕೆಗಳ ಆಗರ

ಆಧುನಿಕತೆಯಲ್ಲೂ ಜೀವಂತವಾಗಿದೆ ಗ್ರಾಮೀಣ ಸಾಂಸ್ಕೃತಿಕ ಸೆಲೆ

ಶೃಂಗೇರಿ: ಗ್ರಾಮೀಣ ಪ್ರದೇಶದಲ್ಲಿ ಸಾಂಸ್ಕೃತಿಕ ಸೆಲೆಗಳೆಷ್ಟು ಆಧುನಿಕ ಬದುಕಿನ ಕಾಲಪ್ರಹಾರದಲ್ಲಿಯೂ ಜೀವಂತವಾಗಿದೆ ಎಂದು ಶ್ರೀ ಜೆ.ಸಿ.ಬಿ.ಎಂ. ಕಾಲೇಜಿನ ಪ್ರಾಚಾರ್ಯ ಡಾ। ಎಚ್.ಸಿ. ವೀರಪ್ಪ ಗೌಡ ಹೇಳಿದರು.

ಅವರು ಇತ್ತೀಚೆಗೆ ವಿದ್ಯಾರಣ್ಯಪುರದ ಶಾಲಾ ಬಯಲು ರಂಗಮಂದಿರದಲ್ಲಿ ಮಲೆನಾಡು ರಂಗಮಾಧ್ಯಮ ಪ್ರತಿಷ್ಠಾನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಭಾರತೀತೀರ್ಥ ಸಾಂಸ್ಕೃತಿಕ ಕೇಂದ್ರ ಟ್ರಸ್ಟ್ ಹಾಗೂ ಎನ್.ಎಸ್.ಎಸ್. ಘಟಕ ಹಮ್ಮಿಕೊಂಡಿದ್ದ ಗ್ರಾಮ ಸಂಸ್ಕೃತಿ ಸಪ್ತಾಹದ ನಾಟಕ ಪ್ರದರ್ಶನ ಸಮಾರಂಭದಲ್ಲಿ ಮಾತನಾಡಿದರು.

ಮಲೆನಾಡ ಗ್ರಾಮೀಣ ಪ್ರದೇಶವು ರಂಗಭೂಮಿ ಚಟುವಟಿಕೆಗಳ ಆಗರವಾಗಿತ್ತು. ಸಂಕರದ ದಿನಗಳಲ್ಲಿ ನಶಿಸಿಹೋಗಲಾರಂಭಿಸಿದ ಈ ಪರಂಪರೆಯು ಪುನರುತ್ಥಾನಕ್ಕೆ ಇಂಥಹ ಸಪ್ತಾಹಗಳು ಕಾರಣವಾಗಿವೆ. ಗ್ರಾಮೀಣ ಪ್ರದೇಶದಲ್ಲಿ ಇನ್ನೂ ಇಂತಹ ಕಾರ್ಯಕ್ರಮಗಳನ್ನು ಆಯೋಜಿಸುತ್ತಿರುವುದು ಸಂತಸದ ಸಂಗತಿ ಎಂದರು.

– ರಂಗಕರ್ಮಿ ರಮೇಶ್ ಬೇಗಾರ್ ಮಾತನಾಡಿ,



ಶೃಂಗೇರಿ: ವಿದ್ಯಾರಣ್ಯಪುರದಲ್ಲಿ ನಡೆದ ಜೆಸಿಬಿಎಂ ಕಾಲೇಜಿನ ಎನ್ನೆಸ್ಸೆಸ್ ಶಿಬಿರದಲ್ಲಿ 'ಸಂಗೊಳ್ಳಿ ರಾಯಣ್ಣ' ನಾಟಕ ಪ್ರದರ್ಶಿಸಲಾಯಿತು.

ಮಲೆನಾಡು ಭಾಗದಲ್ಲಿ 5 ದಶಕಗಳ ಹಿಂದೆ ಉತ್ಕೃಷ್ಟವಾಗಿದ್ದ ಸಂಗೀತಮಯ ಪಾರಂಪರಿಕ ರಂಗಭೂಮಿಯ ಮರುಸೃಷ್ಟಿಗಾಗಿ ಸ್ಥಳೀಯ ರಂಗಮಿತ್ರರ ಸಹಕಾರದೊಂದಿಗೆ ಕಳೆದ 8 ವರ್ಷಗಳಿಂದ ಪೌರಾಣಿಕ ಮತ್ತು ಐತಿಹಾಸಿಕ ನಾಟಕಗಳನ್ನು ಸಿದ್ಧಪಡಿಸಿ ಪ್ರದರ್ಶಿಸಲಾಗುತ್ತಿದೆ ಎಂದು ತಿಳಿಸಿದರು.

ಗ್ರಾಮ ಸಂಸ್ಕೃತಿ ಸಪ್ತಾಹದ ಅಂಗವಾಗಿ ಆಯೋಜಿಸಲಾಗಿದ್ದ ಐತಿಹಾಸಿಕ 'ಸಂಗೊಳ್ಳಿ ರಾಯಣ್ಣ' ನಾಟಕದ ಪ್ರದರ್ಶನಕ್ಕೆ ಉದ್ಘಾಟನಾ ರಂಗಪಾಠ ಬಾಲಕಿ ನೀಡಿದರು.

ಎನ್.ಎನ್.ಎಸ್. ಅಧಿಕಾರಿಗಳಾದ ಎಚ್. ಪ್ರಶಾಂತ್, ಲಕ್ಷ್ಮೀನಾರಾಯಣ ಹಾಗೂ ಮಲೆನಾಡು ರಂಗಮಾಧ್ಯಮ ಪ್ರತಿಷ್ಠಾನದ ಸದಸ್ಯ ಕಾರ್ಯದರ್ಶಿ ಎಸ್.ಪಿ. ಜಯಪ್ರಕಾಶ್ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಮನಸೂರೆಗೊಂಡ ಐತಿಹಾಸಿಕ ನಾಟಕ:

ಈ ಗ್ರಾಮ ಸಂಸ್ಕೃತಿ ಸಪ್ತಾಹದಲ್ಲಿ ಬೆಂಗಳೂರಿನ ಬಳಗದವರು ಪ್ರದರ್ಶಿಸಿದ ಐತಿಹಾಸಿಕ ನಾಟಕ 'ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ' ನೆರೆದ ಗ್ರಾಮಸ್ಥರ ಮೆಚ್ಚುಗೆಗೆ ಪಾತ್ರವಾಯಿತು. ಕಣ್ಣಿನ ಸೆಳೆಯುವ ವೇಷಭೂಷಣ, ಕರ್ಣಾನಂದಕರ ಸಂಗೀತ, ಭಾವಪೂರ್ಣ ನಟನೆ, ಹಾಗೂ ಕಲಾತ್ಮಕ ಬೆಳಕಿನ ಸಂಯೋಜನೆ ನಾಟಕದ ಮೆರುಗು ಹೆಚ್ಚಿಸಿತು. ರಾಯಣ್ಣನನ್ನು ಬ್ರಿಟಿಷ್ ಅಧಿಕಾರಿಗಳು ಗಲ್ಲಿಗೇರಿಸುವ ದೃಶ್ಯ ನಾಟಕದ ದುರಂತ ಅಂತ್ಯ ಪ್ರೇಕ್ಷಕರ ಮನಕಲಕುವಂತೆ ಮಾಡುವಲ್ಲಿ ಯಶಸ್ವಿಯಾಯಿತು.

ಉದಯವಾಣಿ ಬುಧವಾರ ಪ್ರತಿಕೆಗಾಗಿ 5/ 10/ಓ

Scanned by CamScanner

ಸಾಹಿತ್ಯಕ್ಕೆ ಕೃಷ್ಣಶರ್ಮ ಕೊಡುಗೆ ಅಪಾರ

ಉತ್ತರ ಕರ್ನಾಟಕ ಭಾಗದಲ್ಲಿ ಸಣ್ಣಕಥೆ ಪ್ರಕಟಿಸಿದ ಮೊದಲಿಗರು

ಶೃಂಗೇರಿ: ಕಾವ್ಯಕ್ಕೆ ಹೊಸ ಭಾಷ್ಯ ಬರೆಯುವ ಮೂಲಕ ಹೊಸಗನ್ನಡ ಸಾಹಿತ್ಯ ಕ್ಷೇತ್ರಕ್ಕೆ ಅನನ್ಯ ಕೊಡುಗೆ ನೀಡಿದ ಕವಿ ಡಾ. ಬೆಟಗೇರಿ ಕೃಷ್ಣಶರ್ಮ ಎಂದು ಡಾ. ಬೆಟಗೇರಿ ಕೃಷ್ಣಶರ್ಮ ಸ್ಮಾರಕ ಪ್ರತಿಷ್ಠಾನದ ಅಧ್ಯಕ್ಷ ಪ್ರೊ. ರಾಘವೇಂದ್ರ ಪಾಟೀಲ್ ಹೇಳಿದರು.

ಜೆಸಿಬಿಎಂ ಕಾಲೇಜು ಸಭಾಂಗಣದಲ್ಲಿ ಗುರುವಾರ ಬೆಳಗಾವಿಯ ಬೆಟಗೇರಿ ಕೃಷ್ಣಶರ್ಮ ಸ್ಮಾರಕ ಪ್ರತಿಷ್ಠಾನ ಆಯೋಜಿಸಿದ್ದ ಡಾ. ಶರ್ಮ ಅವರ ಕಾವ್ಯಸ್ಪಂದನ ತರಬೇತಿ ಶಿಬಿರ ಉದ್ಘಾಟಿಸಿ ಮಾತನಾಡಿದರು.

ದಕ್ಷಿಣ ಕರ್ನಾಟಕದಲ್ಲಿ ಸಾಹಿತಿ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಸಣ್ಣಕಥೆಗಳ ಪ್ರಾಮುಖ್ಯತೆ ಹೆಚ್ಚಿಸಿದರೆ ಉತ್ತರ ಕರ್ನಾಟಕದಲ್ಲಿ ಸಣ್ಣಕಥೆ ಪ್ರಚುರಪಡಿಸಿದವರು ಬೆಟಗೇರಿ ಕೃಷ್ಣಶರ್ಮ ಎಂದರು.

1900ರಲ್ಲಿ ಜನಿಸಿದ ಬೆಟಗೇರಿ ಬಡತನದಲ್ಲಿ ಬೆಳೆದವರು. ಕವ್ವದಲ್ಲೇ ಓದಿ ಅಧ್ಯಾಪಕ ವೃತ್ತಿಯಲ್ಲಿ ತೊಡಗಿಸಿಕೊಂಡರು. ತಾವು ಬೆಳೆದ ಪರಿಸರವನ್ನು ಸೂಕ್ಷ್ಮವಾಗಿ ಗ್ರಹಿಸಿದ್ದರಿಂದ ಜಾನಪದ ಕಾವ್ಯವನ್ನು ಗಟ್ಟಿಗೊಳಿಸಿದರು. ಕನ್ನಡನಾಡಿನ ಮೊಟ್ಟಮೊದಲ ಜಾನಪದ ಕವಿತೆಗಳ ಸಂಗ್ರಹಕಾರರಾದ ಶರ್ಮರ 'ಕರಗೆ ಹಾರ' ಗೀತೆ ಇಂದಿಗೂ ಜನಪ್ರಿಯ. ಕನ್ನಡ ವಿಶ್ವವಿದ್ಯಾಲಯದಲ್ಲಿ ಜಾನಪದ ಸಾಹಿತ್ಯ ಕುರಿತು ಜಿಜ್ಞಾಸೆ ಉಂಟಾಗುವ ಸಂದರ್ಭದಲ್ಲಿ ಅದಕ್ಕೆ ಸರಿಯಾದ ಪರಿಹಾರ ನೀಡಿದ್ದು ಶರ್ಮ ಅವರ ಪ್ರತಿಭೆಗೆ ಸಾಕ್ಷಿ ಎಂದು ತಿಳಿಸಿದರು.

ಬೇಂದ್ರೆ ಅವರಿಗಿಂತ ಮೊದಲೇ ಏಳು ಕವನಸಂಕಲನ ಪ್ರಕಟಿಸಿ ಉತ್ತರ ಕರ್ನಾಟಕದ ಕಾವ್ಯಕ್ಷೇತ್ರದಲ್ಲಿ ಸಂಚಲನ ಮೂಡಿಸಿದ್ದರು. ಬೇಂದ್ರೆ ಅವರ 2ನೇ ಕವನಸಂಕಲನವಾದ 'ಗರಿ' ಪ್ರಕಟಿಸಿ ಕರಡು ತಿದ್ದಿ ತನ್ನೊಳಗಿನ ಕವಿಯನ್ನು ಅನಾವರಣಗೊಳಿಸಿದರು. ಇಂತಹ ಅದ್ಭುತ ಪ್ರತಿಭೆಯ ಕಾವ್ಯಗಳನ್ನು ನಾಡಿಗೆ ನಿತ್ಯ ಸ್ಥಾಯಿಗೊಳಿಸಬೇಕಿದೆ ಎಂದು ಹೇಳಿದರು.

ಬೆಳಗಾವಿಯ ದೇಶಭಕ್ತ ಗಂಗಾಧರ್‌ರಾವ್ ದೇಶಪಾಂಡೆ ಮತ್ತು ಸಂಗಡಿಗರು ಸ್ಥಾಪಿಸಿದ 'ಮಾತೃಭೂಮಿ' ಪತ್ರಿಕೆ ಸಂಪಾದಕರಾಗಿ ಕನ್ನಡಭಾಷೆಗೆ ಹೊಸ ಆಯಾಮ ನೀಡಿದರು. ಸ್ವಾತಂತ್ರ್ಯ ಚಳವಳಿ ಸಂದರ್ಭದಲ್ಲಿ ರಾಷ್ಟ್ರೀಯ ಶಾಲಾ ವಿದ್ಯಾರ್ಥಿಗಳಲ್ಲಿ ಕನ್ನಡದ ಕಂಪು ಹರಡಿಸಿ ಕನ್ನಡತನ ಮೆರೆದರು ಎಂದರು.

ಪುರಂದರದಾಸರ ಕೀರ್ತನಾ 6 ಸಂಪುಟಗಳು, ಕನಕದಾಸರ ಕೀರ್ತನಾ ಸಂಪುಟಗಳನ್ನು ನಿರ್ವಹಿಸಿ ಸಾಂಸ್ಕೃತಿಕ ಲೋಕಕ್ಕೆ ದೊಡ್ಡ ಕೊಡುಗೆ ನೀಡಿದರು. ಕನ್ನಡದ ಪುನರುತ್ಥಾನ ಕಾಲದಲ್ಲಿ ಆಂಗ್ಲ ಸಾಹಿತ್ಯದ ಅನುವಾದ, ಬಾಲಗೀತೆ, ಕವಿತೆಗಳಿಗೆ ಹೊಸತನ ನೀಡಿದರು ಎಂದು ಸ್ಮರಿಸಿದರು.

ಜೆಸಿಬಿಎಂ ಕಾಲೇಜು ಪ್ರಾಚಾರ್ಯ ಡಾ. ವೀರಪ್ಪಗೌಡ, ಪ್ರಾಚಾರ್ಯ ಡಾ. ಸಿ.ವಿ.ಗಿರಿಧರ ಶಾಸ್ತ್ರಿ, ಗಾಯಕಿ ಉಪಾಸನಾ ಮೋಹನ್, ಸಾಹಿತಿ ಡಾ. ಬಸವರಾಜ ಜಗಜಂಪಿ ಮತ್ತಿತರರು ಉಪಸ್ಥಿತರಿದ್ದರು.



ಶೃಂಗೇರಿಯಲ್ಲಿ ಡಾ. ಬೆಟಗೇರಿ ಕೃಷ್ಣಶರ್ಮ ಕಾವ್ಯಾಧ್ಯಯನ ಶಿಬಿರದಲ್ಲಿ ಪ್ರೊ.ರಾಘವೇಂದ್ರ ಪಾಟೀಲ್ ಮಾತನಾಡಿದರು.

> ಕಥೆ, ಕವಿತೆ, ಪತ್ರಿಕೋದ್ಯಮ, ಸ್ವಾತಂತ್ರ್ಯ ಚಳವಳಿ, ಸಂಸ್ಕೃತಿ, ಧರ್ಮ ಮತ್ತು ಲೋಕಶಿಕ್ಷಣಕ್ಕಾಗಿ ಬದುಕು ಸವೆಸಿದ ಧೀಮಂತ ಸಾಹಿತಿ ಬೆಟಗೇರಿ ಕೃಷ್ಣಶರ್ಮ.
>
> ಪ್ರೊ. ರಾಘವೇಂದ್ರ ಪಾಟೀಲ್
> ಬೆಟಗೇರಿ ಸ್ಮಾರಕ ಪ್ರತಿಷ್ಠಾನದ ಅಧ್ಯಕ್ಷ

- ಶರ್ಮರಿಂದ ರಚಿತಗೊಂಡ 'ಕರೆಗೆ ಹಾರ' ಗೀತೆ ಇಂದಿಗೂ ಜನಪ್ರಿಯ
- ಮಾತೃಭೂಮಿ ಪತ್ರಿಕೆ ಸಂಪಾದಕರಾಗಿ ಕನ್ನಡ ಭಾಷೆಗೆ ಹೊಸ ಆಯಾಮ
- ಬಾಲಗೀತೆ, ಕವಿತೆಗಳಿಗೆ ಹೊಸತನ ನೀಡಿದ ಶ್ರೇಯಸ್ಸು ಶರ್ಮರದ್ದು

Scanned by CamScanner

ಆನಂದಕಂದ ಕಾವ್ಯ ದಕ್ಷಿಣ ಕರ್ನಾಟಕದ ಕಡೆಗೂ ಪಸರಿಸಲಿ

■ ಕನಸು ಕಾಣುವವರೆಗೂ ಕವಿತೆ ಜೀವಂತವಾಗಿ ಇರುತ್ತದೆ ■ ಸಾಹಿತಿ ಡಾ. ವಿ.ಎಸ್.ಮಾಳಿ ಅಭಿಮತ

ಶೃಂಗೇರಿ: ಸಮೃದ್ಧವಾದ ಸೃಜನಶೀಲತೆಗೆ ಮುಖ್ಯವಾದ ಸಂವಿಧಾನ ಆದು ಕವಿತೆಯಾಗಿ ಬದಲಾಯಿಸುತ್ತದೆ ಎಂದು ಸಾಹಿತಿ ಡಾ. ವಿ.ಎಸ್.ಮಾಳಿ ಅಭಿಪ್ರಾಯಪಟ್ಟರು.

ಇಲ್ಲಿನ ಜೆಸಿಐಂ ಕಾಲೇಜಿನ ಸಭಾಂಗಣದಲ್ಲಿ ಡಾ. ಬೆಳಗೂರು ಕೃಷ್ಣ ಕುಮಾರ ಕಾವ್ಯಾಧ್ಯಯನ ಚಿಂತನ ಕಾರ್ಯಕ್ರಮದ ಪ್ರಮುಖ ಭಾಷಣ ಮಾಡಿದ ಅವರು, ಕನಸು ಇರುವವರೆಗೂ ಕವಿತೆ ಜೀವಂತವಾಗಿರುತ್ತದೆ ಎಂದು ಹೇಳಿದರು.

ಬದುಕು ಎಂಬುದು ಸುಪ್ತ ಕವಿತೆಗಳ ರೂಪಕ. ಇದನ್ನು ಸಾಧ್ಯ ಸಾಹಿತ್ಯದಲ್ಲಿ



ಶೃಂಗೇರಿಯಲ್ಲಿ ಏರ್ಪಡಿಸಿದ್ದ ಡಾ. ಬೆಳಗೂರು ಕೃಷ್ಣ ಕುಮಾರ ಕಾವ್ಯಾಧ್ಯಯನ ಚಿಂತನ ಮಹತ್ವದ ವಿಚಾರಂಬಗೆಗೆ ಸಾಹಿತಿ ಡಾ. ವಿ.ಎಸ್.ಮಾಳಿ ಮಾತನಾಡಿದರು.

> ಪ್ರಜ್ಞ ಸುತ್ತಮುತ್ತಲಿನ ಸ್ವಾಮೀಜಿಗಳ ಧಾರದ ಬಡ ನೋವು-ನಲಿವುಗಳನ್ನು ತಕ್ಷಣೇ ಆದ ಸೂಕ್ಷ್ಮ ದೃಷ್ಟಿಕೋನದಲ್ಲಿ ಕಂಡು ಕಾವ್ಯವನ್ನು ಹೇಳಿದ ಅದ್ಭುತ ಕವಿ ಕೃಷ್ಣಕುಮಾರರು.
>
> ಡಾ. ವಿ.ಎಸ್.ಮಾಳಿ, ಸಾಹಿತಿ

ಗಮನಸೆಳೆಯುವಂಥದ್ದು. ಆನಂದಕಂದರ ಕಾವ್ಯ ಸಾಂಪ್ರತಿಕ ಸ್ಪೇರಣೆಗೆ ಸ್ಪಂದಿಯಾಗಿ ಇಂದಿಗೂ ಪ್ರಸ್ತುತವಿದೆ ಎಂದು ತಿಳಿಸಿದರು.

ಬೆಳಗೂರು ಕೃಷ್ಣ ಕುಮಾರ ಕಾವ್ಯ ಬಹು ಕಾಮಾಸ್ಪರ ಸಾಲಿಗ್ರಾಮಲ್ಲಿ ಹರಿದಾಡುತ್ತಿದೆ. ತಮ್ಮ ಸುತ್ತಮುತ್ತಲಿನ ಸ್ವಾಮೀಜಿಗಳ ಭಾವದ ಬಡ ನೋವು-ನಲಿವುಗಳನ್ನು ತಕ್ಷಣೇ ಆದ ಸೂಕ್ಷ್ಮ ದೃಷ್ಟಿಕೋನದಲ್ಲಿ ಕಂಡು ಕಾವ್ಯವನ್ನು ಹೇಳಿದ ಅದ್ಭುತ ಕವಿ ಅವರು. ಉತ್ತರ ಕರ್ನಾಟಕದಲ್ಲಿ ಇಂದಿಗೂ ಅವರ ಕಾವ್ಯ ಪ್ರಸ್ತುತವಾಗಿದ್ದು, ಅವುಗಳನ್ನು ದೇಶಾದ್ಯಂತ ಕರ್ನಾಟಕದ ಹೊರಗೆಡೆಗಾದ ಜೊತೆ ಎಲ್ಲರ ಮೀರಿದೆ ಎಂದರು.

ಉತ್ತರ ಕರ್ನಾಟಕದಲ್ಲಿ ಆನಂದಕಂದರ ಕಾವ್ಯ ಹೆಚ್ಚು ಪ್ರಾತಿ ಪಡೆದಿದೆ. ಅದರ ಕಾವ್ಯಚಿಂತನೆಯನ್ನು ದಕ್ಷಿಣ ಕರ್ನಾಟಕದಲ್ಲೂ ಹರಿಯುವ ಕೆಲಸವಾಗುತ್ತಿದೆ. ಜತೆಗೆ ಬೆಳಗಾವಿಯ ಕುಮಾರ ಕೃಷ್ಣ ಪ್ರತಿಷ್ಠಾನ ಎಲ್ಲ ವರ್ಷಗಳಿಗೆ ಹಾಸ್ಯ ವಿಚಾರವನ್ನು ಕೆಲಸ ಮಾಡುತ್ತಿದೆ. ಈ ಒಕ್ಕೂಟದಲ್ಲಿ ಕೃಷ್ಣಕುಮಾರ ಜೀವನ ಚರಿತ್ರೆಯನ್ನು ಎರಡು ದಿನಗಳ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

ಕಾರ್ಯಾಲಯ ಪ್ರಾಚಾರ್ಯ ಡಾ. ಎಸ್. ಎ.ಎಂದಪ್ಪಗೌಡ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕೃಷ್ಣ ಕುಮಾರ ವಿಚಾರಧಾರೆ ಸಂಸ್ಥೆ ಡಾ. ಬಿಎಸ್‌ಜಿ, ಪ್ರಮುಖರಾದ ಪ್ರೊ. ರಾಘವೇಂದ್ರ ಮಾಸ್ತರ್, ಅಶೋಕಶೆಟ್ಟಿ, ಡಾ. ಎಸ್.ಜಯಶ್ರೀ, ಸುಮಂತ ಉಮಾಸೂರ ಮೊದಲಾದವರು ಉಪಸ್ಥಿತರಿದ್ದರು.

ವಿಜಯವಾಣಿ ದಿನಪತ್ರಿಕೆ ದಿನಾಂಕ 2011ರ ಕೆಲವಾರ

Scanned by CamScanner

ಡಾ.ಬೆಟಗೇರಿ ಕೃಷ್ಣಶರ್ಮರ ಕಾವ್ಯಾರ್ಥ ಚಿಂತನದ ಸಮಾರೋಪ

ಕವಿತೆ, ಬದುಕು ಸಂವೇದನೆಗಳ ರೂಪಕ

ಶೃಂಗೇರಿ: ಡಾ.ಬೆಟಗೆರಿ ಕೃಷ್ಣಶರ್ಮ ಕಾವ್ಯ ಜನಸಾಮಾನ್ಯರ ನಾಲಿಗೆಯಲ್ಲಿ ಹರಿದಾಡುವ ಕಾವ್ಯವಾಗಿತ್ತು ಎಂದು ಡಾ.ವಿ.ಎಸ್.ಮಾಳ ಹೇಳಿದರು.

ಅವರು ಶುಕ್ರವಾರ ಜೆಬಿಎಂ ಕಾಲೇಜಿನ ಸಭಾಂಗಣದಲ್ಲಿ ಡಾ.ಬೆಟಗೇರಿ ಕೃಷ್ಣಶರ್ಮರ ಕಾವ್ಯಾರ್ಥ ಚಿಂತನದ ಸಮಾರೋಪ ಕಾರ್ಯಕ್ರಮದಲ್ಲಿ ಮಾತನಾಡಿದರು. ತನ್ನ ಸುತ್ತ ಮುತ್ತಲಿನ ಗ್ರಾಮೀಣ ಭಾಗದ ಜನರ ನೋವು ನಲಿವುಗಳನ್ನು ತನ್ನದೇ ಆದ ಸೂಕ್ಷ್ಮತೆಯ ದೃಷ್ಟಿಕೋನದಲ್ಲಿ ಕಂಡು ಕಾವ್ಯವನ್ನು ಹೆಣೆದ ಅಪ್ಪಟ ಕವಿ ಅವರಾಗಿದ್ದರು. ಉತ್ತರ ಕರ್ನಾಟಕದಲ್ಲಿ ಇಂದಿಗೂ ಕೂಡ ಅವರ ಕಾವ್ಯಗಳು ಮನೆಮಾತಾಗಿದೆ.

ಉತ್ತರಕರ್ನಾಟಕದಲ್ಲಿ ಅನಂದಕಂದರ ಕಾವ್ಯ ಬೆಳೆದಿದೆ. ಅವರ ಕಾವ್ಯಚಿಂತನ ದಕ್ಷಿಣ ಕರ್ನಾಟಕಕ್ಕೂ ಹರಡಬೇಕು. ಕನಸು ಇರುವ ತನಕ ಕವಿತೆ ಜೀವಂತವಾಗಿರುತ್ತದೆ.ಕವಿತೆ ಹಾಗೂ ಬದುಕು ಒಂದು ಸೂಕ್ಷ್ಮ ಸಂವೇದನೆಗಳ ರೂಪಕ. ಸಮ್ಮೇಳನಿಯವ ಸ್ವಪ್ನಶೀಲತೆಗೆ ಮಿತಿಗಳಿರುವ ನೀತಿವಾಗ ಮಾತ್ರ ಕವಿತ್ವ ಪರಿಮಳಿಸುತ್ತದೆ. ಅನಂದಕಂದರ ಕಾವ್ಯ ಸಾಂಸ್ಕೃತಿಕ ಪ್ರಜ್ಞೆಗೆ ಸಾಕ್ಷಿಯಾಗಿ ಇಂದಿಗೂ ಪ್ರಸ್ತುತವಾಗಿದೆ ಎಂದರು.



ಶೃಂಗೇರಿ ಜೆಬಿಎಂ ಕಾಲೇಜಿನ ಸಭಾಂಗಣದಲ್ಲಿ ಡಾ.ಬೆಟಗೇರಿ ಕೃಷ್ಣಶರ್ಮರ ಕಾವ್ಯಾರ್ಥ ಚಿಂತನದ ಸಮಾರೋಪ ಸಮಾರಂಭದಲ್ಲಿ ಡಾ.ವಿ.ಎಸ್.ಮಾಳ ಮಾತನಾಡಿದರು.

ಪ್ರೊ. ರಾಘವೇಂದ್ರ ಪಾಟೀಲ ಮಾತನಾಡಿ, ಜೆಬಿಎಂ ಕಾಲೇಜಿನಲ್ಲಿ ಎಂಟು ದಿನ ಹಮ್ಮಿಕೊಂಡ ಕಾರ್ಯಕ್ರಮಕ್ಕೆ ಪ್ರಾಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಪ್ರೋತ್ಸಾಹ ನೀಡಿ ಯಶಸ್ವಿಗೊಳಿಸಿದ್ದಾರೆ. ಅನಂದಕಂದರ ಕಾವ್ಯಗಳು ಕರ್ನಾಟಕದ ಪ್ರತಿ ಬಚ್ಚಿಯನ್ನು ತಲುಪಬೇಕು. ಅದಕ್ಕಾಗಿ ಬೆಳಗಾವಿಯ ಶರ್ಮರ ಸ್ಮಾರಕ ಪ್ರತಿಷ್ಠಾನ ಅವಿರತವಾಗಿ ಶ್ರಮಿಸುತ್ತಿದೆ ಎಂದರು.

ಕಾಲೇಜಿನ ಪ್ರಾಚಾರ್ಯ ಡಾ.ಎಸ್. ಟಿ.ವೀರಭದ್ರಗೌಡ ಅಧ್ಯಕ್ಷತೆ ವಹಿಸಿದ್ದರು. ಶ್ರೀಕೃಷ್ಣಶರ್ಮ ಪ್ರತಿಷ್ಠಾನದ ಸಂಸ್ಥಾ ಡಾ. ಬಸವರಾಜ ಸಾಬೂಮಿ, ಡಾ.ಎಂ.ಕೆ. ಸಾವಳಗಿ, ಗಾಯಕ ಉಮಾ ಸಹಾ ಮೋಹನ ಉಪಸ್ಥಿತರಿದ್ದರು. ವಿದ್ಯಾರ್ಥಿಗಳು ಹಾಡಿದ ಅನಂದಕಂದರ ಕವಿತೆ ಮೆಚ್ಚುಗೆಗೆ ಪಾತ್ರವಾಯಿತು. ಜೆಬಿಎಂ ಸ.ಪ. ಪೂರ್ವ ಕಾಲೇಜಿನ ಪ್ರಾಚಾರ್ಯ ಡಾ. ಗಿರಿಧರ ಶಾಸ್ತ್ರಿ ಸ್ವಾಗತಿಸಿ, ಉಪನ್ಯಾಸಕ ಪ್ರಶಾಂತ್ ವಂದಿಸಿದರು.

ತ್ರಿಲೆ ಸುದ್ದಿ

ವಿಕಾಂತ ಕನಾಟಕ ತನಿಷ್ಕ ಗಿಜಿಬಿಜಿ ಸುದ್ದಿ

Scanned by CamScanner

ಜೆಸಿಬಿಎಂ ಕಾಲೇಜಿನ ವಾಣಿಜ್ಯ ಸಂಘ ಉದ್ಘಾಟನೆ

ಶೃಂಗೇರಿ: ವಿದ್ಯಾರ್ಥಿಗಳು ತಮಗೆ ಶಿಕ್ಷಣ ನೀಡುವ ಗುರುಗಳ ಮತ್ತು ಸಮಾಜದೊಂದಿಗೆ ವಿನಯದಿಂದ ಇದ್ದಾಗ ಪಡೆದ ಶಿಕ್ಷಣದ ಉದ್ದೇಶ ಈಡೇರುತ್ತದೆ ಎಂದು ಮೈಸೂರು ಬ್ಯಾಂಕಿನ ಜನರಲ್ ಮ್ಯಾನೇಜರ್ ಜಯೇಶ್ ಮಾಕಾರ್ ಹೇಳಿದರು.

ಅವರು ಬುಧವಾರ ಶ್ರೀ ಜೆಸಿಬಿಎಂ ಕಾಲೇಜಿನ ವಾಣಿಜ್ಯ ಸಂಘ ಉದ್ಘಾಟಿಸಿ ಮಾತನಾಡಿದರು. ವಿದ್ಯಾರ್ಥಿ ಜೀವನ ಅಮೂಲ್ಯವಾಗಿದ್ದು ಪರೀಕ್ಷೆಗಳನ್ನು ಹಗುರವಾಗಿ ಪರಿಗಣಿಸದೆ ಜವಾಬ್ದಾರಿಯುತವಾಗಿ ಆತ್ಮವಿಶ್ವಾಸದಿಂದ ಎದುರಿಸಬೇಕು. ಕಾಲೇಜು ವ್ಯಾಸಂಗದೊಂದಿಗೆ ಪತ್ಯೇತರ ಚಟುವಟಿಕೆಗಳಿಗೂ ಆದ್ಯತೆ ನೀಡಿ ತಮ್ಮ ವ್ಯಕ್ತಿತ್ವ ವಿಕ ಚಿತ್ರಲೋಕ ಬೆಳೆಸಿಕೊಳ್ಳಬೇಕು ಎಂದರು.

ಪ್ರಾಂಶುಪಾಲ ಡಾ.ಎಚ್.ಸಿ. ವೀರಪ್ಪಗೌಡ ಅಧ್ಯಕ್ಷತೆ ವಹಿಸಿದ್ದರು. ಪ್ರೊ.ಯಶವಂತಿ ಸಾಲಿಯಾನ್, ಪ್ರೊ.ವತ್ಸಾತ್ರೇಯ ಹಾಗೂ ಸಂಘದ ಪದಾಧಿಕಾರಿಗಳಾದ ಪ್ರದೀಪ್ ಗೌಡ, ಸುಪೀಲ್ ಗೌಡ, ರಚಿತ್, ವಿನಯಕುಮಾರ್ ಎಸ್.ಎಸ್.ಪೃಥ್ವಿಕ್, ಸುಷ್ಮಾಗೌಡ ಹಾಗೂ ಆಯೇಷಾ ಜುಲ್ಫಾ ಹಾಜರಿದ್ದರು.

ವಿಕ ಚಿತ್ರಲೋಕ



ಶೃಂಗೇರಿಯ ಶ್ರೀ ಜೆಸಿಬಿಎಂ ಕಾಲೇಜಿನ ವಾಣಿಜ್ಯ ಸಂಘವನ್ನು ಜಯೇಶ್ ಮಾಕಾರ್ ಉದ್ಘಾಟಿಸಿದರು.

Scanned by CamScanner

ಜೆಸಿಬಿಎಂ ಕಾಲೇಜಿನಲ್ಲಿ ಕಲಾ ಸಂಘದ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಶೃಂಗೇರಿ: ಹತ್ತು ಹದಿನೈದು ವರ್ಷಗಳ ಶಾಲಾ ಶೈಕ್ಷಣಿಕ ಜೀವನ ನಡೆಸಿದ ನಾವು ಸಮಾಜಕ್ಕೆ ಮತ್ತು ದೇಶಕ್ಕೆ ಎಷ್ಟು ಬದ್ಧರಾಗಿದ್ದೇವೆ ಎನ್ನುವುದು ಮುಖ್ಯ. ತಿಳಿದವರೆ ಇಂದು ಹೆಚ್ಚಾಗಿ ಕಾನೂನು ಉಲ್ಲಂಘಿಸಿ ಸಾಮಾಜಿಕ ಕ್ರೌರ್ಯಕ್ಕೆ ಕಾರಣರಾಗುತ್ತಿದ್ದಾರೆ ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ಮುಖ್ಯ ಸಚೇತಕ ಗಣೇಶ್ ಕಾರ್ಣಿಕ್ ಬೇಸರ ವ್ಯಕ್ತಪಡಿಸಿದರು.

ಶೃಂಗೇರಿಯ ಜೆಸಿಬಿಎಂ ಪದವಿ ಕಾಲೇಜಿನ 2014–15ನೆ ಸಾಲಿನ ಸುವರ್ಣ ಸಂಭ್ರಮ ವರ್ಷದ ಕಲಾ ಸಂಘವನ್ನು ಇತ್ತೀಚೆಗೆ ಉದ್ಘಾಟಿಸಿ ಅವರು ಮಾತನಾಡಿದರು. ಜ್ಯೋತಿ ಬೆಳಗುವುದು ಜಗತ್ತನ್ನು ಬೆಳಗುವೆನೆಂಬ ಭ್ರಮೆಯಿಂದಲ್ಲ ನಿನ್ನ ಮುಖ ನಾನು ನನ್ನ ಮುಖ ನೀನು ನೋಡಲು ಎಂಬ ಬೆಳಕಿನ ಅಂತರಂಗದ ಮಹತ್ವವನ್ನು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಂಶುಪಾಲ ಡಾ.ಎಚ್.ಸಿ. ನೀರಪ್ಪಗೌಡ ಅವರು ವಹಿಸಿದ್ದರು. ಇತಿಹಾಸ ವಿಭಾಗದ ಮುಖ್ಯಸ್ಥ ಕೆ.ಪಿ. ಪ್ರಕಾಶ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕನ್ನಡ ವಿಭಾಗದ ಮತ್ತು ಕಲಾ ಸಂಘದ ಅಧ್ಯಕ್ಷ ಲಿವಿತ್ ಕೆ. ಶೆಟ್ಟಿ ಮುಖ್ಯಸ್ಥ ಕೆ.ಎಸ್.ವೆಂಕಪ್ಪ, ವಿದ್ಯಾರ್ಥಿ ಕ್ಷೇಮ ಉಪಾಧ್ಯಕ್ಷ ಅವಿನಾಶ್ ಬಿ. ಉಪಸ್ಥಿತರಿದ್ದರು. ಕೀರ್ತಿ ಪಾಲನಾ ಅಧಿಕಾರಿ ಪ್ರೊ. ದತ್ತಾತ್ರೇಯ ಮಾರ್ಪಳ್ಳಿ ಎಚ್.ಟಿ. ಕಿರಣ್ ಎ.ಪಿ ನಿರೂಪಿಸಿದರು.



ಶೃಂಗೇರಿಯ ಜೆಸಿಬಿಎಂ ಕಾಲೇಜಿನ 2014–15ನೇ ಸಾಲಿನ ಕಲಾ ಸಂಘದ ಉದ್ಘಾಟನೆಯನ್ನು ವಿಧಾನ ಪರಿಷತ್ ವಿರೋಧ ಪಕ್ಷದ ಮುಖ್ಯ ಸಚೇತಕ ಗಣೇಶ್ ಕಾರ್ಣಿಕ್ ನೆರವೇರಿಸಿದರು.

ಕನ್ನಡಪ್ರಭ ಸೆಪ್ಟೆಂಬರ್ 20 2014 ಶನಿವಾರ

Scanned by CamScanner

ಕನ್ನಡಪ್ರಭ ಗುರುವಾರ 21 ಫೆಬ್ರವರಿ 2008

ಚಿಕ್ಕಮಗಳೂರು



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ಕಲಾಸಂಘ ಉದ್ಘಾಟನಾ ಕಾರ್ಯಕ್ರಮವನ್ನು ಕ್ಯಾಪ್ಟನ್ ಗಣೇಶ್ ಕಾರ್ಣಿಕ್ ನೆರವೇರಿಸಿದರು.

Scanned by CamScanner

ಜೆಸಿಬಿಎಂ ಕಲಾ ಸಂಘ ಉದ್ಘಾಟನೆ



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ಕಲಾ ಸಂಘವನ್ನು ಕ್ಯಾಪ್ಟನ್ ಗಣೇಶ್ ಕಾರ್ಣಿಕ್ ಉದ್ಘಾಟಿಸಿದರು.

ಶೃಂಗೇರಿ: ವಿದ್ಯಾರ್ಥಿ ಜೀವನ ಅಮೂಲ್ಯವಾದದ್ದು, ಶೈಕ್ಷಣಿಕ ಜೀವನವನ್ನು ಉಲ್ಲಾಸಭರಿತವಾಗಿ ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ಮುಖ್ಯ ಸಚೇತಕ ಕ್ಯಾಪ್ಟನ್ ಗಣೇಶ್ ಕಾರ್ಣಿಕ್ ಹೇಳಿದರು.

ಅವರು ಮಂಗಳವಾರ ಜೆಸಿಬಿಎಂ ಕಾಲೇಜಿನಲ್ಲಿ ಕಲಾ ಸಂಘವನ್ನು ಉದ್ಘಾಟಿಸಿ ಮಾತನಾಡಿದರು.

ದೇಶಕ್ಕಾಗಿ ನಾವು ಏನು ಕೊಡಬಹುದು ಎಂಬ ಚಿಂತನೆಯನ್ನು ಮೈಗೂಡಿಸಿಕೊಳ್ಳಬೇಕು. ಬದಲಾಗುತ್ತಿರುವ ಕಾಲ ಘಟ್ಟದಲ್ಲಿ ದೇಶದಲ್ಲಿ ನಮಗೆ ಇರುವ ಸಂವಿಧಾನ ಬದ್ಧ ಹಕ್ಕುಗಳಿಗೆ ಹೊರತಾಗಿ ಕಾನೂನು ಮುರಿಯುವ ಸಂಸ್ಕೃತಿ ಹೆಚ್ಚಾಗುತ್ತಿದೆ. ವಿದ್ಯಾರ್ಥಿಗಳು ಕಾನೂನು ಗೌರವಿಸುವ ಮನೋಭಾವ ಹೊಂದಿ ದೇಶವನ್ನು ಮುನ್ನಡೆಸುವ ದಾರಿಯಲ್ಲಿ ಸಾಗಬೇಕು ಎಂದರು.

ಕಾಲೇಜಿನ ಪ್ರಾಚಾರ್ಯ ಡಾ. ಎಚ್.ಸಿ.ವೀರಭದ್ರಗೌಡ ಅಧ್ಯಕ್ಷತೆ ವಹಿಸಿದ್ದರು. ಕನ್ನಡ ವಿಭಾಗದ ಮುಖ್ಯಸ್ಥ ಕೆ ಎಸ್.ವೆಂಕಪ್ಪ, ವಿದ್ಯಾರ್ಥಿ ಕ್ಷೇಮಪಾಲನಾ ಅಧಿಕಾರಿ ಪ್ರೊ.ದತ್ತಾತ್ರೇಯ ಮಾರ್ಪಳ್ಳಿ ಮತ್ತು ಕಲಾ ಸಂಘದ ಅಧ್ಯಕ್ಷ ಲಲಿತ್. ಕೆ.ಕೆಟ್ಟಿ ಉಪಾಧ್ಯಕ್ಷ ಬಿ.ಅವಿನಾಶ್ ಹಾಜರಿದ್ದರು.

ಜೀಷಾ ಮತ್ತು ಸುನೀಲ್ ಸ್ವಾಗತಿಸಿ, ಇತಿಹಾಸ ವಿಭಾಗದ ಮುಖ್ಯಸ್ಥರಾದ ಕೆ.ಪಿ.ಪ್ರಕಾಶ್ ಪ್ರಾಸ್ತಾವಿಕ ಮಾತನಾಡಿದರು. ಮೇಘಶ್ರೀ ಮತ್ತು ಐಶ್ವರ್ಯ. ವಿ.ಕೆಟ್ಟಿ ವಂದಿಸಿದರು. ಎಚ್.ಟಿ.ಕೀರ್ತಿ ಮತ್ತು ಎ.ಪಿ.ಕಿರಣ್ ನಿರೂಪಿಸಿದರು.

Scanned by CamScanner

ಸ್ಥಳೀಯ ಇತಿಹಾಸ, ಸಂಸ್ಕೃತಿ ಕಡೆಗಣನೆ

ಶೃಂಗೇರಿ: ಇತಿಹಾಸ ಸಂಶೋಧನೆಗಳು ನಿರಂತರವಾಗಿ ನಡೆಯುತ್ತಿದ್ದರೂ ಸ್ಥಳೀಯ ಇತಿಹಾಸ, ಸಂಸ್ಕೃತಿ, ಪರಂಪರೆಯನ್ನು ಕಡೆಗಣಿಸಲಾಗುತ್ತಿದೆ ಎಂದು ಇತಿಹಾಸ ಉಪನ್ಯಾಸಕ ಪರಶುರಾಮ್ ಅಭಿಪ್ರಾಯಪಟ್ಟರು.

ಪಟ್ಟಣದ ವಿದ್ಯಾನಗರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾವರಣದಲ್ಲಿ ಕ್ರೀಡೆ, ಸಂಸ್ಕೃತಿ, ಮನರಂಜನೆ ಕುರಿತ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ವಿದ್ಯಾನಗರ ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ , ಮಂಜುನಾಥ್ ಅಧ್ಯಕ್ಷತೆ ವಹಿಸಿದ್ದರು. ಜೆಸಿಬಿಎಂ ಕಾಲೇಜಿನ ರಾಜ್ಯಶಾಸ್ತ್ರ ವಿಭಾಗದ ಹಾಗೂ ಸ್ಕೌಟ್ಸ್ ಮತ್ತು ಗೈಡ್ಸ್ ಅಧಿಕಾರಿ ಕೆ.ಎಸ್. ಸಂತೋಷ್ ಕುಮಾರ, ಜೆಸಿಬಿಎಂ ಕಾಲೇಜಿನ ಕನ್ನಡ ಉಪನ್ಯಾಸಕ ಕೆ.ಎಸ್. ವೆಂಕಪ್ಪ ಮತ್ತಿತರರು ಉಪಸ್ಥಿತರಿದ್ದರು. ಐಶ್ವರ್ಯ ಸ್ವಾಗತಿಸಿದರು. ಡಿ.ಬಿ. ಜಿಯಾ ನಿರೂಪಿಸಿ, ರಜಿತ್ ವಂದಿಸಿದರು.

ಪ್ರಜಾವಾಣಿ ವಿಜಯನಗರ, ಬುಧವಾರ, 14 ಸೆಪ್ಟೆಂಬರ್ 2016

Scanned by CamScanner

ದಿನಾಚರಣೆಯನ್ನು ಗ್ರಾ.ಪಂ. ಸದಸ್ಯ ಪಕ್ಷಾತೀತವಾಗಿ ಉದ್ಘಾಟಿಸಿದರು.

ಜೆಸಿಬಿಎಂ ಕಾಲೇಜಿನಲ್ಲಿ ಸ್ಕೌಟ್, ಗೈಡ್ಸ್ ಘಟಕ ಉದ್ಘಾಟನೆ

ಶೃಂಗೇರಿ: ದೇಶ ಸೇವೆಯೆ ದೇವ ಸೇವೆಯಾಗಿದ್ದು ವಿದ್ಯಾರ್ಥಿಗಳು ಶಿಕ್ಷಣದ ಜತೆಗೆ ರಾಷ್ಟ್ರೀಯ ಭಾವೈಕ್ಯತೆಗೆ ಪೂರಕವಾದ ಸೇವಾ ಸಂಸ್ಥೆಗಳಲ್ಲಿ ತೊಡಗಿಕೊಳ್ಳಬೇಕು ಎಂದು ಸ್ಕೌಟ್ ಮತ್ತು ಗೈಡ್ಸ್ ಅಧಿಕಾರಿ ಡಾ.ಕೆ.ಎಸ್. ಸಂತೋಷ್‌ಕುಮಾರ್ ತಿಳಿಸಿದರು.

ಶ್ರೀ ಜೆಸಿಬಿಎಂ ಪದವಿ ಪೂರ್ವ ಕಾಲೇಜಿನಲ್ಲಿ ಬುಧವಾರ ನಡೆದ ಸ್ಕೌಟ್ ಮತ್ತು ಗೈಡ್ಸ್ ಘಟಕದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದರು. ನಮ್ಮ ಕಾಲೇಜಿನಲ್ಲಿ ಮೊದಲ ಬಾರಿಗೆ ಸ್ಕೌಟ್, ಗೈಡ್ಸ್ ಘಟಕ ಆರಂಭಗೊಳ್ಳುತ್ತಿದ್ದು ಇದರಲ್ಲಿ ವಿದ್ಯಾರ್ಥಿಗಳು ಆಸಕ್ತಿಯಿಂದ ಪಾಲ್ಗೊಳ್ಳಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮ ಉದ್ಘಾಟಿಸಿದ ಪ್ರಾಂಶುಪಾಲ ಡಾ.ಸಿ.ವಿ.ಗಿರಿಧರ ಶಾಸ್ತ್ರಿ ಮಾತನಾಡಿ, ರಾಷ್ಟ್ರೀಯ ಸ್ವಯಂ ಸೇವಾ ಸಂಸ್ಥೆಗಳ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು ಸಕ್ರೀಯವಾಗಿ ತೊಡಗಿಕೊಳ್ಳಬೇಕೆಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಡಾ.ಎಚ್.ಸಿ.ವೀರಪ್ಪಗೌಡ ಮಾತನಾಡಿ, ವಿದ್ಯಾರ್ಥಿಗಳಿಗೆ ತರಗತಿಯ ಒಳಗಿನ ಕಲಿಕೆಗಿಂತ ಹೊರಗಿನ ಅನುಭವದ ಕಲಿಕೆ ಬಹು ಉಪಯುಕ್ತವಾದದ್ದು, ಮುಂದಿನ ಶೈಕ್ಷಣಿಕ ಸಾಲಿನಿಂದ ವಿದ್ಯಾರ್ಥಿಗಳು ಯಾವುದಾದರೂ ಒಂದು ಸೇವಾ ಸಂಸ್ಥೆಯಲ್ಲಿ ಕಡ್ಡಾಯವಾಗಿ ತೊಡಗಿಸಿ ಕೊಳ್ಳಬೇಕಾದ ಕಾರ್ಯ ಯೋಜನೆಯನ್ನು ರೂಪಿಸಲಾಗುತ್ತಿದೆ ಎಂದು ತಿಳಿಸಿದರು.

ಇದೇ ವೇದಿಕೆಯಲ್ಲಿ ಕಾಲೇಜಿನ 'ಎಳೆಯ ರೊಳಗೊಂದಾಗು ಪರೆಯದಲ್ಲಿ' ಕಾರ್ಯಕ್ರಮದ ಉದ್ಘಾಟನೆ ನೆರವೇರಿತು. ಇದರ ಮುಖ್ಯಸ್ಥ ಕೆ.ಎಸ್.ವೆಂಕಪ್ಪ, ಸಾಂಸ್ಕೃತಿಕ ಸಮಿತಿ ಸಂಚಾಲಕ ಶಿವಮೂರ್ತಿ ಹಾಜರಿದ್ದರು. ರಮ್ಯ, ಪ್ರದೀಪ್, ಮನೋಜ್ ತಮ್ಮ ಅನಿಸಿಕೆ ವ್ಯಕ್ತ ಪಡಿಸಿದರು. ಪ್ರಮೋದ್ ಭಾರದ್ವಾಜ್ ಸ್ವಾಗತಿಸಿ, ಗೌತಮ್ ವಂದಿಸಿದರು.



ಶೃಂಗೇರಿಯ ಶ್ರೀ ಜೆಸಿಬಿಎಂ ಪದವಿ ಪೂರ್ವ ಕಾಲೇಜಿನ ಸ್ಕೌಟ್ಸ್ ಮತ್ತು ಗೈಡ್ಸ್ ಘಟಕವನ್ನು ಪ್ರಾಂಶುಪಾಲ ಡಾ.ಸಿ.ವಿ.ಗಿರಿಧರಶಾಸ್ತ್ರಿ ಉದ್ಘಾಟಿಸಿದರು.

Scanned by CamScanner

ಕೃಷ್ಣಶರ್ಮರ ಕಾವ್ಯದ ಸೂಕ್ಷ್ಮ ಗ್ರಹಿಕೆ ಅಗತ್ಯ

ವಿಕ ಚಿತ್ರಲೋಕ

■ ವಿಕ ಸುದ್ದಿಲೋಕ ಶೃಂಗೇರಿ

ಡಾ.ಬೆಟಗೇರಿ ಕೃಷ್ಣಶರ್ಮ ಅವರು ತಾವು ಬೆಳೆದ ಪರಿಸರವನ್ನು ಸೂಕ್ಷ್ಮವಾಗಿ ಗ್ರಹಿಸಿ,ಜಾನಪದ ಕಾವ್ಯವನ್ನು ಬೆಳೆಸಿದ ಗಟ್ಟಿತನದ ವ್ಯಕ್ತಿತ್ವದವರು ಎಂದು ಡಾ.ಬೆಟಗೇರಿ ಕೃಷ್ಣಶರ್ಮ ಸ್ಮಾರಕ ಪ್ರತಿಷ್ಠಾನದ ಅಧ್ಯಕ್ಷ ಪ್ರೊ. ರಾಘವೇಂದ್ರಪಾಟೀಲ್ ಹೇಳಿದರು.

ಜೆಸಿಬಿಎಂ ಕಾಲೇಜು ಸಭಾಂಗಣದಲ್ಲಿ ಆಯೋಜಿಸಿರುವ ಡಾ.ಶರ್ಮ ಅವರ ಎರಡು ದಿನಗಳ ಕಾವ್ಯಸ್ಪಂದನ ತರಬೇತಿ ಶಿಬಿರವನ್ನು ಅಧಿಕಾರಿಗಳಿಗಾಗಿ ಉದ್ಘಾಟಿಸಿ ಮಾತನಾಡಿದರು. ದಕ್ಷಿಣ ಕರ್ನಾಟಕದಲ್ಲಿ ಸಣ್ಣಕತೆಗಳಿಗೆ ಹೆಚ್ಚಿನ ಪ್ರಾಮುಖ್ಯ ನೀಡಿದ ಸಾಹಿತಿ ಮಾಸ್ತಿ ವೆಂಕಟೇಶ ಅಯ್ಯಂಗಾರ್.ಅವ್ವ ಪ್ರತಿಭೆಯನ್ನು ಹೊಂದಿದ ಆನಂದ ಕಂದರು ಉತ್ತರ ಕರ್ನಾಟಕದಲ್ಲಿ ಸಣ್ಣಕತೆ ಗಳಿಗೆ ಹೊಸಆಯಾಮ ನೀಡಿದವರು. 1900ರಲ್ಲಿ ಜನಿಸಿ ಬಡತನವಿದ್ದರೂ ಕನ್ನಡದ ಮೂಲಿ ಪರೀಕ್ಷೆಯಲ್ಲಿತೇರ್ಗಡೆ ಹೊಂದಿ, ಅಧ್ಯಾಪಕ ವೃತ್ತಿಯಲ್ಲಿಅವರು ತಮ್ಮನ್ನು ತೊಡಗಿಸಿಕೊಂಡವರು. ಕವಿತೆ, ಪತ್ರಿಕೋದ್ಯಮ,ಲೋಕಶಿಕ್ಷಣಕ್ಕಾಗಿ ತನ್ನ



ಶೃಂಗೇರಿ ಜೆಸಿಬಿಎಂ ಕಾಲೇಜು ಸಭಾಂಗಣದಲ್ಲಿ ಆಯೋಜಿಸಿರುವ ಡಾ.ಶರ್ಮ ಅವರ ಎರಡು ದಿನಗಳ ಕಾವ್ಯಸ್ಪಂದನ ತರಬೇತಿ ಶಿಬಿರವನ್ನು ಪ್ರೊ. ರಾಘವೇಂದ್ರಪಾಟೀಲ ಗುರುವಾರ ಉದ್ಘಾಟಿಸಿದರು.

ಬದುಕು ಸಮೀಸಿದ ಬೆಟಗೇರಿಯವರ ಕಾವ್ಯಗಳನ್ನು ಎರಡು ದಿನ ವಿದ್ಯಾರ್ಥಿ ಗಳು ಅಧ್ಯಯನ ಮಾಡಬೇಕು. ಸಾಹಿತ್ಯದ ಹೊಸಚಿಂತನೆಗೆ ವಿನೂತನ ಆಯಾಮ ನೀಡಿದ ಶರ್ಮರ ಕಾವ್ಯ ಗಳನ್ನು ವಿದ್ಯಾರ್ಥಿಗಳು ಸೂಕ್ಷ್ಮವಾಗಿ ಗಮನಿಸಿದರೆ ನಮ್ಮ ತರಬೇತಿ ಶಿಬಿರ ಸಾರ್ಥಕವಾಗುತ್ತದೆ ಎಂದರು.

ಕನ್ನಡನಾಡಿನ ಮೊಟ್ಟಮೊದಲ ಜಾನಪದ ಕವಿತೆಗಳ ಸಂಗ್ರಹಕಾರರಾದ ಶರ್ಮರ 'ಕೆರೆಗೆ ಹಾರ' ಗೀತೆ ಇಂದಿಗೂ ಜನಪ್ರಿಯವಾದುದು. ಕನ್ನಡ ವಿಶ್ವವಿದ್ಯಾ ನಿಲಯದಲ್ಲಿ ಜಾನಪದ ಸಾಹಿತ್ಯದ ಕುರಿತು ಜಿಜ್ಞಾಸೆ ಉಂಟಾಗುವಸಂದರ್ಭ ಅದಕ್ಕೆ ಸರಿಯಾದ ಪರಿಹಾರವನ್ನು ಶರ್ಮರು ನೀಡುತ್ತಿದ್ದರು. ಬೇಂದ್ರೆ ಅವರಿಗಿಂತ ಮೊದಲು ಏಳು ಕವನ ಸಂಕಲನಗಳನ್ನು ಪ್ರಕಟಿಸಿ ಉತ್ತರಕರ್ನಾಟಕದ ಕಾವ್ಯಕ್ಷೇತ್ರದಲ್ಲಿ ಸಂಚಲನ ಮೂಡಿಸಿದವರು.ಬೇಂದ್ರೆಯವರ ಎರಡನೇ ಕವನಸಂಕಲನವಾದ 'ಗರಿ' ಪ್ರತಿಯ ಕರಡನ್ನು ತಿದ್ದಿ ತನ್ನೊಳಗಿನ ಕವಿಯನ್ನು ಆನಾವರಣಗೊಳಿಸಿದವರು. ಇಂತಹ ಅಮೃತ ಪ್ರತಿಭೆಯ ಕಾವ್ಯಗಳನ್ನು ನಾಡಿಗೆ ನಿತ್ಯ ಸ್ಥಾಯಿಗೊಳಿಸಲು ರಾಜ್ಯ ಸರಕಾರ ನೆರವು ನೀಡುತ್ತಿದೆ. ನಾವು ಪ್ರಾಂಜಲ ಮನಸ್ಸಿನಿಂದ ಕರ್ತವ್ಯವನ್ನು ಮಾತ್ರ ಮಾಡುತ್ತಿದ್ದೇವೆ ಎಂದರು.

ಜೆಸಿಬಿಎಂ ಕಾಲೇಜು ಪ್ರಾಚಾರ್ಯ ಡಾ.ಎಚ್.ಸಿ.ವೀರಪ್ಪಗೌಡ ಅಧ್ಯಕ್ಷತೆ ವಹಿಸಿದ್ದರು. ಪಿಯು ಕಾಲೇಜು ಪ್ರಾಚಾರ್ಯ ಡಾ.ಸಿ.ವಿ.ಗಿರಿಧರ ಶಾಸ್ತ್ರಿ ಗಾಯನ ತರಬೇತುದಾರ ಉಪಾಸನಾ ಮೋಹನ್,ಸಾಹಿತಿ ಡಾ.ಬಸವರಾಜ ಜಗಜಂಪಿ ಉಪಸ್ಥಿತರಿದ್ದರು.

ಜೆಸಿಬಿಎಂ ಕಾಲೇಜು ಹಾಗೂ ಬೆಳಗಾವಿಯ ಬೆಟಗೇರಿ ಕೃಷ್ಣಶರ್ಮ ಸ್ಮಾರಕ ಪ್ರತಿಷ್ಠಾನ ಜಂಟಿಯಾಗಿ ಕಾರ್ಯಕ್ರಮ ಆಯೋಜಿಸಿದ್ದವು.

ವಿಜಯ ಕರ್ನಾಟಕ ಶುಕ್ರವಾರ 10 ಅಕ್ಟೋಬರ್ 2014

Scanned by CamScanner

ಸೇವಾಭಾವ ಬೆಳೆಸಿಕೊಳ್ಳಿ



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ನಡೆದ ಕಾರ್ಯಕ್ರಮವನ್ನು ಡಾ. ಸಿ,ವಿ. ಗಿರಿಧರಶಾಸ್ತ್ರಿ ಉದ್ಘಾಟಿಸಿದರು.

ಶೃಂಗೇರಿ: ಶಾಲಾ, ಕಾಲೇಜು ದಿನಗಳಲ್ಲಿ ಶಿಕ್ಷಣದ ಒತೆ ಜತೆಗೆ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಂಡು ಸೇವಾ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ಜೆಸಿಬಿಎಂ ಪದವಿಪೂರ್ವ ಕಾಲೇಜಿನ ಪ್ರಾಚಾರ್ಯ ಡಾ.ಸಿ.ವಿ. ಗಿರಿಧರ ಶಾಸ್ತ್ರಿ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಕಾಲೇಜಿನ ಡಾ. ಟಿ.ಎಂ.ಎ. ಪೈ ಸಭಾಂಗಣದಲ್ಲಿ ನಡೆದ ಸ್ಕೌಟ್ ಮತ್ತು ಗೈಡ್ಸ್ ಘಟಕದ ಉದ್ಘಾಟನಾ ಸಮಾರಂಭ ನೆರವೇರಿಸಿ ಮಾತನಾಡಿದರು.

ಸ್ಕೌಟ್ಸ್ ಮತ್ತು ಗೈಡ್ಸ್ ಘಟಕದ ಅಧಿಕಾರಿ ಡಾ. ಕೆ.ಎಸ್. ಸಂತೋಷ್‌ಕುಮಾರ, ಕನ್ನಡ ಉಪನ್ಯಾಸಕ ಕೆ.ಎಸ್. ವೆಂಕಪ್ಪ ಮತ್ತಿತರರು ಉಪಸ್ಥಿತರಿದ್ದರು. ಕಾಲೇಜಿನ ಪ್ರಾಚಾರ್ಯ ಎಚ್ .ಸಿ. ವೀರಪ್ಪಗೌಡ ಅಧ್ಯಕ್ಷತೆ ವಹಿಸಿದ್ದರು. ಇದೇ ಸಂದರ್ಭದಲ್ಲಿ ಎಳೆಯರೊಳಗೊಂದಾಗು ಹರೆಯದಲ್ಲಿ ಕಾರ್ಯಕ್ರಮ ಹಾಗೂ ಶಿಕ್ಷಕರ ದಿನಾಚಾರಣೆ ಕಾರ್ಯಕ್ರಮ ಆಯೋಜಿಸಲಾಗಿತ್ತು.ಪ್ರಮೋದ್ ಭಾರದ್ವಾಜ್ ಸ್ವಾಗತಿಸಿ, ನಿರೂಪಿಸಿದರು. ಗೌತಮ ವಂದಿಸಿದರು.

Scanned by CamScanner

ವನ್ಯಜೀವಿಗಳ ರಕ್ಷಣೆ ಎಲ್ಲರ ಕರ್ತವ್ಯ

ಕೃಷ್ಣಗೇರಿ: ವನ್ಯಜೀವಿಗಳನ್ನು ರಕ್ಷಿಸುವುದು ನಮ್ಮೆಲ್ಲರ ಕರ್ತವ್ಯ ಎಂದು ಕುಮಾರಿಯಾಣಿ ವನ್ಯಜೀವಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಡಾ.ಎ.ರಾಮಕೃಷ್ಣ ಕುಮಾರ್ ತಿಳಿಸಿದರು.

ಇಲ್ಲಿನ ಗುರುಮಾತಾ ಪೆರಿಯಮ್ಮ ಕಾಲೇಜಿನಲ್ಲಿ ಆಯೋಜಿಸಿದ್ದ 69ನೇ ವನ್ಯಜೀವಿ ಸಪ್ತಾಹದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಇತ್ತೀಚಿನ ದಿನಗಳಲ್ಲಿ ಅರಣ್ಯದ ಮೇಲಿನ ಒತ್ತಡದಿಂದ ಅರಣ್ಯ ಪ್ರದೇಶ ಕಡಿಮೆಯಾಗುತ್ತಿದ್ದು, ಇದರಿಂದ ವನ್ಯಜೀವಿಗಳಿಗೆ ಬದುಕಲು ಕಷ್ಟವಾಗುತ್ತಿದೆ. ವನ್ಯಜೀವಿಗಳು ನೈಸರ್ಗಿಕವಾಗಿ ಬದುಕುವ ಹಕ್ಕನ್ನು ಹೊಂದಿದ್ದು, ಅವುಗಳ ಉಳಿವಿಗೆ ಸಮಷ್ಟಿ ಪ್ರಯತ್ನ ಅಗತ್ಯ ಎಂದರು.

ಪೆರಿಯಮ್ ಕಾಲೇಜಿನ ಪ್ರಾಚಾರ್ಯ ಡಾ.ಎಚ್.ಸಿ.ವೀರಭದ್ರಪ್ಪ ಕಾರ್ಯಕ್ರಮ ಉದ್ಘಾಟಿಸಿದರು. ಇದೇ ಸಂದರ್ಭ ಸಪ್ತಾಹ ಅಂಗವಾಗಿ ಏರ್ಪಡಿಸಿದ್ದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಕುಮಾರಿಯಾಣಿ ವನ್ಯಜೀವಿ ವಿಭಾಗ, ಕೆರೆಚಟ್ಟಿ ವನ್ಯಜೀವಿ ವಲಯ, ಹೊಸ ಪ್ರಾದೇಶಿಕ ಅರಣ್ಯ ವಿಭಾಗ ಮತ್ತು ಶ್ರೀ ಪೆರಿಯಮ್ ಕಾಲೇಜು ಅಧ್ಯಾಪಕರಲ್ಲಿ 69ನೇ ವನ್ಯಜೀವಿ ಸಪ್ತಾಹ ಆಯೋಜಿಸಲಾಗಿತ್ತು. ಕಾರ್ಯಕ್ರಮಕ್ಕೆ ಪಿ.ರಾಜೇಂದ್ರ ಮತ್ತು ಸಂತೋಷ್ ಆಚಾರ್ಯ ನಿರೂಪಣೆ ಮಾಡಿದರು. ಡಾ.ಎಸ್.ಎಸ್.ಬಾಲಸುಬ್ರಹ್ಮಣ್ಯ, ಶ್ರೀ ಪೆರಿಯಮ್ ಪಾಲಿ ಪ್ರಾಚಾರ್ಯ ಡಾ.ಎಚ್.ಸಿ. ನಿರೂಪರ ಸಾಧ್ಯ ಸ್ವಾಗತಿಸಿ, ವಿದ್ಯಾರ್ಥಿನಿ ಅರಣ್ಯ ಇಲಾಖೆಯ ಸಿಬ್ಬಂದಿ ಕೆ.ಪಿ.ಸಾಮಾನ್ಯ ಸ್ವಾಗತಿಸಿ, ವಿದ್ಯಾರ್ಥಿನಿ ಮಂಜುಳಾ ವಂದಿಸಿದರು.



ಕೃಷ್ಣಗೇರಿ ಪೆರಿಯಮ್ ಕಾಲೇಜಿನಲ್ಲಿ ಆಯೋಜಿಸಿದ್ದ 69ನೇ ವನ್ಯಜೀವಿ ಸಪ್ತಾಹವನ್ನು ಕಾಲೇಜಿನ ಪ್ರಾಚಾರ್ಯ ಡಾ.ಎಚ್.ಸಿ.ವೀರಭದ್ರಪ್ಪ ಉದ್ಘಾಟಿಸಿದರು.

Scanned by CamScanner

ಉದಯವಾಣಿ ದಿನಾಂಕ 17.10.2014
ಮುದ್ರಣ

ಜೆಸ್ಸಿಬಾಯಿ ಕಾಲೇಜಿನ ಸುವರ್ಣ ಮಹೋತ್ಸವ

ಅನುದಾನಿತ ಕಾಲೇಜುಗಳ ಸಮಸ್ಯೆ ಪರಿಹಾರಕ್ಕೆ ಕ್ರಮ

■ ಸರ್ಕಾರಿ ಶುಲ್ಕದಲ್ಲಿ ಶೇ.50ರಷ್ಟು ಅನುದಾನ ಅನುದಾನಿತ ಕಾಲೇಜಿಗೆ: ಆರ್.ವಿ.ದೇಶಪಾಂಡೆ

ಕೃಷಿಕರು ಅನುದಾನಿತ ಕಾಲೇಜುಗಳು ಆಧ್ಯಾಪಕರ ನೇಮಕ ಸೇರಿದಂತೆ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿವೆ. ಇದಕ್ಕೆ ಸರ್ಕಾರಿ ಕಾಲೇಜುಗಳೂ ಹೊರತಾಗಿಲ್ಲ. ಈ ಎಲ್ಲ ಸಮಸ್ಯೆಗಳು ಇನ್ನು ಗಮನಹರಿಸುವುದು ಹಾಗೂ ಪ್ರಮಾಣಬದ್ಧವಾಗುವುದು ಎಂದು 'ಉನ್ನತ ಶಿಕ್ಷಣ ಹಾಗೂ ಪ್ರವಾಸೋದ್ಯಮ ಸಚಿವ ಆರ್.ವಿ.ದೇಶಪಾಂಡೆ ಹೇಳಿದರು.

ಇಲ್ಲಿನ ಮಂಗಳಾದೇವಿ ಶ್ರೀ ಜೆಜೆಎಂ ಕಾಲೇಜಿನ ಸುವರ್ಣ ಮಹೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದರು.

ಅನುದಾನಿತ ಕಾಲೇಜುಗಳ ಅಭಿವೃದ್ಧಿಗೆ ಸರಕಾರ ಶುಲ್ಕದಲ್ಲಿ ಶೇ.50 ರಷ್ಟು ಭಾಗ ನೀಡುವ ಮಹತ್ವದ ನಿರ್ಣಯವನ್ನು ಸರಕಾರ ಕೈಗೊಂಡಿದೆ. ಸ್ವಾಭಾವಿಕ ಕಾರಣದಿಂದ ಹಾನಿ ಸಿಕ್ಕಿಗಳಿಗೆ ಮೊದಲು ಆದ್ಯತೆ ನೀಡಬೇಕೆಂಬ ಇದಕ್ಕೆ ಸರಕಾರ ಯಾವ ಶಿಕ್ಷಣ ಸಂಸ್ಥೆಗಳ ಮೇಲೆ ಹೆಚ್ಚಿನ ಬಡಾವಣೆ ಇದೆ. ದೇಶದಲ್ಲಿ ಅರ್ಥಿಕ ಬಡತನವಿರುವುದು ಆದರೆ ಜ್ಞಾನದ ಕೊರತೆಯಲ್ಲ. ಈ ಒಂದೆ ಗಣಕಯಂತ್ರ ಮತ್ತಿತರ ಆಧುನಿಕ ಸೌಲಭ್ಯಗಳು ಇರಲಿಲ್ಲ. ಆದರೆ ಈಗ ಎಲ್ಲ ಸವಲತ್ತು ಸೌಲಭ್ಯಗಳು ಎಷ್ಟೆಯಿಂದ ಬಳಸಿಲ್ಲ ಇದರ ಪ್ರಯೋಜನವನ್ನು ವಿದ್ಯಾರ್ಥಿಗಳು ಪಡೆದುಕೊಳ್ಳಬೇಕು ಎಂದು ಹೇಳಿದರು.

ಶಿಕ್ಷಣ ಪಡೆಯುವುದು ಕೇವಲ ಪದವಿ ಉದ್ಯೋಗ ಪಡೆಯಲಿಕ್ಕೆ ಎಂಬ ಭಾವನೆ ಸರಿಯಲ್ಲ. ಬದಲಾಗಿ ಸ್ವಯಂ ಉದ್ಯೋಗಕ್ಕೂ ಅವಕಾಶ ನೀಡಬೇಕಾಗಿದ್ದು ಶಿಕ್ಷಣ ಸಂಸ್ಥೆಗಳು ಹೆಚ್ಚು ಸಹಕಾರ ನೀಡಬೇಕಾಗಿದೆ ಎಂದರು.



ಕೃಷ್ಣೇರು ಶ್ರೀ ಜೆಜೆಎಂ ಕಾಲೇಜಿನ ಸುವರ್ಣ ಮಹೋತ್ಸವ ಕಾರ್ಯಕ್ರಮವನ್ನು ಶ್ರೀ ಮಠದ ಆಡಳಿತಾಧಿಕಾರಿ ಡಾ। ವಿ.ಆರ್. ಸುಬ್ರಹ್ಮಣ್ಯ ಉದ್ಘಾಟಿಸಿದರು.

ವಿದ್ಯಾರ್ಥಿಗಳು ಶಿಕ್ಷಕ, ಪಾಲ್ಯಕ್ಷಕ ಬಾಂಧವರೊಂದಿಗೆ ದೂರವಾಗುತ್ತಿದ್ದಾರೆ. ಆಂತ ಪರಿಯಾವರಣದಿಂದ ಸಮಸ್ಯೆ ಆಗುತ್ತದೆ. ವಿದ್ಯಾರ್ಥಿ ಅನುಭೋಗಗಳ ಬಗ್ಗೆ ಹೆಚ್ಚಿನ ಗಮನ ಅಗತ್ಯವಾಗಿದ್ದು ವಿದ್ಯಾರ್ಥಿಗಳ ಸಮಸ್ಯೆ ಬಗೆಹರಿಸಲು ದೇಣಿಗೆ ಶೇ.೫೦ರಷ್ಟು ಬಾಕಿ ಉನ್ನತ ಶಿಕ್ಷಣದಿಂದ ದೂರವಾಗುತ್ತಿದೆ ಎಂದು ತಿಳಿಸಿದರು.

ಹೆಚ್ಚಿನ ಖರ್ಚು ಉನ್ನತ ಶಿಕ್ಷಣ ಪಡೆಯಲು ಇದ್ದು ಸಾಧ್ಯವಾಗುತ್ತಿಲ್ಲ. ಸರಕಾರ ಗುಣಮಟ್ಟದ ಶಿಕ್ಷಣ ನೀಡಲು ಬದ್ಧವಾಗಿದೆ. ಶಿಕ್ಷಣವಿಲ್ಲದಿದ್ದರೆ ಈಗ ಜಾರಿಗೆ ಬಂದಿರುವ ಕೌಶಲ್ಯಾಭಿವೃದ್ಧಿ ಯೋಜನೆಯ ಪ್ರಯೋಜನ ಪಡೆಯಲು ಸಾಧ್ಯವಾಗುವುದಿಲ್ಲ. ಆದಕ್ಕಾಗಿ ವಿದ್ಯಾರ್ಥಿಗಳು ಪದವಿ ಶಿಕ್ಷಣವನ್ನು ಪೂರ್ಣಗೊಳಿಸಿದರೆ ಶಿಕ್ಷಣವು ಎಲ್ಲಿಗೂ ಹೋಗುವುದಿಲ್ಲ ಎಂದರು.

ಉದಯಕುಮಾರ ಮಯ್ಯರವರಲ್ಲಿ ಮುಂದಿನ ಮೂಲಭೂತ ಸೌಲಭ್ಯಗಳಿಗೆ ಶಿಕ್ಷಣ ಸಂಸ್ಥೆ ಪ್ರಾರಂಭಿಸಿದ ಮಹಾನ್ ಯಜ್ಞವನ್ನು ನಾವು ಸೇವೆ ಮಾಡಿಕೊಳ್ಳಬೇಕು ಎಂದು ಸುಬ್ರಹ್ಮಣ್ಯ ಹೇಳಿದರು.

ಕಾರ್ಯಕ್ರಮದ ಉದ್ಘಾಟಿಸಿ ಮಾತನಾಡಿದ ಶ್ರೀ ಮಠದ ಆಡಳಿತಾಧಿಕಾರಿ ಡಾ। ವಿ.ಆರ್.ಸುಬ್ರಹ್ಮಣ್ಯ, ಜೆಜೆಎಂ ಕಾಲೇಜು ಎಷ್ಟೆ ಮಕ್ಕಳಿಗೆ ಬೆಳಕು ನೀಡಿದೆ. ಇಲ್ಲಿ ಕಲಿತ ಅನೇಕರು ವಿದ್ಯಾರ್ಥಿಗಳಿಗೆ ಜೀವನ ನೀಡಿದೆ. ಇಲ್ಲಿನ ಕಾಲೇಜಿನ ಆರಂಭದಿಂದ ಈ ಭಾಗದ ವಿದ್ಯಾರ್ಥಿಗಳಿಗೆ ಉತ್ತಮ ಅವಕಾಶ ದೊರಕಿ ಉದ್ಯೋಗ ಪಡೆದಿದ್ದಾರೆ ಎಂದರು.

ಮಣಿಪಾಲ ಅಕಾಡೆಮಿ ಜನರಲ್ ಎಜುಕೇಷನ್‌ನ ಡಾ। ಎಚ್.ಶಾಂತಿರಾಮ ಮಾತನಾಡಿ, ವಿದ್ಯಾರ್ಥಿಗಳು ಉನ್ನತ ಸ್ಥಿತಿ ದೂರಮಾಡಿಕೊಂಡು ಭವಿಷ್ಯವನ್ನು ಉಜ್ವಲಗೊಳಿಸಿಕೊಳ್ಳಬೇಕು.

ಸುವರ್ಣ ಮಹೋತ್ಸವ ಆಚರಿಸಿಕೊಳ್ಳುತ್ತಿರುವ ಕಾಲೇಜು ಕಳೆದ ಮಹಾ ವ್ಯಾಪ್ತಿ ಸಂಸ್ಥೆಯಿಂದ ಎ ಶ್ರೇಣಿ ಪಡೆದಿದ್ದು ಇದೊಂದು ವಿಶ್ವವಿದ್ಯಾಲಯ ಉನ್ನತ ಕಾಲೇಜು ಎಂದು ಶ್ಲಾಘಿಸಿದರು. ಪ್ರಾಸ್ತಾವಿಕವಾಗಿ ಎಂದು ಶ್ಲಾಘಿಸಿದರು.

ಸುವರ್ಣ ಮಹೋತ್ಸವ ಸಮಿತಿ ಅಧ್ಯಕ್ಷೆ ಅನುಪಮಾ ಭಟ್, ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷೆ ಎಸ್.ಟಿ.ಪದ್ಮಶ್ರೀ ಉಪಸ್ಥಿತರಿದ್ದರು.

ಕಾಲೇಜಿನ ಪ್ರಾಚಾರ್ಯ ಡಾ। ಎಸ್.ಪಿ.ವೀರಭದ್ರಗೌಡ ಸ್ವಾಗತಿಸಿದರು. ಕೆ.ಎಸ್.ಚಂದ್ರಶೇಖರ ಮತ್ತು ಪ್ರಾಧ್ಯಾಪಕಿಯಾದ ಮಹಾಲಕ್ಷ್ಮಿ ನಿರೂಪಿಸಿದರು. ಡಾ। ಸಿ.ಎಂ.ಸಿಂಧಾರ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಡಾ। ಕೆ.ಪಿ.ಪೂಜಾರಿ ವಂದಿಸಿದರು.

Scanned by CamScanner

ಪ್ರಜಾವಾಣಿ ವಿಶೇಷ ಬುಧವಾರ 10 ಫೆಬ್ರವರಿ 2016

ಮೌಲ್ಯಾಧಾರಿತ ಶಿಕ್ಷಣ ನೀಡಿ

ಜೆಸಿಬಿಎಂ ಕಾಲೇಜು ಸುವರ್ಣ ಮಹೋತ್ಸವ ಕಾರ್ಯಕ್ರಮದಲ್ಲಿ ಸಚಿವ ದೇಶಪಾಂಡೆ

ಶೃಂಗೇರಿ: ವ್ಯಕ್ತಿಯೊಬ್ಬರಿಗೂ ಗುಣಮಟ್ಟದ, ಮೌಲ್ಯಯುತ ಶಿಕ್ಷಣ ದೊರಯಬೇಕು. ಶಿಕ್ಷಣ ದುಬಾರಿ ಆಗಬಾರದು ಎಂಬ ಉದ್ದೇಶ ಶಿಕ್ಷಣ ಸಚಿವ ಆರ್.ವಿ. ದೇಶಪಾಂಡೆ ತಿಳಿಸಿದರು.

ಪಟ್ಟಣದ ಜೆಸಿಬಿಎಂ ಕಾಲೇಜಿನ ಸುವರ್ಣ ಮಹೋತ್ಸವ ಕಾರ್ಯಕ್ರಮ ಉದ್ಘಾಟಿಸಿ, ಶಿಕ್ಷಣ ಕೇವಲ ಅಂಕ ಗಳಿಕೆ, ಉದ್ಯೋಗಕ್ಕೆ ಮಾರ್ಗದರ್ಶಕವಾಗದು. ಶಿಕ್ಷಣ ಪಡೆದ ಎಲ್ಲರಿಗೂ ಉದ್ಯೋಗ ಸಿಗಬಾರದು. ಅವರಿಂದ ಸ್ವಯಂ ಉದ್ಯೋಗವೂ ಮುಂದಾಗಬೇಕು. ಇತ್ತೀಚಿನ ದಿನಗಳಲ್ಲಿ ಸಾಕಷ್ಟು ವಿದ್ಯಾರ್ಥಿಗಳು ಉನ್ನತ ಶಿಕ್ಷಣದಿಂದ ಹೊರಬರುತ್ತಿದ್ದಾರೆ. ಈ ನಿಟ್ಟಿನಲ್ಲಿ ಕೇಂದ್ರ, ರಾಜ್ಯ ಸರ್ಕಾರಗಳು ಶಿಕ್ಷಣಕ್ಕೆ ಆದ್ಯತೆ ನೀಡುತ್ತಿವೆ. ಉತ್ತಮ, ಗುಣಮಟ್ಟದ ಶಿಕ್ಷಣ ನೀಡುವುದು ಸರ್ಕಾರದ, ಶಿಕ್ಷಣ ಸಂಸ್ಥೆಗಳ ಜವಾಬ್ದಾರಿಯೂ ಆಗಿದೆ. ನೈತಿಕ, ಮೌಲ್ಯಯುತ ಶಿಕ್ಷಣದ ಅವಶ್ಯಕತೆ ಇದೆ. ಶಿಕ್ಷಕರ ಮಾತ್ರವಲ್ಲ ಮಕ್ಕಳೂ ಆಗಿದ್ದಾರೆ. ಮಕ್ಕಳಲ್ಲಿ ಶಿಸ್ತು, ಸಂಯಮ, ಚಾರಿತ್ರ್ಯ ನಿರ್ಮಾಣವಾಗಬೇಕು. ಚಾರಿತ್ರ್ಯವೇ ವ್ಯಕ್ತಿಯ ಜೀವಾಳ ಎಂದರು.

ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿಯೂ ತೊಡಗಿಸಿಕೊಳ್ಳಬೇಕು. ಕ್ರೀಡೆಯಿಂದ ಉತ್ತಮ ಆರೋಗ್ಯ ಸಂಪಾದಿಸಿಕೊಳ್ಳಬಹುದು. ಶಿಕ್ಷಣ ಗಳಿಸಿ ಆರೋಗ್ಯ ಕಡೆ ಗಮನಹರಿಸಬೇಕು. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಬದುಕುತ್ತಿದ್ದೇವೆ. ಸಾಮಾನ್ಯ ವಿಜ್ಞಾನ, ಸಾಮಾನ್ಯ ಜ್ಞಾನ ಪಡೆಯಿರಿ. ದೇಶ, ವಿದೇಶಗಳಲ್ಲಿ ನಡೆಯುತ್ತಿರುವ ವಿದ್ಯಮಾನ ತಿಳಿದುಕೊಳ್ಳಬೇಕಿದೆ ಎಂದರು.



ಸಮಾರಂಭದಲ್ಲಿ ಸಚಿವ ಆರ್.ವಿ. ದೇಶಪಾಂಡೆ ಮಾತನಾಡಿದರು.

> ಭಾರತ ಯುವಜನರ ಉತ್ತಮ ಮೌಲ್ಯ ಸಂಪತ್ತೆ ರಾಷ್ಟ್ರವಾಗಿದೆ. ಬಡತನದ ರಾಷ್ಟ್ರಗಳಲ್ಲಿ, ಮಧ್ಯಮ ರಾಷ್ಟ್ರಗಳಲ್ಲಿ ಮೌಲ್ಯಗಳು ಇಲ್ಲ. ಶಾಲೆಗಳಲ್ಲಿ ಮಾನವ ಮೌಲ್ಯ, ನೈತಿಕ ಶಿಕ್ಷಣ ಕೇಂದ್ರಗಳಲ್ಲಿ ಸಂಸ್ಕಾರ ಮೌಲ್ಯಾಧಾರಿತ ಶಿಕ್ಷಣ ಮಾನವೀಯ ಮೌಲ್ಯಗಳು ಹೆಚ್ಚಾಗಬೇಕು. ಕೇವಲ ಪಾಠ ಮಾಡಿದರೆ ಮಾನವೀಯತೆ ಬರಲ್ಲ. ಕೇವಲ ಪಾಸ್, ಫೇಲ್‌ಗಳಾ ಮಾತ್ರ ಶಿಕ್ಷಣ ಆಗಬಾರದು.
> ಡಿ. ಆರ್. ವಿ. ದೇಶಪಾಂಡೆ, ಸಚಿವ

ಶಾರದಾಂಬೆ ದರ್ಶನ ಪಡೆದ ಸಚಿವ

ಶೃಂಗೇರಿ: ಇಲ್ಲಿನ ಶಾರದಾ ಪೀಠಕ್ಕೆ ಮಂಗಳವಾರ ಉನ್ನತ ಶಿಕ್ಷಣ ಸಚಿವ ಆರ್.ವಿ. ದೇಶಪಾಂಡೆ ಭೇಟಿ ನೀಡಿ ಶಾರದಾಂಬೆಯ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು.

ಆನಂತರ ಶಂಕರಾಚಾರ್ಯ, ತೋರಣ ಗಣಪತಿ ದೇವಾಲಯಗಳಿಗೆ ಭೇಟಿ ನೀಡಿ ದರ್ಶನ ಪಡೆದರು.

ಸಚಿವರೊಂದಿಗೆ ಶಿಕ್ಷಣ, ಕಂದಾಯ ಇಲಾಖೆಯ ಅಧಿಕಾರಿಗಳು, ಪಕ್ಷದ ಕಾರ್ಯಕರ್ತರು ಇದ್ದರು.

ಎಂದರು.

ಸರ್ಕಾರ ಅನುದಾನಿತ ಶಿಕ್ಷಣ ಸಂಸ್ಥೆಗಳಿಗೆ ಯೋಗ್ಯ ಅನುದಾನ ನೀಡಲು ಚಿಂತನೆ ನಡೆಯುತ್ತಿದೆ. ಶಿಕ್ಷಣ ಸಂಸ್ಥೆಗಳಲ್ಲಿ ನಂಗ್ರಹಿಸಿದ ಶುಲ್ಕಗಳಲ್ಲಿ ಶೇ. 50ರಷ್ಟು ಸರ್ಕಾರಕ್ಕೆ ಪಾವತಿಸಿ, ಉಳಿದ 50ರಷ್ಟು ಅಭಿವೃದ್ಧಿ ಕಾರ್ಯಗಳಿಗೆ ಬಳಸಿಕೊಳ್ಳುವಬಗ್ಗೆನಿರ್ಧಾರತೆಗೆದುಕೊಳ್ಳಲಾಗುವುದು. ಅನುದಾನಿತ ಶಿಕ್ಷಣ ಸಂಸ್ಥೆಗಳು ಉತ್ತಮ ಗುಣಮಟ್ಟದ ಶಿಕ್ಷಣ ನೀಡುತ್ತಿದೆ ಎಂದರು.

ಶ್ರೀಮಠದ ಆಡಳಿತಾಧಿಕಾರಿ ಡಾ. ವಿ.ಆರ್. ಗೌರಿಶಂಕರ್ ಕಾರ್ಯಕ್ರಮ ಉದ್ಘಾಟಿಸಿದರು. ಮಣಿಪಾಲ್ ಶಿಕ್ಷಣ ಸಂಸ್ಥೆಗಳ ಆಡಳಿತಾಧಿಕಾರಿ ಎಚ್. ಶಾಂತಾರಾಂ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಕೆ.ಎಸ್. ಚಂದ್ರಶೇಖರ ರಾವ್, ಆನಂತಪದ್ಮನಾಭ ಭಟ್, ಎಸ್.ಕೆ. ಉಮೇಶ್ ಮತ್ತಿತರರು ಉಪಸ್ಥಿತರಿದ್ದರು.

ಸ್ವಾಮಿಯವರ ವೇದವ್ಯಾಸ ಸ್ವಾಮಿಜಿ, ಸಿ.ವಿ. ಗಿರಿಧರಶಾಸ್ತ್ರಿ ನಿರೂಪಿಸಿದರು.

Scanned by CamScanner

ಪೂರ್ಣಪ್ರಜ್ಞ ಸಂದೇಶ ದಿನಾಂಕ 9 ಫೆಬ್ರವರಿ 2014

ಖಗೋಳ ಕ್ಷೇತ್ರಕ್ಕೆ ದೇಶದ ಕೊಡುಗೆ ಅಪಾರ

ಶೃಂಗೇರಿಯ ಜೆಸಿಬಿಎಂ ಕಾಲೇಜಿನಲ್ಲಿ ವಿಜ್ಞಾನ ಸಂಘದ ಉದ್ಘಾಟನೆ

ಶೃಂಗೇರಿ: ಜಗತ್ತಿನ ವಿಜ್ಞಾನ ಕ್ಷೇತ್ರಕ್ಕೆ ಭಾರತೀಯ ವಿಜ್ಞಾನಿಗಳು ತಮ್ಮದೇ ಆದ ರೀತಿಯಲ್ಲಿ ಸೇವೆ ಸಲ್ಲಿಸುತ್ತಿದ್ದು, ಖಗೋಳ ವಿಜ್ಞಾನ ಕ್ಷೇತ್ರಕ್ಕೆ ಕೊಡುಗೆ ಅಪಾರವಾಗಿದೆ ಎಂದು ಉಡುಪಿ ಪೂರ್ಣಪ್ರಜ್ಞ ಪದವಿ ಕಾಲೇಜಿನ ಭೌತಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಅನಂತ ಪದ್ಮನಾಭ ಭಟ್ ತಿಳಿಸಿದರು.

ಪಟ್ಟಣದ ಜೆಸಿಬಿಎಂ ಕಾಲೇಜಿನಲ್ಲಿ ವಿಜ್ಞಾನ ಸಂಘದ ಉದ್ಘಾಟನಾ ಸಮಾರಂಭ ನೆರವೇರಿಸಿ ಮಾತನಾಡಿದರು. ಭಾರತ ಇಂದು ವಿಜ್ಞಾನ ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಹೊಂದಿದ್ದು, ವೈಜ್ಞಾನಿಕ, ತಂತ್ರಜ್ಞಾನದಲ್ಲಿ ಜಗತ್ತಿನ ಇತರೆ ರಾಷ್ಟ್ರಗಳಂತೆ ಮುಂದುವರಿದಿದೆ. ವಿದ್ಯಾರ್ಥಿಗಳು ವಿಜ್ಞಾನದ ಬಗ್ಗೆ ಕುತೂಹಲ, ಆಸಕ್ತಿ ಮೂಡಿಸಿಕೊಳ್ಳಬೇಕು. ವಿಜ್ಞಾನವನ್ನು ಒಳ್ಳೆಯ ಕೆಲಸಕ್ಕೆ ಬಳಸಿಕೊಳ್ಳಬೇಕು. ಮಾನವ ಕುಲದ ನಾಶಕ್ಕೆ ಬಳಕೆಯಾಗದಿರಲಿ ಎಂದರು.

ಕಾಲೇಜಿನ ಪ್ರಾಚಾರ್ಯ ಎಚ್.ಸಿ. ವೀರಪ್ಪಗೌಡ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಪ್ರೊ. ದತ್ತಾತ್ರೇಯ, ಪ್ರೊ. ಮುನೀರ್ ಅಹ್ಮದ್, ವಿಜ್ಞಾನ ಸಂಘದ ಅಧ್ಯಕ್ಷ ಕೃಷ್ಣ ಕಾರ್ತಿಕ್ ಭಟ್, ಉಪಾಧ್ಯಕ್ಷ ಶ್ರವಣ್ ಕುಮಾರ್, ಜೆಸಿಬಿಎಂ ಪದವಿಪೂರ್ವ ಕಾಲೇಜಿನ ಪ್ರಾಚಾರ್ಯ ಡಾ. ಸಿ.ವಿ. ಗಿರಿಧರ ಶಾಸ್ತ್ರಿ ಮತ್ತಿತರರು ಉಪಸ್ಥಿತರಿದ್ದರು. ಸ್ವಾತಿ ವಿ. ಎನ್. ಸ್ವಾಗತಿಸಿದರು. ಅನುಶ್ರೀ ಹೆಬ್ಬಾರ್ ನಿರೂಪಿಸಿ ಸನ್ನಿಧಿ ವಂದಿಸಿದರು.



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ನಡೆದ ಸಮಾರಂಭದಲ್ಲಿ ಡಾ. ಅನಂತಪದ್ಮನಾಭ ಭಟ್ ಮಾತನಾಡಿದರು.

Scanned by CamScanner

ಚೆಸ್, ರಾಜ್ಯ ಮಟ್ಟಕ್ಕೆ ಎಂ.ಎಸ್.ಅರ್ಚನಾ ಆಯ್ಕೆ



ಶೃಂಗೇರಿ: ಇಲ್ಲಿನ ಶ್ರೀ ಜೆ.ಸಿ.ಬಿ.ಎಂ. ಕಾಲೇಜಿನ ಪ್ರಥಮ ಪಿ.ಯು.ಸಿ. ವಿದ್ಯಾರ್ಥಿನಿ, ಎಂ.ಎಸ್.ಅರ್ಚನಾ ರಾಜ್ಯ ಮಟ್ಟದ ಪದವಿ ಪೂರ್ವ ಕಾಲೇಜುಗಳ ಕ್ರೀಡಾಕೂಟದ, ಚೆಸ್ ಪಂದ್ಯದಲ್ಲಿ ಪಾಲ್ಗೊಳ್ಳುವ ಅರ್ಹತೆಯನ್ನು ಪಡೆದುಕೊಂಡಿದ್ದಾಳೆ. ಚಿಕ್ಕಮಗಳೂರಿನಲ್ಲಿ ಇತ್ತೀಚೆಗೆ ನಡೆದ ಜಿಲ್ಲಾ ಮಟ್ಟದ ಚೆಸ್ ಪಂದ್ಯದಲ್ಲಿ ಭಾಗವಹಿಸಿದ ಈಕೆ, ಅಲ್ಲಿ ಜಯಶಾಲಿಯಾಗುವ ಮೂಲಕ ರಾಜ್ಯ ಮಟ್ಟಕ್ಕೆ ಆಯ್ಕೆಗೊಂಡಿದ್ದಾಳೆ.

ಪಾಕ್ಷಿಕ ಪತ್ರಿಕೆ ದಿ-11

Scanned by CamScanner

ವಿಜ್ಞಾನ ಸಂಘ ಉದ್ಘಾಟನೆ

■ **ವಿಕ ಸುದ್ದಿಲೋಕ** ಶೃಂಗೇರಿ

ಶ್ರೀ ಜೆಸಿಬಿಎಂ ಕಾಲೇಜಿನ ವಿಜ್ಞಾನ ಸಂಘವನ್ನು ಉಡುಪಿ ಪೂರ್ಣ ಪ್ರಜ್ಞಾ ಕಾಲೇಜಿನ ಡಾ.ಅನಂತಪದ್ಮನಾಭ ಭಟ್ ಉದ್ಘಾಟಿಸಿದರು.

ನಂತರ ಅವರು, ವಂಡರ್ಸ್ ಆಫ್ ಕಾಸ್ಮಾಸ್ ಎಂಬ ವಿಷಯದ ಕುರಿತು ಮಾತನಾಡಿ, ಸೌರವ್ಯೂಹ, ಭೂಮಿ ಹಾಗೂ ಇತರ ಗ್ರಹಗಳ ನಡುವಿನ ಸಾಮ್ಯತೆ ಮತ್ತು ಭಿನ್ನತೆ, ನಕ್ಷತ್ರ, ನಿಹಾರಿಕೆ ಹಾಗೂ ಖಗೋಳ ವಿಜ್ಞಾನಕ್ಕೆ ಭಾರತೀಯ ವಿಜ್ಞಾನಿಗಳು ನೀಡಿರುವ ಕೊಡುಗೆಗಳ ಬಗ್ಗೆ ಸ್ಲೈಡ್ ಮೂಲಕ ವಿವರಿಸಿದರು.

ಪ್ರಾಂಶುಪಾಲ ಡಾ.ಎಚ್.ಸಿ. ವೀರಪ್ಪ ಗೌಡ ಅಧ್ಯಕ್ಷತೆ ವಹಿಸಿದ್ದರು. ವಿದ್ಯಾರ್ಥಿ ಕ್ಷೇಮಪಾಲನಾ ಅಧಿಕಾರಿ ಪ್ರೊ. ಎಂ.ದತ್ತಾತ್ರೇಯ ಪ್ರಾಸ್ತಾವಿಕ ಮಾತನಾಡಿದರು. ಪ.ಪೂ. ಕಾಲೇಜು ಪ್ರಾಂಶುಪಾಲ ಡಾ.ಸಿ.ವಿ.ಗಿರಿಧರ್ ಶಾಸ್ತ್ರಿ ಪ್ರೊ.ಮುನೀರ್ ಅಹಮದ್ ಖಾನ್, ವಿಜ್ಞಾನ ಸಂಘದ ಅಧ್ಯಕ್ಷ ಕೃಷ್ಣ ಕಾರ್ತಿಕ್ ಭಟ್ ಹಾಗೂ ಉಪಾಧ್ಯಕ್ಷ ಶ್ರವಣ್ ಕುಮಾರ್ ಹಾಜರಿದ್ದರು. ಅನುಶ್ರೀ ಹೆಬ್ಬಾರ್ ನಿರೂಪಿಸಿ, ವಿ.ಎಲ್.ಸ್ವಾತಿ ಸ್ವಾಗತಿಸಿದರು. ಇ.ಕೆ.ಸನ್ನಿಧಿ ವಂದಿಸಿದರು.



ಶೃಂಗೇರಿಯ ಶ್ರೀ ಜೆಸಿಬಿಎಂ ಕಾಲೇಜು ವಿಜ್ಞಾನ ಸಂಘ ಉದ್ಘಾಟಿಸಿದ ಡಾ.ಅನಂತಪದ್ಮನಾಭ ಭಟ್ ಮಾತನಾಡಿದರು.

ವಿ-೩-೪-೭-೧೪

Scanned by CamScanner

ಪತ್ರಿಕೆ ವಾರ್ತೆ 6-9-14

ಜೆ.ಸಿ.ಬಿ.ಎಂ. ಸತತ ಮೂರನೇ ಬಾರಿಯೂ ಗೆಲುವು

ಕುವೆಂಪು ವಿಶ್ವವಿದ್ಯಾನಿಲಯದ ಅಂತರ ಕಾಲೇಜು ಟೇಬಲ್ ಟೆನ್ನಿಸ್ ಹಾಗೂ ವಿಶ್ವವಿದ್ಯಾನಿಲಯ ತಂಡದ ಆಯ್ಕೆಯು ದಿನಾಂಕ: 21.08.14 ಹಾಗೂ 22.08.14 ರಂದು ಶ್ರೀ ಜೆ.ಸಿ.ಬಿ.ಎಂ ಕಾಲೇಜ್‌ನಲ್ಲಿ ನಡೆದಿದ್ದು ಈ ಪಂದ್ಯಾವಳಿಯ ಉದ್ಘಾಟನೆಯನ್ನು ಕಾಲೇಜಿನ ನಿವೃತ್ತ ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀಯುತ ನಾರಾಯಣ ನಂಬ್ಯಾರ್‌ರವರು ನಡೆಸಿ ಸಭೆಯನ್ನು



ಉದ್ದೇಶಿಸಿ ಮಾತನಾಡಿದರು. ಸಮಾರಂಭದ ಅಧ್ಯಕ್ಷತೆಯನ್ನು ಪ್ರಾಚಾರ್ಯರಾದ ಡಾ. ಹೆಚ್.ಸಿ ವೀರಪ್ಪಗೌಡರು, ಮುಖ್ಯ ಅತಿಥಿಗಳಾಗಿ ಕುವೆಂಪು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ನಿರ್ದೇಶಕರಾದ ಡಾ.ಎಸ್. ಎಂ ಪ್ರಕಾಶ್‌ರವರು ಉಪಸ್ಥಿತರಾಗಿದ್ದು, ಕ್ರೀಡಾಪಟುಗಳಿಗೆ ಶುಭಹಾರೈಸಿದರು. ಇವರೊಂದಿಗೆ ಜೆ.ಸಿ.ಬಿ.ಎಂ ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕರಾದ ಎಂ.ವಿ ಲೋಕೇಶ್‌ರವರು ಸರ್ವರನ್ನು ಸ್ವಾಗತಿಸಿ ಅದೇ ಕಾಲೇಜಿನ ವಿದ್ಯಾರ್ಥಿ ಕ್ಷೇಮ ಪಾಲಾನಾಧಿಕಾರಿಗಳಾದ ದತ್ತಾತ್ರೇಯರವರು ವಂದಿಸಿದರು. ಪಂದ್ಯಾವಳಿಯ ಪಲಿತಾಂಶ ಪುರುಷ ವಿಭಾಗದಲ್ಲಿ ಸತತವಾಗಿ ಮೂರನೇ ಬಾರಿಯೂ ಕೂಡ ಶೃಂಗೇರಿಯ ಜೆ.ಸಿ.ಎಂ.ಕಾಲೇಜು ಪ್ರಥಮ ಸ್ಥಾನವನ್ನು ಗಳಿಸಿದ್ದು, ಸಾಗರದ ಎಲ್‌ಬಿ ಮತ್ತು ಎಸ್.ಬಿ.ಎಸ್ ಕಾಲೇಜು ದ್ವಿತೀಯ ಸ್ಥಾನ ಹಾಗೂ ಚಿಕ್ಕಮಗಳೂರಿನ ಐ.ಪಿ.ಎಸ್.ಜಿ ಕಾಲೇಜು ತೃತೀಯ ಸ್ಥಾನವನ್ನು ಗಳಿಸಿದ್ದಾರೆ. ಮಹಿಳಾ ವಿಭಾಗದಲ್ಲಿ ಜ್ಞಾನ ಸಹ್ಯಾದ್ರಿ ಸ್ಥಾತಕೋತರ ವಿಭಾಗ ಶಂಕರಘಟ್ಟ ಪ್ರಥಮ ಸ್ಥಾನ, ಐ.ಜಿ.ಜಿ.ಐ.ಜಿ.ಡಬ್ಲ್ಯೂಸಿ ಸಾಗರ ದ್ವಿತೀಯ ಸ್ಥಾನ ಹಾಗೂ ಐ.ಪಿ.ಎಸ್.ಜಿ ಕಾಲೇಜು ಚಿಕ್ಕಮಗಳೂರು ತೃತೀಯ ಸ್ಥಾನವನ್ನು ಪಡೆದಿದ್ದಾರೆ.

Scanned by CamScanner

ಶಿಷ್ಯನ ಅಭ್ಯುದಯ ಬಯಸುವವನೆ ನಿಜಗುರು

ಶೃಂಗೇರಿ: ಕತ್ತಲನ್ನು ಹೋಗಲಾಡಿಸಿ, ಬೆಳಕಿನೆಡೆಗೆ ಕೊಂಡೊಯ್ಯುವವನೆ ಗುರುವಾಗಿದ್ದು, ಶಿಷ್ಯನ ಅಭ್ಯುದಯವನ್ನು ಸದಾ ಬಯಸುವವನೆ ನಿಜವಾದ ಶಿಕ್ಷಕ ಎಂದು ಸಾಹಿತಿ ಅಂಬಾತನಯ ಮುದ್ರಾಡಿ ಹೇಳಿದರು.

ಅವರು ಶುಕ್ರವಾರ ಜೆಸಿಬಿಎಂ ಕಾಲೇಜಿನಲ್ಲಿನಲ್ಲಿ ವಿದ್ಯಾರ್ಥಿ ಸಂಘ ಆಯೋಜಿಸಿದ್ದ ಗುರುನಮನ ಹಾಗೂ ಡಾ.ಕೆ.ಬಿ. ರಾಮಕೃಷ್ಣರಾವ್ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದರು. ಉಪನ್ಯಾಸಕ ಮೊದಲು ಸಾಧಕನಾಗಬೇಕು. ನಂತರ ಸಾಧಕ, ಬೋಧಕನಾಗಿ ಬೋಧಕನಾಗಬೇಕು. ವಿದ್ಯಾರ್ಥಿಗಳು ಬೆಳಕಿನ ಕಿಡಿಗಳ ಕುಡಿಗಳಾಗಬೇಕು. ಆದರೆ ಕಿಡಿಗಳು ಬೆಂಕಿಯ ಕಿಡಿಗಳಾಗಬಾರದು. ಮನಸ್ಸಿನ ಕೊಳೆಹೊಲೆಯುವ ಬಂಧಕ ಕೆಲಸ ಗುರುವಿನಿಂದಾಗಬೇಕು. ಜಗತ್ತಿನಲ್ಲಿ ಗುರುವಿಗೆ ವಿಶಿಷ್ಟ ಸ್ಥಾನಮಾನ ಇದೆ. ಬೆಳಕನ್ನು ನೀಡಿ ಕತ್ತಲೆಯನ್ನು ಗುರು. ಅದಿ ಶಂಕರರು ಸದಾ ಈ ಶಿಷ್ಯರ ಅಭ್ಯುದಯಕ್ಕೆ ಕಾರಣೀಭೂತರಾದವರು.



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ಶುಕ್ರವಾರ ಹಳೆ ವಿದ್ಯಾರ್ಥಿ ಸಂಘ ಆಯೋಜಿಸಿದ್ದ ಗುರುನಮನ ಹಾಗೂ ಡಾ.ಕೆ.ಬಿ.ರಾಮಕೃಷ್ಣರಾವ್ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಸಾಹಿತಿ ಅಂಬಾತನಯ ಮುದ್ರಾಡಿ ಉದ್ಘಾಟಿಸಿದರು.

ಸಮೃದ್ಧಿಯಿಂದ ಮೌಲ್ಯಾಧಾರಿತ ಸಂಸ್ಕಾರಕ್ಕಾಗಿ ಶಿಕ್ಷಣವಾಗಬೇಕು. ಇಂದಿನ ವಿದ್ಯಾರ್ಥಿಗಳಲ್ಲಿ ಸ್ವಸ್ಥ ವ್ಯಕ್ತಿಗೆ ಸ್ವಸ್ಥ ಉತ್ತರ ಇರುತ್ತದೆ. ಪ್ರಶ್ನೆಯ ಕೊರತೆ ಇದೆ. ಕೇವಲ ಹೆಬ್ಬೆ ಆಂತ ಗಳಿಸಿದ ಮನಸ್ಸಿಗೆ ಆತ ಸಂಸಾರಕ್ಕಾಗಿ ಎಂಬಂತಾಗಿದೆ. ಜಡವಾದರೆ ಹೃದಯ ಜಡವಾಗುತ್ತದೆ. ಹೃದಯಕ್ಕೆ ಬೆಲೆ ಕೊಡಬೇಕು. ವಿದ್ಯಾರ್ಥಿಗಳು ಪರಿಣಾಮಕಾರಿಯಾಗಿ ಹುಟ್ಟಿಸಂತಾಗಬಾರದು. ಕಣ್ಣನ್ನು ಮತ್ತು ಜೀವಕ್ಕೆ ನಿರೂಪಿಸಬೇಕು. ಬುದ್ಧಿವಂತರಾಗುವುದಲ್ಲ. ಬುದ್ಧಿ ಕಾಯುವ ಶಕ್ತಿ ಬೆಳೆಸಿಕೊಳ್ಳಬೇಕು. ಇದಿಗೆ ವಿದ್ಯೆ, ಬುದ್ಧಿ, ಸಮೃದ್ಧಿ ವಿದ್ಯಾಭ್ಯಾಸ ಬಂದ ಪರಿಣಾಮ ವಿನಯ, ಶ್ರದ್ಧೆ, ಏಕಾಗ್ರತೆ, ಸಂಸ್ಕೃತಿ ಸಮಾಜ ಮುಂಬಯಾಗಿದೆ. ಬೋಧನೆ ಬಂದಿದೆ. ಆದರೆ ಸಾಧನೆ ಹೋಗಿದೆ. ಸಂಕಲ್ಪ ಶುದ್ಧಿಗೆ, ಸಂಕಲ್ಪ ಸಿದ್ಧಿ ಬೇಕು. ತಲೆ ಇರುವುದೇ ಬಾಗುವುದಕ್ಕಾಗಿ, ತಲೆ ಮೂಗುವುದಕ್ಕಾಗಿ, ಆದರೆ ತಲೆ ಬಾಗುವುದಕ್ಕಾಗಿ ಜ್ಞಾ ಎಂದು ಮುದ್ರಾಡಿ ಹೇಳಿದರು.

ಕಾರ್ಯಕ್ರಮದಲ್ಲಿ ಉಪ್ಪಿನಂಗಡಿಯ ವಿಜಯಾ ಕಾಲೇಜಿನ ಪ್ರಾಧ್ಯಾಪಕ ಡಾ.ಎಂ.ಎ. ಹೆಗಡೆ ದಂಪತಿಗಳನ್ನು ಸನ್ಮಾನಿಸಲಾಯಿತು. ಜೆಸಿಬಿಎಂ ಎಜ್ಯುಕೇಶನಲ್ ಟ್ರಸ್ಟಿನ ಅಧ್ಯಕ್ಷ ಕೆ.ಎಸ್. ಪರಮೇಶ್ವರ ಅಡಿಗ, ಕಾರ್ಯದರ್ಶಿ ಕೆ.ಎಸ್. ಲಕ್ಷ್ಮೀನಾರಾಯಣ ಅಡಿಗ, ಪ್ರಾಂಶುಪಾಲ ಕೆ.ಎಸ್. ಚಂದ್ರಶೇಖರ್ ಉಪಸ್ಥಿತರಿದ್ದರು.

ಇದೇ ಸಂದರ್ಭ ಕೆ.ಎಸ್. ಪರಮೇಶ್ವರ ಅಡಿಗ ಮತ್ತು ಪೃಥ್ವಿರಾಜ್ ಸ್ಮಾರಕ ಸಾಮಾಜಿಕ ಅಧ್ಯಯನ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ಕಾಲೇಜಿನ ಎಲ್ಲ ಅಧ್ಯಾಪಕರಿಗೂ ಹೊಸ ಜವಾಬ್ದಾರಿ ನೀಡಲಾಯಿತು. ಕಳೆದ ಸಾಲಿನ ರ್ಯಾಂಕ್ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು.

ಜೆಸಿಬಿಎಂ ಕಾಲೇಜಿನ ಪ್ರಾಧ್ಯಾಪಕ ಡಾ.ಎಂ.ಎ. ಹೆಗಡೆ ಸ್ವಾಗತಿಸಿ, ಎಜ್ಯು.ಎಂ.ಮಾಜಿಯಾಧಿಕಾರಿ ಕರುಣಾ ಮತ್ತು ಜೆಕಟ್ಟ ನಿರೂಪಿಸಿದರು. ಕೆ.ಟಿ.ಮಾಜಿಯಾಧಿಕಾರಿ ವಂದಿಸಿದರು.

Scanned by CamScanner

ಆರೋಗ್ಯಕ್ಕೆ ಕ್ರೀಡೆ ಸಹಕಾರಿ

ತಾಲೂಕು ಮಟ್ಟದ ಸರ್ಕಾರಿ ಪದವಿಪೂರ್ವ ಕಾಲೇಜುಗಳ ಕ್ರೀಡಾಕೂಟ

ಶೃಂಗೇರಿ: ಪ್ರತಿಯೊಬ್ಬ ವ್ಯಕ್ತಿ ಪ್ರಭಾವಶಾಲಿಯಾಗಿ ಹೊರಹೊಮ್ಮಲು ಸ್ವಸ್ಥ ಮನಸ್ಸಿನ ಜತೆಗೆ ದೈಹಿಕ ಸದೃಢತೆ ಬಹಳ ಮುಖ್ಯ. ಈ ನಿಟ್ಟಿನಲ್ಲಿ ಕ್ರೀಡೆಗಳು ವಿದ್ಯಾರ್ಥಿಗಳಲ್ಲಿ ಬೌದ್ಧಿಕ, ದೈಹಿಕ ಬೆಳವಣಿಗೆಗೆ ಸಹಕಾರಿ ಎಂದು ಶೃಂಗೇರಿ ಜೆಸಿಬಿಎಂ ಪದವಿಪೂರ್ವ ಕಾಲೇಜಿನ ಪ್ರಾಚಾರ್ಯ ಡಾ. ಸಿ.ವಿ. ಗಿರಿಧರಶಾಸ್ತ್ರಿ ಅಭಿಪ್ರಾಯಪಟ್ಟರು.

ತಾಲೂಕಿನ ನೆಮ್ಮಾರು ಸರ್ಕಾರಿ ಜೂನಿಯರ್ ಕಾಲೇಜಿನ ಕ್ರೀಡಾಂಗಣದಲ್ಲಿ ತಾಲೂಕು ಮಟ್ಟದ ಸರ್ಕಾರಿ ಪದವಿಪೂರ್ವ ಕಾಲೇಜುಗಳ ಕ್ರೀಡಾಕೂಟದಲ್ಲಿ ಮಾತನಾಡಿದರು.

ವಿದ್ಯಾರ್ಥಿಗಳು ಯೌವನದ ದಿನಗಳಲ್ಲಿಯೇ ಶಾರೀರಿಕ ಶಿಕ್ಷಣಕ್ಕೆ ಮಹತ್ವ ನೀಡಬೇಕು. ಕಲಿಕೆಯ ದಿನಗಳಲ್ಲಿ ಜೀವನಾನುಭವ ಅಳವಡಿಸಿಕೊಳ್ಳಬೇಕು. ಒಳ್ಳೆಯ ಮನಸ್ಸು, ಸದೃಢ ಶರೀರದಿಂದ ಉತ್ತಮ ವ್ಯಕ್ತಿತ್ವ ರೂಪಿಸಿಕೊಳ್ಳಬಹುದು ಎಂದರು.

ಜಿಲ್ಲಾ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಮಾವಿನಕಾಡು ರಂಗನಾಥ್ ಕ್ರೀಡಾಕೂಟ ಉದ್ಘಾಟಿಸಿ ಮಾತನಾಡಿ, ಮಳೆಗಾಲದಲ್ಲಿ ಕ್ರೀಡಾಕೂಟ ನಡೆಸುವುದರಿಂದ ತೊಂದರೆಯಾಗುತ್ತದೆ. ಸರ್ಕಾರ ಈ ಬಗ್ಗೆ ಚಿಂತಿಸಬೇಕು. ಕ್ರೀಡಾಕೂಟಗಳಿಗೆ ಸರ್ಕಾರ ನೀಡುವ ಅಲ್ಪ ಹಣಕಾಸು ನೆರವು ಸಾಲದಾಗುತ್ತದೆ. ಇದರಿಂದ ಕಾರ್ಯಕ್ರಮನಡೆಸಲುಕಷ್ಟವಾಗುತ್ತದೆ. ಸರ್ಕಾರದ ಸೌಲಭ್ಯಗಳು ಸಕಾಲದಲ್ಲಿ ಫಲಾನುಭವಿಗಳಿಗೆ ತಲುಪುತ್ತಿಲ್ಲ. ಮುಂದಿನ ದಿನಗಳಲ್ಲಿ ಕ್ರೀಡಾಕೂಟಗಳು ಮಳೆಗಾಲದವೇಳೆಯಲ್ಲಿನಡೆಯದಿರಲಿ. ಬೇಸಿಗೆಯಲ್ಲಿ ನಡೆದರೂ ಜನರಿಗೆ, ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ ಎಂದರು.



ನೆಮ್ಮಾರಿನಲ್ಲಿ ನಡೆದ ಕ್ರೀಡಾಕೂಟದಲ್ಲಿ ಡಾ. ಗಿರಿಧರ ಶಾಸ್ತ್ರಿ ಮಾತನಾಡಿದರು.

ತಾಲೂಕು ಪಂಚಾಯಿತಿ ಅಧ್ಯಕ್ಷೆ ಶಶಿಕಲಾ ಕ್ರೀಡಾ ಧ್ವಜಾರೋಹಣ ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಲಲಿತಾ ರಾಮಪ್ಪ, ತಾಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಅರುಣಕುಮಾರ್, ನೂತನ್ ಕುಮಾರ್, ತಲಗಾರು ಉಮೇಶ್, ಭಾಗ್ಯಲಕ್ಷ್ಮಿ ಉಮೇಶ್, ಮಾರನ ಕೊಡಿಗೆ ನಟರಾಜ್ ಉಪಸ್ಥಿತರಿದ್ದರು. ಸುಬ್ರಮಣ್ಯ ಸ್ವಾಗತಿಸಿ, ನಿರೂಪಿಸಿ, ವಂದಿಸಿದರು.

ಕನ್ನಡ ಪ್ರಭ ಬೆಂಗಳೂರು ಶನಿವಾರ 2 ಆಗಸ್ಟ್ 2014

Scanned by CamScanner

ಶಿಷ್ಯರ ಏಳ್ಗೆ ಬಯಸುವವರೇ ಗುರು

■ ಸಾಹಿತಿ ಅಂಬಾತನಯ ಮುದ್ರಾಡಿ ಅಭಿಮತ

ಶೃಂಗೇರಿ: ಕತ್ತಲನ್ನು ಹೋಗಲಾಡಿಸಿ ಬೆಳಕಿನೆಡೆಗೆ ಕೊಂಡೊಯ್ಯುವ ಜತೆಗೆ ಶಿಷ್ಯನ ಅಭ್ಯುದಯವನ್ನು ಸದಾ ಬಯಸುವವನೇ ನಿಜವಾದ ಗುರು ಎಂದು ಸಾಹಿತಿ ಅಂಬಾತನಯ ಮುದ್ರಾಡಿ ಹೇಳಿದರು.

ಇಲ್ಲಿನ ಜೆಸಿಬಿಎಂ ಕಾಲೇಜಿನಲ್ಲಿ ಶುಕ್ರವಾರ ನಡೆದ ಗುರು ನಮನ ಹಾಗೂ ಡಾ. ಕೆ.ಬಿ. ರಾಮಕೃಷ್ಣರಾವ್ ದತ್ತಿ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಉಪನ್ಯಾಸಕ ಮೊದಲು ಸಾಧಕನಾಗಬೇಕು. ನಂತರ ಶೋಧಕನಾಗಿ, ಬೋಧಕನಾಗಬೇಕು. ವಿದ್ಯಾರ್ಥಿಗಳ ಮನಸ್ಸಿನ ಕೊಳೆ ತೊಳೆಯುವಂತಹ ಕೆಲಸ ಗುರುವಿನಿಂದಾಗಬೇಕು. ಜಗತ್ತಿನಲ್ಲಿ ಗುರುವಿಗೆ ವಿಶಿಷ್ಟ ಸ್ಥಾನ ಮಾನವಿದೆ ಎಂದರು.

ಆದಿ ಶಂಕರರು ಸದಾ ಕಾಲ ಶಿಷ್ಯರ ಅಭ್ಯುದಯಕ್ಕೆ ಕಾರಣೀ ಭೂತರಾದವರು. ಅಂತಹ ಸದ್ಗುರುವಿನ ಮಾರ್ಗದರ್ಶನದಲ್ಲಿ ಇಂದಿಗೂ ಗುರು ಪರಂಪರೆ ಮುನ್ನಡೆದು ಶಿಷ್ಯರ ಶ್ರೇಯೋಭಿವೃದ್ಧಿಗಾಗಿ ಅವಿರತವಾಗಿ ಶ್ರಮಿಸುತ್ತಿದೆ ಎಂದು ಹೇಳಿದರು.



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ನಡೆದ ಗುರು ನಮನ ಕಾರ್ಯಕ್ರಮದಲ್ಲಿ ಸಾಹಿತಿ ಅಂಬಾತನಯ ಮುದ್ರಾಡಿ ಮಾತನಾಡಿದರು.

ಇಂದಿನ ಶಿಕ್ಷಣ ಉದ್ಯೋಗ ಮತ್ತು ಸಂಪಾದನೆಗಾಗಿ ಎಂಬಂತಾಗಿದೆ. ಮಕ್ಕಳು ವೈದ್ಯರು, ಇಂಜಿನಿಯರ್ ಆಗಬೇಕೆಂಬ ಕನಸು ಕಾಣುವುದೇ ಪೋಷಕರ ಗುರಿಯಾಗಬಾರದು. ಸಂಸ್ಕಾರಕ್ಕಾಗಿ ಶಿಕ್ಷಣ ಎಂಬುದನ್ನು ಎಲ್ಲರೂ ಮನಗಾಣಬೇಕು ಎಂದು ಕಿವಿಮಾತು ಹೇಳಿದರು.

ಇಂದಿನ ವಿದ್ಯಾರ್ಥಿಗಳಲ್ಲಿ ಸಿದ್ಧ ಪ್ರಶ್ನೆಗೆ ಸಿದ್ಧ ಉತ್ತರವಿದೆ. ಇದನ್ನು ಹೊರತುಪಡಿಸಿ ಉಳಿದಂತೆ ಜ್ಞಾನದ ಕೊರತೆಯಿದೆ. ಹೆಚ್ಚು ಅಂಕ ಗಳಿಸಿದ ಮಾತ್ರಕ್ಕೆ ಬುದ್ಧಿವಂತನಾಗುವುದಿಲ್ಲ. ಬುದ್ಧಿ ಜಡವಾದರೆ ಹೃದಯ ಜಡವಾಗುತ್ತದೆ. ಇದೀಗ ವಿದ್ಯೆ, ಬುದ್ಧಿ, ಸಮೃದ್ಧಿ, ವಿಜ್ಞಾನ ಬಂದ ಪರಿಣಾಮ ವಿನಯ, ಶ್ರದ್ಧೆ, ವಿವೇಚನೆ, ಸಂಸ್ಕೃತಿ ಮಾಯವಾಗಿದೆ. ಬೋಧನೆ ಬಂದು ಸಾಧನೆ ಹೋಗಿದೆ ಎಂದು ಹೇಳಿದರು.

ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಎಚ್.ಎಸ್. ಸಿದ್ದಪ್ಪ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಉದ್ಯಮಿ ವೆಂಕಟೇಶಮೂರ್ತಿ, ಮಂಗಳೂರು ಡಿವೈಎಸ್‌ಪಿ ಕೆ.ಎಂ. ಚಂದ್ರಶೇಖರ್, ಜೆಸಿಬಿಎಂ ಕಾಲೇಜಿನ ಪ್ರಾಚಾರ್ಯ ಡಾ. ಎಚ್.ಸಿ. ವೀರಪ್ಪಗೌಡ ಮತ್ತಿತರರಿದ್ದರು.

Scanned by CamScanner

ಅರ್ಚನಾ ರಾಜ್ಯ ಮಟ್ಟಕ್ಕೆ ಆಯ್ಕೆ

ಶೃಂಗೇರಿ: ಚಿಕ್ಕಮಗಳೂರಿನಲ್ಲಿ ನಡೆದ ಜಿಲ್ಲಾ ಮಟ್ಟದ ಪದವಿ ಪೂರ್ವ ಕಾಲೇಜುಗಳ ಕ್ರೀಡಾಕೂಟದಲ್ಲಿ ಶ್ರೀಜೆಸಿಬಿಎಂ ಕಾಲೇಜಿನ ಪಿಯುಸಿ ವಿದ್ಯಾರ್ಥಿನಿ ಎಂ.ಎಸ್. ಅರ್ಚನಾ ಚೆಸ್‌ನಲ್ಲಿ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾಳೆ.



Scanned by CamScanner

ಗುರುವಿನಲ್ಲಿ ಭಕ್ತಿ ಇರಲಿ

ಶೃಂಗೇರಿ, ಸೆ.5: ವಿದ್ಯಾರ್ಥಿಗಳು ಶ್ರದ್ಧೆ, ವಿವೇಚನೆಗಳನ್ನು ಜೀವನದಲ್ಲಿ ಅಳವಡಿಕೊಂಡಾಗ ಗುರುವಿಗೆ ಉತ್ತಮ ವಿದ್ಯಾರ್ಥಿಯಾಗಲು ಸಾಧ್ಯ ಎಂದು ಕನ್ನಡ ರಾಜ್ಯೋತ್ಸವ ಪುರಸ್ಕೃತ ಸಾಹಿತಿ ಅಂಬತನಯ ಮುದ್ರಡಿ ಹೇಳಿದರು.

ಜೆಸಿಬಿಎಂ ಕಾಲೇಜು ಹಳೆ ವಿದ್ಯಾರ್ಥಿಗಳ ಸಂಘ ಹಮ್ಮಿಕೊಂಡಿದ್ದ ಡಾ. ಕೆ.ಬಿ. ರಾಮಕೃಷ್ಣ ರಾವ್ ಪತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ವಿದ್ಯಾರ್ಥಿಗೆ ಗುರುವಿನಲ್ಲಿ ಭಕ್ತಿ ಇರಬೇಕು, ಆಗ ಮಾತ್ರ ಜೀವನದಲ್ಲಿ ಸಾರ್ಥಕತೆ ಬೆಳೆಸಿಕೊಂಡಂತೆ ಎಂದು ಹೇಳಿದರು.

ನ್ಯಾಕಿನಲ್ಲಿ ಎ ಗ್ರೇಡ್ ಪಡೆದ ಜೆ.ಸಿ.ಬಿ.ಎಂ ಕಾಲೇಜನ್ನು ಹಳೆ ವಿದ್ಯಾರ್ಥಿ ಸಂಘ ಗುರುತಿಸಿ ಅಲ್ಲಿರುವ ಉಪನ್ಯಾಸಕರಿಗೆ ನೆನಪಿನ ಕಾಣಿಕೆ ನೀಡಿದರು.

ಹಳೆ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಹೆಚ್.ಎಸ್. ಸಿದ್ದಪ್ಪ ಅಧ್ಯಕ್ಷತೆ ವಹಿಸಿದ್ದರು. ಬಿ.ಹೆಚ್. ವೆಂಕಟೇಶ್ ಮೂರ್ತಿ, ಡಿವೈ.ಎಸ್.ಪಿ. ಕೆ.ಎಂ ಚಂದ್ರಶೇಖರ್, ಜೆ.ಸಿ.ಬಿ.ಎಂ ಕಾಲೇಜಿನ ಪ್ರಾಂಶುಪಾಲ ವೀರಪ್ಪ ಗೌಡ ಮತ್ತಿತರರಿದ್ದರು.

ವೆಂಕಪ್ಪ ಸ್ವಾಗತಿಸಿದರು. ಶರಣ್ಯ ಮಂಜುನಾಥ್ ಗೌಡ ಕಾರ್ಯಕ್ರಮ ನಿರೂಪಿಸಿದರು. ಮಂಜುನಾಥ್ ವಂದಿಸಿದರು. ಪ್ರಜಾವಾಣಿ 5-9-14

Scanned by CamScanner

ಸಚಿವ ಆರ್.ವಿ.ದೇಶಪಾಂಡೆ ಶೃಂಗೇರಿ ಭೇಟಿ

ಚಿಕ್ಕಮಗಳೂರು: ಉನ್ನತ ಶಿಕ್ಷಣ ಹಾಗೂ ಪ್ರವಾಸೋದ್ಯಮ ಸಚಿವ ಆರ್.ವಿ.ದೇಶಪಾಂಡೆ ಸೆ.9 ರಂದು ಶೃಂಗೇರಿಗೆ ಆಗಮಿಸಲಿದ್ದಾರೆ. ಶೃಂಗೇರಿಯ ಜಗದ್ಗುರು ಚಂದ್ರಶೇಖರ ಭಾರತಿ ಮೆಮೋರಿಯಲ್ ಕಾಲೇಜಿನ ರಜತ ಮಹೋತ್ಸವ ಸಮಾರಂಭದಲ್ಲಿ ಮಧ್ಯಾಹ್ನ 3 ಗಂಟೆಗೆ ಭಾಗವಹಿಸಲಿದ್ದಾರೆ.

Scanned by CamScanner

ಶ್ರೀ ಜೆ.ಸಿ.ಬಿ.ಎಸ್. ಕಾಲೇಜ್ ಶೃಂಗೇರಿ-577139

ವಿಜಯ ಕರ್ನಾಟಕ

karnataka.com ಬುಧವಾರ, 3 ಸೆಪ್ಟೆಂಬರ್ 2014, ಕನ್ನಡ

vijayakarnatakaepaper.com www.apps.vijay

ಮಾನವನ ವ್ಯಕ್ತಿತ್ವ ವಿಕಸನಗೊಳ್ಳಲು ಸ್ಪಷ್ಟ ಮನಸ್ಸಿನ ಜತೆಗೆ ದೃಢ ಸದೃಢತೆ ಬಹಳ ಪ್ರಾಮುಖ್ಯ: ಡಾ.ಸಿ.ವಿ.ಗಿರಿಧರಶಾಸ್ತ್ರಿ

ವಿದ್ಯಾರ್ಥಿಗಳು ಉತ್ತಮ ವ್ಯಕ್ತಿತ್ವ ರೂಢಿಸಿಕೊಳ್ಳಲು ಪ್ರಾಚಾರ್ಯ ಡಾ.ಸಿ.ವಿ.ಗಿರಿಧರ ಶಾಸ್ತ್ರಿ ಸಲಹೆ

ಉತ್ತಮ ವ್ಯಕ್ತಿತ್ವ ರೂಢಿಸಿಕೊಳ್ಳಲು ಸಲಹೆ



ಶೃಂಗೇರಿ: ವಿದ್ಯಾರ್ಥಿಗಳು ಯಶಸ್ವಿನ ದಿಶೆಗಳಲ್ಲಿರುವ ಅಂತರವನ್ನು ಕಡಿಮೆ ಮಾಡಲು ಕಠಿಣ ಪರಿಶ್ರಮ ಮತ್ತು ವಿಷಯಗಳು ಕಲಿಕೆಯ ವಿಷಯಗಳಲ್ಲಿ ಜೀವನದ ಒಳ್ಳೆಯ ಅಭ್ಯಾಸವನ್ನು ರೂಢಿಸಿಕೊಂಡು ಉತ್ತಮ ವ್ಯಕ್ತಿತ್ವ ಬೆಳೆಸಿಕೊಳ್ಳಬೇಕು ಎಂದು ಜೆಸಿಬಿಎಸ್ ಕಾಲೇಜಿನ ಪ್ರಾಚಾರ್ಯ ಡಾ.ಸಿ.ವಿ.ಗಿರಿಧರ ಶಾಸ್ತ್ರಿ ಹೇಳಿದರು.

ಅವರು ಸೋಮವಾರ ನೆಮ್ಮಾರು ಪದವಿ ಪೂರ್ವ ಕಾಲೇಜಿನ ಕ್ರೀಡಾಂಗಣದಲ್ಲಿ ಕಾಲೇಜು ಮಟ್ಟದ ಸರಿಯಾದ ಪದವಿಪೂರ್ವ ಕಾಲೇಜುಗಳ ಕ್ರೀಡಾಕೂಟವನ್ನು ಉದ್ಘಾಟಿಸಿದರು. ಒಳ್ಳೆಯ ಮೌಲ್ಯಾಧಾರಿತ ವಿಚಾರದಿಂದ ಉತ್ತಮ ವ್ಯಕ್ತಿತ್ವ ಬೆಳೆಸಿಕೊಂಡು ಸಮಾಜಮುಖಿಯಾಗಿ ಕಾರ್ಯನಿರ್ವಹಿಸಬೇಕು. ಮಾನವನ ವ್ಯಕ್ತಿತ್ವ ವಿಕಸನಗೊಳ್ಳಲು ಸ್ಪಷ್ಟ ಮನಸ್ಸಿನ ಜತೆಗೆ ದೃಢ ಸದೃಢತೆ ಬಹಳ ಪ್ರಾಮುಖ್ಯವಾಗಿದೆ. ವಿದ್ಯಾರ್ಥಿಗಳ ಅಭಿವೃದ್ಧಿಯಲ್ಲಿ ಬೆಳವಣಿಗೆಗಳಲ್ಲಿ ಕ್ರೀಡೆಗಳು ಅತ್ಯಂತ ಸಹಕಾರಿ.ಮಕ್ಕಳು ಆರೋಗ್ಯವಂತರಾಗಿರಲು ಮತ್ತು ಉತ್ತಮ ಬೌದ್ಧಿಕ ಚಟುವಟಿಕೆಗಳಿಗೆ ಇದು ಪೂರಕ ಎಂದರು.

ಜಿ.ಪಂ. ಸದಸ್ಯ ರಂಗನಾಥ್ ಮೊಕ್ಕಾಡಿ,ಮಳೆಗಾಲದಲ್ಲಿ ಮೆಲೆನಾಡಿನಲ್ಲಿ ಕ್ರೀಡಾಕೂಟ ನಡೆಸುವುದೆಂದರೆ ತೊಂದರೆಯೇ ಆಗಿತ್ತು.ಸುಸಜ್ಜಿತ ಕ್ರೀಡಾಂಗಣಗಳಲ್ಲಿ ಕ್ರೀಡಾಕೂಟಗಳು ನಡೆಯುತ್ತಿರುವುದು ಸಂತಸದ ವಿಷಯ. ವಿದ್ಯಾರ್ಥಿಗಳು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಜಿ.ಪಂ. ಅಧ್ಯಕ್ಷೆ ಶಶಿಕಲಾ ಶ್ರೀಧರ್ ಜಾಲಿಮನೆ, ಮೂಡಿಗೆರೆ ತಾಲೂಕು ಪಂಚಾಯತ್ ಅಧ್ಯಕ್ಷೆ ಲತಾ ಉಮೇಶ್ ಪ್ರಧಾನಿಸಿದರು. ಸ್ಥಾನಿಕ ಸಮಿತಿ ಅಧ್ಯಕ್ಷ ಸುಬ್ರಾಯ ಉಪಸ್ಥಿತರಿದ್ದರು. ಸುಬ್ರಹ್ಮಣ್ಯ ಭಟ್ ಸ್ವಾಗತಿಸಿ, ವಂದಿಸಿದರು.

ಗುರುನಮನ ಕಾರ್ಯಕ್ರಮ

ಶೃಂಗೇರಿ: ಶ್ರೀ ಜೆಸಿಬಿಎಸ್ ಕಾಲೇಜಿನ ಹಳೆ ವಿದ್ಯಾರ್ಥಿ ಸಂಘದ ನಿವೃತ್ತ ಉಪನ್ಯಾಸಕರಿಗೆ ಗುರುನಮನ ಕಾರ್ಯಕ್ರಮವನ್ನು ಸೆ.5ರಂದು ಬೆಳಿಗ್ಗೆ 10ಕ್ಕೆ ಕಾಲೇಜಿನಲ್ಲಿ ಏರ್ಪಡಿಸಲಾಗಿದೆ.

ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಎಚ್.ಎನ್.ಸತ್ಯನಾರಾಯಣ ಅಧ್ಯಕ್ಷತೆಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಅಭಿನಂದನಾ ಭಾಷಣ, ಸನ್ಮಾನ ಕಾರ್ಯಕ್ರಮ ಜರುಗಲಿದೆ. ಸಾಮಾನ್ಯ ಪ್ರಸ್ತುತ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾಗಿದ್ದ ಎಸ್.ಎಸ್.ಪಾಟೀಲ್ ಮತ್ತು ಪದವಿ ಕಾಲೇಜಿನ ಪ್ರಾಂಶುಪಾಲರಾಗಿದ್ದ ಎಸ್.ಎಸ್.ಹಿರೇಮಠ್ ಅವರನ್ನು ಸನ್ಮಾನಿಸಲಾಗುವುದು. ಸಾಧಕ ಹಳೆ ವಿದ್ಯಾರ್ಥಿಗಳಾದ ಡಾ.ಕೆ.ಸಿ.ಅಶೋಕ್, ಡಾ.ಎಂ.ಎಸ್.ಮೂರ್ತಿ, ಡಾ.ಎಂ.ಎಸ್.ಮಂಜುನಾಥ್, ಡಾ.ಎಂ.ಎಸ್.ಸುಧೀರ್ ಕುಮಾರ್, ಡಾ.ಎಂ.ಎಸ್.ಸುಧೀರ್ ಕುಮಾರ್, ಡಾ.ಎಂ.ಎಸ್.ಸುಧೀರ್ ಕುಮಾರ್ ಅವರನ್ನು ಸನ್ಮಾನಿಸಲಾಗುವುದು. ಸಾಧಕ ಹಳೆ ವಿದ್ಯಾರ್ಥಿಗಳಾದ ಡಾ.ಕೆ.ಸಿ.ಅಶೋಕ್, ಡಾ.ಎಂ.ಎಸ್.ಮಂಜುನಾಥ

ಟೇಬಲ್ ಟೆನ್ನಿಸ್ ಪಂದ್ಯಾವಳಿ

ಜೆಸಿಬಿಎಂ ಕಾಲೇಜಿಗೆ ಹ್ಯಾಟ್ರಿಕ್ ಜಯ



ಶೃಂಗೇರಿಯಲ್ಲಿ ನಡೆದ ಕುವೆಂಪು ವಿ.ವಿ.ಯ ಟಿ.ಟಿ. ಪಂದ್ಯಾವಳಿಯಲ್ಲಿ ಸ್ಥಳೀಯ ಜೆಸಿಬಿಎಂ ಕಾಲೇಜು ತಂಡವು ಜಯಗಳಿಸಿದೆ.

ಶೃಂಗೇರಿ: ಕುವೆಂಪು ವಿಶ್ವವಿದ್ಯಾನಿಲಯದ ಅಂತರ ಕಾಲೇಜು ಟೇಬಲ್ ಟೆನ್ನಿಸ್ ಪಂದ್ಯಾವಳಿ ಹಾಗೂ ವಿ.ವಿ. ತಂಡದ ಆಯ್ಕೆಯಲ್ಲಿ ಶ್ರೀಜೆಸಿಬಿಎಂ ಕಾಲೇಜಿನ ತಂಡ ಸತತ 3ನೇ ಬಾರಿಗೆ ಪ್ರಥಮ ಸ್ಥಾನ ಗಳಿಸಿ ಹ್ಯಾಟ್ರಿಕ್ ವಿಜಯ ಸಾಧಿಸಿದೆ.

ಕಾಲೇಜಿನಲ್ಲಿ ನಡೆದ ಎರಡು ದಿನಗಳ ಈ ಪಂದ್ಯಾವಳಿಯನ್ನು ಕಾಲೇಜಿನ ನಿವೃತ್ತ ದೈಹಿಕ ಶಿಕ್ಷಣ ನಿರ್ದೇಶಕ ನಾರಾಯಣ ನಂಬಿಯಾರ್ ಉದ್ಘಾಟಿಸಿದರು. ಸ್ಪರ್ಧಿಗಳನ್ನುದ್ದೇಶಿಸಿ ಮಾತನಾಡಿದ ಅವರು, ಕ್ರೀಡೆಗಳಲ್ಲಿ ಭಾಗವಹಿಸುವುದರಿಂದ ದೈಹಿಕ ಮತ್ತು ಮಾನಸಿಕ ಕ್ರಿಯಾಶೀಲತೆ ಉದ್ದೀಪನಗೊಂಡು ಲವಲವಿಕೆಯಿಂದ ಇರಲು ಸಾಧ್ಯವಾಗುವುದು ಎಂದು ತಿಳಿಸಿದರು.

ಪ್ರಾಚಾರ್ಯ ಡಾ.ಎಚ್.ಸಿ. ವೀರಪ್ಪಗೌಡರು ಉದ್ಘಾಟನಾ ಅಧ್ಯಕ್ಷತೆ ವಹಿಸಿದ್ದರು. ಕುವೆಂಪು ವಿ.ವಿ.ಯ ದೈಹಿಕ ಶಿಕ್ಷಣ ನಿರ್ದೇಶಕ ಡಾ.ಎಸ್. ಎಂ.ಪ್ರಕಾಶ್ ಹಾಜರಿದ್ದರು. ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕ ಎಂ.ವಿ.ಲೋಕೇಶ್ ಸ್ವಾಗತಿಸಿದರು. ವಿದ್ಯಾರ್ಥಿ ಕ್ಷೇಮ ಪಾಲನಾಧಿಕಾರಿ ದತ್ತಾತ್ರೇಯ ವಂದಿಸಿದರು.

ಪಂದ್ಯಾವಳಿಯ ಫಲತಾಂಶ: ಪುರುಷರ ವಿಭಾಗ: ಜೆ.ಸಿ.ಬಿ.ಎಂ. ಶೃಂಗೇರಿ (ಪ್ರ), ಎಲ್.ಬಿ.ಎಸ್.ಬಿ.ಎಸ್. ಸಾಗರ (ದ್ವಿ), ಐ.ಡಿ.ಎಸ್.ಜಿ. ಚಿಕ್ಕಮಗಳೂರು (ತೃ). ಮಹಿಳಾ ವಿಭಾಗ: ಜ್ಞಾನಸಹ್ಯಾದ್ರಿ ಶಂಕರಘಟ್ಟ (ಪ್ರ), ಐ.ಜಿ.ಜಿ.ಐ.ಜಿ.ಡಬ್ಲ್ಯೂ.ಸಿ. ಸಾಗರ (ದ್ವಿ), ಐ.ಡಿ.ಎಸ್.ಜಿ. ಚಿಕ್ಕಮಗಳೂರು (ತೃ).

RNI No. KARKAN/2000/4175

Published for the proprietors, Metropolitan Media Company Limited, by R. J. Prakashan at Regd. Office: Du Parc Trinity, 9th Floor, 17, M.G.Road, Bangalore-560 001 (

Scanned by CamScanner

ಉ.ವಾ. 25-8-14

ಟೇಬಲ್ ಟೆನ್ನಿಸ್ ಪಂದ್ಯಾವಳಿ: ಜೆಸಿಬಿಎಂ ಕಾಲೇಜು ಹ್ಯಾಟ್ರಿಕ್ ಸಾಧನೆ

ಶೃಂಗೇರಿ: ಕುವೆಂಪು ವಿಶ್ವ ವಿದ್ಯಾನಿಲಯದ ಅಂತರ ಕಾಲೇಜು ಟೇಬಲ್ ಟೆನ್ನಿಸ್ ಪಂದ್ಯಾವಳಿ ಹಾಗೂ ವಿ.ವಿ. ತಂಡದ ಆಯ್ಕೆಯಲ್ಲಿ ಶ್ರೀ ಜೆಸಿಬಿಎಂ ಕಾಲೇಜಿನ ತಂಡವು ಹ್ಯಾಟ್ರಿಕ್ ವಿಜಯ ಸಾಧಿಸಿದೆ.

ಕಾಲೇಜಿನಲ್ಲಿ ನಡೆದ ಎರಡು ದಿನಗಳ ಈ ಪಂದ್ಯಾವಳಿಯನ್ನು ಕಾಲೇಜಿನ ನಿವೃತ್ತ ದೈಹಿಕ ಶಿಕ್ಷಣ ನಿರ್ದೇಶಕ ನಾರಾಯಣ ನಂಬಿಯಾರ್ ಉದ್ಘಾಟಿಸಿದರು.

ಪ್ರಾಚಾರ್ಯ ಡಾ|ಎಚ್.ಸಿ. ಜೀವಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಕುವೆಂಪು ವಿ.ವಿಯ ದೈಹಿಕ ಶಿಕ್ಷಣ ನಿರ್ದೇಶಕ ಡಾ| ಎಸ್.ಎಂ. ಪ್ರಕಾಶ ಉಪಸ್ಥಿತರಿದ್ದರು.

ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕ ಎಂ.ಪಿ. ಲೋಕೇಶ ಸ್ವಾಗತಿಸಿದರು. ವಿದ್ಯಾರ್ಥಿ ಕ್ಷೇಮ ಪಾಲನಾಧಿಕಾರಿ ದಕ್ಷಾಜ್ಞೇಯ ವಂದಿಸಿದರು. ಪಂದ್ಯಾವಳಿಯ ಫಲಿತಾಂಶ: ಪುರುಷರ ವಿಭಾಗ:-ಜೆ.ಸಿ.ಬಿ.ಎಂ. ಶೃಂಗೇರಿ (ಪ್ರ), ಎಸ್.ಐ.ಎಸ್.ಬಿ.ಎಸ್. ಸಾಗರ (ದ್ವಿ), ಬಿ.ಡಿ.ಎಸ್.ಜಿ. ಚಿಕ್ಕಮಗಳೂರು (ತೃ). ಮಹಿಳಾ ವಿಭಾಗ:- ಜ್ಞಾನಸಹ್ಯಾದ್ರಿ ಶಂಕರಘಟ್ಟ (ಪ್ರ), ಐ.ಜಿ.ಜಿ.ಐ.ಜಿ.ಡಬ್ಲ್ಯೂ.ಸಿ. ಸಾಗರ (ದ್ವಿ), ಐ.ಡಿ.ಎಸ್.ಜಿ. ಚಿಕ್ಕಮಗಳೂರು (ತೃ) ಸ್ಥಾನ ಗಳಿಸಿದ್ದಾರೆ.



ಶೃಂಗೇರಿ ಕುವೆಂಪು ವಿ.ವಿಯ ಟಿ.ಟಿ. ಪಂದ್ಯಾವಳಿಯಲ್ಲಿ ಜಯಗಳಿಸಿದ ಜೆಸಿಬಿಎಂ ಕಾಲೇಜು ತಂಡಕ್ಕೆ ಪ್ರಾಚಾರ್ಯ ಜೀವಪ್ಪ ಶುಭ ಹಾರೈಸಿದರು.

Scanned by CamScanner

ಕ್ರೀಡಾಕೂಟಕ್ಕೆ ಚಾಲನೆ

ಕೃಂಗೇರಿ: ವಿದ್ಯಾರ್ಥಿ ದೆಸೆಯಲ್ಲಿರುವೇ ಶಾರೀರಿಕ ಶಿಕ್ಷಣಕ್ಕೆ ಮಹತ್ವ ನೀಡಬೇಕು ಎಂದು ಶೃಂಗೇರಿ ಪದವಿಪೂರ್ವ ಕಾಲೇಜಿನ ಪ್ರಾಚಾರ್ಯ ಡಾ। ಸಿ.ಎಂ.ಗಿರಿಧರ ಹೇಳಿದರು.

ಸೋಮವಾರ ನೆಮ್ಮಾರು ಸರಕಾರಿ ಜೂನಿಯರ್ ಕಾಲೇಜಿನ ಕ್ರೀಡಾಂಗಣದಲ್ಲಿ ತಾಲೂಕು ಮಟ್ಟದ ಸರಕಾರಿ ಪದವಿಪೂರ್ವ ಕಾಲೇಜುಗಳ ಕ್ರೀಡಾಕೂಟ ಉದ್ಘಾಟಿಸಿ ಮಾತನಾಡಿದರು.

ಜಿ.ಪಂ.ಸದಸ್ಯ ರಂಗನಾಥ ಮಾತನಾಡಿದರು. ತಾ.ಪಂ ಅಧ್ಯಕ್ಷೆ ಪಕಿಳಾ ಕ್ರೀಡಾ ಧ್ವಜಾರೋಹಣ ನೆರವೇರಿಸಿದರು. ಗ್ರಾಪಂ ಅಧ್ಯಕ್ಷೆ ಲಲಿತಾ ರಾಮಪ್ಪ, ತಾ.ಪಂ ಮಾಜಿ ಅಧ್ಯಕ್ಷೆ ನೋತನ್ ಕುಮಾರ್, ಅರುಣ್ ಕುಮಾರ್, ತಲಗಾರು ಉಮೇಶ್, ಭಾಗ್ಯಲಕ್ಷ್ಮೀ ಉಮೇಶ್, ಮಾರನಕೊಡಿಗೆ ನಟರಾಜ್ ಉಪಸ್ಥಿತರಿದ್ದರು. ಪ್ರಾಧ್ಯಾಪಕ ಸ್ವಾಗತಿಸಿ, ನಿರೂಪಿಸಿ, ವಂದಿಸಿದರು.



ಶೃಂಗೇರಿ: ತಾಲೂಕಿನ ನೆಮ್ಮಾರಿನಲ್ಲಿ ಸ.ಪ.ಪೂ.ಕಾಲೇಜುಗಳ ಕ್ರೀಡಾಕೂಟವನ್ನು ಜಿ.ಪಂ ಸದಸ್ಯ ಮಾವಿನಕಾಡು ರಂಗನಾಥ್ ಉದ್ಘಾಟಿಸಿದರು.

Scanned by CamScanner

ಬುಧವಾರ 20 ಆಗಸ್ಟ್ 2014

ಸಂಯುಕ್ತ ಕರ್ನಾಟಕ

ಅಹಿಂಸಾತ್ಮಕ ಸ್ವಾತಂತ್ರ್ಯ ಪಡೆದ ದೇಶ ನಮ್ಮದು



ಶೃಂಗೇರಿಯ ಸ.ಪ.ಪೂ.ಕಾಲೇಜು ಮತ್ತು ಜೆ.ಸಿ.ಬಿ.ಎಂ.ಕಾಲೇಜಿನ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ "ಎಳೆಯರೊಳಗೊಂದಾಗು ಹರೆದಲ್ಲಿ" ಎಂಬ ಉಪನ್ಯಾಸ ಕಾರ್ಯಕ್ರಮವನ್ನು ಎಚ್.ಆರ್ ಕೃಷ್ಣಮೂರ್ತಿಹೆಗ್ಡೆ ಉದ್ಘಾಟಿಸಿದರು.

ಶೃಂಗೇರಿ,ಆ.19:ಪ್ರಪಂಚದಲ್ಲಿ ಅಹಿಂಸಾತ್ಮಕವಾಗಿ ಹೋರಾಡಿ ಸ್ವಾತಂತ್ರ್ಯ ಪಡೆದ ರಾಷ್ಟ್ರ ಬೇರೆ ಎಲ್ಲೂ ನಿದರ್ಶನವಿಲ್ಲ. ಆ ಕೀರ್ತಿ ಗಾಂಧೀಜಿಯವರಿಗೆ ಸಲ್ಲುತ್ತದೆ ಎಂದು ಎ.ಎಸ್ ನಯನ ಹೇಳಿದರು.

ಇಲ್ಲಿನ ಸ.ಪ.ಪೂ.ಕಾಲೇಜು ಮತ್ತು ಜೆ.ಸಿ.ಬಿ.ಎಂ.ಕಾಲೇಜಿನ ಸಂಯುಕ್ತಾಶ್ರಯದಲ್ಲಿ ಸ್ವಾತಂತ್ರ್ಯೋತ್ಸವ ಪ್ರಯುಕ್ತ ನಡೆದ "ಎಳೆಯರೊಳಗೊಂದಾಗು ಹರೆದಲ್ಲಿ" ಎಂಬ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದರು.

ಭಾರತದ ಮೇಲೆ ಆಕ್ರಮಣ ಕ್ರಿ.ಪೂ.ದಲ್ಲೇ ಆರಂಭವಾಯಿತು.ಆದರೆ ನಿಜವಾದ ಸ್ವಾತಂತ್ರ್ಯ ಹರಣವಾದದ್ದು ಬ್ರಿಟಿಷರಿಂದ. ದೇಶವನ್ನು ಸುಮಾರು 250 ವರ್ಷಗಳ ಕಾಲ ಆರ್ಥಿಕವಾಗಿ, ರಾಜಕೀಯವಾಗಿ, ಸಾಂಸ್ಕೃತಿಕವಾಗಿ ಬ್ರಿಟಿಷರು ಶೋಷಣೆ ಗೈದರು ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಕಾಲೇಜು ಅಭಿವೃದ್ಧಿ ಸಮಿತಿ ಅಧ್ಯಕ್ಷ ಎಚ್.ಆರ್.ಕೃಷ್ಣಮೂರ್ತಿ ಹೆಗ್ಡೆ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಅಧ್ಯಕ್ಷತೆಯನ್ನು ಕಾಲೇಜು ಪ್ರಾಚಾರ್ಯ ಉಮೇಶ ವಹಿಸಿದ್ದರು. ಸಲಹಾ ಸಮಿತಿ ಸದಸ್ಯರಾದ ಸುಮಾ ಸೋಮಶೇಖರ್,ಜೆ.ಸಿ.ಬಿ.ಎಂ.ಕಾಲೇಜಿನ ವೆಂಕಪ್ಪ,ಕಾರ್ಯಕ್ರಮಾಧಿಕಾರಿ ಶ್ರೀಮಂದಾರ ಉಪಸ್ಥಿತರಿದ್ದರು. ಕು.ಅನುಷಾ ನಿರೂಪಿಸಿದರು. ಕು.ರಮಾ ಸ್ವಾಗತಿಸಿದರು. ಕು.ಪರಶುರಾಮ ವಂದಿಸಿದರು.

Scanned by CamScanner

5ರಂದು ಜೆಸಿಬಿಎಂ ಕಾಲೇಜಿನಲ್ಲಿ ಉಪನ್ಯಾಸ

ಶೃಂಗೇರಿ: ಶ್ರೀ ಜೆಸಿಬಿಎಂ ಕಾಲೇಜಿನ ಹಳೆ ವಿದ್ಯಾರ್ಥಿ ಸಂಘದಿಂದ ಗುರುನಮನ ಮತ್ತು ಡಾ। ಕೆ.ಬಿ.ರಾಮಕೃಷ್ಣ ರಾವ್ ದತ್ತಿ ಉಪನ್ಯಾಸ ಕಾರ್ಯಕ್ರಮವನ್ನು ಸೆ.5 ರಂದು ಜೆಸಿಬಿಎಂ ಕಾಲೇಜಿನಲ್ಲಿ ಏರ್ಪಡಿಸಲಾಗಿದೆ. ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಎಚ್.ಎಸ್.ಸಿದ್ದಪ್ಪ ಅಧ್ಯಕ್ಷತೆ ವಹಿಸುವರು. ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಸಾಹಿತಿ, ಕಲಾವಿದ ಅಂಬಾತನಯ ಮುದ್ರಾಡಿ ದತ್ತಿ ಉಪನ್ಯಾಸ ನೀಡಲಿದ್ದು ಸಿಂಗಾಪುರದಲ್ಲಿರುವ ಹಳೆಯ ವಿದ್ಯಾರ್ಥಿ ಉದ್ಯಮಿ ಬಿ.ಎಚ್.ವೆಂಕಟೇಶಮೂರ್ತಿ ಮತ್ತು ಮಂಗಳೂರಿನಲ್ಲಿ ಕರ್ತವ್ಯದಲ್ಲಿರುವ ಡಿವೈಎಸ್ಪಿ ಕೆ.ಎಂ.ಚಂದ್ರಶೇಖರ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಇದೇ ಸಂದರ್ಭದಲ್ಲಿ ಪ್ರತಿಭಾ ಪುರಸ್ಕಾರ ನಡೆಯಲಿದೆ ಎಂದು ಕಾರ್ಯದರ್ಶಿ ವೆಂಕಪ್ಪ ತಿಳಿಸಿದ್ದಾರೆ. ಸರ್ವ ಸದಸ್ಯರ ಸಭೆ: ಮಧ್ಯಾಹ್ನ 3 ಕ್ಕೆ ಕಾಲೇಜಿನಲ್ಲಿ ಹಳೆ. ವಿದ್ಯಾರ್ಥಿ ಸಂಘದ ಸರ್ವಸದಸ್ಯರ ಸಭೆಯು ನಡೆಯಲಿದೆ.

ಉದಯವಾಣಿ ದಿನಪತ್ರಿಕೆ ಮಂಗಳೂರು ದಿನಾಂಕ 3/9/14

Scanned by CamScanner

ಷಟಲ್ ಬ್ಯಾಂಡ್ಮಿಂಟನ್ ಪಂದ್ಯಾವಳಿ: ಜೆಸಿಬಿಎಂ ಕಾಲೇಜು ತೃತೀಯ

ಶೃಂಗೇರಿ: 11 ರಿಂದ 13 ರವರೆಗೆ ನಡೆದ ಕುವೆಂಪು ವಿಶ್ವ ವಿದ್ಯಾನಿಲಯ ಮಟ್ಟದ ಅಂತರ ಕಾಲೇಜು ಷಟಲ್ ಬ್ಯಾಡ್‌ಮಿಟನ್ ಪಂದ್ಯಾವಳಿಯಲ್ಲಿ ಶ್ರೀ ಜೆಸಿಬಿಎಂ ಕಾಲೇಜು ತಂಡ ತೃತೀಯ ಸ್ಥಾನ ಗಳಿಸಿದೆ.

ಭಾಗವಹಿಸಿದ ತಂಡದಲ್ಲಿ ಎಚ್.ಈ. ಚೆರೆಣ್ ದೇವ್ ಎಚ್. ಎಲ್.ವಿಜಯ್, ಕೆ.ಯು. ಕಿಶೋರ್, ಕೆ.ನಿತಿಶ್ ನಾಯಕ್ ಮತ್ತು ಎಸ್.ಪಿ.ಸ್ವಾಗತ್ ಇದ್ದರು. ವಿಜೇತ ತಂಡವನ್ನು ಕಾಲೇಜಿನ ಪ್ರಾಂಶುಪಾಲ ಡಾ। ಎಚ್.ಸಿ. ವೀರಪ್ಪಗೌಡ ಹಾಗೂ ದೈಹಿಕ ಶಿಕ್ಷಣ ನಿರ್ದೇಶಕ ಎಂ.ವಿ.ಲೋಕೇಶ್ ಅಭಿನಂದಿಸಿದ್ದಾರೆ.



ಶೃಂಗೇರಿ: ಅಂತರ ಕಾಲೇಜು ಷಟಲ್ ಬ್ಯಾಂಡ್ಮಿಂಟನ್ ಪಂದ್ಯಾವಳಿಯಲ್ಲಿ ತೃತೀಯ ಸ್ಥಾನ ಗಳಿಸಿದ ಜೆಸಿಬಿಎಂ ಕಾಲೇಜಿನ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರ ಹಾಗೂ ಪಾರಿತೋಷಕ ನೀಡಲಾಯಿತು.

Scanned by CamScanner

ವಿಕ ಚಿತ್ರಲೋಕ

'ಎಳೆಯರೊಂದಾಗು' ಕಾರ್ಯಕ್ರಮ

■ **ವಿಕ ಸುದ್ದಿಲೋಕ** ಜಯಪುರ

ಪಟ್ಟಣದ ಶ್ರೀಆದಿಚುಂಚನಗಿರಿ ಪದವಿ ಪೂರ್ವ ಕಾಲೇಜಿನಲ್ಲಿ ಶೃಂಗೇರಿ ಜೆಸಿಬಿಎಂ ಕಾಲೇಜಿನ ಕನ್ನಡ ಭಾಷಾ ಚೈತನ್ಯ ತಂಡದಿಂದ 'ಎಳೆಯರೊಂದಾಗು ಹರೆಯದಲಿ' ಕಾರ್ಯಕ್ರಮ ನಡೆಯಿತು.

ನುಡಿಚಿತ್ರ ಸಂಗ್ರಾಹಕ ಶಂ.ನ. ಶೇಷಗಿರಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಜೆಸಿಬಿಎಂ ಕಾರ್ಯ ಶ್ಲಾಘನೀಯವಾಗಿದ್ದು, ಶೃಂಗೇರಿ ಹಾಗೂ ಜಯಪುರ ಕಾಲೇಜುಗಳು ರಾಜ್ಯಮಟ್ಟದಲ್ಲಿ ಹೆಸರು ಮಾಡಿವೆ. ಉತ್ತಮ ಶಿಕ್ಷಣ ಪಡೆದ ವಿದ್ಯಾರ್ಥಿಗಳು ರಾಜ್ಯ ಹಾಗೂ ರಾಷ್ಟ್ರಮಟ್ಟದ ಸಾಧನೆ ಮಾಡುತ್ತಿರುವುದು ಪ್ರಶಂಸನೀಯ ಎಂದರು. ಕಾಲೇಜು ಕನ್ನಡ ವಿಭಾಗದ ಮುಖ್ಯಸ್ಥ ವೆಂಕಪ್ಪ ಪ್ರಾಸ್ತಾವಿಕ ಮಾತನಾಡಿ, ಸುವರ್ಣ ಮಹೋತ್ಸವದ ಅಂಗವಾಗಿ 30 ಶಾಲೆಗಳಲ್ಲಿ 46 ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿದೆ ಎಂದರು. ಉಪನ್ಯಾಸಕ ಅಕ್ಷಯ, ಬಿಜಿಎಸ್ ಆಂಗ್ಲ ಮಾಧ್ಯಮ ಪ್ರೌಢಶಾಲಾ ಮುಖ್ಯ ಶಿಕ್ಷಕ ರಾಕೇಶ್ ಮಾತನಾಡಿದರು. ಅಧ್ಯಕ್ಷತೆ ವಹಿಸಿದ್ದ ಮುಖ್ಯ ಶಿಕ್ಷಕ ಮಾಯಗಯ್ಯ, ಶಿಕ್ಷಕರಾದ ನಂಜೇಶಪ್ಪ, ನಾರಾಯಣರೆಡ್ಡಿ, ಬೋರಯ್ಯ, ವಿದ್ಯಾರ್ಥಿ ಪ್ರತಿನಿಧಿ ನೀಡಿದ ಹಳೆಯ ವಿದ್ಯಾರ್ಥಿ ಡಾ. ಶಿವಪ್ರಕಾಶ್ ಅವರನ್ನು ಅಭಿನಂದಿಸಲಾಯಿತು.

ಶಿಲ್ಪಾ ಪ್ರಾರ್ಥಿಸಿ, ಮಹೇಶ್ ಸ್ವಾಗತಿಸಿ, ಅನನ್ಯ ವಂದಿಸಿದರು.



ಜಯಪುರದ ಶ್ರೀ ಆದಿಚುಂಚನಗಿರಿ ಪದವಿ ಪೂರ್ವ ಕಾಲೇಜಿನಲ್ಲಿ ಸೋಮವಾರ ನಡೆದ ಶೃಂಗೇರಿ ಜೆಸಿಬಿಎಂ ಕಾಲೇಜಿನ ಕನ್ನಡ ಭಾಷಾ ಚೈತನ್ಯ ತಂಡದ 'ಎಳೆಯರೊಂದಾಗು ಹರೆಯದಲಿ' ಕಾರ್ಯಕ್ರಮವನ್ನು ನುಡಿಚಿತ್ರ ಸಂಗ್ರಾಹಕ ಶಂ.ನ. ಶೇಷಗಿರಿ ಉದ್ಘಾಟಿಸಿದರು.

ದಿ: 22.6.14

Scanned by CamScanner

ನವರಸ ಅಭಿವ್ಯಕ್ತಿಗೆ ನಾಟಕ ಉತ್ತಮ ವೇದಿಕೆ

ಶೃಂಗೇರಿ: ಭಾರತೀಯ ನಾಟ್ಯಶಾಸ್ತ್ರದಲ್ಲಿ ವಿವರಿಸಿರುವ ನವರಸಗಳ ಅಭಿವ್ಯಕ್ತಿಗೆ ನಾಟಕ ಮಾಧ್ಯಮ ಒಂದು ಸಮರ್ಪಕ ವೇದಿಕೆಯಾಗಿದೆ ಎಂದು ಕಿರುತೆರೆ ನಿರ್ದೇಶಕ, ಯಕ್ಷಗಾನ ಅಕಾಡೆಮಿ ಮಾಜಿ ಸದಸ್ಯ ರಮೇಶ ಬೇಗಾರ ತಿಳಿಸಿದರು.

ಜೆಸಿಬಿಎಂ ಕಾಲೇಜಿನಲ್ಲಿ ಎನ್ನೆಸ್ಸೆಸ್ ವಿದ್ಯಾರ್ಥಿಗಳಿಗಾಗಿ ಶ್ರೀ ಭಾರತಿ ತೀರ್ಥ ಸಾಂಸ್ಕೃತಿಕ ಮತ್ತು ಜಾನಪದ ಅಧ್ಯಯನ ಕೇಂದ್ರ ಟ್ರಸ್ಟ್ ಆಯೋಜಿಸಿದ್ದ ಮೂರನೇ ವರ್ಷದ ಯುವರಂಗ ಪರಿಕ್ರಮಣ ರಂಗಭೂಮಿ ತರಬೇತಿ ಕಾರ್ಯಾಗಾರದಲ್ಲಿ ಮಾತನಾಡಿದರು.

ಇಂದು ಕಲಾಕ್ಷೇತ್ರವು ಉದ್ಯೋಗದ ದೃಷ್ಟಿಯಿಂದ ಕೂಡಾ ವಿಶೇಷ ಮಾನ್ಯತೆ ಪಡೆದಿದೆ. ಆ ದಿಕ್ಕಿನಲ್ಲಿ ಸಾಧನೆ ಮಾಡುವ ಆಸಕ್ತ ವಿದ್ಯಾರ್ಥಿಗಳು ಈ ರಂಗ ತರಬೇತಿಯ ಪ್ರಯೋಜನ ಪಡೆಯಬಹುದು. ಆಂಗಿಕ ಅಭಿನಯ ಮತ್ತು ಧ್ವನಿ ತರಂಗಗಳ ಏರಿಳಿತಗಳ ಅಭ್ಯಾಸದ ಮೂಲಕ ಏಕಾಗ್ರತೆ ಹಾಗೂ ಧೈರ್ಯ ವೃದ್ಧಿಸಲು ನೆರವಾಗುತ್ತವೆ ಎಂದರು.

ಡುಂಡಿರಾಜ ಅವರ ಓಡಿ ಹೋದ ಹುಡುಗಿ ಮತ್ತು ತೇಜಸ್ವಿ ಅವರ ಕಿರಗೂರಿನ ಗಯ್ಯಾಳಿಗಳು ಕೃತಿಗಳನ್ನು ಈ ವರ್ಷದ ರಂಗಪಠ್ಯದಲ್ಲಿ ಅಳವಡಿಸಿ ತರಬೇತಿ ನೀಡಲಾಗುವುದು ಎಂದರು.

ಎನ್ನೆಸ್ಸೆಸ್ ಅಧಿಕಾರಿ ಎ.ಜಿ. ಪ್ರಶಾಂತ ಮಾತನಾಡಿದರು. ವಿದ್ಯಾರ್ಥಿ ಕಿರಣಕುಮಾರ ಕಾರ್ಯಕ್ರಮ ನಿರೂಪಿಸಿದರು.

ಉ ವಾ ---- 31-8-14

Scanned by CamScanner

ರೆಡ್‌ಕ್ರಾಸ್ ಕಾರ್ಯಕ್ರಮ

■ ಪ್ರಕೃತಿ ವಿಕೋಪದಂತ ಸಂದರ್ಭದಲ್ಲಿ ರೆಡ್‌ಕ್ರಾಸ್ ಕಾರ್ಯಕರ್ತರ ಸೇವೆ ಅನನ್ಯ

ವಿಶ್ವಶಾಂತಿ ಸ್ಥಾಪನೆಯಲ್ಲಿ ರೆಡ್‌ಕ್ರಾಸ್ ಪಾತ್ರ ಪ್ರಮುಖ



ಶೃಂಗೇರಿ: ಜೆಸಿಬಿಎಂ ಕಾಲೇಜಿನಲ್ಲಿ ಯುವ ರೆಡ್‌ಕ್ರಾಸ್ ಘಟಕದ ಕಾರ್ಯಕ್ರಮವನ್ನು ಡಾ। ಅನಿತಕುಮಾರ್ ಉ.. ದರು.

ಶೃಂಗೇರಿ: ವಿಶ್ವಶಾಂತಿ ಸ್ಥಾಪನೆಯಲ್ಲಿ ರೆಡ್‌ಕ್ರಾಸ್ ಅಕ್ಷುತ್ತಮವಾಗಿ ಕಾರ್ಯ ನಿರ್ವಹಿಸುತ್ತಿದೆ ಎಂದು ಡಾ। ಅನಿತಕುಮಾರ್ ಹೇಳಿದರು.

ಜೆಸಿಬಿಎಂ ಕಾಲೇಜಿನಲ್ಲಿ ಯುವ ರೆಡ್‌ಕ್ರಾಸ್ ಘಟಕದ ಕಾರ್ಯಕ್ರಮಗಳ ಉದ್ಘಾಟನಾ ಕಾರ್ಯಕ್ರಮ ನೆರವೇರಿಸಿ ಅವರು ಮಾತನಾಡಿದರು.

ಪ್ರಕೃತಿ ವಿಕೋಪಗಳ ಸಂದರ್ಭದಲ್ಲಿ ರೆಡ್‌ಕ್ರಾಸ್ ಕಾರ್ಯಕರ್ತರ ಸೇವೆ ಅಮೂಲ್ಯವಾದದ್ದು. ಕಳೆದ ವರ್ಷ ಉತ್ತರಾಂಚಲದಲ್ಲಿ ಉಂಟಾದ ಪ್ರಕೃತಿ ವಿಕೋಪ ಸಂದರ್ಭದಲ್ಲಿ ಭಾರತೀಯ ರೆಡ್‌ಕ್ರಾಸ್ ಮಾಡಿದ ಸೇವೆ ಅಮೂಲ್ಯವಾದದ್ದು ಎಂದರು. ಕೆ.ಸಿ.ಬಿ.ಎಂ ವಿದ್ಯಾಪೂರ್ವ ಕಾಲೇಜಿನ ಪ್ರಾಚಾರ್ಯ ಡಾ। ಸಿ.ವಿ. ಗಿರಿಧರ ಶಾಸ್ತ್ರಿ ಮಾತನಾಡಿ, ದೇಶದ ಬಗ್ಗೆ ಅಭಿಮಾನವನ್ನು ಭವಾತ್ಮಕ ಚಿಂತನೆಯನ್ನು ಯುವಜನತೆ ಬೆಳೆಸಿಕೊಳ್ಳಬೇಕಾದ ಅವಶ್ಯಕತೆ ಇದೆ ಎಂದರು.

ಜೆ.ಸಿ.ಬಿ.ಎಂ. ಪದವಿ ಕಾಲೇಜಿನ ಪ್ರಾಚಾರ್ಯ ಡಾ। ಎಚ್.ಸಿ. ವೀರಪ್ಪ ಗೌಡ ಅಧ್ಯಕ್ಷತೆ ವಹಿಸಿ ಮಾತನಾಡಿ, ದೇಶದ ಆರ್ಥಿಕ ಸ್ಥಿತಿಯನ್ನು ವಿಮರ್ಶಿಸುತ್ತಾ ವಿಶ್ವದ ಪ್ರಬಲ ರಾಷ್ಟ್ರಗಳು ಆರ್ಥಿಕ ಹಿಂಜರಿತದಿಂದ ತತ್ತರಿಸಿದಾಗಲೂ ಭಾರತ ಭದ್ರತೆ ಕಾಪಾಡಿಕೊಂಡಿತು. ದೇಶದ ಮಾನವ ಸಂಪನ್ಮೂಲದ ವೈಶಿಷ್ಟವನ್ನು ಎತ್ತಿತೋರಿಸಿ ಭಾರತೀಯ ಸಂಸ್ಕೃತಿಯ ಸಾಧನೆ ಬಗೆಗೆ ಹೆಮ್ಮೆ ಪಡುವಂತದ್ದು ಎಂದರು.

ಸಭೆಯಲ್ಲಿ ಎನ್ಸೆಸ್ ಅಧಿಕಾರಿಗಳಾದ ಪ್ರಶಾಂತ್, ಲಕ್ಷ್ಮೀನಾರಾಯಣ್ ಮತ್ತು ಎನ್ಸಿಸಿ ಅಧಿಕಾರಿಗಳಾದ ಡಾ। ಜಿ.ಎನ್. ಕೆ. ಉಮೇಶ ಇದ್ದರು.

ಉದಯವಾಣಿ ಮಾಣಿಪಾಡಿ ಆಗಸ್ಟ್ 17, 2014

Scanned by CamScanner



ತೊರೆಹಡ್ಲು ಶಾಲಾ ಆವರಣದಲ್ಲಿ ಪದವಿ ಕನ್ನಡ ವಿದ್ಯಾರ್ಥಿಗಳ ಕಾರ್ಯ ಯೋಜನೆಯನ್ನು ಗಾ.ಪಂ. ಉಪಾಧ್ಯಕ್ಷ ಸುರೇಶ್.ಕೆ.ಡಿ ಉದ್ಘಾಟಿಸಿದರು.

ದೌರ್ಜನ್ಯಕ್ಕೊಳಗಾದವರಿಗೆ ಮಾನಸಿಕ ಸ್ಥೈರ್ಯ ತುಂಬಿ

ಶೃಂಗೇರಿ, ಆ. 16: ವಿದ್ಯಾರ್ಥಿಗಳು ಸಮಾಜ ಮುಖಿಯಾದ ಚಟುವಟಿಕೆಗಳಲ್ಲಿ ಕ್ರಿಯಾಶೀಲರಾಗಿ ತೊಡಗುವುದರಿಂದ ತಮ್ಮ ಪ್ರಗತಿಯೊಂದಿಗೆ ಸಮಾಜದ ಬಗ್ಗೆಯು ಕಳಕಳಿ ಮೂಡುತ್ತದೆ ಎಂದು ಅಡ್ಡಗದ್ದೆ ಗಾ.ಪಂ. ಉಪಾಧ್ಯಕ್ಷ ಸುರೇಶ್. ಕೆ.ಡಿ ಹೇಳಿದರು.

ಜೆ.ಸಿ.ಬಿ.ಎಂ.ಕಾಲೇಜು. ಕನ್ನಡ ವಿಭಾಗ ಮತ್ತು ಸ.ಪ್ರೌ.ಶಾಲಾ ತೊರೆಹಡ್ಲು ಇವರ ಸಂಯುಕ್ತ ಆಶ್ರಯದಲ್ಲಿ ತೊರೆಹಡ್ಲು ಶಾಲಾ ಆವರಣದಲ್ಲಿ 'ಎಳೆಯರೊಳಗೊಂದಾಗು ಹರೆಯುವಲ್ಲಿ' ವಿದ್ಯಾರ್ಥಿಗಳ ಕಾರ್ಯಯೋಜನೆಯನ್ನು ಉಧ್ಘಾಟಿಸಿ ವಿದ್ಯಾರ್ಥಿಗಳಲ್ಲಿ ಅಗತ್ಯವಾಗಿ ಬೇಕಾಗುವ ವಿಧೇಯತೆಯಿಂದ ಕ್ರಿಯಾಶೀಲತೆ ಎದ್ದು ಕಾಣಬತ್ತದೆ. ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ಹಾಗೂ ಮಕ್ಕಳಿಗೆ ಮಾನಸಿಕ ಸ್ಥೈರ್ಯ ತುಂಬಿ ಬದುಕಿನ ಚಿಂತನೆ ಬಗ್ಗೆ ಯುವ ಜನಾಂಗ ಚಿಂತಿಸಬೇಕೆಂದು ತಿಳಿಸಿದರು.

ಕನ್ನಡ ಉಪನ್ಯಾಕ ಸಂತೋಷ್ ಪ್ರಾಸ್ತಾವಿಕ ಮಾತನಾಡಿ ಶಾಲಾ. ಕಾಲೇಜು ವಿದ್ಯಾರ್ಥಿಗಳಿಗೆ ಪೋಷಕ ವರ್ಗದವರಿಗೆ ಚಟುವಟಿಕೆಗಳ ಕಾರ್ಯ ವರದಿ ಸಿದ್ದಪಡಿಸುದು ಈ ಯೋಜನೆಯ ಮುಖ್ಯ ಉದ್ದೇಶವೆಂದು ತಿಳಿಸಿದರು. ಮುಖ್ಯಅತಿಥಿ ರಾಮಕೃಷ್ಣ ಅಂಬಳ್ಳೂರು, ಕಾಡಪ್ಪ ಗೌಡರು, ಬೇಗಾನೆ ಅಧ್ಯಕ್ಷತೆ ವಹಿಸಿದ್ದರು. ಸರ್ಕಾರಿ ಪ್ರೌಡಶಾಲಾ ತೊರೆಹಡ್ಲು ಮುಖ್ಯೋಪಾಧ್ಯಯ ವಿನೋದ ಕುಮಾರಿ ಹೆಚ್.ವಿ ಮತ್ತು ಅಶೋಕ್ ಬೇಗಾನೆ ಉಪಸ್ಥಿತರಿದ್ದರು.

ಕೃಪಾಕೆ.ವಿಸ್ವಾಗತಿಸಿದರು.ವಿದ್ಯಾರ್ಥಿನಿ ಸ್ವಾತಿ ಕಾರ್ಯಕ್ರಮ ನಿರೂಪಿಸಿದರು. ಕೀರ್ತಿ ದೇವಾಡ ಪ್ರಾರ್ಥಿಸಿದರು. ನಿಕ್ಷಯ್

Scanned by CamScanner

'ಯುವಕರು ಸಮಾಜ ಸೇವೆಯಲ್ಲಿ ತೊಡಗಿಕೊಳ್ಳಿ'

ಶೃಂಗೇರಿ: ವಿಶ್ವ ಶಾಂತಿ ಸ್ಥಾಪನೆಯಲ್ಲಿ ರೆಡ್ ಕ್ರಾಸ್ ಅತ್ಯುತ್ತಮವಾಗಿ ಕಾರ್ಯ ನಿರ್ವಹಿಸುತ್ತಿದೆ ಎಂದು ಡಾ. ಅನಿತಕುಮಾರ್ ಹೇಳಿದರು.

ಅವರು ಶುಕ್ರವಾರ ಜೆಸಿಬಿಎಂ ಕಾಲೇಜಿನಲ್ಲಿ ಯುವ ರೆಡ್‌ಕ್ರಾಸ್ ಘಟಕದ ಕಾರ್ಯಕ್ರಮಗಳ ಉದ್ಘಾಟನಾ ಕಾರ್ಯಕ್ರಮ ನೆರವೇರಿಸಿ ಮಾತನಾಡಿದರು. ಪ್ರಕೃತಿ ವಿಕೋಪಗಳ ಸಂದರ್ಭ ರೆಡ್‌ಕ್ರಾಸ್ ಕಾರ್ಯಕರ್ತರ ಸೇವೆ ಅಮೂಲ್ಯವಾದದು. ಇಂತಹ ಸಂಸ್ಥೆಗಳಲ್ಲಿ ಯುವ ಜನಾಂಗ ಹೆಚ್ಚು ತೊಡಗಿಸಿಕೊಳ್ಳುವ ಮೂಲಕ ಸಮಾಜ ಸೇವೆಗೆ ಮುಂದಾಗಬೇಕು ಎಂದರು.

ಜೆಸಿಬಿಎಂ ಪದವಿಪೂರ್ವ ಕಾಲೇಜಿನ ಪ್ರಾಚಾರ್ಯ ಡಾ.ಸಿ.ವಿ.ಗಿರಿಧರ ಶಾಸ್ತ್ರಿ ಮಾತನಾಡಿ, ಯುವಜನತೆ ದೇಶದ ಬಗ್ಗೆ ಅಭಿಮಾನ, ಧನಾತ್ಮಕ ಚಿಂತನೆ, ಬೆಳೆಸಿಕೊಳ್ಳಬೇಕು ಎಂದರು.

ಶ್ರೀ ಜೆಸಿಬಿಎಂ ಪದವಿ ಕಾಲೇಜಿನ ಪ್ರಾಚಾರ್ಯ ಡಾ.ಎಚ್.ಸಿ.ವೀರಪ್ಪ ಗೌಡ ಅಧ್ಯಕ್ಷತೆ ವಹಿಸಿ ಮಾತನಾಡಿ, ದೇಶದ ಆರ್ಥಿಕ ಸ್ಥಿತಿಯನ್ನು ವಿಮರ್ಶಿಸುತ್ತಾ ವಿಶ್ವದ ಪ್ರಬಲ ರಾಷ್ಟ್ರಗಳು ಆರ್ಥಿಕ ಹಿಂಜರಿತದಿಂದ ಶತ್ರುರಾಷ್ಟ್ರಗಳೂ ಭಾರತ ಸ್ನೇಹ ಕಾಪಾಡಿಕೊಂಡಿಹು. ದೇಶದ ಮಾನವ ಸಂಪನ್ಮೂಲವೈವಿಧ್ಯಪೂರ್ಣವಾದುದು. ಭಾರತೀಯ ಸಂಸ್ಕೃತಿ, ಸಾಧನೆ ಹೆಮ್ಮೆ ಪಡುವಂತಹದು ಎಂದರು.

ಎನ್.ಎಸ್.ಎಸ್. ಅಧಿಕಾರಿಗಳಾದ ಪ್ರಶಾಂತ್, ಲಕ್ಷ್ಮೀನಾರಾಯಣ್ ಮತ್ತು ಎನ್.ಸಿ.ಸಿ. ಅಧಿಕಾರಿ ಡಾ.ಇ.ಎಸ್.ಕೆ. ಉಡುಪ ಹಾಜರಿದ್ದರು.



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ಯುವ ರೆಡ್‌ಕ್ರಾಸ್ ಘಟಕದ ಕಾರ್ಯಕ್ರಮಗಳನ್ನು ಡಾ.ಅನಿತಕುಮಾರ್ ಉದ್ಘಾಟಿಸಿದರು.

Scanned by CamScanner

'ಎಳೆಯರೊಳಗೊಂದಾಗು ಹರೆಯದಲಿ' ಕಾರ್ಯಕ್ರಮ

ಶೃಂಗೇರಿ: ಮಸಿಗೆಯ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶ್ರೀ ಜೆಸಿಬಿಎಂ ಕಾಲೇಜಿನ ಕನ್ನಡ ವಿಭಾಗದಿಂದ 'ಎಳೆಯರೊಳಗೊಂದಾಗು ಹರೆಯದಲಿ' ಎಂಬ ಶೀರ್ಷಿಕೆಯ ಶಾಲಾ ಮಕ್ಕಳ, ಪೋಷಕರ ಮತ್ತು ಅಧ್ಯಾಪಕರ ಕಾರ್ಯಕ್ರಮ ನಡೆಯಿತು.

ಶಾಲಾಭಿವೃದ್ಧಿ ಸಮಿತಿ ಉಪಾಧ್ಯಕ್ಷೆ ಸುನಂದಾ ಕಾರ್ಯಕ್ರಮ ಉದ್ಘಾಟಿಸಿದರು.

ನಂತರ ಮಾತನಾಡಿದ ಜೆಸಿಬಿಎಂ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಕೆ.ಎಸ್.ವೆಂಕಪ್ಪ ಕಾಲೇಜು ವಿದ್ಯಾರ್ಥಿಗಳು ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವುದರ ಮೂಲಕ ಸದಾ ಕ್ರಿಯಾಶೀಲರಾಗಿರಬೇಕು. ಪದವಿ ತರಗತಿಯ ಕನ್ನಡ ವಿಭಾಗದ ವಿದ್ಯಾರ್ಥಿಗಳು ಈ ಕಾರ್ಯಕ್ರಮ ಆಯೋಜಿಸಿರುವುದು ಪ್ರಶಂಸನೀಯ ಎಂದರು.

ಎಸ್‌ಡಿಎಂಸಿ ಅಧ್ಯಕ್ಷ ಬಿ.ಜಿ.ನಾಗರಾಜ್ ಅಧ್ಯಕ್ಷತೆ ವಹಿಸಿ ಮಾತನಾಡಿ, ಹಿಂದೆ ಗುರುಕುಲ ಪದ್ಧತಿಯು ಶಿಕ್ಷಣವಿದ್ದು, ಶಿಷ್ಯರು ವಿದ್ಯೆಯೊಂದಿಗೆ ವಿಧೇಯತೆ ಮತ್ತು ವಿನಯವನ್ನು ರೂಢಿಸಿಕೊಂಡು ಜ್ಞಾನಾರ್ಜನೆ ಮಾಡುತ್ತಿದ್ದರು. ಈಗ ಕೇವಲ ಅಂಕ ಹಾಗೂ ಪದವಿಗಾಗಿ ವ್ಯಾಸಂಗ ಮಾಡುವ ವಿದೇಶಿ ಶಿಕ್ಷಣ ನೀತಿ ಇರುವುದು ನೋವಿನ ಸಂಗತಿ ಎಂದರು.

ಉಪನ್ಯಾಸಕ ಪದ್ಮನಿ ಸಮಿಲೂರು ಹಾಗೂ ಉಪನ್ಯಾಸಕ ಎಸ್.ಡಿ. ಸಂತೋಷ್ ಹಾಜರಿದ್ದರು. ಸೌಜನ್ಯ ಮತ್ತು ಸುಹಾಸ್ ತಮ್ಮ ಅನಿಸಿಕೆ ವ್ಯಕ್ತ ಪಡಿಸಿದರು. ಎಸ್.ಕೆ.ಅಶ್ವಿನ್ ನಿರೂಪಿಸಿ, ಆದರ್ಶ ವಂದಿಸಿದರು.



ಶೃಂಗೇರಿಯ ಮಸಿಗೆ ಸರಕಾರಿ ಶಾಲೆಯಲ್ಲಿ ಜೆಸಿಬಿಎಂ ಕಾಲೇಜಿನಿಂದ 'ಎಳೆಯರೊಳಗೊಂದಾಗು ಹರೆಯದಲಿ' ಕಾರ್ಯಕ್ರಮ ನಡೆಯಿತು.

Scanned by CamScanner

ಕನ್ನಡಪ್ರಭ 7.8.14

'ಎಳೆಯರೊಳಗೊಂದಾಗು ಹರೆಯದಲ್ಲಿ' ಉದ್ಘಾಟನೆ

ಶೃಂಗೇರಿ: ಮಕ್ಕಳ ಹಾಗೂ ಮಹಿಳೆಯರ ಮೇಲೆ ದೌರ್ಜನ್ಯ ಪ್ರಕರಣ ಹೆಚ್ಚಳವಾಗುತ್ತಿದೆ. ದೌರ್ಜನ್ಯಕ್ಕೆ ಒಳಗಾದ ಮಕ್ಕಳು ಹಾಗೂ ಮಹಿಳೆಯರ ಬದುಕಿನ ಬಗ್ಗೆ ಪ್ರತಿಯೊಬ್ಬರು ಚಿಂತಿಸಬೇಕಿದೆ ಎಂದು ಕೂಡಗೋಡು ಗ್ರಾಪಂ ಅಧ್ಯಕ್ಷೆ ಕೌಸ್ತುಭಾ ಮೋಹನ್ ಭಟ್ ಹೇಳಿದರು.

ಅವರು ತಾಲೂಕಿನ ತೆಕ್ಕೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾವರಣದಲ್ಲಿ ಆಯೋಜಿಸಲಾಗಿದ್ದ ಎಳೆಯರೊಳಗೊಂದಾಗು ಹರೆಯದಲ್ಲಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ವಿದ್ಯಾರ್ಥಿಗಳು ಸಮಾಜಮುಖಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು ಎಂದರು.

ಕೆ.ಜಿ.ನಾಗೇಶ್ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ವೆಂಕಪ್ಪ, ಕೆ.ಎಂ.ರಮೇಶ್, ಸೀನಪ್ಪ ಮತ್ತಿತರರು ಉಪಸ್ಥಿತರಿದ್ದರು. ವಿಭಾ ಕೆ.ಎಸ್. ಸ್ವಾಗತಿಸಿದರು.

Scanned by CamScanner

ಜೆಸಿಬಿಎಂ ಕಾಲೇಜು ಸುವರ್ಣ ಮಹೋತ್ಸವ ಭವನಕ್ಕೆ ಶಿಲಾನ್ಯಾಸ



ಶೃಂಗೇರಿಯ ಶ್ರೀ ಜೆಸಿಬಿಎಂ ಕಾಲೇಜಿನಲ್ಲಿ ಸುವರ್ಣ ಮಹೋತ್ಸವ ಭವನಕ್ಕೆ ಶ್ರೀ ಮಠದ ಆಡಳಿತಾಧಿಕಾರಿ ಡಾ.ವಿ.ಆರ್.ಗೌರೀಶಂಕರ್ ಶಿಲಾನ್ಯಾಸ ನೆರವೇರಿಸಿದರು.

ಶೃಂಗೇರಿ: ಶ್ರೀ ಜೆಸಿಬಿಎಂ ಕಾಲೇಜಿನ ಘನತೆ, ಸಾಧನೆ ಹಾಗೂ 50 ವರ್ಷಗಳ ಸಾರ್ಥಕ ಸೇವೆಗೆ ಅನುರೂಪವಾದ ಸುವರ್ಣ ಮಹೋತ್ಸವ ಭವನ ನಿರ್ಮಾಣವಾಗಲಿ ಎಂದು ಶ್ರೀ ಮಠದ ಆಡಳಿತಾಧಿಕಾರಿ ಡಾ.ವಿ.ಆರ್.ಗೌರೀಶಂಕರ್ ಹೇಳಿದರು.

ಅವರು ಸೋಮವಾರ ಜೆಸಿಬಿಎಂ ಕಾಲೇಜಿನ ಸುವರ್ಣ ಮಹೋತ್ಸವ ಭವನಕ್ಕೆ ಶಿಲಾನ್ಯಾಸ ನೆರವೇರಿಸಿ ಮಾತನಾಡಿದರು. ಕಾಲೇಜಿನ ಸುವರ್ಣ ಮಹೋತ್ಸವ ಭವನವು ಶತಮಾನೋತ್ಸವ ಸಂದರ್ಭದಲ್ಲಿ ಅದು ಸಾರ್ಥಕವಾದ ಉಪಯೋಗಕ್ಕೆ ಒದಗುವಂತಾಗಲಿ ಎಂದರು. ಕಾಲೇಜಿನ ಆಡಳಿತ ಮಂಡಳಿಯ ಅನಂತಪದ್ಮನಾಭಭಟ್ ಮಾತನಾಡಿ, ಕಾಲೇಜಿನ ಎಲ್ಲ ಹಿರಿಯ ವಿದ್ಯಾರ್ಥಿಗಳು, ಪೋಷಕರು, ವಿದ್ಯಾಭಿಮಾನಿಗಳು ಉದಾರ ಕೊಡುಗೆ ನೀಡಿ ಸುಮಾರು 7ಕೋಟಿ ರೂ. ಅಂದಾಜು ವೆಚ್ಚದ ಕಟ್ಟಡದ ನಿರ್ಮಾಣಕ್ಕೆ ಸಹಕರಿಸಬೇಕಾಗಿದೆ ಎಂದರು.

ಸಮಾರಂಭದಲ್ಲಿ ನಿವೃತ್ತ ಐಜಿಪಿ ಅಧಿಕಾರಿ ಕೆ.ವಿ.ರವೀಂದ್ರನಾಥ್ ಬ್ಯಾಗೂರ್, ನಾಗೇಶ ರಾವ್, ಕೆ.ಎಂ.ಫೆರ್ನಾಂಡಿಸ್, ವೇಣು ಮಾಧವ ನಾಯಕ್, ಪ್ರಾಚಾರ್ಯ ಎಚ್.ಸಿ.ವೀರಭದ್ರಗೌಡ ಹಾಜರಿದ್ದರು. ಸುವರ್ಣ ಮಹೋತ್ಸವ ಅಂಗವಾಗಿ ಒಂದು ವರ್ಷ ಕಾಲೇಜಿನಲ್ಲಿ ಅನೇಕ ಸ್ಪರ್ಧೆ, ಪ್ರದರ್ಶನ, ಉಪನ್ಯಾಸಗಳನ್ನು ಆಯೋಜಿಸಲು ಉದ್ದೇಶಿಸಲಾಗಿದೆ.

Scanned by CamScanner

ಶಿಕ್ಷಣದ ಸಾಮರ್ಥ್ಯ ಸದ್ಬಳಕೆಗೆ ಸಲಹೆ

■ ವಿಕ ಸುದ್ದಿಲೋಕ ಶೃಂಗೇರಿ

ಸಮಾಜಕ್ಕಾಗಿ ನಾವು ಏನು ಮಾಡಬಹುದೆಂಬ ಚಿಂತನೆ ಮೈಗೂಡಿಸಿಕೊಳ್ಳುವಂತೆ ಎಂದು ಚಲನಚಿತ್ರ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ಸಲಹೆ ಮಾಡಿದರು.

ಅವರು ಶನಿವಾರ ಶ್ರೀ ಜೆಸಿಬಿಎಂ ಕಾಲೇಜಿನಲ್ಲಿ ಶಿಕ್ಷಣ ಸ್ನೇಹಿ ಟ್ರಸ್ಟ್‌ನ ದಶಮಾನೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ನಾವು ಸಮಾಜದಿಂದ ಅನೇಕ ಲಾಭ ಪಡೆದಿದ್ದು ಪಡೆಯುತ್ತಲೇ ಇರುತ್ತೇವೆ. ನಮ್ಮದುರಿನ ವಸ್ತುಗಳು, ವ್ಯವಸ್ಥೆ ಎಲ್ಲವೂ ಹಿಂದಿನವರ ಶ್ರಮದ ಫಲವಾಗಿದೆ. ಉಪಯೋಗಿಸುವ ವಸ್ತುಗಳಲ್ಲಿ ಅದನ್ನು ಕಂಡು ಹಿಡಿದಿರುವ ವಿಜ್ಞಾನಿಗಳ ಶ್ರಮವಿರುತ್ತದೆ. ಕೃತಜ್ಞತೆ ಎಂಬುದನ್ನು ಯಾವಾಗಲೂ ನೆನಪಿಟ್ಟುಕೊಳ್ಳಬೇಕು. ನಿಸರ್ಗ, ಹುಟ್ಟಿದ ಊರು, ನಾಳೆ ಇವುಗಳಿಂದ ಪಡೆದ ಉಪಯೋಗ ಮರೆಯಬಾರದು. ಉದ್ಯೋಗಕ್ಕಾಗಿ ಬೇರೆಡೆ ಹೋದರೂ ಹುಟ್ಟಿ ಬೆಳೆದ ಊರನ್ನು ಮರೆಯದೆ ಅಲ್ಲಿಗೆ ಆಗಾಗ್ಗೆ ಭೇಟಿ ಕೊಡಬೇಕು. ಬಡವರಾಗಿ ಹುಟ್ಟುವುದು ತಪ್ಪಲ್ಲ, ಆದರೆ ಬಡತನದಲ್ಲಿ ಉಳಿಯುವುದು ತಪ್ಪು.

ಓದಿನಿಂದ ಬದುಕು ಬದಲಾಗುವ ಅವಕಾಶಗಳಿದ್ದು ಅದನ್ನು ಸಮರ್ಥವಾಗಿ ಬಳಸಿಕೊಳ್ಳಬೇಕು. ಶಿಕ್ಷಣ ಸ್ನೇಹಿ ಟ್ರಸ್ಟ್‌ಮೂಲಕ ಮಲೆನಾಡಿನ ಯುವಕರು ತಮ್ಮ ಊರಿನ ವಿದ್ಯಾರ್ಥಿಗಳಿಗಾಗಿ ಸೇವೆ ನಿಡುತ್ತಿರುವುದು ಶ್ಲಾಘನೀಯ ಎಂದರು.

ತಿಳಿ ಸುದ್ದಿ

ಶಿಕ್ಷಣ ಸಚಿವ ಕಿಮ್ಮನೆ ರತ್ನಾಕರ್ ಮಾತನಾಡಿ, ಬದುಕಿನಲ್ಲಿ ಹೇಗಿರಬೇಕು ಎಂಬ ಚಿಂತನೆಯನ್ನು ವಿದ್ಯಾರ್ಥಿ ಜೀವನದಲ್ಲೇ ಅಳವಡಿಸಿಕೊಳ್ಳುವ ಮೂಲಕ ಭವಿಷ್ಯಕ್ಕಾಗಿ ದಿಟ್ಟ ನಿರ್ಧಾರ ಕೈಗೊಳ್ಳುವ ಮನಸ್ಥಿತಿ ಹೊಂದಬೇಕು.

ಕಠಿಣ ಪರಿಶ್ರಮದಿಂದ ಸಾಧನೆ ಸಾಧ್ಯ. ದುರಭ್ಯಾಸಗಳೆಡೆ ಚಿಂತನೆ ಮಾಡದ ದೃಢ ಮನಸ್ಸಿದ್ದರೆ ನಾವು ಎಲ್ಲವನ್ನೂ ಗೆಲ್ಲಬಹುದು. ಸಮಾಜದ ಪರಿವರ್ತನೆಗೆ ಅಕ್ಷರ ಜ್ಞಾನದ ಅಗತ್ಯವಿದೆಯಾದರೂ ಮೌಲ್ಯವಿಲ್ಲದ ಶಿಕ್ಷಣದಿಂದ ಪರಿವರ್ತನೆ ನಿರೀಕ್ಷಿಸಲಾಗದು. ಮೌಲ್ಯಯುತ ಶಿಕ್ಷಣ ಈಗಿನ ಅಗತ್ಯವಾಗಿದೆ ಎಂದರು.

ಶಿಕ್ಷಣ ಸ್ನೇಹಿ ಟ್ರಸ್ಟ್‌ನಿಂದ 'ತಾಲೂಕಿನ ಉತ್ತಮ ಶಾಲೆ'ಯೆಂದು ತೊರೆಹಡ್ಲು ಸರಕಾರಿ ಪ್ರಾಥಮಿಕ ಶಾಲೆಯನ್ನು ಘೋಷಿಸಿ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಬಿ.ಜಿ.ಮಂಜುನಾಥ್ ಮತ್ತು ಮುಖ್ಯ ಶಿಕ್ಷಕಿ ವಿನೋದಕುಮಾರಿ ಅವರನ್ನು ಶಿಕ್ಷಣ ಸಚಿವರು ಗೌರವಿಸಿದರು. ಇದೇ ಸಂದರ್ಭ ಪ್ರಾಥಮಿಕ ಶಾಲೆಗೆ ಶಿಕ್ಷಣ ಸಚಿವರು 10 ಲಕ್ಷ ರೂ. ವಿಶೇಷ ಅನುದಾನ ಪ್ರಕಟಿಸಿದರು.

ಶಿಕ್ಷಣ ಸ್ನೇಹಿ ಟ್ರಸ್ಟ್ ಅಧ್ಯಕ್ಷ ಅನಿಲ್ ಹೊಸಕೊಪ್ಪ ಅಧ್ಯಕ್ಷತೆ ವಹಿಸಿದ್ದರು. ತಾಲೂಕಿನ ವಿವಿಧ ಶಾಲೆಯ ವಿದ್ಯಾರ್ಥಿಗಳಿಗೆ ಸಾಂಕೇತಿಕವಾಗಿ ನೋಟ್ ಬುಕ್‌ಗಳನ್ನು ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಜೆಡಿಎಸ್ ರಾಜ್ಯ ಉಪಾಧ್ಯಕ್ಷ ಎಚ್.ಟಿ.ರಾಜೇಂದ್ರ, ಕಾಂಗ್ರೆಸ್ ಮುಖಂಡ ಎಚ್.ಜಿ.ವೆಂಕಟೇಶ್, ಪ್ರಾಚಾರ್ಯ ಡಾ.ಎಚ್.ಸಿ.ವೀರಪ್ಪಗೌಡ, ಡಿಡಿಪಿಐ ರಾಜಪ್ಪ ಹಾಜರಿದ್ದರು.

ರಾಜೇಶ್ವರಿ ಅಮ್ಮೂರು ಪ್ರಾಸ್ತಾವಿಕ ಮಾತನಾಡಿದರು. ಸಂದೇಶ್ ಸ್ವಾಗತಿಸಿದರು. ಕೆ.ಟಿ.ಮಂಜುನಾಥ್ ವಂದನಾರ್ಪಣೆ ಮಾಡಿದರು.



ಶೃಂಗೇರಿಯ ಜೆಸಿಬಿಎಂ ಕಾಲೇಜಿನಲ್ಲಿ ಶಿಕ್ಷಣ ಸ್ನೇಹಿ ಟ್ರಸ್ಟ್‌ನ ದಶಮಾನೋತ್ಸವ ಕಾರ್ಯಕ್ರಮವನ್ನು ಚಲನಚಿತ್ರ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ಉದ್ಘಾಟಿಸಿದರು.

Scanned by CamScanner

ಪುಸ್ತಕ ವಿತರಣಾ ಕಾರ್ಯಕ್ರಮ

ಶ್ರಮವಿಲ್ಲದೆ ಸಾಧನೆ ಅಸಾಧ್ಯ: ರತ್ನಾಕರ

■ ಮುಂದೆ ಏನಾಗಬೇಕು ಎಂಬುದನ್ನು ಈಗಲೇ ನಿರ್ಧರಿಸಿ: ವಿದ್ಯಾರ್ಥಿಗಳಿಗೆ ಸಚಿವರ ಕಿವಿಮಾತು

ಕೃಷಿಗೆ ಬಾಯಿ ಬಾಯಿಯನ್ನು ಶ್ರಮವಿಲ್ಲದೇ ಏನನ್ನು ಸಾಧಿಸಲು ಇಷ್ಟವಿಲ್ಲ. ವಿದ್ಯಾರ್ಥಿಗಳು ತಮ್ಮ ಭವಿಷ್ಯವನ್ನು ತಾವೇ ರೂಪಿಸಿಕೊಳ್ಳಬೇಕು ಎಂದು ರಾಜ್ಯ ಸಿಹ್ನಾ ಸಚಿವ ಕಿವಿಮಾತು ರತ್ನಾಕರ ಹೇಳಿದರು.

ಇಲ್ಲಿನ ಕೆಮಾಜಿ ಕಾಲೇಜಿನಲ್ಲಿ ಭಾನುವಾರ ಸಿಹ್ನಾ ಸ್ಪೇಸ್ ಟ್ರಸ್ಟ್ ಆಯೋಜಿಸಿದ್ದ ಉಚಿತ ನೋಟ್ ಪುಸ್ತಕ ವಿತರಣಾ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ವಿದ್ಯಾರ್ಥಿಗಳು ಚೆನ್ನ ಮಾಧ್ಯಮಿಕವೇ ಓದುವುದನ್ನು ರೂಢಿಸಿಕೊಳ್ಳಬೇಕು. ಓದು ಮಹತ್ವವನ್ನು ಬಹಳಾಯಿಸಿಕೊಳ್ಳಬೇಕು. ಈಗಿಂದಲೇ ವಿದ್ಯಾರ್ಥಿಗಳು ಮುಂದಿನ ಭವಿಷ್ಯದ ಕುರಿತು ಚಿಂತನೆ ಮಾಡಿ ಚಿಮಿಕರಿಸಿ ಇಲ್ಲ ಓಗೆ ಇರಬೇಕು ಆಗ ಇಲ್ಲ ಬಿಡಿಗಾಗಿ ಹೋರಾಡುವುದು ಪ್ರಯೋಜನವಿಲ್ಲ. ನಿಮ್ಮನ್ನು ಯಾರು ಬಯಸಬಾರದು ಇಷ್ಟವನ್ನು ಇಷ್ಟವು ಇರಬೇಕಾಗಿದ್ದು ವಿದ್ಯಾರ್ಥಿಗಳ ಮುಂದಿನ ಇಷ್ಟದ ಫಲಿತಾಂಶಗಳನ್ನು ಪಡೆದುಕೊಳ್ಳಬೇಕು. ಪೋಷಕರಿಗೆ ಫೂಜ ಮಾಡಿದರೆ ನೀವು ಪಾಸಾಗುವುದಿಲ್ಲ. ಪೋಷಕರ ನೆಮ್ಮದಿಗಾಗಿ ರೀತಿಯಲ್ಲಿ ಫೂಜ ಮಾಡುವುದು. ಆದರೆ ನಿಮ್ಮ ಶ್ರಮ ಬಗೆಗೆ ಮುಖ್ಯ ಎಂದರು.

ಕಾರ್ಯಕ್ರಮದ ಉದ್ಘಾಟನೆ ಬೆಂಬಲಿಸಿದ ವಿಧಾನಸಭೆ ಸದಸ್ಯೆ ಮಂತಿಪಲ್ಲಿ ಪೆಂಪೆಗೌಡ ಮಾತನಾಡಿ, ಹಳ್ಳಿಗಳಲ್ಲಿರುವ ಪ್ರತಿಭೆಗಳ ಕಾಲ ಸಮಸ್ಯೆಗಳ ಕೇಂದ್ರಗಳಾಗಿ ಹಳ್ಳಿಗಳಲ್ಲಿ ಆಗಾಧವಾದ ಪ್ರತಿಭೆ ಇದೆ. ಆದರೆ ಅವುಗಳ ಮಕ್ಕಳಲ್ಲಿ ಆಗಾಧವಾದ ಪ್ರತಿಭೆ ಇದೆ. ಆದರೆ ಅವುಗಳ ಮಕ್ಕಳು ಒದ್ದು ಮೈಕೊಡಿಯಿ ಎನ್ನುವ ಮನಸ್ಥಿತಿ ಇಲ್ಲದಾಗಿದೆ. ಇಲ್ಲಿ ಇರಲಿ ನಮ್ಮ ಜಾಯಿಗಳನ್ನು



ಫೈಗೆಗೌಡ: ಚೆಂಬಲಿಯ ಕಾಲೇಜಿನಲ್ಲಿ ಸಿಹ್ನಾ ಸ್ಪೇಸ್ ಟ್ರಸ್ಟ್ ಆಯೋಜಿಸಿದ್ದ ಉಚಿತ ನೋಟ್ ಪುಸ್ತಕ ವಿತರಣಾ ಕಾರ್ಯಕ್ರಮವನ್ನು ಚಲನಚಿತ್ರ ನಿರ್ದೇಶಕ ಜಾಗಕಿಹಳ್ಳಿ ಚಂದ್ರಶೇಖರ ಉದ್ಘಾಟಿಸಿದರು.

ಮುಂದಾಲೋಚನೆ ನೆಮ್ಮ ದೇಶ ಕಲ ನಗರ, ಗಾಂ, ಪಟೆಯ ಬಂದ ಉದಾ ಉಪಗಳನ್ನು ಮರಣುಚಿಕ್ಕಿಸಿ. ಗಾಂ ಕೈಸ್ಥಾಪಿಸಿಗರಿಸಿ. ಗಾಂಧಿಯುಮಿಯಿಂದಿಗೆ ಕೆಲಸ ಮಾಡಿದರು. ಗಾಂಧಿಗೆ ಇಷ್ಟವಾ ಏನು ಕೊಟ್ಟರೆ ಎಂಬುದಕ್ಕಿಂತ ಮುಂಚಿತ್ತ ನಮ್ಮ ಕೊಡುಗೆ ಏನು ಎಂಬುದು ತಿಳಿದುಕೊಳ್ಳಬೇಕು. ಜೀವನದ ಅಭಿವೃದ್ಧಿ ಶ್ರೀಮಂತರ ಮಗಾ ತಿರುಗುವುದು. ಗಾಂಧಿ ಸಿಹ್ನಾ ಪದ್ಧತಿಯನ್ನು ಶ್ರೀಸ್ಥಾಪಿಸಿದ ಪಠ್ಯಪುಸ್ತಕ ಪೆಂಪೆಗೌಡ ಇಷ್ಟವಾಗಿದ್ದು ಒಂದೇ

ನಾಗಭೂಷಣ್ ಉದ್ಘಾಟಿಸಿದರು.



ಶೃಂಗೇರಿಯ ಜೆಸಿಬಿಎಂ ಕಾಲೇಜು ಸಭಾಂಗಣದಲ್ಲಿ ಶನಿವಾರ ನಡೆದ ಶಿಕ್ಷಣ ಸ್ನೇಹಿ ಟ್ರಸ್ಟ್‌ನ ದಶಮಾನೋತ್ಸವ ಸಮಾರಂಭವನ್ನು ಖ್ಯಾತ ಸಾಹಿತಿ, ಸಿನೆಮಾ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ಉದ್ಘಾಟಿಸಿದರು. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಕಿಮ್ಮನೆ ರತ್ನಾಕರ್, ಜನಸ್ನೇಹಿ ಶಿಕ್ಷಣ ಟ್ರಸ್ಟ್ ಅಧ್ಯಕ್ಷ ಅನಿಲ್ ಹೊಸಕೊಪ್ಪ, ಮುಖಂಡರಾದ ಎಚ್.ಜಿ. ವೆಂಕಟೇಶ್, ಎಚ್.ಟಿ. ರಾಜೇಂದ್ರ, ಡಿಡಿಪಿಐ ರಾಜಪ್ಪ, ಕಾಲೇಜಿನ ಪ್ರಾಚಾರ್ಯ ವೀರಪ್ಪಗೌಡ, ಬೆಂಗಳೂರಿನ ಉಪನ್ಯಾಸಕ ರಾಜಶೇಖರ್ ಅಮ್ಮೂರು ಇದ್ದರು. (ಕೊಪ್ಪ ಚಿತ್ರ)

Scanned by CamScanner

ಕನ್ನಡ ಪ್ರಭ ದಿನಪತ್ರಿಕೆ ದಿನಾಂಕ 31-12-12

6

ವಿದ್ಯಾರ್ಥಿ ದಿಶೆಯಲ್ಲಿಯೇ ಗುರಿ ಇಟ್ಟುಕೊಳ್ಳಿ: ಕಿಮ್ಮನೆ

ಶೃಂಗೇರಿ: ಪ್ರತಿ ವಿದ್ಯಾರ್ಥಿ ತನ್ನ ವಿದ್ಯಾರ್ಥಿ ಜೀವನದಲ್ಲಿ ಮುಂದಿನ ಬದುಕು ಗಟ್ಟಿಗೊಳಿಸಿಕೊಳ್ಳುವ ದೃಢ ನಿರ್ಧಾರ ಕೈಗೊಳ್ಳಬೇಕು. ಬದುಕು ಲಾಟರಿಯಲ್ಲ ಎಂದು ಶಿಕ್ಷಣ ಸಚಿವ ಕಿಮ್ಮನೆ ರತ್ನಾಕರ ಅಭಿಪ್ರಾಯಪಟ್ಟರು. ಅವರು ಜೆಸಿಬಿಎಂ ಕಾಲೇಜು ಸಭಾಂಗಣದಲ್ಲಿ ಶಿಕ್ಷಣ ಸ್ನೇಹಿ ಟ್ರಸ್ಟ್ ಆಯೋಜಿಸಿದ್ದ ದಶಮಾನೋತ್ಸವ ಹಾಗೂ ವಿದ್ಯಾರ್ಥಿಗಳಿಗೆ ಉಚಿತ ನೋಟ್ ಬುಕ್ ವಿತರಣೆ ಸಮಾರಂಭದಲ್ಲಿ ಮಾತನಾಡಿದರು. ಸಮಾರಂಭ ಉದ್ಘಾಟಿಸಿದ ಸಾಹಿತಿ, ಚಲನಚಿತ್ರ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ಮಾತನಾಡಿ, ಊರಿನ ಋಣ ಸದಾ ನಮ್ಮೊಂದಿಗೆ ಇರುತ್ತದೆ ಎಂದರು.ಮುಖ್ಯ ಶಿಕ್ಷಕಿ ವಿನೋದಕುಮಾರಿ ಹಾಗೂ ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಬಿ.ಜಿ.ಮಂಜುನಾಥ್‌ರನ್ನು ಸನ್ಮಾನಿಸಲಾಯಿತು. ಶಿಕ್ಷಣ ಸ್ನೇಹಿ ಟ್ರಸ್ಟ್‌ನ ಅನಿಲ್ ಹೊಸಕೊಪ್ಪ ಅಧ್ಯಕ್ಷತೆ ವಹಿಸಿದ್ದರು. ಎಚ್.ಟಿ.ರಾಜೇಂದ್ರ, ಕಾಂಗ್ರೆಸ್ ಮುಖಂಡ ಎಚ್.ಜಿ.ವೆಂಕಟೇಶ್, ಜೆಸಿಬಿಎಂ ಕಾಲೇಜು ಪ್ರಾಚಾರ್ಯ ವೀರಪ್ಪಗೌಡ, ರಾಜಶೇಖರ್ ಅಮ್ಮೂರ್,ರಾಜಪ್ಪ ಇದ್ದರು.



Scanned by CamScanner

ಹಣದಿಂದ ಶ್ರೀಮಂತರಾಗುವ ಬದಲು ಕೃತಜ್ಞತೆಗಳಿಂದ ದೊಡ್ಡವರಾಗಿ

ಕೈಗೇರಿ: ಎಲ್ಲರೂ ವಿದ್ಯಾರ್ಥಿ ಜೀವನದಲ್ಲಿ ಮುಂದಿನ ಬದುಕನ್ನು ಗಟ್ಟಿಗೊಳಿಸಿಕೊಳ್ಳುವ ದೃಢ ನಿರ್ಧಾರ ಮಾಡಬೇಕು. ಅದನ್ನು ಬಿಟ್ಟು ಓದದೇ ಅನುತ್ತೀರ್ಣರಾಗುವುದು ಅಪರಾಧ ಎಂದು ಶಿಕ್ಷಣ ಸಚಿವ ತಿಮ್ಮನಿ ರತ್ನಾಕರ್ ಹೇಳಿದರು.

ಇಲ್ಲಿನ ಜೆಸಿಬಿಎಂ ಕಾಲೇಜಿನಲ್ಲಿ ಬೆಂಗಳೂರು ಶಿಕ್ಷಣ ಸ್ನೇಹಿ ಟ್ರಸ್ಟಿನ ದಶಮಾನೋತ್ಸವ ಅಂಗವಾಗಿ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಕ್ಕಳಿಗೆ ಉಚಿತ ಪುಸ್ತಕ ವಿತರಿಸಿ ಮಾತನಾಡಿದರು.

ವೃತ್ತಿಪರ ಶಿಕ್ಷಣದಲ್ಲಿ ಮೌಲ್ಯಗಳು ಮರೆಯಾಗಿದ್ದು ನೈತಿಕ ಶಿಕ್ಷಣದ ಅಗತ್ಯವಿದೆ. ಸಮಾಜದಲ್ಲಿ ಸುಸಂಸ್ಕೃತ ವಾತಾವರಣ ಪ್ರತಿಬಿಂಬಿತವಾಗಬೇಕಾದರೆ ಶಿಕ್ಷಣದ ಮೂಲಕ ಮಕ್ಕಳಿಗೆ ಸಂಸ್ಕಾರ ನೀಡುವ ಕಾರ್ಯವಾಗಬೇಕು ಎಂದು ಅಭಿಪ್ರಾಯಪಟ್ಟರು.

ತಾಲೂಕಿನ ಎಲ್ಲ ಶಾಲೆ ಹಾಗೂ ಜಿಲ್ಲೆಯ ಆಯ್ದ ಶಾಲೆಗಳಿಗೆ ಏಳು ಸಾವಿರ ಉಚಿತ ನೋಟ್ ಬುಕ್ ನೀಡುವ ಶಿಕ್ಷಣ ಸ್ನೇಹಿ ಟ್ರಸ್ಟಿನ ಕಾರ್ಯ



ಕೈಗೇರಿಯ ಜೆಸಿಬಿಎಂ ಕಾಲೇಜಿನಲ್ಲಿ ಶನಿವಾರ ಆಯೋಜಿಸಿದ್ದ ಉಚಿತ ನೋಟ್‌ಬುಕ್ ವಿತರಣಾ ಸಮಾರಂಭದಲ್ಲಿ ಶಿಕ್ಷಣ ಸಚಿವ ತಿಮ್ಮನಿ ರತ್ನಾಕರ್ ಮಾತನಾಡಿದರು.

ಪ್ರಶಂಸಿಸಿದ ಸಚಿವರು, ತಾಲೂಕಿನ ತೊರೆಹಳ್ಳು ಶಾಲೆಯ ಮೂಲ ಶೌಕರ್ಯ ಅಭಿವೃದ್ಧಿಗೆ 10 ಲಕ್ಷ ರೂ. ಅನುದಾನ ಘೋಷಿಸಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಚಿತ್ರ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್, ಸಮಾಜ ಹಾಗೂ ಊರಿನ ಋಣ ಸದಾ ನಮ್ಮಿಂದಿಗಿರುತ್ತದೆ. ಇದನ್ನರಿತು ನಾವು ಹಣದಿಂದ ಶ್ರೀಮಂತರಾಗುವ ಬದಲು ಕೃತಜ್ಞತೆಗಳಿಂದ ಶ್ರೀಮಂತರಾಗಬೇಕು. ನಗರದಲ್ಲಿ ವಾಸವಾದರೂ ಹುಟ್ಟಿ ಬೆಳೆದ ಊರಿನಲ್ಲಿ ಸಮಾಜಮುಖಿಯಾಗಿ

> ಸ್ವಚ್ಛ ಸಮಾಜ ನಿರ್ಮಾಣಕ್ಕೆ ರಾಜಕಾರಣಿಗಳ ಕೊಡುಗೆ ಅನಿವಾರ್ಯ. ಈ ನಿಟ್ಟಿನಲ್ಲಿ ಜನರ ದಿಕ್ಕುತಪ್ಪಿರುವ ರಾಜಕಾರಣ ಬದಲಾಗಬೇಕು. ಜನಪ್ರತಿನಿಧಿಗಳು ಊರಿಗೆ ಬಂದಾಗ ಅವರ ಕೈ ಕೋಡುವ ಪರಿಸ್ಥಿತಿ ಬದಲಾಗಬೇಕು. ಎಲ್ಲವನ್ನೂ ಜನಪ್ರತಿನಿಧಿಗಳೇ ಮಾಡಬೇಕೆಂಬ ಧೋರಣೆಯಿಂದ ನಾವು ಹೊರಬಂದು ಸಮಾಜಕ್ಕೆ ನಮ್ಮಿಂದಾದ ಸಹಕಾರ ನೀಡುವ ಬಗ್ಗೆ ಚಿಂತಿಸಬೇಕು.
>
> **। ನಾಗತಿಹಳ್ಳಿ ಚಂದ್ರಶೇಖರ್**
> ಚಿತ್ರ ನಿರ್ದೇಶಕ

ಕಾರ್ಯನಿರ್ವಹಿಸಿದಾಗ ಮಾತ್ರ ಹೃದಯ ಶ್ರೀಮಂತಿಕೆ ಅನಾವರಣಗೊಳ್ಳುತ್ತವೆ ಎಂದರು.

ಬದುಕಾಗಿ ಹುಟ್ಟುವುದು ತಪ್ಪಲ್ಲ. ಆದರೆ ಬರಡಾಗಿ ಉಳಿಯುವುದು ತಪ್ಪು. ಜೀವನದ ಹೋರಾಟದಿಂದ ನಮ್ಮೊಳಗಿನ ಪ್ರತಿಭೆ ದೊರಹೊಮ್ಮಬೇಕು. ಹೊಸತನ್ನು ಹೊರಹಾಕಿ ಸಾಧನೆಯಾದರೆ ಅತ್ಯಮ ಪುಸ್ತಕ ಓದುಗನೆಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಟ್ರಸ್ಟ್ ಅಧ್ಯಕ್ಷ ಅಮೃತ್ ಜೊಕೆಮ್ಸ್, ಶಿಕ್ಷಣಕ್ಕೆ ಅದ್ಯತೆ ನೀಡುವ ಜತೆಗೆ ಮಕ್ಕಳಿಗಾಗಿ ಭೂಮಿಕೆ ಬರೆಯುವ ಶಿಕ್ಷಣ ಪದ್ಧತಿ ಇಂದಿ. ವಿದ್ಯಾರ್ಥಿಗಳು ಶ್ರದ್ಧೆಯಿಂದ ಕಲಿಕೆ ಹಾಗೂ ಅದರ ಜೊತೆಗಾರರಾಗಿ ಕಲಿಕೆ ಬಗ್ಗೆಯೂ ಗಮನ ಹರಿಸಿದಾಗ ಎತ್ತರದ ಎಂದರು.

ಇದೇ ಸಂದರ್ಭದಲ್ಲಿ ತಾಲೂಕಿನ ತೊರೆಹಳ್ಳು ಪ್ರೌಢಶಾಲೆಯನ್ನು 'ಕಿಯೋನಿಕ್ಸ್ ಶಾಲೆ' ಎಂದು ಘೋಷಿಸಿ ಮುಖ್ಯ ಶಿಕ್ಷಕಿ ವಿಜಯಾ ಕುಮಾರಿ ಹಾಗೂ ಎಸ್‌ಡಿಎಂಸಿ ಅಧ್ಯಕ್ಷ ಬೇಗಾರ್ ಮಂಜುನಾಥ್‌ರವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮ ಮಾಜಿಎಂ.ಎಲ್.ಸಿ. ಕೆ.ವೀರಪ್ಪ ಗೌಡ, ಮೆಸ್ಕಾಂ ಎಸ್.ಇ. ಟಿ.ರಾಜೇಂದ್ರ, ರಾಜಕೀಯ ಮುಖಂಡ ಡಿ.ಸಿ.ಕೆ ರಾಜಪ್ಪ ಉಪಸ್ಥಿತರಿದ್ದರು.

Scanned by CamScanner

ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

ಶೃಂಗೇರಿ: ಶ್ರೀ ಜೆಸಿಬಿಎಂ ಕಾಲೇಜು ಹಳೆ ವಿದ್ಯಾರ್ಥಿ ಸಂಘವು ಪ್ರತಿಭಾವಂತ ಬಡವಿದ್ಯಾರ್ಥಿಗಳಿಂದ ಉಚಿತ ವಿದ್ಯಾಭ್ಯಾಸಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಎಸ್‌ಎಸ್‌ಎಲ್‌ಸಿಯಲ್ಲಿ ಶೇ. 80 ಕ್ಕಿಂತ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಕೆಗೆ ಅರ್ಹರು. ಪರೀಕ್ಷಾ ಫಲಿತಾಂಶ ಪ್ರಕಟವಾದ ವಾರದೊಳಗೆ ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಬೇಕು. ಅರ್ಜಿ ನಮೂನೆ ಕಾಲೇಜು ಕಾರ್ಯಾಲಯದಲ್ಲಿ ದೊರೆಯಲಿದೆ ಎಂದು ಪ್ರಕಟಣೆ ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಎಚ್.ಎಸ್. ಸಿದ್ದಪ್ಪ (9449610572) ಅಥವಾ ಕಾರ್ಯದರ್ಶಿ ಕೆ.ಎಸ್.ವೆಂಕಪ್ಪ (9449996843) ಅವರನ್ನು ಸಂಪರ್ಕಿಸಬಹುದು.

Scanned by CamScanner

ವಿಜಯ ಕರ್ನಾಟಕ. 13-5-14

ಪಿಯುಸಿಯಲ್ಲಿ ಶೇ.96 ಅಂಕ



ಶೃಂಗೇರಿ: ಶ್ರೀ ಜೆಸಿಬಿಎಂ ಕಾಲೇಜಿನ ದ್ವಿತೀಯ ಪಿಯುಸಿ ವಿದ್ಯಾರ್ಥಿನಿ ವಾಣಿಜ್ಯ ವಿಭಾಗದ ಎಸ್.ಸುಷ್ಮಾ 574 ಅಂಕ ಗಳಿಸಿ ಕಾಲೇಜಿಗೆ ಪ್ರಥಮ ಸ್ಥಾನ ಗಳಿಸಿದ್ದಾರೆ. ಶೇ.96 ಅಂಕ ಗಳಿಸಿರುವ ಇವರು ಲೆಕ್ಕ ಶಾಸ್ತ್ರ ಸಂಖ್ಯಾಶಾಸ್ತ್ರ ಮತ್ತು ವ್ಯವಹಾರ ಅಧ್ಯಯನದಲ್ಲಿ ಶೇ.100 ಅಂಕ ಗಳಿಸಿದ್ದಾರೆ.

Scanned by CamScanner

ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಶೃಂಗೇರಿ: ಶ್ರೀಜೆಸಿಬಿಎಂ ಕಾಲೇಜು ಹಳೇ ವಿದ್ಯಾರ್ಥಿ ಸಂಘವು ಪ್ರತಿಭಾವಂತ ಬಡವಿದ್ಯಾರ್ಥಿಗಳಿಂದ ಉಚಿತ ವಿದ್ಯಾಭ್ಯಾಸಕ್ಕಾಗಿ ಅರ್ಜಿ ಆಹ್ವಾನಿಸಿದೆ. ಎಸ್‌ಎಸ್‌ಎಲ್‌ಸಿಯಲ್ಲಿ ಶೇ. 80ಕ್ಕಿಂತ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಕೆಗೆ ಅರ್ಹರು. ಪರೀಕ್ಷಾ ಫಲಿತಾಂಶ ಪ್ರಕಟವಾದ ವಾರದೊಳಗೆ ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಬೇಕು. ಅರ್ಜಿ ನಮೂನೆ ಕಾಲೇಜು ಕಾರ್ಯಾಲಯದಲ್ಲಿ ದೊರೆಯಲಿದೆ ಎಂದು ಪ್ರಕಟಣೆ ತಿಳಿಸಿದೆ. ಹೆಚ್ಚಿನ

ಪ್ರಜಾವಾಣಿ ಕನ್ನಡ
6 ಮೇ 2014

Scanned by CamScanner

ಪ್ರತಿಭಾವಂತರಿಗೆ ಉಚಿತ ಶಿಕ್ಷಣ

ಹೊಂಗೇರಿ: ಜೆಸಿಬಿಎಂ ಕಾಲೇಜು ಹಳೇ ವಿದ್ಯಾರ್ಥಿಗಳ ಸಂಘ ಪ್ರತಿಭಾವಂತ ಬಡ ವಿದ್ಯಾರ್ಥಿಗಳಿಗೆ ಉಚಿತವಾಗಿ ಶಿಕ್ಷಣ ನೀಡಲು ಅರ್ಜಿ ಆಹ್ವಾನಿಸಿದೆ. ಎಸ್‌ಎಸ್‌ಎಲ್‌ಸಿಯಲ್ಲಿ ಶೇ.80ಕ್ಕಿಂತ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಪರೀಕ್ಷೆ ಫಲಿತಾಂಶ ಪ್ರಕಟವಾದ ವಾರದೊಳಗೆ ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಬೇಕು. ಕಾಲೇಜು ಕಾರ್ಯಾಲಯದಲ್ಲಿ ಅರ್ಜಿ ದೊರೆಯುತ್ತದೆ. ಮಾಹಿತಿಗೆ ಮೊ. 9449610572, 9449996843 ಸಂಪರ್ಕಿಸಬಹುದು ಎಂದು ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಎಚ್.ಎಸ್. ಸಿದ್ದಪ್ಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Scanned by CamScanner



ಕೈಗೇರಿ ಜೆಸಿಬಿಎಂ ಕಾಲೇಜಿನ ವಿದ್ಯಾರ್ಥಿಗಳು ಇತ್ತೀಚೆಗೆ ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನಲ್ಲಿ ನಡೆದ ಅಂತರ ಕಾಲೇಜು ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಭಾಗವಹಿಸಿ ಸಮಗ್ರ ಪ್ರಶಸ್ತಿ ಗಳಿಸಿದರು. ಕಾಲೇಜಿನ ಪ್ರಾಚಾರ್ಯ ಡಾ.ಎಚ್ .ಸಿ.ವೀರಭದ್ರಗೌಡ, ಪಿಯು ವಿಭಾಗದ ಪ್ರಾಚಾರ್ಯ ಡಾ.ಸಿ.ವಿ.ಗಿರಿಧರಶಾಸ್ತ್ರಿ ಮತ್ತು ವೆಂಕಪ್ಪ ಇದ್ದಾರೆ.

Scanned by CamScanner



ಸ್ವಾಮಿ ವಿವೇಕಾನಂದರ 150ನೇ ಜನ್ಮ ವರ್ಷಾಚರಣೆ ಅಂಗವಾಗಿ ಕೋಲ್ಕತ್ತದ ರಾಮಕೃಷ್ಣ ಮಿಷನ್ ಬೇಲೂರು ಮಠದಲ್ಲಿ ನಡೆಸಿದ್ದ ನ್ಯಾಷನಲ್ ಯೂತ್ ಕನ್ವೆನ್ಷನ್‌ನಲ್ಲಿ ಭಾಗವಹಿಸಿದ್ದ ಶೃಂಗೇರಿಯ ಶ್ರೀ ಜೆಸಿಬಿಎಂ ಕಾಲೇಜಿನ ವಿದ್ಯಾರ್ಥಿಗಳಾದ ಆರ್.ನಿತಿನ್ ಮತ್ತು ಎಚ್. ಎಸ್.ಪನ್ನಗ ಅತ್ಯುತ್ತಮ ಶಿಬಿರಾರ್ಥಿ ಪ್ರಶಸ್ತಿ ಗಳಿಸಿದ್ದಾರೆ.

Scanned by CamScanner

ಶೃಂಗ ಸಂಭ್ರಮ: ಸಾಗರಕ್ಕೆ ಸಮಗ್ರ ಪ್ರಶಸ್ತಿ

ಶೃಂಗೇರಿ: ಸಾಂಸ್ಕೃತಿಕ ಸ್ಪರ್ಧೆ ವಿದ್ಯಾರ್ಥಿಗಳ ನಡುವೆ ಬಾಂಧವ್ಯ ವೃದ್ಧಿಸುತ್ತದೆ ಎಂದು ಸರ್ಕಾರಿ ಪದವಿ ಕಾಲೇಜು ಪ್ರಾಚಾರ್ಯ ಸಿದ್ದಲಿಂಗೇಗೌಡ ಹೇಳಿದರು.

ಜೆಸಿಬಿಎಂ ಕಾಲೇಜಿನಲ್ಲಿ ಏರ್ಪಡಿಸಿದ್ದ ಆಯ್ದ ಕಾಲೇಜುಗಳ ಸಾಂಸ್ಕೃತಿಕ ಸ್ಪರ್ಧೆ 'ಶೃಂಗ ಸಂಭ್ರಮ' ಉದ್ಘಾಟಿಸಿ ಮಾತನಾಡಿದರು.

ಸ್ಪರ್ಧೆಗಳು ಪ್ರತಿಭೆ ಅನಾವರಣಕ್ಕೆ ಉತ್ತಮ ವೇದಿಕೆಯಾಗಿದ್ದು ವಿದ್ಯಾರ್ಥಿಗಳ ನಡುವೆ ಉತ್ತಮ ಸಂಬಂಧ ಬೆಳೆಸುತ್ತವೆ. ಅಂತರ ಕಾಲೇಜು ಸ್ಪರ್ಧೆಗಳಲ್ಲಿ ವಿದ್ಯಾರ್ಥಿಗಳ ಪ್ರತಿಭೆ ಇತರ ಕಾಲೇಜು ವಿದ್ಯಾರ್ಥಿಗಳ ಗಮನಕ್ಕೂ ಬರುತ್ತದೆ. ಒಬ್ಬರ ಕ್ರಿಯಾಶೀಲತೆ ಉಳಿದವರಿಗೆ ಪ್ರೇರಣೆಯಾಗುತ್ತದೆ ಎಂದು ತಿಳಿಸಿದರು.

ಪ್ರಾಚಾರ್ಯ ಡಾ. ಎಚ್.ಸಿ.ವೀರಪ್ಪಗೌಡ ಅಧ್ಯಕ್ಷತೆ ವಹಿಸಿದ್ದರು. ಪದವಿಪೂರ್ವ ಕಾಲೇಜು ಪ್ರಾಚಾರ್ಯ ಡಾ.



ಆಯ್ದ ಕಾಲೇಜುಗಳ ಸಾಂಸ್ಕೃತಿಕ ಸ್ಪರ್ಧೆ 'ಶೃಂಗ ಸಂಭ್ರಮ'ವನ್ನು ಪ್ರಾಚಾರ್ಯ ಸಿದ್ದಲಿಂಗೇಗೌಡ ಉದ್ಘಾಟಿಸಿದರು. ಸಿ.ವಿ.ಗಿರಿಧರಶಾಸ್ತ್ರೀ, ವಿದ್ಯಾರ್ಥಿ ಕ್ಷೇಮ ಪಾಲನಾಧಿಕಾರಿ ಎನ್.ಎಚ್.ಲಕ್ಷ್ಮೀನಾರಾಯಣ, ಕೆ.ಎಸ್.ನಿಧಿ, ಸಾತ್ವಿಕ್ ಶೆಟ್ಟಿ, ವಿಶ್ವನಾಥ್, ಸಾಂಸ್ಕೃತಿಕ ಸಮಿತಿ ಸಂಚಾಲಕರಾದ ಕೆ.ಎಸ್. ವೆಂಕಪ್ಪ ಉಪಸ್ಥಿತರಿದ್ದರು.

Scanned by CamScanner

ಶೃಂಗ ಸಂಭ್ರಮ: ಸಾಂಸ್ಕೃತಿಕ ಸ್ಪರ್ಧೆಗಳಿಂದ ಬಾಂಧವ್ಯ

ಶೃಂಗೇರಿ, ಫೆ. 19: ಅಂತರ್‌ಕಾಲೇಜು ಸಾಂಸ್ಕೃತಿಕ ಸ್ಪರ್ಧೆಗಳು ಮಧುರ ಬಾಂಧವ್ಯ ಉಂಟುಮಾಡುವುದಲ್ಲದೇ ಒಂದು ಕಾಲೇಜಿನ ವಿದ್ಯಾರ್ಥಿಗಳ ಪ್ರತಿಭೆಯು ಮತ್ತೊಂದು ಕಾಲೇಜು ವಿದ್ಯಾರ್ಥಿಗಳ ಗಮನಕ್ಕೆ ಬಂದು ಕಲಿಕೆಗೆ ಪ್ರೇರಣೆ ಒದಗಿಸುತ್ತದೆ ಎಂದು ಸರ್ಕಾರಿ ಪದವಿ ಕಾಲೇಜು ಪ್ರಾಂಶುಪಾಲ ಸಿದ್ದಲಿಂಗೇಗೌಡ ತಿಳಿಸಿದರು.

ಜೆಸಿಬಿಎಂ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಆಯ್ದ ಕಾಲೇಜುಗಳ ನಡುವಿನ ಅಂತರ ಕಾಲೇಜು ಸಾಂಸ್ಕೃತಿಕ ಸ್ಪರ್ಧೆ 'ಶೃಂಗ ಸಂಭ್ರಮ'ವನ್ನು ಉದ್ಘಾಟಿಸಿ ಮಾತನಾಡಿದರು.

ಪ್ರಾಂಶುಪಾಲ ಡಾ. ಹೆಚ್.ಸಿ.ವೀರಪ್ಪಗೌಡರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಪದವಿಪೂರ್ವ ಕಾಲೇಜು ಪ್ರಾಂಶುಪಾಲ ಡಾ. ಸಿ.ವಿ.ಗಿರಿಧರಶಾಸ್ತ್ರೀ, ವಿದ್ಯಾರ್ಥಿ ಕ್ಷೇಮಪಾಲನಾ ಅಧಿಕಾರಿ ಎನ್.ಹೆಚ್. ಲಕ್ಷ್ಮಿನಾರಾಯಣ, ಕೆ.ಎಸ್.ನಿಧಿ, ಸಾತ್ವಿಕ್ ಶೆಟ್ಟಿ, ವಿಶ್ವನಾಥ್ ಜಿ.ಆರ್. ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಾಸ್ಕೃತಿಕ ಸಮಿತಿ ಸಂಚಾಲಕ ಕೆ.ಎಸ್.ವೆಂಕಪ್ಪ ಪ್ರಾಸ್ತಾವಿಕ ಮಾತುಗಳನ್ನಾಡಿದರು.

ಸ್ಪರ್ಧಾವಿಜೇತರು: ಸಾಗರದ ಇಂದಿರಾಗಾಂಧಿ ಸರ್ಕಾರಿ ಮಹಿಳಾ ಪ್ರ.ದ.ಕಾಲೇಜಿಗೆ ಸಮಗ್ರ ಪ್ರಶಸ್ತಿ ಲಭ್ಯವಾಯಿತು. ಕಾಲೇಜಿನ ತಂಡವು ಸಮೂಹ ನೃತ್ಯ ವಿಭಾಗದ ಪ್ರಥಮ ಸ್ಥಾನದೊಂದಿಗೆ ಶಾಶ್ವತಿ ಸಿ.ಕೆ. ಐಶ್ವರ್ಯ ರೇವಣ್ಕರ್ ವೈಯುಕ್ತಿಕ ಬಹುಮಾನ ಪಡೆದರು.

ಸಿನಿಮಾ ನೃತ್ಯದಲ್ಲಿ ಸ್ಥಳೀಯ ಸ.ಪ್ರ.ದ.ಕಾಲೇಜಿನ ಶಮೇಶ್ ಪ್ರಥಮ ಮತ್ತು ತಂಡ ವಿಭಾಗದಲ್ಲಿ ಜೆಸಿಬಿಎಂ ಕಾಲೇಜು ತಂಡವು ದ್ವಿತೀಯ ಸ್ಥಾನ ಗಳಿಸಿತು. ಕಾರ್ಯಕ್ರಮದಲ್ಲಿ ಸ್ಥಳೀಯ ಕಾಲೇಜುಗಳೊಂದಿಗೆ ಶಿವಮೊಗ್ಗದ ಸಹ್ಯಾದ್ರಿ ಕಾಲೇಜು, ನ.ರಾ.ಪುರ ಸ.ಪ್ರ.ದ. ಕಾಲೇಜು, ತೀರ್ಥಹಳ್ಳಿಯ ಸ.ಪ್ರ.ದ.ಕಾಲೇಜು ಮತ್ತು ಸಾಗರದ ಇಂದಿರಾಗಾಂಧಿ ಸ.ಮಹಿಳಾ.ಪ್ರ.ದ.ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು.



ಶೃಂಗೇರಿಯ ಶ್ರೀಜೆಸಿಬಿಎಂ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಅಂತರ ಕಾಲೇಜು ಸಾಂಸ್ಕೃತಿಕ ಸ್ಪರ್ಧೆ 'ಶೃಂಗ ಸಂಭ್ರಮ'ವನ್ನು ಪ್ರಾಂಶುಪಾಲ ಸಿದ್ದಲಿಂಗೇಗೌಡ ಉದ್ಘಾಟಿಸಿದರು.

ಕರಾವಳಿ ಕಾವಲು ೨೦-೨-೨೦೧೪ ಗುರುವಾರ

Scanned by CamScanner

ವಿಜಯವಾಣಿ ಕನ್ನಡ ಗಣರಾಜ್ಯೋತ್ಸವ ವಿಶೇಷ ಸಂಚಿಕೆ 2014

ಅಂತರ ಕಾಲೇಜು ಸಾಂಸ್ಕೃತಿಕ ಸ್ಪರ್ಧೆ

ಶೃಂಗೇರಿ: ಕಾಲೇಜುಗಳ ನಡುವಿನ ಸಾಂಸ್ಕೃತಿಕ ಸ್ಪರ್ಧೆಗಳು ಮಧುರ ಭಾಂದವ್ಯ ಉಂಟು ಮಾಡುವುದಲ್ಲದೇ, ಒಂದು ಕಾಲೇಜಿನ ವಿದ್ಯಾರ್ಥಿಗಳ ಪ್ರತಿಭೆ ಮತ್ತೊಂದು ಕಾಲೇಜು ವಿದ್ಯಾರ್ಥಿಗಳ ಗಮನಕ್ಕೆ ಬಂದು ತಮ್ಮೊಳಗೆ ಸುಧಾರಣೆಗೆ ಅವಕಾಶವಾಗುತ್ತ ಕಲಿಕೆಗೆ ಪ್ರೇರಣೆ ಒದಗಿಸುತ್ತದೆ ಎಂದು ಸರಕಾರಿ ಪದವಿ ಕಾಲೇಜು ಪ್ರಾಂಶುಪಾಲ ಸಿದ್ದಲಿಂಗೇಗೌಡ ತಿಳಿಸಿದರು.

ಅವರು ಇತ್ತೀಚೆಗೆ ಶ್ರೀ ಜೆಸಿಬಿಎಂ ಕಾಲೇಜಿನಲ್ಲಿ ಆಯೋಜಿಸಿದ್ದ ಆಯ್ದ ಕಾಲೇಜುಗಳ ನಡುವಿನ ಆಂತರ ಕಾಲೇಜು ಸಾಂಸ್ಕೃತಿಕ ಸ್ಪರ್ಧೆ 'ಶೃಂಗ ಸಂಭ್ರಮ' ಉದ್ಘಾಟಿಸಿ ಮಾತನಾಡಿದರು.

ಪ್ರಾಂಶುಪಾಲ ಡಾ.ಎಚ್.ಸಿ.ವೀರಪ್ಪಗೌಡ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಪದವಿ ಪೂರ್ವ ಕಾಲೇಜು ಪ್ರಾಂಶುಪಾಲ ಡಾ.ಸಿ.ವಿ.ಗಿರಿಧರಶಾಸ್ತ್ರಿ, ವಿದ್ಯಾರ್ಥಿ ಕ್ಷೇಮಪಾಲನಾ ಅಧಿಕಾರಿ ಎನ್.ಎಚ್. ಲಕ್ಷ್ಮೀನಾರಾಯಣ, ಕೆ.ಎಸ್.ನಿಧಿ, ಸಾತ್ವಿಕ್ ಶೆಟ್ಟಿ ಜಿ. ಆರ್.ವಿಶ್ವನಾಥ್ ವೇದಿಕೆಯಲ್ಲಿ ಹಾಜರಿದ್ದರು. ಸಾಸ್ಕೃತಿಕ ಸಮಿತಿ ನಂಚಾಲಕ ಕೆ.ಎಸ್.ವೆಂಕಪ್ಪ ಪ್ರಾಸ್ತಾವಿಕ ಮಾತನಾಡಿದರು.

ಸ್ಪರ್ಧಾವಿಜೇತರು: ಸಾಗರದ ಶ್ರೀಮತಿ ಇಂದಿರಾಗಾಂಧಿ ಸರಕಾರಿ ಮಹಿಳಾ ಪ್ರ.ದ. ಕಾಲೇಜಿಗೆ ಸಮಗ್ರ ಪ್ರಶಸ್ತಿ ಲಭ್ಯವಾಯಿತು. ಕಾಲೇಜಿನ ತಂಡ ಸಮೂಹ ನೃತ್ಯ ವಿಭಾಗದ ಪ್ರಥಮ ಸ್ಥಾನದೊಂದಿಗೆ ಸಿ.ಕೆ.ಶಾಶ್ವತಿ, ಐಶ್ವರ್ಯ ರೇವಣ್ಕರ್ ವೈಯುಕ್ತಿಕ ಬಹುಮಾನ ಪಡೆದರು.

ಸಿನಿಮಾ ನೃತ್ಯದಲ್ಲಿ ಸ್ಥಳೀಯ ಸ.ಪ್ರ.ದ.ಕಾಲೇಜಿನ ರಮೇಶ್ ಪ್ರಥಮ ಮತ್ತು ತಂಡ ವಿಭಾಗದಲ್ಲಿ ಶ್ರೀ ಜೆಸಿಬಿಎಂ ಕಾಲೇಜು ತಂಡ ದ್ವಿತೀಯ ಸ್ಥಾನ ಗಳಿಸಿತು.



ಶೃಂಗೇರಿಯ ಶ್ರೀಜೆಸಿಬಿಎಂ ಕಾಲೇಜಿನಲ್ಲಿ ಆಯೋಜಿಸಿದ್ದ ಅಂತರ ಕಾಲೇಜು ಸಾಂಸ್ಕೃತಿಕ ಸ್ಪರ್ಧೆ 'ಶೃಂಗ ಸಂಭ್ರಮ'ವನ್ನು ಪ್ರಾಂಶುಪಾಲ ಸಿದ್ದಲಿಂಗೇಗೌಡ ಉದ್ಘಾಟಿಸಿದರು.

ಕಾರ್ಯಕ್ರಮದಲ್ಲಿ ಸ್ಥಳೀಯ ಕಾಲೇಜುಗಳೊಂದಿಗೆ ಶಿವಮೊಗ್ಗದ ಸಹ್ಯಾದ್ರಿ ಕಾಲೇಜು, ನರಸಿಂಹರಾಜಪುರ ಸ.ಪ್ರ.ದ. ಕಾಲೇಜು, ತೀರ್ಥಹಳ್ಳಿಯ ಸ.ಪ್ರ.ದ. ಕಾಲೇಜು ಮತ್ತು ಸಾಗರದ ಇಂದಿರಾಗಾಂಧಿ ಸ. ಮಹಿಳಾ ಪ್ರ.ದ. ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು.

Scanned by CamScanner

ಸೀಂಪುಟ್ ಕನ್ನಡ

ಫೆಬ್ರವರಿ 15 | 2014



ಶೃಂಗೇರಿ ಜೆಸಿಬಿಎಂ ಕಾಲೇಜಿನ ವಾರ್ಷಿಕ ಕ್ರೀಡಾಕೂಟವನ್ನುದ್ದೇಶಿಸಿ ಪ್ರಾಂಶುಪಾಲ ಡಾ.ಸಿ.ವಿ.ಗಿರಿಧರಶಾಸ್ತ್ರೀ ಮಾತನಾಡಿದರು.

ಕ್ರೀಡೆಗಳಿಂದ ಹಿಂಜರಿಕೆ ಮಾಯ

ಶೃಂಗೇರಿ, ಫೆ. 14: ಕ್ರೀಡಾಕೂಟಗಳ ಯಶಸ್ಸಿನ ಹಿಂದೆ ಕಠಿಣ ಪರಿಶ್ರಮ ಮತ್ತು ನಿರಂತರ ಅಭ್ಯಾಸವಿದ್ದು, ನಮ್ಮ ಕಾಲೇಜಿನ ವಿದ್ಯಾರ್ಥಿಗಳು ವಿ.ವಿ. ಮಟ್ಟದಲ್ಲಿ ಮತ್ತು ರಾಜ್ಯ ಮಟ್ಟದಲ್ಲಿ ಅತ್ಯುತ್ತಮ ಸಾಧನೆಗೈದು ಪ್ರಶಂಸೆಗೆ ಪಾತ್ರರಾಗಿದ್ದಾರೆ ಎಂದು ಜೆಸಿಬಿಎಂ ಕಾಲೇಜು ಪ್ರಾಚಾರ್ಯ ಡಾ.ಹೆಚ್.ಸಿ.ವೀರಪ್ಪಗೌಡ ಅಭಿನಂದಿಸಿದರು.

ಕಾಲೇಜಿನ ವಾರ್ಷಿಕ ಕ್ರೀಡಾಕೂಟದ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು, ನಮ್ಮ ವಿದ್ಯಾರ್ಥಿಗಳು ಶಿಕ್ಷಣದಷ್ಟೇ ಕ್ರೀಡೆಗೆ ಮಹತ್ವ ನೀಡಿದ್ದರಿಂದ ಈ ಫಲಿತಾಂಶ ದೊರಕಿತು ಎಂದರು.

ಪದವಿ ಪೂರ್ವ ಕಾಲೇಜು ಪ್ರಾಂಶುಪಾಲ ಡಾ.ಸಿ.ವಿ.ಗಿರಿಧರ ಶಾಸ್ತ್ರಿ ಮಾತನಾಡಿ, ಕ್ರೀಡಾಕೂಟಗಳಲ್ಲಿ ಭಾಗವಹಿಸುವುದರಿಂದ ಅಳಕು ಮಾಯವಾಗಿ ಸಾಧನೆಯ ಛಲ ಮೂಡುತ್ತದೆ ಎಂದು ಅಭಿಪ್ರಾಯಪಟ್ಟರು.

ದೈಹಿಕ ಶಿಕ್ಷಣ ನಿರ್ದೇಶಕ ಎಂ.ವಿ.ಲೋಕೇಶ್ ಪ್ರಾಸ್ತಾವಿಕ ಮಾತನಾಡಿದರು. ಕೆ.ಎಸ್.ವೆಂಕಪ್ಪ ನಿರೂಪಿಸಿದರು, ಶಿವಮೂರ್ತಿ ವಂದಿಸಿದರು.

Scanned by CamScanner

ರಫ್ತು ವ್ಯಾಪಾರದಲ್ಲಿ ಪ್ರತಿಕೂಲ ವಾತಾವರಣ

ಶೃಂಗೇರಿ, ಫೆ. 14: ಜಾಗತೀಕರಣ ಮತ್ತು ಮುಕ್ತ ಮಾರುಕಟ್ಟೆಯ ಸಂಸ್ಕೃತಿಯಿಂದಾಗಿ ಸ್ವದೇಶಿ ಮಾರುಕಟ್ಟೆಯಲ್ಲಿ ವಿದೇಶದ ಚೈನಾ ಮಾಲುಗಳು ತುಂಬಿ ಸ್ವದೇಶಿ ವಸ್ತುಗಳ ಬೇಡಿಕೆ ಕಡಿಮೆಯಾಗಿದ್ದರೆ, ವಿದೇಶಿ ಮಾರುಕಟ್ಟೆಯಲ್ಲೂ ಬೆಲೆ ಪೈಪೋಟಿಯಿಂದ ನಮ್ಮ ಮಾಲುಗಳಿಗೆ ರಫ್ತು ವ್ಯಾಪಾರದಲ್ಲೂ ಪ್ರತಿಕೂಲ ವಾತಾವರಣ ನಿರ್ಮಾಣವಾಗಿದೆ ಎಂದು ಮಂಗಳೂರಿನ ಪ್ರಾಧ್ಯಾಪಕ ಡಾ.ಪ್ರಭಾಕರ ಶಿಶಿಲ ಹೇಳಿದರು.

ಸ್ಥಳೀಯ ಜೆಸಿಬಿಎಂ ಕಾಲೇಜಿನ ಕಲಾ ಸಂಘದ ಸಪ್ತಾಹದಲ್ಲಿ ಏರ್ಪಡಿಸಿದ್ದ ಇಂಪ್ಯಾಕ್ಟ್ ಆಫ್ ಗ್ಲೋಬಲೈಸೇಷನ್ ಅಂಡ್ ಡಬ್ಲ್ಯು.ಟಿ.ಓ. ವಿಷಯದ ಚಿಂತನಾ ಗೋಷ್ಠಿಯಲ್ಲಿ ಉಪನ್ಯಾಸ ನೀಡಿ ಮಾತನಾಡಿದ ಅವರು, ಡಬ್ಲ್ಯು.ಟಿ.ಓ. ಸಂಘಟನೆಯ ಜಾಗತೀಕರಣ ಪ್ರಭಾವವು ಭಾರತದ ವಾಣಿಜ್ಯ ಕ್ಷೇತ್ರಗಳ ಮೇಲೆ ಹಾನಿಕಾರಕ ಪರಿಣಾಮಗಳನ್ನು ಸೃಷ್ಟಿಸಿದೆ ಎಂದರು.

ಪ್ರಾಚಾರ್ಯ ಡಾ.ಹೆಚ್.ಸಿ.ವೀರಪ್ಪಗೌಡ ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದರು. ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಕೆ.ಪಿ.ಪ್ರಕಾಶ್, ಕನ್ನಡ ವಿಭಾಗದ ಕೆ.ಎಸ್. ವೆಂಕಪ್ಪ, ಅರ್ಥಶಾಸ್ತ್ರದ ಬಾಲಕೃಷ್ಣ ನಾಯಕ್, ಕಲಾ ಸಂಘದ ಅಧ್ಯಕ್ಷ ಕೆ.ಎಂ.ನಿಧಿ, ಸಿ.ಎಸ್.ಕಾವ್ಯಶ್ರೀ, ರಶ್ಮಿ ಉಪಸ್ಥಿತರಿದ್ದರು.



ಶೃಂಗೇರಿಯ ಜೆಸಿಬಿಎಂ ಕಾಲೇಜಿನ ಕಲಾಸಂಘದ ಚಿಂತನ ಗೋಷ್ಠಿಯಲ್ಲಿ ಮಂಗಳೂರಿನ ಪ್ರಾಧ್ಯಾಪಕ ಡಾ.ಪ್ರಭಾಕರ ಶಿಶಿಲ ಉಪನ್ಯಾಸಗೈದರು.

Scanned by CamScanner

ಭಾರತದ ಮೇಲೆ ಜಾಗತೀಕರಣದ ಪ್ರಭಾವ

ಶೃಂಗೇರಿ: ವಿದೇಶಗಳ ವಸ್ತುಗಳ ಬೇಡಿಕೆ ಭಾರತದಲ್ಲಿ ಅತ್ಯಂತ ಹೆಚ್ಚಿನ ಪ್ರಭಾವ ಬೀರಿದ್ದು ಸ್ವದೇಶಿ ವಸ್ತುಗಳ ಬೇಡಿಕೆ ವಿದೇಶಿ ಮಾರುಕಟ್ಟೆಯಲ್ಲಿ ಗಣನೀಯವಾಗಿ ಕುಂಠಿತಗೊಳ್ಳುತ್ತಿರುವುದಕ್ಕೆ ಜಾಗತೀಕರಣವೇ ಕಾರಣ ಎಂದು ಮಂಗಳೂರಿನ ನಿವೃತ್ತ ಪ್ರಾಧ್ಯಾಪಕ ಡಾ. ಪ್ರಭಾಕರ ಶಿಶಿಲ ಹೇಳಿದರು.

ಅವರು ಇತ್ತೀಚೆಗೆ ಶ್ರೀಜೆಸಿಬಿಎಂ ಕಾಲೇಜಿನಲ್ಲಿ ಕಲಾ ಸಂಘದಿಂದ ಹಮ್ಮಿಕೊಂಡಿದ್ದ ಕಲಾ ಸಪ್ತಾಹದಲ್ಲಿ 'ಇಂಪ್ಯಾಕ್ಟ್ ಆಫ್ ಗ್ಲೋಬಲೈಸೇಷನ್ ಆನ್ ಡಬ್ಲ್ಯೂಟಿಒ' ಕುರಿತು ಉಪನ್ಯಾಸ ನೀಡಿದರು. ಪ್ರಸ್ತುತ ಸನ್ನಿವೇಶದಲ್ಲಿ ಡಬ್ಲ್ಯೂಟಿಒ ಸಂಘಟನೆಯಿಂದ ಭಾರತದ ಮೇಲೆ ಜಾಗತೀಕರಣದ ಪ್ರಭಾವ ಅನನುಕೂಲ ಸ್ಥಿತಿಯನ್ನುಂಟು ಮಾಡುತ್ತದೆ ಎಂದರು.

ಕಾಲೇಜಿನ ಪ್ರಾಚಾರ್ಯ ಡಾ.ಎಚ್.ಸಿ.ವೀರಪ್ಪಗೌಡ ಅಧ್ಯಕ್ಷತೆ ವಹಿಸಿದ್ದರು. ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಕೆ.ಪಿ.ಪ್ರಕಾಶ್, ಕನ್ನಡ ವಿಭಾಗದ ಮುಖ್ಯಸ್ಥ ಕೆ.ಎಸ್. ವೆಂಕಪ್ಪ, ಕಲಾ ಸಂಘದ ಅಧ್ಯಕ್ಷ ಕೆ.ಎಂ.ನಿಧಿ, ಅರ್ಥಶಾಸ್ತ್ರ ಉಪನ್ಯಾಸಕ ಬಾಲಕೃಷ್ಣ ನಾಯಕ್, ಸಿ.ಎಸ್.ಕಾವ್ಯಶ್ರೀ ಕಲಾ ಸಂಘದ ಪದಾಧಿಕಾರಿಗಳಾದ ರಶ್ಮಿ ಸುಕನ್ಯ, ಶ್ರೀಅಭಿಲಾಷ್ ಹಾಜರಿದ್ದರು.



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ಕಲಾ ಸಂಘದಿಂದ ನಡೆದ ಕಲಾ ಸಪ್ತಾಹದಲ್ಲಿ 'ಇಂಪ್ಯಾಕ್ಟ್ ಆಫ್ ಗ್ಲೋಬಲೈಸೇಷನ್ ಆನ್ ಡಬ್ಲ್ಯೂಟಿಒ' ಕುರಿತು ಡಾ.ಪ್ರಭಾಕರ ಶಿಶಿಲ ಉಪನ್ಯಾಸ ನೀಡಿದರು.

ವಿಜಯ ಕರ್ನಾಟಕ ತೆಕ್ಕಿಗೆ 15 ಫೆಬ್ರವರಿ 2014

Scanned by CamScanner

ವಿಜಯವಾಣಿ 15 ಫೆಬ್ರವರಿ 2014 ಶನಿವಾರ

ಕ್ರೀಡೆಯಿಂದ ಸಾಮರ್ಥ್ಯ ವೃದ್ಧಿ

ಶೃಂಗೇರಿ: ಕ್ರೀಡಾಕೂಟಗಳಲ್ಲಿ ವಿದ್ಯಾರ್ಥಿಗಳು ಪಾಲ್ಗೊಂಡು ಮನೋವಿಕಾಸ, ದೈಹಿಕ ಸಾಮರ್ಥ್ಯ ಹೆಚ್ಚಿಸಿಕೊಳ್ಳಬೇಕು ಎಂದು ಪ್ರಾಚಾರ್ಯ ಡಾ. ಎಚ್.ಸಿ.ವೀರಪ್ಪ ಗೌಡ ಹೇಳಿದರು.

ಜೆಸಿಬಿಎಂ ಕಾಲೇಜಿನಲ್ಲಿ ಕ್ರೀಡಾ ಧ್ವಜಾರೋಹಣ ನೆರವೇರಿಸಿ ಮಾತನಾಡಿ, ವಿದ್ಯಾರ್ಥಿಗಳು ಕ್ರೀಡೆಗಳಲ್ಲಿ ಭಾಗವಹಿಸುವುದರಿಂದ ಶೈಕ್ಷಣಿಕ ಸಾಧನೆಗೂ ನೆರವಾಗಲಿದೆ ಎಂದರು.

ನಮ್ಮ ಕಾಲೇಜಿನ ವಿದ್ಯಾರ್ಥಿಗಳು ವಿಶ್ವವಿದ್ಯಾಲಯ, ರಾಜ್ಯ ಮಟ್ಟದ ಕ್ರೀಡೆಗಳಲ್ಲಿ ಉತ್ತಮ ಸಾಧನೆ ಮಾಡಿ, ಪ್ರಶಂಸೆಗೆ ಪಾತ್ರರಾಗಿದ್ದಾರೆ ಎಂದು ಶ್ಲಾಘಿಸಿದರು.

ಪ್ರಾಚಾರ್ಯ ಡಾ. ಸಿ.ವಿ.ಗಿರಿಧರ ಶಾಸ್ತ್ರಿ ಮಾತನಾಡಿ ಸ್ಪರ್ಧೆಗಳಲ್ಲಿ ಭಾಗವಹಿಸುವುದರಿಂದ ಕ್ರೀಡಾ ಮನೋಭಾವನೆ ಬೆಳೆಯುತ್ತದೆ. ಪರಸ್ಪರ ಸ್ನೇಹ ವೃದ್ಧಿಯಾಗುತ್ತದೆ. ವಿಶಾಲ ಚಿಂತನೆ ಸಾಮರ್ಥ್ಯ ಬೆಳೆಯುತ್ತದೆ ಎಂದರು.

ದೈಹಿಕ ಶಿಕ್ಷಣ ನಿರ್ದೇಶಕ ಎಂ.ವಿ.ಲೋಕೇಶ್, ಕನ್ನಡ ವಿಭಾಗದ ಮುಖ್ಯಸ್ಥ ಕೆ.ಎಸ್.ವೆಂಕಪ್ಪ, ಆಂಕಿತಾ, ಉಪನ್ಯಾಸಕ ಶಿವಮೂರ್ತಿ ಇದ್ದರು.



ಶೃಂಗೇರಿ ಜೆಸಿಬಿಎಂ ಕಾಲೇಜಿನ ಕ್ರೀಡಾಕೂಟದಲ್ಲಿ ಪ್ರಾಚಾರ್ಯ ಡಾ. ಗಿರಿಧರ ಶಾಸ್ತ್ರಿ ಮಾತನಾಡಿದರು.

Scanned by CamScanner



ಶೃಂಗೇರಿಯ ಶ್ರೀ ಜೆಸಿಬಿಎಂ ಕಾಲೇಜಿನ ವಿದ್ಯಾರ್ಥಿಗಳು ತಿಕಾರಿಪುರದ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಸಿನಿಮಾ ನೃತ್ಯ ಸಮೂಹ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ, ಜನಪದ ನೃತ್ಯ ಸಮೂಹ ಸ್ಪರ್ಧೆಯಲ್ಲಿ ದ್ವಿತೀಯ ಬಹುಮಾನ ಪಡೆದು ಸಮಗ್ರ ಪ್ರಶಸ್ತಿ ಗಳಿಸಿದ್ದಾರೆ. ಸಾಂಸ್ಕೃತಿಕ ಸಮಿತಿ ಸಂಚಾಲಕ ಕೆ.ಎಸ್.ವೆಂಕಪ್ಪತಂಡದ ನೇತೃತ್ವ ವಹಿಸಿದ್ದರು. ವಿಜೇತ ತಂಡಕ್ಕೆ ಪ್ರಾಂಶುಪಾಲರು, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಅಭಿನಂದಿಸಿದ್ದಾರೆ.

Scanned by CamScanner

ವ್ಯಕ್ತಿತ್ವ ವಿಕಸನ ತರಬೇತಿ



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ಕಲಾ ಸಪ್ತಾಹ ಕಾರ್ಯಕ್ರಮದ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಾಗಾರದಲ್ಲಿ ಸಿ.ಎಸ್.ಕಂತನ್ ತರಬೇತಿ ನೀಡಿದರು.

■ **ವಿಕ ಸುದ್ದಿಲೋಕ** ಶೃಂಗೇರಿ

ಪರೀಕ್ಷಾ ಸಮಯದಲ್ಲಿ ಉಂಟಾಗುವ ಭಯ, ಆತಂಕಗಳ ನಿವಾರಣೆಗೆ ಅಗತ್ಯವಾದ ಮಾರ್ಗೋಪಾಯಗಳನ್ನು ಅನುಭವಿಗಳಿಂದ ಪಡೆದು ಮೈಗೂಡಿಸಿಕೊಳ್ಳಬೇಕೆಂದು ಸಿ.ಎಸ್. ಕಂತನ್ ತಿಳಿಸಿದರು.

ಅವರು ಸೋಮವಾರ ಶ್ರೀ ಜೆಸಿಬಿಎಂ ಕಾಲೇಜಿನ ಕಲಾ ಸಂಘದ ಕಲಾ ಸಪ್ತಾಹ ಕಾರ್ಯಕ್ರಮದ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಾಗಾರದಲ್ಲಿ ತರಬೇತಿ ನೀಡಿದರು. ಕನಸು ನನಸಾಗಿಸಲು ಭಯ, ಆತಂಕಕ್ಕೊಳಗಾಗದೆ ಸತತ ಪರಿಶ್ರಮದಿಂದ ಮುನ್ನುಗ್ಗಬೇಕು ಎಂದರು.

ಕಾಲೇಜಿನ ಪ್ರಾಚಾರ್ಯ ಡಾ.ಎಚ್.ಸಿ.ವೀರಪ್ಪಗೌಡ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕನ್ನಡ ವಿಭಾಗದ ಮುಖ್ಯಸ್ಥ ಕೆ.ಎಸ್.ವೆಂಕಪ್ಪ, ಕಲಾಸಂಘದ ಅಧ್ಯಕ್ಷ ಕೆ.ಎನ್.ನಿಧಿ ವೇದಿಕೆಯಲ್ಲಿ ಹಾಜರಿದ್ದರು. ಪ್ರಜ್ವಲ್ ಸ್ವಾಗತಿಸಿ, ಕೃಷ್ಣಪ್ರಸಾದ್ ನಿರೂಪಿಸಿದರು. ಕೆ.ಎನ್.ನಿಧಿ ವಂದಿಸಿದರು.

Scanned by CamScanner

ವ್ಯಕ್ತಿತ್ವ ವಿಕಸನ ತರಬೇತಿ

ಶೃಂಗೇರಿ: ಶ್ರೀ ಜೆಸಿಬಿಎಂ ಕಾಲೇಜಿನ ಕಲಾಸಂಘದ ಕಲಾಸಪ್ತಾಹ ಕಾರ್ಯಕ್ರಮದ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಾಗಾರ ನಡೆಯಿತು.

ಸಿ.ಎಸ್. ಕಂಠನ್ ಮಾತನಾಡಿ, ಪರೀಕ್ಷಾ ಸಮಯದಲ್ಲಿ ಉಂಟಾಗುವ ಭಯ, ಆತಂಕಗಳ ನಿವಾರಣೆಗೆ ಅಗತ್ಯವಾದ ಮಾರ್ಗೋಪಾಯಗಳನ್ನು ಅನುಭವಿಗಳಿಂದ ಪಡೆದು ಮೈಗೂಡಿಸಿಕೊಳ್ಳಬೇಕು ಎಂದರು. ಕಾಲೇಜಿನ ಪ್ರಾಚಾರ್ಯ ಡಾ। ಎಚ್.ಸಿ. ವೀರಪ್ಪಗೌಡ ಅಧ್ಯಕ್ಷತೆ ವಹಿಸಿದ್ದರು. ಕನ್ನಡ ವಿಭಾಗದ ಮುಖ್ಯಸ್ಥ ಕೆ.ಎಸ್. ವೆಂಕಪ್ಪ, ಕಲಾಸಂಘದ ಅಧ್ಯಕ್ಷ ಕೆ.ಎನ್. ನಿಧಿ ವೇದಿಕೆಯಲ್ಲಿದ್ದರು.

Scanned by CamScanner

ವ್ಯಕ್ತಿತ್ವ ವಿಕಸನ ಕಾರ್ಯಾಗಾರ

ಶೃಂಗೇರಿ: ಜೆಸಿಎಂಬಿ ಕಾಲೇಜಿನಲ್ಲಿ ಕಲಾಸಂಘದಿಂದ ವ್ಯಕ್ತಿತ್ವ ವಿಕಸನ ಕಾರ್ಯಾಗಾರ ಹಮ್ಮಿಕೊಳ್ಳಲಾಗಿತ್ತು.

ಸಂಪನ್ಮೂಲ ವ್ಯಕ್ತಿ ಜೇಸಿ ಮಾಜಿ ಅಧ್ಯಕ್ಷ ಸಿ.ಎಸ್. ಕಂಠನ್ ಮಾತನಾಡಿ, ಕನಸು ನನಸಾಗಲು ಪರಿಶ್ರಮದ ಅವಶ್ಯವಿದೆ. ಗುರಿ ಸಾಧಿಸುವಾಗ ಆತಂಕ ಸಹಜ. ಅದನ್ನು ಅನುಭವಿಗಳಲ್ಲಿ ಹೇಳಿಕೊಂಡು ಪರಿಹಾರ ಕಂಡುಕೊಳ್ಳಬೇಕು ಎಂದರು.

ವಿದ್ಯಾರ್ಥಿಗಳು ಸಮಾಜದ ಆಗುಹೋಗುಗಳನ್ನು ಗಮನಿಸಿ ತಮ್ಮದೇ ಆದ ಒಳ್ಳೆಯ ಚಿಂತನೆಗಳಿಂದ ಸಮಾಜಮುಖಿ ಕಾರ್ಯನಿರ್ವಹಿಸುವ ಅಗತ್ಯವಿದೆ. ಚಿಕ್ಕವಯಸ್ಸಿನಲ್ಲಿ ನಾಯಕತ್ವ ಗುಣ ಬೆಳೆಸಿಕೊಂಡು ತಮ್ಮ ಉತ್ತಮ ನಡತೆಯಿಂದ ಪರಿಸರದಲ್ಲಿ ಉತ್ತಮ ವಾತಾವರಣ ಬೆಳೆಸಲು ಮುಂದಾಗಬೇಕು ಎಂದು ತಿಳಿಸಿದರು.

ಜೆಸಿಬಿಎಂ ಕಾಲೇಜಿನ ಪ್ರಾಚಾರ್ಯ ಡಾ. ಎಚ್.ಸಿ.ವೀರಪ್ಪಗೌಡ, ಕನ್ನಡ ವಿಭಾಗದ ಮುಖ್ಯಸ್ಥ ಕೆ.ವಿ.ವೆಂಕಪ್ಪ, ಕಲಾಸಂಘದ ಅಧ್ಯಕ್ಷ ನಿಧಿ, ಕೃಷ್ಣಪ್ರಸಾದ್, ಪ್ರಜ್ವಲ್ ಉಪಸ್ಥಿತರಿದ್ದರು.



ವ್ಯಕ್ತಿತ್ವ ವಿಕಸನ ಕಾರ್ಯಾಗಾರದಲ್ಲಿ ಜೇಸಿ ಮಾಜಿ ಅಧ್ಯಕ್ಷ ಸಿ.ಎಸ್.ಕಂಠನ್ ಮಾತನಾಡಿದರು.

Scanned by CamScanner

ಉ. ವಾಣಿ · 23·1·14

ಜೆಸಿಬಿಎಂನಲ್ಲಿ ಯುವ ದಿನಾಚರಣೆ

ಶೃಂಗೇರಿ: ಇತ್ತೀಚೆಗೆ ಜೆಸಿಬಿಎಂ ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾ ಯೋಜನೆ ವತಿಯಿಂದ ಯುವ ಸಪ್ತಾಹ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಜೆಸಿಐ ಮಾಜಿ ಅಧ್ಯಕ್ಷ ವೇಣುಮಾಧವ ನಾಯಕ ಸಪ್ತಾಹವನ್ನು ಉದ್ಘಾಟಿಸಿದರು. ನಂತರ ಅವರು ಮಾತನಾಡಿ,ವಿದ್ಯಾರ್ಥಿಗಳಿಗೆ ಸ್ವಾಮಿ ವಿವೇಕಾನಂದರ ತತ್ವ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಮುನ್ನಡೆದರೆ ಯಶಸ್ಸು ಖಂಡಿತ ತಮ್ಮದಾಗುತ್ತದೆ. ಯುವ ಜನತೆ ಯಾವುದೇ ತರಹದ ದುಶ್ಚಟಗಳಿಗೆ ದಾಸರಾಗದೆ ರಾಷ್ಟ್ರದ ಏಳಿಗೆಗೆ ಪಣತೊಡಬೇಕೆಂದು ಕರೆ ನೀಡಿದರು.

ಕಾಲೇಜಿನ ಪ್ರಾಚಾರ್ಯ ಡಾ। ಎಚ್.ಸಿ. ವೀರಪ್ಪ ಗೌಡ ಅಧ್ಯಕ್ಷತೆ ವಹಿಸಿದ್ದರು. ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಅಧಿಕಾರಿಗಳಾದ ಎನ್.ಎಚ್. ಲಕ್ಷ್ಮೀನಾರಾಯಣ್.,ಎ.ಜಿ. ಪ್ರಶಾಂತ ಇದ್ದರು.

Scanned by CamScanner

ಜೆಸಿಬಿಎಂ ಕಾಲೇಜಿನಲ್ಲಿ ಕಲಾ ಸಪ್ತಾಹ

ಶೃಂಗೇರಿ: ಯಾವುದೇ ಸ್ಪರ್ಧೆಯಾದರೂ ಸೋಲು ಗೆಲುವನ್ನು ನಿರೀಕ್ಷಿಸದೆ ಸ್ಪರ್ಧೆಗಳಲ್ಲಿ ಸಕ್ರೀಯವಾಗಿ ತೊಡಗಿಸಿಕೊಳ್ಳಬೇಕು ಎಂದು ನಿವೃತ್ತ ಕನ್ನಡ ಪ್ರಾಧ್ಯಾಪಕ ಜಿ.ಎಂ.ಭಟ್ ಹೇಳಿದರು.

ಮಂಗಳವಾರ ಶ್ರೀ ಜೆಸಿಬಿಎಂ ಕಾಲೇಜಿನಲ್ಲಿ ಕಲಾ ಸಂಘ ಆಯೋಜಿಸಿದ್ದ ಕಲಾ ಸಪ್ತಾಹ ಉದ್ಘಾಟಿಸಿ ಮಾತನಾಡಿದರು.

ಪ್ರತಿ ದಿನವೂ ಸಕ್ರೀಯವಾಗಿ ತೊಡಗಿಸಿಕೊಳ್ಳುವುದರಿಂದ ಜೀವನದಲ್ಲಿ ಯಶಸ್ಸು ಸಾಧಿಸಬಹುದಾಗಿದೆ ಎಂದರು.

ತಾಲೂಕು ಕಸಾಪ ಅಧ್ಯಕ್ಷ ಗಿಣಕಲು ಸುರೇಂದ್ರ ಮಾತನಾಡಿ, ಸಪ್ತಾಹದಲ್ಲಿ ವಿದ್ಯಾರ್ಥಿಗಳು ಸಕ್ರೀಯವಾಗಿ ತೊಡಗಿಸಿಕೊಳ್ಳುವುದರಿಂದ ಜ್ಞಾನಾರ್ಜನೆ ಹೆಚ್ಚುತ್ತದೆ. ಕಳೆದ ವಾರ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ಕಾಲೇಜಿನ ವಿದ್ಯಾರ್ಥಿಗಳು ಸಾಕಷ್ಟು ಸಂಖ್ಯೆಯಲ್ಲಿ ಭಾಗವಹಿಸಿ ಸಮ್ಮೇಳನ ಯಶಸ್ವಿಗೊಳಿಸಿದ್ದಾರೆ ಎಂದರು.

ಕಾಲೇಜಿನ ಪ್ರಾಚಾರ್ಯ ಡಾ।ಎಚ್.ಸಿ.ವೀರಪ್ಪಗೌಡ ಅಧ್ಯಕ್ಷತೆ ವಹಿಸಿದ್ದರು. ಪದವಿಪೂರ್ವ ಕಾಲೇಜಿನ ಪ್ರಾಚಾರ್ಯ ಸಿ.ವಿ.ಗಿರಿಧರಶಾಸ್ತ್ರಿ, ಇತಿಹಾಸ ವಿಭಾಗದ ಮುಖ್ಯಸ್ಥ ಡಾ। ಪ್ರಕಾಶ್, ಕಲಾ ಸಂಘದ ಅಧ್ಯಕ್ಷ ಕೆ.ಎನ್.ನಿ ಇದ್ದರು.

Scanned by CamScanner

ಜೆಸಿಬಿಎಂಗೆ ಸಮಗ್ರ ಪ್ರಶಸ್ತಿ

ಕಾಲೇಜಿನಲ್ಲಿ ನಡೆದ ಅಂತರಕಾಲೇಜು ಭಾವಗೀತೆಗಳ ಸ್ಪರ್ಧೆಯಾದ ಭಾವ ತರಂಗದಲ್ಲಿ ಜೆಸಿಬಿಎಂ ಕಾಲೇಜು ಸಮಗ್ರ ಪ್ರಶಸ್ತಿ ಗಳಿಸಿದೆ.

ಬಿಜಿಎಸ್ ಬಿಎಡ್ ಕಾಲೇಜಿನ ಪ್ರಾಚಾರ್ಯ ಕೆ.ಸಿ.ನಾಗೇಶ್ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಜೆಸಿಬಿಎಂ ಕಾಲೇಜಿನ ಪದವಿ ಪೂರ್ವ ವಿಭಾಗದ ಪ್ರಾಚಾರ್ಯ ಡಾ.ಸಿ.ವಿ.ಗಿರಿಧರಶಾಸ್ತ್ರೀ ಅಧ್ಯಕ್ಷತೆ ವಹಿಸಿದ್ದರು. ಪದವಿ ವಿಭಾಗದ ಪ್ರಾಚಾರ್ಯ ಡಾ.ಎಚ್.ಸಿ.ವೀರಪ್ಪಗೌಡ ಉಪಸ್ಥಿತರಿದ್ದರು.

ಸ್ಪರ್ಧೆಯಲ್ಲಿ ಐದು ಕಾಲೇಜುಗಳು ಭಾಗವಹಿಸಿದ್ದವು. ತೀರ್ಪುಗಾರರಾಗಿ ರಮೇಶ್ ಬೇಗಾರ್, ಬಿ.ಎಲ್. ರವಿಕುಮಾರ್ ಮತ್ತು ವೈಶಾಲಿ ನಟಶೇಖರ್ ಪಾಲ್ಗೊಂಡಿದ್ದರು.

Scanned by CamScanner

ಕಲಾ ಸಪ್ತಾಹ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಶೃಂಗೇರಿ: ಜೀವನದಲ್ಲಿ ಪ್ರತಿ ದಿನವೂ ಆಸಕ್ತಿಯಿಂದ ತೊಡಗಿಸಿಕೊಂಡಲ್ಲಿ ಯಶಸ್ಸು ಗಳಿಸಲು ಸಾಧ್ಯ ಎಂದು ನಿವೃತ್ತ ಕನ್ನಡ ಪ್ರಾಧ್ಯಾಪಕ ಗಜಾನನ ಎಂ. ಭಟ್ ಹೇಳಿದರು.

ಜಿಸಿಬಿಎಂ ಕಾಲೇಜಿನಲ್ಲಿ ಸೋಮವಾರ ಕಲಾ ಸಂಘ ಆಯೋಜಿಸಿದ್ದ ಕಲಾ ಸಪ್ತಾಹ ಉದ್ಘಾಟಿಸಿ ಅವರು ಮಾತನಾಡಿದರು. ಸೋಲು ಮತ್ತು ಗೆಲುವಿಗಿಂತ ಸ್ಪರ್ಧೆಯಲ್ಲಿ ಭಾಗವಹಿಸುವುದು ಮುಖ್ಯ. ನಮ್ಮನ್ನು ನಾವು ಸ್ಪರ್ಧೆಗೆ ಒಡ್ಡಿಕೊಂಡಾಗ ನಮ್ಮ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಸಾಧ್ಯ ಎಂದರು.

ಕನ್ನಡ ಸಾಹಿತ್ಯ ಪರಿಷತ್‌ನ ತಾಲ್ಲೂಕು ಅಧ್ಯಕ್ಷ ಗಿಣಕಲ್ ಸುರೇಂದ್ರ ಮಾತನಾಡಿ, ವಿದ್ಯಾರ್ಥಿ ಜೀವನದಲ್ಲಿ ಪಾಠದೊಂದಿಗೆ ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ನಮ್ಮ ಜ್ಞಾನರ್ಜನೆಯನ್ನು ಹೆಚ್ಚಿಸಿಕೊಳ್ಳಬೇಕು ಎಂದರು.

ಕಾಲೇಜಿನ ಪ್ರಾಚಾರ್ಯ ಡಾ. ಎಚ್. ಸಿ. ವೀರಪ್ಪಗೌಡ ಅಧ್ಯಕ್ಷತೆ ವಹಿಸಿದ್ದರು.

ಪದವಿಪೂರ್ವ ಕಾಲೇಜಿನ ಪ್ರಾಚಾರ್ಯ ಡಾ. ಸಿ.ವಿ. ಗಿರಿಧರ ಶಾಸ್ತ್ರಿ, ಇತಿಹಾಸ ವಿಭಾಗದ ಮುಖ್ಯಸ್ಥ ಡಾ. ಪ್ರಕಾಶ್, ಕೆ.ಎಸ್. ವೆಂಕಪ್ಪ, ಕಲಾ ಸಂಘದ ಅಧ್ಯಕ್ಷ ಕೆ.ಎನ್. ನಿಧಿ ಇತರರು ಇದ್ದರು.

Scanned by CamScanner



ಉದ್ಘಾಟನೆ

ಶೃಂಗೇರಿಯ ಜಿಸಿಬಿಎಂ ಕಾಲೇಜಿನಲ್ಲಿ ಸೋಮವಾರ ಕಲಾ ಸಂಘ ಆಯೋಜಿಸಿದ್ದ ಕಲಾ ಸಪ್ತಾಹವನ್ನು ನಿವೃತ್ತ ಪ್ರಾಧ್ಯಾಪಕ ಗಜಾನನ ಎಂ. ಭಟ್ ಉದ್ಘಾಟಿಸಿದರು.

Scanned by CamScanner

7-12-12

ಕುವೆಂಪು ವಿಶ್ವವಿದ್ಯಾನಿಲಯದ ಪದವಿ ವಿಭಾಗದ ರ‍್ಯಾಂಕ್ ವಿಜೇತರು



ಬಿಎಸ್ಸಿ ಪದವಿ ರ‍್ಯಾಂಕ್

1. ಪಲ್ಲವಿಗೌಡ ಬಿ.ಎಸ್ ಬಿ.ಎಸ್ಸಿ ಪದವಿ ಪರೀಕ್ಷೆಯಲ್ಲಿ 2. ಪಲ್ಲವಿಗೌಡ ಬಿ.ಎಸ್ಸಿ ಪದವಿ ಪರೀಕ್ಷೆಯಲ್ಲಿ 3. ಪಲ್ಲವಿಗೌಡ ಬಿ.ಎಸ್ಸಿ ಪದವಿ ಪರೀಕ್ಷೆಯಲ್ಲಿ 4. ಪಲ್ಲವಿಗೌಡ ಬಿ.ಎಸ್ಸಿ ಪದವಿ ಪರೀಕ್ಷೆಯಲ್ಲಿ 5. ಪಲ್ಲವಿಗೌಡ ಬಿ.ಎಸ್ಸಿ ಪದವಿ ಪರೀಕ್ಷೆಯಲ್ಲಿ 6. ಪಲ್ಲವಿಗೌಡ ಬಿ.ಎಸ್ಸಿ ಪದವಿ ಪರೀಕ್ಷೆಯಲ್ಲಿ 7. ಪಲ್ಲವಿಗೌಡ ಬಿ.ಎಸ್ಸಿ ಪದವಿ ಪರೀಕ್ಷೆಯಲ್ಲಿ 8. ಪಲ್ಲವಿಗೌಡ ಬಿ.ಎಸ್ಸಿ ಪದವಿ ಪರೀಕ್ಷೆಯಲ್ಲಿ 9. ಪಲ್ಲವಿಗೌಡ ಬಿ.ಎಸ್ಸಿ ಪದವಿ ಪರೀಕ್ಷೆಯಲ್ಲಿ 10. ಪಲ್ಲವಿಗೌಡ ಬಿ.ಎಸ್ಸಿ ಪದವಿ ಪರೀಕ್ಷೆಯಲ್ಲಿ

Scanned by CamScanner

ಜೆಸಿಬಿಎಂ ಕಾಲೇಜಿಗೆ 4 ರ್‍ಯಾಂಕ್

ಶೃಂಗೇರಿ: ಕುವೆಂಪು ವಿಶ್ವವಿದ್ಯಾಲಯವು ಕಳೆದ ಮೇ ತಿಂಗಳಲ್ಲಿ ನಡೆಸಿದ್ದ ಪದವಿ ಪರೀಕ್ಷೆಯಲ್ಲಿ ಶ್ರೀ ಜೆಸಿಬಿಎಂ ಕಾಲೇಜಿಗೆ 4 ರ್‍ಯಾಂಕ್ ಗಳಿಸಿದೆ. ಬಿಎಸ್ಸಿಯಲ್ಲಿ ಕೆ. ಆರ್. ಪ್ರಿಯಮೇಧ ಶರ್ಮ, (6ನೇ ರ್‍ಯಾಂಕ್), ಜಿ.ಎಸ್. ಆದಿತ್ಯ ರಾವ್. (9ನೇ ರ್‍ಯಾಂಕ್), ಬಿ.ಬಿ. ಅರ್ಜಿನಾ (10ನೇ ರ್‍ಯಾಂಕ್), ಬಿ.ಎ. ತರಗತಿ ಕೆ.ಎಂ. ಅಶ್ವಿನಿ (6ನೇ ರ್‍ಯಾಂಕ್) ಪಡೆದಿದ್ದಾರೆ. ರ್‍ಯಾಂಕ್ ವಿಜೇತರಿಗೆ ಪ್ರಾಚಾರ್ಯ ಡಾ. ಎಚ್.ಸಿ. ವೀರಪ್ಪಗೌಡ ಅಭಿನಂದಿಸಿದ್ದಾರೆ.

Scanned by CamScanner

ಕಾರ್ಯಾಗಾರ ಸಮಾರೋಪ

ಶೃಂಗೇರಿ: ನಮ್ಮ ಮಾತೃ ಭಾಷೆ ಯಾವುದೇ ಆಗಿದ್ದರೂ ಆಂಗ್ಲ ಭಾಷೆ ಕಲಿಕೆ ಅನಿವಾರ್ಯವಾಗಿದೆ ಎಂದು ಹೊನ್ನವಳ್ಳಿ ಎಚ್.ಟಿ.ರಮೇಶ್ ಹೇಳಿದರು.

ಅವರು ಇತ್ತೀಚೆಗೆ ಜೆಸಿಬಿಎಂ ಕಾಲೇಜಿನಲ್ಲಿ ಹಳೇ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ದಿ.ತಿಮ್ಮಪ್ಪಗೌಡ,ಸುಬ್ಬಮ್ಮ ಸ್ಮರಣೆಗಾಗಿ ಆಯೋಜಿಸಿದ್ದ ಆಂಗ್ಲ ಭಾಷೆಯಲ್ಲಿ ಸಂವಹನ ಎರಡು ದಿನಗಳ ತರಬೇತಿ ಕಾರ್ಯಾಗಾರ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು. ಪ್ರಪಂಚದ ಯಾವುದೇ ದೇಶಕ್ಕೆ ತೆರಳಿದರೂ ಆಂಗ್ಲ ಭಾಷೆಯ ಜ್ಞಾನವಿದ್ದರೆ ಅಲ್ಲಿ ವ್ಯವಹರಿಸಬಹುದಾಗಿದೆ. ಮಾತೃ ಭಾಷೆಯ ಬಗ್ಗೆ ತಾತ್ಸಾರ ಸಲ್ಲದು.ಆದರೆ ಬೇರೆ ಭಾಷೆಯ ಬಗ್ಗೆ ದ್ವೇಷವನ್ನು ಇಟ್ಟುಕೊಳ್ಳಬಾರದು ಎಂದರು.

ಕಲ್ಯಾಣಪುರದ ಮಿಲಾಗ್ರೀಸ್ ಇತಿಹಾಸ ವಿಭಾಗದ ನಿವೃತ್ತ ಪ್ರಾಧ್ಯಾಪಕ ಪ್ರೊ. ಎಚ್. ಎಸ್. ರಾಮಚಂದ್ರ ಅವರು ತರಬೇತಿ ನಡೆಸಿಕೊಟ್ಟರು. ಕಾಲೇಜಿನ ಪ್ರಾಚಾರ್ಯ ಡಾ.ಎಚ್.ಸಿ.ವೀರಪ್ಪ ಗೌಡ, ಎನ್ನೆಸ್ಸೆಸ್ ಅಧಿಕಾರಿ ಪ್ರಶಾಂತ್, ಕೆ.ಎಸ್.ವೆಂಕಪ್ಪ ಉಪಸ್ಥಿತರಿದ್ದರು. ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಎಚ್.ಎಸ್. ಸಿದ್ದಪ್ಪ ಅಧ್ಯಕ್ಷತೆ ವಹಿಸಿದ್ದರು.

Scanned by CamScanner

ವಿ.ಕ: 4-1-14

ಭಾವಗೀತೆ ಸ್ಪರ್ಧೆ: ಜಿಸಿಬಿಎಂ ಕಾಲೇಜಿಗೆ ಸಮಗ್ರ ಪ್ರಶಸ್ತಿ

ಶೃಂಗೇರಿ: ಶ್ರೀ ಜೆಸಿಬಿಎಂ ಕಾಲೇಜಿನಲ್ಲಿ ಇತ್ತೀಚೆಗೆ ನಡೆದ ಅಂತರ ಕಾಲೇಜು ಭಾವಗೀತೆಗಳ ಸ್ಪರ್ಧೆ ಭಾವತರಂಗದಲ್ಲಿ ಜೆಸಿಬಿಎಂ ಕಾಲೇಜು ಸಮಗ್ರ ಪ್ರಶಸ್ತಿ ಗಳಿಸಿದೆ.

ಬಿಜಿಎಸ್ ಬಿಎಡ್ ಕಾಲೇಜಿನ ಪ್ರಾಚಾರ್ಯ ಕೆ.ಸಿ.ನಾಗೇಶ್ ಕಾರ್ಯಕ್ರಮ ಉದ್ಘಾಟಿಸಿದರು. ಜೆಸಿಬಿಎಂ ಕಾಲೇಜಿನ ಪದವಿ ಪೂರ್ವ ಬಿಭಾಗದ ಪ್ರಾಚಾರ್ಯ ಡಾ.ಸಿ.ವಿ.ಗಿರಿಧರಶಾಸ್ತ್ರಿ ಅಧ್ಯಕ್ಷತೆ ವಹಿಸಿದ್ದರು. ಪದವಿ ವಿಭಾಗದ ಪ್ರಾಚಾರ್ಯ ಡಾ.ಎಚ್.ಸಿ.ವೀರಪ್ಪಗೌಡ ಹಾಜರಿದ್ದರು. ಐದು ಕಾಲೇಜುಗಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದವು. ತೀರ್ಪುಗಾರರಾಗಿ ರಮೇಶ್ ಬೇಗಾರ್, ಬಿ.ಎಲ್. ರವಿಕುಮಾರ್ ಮತ್ತು ವೈಶಾಲಿ ನಟಶೇಖರ್ ಪಾಲ್ಗೊಂಡರು.

ವಿಭಾ.ಎಂ.ಡೋಂಗ್ರೆ ಸ್ವಾಗತಿಸಿದರು. ಡಿ.ಶಿವಮೂರ್ತಿ ಪ್ರಾಸ್ತಾವಿಕ ಮಾತನಾಡಿದರು. ಉಮೇಶ್ ಶೆಟ್ಟಿ ವಂದಿಸಿದರು.

Scanned by CamScanner

'ಶಿಕ್ಷಣ ಎಲ್ಲರಿಗೂ ದೊರೆಯುವಂತಾಗಲಿ'

■ ವಿಶೇಷ ಪ್ರತಿನಿಧಿ ಶೃಂಗೇರಿ

ವಿದ್ಯೆಯಿಂದ ಗಳಿಸಿದ ಉದ್ಯೋಗದಲ್ಲಿ ಯಾರು ಅಹಂಕಾರ ಪಡುತ್ತಾರೋ ಅದು ವಿದ್ಯೆ ಅಲ್ಲ. ಶಿಕ್ಷಣ ಎಂಬುದು ಯಾರೊಬ್ಬರ ಸ್ವತ್ತಾಗಿರದೆ ಯಾರು ಬೇಕಾದರೂ ಪಡೆಯುವ ಅವಕಾಶವಿರಬೇಕು ಎಂದು ಸಾಹಿತಿ ಬೆಂಗಳೂರಿನ ಎಚ್.ಎಸ್.ರಾಘವೇಂದ್ರರಾವ್ ಹೇಳಿದರು.

ಅವರು ಗುರುವಾರ ಜೆಸಿಬಿಎಂ ಕಾಲೇಜಿನಲ್ಲಿ ಆಯೋಜಿಸಿದ್ದ ಡಾ.ಕೆ.ಬಿ.ರಾಮಕೃಷ್ಣರಾವ್ ದತ್ತಿ ಉಪನ್ಯಾಸ ಮತ್ತು ಗುರು ನಮನ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದರು. ಶಿಕ್ಷಕರು ಕೇವಲ ತನ್ನ ವೃತ್ತಿ ಮಾಡುವುದರೊಂದಿಗೆ ವಿಷಯದ ಬಗ್ಗೆ ಪ್ರೀತಿ ಇರಬೇಕು. ವಿಷಯ ಕಲಿಸುವ ಕಲೆ ಇರಬೇಕು ಹಾಗೇಯೇ ವಿದ್ಯಾರ್ಥಿಗಳ ಬಗ್ಗೆ ಕಾಳಜಿ ಹಾಗೂ ಪ್ರೀತಿ ಇರಬೇಕು. ಈಗ ವಿದ್ವಾಂಸರು ತಮಗೆ ವಿದ್ಯೆ ನೀಡಿದವರನ್ನು ಮರೆಯುತ್ತಿರುವುದು ದುರಂತವೆಂದ ಅವರು, ಶಿಕ್ಷಣ ಎಂಬುದು ಕೇವಲ ನಾಲ್ಕು ಗೋಡೆಗಳ ನಡುವೆ ಮಾತ್ರ ಕಲಿಯುವಂತಹದಲ್ಲ. ಸಮಾನತೆ ಕಲಿಸಬೇಕಾದ ಶಿಕ್ಷಣ ಈಗ ಅಸಮಾನತೆ ಸೃಷ್ಟಿಸಿದೆ. ಶಿಕ್ಷಣದಲ್ಲಿ ಹಣ, ಜಾತಿ, ಲಿಂಗದ ವ್ಯಭುತ್ವ ಹೆಚ್ಚುತ್ತಿದೆ. ಸರಕಾರ ಎಲ್ಲರಿಗೂ ಶಿಕ್ಷಣ ನೀಡುವಂತಾಗಬೇಕು ಎಂದರು.

ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಎ.ಸಿ.ವಜ್ರಪ್ಪ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಉದ್ಯಮಿ ಕೆ.ಎಸ್. ರಾಘವೇಂದ್ರನಾಯಕ್ ಹಾಜರಿದ್ದರು. ಇದೇ ಸಂದರ್ಭ ಕಾಲೇಜಿನ ಅಧ್ಯಾಪಕರಿಗೆ ಸನ್ಮಾನ ಕಾರ್ಯಕ್ರಮ ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಯಿತು. ಬಂದಿರಾಣಿ ಮತ್ತು ಶಾಶ್ವತಿ ಪ್ರಾರ್ಥಿಸಿದರು. ಡಾ.ಎಚ್.ಸಿ.ವೀರಪ್ಪಗೌಡ ಸ್ವಾಗತಿಸಿದರು. ಹಳೆ ವಿದ್ಯಾರ್ಥಿ ಸಂಘದ ಸ್ಥಾಪಕ ಅಧ್ಯಕ್ಷ ಕೆ.ವಿ.ಆರ್.ಟ್ಯಾಗೂರ್ ಪ್ರಾಸ್ತಾವಿಕ ಮಾತನಾಡಿದರು. ಕೆ.ಎಸ್.ಪಂಕಜ ನಿರೂಪಿಸಿದರು.



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ಆಯೋಜಿಸಿದ್ದ ಡಾ.ಕೆ.ಬಿ.ರಾಮಕೃಷ್ಣರಾವ್ ದತ್ತಿ ಉಪನ್ಯಾಸ ಮತ್ತು ಗುರುನಮನ ಕಾರ್ಯಕ್ರಮದಲ್ಲಿ ಸಾಹಿತಿ ಎಚ್.ಎಸ್.ರಾಘವೇಂದ್ರರಾವ್ ಉಪನ್ಯಾಸ ನೀಡಿದರು.

Scanned by CamScanner

ಹಳೆಗನ್ನಡ ಸಾಹಿತ್ಯ ಬಗ್ಗೆ ನಿರುತ್ಸಾಹ: ವಿಷಾದ

ವಿಕ ಸುದ್ದಿಲೋಕ ಶೃಂಗೇರಿ

ಶಿಕ್ಷಕರು ಮತ್ತು ವಿದ್ಯಾರ್ಥಿಗಳಲ್ಲಿ ಹಳೆಗನ್ನಡವು ಕಷ್ಟಕರ, ಅದರಲ್ಲಿ ಏನಿದೆ ಎಂಬ ಧೋರಣೆ ಬೆಳೆದಿದ್ದರಿಂದ ಈ ಭಾಷೆಯ ಮೇಲಿನ ಪ್ರೀತಿ ಕಮರಿ ಹೋಗುವಂತಾಗಿದೆ ಎಂದು ಮೈಸೂರು ವಿ.ವಿ. ಕನ್ನಡ ಪ್ರಾಧ್ಯಾಪಕ ಡಾ.ತಾರಾನಾಥ್ ವಿಷಾದಿಸಿದರು.

ಶ್ರೀಜೆಸಿಬಿಎಂ ಕಾಲೇಜಿನಲ್ಲಿ ಮೈಸೂರು ಮಾನಸಗಂಗೋತ್ರಿಯ ಭಾರತೀಯ ಭಾಷಾಕೇಂದ್ರ ಹಾಗೂ ದೇವನೂರಿನ ಕವಿ ಲಕ್ಷ್ಮೀಶ ಸಂಶೋಧನ ಕೇಂದ್ರ ಆಶ್ರಯದಲ್ಲಿ ಗುರುವಾರ ನಡೆದ ಎರಡು ದಿನಗಳ 'ಹಳೆಗನ್ನಡ ಓದು' ಶೀರ್ಷಿಕೆಯ ಪ್ರಶಿಕ್ಷಣ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು. ವರ್ತಮಾನ ಕಾಲಘಟ್ಟದಲ್ಲಿ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಹಳೆಗನ್ನಡ ಸಾಹಿತ್ಯದ ಬಗ್ಗೆ ನಿರುತ್ಸಾಹ ತೋರುತ್ತಿದ್ದಾರೆ. ಕಿಟ್ಟಲ್, ರೈಸ್, ಮೋಗ್ಲಿಂಗ್, ಫ್ಲೀಟ್ ಮೊದಲಾದ ವಿದೇಶಿಯರು ಕನ್ನಡ ಭಾಷೆ ಮತ್ತು ಭಾವನೆಯ ಸೊಗಡನ್ನು ಅರಿತು ಕಠಿಣವಾದ ಹಳೆಗನ್ನಡದ ಛಂದಸ್ಸು, ವ್ಯಾಕರಣ ಮತ್ತು ಕಾವ್ಯಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಇದು ಅವರಲ್ಲಿ ಭಾಷೆಯ ಬಗ್ಗೆ ಇದ್ದ ಅದಮ್ಯ ಪ್ರೀತಿ ಹಾಗೂ ಹಟವನ್ನು ತೋರಿಸುತ್ತದೆ. ಅಭಿಜಾತ ಸಾಹಿತ್ಯವನ್ನು ಓದಲೇ ಬೇಕೆಂಬುದರ ಬಗ್ಗೆ ವಿದೇಶಿಯರಿಗಿದ್ದಷ್ಟು ಆಸಕ್ತಿ ಕನ್ನಡಿಗರಿಗಿಲ್ಲ ಎಂದು ಅವರು ಹೇಳಿದರು.

ಕ್ಯಾಂಪಸ್

ಕುವೆಂಪು ವಿ.ವಿ. ಕನ್ನಡ ನಿವೃತ್ತ ಪ್ರಾಧ್ಯಾಪಕ ಡಾ.ತಿ.ನಂ. ಶಂಕರನಾರಾಯಣ ಮಾತನಾಡಿ, ಪಂಪ, ರನ್ನ, ಪೊನ್ನ ಮೊದಲಾದ ಅಗ್ರಮಾನ್ಯ ಕವಿಗಳ ಕಾವ್ಯಗಳು ಇಂದಿನ ಜೀವನಕ್ಕೂ ಬೇಕಾಗುವ ಎಲ್ಲ ಅಂಶಗಳನ್ನು ಹೊರ ಹೊಮ್ಮಿಸುತ್ತವೆ. ವಿ.ವಿ.ಯ ಆಧುನಿಕ ಧೋರಣೆಯ ಉಪನ್ಯಾಸಕ ವರ್ಗದವರು ಇವನ್ನು ಕಡೆಗಣಿಸಿ ಸದಭಿರುಚಿ ರಹಿತ ಸಾಹಿತ್ಯವನ್ನು ವಿದ್ಯಾರ್ಥಿಗಳ ಮೇಲೆ ಹೇರುತ್ತಿದ್ದಾರೆಂದು ಆರೋಪಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಭಾರತೀಯ ಭಾಷಾ ಕೇಂದ್ರದ ಉಪನಿರ್ದೇಶಕ ಡಾ.ಆರ್. ಸುಬ್ಬಕೃಷ್ಣ , ಇಂದಿನ ಈ ಶಿಬಿರವು ಆಸಕ್ತ ಗ್ರಾಮೀಣ ಕನ್ನಡಿಗರನ್ನು ತಲುಪುವಂತಾಗಲಿ ಎಂದು ಹಾರೈಸಿದರು. ಕಾಲೇಜು ಪ್ರಾಂಶುಪಾಲ ಡಾ.ಎಚ್.ಸಿ.ವೀರಪ್ಪಗೌಡ ಮತ್ತು ಶಿಬಿರ ಸಂಚಾಲಕ ಡಾ.ಡಿ.ಆರ್. ಪಾಂಡುರಂಗ ಹಾಜರಿದ್ದರು.

ಡಿ.ಆರ್.ವೆಂಕಟಸುಬ್ಬಯ್ಯ ಅವರು ಗಮಕ ವಾಚನದ ಮೂಲಕ ಪ್ರಾರ್ಥಿಸಿದರು. ಕೆ.ಎಸ್. ವೆಂಕಪ್ಪ ಸ್ವಾಗತಿಸಿ, ಎಚ್.ಜಿ.ಅನಿತಾ ವಂದಿಸಿದರು.



ಶೃಂಗೇರಿಯ ಶ್ರೀಜೆಸಿಬಿಎಂ ಕಾಲೇಜಿನಲ್ಲಿ ನಡೆದ 2 ದಿನಗಳ ಹಳೆಗನ್ನಡ ಪ್ರಶಿಕ್ಷಣ ಶಿಬಿರವನ್ನು ಮೈಸೂರು ವಿ.ವಿ. ಕನ್ನಡ ಪ್ರಾಧ್ಯಾಪಕ ಡಾ.ತಾರಾನಾಥ್ ಉದ್ಘಾಟಿಸಿದರು.

Scanned by CamScanner

ಹಳಗನ್ನಡ ಸಾರ್ವಕಾಲಿಕ ಮೌಲ್ಯ ಹೊಂದಿದೆ

ಶೃಂಗೇರಿ ಆ.31: ಹಳಗನ್ನಡ ಸಾಹಿತ್ಯ ಜಯಾ ಕಾಲಘಟ್ಟಗಳಸಂಸ್ಕಾರಗಳಿಂದಪರಿಪೂರ್ಣಗೊಂಡವು ಆಗಿದ್ದು ಕಾವ್ಯಲಕ್ಷಣಗಳಿಂದ ಸರ್ವಕಾಲಿಕ ಮೌಲ್ಯವನ್ನು ಹೊಂದಿವೆ. ಇದರ ಪರಿಣಾಮಕಾರಿ ಓದು ಬಹಳ ಮುಖ್ಯ ಎಂದು ಕುವೆಂಪು ವಿ.ವಿ.ಯ ನಿವೃತ್ತ ಕನ್ನಡ ಪ್ರಾಧ್ಯಾಪಕ ಡಾ.ಶ್ರೀಕಂಠಕೊಡಗಿ ತಿಳಿಸಿದರು.

ಶ್ರೀ ಜೆಸಿಬಿಎಂ ಕಾಲೇಜಿನಲ್ಲಿ ಎರಡು ದಿನಗಳ ಕಾಲ ನಡೆದ ಹಳಗನ್ನಡ ಓದು ಪ್ರತಿಕ್ಷಣ ಶಿಬಿರದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ಭಾರತೀಯ ಭಾಷಾ ಸಂಸ್ಥಾನದ ಉಪನಿರ್ದೇಶಕ ಡಾ.ಸುಬ್ಬಕೃಷ್ಣ ಅಧ್ಯಕ್ಷತೆ ವಹಿಸಿದ್ದರು. ಡಾ.ತಾರಾನಾಥ್, ಡಾ. ಡಿ.ಆರ್.ಪಾಂಡುರಂಗ, ರಂಗರಾಜನ್, ಡಾ.ಹೆಚ್.ಸಿ.ವೀರಪ್ಪಗೌಡ ವೇದಿಕೆಯಲ್ಲಿ ಉಪಸ್ಥಿತರಿದ್ದರು. ವೆಂಕಪ್ಪನವರು ಸ್ವಾಗತ ಕೋರಿದರು. ಸಿ.ಹೆಚ್.ಎನ್. ಮಂಜುನಾಥ ಗೌಡ ನಿರೂಪಿಸಿ, ಅನಿತಾ ಹೆಚ್.ಜೆ. ವಂದನಾರ್ಪಣೆ ಸಮರ್ಪಿಸಿದರು.



Scanned by CamScanner

ಹಳೆಗನ್ನಡ ಭಾಷಾ ವ್ಯಾಮೋಹ ಬೆಳೆಯಲಿ: ಡಾ. ತಾರಾನಾಥ್



ಪೆರಂಗಿಯ ಬಿಜಿಯಂ ಕಾಲೇಜಿನಲ್ಲಿ ಉದ್ಘಾಟಿಸಿದ 'ಹಳೆಗನ್ನಡ ಓದು' ತರಬೇತಿಯನ್ನು ಪ್ರೊಫೆಸರ್ ವಿ ಬಿ ಅಕ್ಷರ ಅಧ್ಯಕ್ಷತೆಯಲ್ಲಿ ಡಾ. ತಾರಾನಾಥ್ ಉದ್ಘಾಟಿಸಿದರು.

ಹಳೆಗನ್ನಡ ಒಲ್ಲೆ ಕನ್ನಡಮು ಅಯ್ಕೆ
ಬೆಳಸಿಪೋದೆ ಕನ್ನಡ ಭಾಷೆ
ಬೆಳೆಯಾಕ್ಕೆ ನಿಮ್ಮಿಂದಾಗಲ್ಲ
ಕನ್ನಡ ಭಾಷಾ ವ್ಯಾಮೋಹ
ಬೆಳೆಸುವಲ್ಲಿ ಸಾರ್ವಜನಿಕರು
ಪ್ರಯತ್ನ ಮಾಡಬೇಕು.

ಡಾ. ತಾರಾನಾಥ್

ಹಳೆಗನ್ನಡ ಅಧ್ಯಯನ

Scanned by CamScanner

ಹಳೆಗನ್ನಡ: ಅಧ್ಯಾಪಕರು-ವಿದ್ಯಾರ್ಥಿಗಳ ನಿರುತ್ಸಾಹ



ಶೃಂಗೇರಿಯ ಶ್ರೀಜೆಸಿಬಿಎಂ ಕಾಲೇಜಿನಲ್ಲಿ ನಡೆದ 2 ದಿನಗಳ ಹಳೆಗನ್ನಡ ಪ್ರಶಿಕ್ಷಣ ಶಿಬಿರವನ್ನು ಮೈಸೂರು ವಿ.ವಿ. ಕನ್ನಡ ಪ್ರಾಧ್ಯಾಪಕ ಡಾ.ತಾರಾನಾಥ್ ಉದ್ಘಾಟಿಸಿದರು.

ಶೃಂಗೇರಿ, ಆ. 30: ವರ್ತಮಾನ ಕಾಲಘಟ್ಟದಲ್ಲಿ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಹಳೆಗನ್ನಡ ಸಾಹಿತ್ಯದ ಬಗ್ಗೆ ನಿರುತ್ಸಾಹ ತೋರುತ್ತಿದ್ದಾರೆ ಎಂದು ಮೈಸೂರು ವಿ.ವಿ. ಕನ್ನಡ ಪ್ರಾಧ್ಯಾಪಕ ಡಾ.ತಾರಾನಾಥ್ ಆಕ್ಷೇಪಿಸಿದರು.

ಶ್ರೀಜೆಸಿಬಿಎಂಕಾಲೇಜಿನಲ್ಲಿಮೈಸೂರುಮಾನಸ ಗಂಗೋತ್ರಿಯ ಭಾರತೀಯ ಭಾಷಾಕೇಂದ್ರ ಹಾಗೂದೇವನೂರಿನಕವಿಲಕ್ಷ್ಮೀಶಸಂಶೋಧನಾ ಕೇಂದ್ರದ ಸಂಯುಕ್ತ ಆಶ್ರಯದಲ್ಲಿ ನಡೆದ ಎರಡು ದಿನಗಳ 'ಹಳೆಗನ್ನಡ ಓದು' ಶೀರ್ಷಿಕೆಯ ಪ್ರಶಿಕ್ಷಣ ಶಿಬಿರ ಉದ್ಘಾಟಿಸಿ ಮಾತನಾಡಿದರು.

ಸಾಮಾನ್ಯವಾಗಿ ಶಿಕ್ಷಕ-ಶಿಕ್ಷಾರ್ಥಿಗಳಲ್ಲಿ ಹಳೆಗನ್ನಡವು ಕಷ್ಟಕರ, ಅದರಲ್ಲಿ ಏನಿದೆ ಎಂಬ ಧೋರಣೆ ಬೆಳೆದಿದ್ದರಿಂದ ಈ ಭಾಷೆಯ ಮೇಲಿನ ಪ್ರೀತಿ ಕಮರಿ ಹೋಗುವಂತಾಗಿದೆ. ಕಿಟ್ಟಲ್, ರೈಸ್, ಮೋಗ್ಲಿಂಗ್, ಫ್ಲೀಟ್ ಮೊದಲಾದ ವಿದೇಶಿಯರು ಕನ್ನಡ ಭಾಷೆ ಮತ್ತು ಭಾವನೆಯ ಸೊಗಡನ್ನು ಅರಿತು ಕಠಿಣವಾದ ಹಳೆಗನ್ನಡದ ಛಂದಸ್ಸು, ವ್ಯಾಕರಣ ಮತ್ತು ಕಾವ್ಯಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಇದು ಅವರಲ್ಲಿ ಭಾಷೆಯ ಬಗ್ಗೆ ಇದ್ದ ಅದಮ್ಯ ಪ್ರೀತಿ ಹಾಗೂ ಹಠವನ್ನು ತೋರಿಸುತ್ತದೆ. ಅಭಿಜಾತ ಸಾಹಿತ್ಯವನ್ನು ಓದಲೇಬೇಕೆಂಬುದರ ಬಗ್ಗೆ ವಿದೇಶಿಯರಿಗಿದ್ದಷ್ಟು ಆಸಕ್ತಿಯು ಕನ್ನಡಿಗರಿಗಿಲ್ಲ ಎಂದು ವಿಷಾದಿಸಿದರು.

ಕುವೆಂಪು ವಿ.ವಿ.ಯ ನಿ.ಕನ್ನಡ ಪ್ರಾಧ್ಯಾಪಕ ಡಾ.ತಿ.ನಂ. ಶಂಕರನಾರಾಯಣ. ಮಾತನಾಡಿ, ಪಂಪ, ರನ್ನ, ಪೊನ್ನ ಮೊದಲಾದ ಅಗ್ರಮಾನ್ಯ ಕವಿಗಳ ಕಾವ್ಯಗಳು ಇಂದಿನ ಜೀವನಕ್ಕೂ ಬೇಕಾಗುವ ಎಲ್ಲಾ ಅಂಶಗಳನ್ನು ಹೊರ ಹೊಮ್ಮಿಸುತ್ತಿವೆ. ವಿ.ವಿ.ಯ ಆಧುನಿಕ ಧೋರಣೆಯ ಉಪನ್ಯಾಸಕವರ್ಗದವರು ಇವನ್ನು ಕಡೆಗಣಿಸಿ ಸದಭಿ ರುಚಿ ರಹಿತ ಸಾಹಿತ್ಯವನ್ನು ವಿದ್ಯಾರ್ಥಿಗಳ ಮೇಲೆ ಹೇರುತ್ತಿದ್ದಾರೆಂದು ಆರೋಪಿಸಿದರು.

ಭಾರತೀಯ ಭಾಷಾ ಕೇಂದ್ರದ ಉಪನಿರ್ದೇಶಕ ಡಾ.ಆರ್.ಸುಬ್ಬಕೃಷ್ಣರವರು ಅಧ್ಯಕ್ಷ ಸ್ಥಾನದಿಂದ ಮಾತನಾಡಿ, ಇಂದಿನ ಈ ಶಿಬಿರವು ಆಸಕ್ತ ಗ್ರಾಮೀಣ ಕನ್ನಡಿಗರನ್ನು ತಲುಪುವಂತಾಗಲಿ ಎಂದು ಹಾರೈಸಿದರು. ಪ್ರಾಂಶುಪಾಲ ಡಾ.ಹೆಚ್.ಸಿ.ವೀರಪ್ಪಗೌಡ ಮತ್ತು ಶಿಬಿರ ಸಂಚಾಲಕ ಡಾ. ಪಾಂಡುರಂಗ ವೇದಿಕೆಯಲ್ಲಿದ್ದರು. ಡಿ.ಆರ್.ವೆಂಕಟಸುಬ್ಬಯ್ಯ ಗಮಕ ವಾಚನದ ಮೂಲಕ ಪ್ರಾರ್ಥಿಸಿದರು. ಕೆ.ಎಸ್.ವೆಂಕಪ್ಪ ಸ್ವಾಗತಿಸಿದರು. ಅನಿತಾ ಹೆಚ್.ಜಿ. ವಂದಿಸಿದರು.

Scanned by CamScanner



ಶೃಂಗೇರಿ: ಇತ್ತೀಚೆಗೆ ನಡೆದ ಕುವೆಂಪು ವಿಶ್ವವಿದ್ಯಾನಿಲಯದ ಆಂತರಿಕ ಕಾಲೇಜು ಮಟ್ಟದ ಟೇಬಲ್ ಟೆನ್ನಿಸ್ ಪಂದ್ಯಾವಳಿಯಲ್ಲಿ ಶ್ರೀ ಜೆ.ಸಿ.ಬಿ.ಎಂ. ಕಾಲೇಜಿನ ತಂಡ ಪ್ರಥಮ ಸ್ಥಾನ ಗಳಿಸಿದೆ. ಚಿತ್ರದಲ್ಲಿ ಪ್ರಾಂಶುಪಾಲ ಡಾ.ಹೆಚ್.ಸಿ.ವೀರಪ್ಪಗೌಡ ಮತ್ತು ದೈಹಿಕ ಶಿಕ್ಷಕ ಎಮ್.ವಿ. ಲೋಕೇಶ್‌ರೊಂದಿಗೆ ವಿಜೇತ ಸ್ಪರ್ಧಿಗಳಾದ ಶ್ರೀಜಿತ್ ಜಿ.ಆರ್., ಪೃಥ್ವಿರಾಜ್ ಹೆಚ್.ಎಸ್., ವೆಂಕಟೇಶ್ ಪಿ., ಪ್ರಮೋದ್‌ವಾಸ್, ಸುಪ್ರೀಮ್ ಇ.ಎಸ್. ರವರನ್ನು ಕಾಣಬಹುದು.

Scanned by CamScanner

ಶೃಂಗೇರಿ: ಸೆಪ್ಟಂಬರ್ 5; ಗುರುನಮನ, ದತ್ತಿ ಉಪನ್ಯಾಸ

ಶೃಂಗೇರಿ ಇಲ್ಲಿನ ಶ್ರೀ ಜೆ.ಸಿ.ಬಿ.ಎಂ. ಕಾಲೇಜಿನಲ್ಲಿ ಸೆಪ್ಟೆಂಬರ್ 5 ರ ಗುರುವಾರ ದಂದು ಬೆಳಿಗ್ಗೆ 10-00 ರಿಂದ ಗುರುನಮನ ಮತ್ತು ಪ್ರಾಚಾರ್ಯ ಡಾ.ಕೆ.ಬಿ.ರಾಮಕೃಷ್ಣರಾವ್ ದತ್ತಿ ಉಪನ್ಯಾಸ ಕಾರ್ಯಕ್ರಮ ನಡೆಯಲಿದೆ. ಕಾಲೇಜಿನ ಹಳೇ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಎ.ಸಿ. ವಜ್ರಪ್ಪ ರವರ ಅಧ್ಯಕ್ಷತೆಯಲ್ಲಿ ನಡೆಯಲಿರುವ ಈ ಕಾರ್ಯಕ್ರಮದಲ್ಲಿ ಖ್ಯಾತ ಸಾಹಿತಿ ಬೆಂಗಳೂರಿನ ಪ್ರೊ. ಹೆಚ್.ಎಸ್. ರಾಘವೇಂದ್ರ ರಾವ್ ದತ್ತಿ ಉಪನ್ಯಾಸ ನೀಡಲಿದ್ದಾರೆ. ಕೆಸಗೋಡು ರಾಘವೇಂದ್ರ ನಾಯಕ್ ಮುಖ್ಯ ಅತಿಥಿಗಳಾಗಿ ಉಪಸ್ಥಿತರಿರಲಿದ್ದಾರೆ. ಕಾರ್ಯಕ್ರಮದಲ್ಲಿ ಸಹಾಯಧನ ವಿತರಣೆ, ಸನ್ಮಾನ, ಪ್ರತಿಭಾ ಪುರಸ್ಕಾರ ನಡೆಯಲಿದೆ ಎಂದು ಹಳೇ ವಿದ್ಯಾರ್ಥಿ ಸಂಘದ ಪ್ರಧಾನ ಕಾರ್ಯದರ್ಶಿ ಕೆ.ಎಸ್. ವೆಂಕಪ್ಪ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

Scanned by CamScanner

ಶೃಂಗೇರಿ: ಸೆಪ್ಟಂಬರ್ 5; ಗುರುನಮನ, ದತ್ತಿ ಉಪನ್ಯಾಸ

ಶೃಂಗೇರಿ ಇಲ್ಲಿನ ಶ್ರೀ ಜೆ.ಸಿ.ಬಿ.ಎಂ. ಕಾಲೇಜಿನಲ್ಲಿ ಸೆಪ್ಟೆಂಬರ್ 5 ರ ಗುರುವಾರ ದಂದು ಬೆಳಿಗ್ಗೆ 10-00 ರಂದ ಗುರುನಮನ ಮತ್ತು ಪ್ರಾಚಾರ್ಯ ಡಾ.ಕೆ.ಬಿ.ರಾಮಕೃಷ್ಣರಾವ್ ದತ್ತಿ ಉಪನ್ಯಾಸ ಕಾರ್ಯಕ್ರಮ ನಡೆಯಲಿದೆ. ಕಾಲೇಜಿನ ಹಳೇ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಎ.ಸಿ. ವಜ್ರಪ್ಪ ರವರ ಅಧ್ಯಕ್ಷತೆಯಲ್ಲಿ ನಡೆಯಲಿರುವ ಈ ಕಾರ್ಯಕ್ರಮದಲ್ಲಿ ಖ್ಯಾತ ಸಾಹಿತಿ ಬೆಂಗಳೂರಿನ ಪ್ರೊ. ಹೆಚ್.ಎಸ್. ರಾಘವೇಂದ್ರ ರಾವ್ ದತ್ತಿ ಉಪನ್ಯಾಸ ನೀಡಲಿದ್ದಾರೆ. ಕೆಸಗೋಡು ರಾಘವೇಂದ್ರ ನಾಯಕ್ ಮುಖ್ಯ ಅತಿಥಿಗಳಾಗಿ ಉಪಸ್ಥಿತರಿರಲಿದ್ದಾರೆ. ಕಾರ್ಯಕ್ರಮದಲ್ಲಿ ಸಹಾಯಧನ ವಿತರಣೆ, ಸನ್ಮಾನ, ಪ್ರತಿಭಾ ಪುರಸ್ಕಾರ ನಡೆಯಲಿದೆ ಎಂದು ಹಳೇ ವಿದ್ಯಾರ್ಥಿ ಸಂಘದ ಪ್ರಧಾನ ಕಾರ್ಯದರ್ಶಿ ಕೆ.ಎಸ್. ವೆಂಕಪ್ಪ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

Scanned by CamScanner



ಶೃಂಗೇರಿ: ಇತ್ತೀಚೆಗೆ ನಡೆದ ಕುವೆಂಪು ವಿಶ್ವವಿದ್ಯಾನಿಲಯದ ಆಂತರಿಕ ಕಾಲೇಜು ಮಟ್ಟದ ಟೇಬಲ್ ಟೆನ್ನಿಸ್ ಪಂದ್ಯಾವಳಿಯಲ್ಲಿ ಶ್ರೀ ಜೆ.ಸಿ.ಬಿ.ಎಂ. ಕಾಲೇಜಿನ ತಂಡ ಪ್ರಥಮ ಸ್ಥಾನ ಗಳಿಸಿದೆ. ಚಿತ್ರದಲ್ಲಿ ಪ್ರಾಂಶುಪಾಲ ಡಾ.ಹೆಚ್.ಸಿ.ವೀರಪ್ಪಗೌಡ ಮತ್ತು ದೈಹಿಕ ಶಿಕ್ಷಕ ಎಮ್.ವಿ. ಲೋಕೇಶ್‌ರೊಂದಿಗೆ ವಿಜೇತ ಸ್ಪರ್ಧಿಗಳಾದ ಶ್ರೀಜಿತ್ ಜಿ.ಆರ್., ಪೃಥ್ವಿರಾಜ್ ಹೆಚ್.ಎಸ್., ವೆಂಕಟೇಶ್ ಪಿ., ಪ್ರಮೋದ್‌ವಾಸ್, ಸುಪ್ರೀಮ್ ಇ.ಎಸ್. ರವರನ್ನು ಕಾಣಬಹುದು.

Scanned by CamScanner

ಕಾರ್ಗಿಲ್ ವೀರರ ಶೌರ್ಯ ಸಾಹಸ ಗಮನಾರ್ಹ

■ ವಿಶ್ವ ಕುದ್ದಿಲೋಕ ಶೃಂಗೇರಿ

ಕಾರ್ಗಿಲ್‌ನಲ್ಲಿದ್ದ ಪ್ರತಿಕೂಲ ವಾತಾವರಣ ಪರಿಸ್ಥಿತಿ ಹಾಗೂ ಯುದ್ಧದಲ್ಲಿ ಭಾಗವಹಿಸಿದ್ದ ನಮ್ಮ ವೀರ ಸೈನಿಕರ ಶೌರ್ಯ ಸಾಹಸಗಳು ಗಮನಾರ್ಹ ಎಂದು ಉಡುಪಿಯ ಎನ್‌ಸಿಸಿ ಬೆಟಾಲಿಯನ್‌ನ ಕಮಾಂಡಿಂಗ್ ಆಫೀಸರ್ ಕರ್ನಲ್ ಬಿ.ಎಸ್. ಗಿವಾರಿ ಹೇಳಿದರು.

ಅವರು ಇತ್ತೀಚೆಗೆ ಜೆಸಿಬಿಎಂ ಕಾಲೇಜಿನ ಎನ್‌ಸಿಸಿ ಹಾಗೂ ಎನ್‌ಎಸ್‌ಎಸ್ ಘಟಕಗಳು ಏರ್ಪಡಿಸಿದ್ದ ಕಾರ್ಗಿಲ್ ವಿಜಯೋತ್ಸವ ಹಾಗೂ ವೀರ ಯೋಧರಿಗೆ ನಮನ ಕಾರ್ಯಕ್ರಮದಲ್ಲಿ ಮಾತನಾಡಿದರು. ಪರಿಸ್ಥಿತಿ ವಿಕೋಪದ ನಡುವೆ ತಮ್ಮ ಪ್ರಾಣ ಒತ್ತೆಯಿಟ್ಟು ದೇಶಕ್ಕಾಗಿ ಹೋರಾಡಿದ ಸೈನಿಕರನ್ನು ನೆನೆಯುವುದು ನಮ್ಮ ಆದ್ಯ ಕರ್ತವ್ಯವಾಗಿದೆ ಎಂದರು.

ಎನ್‌ಸಿಸಿ ಅಧಿಕಾರಿ ಡಾ.ಈ.ಎಸ್. ಕುಮಾರಸ್ವಾಮಿ ಉಡುಪ ಹಾಗೂ ಎನ್‌ಎಸ್‌ಎಸ್ ಅಧಿಕಾರಿಗಳಾದ ಎನ್.ಎಚ್.ಲಕ್ಷ್ಮೀನಾರಾಯಣ ಮತ್ತು ಎ.ಜಿ.ಪ್ರಶಾಂತ್ ಹಾಜರಿದ್ದರು. ಕಾಲೇಜಿನ ಎನ್‌ಸಿಸಿ ಕೆಡೆಟ್ಸ್ ಹಾಗೂ ಎನ್‌ಎಸ್‌ಎಸ್ ಸ್ವಯಂ ಸೇವಕರು ಭಾಗವಹಿಸಿದ್ದರು.



ಶೃಂಗೇರಿಯ ಜೆಬಿಎಂ ಕಾಲೇಜಿನಲ್ಲಿ ಆಯೋಜಿಸಿದ್ದ ಕಾರ್ಗಿಲ್ ವಿಜಯೋತ್ಸವದಲ್ಲಿ ಎನ್‌ಸಿಸಿ ಅಧಿಕಾರಿ ಬಿ.ಎಸ್. ಗಿವಾರಿ ಮಾತನಾಡಿದರು.

ಕಾರ್ಗಿಲ್ ವಿಜಯೋತ್ಸವ 13

Scanned by CamScanner



ಉದ್ಘಾಟನೆ

ಶೃಂಗೇರಿ ಪಟ್ಟಣದ ಜೆಸಿಬಿಎಂ
ಕಾಲೇಜಿನ ಡಾ.ಟಿಎಂಎ ಪೈ ಸಭಾ
ಗಣದಲ್ಲಿ ನಡೆದ ರಾಷ್ಟ್ರೀಯ
ಸೇವಾ ಯೋಜನೆ ಉದ್ಘಾಟನಾ
ಸಮಾರಂಭದಲ್ಲಿ ಮಠದ ಅಧಿಕ
ಶ್ರೀಪಾದರಾವ್ ಮಾತನಾಡಿದ
ಪ್ರಶಾಂತ್ ಮೊದಲಾದವರು
ಉಪಸ್ಥಿತರಿದ್ದರು.

Scanned by CamScanner

ಜೆಸಿಬಿಎಂ ಎಂಎ ಅರ್ಥಶಾಸ್ತ್ರಕ್ಕೆ ಪ್ರವೇಶ

ಶೃಂಗೇರಿ: ಕುವೆಂಪು ವಿಶ್ವವಿದ್ಯಾನಿಲಯದ ಸಂಯೋಜನೆಗೊಳಪಟ್ಟ ರಾಜ್ಯ ಸರ್ಕಾರದಿಂದ ಅನುಮೋದಿಸಲ್ಪಟ್ಟ ಸ್ನಾತಕೋತ್ತರ ಅರ್ಥಶಾಸ್ತ್ರ ಪದವಿಯನ್ನು ಈ ಸಾಲಿನಲ್ಲಿ ಶೃಂಗೇರಿಯ ಶ್ರೀ ಜೆಸಿಬಿಎಂ ಕಾಲೇಜಿನಲ್ಲಿ ಪ್ರಾರಂಭಿಸಲಾಗಿದ್ದು, ಪ್ರವೇಶ ಪ್ರಕ್ರಿಯೆ ಆರಂಭಗೊಂಡಿದೆ. ಸೀಮಿತ ಪ್ರವೇಶ ಮಿತಿಯನ್ನು ಹೊಂದಿರುವ ಪ್ರಯುಕ್ತ ಮೊದಲು ಬಂದವರಿಗೆ ಆದ್ಯತೆ ನೀಡಲಾಗುವುದು. ಬಿಎ ಪದವಿಯಲ್ಲಿ ಅರ್ಥಶಾಸ್ತ್ರ ವಿಷಯ ಅಧ್ಯಯನ ಮಾಡಿರುವವರು ಪ್ರವೇಶ ಪಡೆಯಬಹುದಾಗಿದೆ. ಸುಸಜ್ಜಿತ ಗ್ರಂಥಾಲಯ, ವಿದ್ಯುನ್ಮಾನ ಬೋಧನಾ ತರಗತಿಗಳು, ಅಗತ್ಯ ಮೂಲಭೂತ ಸೌಕರ್ಯಗಳನ್ನು ಹೊಂದಿರುವುದರ ಜೊತೆಗೆ ಉತ್ತಮ ಬೋಧಕ ವರ್ಗದವರನ್ನು ಒಳಗೊಂಡಿದ್ದು, ಪ್ರವೇಶಾತಿ ಹೊಂದ ಬಯಸುವವರು ಪ್ರಾಂಶುಪಾಲರನ್ನು ಸಂಪರ್ಕಿಸಲು ಸೂಚಿಸಲಾಗಿದೆ.

ಉದಯವಾಣಿ
ಗುರುವಾರ ಜುಲೈ 25, 2013

Scanned by CamScanner

ಉದ್ಯಮವಾಗುತ್ತಿರುವ ಶಿಕ್ಷಣ: ವಿಷಾದ

ಶೃಂಗೇರಿ: ಸೇವಾ ಕ್ಷೇತ್ರಗಳಾಗಿದ್ದ ಶಿಕ್ಷಣ ಮತ್ತು ಆರೋಗ್ಯ ಈಗ ಉದ್ಯಮಗಳಾಗುತ್ತಿರುವುದು ವಿಷಾದನೀಯ ಬೆಳವಣಿಗೆ ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಹೇಳಿದರು.

ಅವರು ಶನಿವಾರ ಜೆಸಿಬಿಎಂ ಕಾಲೇಜಿನಲ್ಲಿ ಶಿಕ್ಷಣ ಸ್ನೇಹಿ ಟ್ರಸ್ಟ್‌ನ ಒಂಬತ್ತನೇ ವರ್ಷದ ನೋಟ್ ಬುಕ್ ವಿತರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಎಲ್ಲ ಕ್ಷೇತ್ರಗಳು ಉದ್ಯಮ ಕ್ಷೇತ್ರಗಳಾಗುತ್ತಿದ್ದರೂ ಸಾಂಸ್ಕೃತಿಕ ಕ್ಷೇತ್ರದಲ್ಲಿ ಜನರು ನಂಬಿಕೆ ಉಳಿಸಿಕೊಂಡಿದ್ದಾರೆ. ಮೂಲಭೂತ ಹಕ್ಕಾದ ಶಿಕ್ಷಣ ಅದೀಗ ಉದ್ಯಮವಾಗಿ ಬೆಳೆಯುತ್ತಿದ್ದು, ಶಿಕ್ಷಣೋದ್ಯಮಿಗಳು ಹೆಚ್ಚುತ್ತಿರುವುದು ಕಳವಳಕಾರಿಯಾಗಿದೆ. ಅದರ ಫಲವಾಗಿ ಉದ್ಯಮಪತಿಗಳು ಶಿಕ್ಷಣದ ಬಗ್ಗೆ ಆದೇಶ ನೀಡುವ ಸ್ಥಿತಿ ನಿರ್ಮಾಣವಾಗಿದೆ. ಸಾಮಾನ್ಯ ಶಿಕ್ಷಣದ ಸಮತೋಲನ ತಪ್ಪಿದ್ದು, ಸಾಮಾನ್ಯ ಶಿಕ್ಷಣದ ಬಗ್ಗೆ ಯಾವ ಸಂಘಟನೆಗಳೂ ಹೋರಾಟ ನಡೆಸುತ್ತಿಲ್ಲ ಎಂದರು.



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ಶಿಕ್ಷಣ ಸ್ನೇಹಿ ಟ್ರಸ್ಟ್‌ನಿಂದ ಕಣಿವಾರ ಅರಿಶಿನಮಿಶ್ರಿತ ನೋಟ್ ಪುಸ್ತಕ ವಿತರಣಾ ಕಾರ್ಯಕ್ರಮವನ್ನು ಡಾ.ಬರಗೂರು ರಾಮಚಂದ್ರಪ್ಪ ಉದ್ಘಾಟಿಸಿದರು.

ಪ್ರಾಥಮಿಕ ಶಿಕ್ಷಣ ಜ್ಞಾನಮುಖಿಯಾಗಬೇಕಾಗಿದ್ದು, ಪ್ರಾಥಮಿಕ ಶಿಕ್ಷಣದ ನಂತರ ಉದ್ಯೋಗ ಮುಖಿ ಶಿಕ್ಷಣ ನೀಡಬೇಕಾಗಿದೆ. ಪ್ರಾಥಮಿಕ ಶಿಕ್ಷಣವೂ ಹಣ ಮಾಡುವ ದಂಧೆಯಾಗುತ್ತಿದ್ದು, ಬಡವರು ಮತ್ತು ಶ್ರೀಮಂತರ ಮಕ್ಕಳಿಗೆ ಬೇರೆ ಬೇರೆ ಶಿಕ್ಷಣ ದೊರಕುತ್ತಿದೆ. ಶಿಕ್ಷಣದಲ್ಲಿ ಸಮಾನತೆ ಬರಬೇಕಾದರೆ ಏಕರೂಪ ಶಿಕ್ಷಣ ವ್ಯವಸ್ಥೆ ಜಾರಿಗೆ ಬರಬೇಕಾಗಿದೆ. ಶಿಕ್ಷಣದಲ್ಲಿ ವರ್ಣಾಶ್ರಮ ನೀತಿ ಅಳವಡಿಸಲಾಗಿದೆ. ವೃತ್ತಿ ಶಿಕ್ಷಣ ಶ್ರೇಷ್ಠವಾದುದು ಮತ್ತು ಸಾಮಾನ್ಯ ಶಿಕ್ಷಣ ಕನಿಷ್ಠವಾದುದು ಎಂಬ ಅಸಮತೋಲನದಿಂದಾಗಿ ಶಿಕ್ಷಣಕ್ಷೇತ್ರ ಅದೃಷ್ಟವಂತರದ್ದಾಗಿದೆ. ಪ್ರಾಥಮಿಕ ಶಿಕ್ಷಣದಲ್ಲಿ ಮೂಲಭೂತ ಬದಲಾವಣೆಯಾಗಬೇಕಾಗಿದೆ. ಏಕರೂಪ ಪಠ್ಯ ಅಳವಡಿಸಬೇಕಾಗಿದ್ದು, ಮಾತೃಭಾಷೆ ಕಲಿಕೆಯಿಂದ ಉದ್ಯೋಗ ಸಿಗುವುದಿಲ್ಲ ಎಂಬ ತಪ್ಪು ಕಲ್ಪನೆ ಇದೆ. ಮಾತೃಭಾಷೆ ಹಾಗೂ ಇಂಗ್ಲಿಷ್ ಜಂಟಿಯಾಗಿ ಕಲಿಕೆಗೆ ತರಬೇಕಾಗಿದೆ ಎಂದರು.

ಬರಹಗಾರ ಸತ್ಯಮೂರ್ತಿ ಆನಂದೂರು ಮಾತನಾಡಿ, ಸರ್ವರಿಗೂ ಶಿಕ್ಷಣ ಎಂಬುದು ನಾಡಿನ ಶೈಕ್ಷಣಿಕ ಧ್ಯೇಯ. ಆದರೆ ಇಂದು ಎಲ್ಲರಿಗೂ ಅವರವರು ಬಯಸಿದ ಶಿಕ್ಷಣ ಸಿಗುತ್ತಿಲ್ಲ. ಜಿಪಚಾರಿಕ ಕ್ರಮದಂತೆ ಬೇಕಾಬಿಟ್ಟಿಯಾಗಿ ಶಿಕ್ಷಣ ನೀಡಲಾಗುತ್ತಿದೆ. ಆಂಗ್ಲ ಭಾಷೆ ಕಲಿಸುವುದನ್ನು ಉದ್ಯಮವಾಗಿರಿಸಿಕೊಳ್ಳಲಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಶಿಕ್ಷಣ ಸ್ನೇಹಿ ಟ್ರಸ್ಟ್ ಅಧ್ಯಕ್ಷ ಆರ್.ಎಲ್. ಹೊನಕೊಪ್ಪ ಮಾತನಾಡಿ, ಶಿಕ್ಷಣ ಕ್ಷೇತ್ರಕ್ಕೆ ಸಹಕಾರ ನೀಡುವ ಉದ್ದೇಶದಿಂದ ಕಳೆದ ಎಂಟು ವರ್ಷಗಳಿಂದ ವಿದ್ಯಾರ್ಥಿಗಳಿಗೆ ಉಚಿತ ನೋಟ್ ಪುಸ್ತಕ ವಿತರಿಸುತ್ತಿದ್ದು, ಈ ಸಾಲಿನಲ್ಲಿ ಸುಮಾರು 7000 ವಿದ್ಯಾರ್ಥಿಗಳಿಗೆ ಪುಸ್ತಕ ನೀಡುತ್ತಿದ್ದೇವೆ ಎಂದರು.

ಕಾಂಗ್ರೆಸ್ ಮುಖಂಡ ಟಿ.ಡಿ.ರಾಜೇಗೌಡ, ಪೀಠಾ ಮುರೊಳ್ಳಿ ಸುಧೀರ್‌ಕುಮಾರ್, ಪ್ರಾಂಶುಪಾಲ ಡಾ ಎಚ್.ಸಿ.ವೀರಭದ್ರಗೌಡ, ಬಿಇಒ ಮಹೇಶ್, ಮಾಜಿ ಹಾಜರಿದ್ದರು. ಕೆ.ಟಿ.ಮಂಜುನಾಥ ಟ್ರಸ್ಟ್‌ನ ಸಂಕ್ಷಿಪ್ತ ವರದಿ ನೀಡಿದರು. ಎಸ್.ಜಿ.ರಾಜಶೇಖರ್ ಪ್ರಾಸ್ತಾವಿಕ ಮಾತನಾಡಿದರು. ಸಂದೇಶ್ ಸ್ವಾಗತಿಸಿದರು. ಮಂಜುನಾಥಗೌಡ ನಿರೂಪಿಸಿ, ಮಂದಾರ ವಂದಿಸಿದರು.

ನಾಡೋಜ ಡಾ.ಬರಗೂರು ರಾಮಚಂದ್ರಪ್ಪ ಅವರನ್ನು ಸನ್ಮಾನಿಸಲಾಯಿತು. ಸಮಾರಂಭದಲ್ಲಿ ಸಾಂಕೇತಿಕವಾಗಿ ವಿವಿಧ ಶಾಲೆಗಳ ವಿದ್ಯಾರ್ಥಿಗಳಿಗೆ ನೋಟ್ ಪುಸ್ತಕ ವಿತರಿಸಲಾಯಿತು.

ಸಾರ್ವಜನಿಕ ನೋಟೀಸ್

ಕಟ್ಟಡಾರವಾದ ಗ್ರೀನ್ ಬಡ್ಸ್ ಆಗ್ರೋ ಪಾರಂ ಲಿ., ಕಾರ್ಯಕರ್ತರುಗಳ ಸಂಘ ನೀಡಿರುವ ಮಾಹಿತಿ ತಿ ಸಾರ್ವಜನಿಕರಿಗೆ ಈ ಕೆಳಕಂಡಂತೆ ನೋಟೀಸ್ ನೀಡುವುದೇನೆಂದರೆ ಸದ್ಸ ಕಟ್ಟಡಾರರು ಗ್ರೀನ್ ಬಡ್ಸ್ ಆಗ್ರೋ ಂ ಲಿ., ಬೆಂಗಳೂರು (ಕಾರ್ಯಕರ್ತರು) ಗಳಾಗಿ ರ್ ನಿರ್ವಹಿಸುತ್ತಿದ್ದು ಸದರಿ ಸಂಸ್ಥೆಯೂ ಜನಿಕರಿಂದ ವಿವಿಧ ಯೋಜನೆಗಳ ಮೂಲಕ ಆರ್.ಡಿ. ಎಫ್.ಡಿ. ರೂಪದಲ್ಲಿ ಹಣ ಸಂಗ್ರಹಿಸಿ ಅದಕ್ಕೆ ಾಗಿ ಬಾಂಡ್‌ಅನ್ನು ವಿತರಿಸುತ್ತಾರೆ. ಇತ್ತೀಚಿನ ಲ್ಲಿ ಸದ್ಸ ಕಟ್ಟಿದಾರರುಗಳಿಗೆ ಸದರಿ ಸಂಸ್ಥೆಯು ಜನಿಕರು ತೊಡಗಿಸಿರುವ ಹಣಕ್ಕೆ ಜವಾಬ್ದಾರಿ ವಾಗಿ ನಡೆಯಿಕೊಳ್ಳಲು ವಿಫಲವಾಗುತ್ತಿರುವ ಿ ಸದ್ಸ ಕಟ್ಟಿದಾರರುಗಳ ಗಮನಕ್ಕೆ ಬಂದಿರುತ್ತದೆ. ೀನ್ ಬಡ್ಸ್ ಆಗ್ರೋ ಪಾರಂ.ಲಿ.ನ ಸಂಸ್ಥೆಯೂ ವ್ಯವಸ್ಥಾಪಕ ನಿರ್ದೇಶಕರಾದ ಬಿ.ಎಲ್. ವೈನಾಥರ ಹೆಸರಿನಲ್ಲಿ) ಕೊಪ್ಪ ಪಟ್ಟಣ ಯಿತಿ ವ್ಯಾಪ್ತಿಯ ಕೆಳಗಿನ ಪೇಟೆಯಲ್ಲಿ 14 ನೇ ಸಾಲಿನ ಆಸ್ಸೆಸ್‌ಮೆಂಟ್ ಸಂಖ್ಯೆ 18 ರಂತೆ ಒಂದು ಖಾಲಿ ನಿವೇಶನ ಹೊಂದಿದ್ದು ಸಂಖ್ಯೆಗೆ ಇದು ಕೊಪ್ಪದಲ್ಲಿರುವ ಏಕೈಕ

Scanned by CamScanner

ಸ್ನಾತಕೋತ್ತರ ಪದವಿ ಆರಂಭ

ಶೃಂಗೇರಿ: ಇಲ್ಲಿನ ಶ್ರೀಜೆಸಿಬಿಎಂ ಕಾಲೇಜಿನಲ್ಲಿ ಪ್ರಸಕ್ತ ಸಾಲಿನಿಂದ ಎಂ.ಎ. ಅರ್ಥಶಾಸ್ತ್ರ ಸ್ನಾತಕೋತ್ತರ ಪದವಿ ಆರಂಭಿಸಿದ್ದು, ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಪ್ರಾಂಶುಪಾಲ ಡಾ.ಎಚ್.ಸಿ.ವೀರಪ್ಪಗೌಡ ತಿಳಿಸಿದ್ದಾರೆ.

ಪಿಎಚ್‌ಡಿ ಪದವಿ

ಶೃಂಗೇರಿ: ಜೆಸಿಬಿಎಂ ಕಾಲೇಜಿನ ಸಸ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಇ.ಎಸ್.ಕುಮಾರಸ್ವಾಮಿ ಉಡುಪ ಅವರು, ಸಿತಾಳೆ ಜಾತಿಯ (ಆರ್ಕಿಡ್ಸ್) ಸಸ್ಯಗಳ ವೈವಿಧ್ಯತೆ ಮತ್ತು ಸಂರಕ್ಷಣೆ ಬಗ್ಗೆ ಮಂಡಿಸಿದ ಸಂಶೋಧನಾ ಪ್ರಬಂಧಕ್ಕೆ ಕುವೆಂಪು ವಿಶ್ವವಿದ್ಯಾ ನಿಲಯವು ಪಿಎಚ್‌ಡಿ ಪದವಿ ನೀಡಿದೆ. ಇವರು ಚಿಕ್ಕಮಗಳೂರು ಜಿಲ್ಲೆಯ ವಿವಿಧ ಕಾಡುಗಳಲ್ಲಿ ದೊರೆಯುವ ಆರ್ಕಿಡ್ಸ್‌ಗಳ ವೈವಿಧ್ಯತೆಗಳ ಬಗ್ಗೆ ಶಿವಮೊಗ್ಗದ ಸಹ್ಯಾದ್ರಿ ವಿಜ್ಞಾನ ಕಾಲೇಜಿನ ಡಾ.ಕೃಷ್ಣಸ್ವಾಮಿ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ಕೈಗೊಂಡಿದ್ದರು.



Scanned by CamScanner

ಕುಮಾರಸ್ವಾಮಿಗೆ ಪಿಎಚ್.ಡಿ

ಶೃಂಗೇರಿ: ಜೆ.ಸಿ.ಬಿ.ಎಂ. ಕಾಲೇಜಿನ ಸಸ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಕುಮಾರಸ್ವಾಮಿ ಉಡುಪ ಅವರು ಮಂಡಿಸಿದ ಸಂಶೋಧನಾ ಪ್ರಬಂಧಕ್ಕೆ ಕುವೆಂಪು ವಿಶ್ವವಿದ್ಯಾಲಯ ಪಿಎಚ್.ಡಿ ನೀಡಿದೆ.



ಚಿಕ್ಕಮಗಳೂರು ಜಿಲ್ಲೆಯ ಪ್ರತಿ ತಾಲ್ಲೂಕಿನ ವಿವಿಧ ರೀತಿಯ ಕಾಡುಗಳಲ್ಲಿ ದೊರೆಯುವ ಸಿತಾಳಿ ಜಾತಿ (ಆರ್ಕಿಡ್ಸ್) ಸಸ್ಯಗಳ ವೈವಿಧ್ಯತೆ ಮತ್ತು ಸಂರಕ್ಷಣೆ ಬಗ್ಗೆ ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನ ಡಾ.ಕೃಷ್ಣಸ್ವಾಮಿ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ಕೈಗೊಂಡಿದ್ದರು.

Scanned by CamScanner

'ಶಿಕ್ಷಣೋದ್ಯಮ ವಿರುದ್ಧ ಹೋರಾಟ ಅಗತ್ಯ'

ಪ್ರಜಾವಾಣಿ ವಾರ್ತೆ

ಶೃಂಗೇರಿ: ಮೂಲಭೂತ ಹಕ್ಕಾಗಿರುವ ಶಿಕ್ಷಣ ಉದ್ಯಮವಾಗಿ ಬೆಳೆಯುತ್ತಿದ್ದು, ಶಿಕ್ಷಣೋದ್ಯಮಿಗಳು ಹೆಚ್ಚುತ್ತಿರುವ ಬೆಳವಣಿಗೆ ವಿರುದ್ಧ ಸಂಘಟಿತ ಹೋರಾಟ ನಡೆಸಬೇಕಿದೆ ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಹೇಳಿದರು.

ಜೆಸಿಬಿಎಂ ಕಾಲೇಜಿನಲ್ಲಿ ಶನಿವಾರ ಶಿಕ್ಷಣ ಸ್ನೇಹಿ ಟ್ರಸ್ಟ್‌ನ ಒಂಬತ್ತನೇ ವರ್ಷದ ನೋಟ್ ಬುಕ್ ವಿತರಣಾ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಸೇವಾ ಕ್ಷೇತ್ರಗಳಾದ ಶಿಕ್ಷಣ ಹಾಗೂ ಆರೋಗ್ಯ ಉದ್ಯಮ ಕ್ಷೇತ್ರವಾಗಿ ಬದಲಾಗುತ್ತಿದೆ. ಇದರಿಂದ ಉದ್ಯಮಪತಿಗಳು ಶೈಕ್ಷಣಿಕ ನೀತಿಯ ಕುರಿತು ಆದೇಶ ನೀಡುವ ಸ್ಥಿತಿ ನಿರ್ಮಾಣವಾಗಿದೆ. ಇದನ್ನು ಸರಿದಾರಿಗೆ ತರಲು ಯಾವ ಸಂಘಟನೆಗಳೂ ಹೋರಾಟ ನಡೆಸದಿರುವುದು ವಿಷಾದನೀಯ ಎಂದರು.

ಇಂದಿನ ಶಿಕ್ಷಣದಲ್ಲಿ ಬಡವ ಮತ್ತು ಶ್ರೀಮಂತರ ಮಕ್ಕಳಿಗೆ ಬೇರೆ ಬೇರೆ ಶಿಕ್ಷಣ ನೀಡುವ ವರ್ಣಾಶ್ರಮ ಪದ್ಧತಿ ಹುಟ್ಟಿಕೊಂಡಿದೆ. ಇದರಿಂದ ಮಕ್ಕಳಲ್ಲಿ ಅಸಮಾನತೆ ಹೆಚ್ಚಾಗಿದೆ. ವೃತ್ತಿ ಶಿಕ್ಷಣ ಶ್ರೇಷ್ಠ ಹಾಗೂ ಸಾಮಾನ್ಯ ಶಿಕ್ಷಣ ಕನಿಷ್ಠ ಎಂಬ ವ್ಯಾಖ್ಯಾನ ನೀಡಲಾಗುತ್ತಿದೆ. ಈ ಅಸಮಾನತೆಯನ್ನು ತೊಡೆದು ಹಾಕಲು ಪ್ರಾಥಮಿಕ ಶಿಕ್ಷಣದಲ್ಲಿ ಮೂಲಭೂತ ಬದಲಾವಣೆ ಆಗಬೇಕಿದ್ದು, ಏಕರೂಪ ಪಠ್ಯ ವ್ಯವಸ್ಥೆಯನ್ನು ಜಾರಿಗೆ ತರಬೇಕಿದೆ ಎಂದರು.



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ಶಿಕ್ಷಣ ಸ್ನೇಹಿ ಟ್ರಸ್ಟ್ ಶನಿವಾರ ಆಯೋಜಿಸಿದ್ದ ನೋಟ್ ಪುಸ್ತಕ ವಿತರಣಾ ಕಾರ್ಯಕ್ರಮವನ್ನು ಬರಗೂರು ರಾಮಚಂದ್ರಪ್ಪ ಉದ್ಘಾಟಿಸಿದರು.

ಶಿಕ್ಷಣ ಸ್ನೇಹಿ ಟ್ರಸ್ಟ್ ಅಧ್ಯಕ್ಷ ಅನಿಲ್ ಹೊಸಕೊಪ್ಪ ಅಧ್ಯಕ್ಷತೆ ವಹಿಸಿದ್ದರು. ಸಾಹಿತಿ ಸತ್ಯಮೂರ್ತಿ ಅನಂದೂರು, ಪ್ರಾಂಶುಪಾಲ ಎಚ್.ಟಿ. ವೀರಪ್ಪ ಗೌಡ, ಟಿ.ಡಿ. ರಾಜೇಗೌಡ, ಮುರ್ತಳ್ಳಿ ಸುಧೀರ್ ಕುಮಾರ್, ಕೆ.ಟಿ. ಮಂಜುನಾಥ್ ಮತ್ತಿತರರು ಇದ್ದರು.

Scanned by CamScanner

ಪಿಯು ಚಂದ್ರಶೇಖರ ಭಾರತಿ ಕಾಲೇಜು: 20 ವಿದ್ಯಾರ್ಥಿಗಳಿಗೆ ವಿಶಿಷ್ಟ ಶ್ರೇಣಿ

ಚಿಕ್ಕಮಗಳೂರು: ಶೃಂಗೇರಿ ಜಗದ್ಗುರು ಚಂದ್ರಶೇಖರ ಭಾರತಿ ಸ್ಮಾರಕ ಪದವಿಪೂರ್ವ ಕಾಲೇಜಿನಲ್ಲಿ ಶೇ 85ಕ್ಕಿಂತ ಅಧಿಕ ಅಂಕ ಪಡೆದ ವಿದ್ಯಾರ್ಥಿಗಳು.



ಬಿ.ಎಸ್.ವಿಧಾತ್ರಿ (ಶೇ 93.83), ಎ.ಎಸ್.ಸಂಪತ್ (ಶೇ 93.50), ಕೆ.ಎಸ್ .ಶ್ರೀಲಕ್ಷ್ಮಿ (ಶೇ 92.50), ಕೆ.ಎಂ. ಭಾಗ್ಯಶ್ರೀ (ಶೇ 90.17)



ಬಿ.ಎನ್.ಪ್ರಚಂಡ (ಶೇ 90.17), ಜೆ.ಪಿ.ಅನುಷ (ಶೇ 89.17), ಎ.ಜಿ.ನಾಗೇಂದ್ರ ಪ್ರಸಾದ್ (ಶೇ 88.50), ಎ.ಮಾನಸ (ಶೇ 88.33).



ಎಚ್.ಎಸ್.ಮೈತ್ರೇಯಿ (ಶೇ 87.33), ಡಿ.ದಿವ್ಯಾ (ಶೇ.87.17), ಬಿ.ಜಿ.ಸುಧಾ (ಶೇ. 86.83), ಜಿ.ವಿ.ಪ್ರಸುಧ (ಶೇ.86.33).



ಎ.ಪೂರ್ಣಾನಂದ (ಶೇ 85.83), ಎಸ್.ಎನ್.ಅನುಷ (ಶೇ 85.33), ಕೆ.ಎಸ್ .ನಹನಾ (ಶೇ 85.33), ಬಿ.ಎಸ್.ನಾಗೇಶ (ಶೇ.85.33).



ಎಸ್.ಸ್ವಾತಿ (ಶೇ 85.17), ಎನ್.ಆರ್.ರಶ್ಮಿ (ಶೇ.85.17), ವಿ.ಎನ್.ಅಭಿಷೇಕ (ಶೇ.85), ವಿ.ಎಸ್.ಸುಮನ್ (ಶೇ.85).

Scanned by CamScanner

ಅರ್ಜಿ ಆಹ್ವಾನ

ಶೃಂಗೇರಿ: ಜೆಸಿಬಿಎಂ ಕಾಲೇಜಿನ ಹಳೆ ವಿದ್ಯಾರ್ಥಿ ಸಂಘದಿಂದ ಪ್ರತಿಭಾವಂತ ಎಸ್ಸೆಸ್ಸೆಲ್ಸಿಯ ಬಡ ವಿದ್ಯಾರ್ಥಿಗಳ ಉಚಿತ ವಿದ್ಯಾಭ್ಯಾಸಕ್ಕಾಗಿ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ. ಶೇ.80 ಕ್ಕಿಂತ ಹೆಚ್ಚು ಅಂಕ ಪಡೆದಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ ಎಂದು ಕಾಲೇಜಿನ ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ವಜ್ರಪ್ಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Scanned by CamScanner

ಪ್ರಜಾವಾಣಿ ದಿನಾಂಕ: 5-5-13

ನ್ಯಾಕ್ ಮಾನ್ಯತೆ

ಶೃಂಗೇರಿ: ಬೆಂಗಳೂರಿನಲ್ಲಿ ನಡೆದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಜೆಸಿಬಿಎಂ ಕಾಲೇಜಿಗೆ ನ್ಯಾಕ್ 'ಎ' ಶ್ರೇಣಿಯ ಉದ್ಘೋಷಣ ಪತ್ರವನ್ನು ಯುಜಿಸಿ ಅಧ್ಯಕ್ಷ ವೇದಪ್ರಕಾಶ್ ಹಸ್ತಾಂತರಿಸಿದರು.



Scanned by CamScanner

ಜೆಸಿಬಿಎಂ ಕಾಲೇಜಿಗೆ 'ಎ' ಶ್ರೇಣಿ

ಶೃಂಗೇರಿ: ವಿಶ್ವವಿದ್ಯಾನಿಲಯ ಧನ ಸಹಾಯ ಆಯೋಗದ ಸ್ವತಂತ್ರ ಅಂಗಸಂಸ್ಥೆಯಾದ ನ್ಯಾಕ್ (ರಾಷ್ಟ್ರೀಯ ಮೌಲ್ಯಂಕನ ಮತ್ತು ಪ್ರತ್ಯಾಯನ ಪರಿಷತ್) ಇತ್ತೀಚೆಗೆ ಇಲ್ಲಿನ ಜೆಸಿಬಿಎಂ ಕಾಲೇಜನ್ನು 'ಎ' ಶ್ರೇಣಿಯೆಂದು ಪರಿಗಣಿಸಿದೆ. ಕಾಲೇಜಿನ ಉತ್ಕೃಷ್ಟ ಮೂಲಭೂತ ಸೌಕರ್ಯ, ಶೈಕ್ಷಣಿಕ ಹಾಗೂ ಸಂಶೋಧನಾ ಚಟುವಟಿಕೆ, ವಿದ್ಯಾರ್ಥಿ ಬೆಂಬಲ, ಸೌಲಭ್ಯ, ಆಡಳಿತ ಮತ್ತು ನಿರ್ವಹಣೆಗಳನ್ನು ಪರಿಶೀಲಿಸಿ ಅತಿ ಹೆಚ್ಚಿನ ಶ್ರೇಣಿಯನ್ನು ನೀಡಲಾಗಿದೆ. ಬೆಂಗಳೂರಿನ ಮಾ. 24ರಂದು ನಡೆದ ಸಮಾರಂಭದಲ್ಲಿ ಶ್ರೇಣಿ ಉದ್ಘೋಷಣಾ ಪತ್ರವನ್ನು ಯುಜಿಸಿ ಅಧ್ಯಕ್ಷ ವೇದಪ್ರಕಾಶ್ ಕಾಲೇಜಿನ ಪ್ರಾಚಾರ್ಯ ಡಾ। ಎಚ್.ಸಿ. ವೀರಪ್ಪ ಗೌಡ ಅವರಿಗೆ ಪ್ರದಾನ ಮಾಡಿದರು. ನ್ಯಾಕ್ ಆಡಳಿತ ಮಂಡಳಿಯ ಅಧ್ಯಕ್ಷ ಪ್ರೊ। ದಿನೇಶ್ ಸಿಂಗ್ ಉಪಸ್ಥಿತರಿದ್ದರು.

ಪ್ರ ಕರ್ನಾಟಕ - 5.5.13

Scanned by CamScanner

ಜೆಸಿಬಿಎಂ ಕಾಲೇಜಿಗೆ ಉದ್ಘೋಷಣಾ ಪತ್ರ ಪ್ರದಾನ

ಶೃಂಗೇರಿ, ಮೇ 4: ಸ್ಥಳೀಯ ಶ್ರೀ ಜೆಸಿಬಿಎಂ ಕಾಲೇಜಿ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗದ ನ್ಯಾಕ್ ಸಂಸ್ಥೆ ನೀಡಿರುವ ಎ ಶ್ರೇಣಿಯ ಉದ್ಘೋಷಣಾ ಪತ್ರವನ್ನು ಇದೀಗ ಕಾಲೇಜು ಪ್ರಾಚಾರ್ಯರಿಗೆ ಹಸ್ತಾಂತರಿಸಿ ಉದ್ಘೋಷಣಾ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗಿದೆ.

ರಾಷ್ಟ್ರೀಯ ಮೌಲ್ಯಾಂಕನ ಮತ್ತು ಪ್ರತ್ಯಾಯನ ಪರಿಷತ್ (ನ್ಯಾಕ್) ಸಂಸ್ಥೆಯ ಶೈಕ್ಷಣಿಕ ಸಮಿತಿಯೊಂದು ಕಾಲೇಜಿನ ಮೂಲಭೂತ ಸೌಕರ್ಯ, ಶೈಕ್ಷಣಿಕ ಹಾಗೂ ಸಂಶೋಧನಾ ಚಟುವಟಿಕೆ, ವಿದ್ಯಾರ್ಥಿ ಬೆಂಬಲ, ಸೌಲಭ್ಯ ಮತ್ತು ಆಡಳಿತ-ನಿರ್ವಹಣೆ ಪರಿಶೀಲಿಸಿ ಉತ್ತಮ ಅಂಕಗಳನ್ನು ನೀಡಿ ವರದಿ ಸಲ್ಲಿಸಿತ್ತು.

ಈ ವರದಿಯ ಆಧಾರದಲ್ಲಿ ಸಂಸ್ಥೆಯು ಕಾಲೇಜಿಗೆ ಎ ಮೌಲ್ಯಾಂಕನ ನೀಡಿ ಪುರಸ್ಕರಿಸಿತ್ತು. ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಉದ್ಘೋಷಣಾ ಪತ್ರವನ್ನು ಡಾ. ಹೆಚ್.ಸಿ. ವೀರಪ್ಪಗೌಡರಿಗೆ ಹಸ್ತಾಂತರಿಸಲಾಯಿತು.

ಯುಜಿಸಿ ಅಧ್ಯಕ್ಷ ವೇದಪ್ರಕಾಶ್ ಉದ್ಘೋಷಣಾ ಪತ್ರ ಪ್ರದಾನಗೈದರು. ನ್ಯಾಕ್ ಆಡಳಿತ ಮಂಡಳಿ ಅಧ್ಯಕ್ಷ ಪ್ರೊ. ದಿನೇಶ್ ಸಿಂಘ್ ಉಪಸ್ಥಿತರಿದ್ದರು.

Scanned by CamScanner

ಪ್ರತಿಭಾವಂತ ವಿದ್ಯಾರ್ಥಿಗಳ ಆಯ್ಕೆ

ಶೃಂಗೇರಿ, ಜೂ. 5: ಇಲ್ಲಿನ ಶ್ರೀ ಜೆಸಿಬಿಎಂ ಕಾಲೇಜಿನ ಹಳೆ ವಿದ್ಯಾರ್ಥಿ ಸಂಘದಿಂದ ಉಚಿತ ವಿದ್ಯಾಭ್ಯಾಸ ಯೋಜನೆಗಾಗಿ ಪ್ರತಿಭಾವಂತ ಬಡ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗಿದೆ ಎಂದು ಸಂಘದ ಕಾರ್ಯದರ್ಶಿ ಡಾ.ಕೆ.ಎಸ್.ವೆಂಕಪ್ಪ ತಿಳಿಸಿದ್ದಾರೆ.

ಅಶ್ವಿತ ಸಿ.ಶೆಟ್ಟಿ (93.12%), ಕಿರಣ್ ಬಿ.ಕೆ. (93%), ಭೂಮಿಕ (87.52%), ಜೀವನ್ ಕುಮಾರ್ ಕೆ.ಸಿ. (87%), ರಕ್ಷಿತ ಬಿ.ಸಿ. (83.84%), ಶ್ವೇತಾ ಎಸ್. ಎಮ್. (81.76%), ನರೇಂದ್ರ ಕುಮಾರ್ (81.44%) ಆಯ್ಕೆಗೊಂಡ ವಿದ್ಯಾರ್ಥಿಗಳಾಗಿದ್ದಾರೆ. ಪ್ರಖ್ಯಾತ ಹೆಚ್.ಎ. (84.80%) ವಿದ್ಯಾರ್ಥಿಯ ಐದು ವರ್ಷದ ವಿದ್ಯಾಭ್ಯಾಸದ ಸಂಪೂರ್ಣ ಖರ್ಚನ್ನು ಸಂಘದ ಅಧ್ಯಕ್ಷ ಎ.ಸಿ.ವಜ್ರಪ್ಪ ಹಾಗೂ ಮಹೇಶ್ ಎ.ಸಿ. (85.76%) ಈ ವಿದ್ಯಾರ್ಥಿಯ ವಿದ್ಯಾಭ್ಯಾಸದ ಖರ್ಚನ್ನು ಹಿರಿಯ ವಿದ್ಯಾರ್ಥಿ ಹೆಚ್.ಟಿ.ರಮೇಶ್ ವಹಿಸಿಕೊಂಡಿದ್ದಾರೆ. ಸಂಘವು ಇವರಿಗೆ ಕೃತಜ್ಞತೆ ವ್ಯಕ್ತಪಡಿಸಿದೆ.

ಶೃಂಗೇರಿಯ ರಾಜ್ಯ ಸರಕಾರಿ ನೌಕರರ ಸಂಘ ಆಯೋಜಿಸಿದ್ದ ಸನ್ಮಾನ ಸಮಾರಂಭದಲ್ಲಿ ನಿವೃತ್ತ ನೌಕರ ಎನ್.ಎಸ್.ಲಕ್ಷ್ಮೀನರಸಿಂಹಮೂರ್ತಿ ಅವರನ್ನು ಗೌರವಿಸಲಾಯಿತು.

Scanned by CamScanner

ದೇಶದ ಆರ್ಥಿಕ ಸ್ಥಿತಿಯ ಅಧ್ಯಯನ ಅಗತ್ಯ

ಶೃಂಗೇರಿ: ದೇಶದ ಅಭಿವೃದ್ಧಿಗೆ ಆಯಾ ದೇಶದ ಆರ್ಥಿಕ ಸ್ಥಿತಿಯ ಅಧ್ಯಯನ ಅಗತ್ಯ ಎಂದು ಕುವೆಂಪು ವಿವಿಯ ರಿಜಿಸ್ಟ್ರಾರ್ ಡಾ। ಎ. ರಾಮೇಗೌಡ ಹೇಳಿದರು.

ಇಲ್ಲಿನ ಜೆಸಿಬಿಎಂ ಕಾಲೇಜ್ ಮತ್ತು ಕುವೆಂಪು ವಿವಿಯ ಅರ್ಥಶಾಸ್ತ್ರ ಉಪನ್ಯಾಸಕರ ಅಸೋಸಿಯೇಷನ್ ಆಯೋಜಿಸಿದ್ದ ಅರ್ಥಶಾಸ್ತ್ರದಲ್ಲಿ ಗಣಿತದ ಉಪಯೋಗದ ಕುರಿತು ಶನಿವಾರ ನಡೆದ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಅರ್ಥಶಾಸ್ತ್ರ ಎಲ್ಲರಿಗೂ ಅಗತ್ಯವಾಗಿದೆ. ಆರ್ಥಿಕ ಸ್ಥಿತಿ ಅಭಿವೃದ್ಧಿಗೆ ಪೂರಕವಾಗಿದೆ. ಮುಂದುವರಿದ ಅಮೆರಿಕಾ ದೇಶದಲ್ಲಿ ಆರ್ಥಿಕ ಸ್ಥಿತಿ ಏರಿಳಿತ ಕಂಡರೂ ಭಾರತದ ಆರ್ಥಿಕ ಸ್ಥಿತಿ ಹಿಡಿತದಿಂದ ದೇಶ ಆರ್ಥಿಕವಾಗಿ ಸದೃಢವಾಗಿತ್ತು. ಸಂಪತ್ತು ಆದಾಯದ ಮೂಲಕವೇ ಬರಬೇಕಿದ್ದು ಗಳಿಕೆಯಲ್ಲಿ ಖರ್ಚು ಮತ್ತು ಉಳಿತಾಯ ಎಷ್ಟು ಎಂಬುದರ ಖಚಿತ ಮಾಹಿತಿ ಅಗತ್ಯ. ಅಭಿವೃದ್ಧಿ ಕೈಗೊಳ್ಳಬೇಕಾದ ಸರ್ಕಾರಕ್ಕೆ ಆದಾಯ ಮತ್ತು ಖರ್ಚು ಎಷ್ಟಿರಬೇಕು ಎಂಬುದರ ಆರ್ಥಿಕ ಲೆಕ್ಕಾಚಾರ ಅಗತ್ಯವಾಗಿದ್ದು ಇಂಥಹ ಆರ್ಥಿಕ ವಿಶ್ಲೇಷಣೆ ಅಗತ್ಯವಾಗಿದೆ. ಎಲ್ಲಾ ಕ್ಷೇತ್ರಗಳಲ್ಲಿಯೂ ಆರ್ಥಿಕ ಸ್ಥಿತಿ ಬಗ್ಗೆ ಅಧ್ಯಯನ ಅಗತ್ಯವಾಗಿದೆ ಎಂದರು.



ಶೃಂಗೇರಿ: ಜೆಸಿಬಿಎಂ ಕಾಲೇಜು, ಕುವೆಂಪು ವಿವಿಯ ಅರ್ಥಶಾಸ್ತ್ರ ಉಪನ್ಯಾಸಕರ ಅಸೋಸಿಯೇಷನ್ ಆಯೋಜಿಸಿದ್ದ ಕಾರ್ಯಾಗಾರದಲ್ಲಿ ಡಾ।ಎ. ರಾಮೇಗೌಡ ಮಾತನಾಡಿದರು.

ಕುವೆಂಪು ವಿವಿಯ ಡಾ। ಜಯರಾಮಭಟ್ ಮಾತನಾಡಿ, ಅರ್ಥಶಾಸ್ತ್ರ ಜೀವನ ಒಂದಕ್ಕೊಂದು ಪೂರಕವಾಗಿದೆ. ಆರ್ಥಿಕವಾಗಿ ಯಶಸ್ಸು ಗಳಿಸಿದವನು ಜೀವನದಲ್ಲಿ ಯಶಸ್ಸು ಗಳಿಸುತ್ತಾನೆ. ಯೋಜನೆಗಳನ್ನು ರೂಪಿಸುವಾಗ ಮತ್ತು ಅನುಷ್ಠಾನಗೊಳಿಸುವಾಗಲೂ ಅರ್ಥಶಾಸ್ತ್ರ ಮುಖ್ಯವಾಗಿದೆ ಎಂದರು.

ಪ್ರಾಚಾರ್ಯ ಡಾ। ಎಚ್.ಸಿ. ವೀರಪ್ಪ ಗೌಡ ಅಧ್ಯಕ್ಷತೆ ವಹಿಸಿ ಮಾತನಾಡಿ, ಮುಂಬರುವ ಶೈಕ್ಷಣಿಕ ವರ್ಷದಿಂದಲೇ ಸ್ನಾತೋಕೊತ್ತರ ವಿಭಾಗ ಆರಂಭಿಸುತ್ತಿದ್ದು ಸ್ಥಳೀಯ ವಿದ್ಯಾರ್ಥಿಗಳಿಗೆ ಸಹಾಯಕವಾಗಲಿದೆ ಎಂದರು. ರಾಚಪ್ಪ ಡಾ। ಎಂ.ಎಸ್. ಮಂಜುನಾಥ್ ಉಪಸ್ಥಿತರಿದ್ದರು. ಮಂಗಳೂರು ವಿವಿಯ ಡಾ। ಪಿ.ಎ. ರೆಗೋ, ಕುವೆಂಪು ವಿವಿಯ ಡಾ। ಎಸ್.ಎನ್. ಯೋಗೇಶ್ ಸಂಪನ್ಮೂಲ ವ್ಯಕ್ತಿಗಳಾಗಿ ವಿವಿಧ ವಿಷಯಗಳ ಬಗ್ಗೆ ವಿಚಾರ ಮಂಡಿಸಿದರು.

ಉದಯವಾಣಿ ಮಂಗಳವಾರ ದಿನಾಂಕ 21.2.2013

Scanned by CamScanner

ಆರ್ಥಿಕ ಅಭಿವೃದ್ಧಿಗೆ ಅರ್ಥಶಾಸ್ತ್ರ ಪ್ರೇರಕ

■ ವಿಕ ಸುದ್ದಿಲೋಕ ಶೃಂಗೇರಿ

ವಿಕ ಚಿತ್ರಲೋಕ



ಶೃಂಗೇರಿ ಜೆಸಿಬಿಎಂ ಕಾಲೇಜು ಮತ್ತು ಕುವೆಂಪು ವಿವಿಯ ಅರ್ಥಶಾಸ್ತ್ರ ಉಪನ್ಯಾಸಕರ ಅಸೋಸಿಯೇಷನ್ ಆಯೋಜಿಸಿದ್ದ ಅರ್ಥಶಾಸ್ತ್ರದಲ್ಲಿ ಗಣಿತದ ಉಪಯೋಗ ಕಾರ್ಯಾಗಾರವನ್ನು ಡಾ.ಎ.ರಾಮೇಗೌಡ ಉದ್ಘಾಟಿಸಿದರು.

ಅರ್ಥ ಶಾಸ್ತ್ರ ಎಲ್ಲರಿಗೂ ಅಗತ್ಯವಾಗಿದ್ದು, ಆರ್ಥಿಕ ಸ್ಥಿತಿ ಅಭಿವೃದ್ಧಿಗೆ ಪ್ರೇರಕವಾಗಿದೆ ಎಂದು ಕುವೆಂಪು ವಿವಿ ಕುಲಸಚಿವ ಡಾ.ಎ.ರಾಮೇಗೌಡ ಹೇಳಿದರು.

ಅವರು ಶನಿವಾರ ಜೆಸಿಬಿಎಂ ಕಾಲೇಜು ಮತ್ತು ಕುವೆಂಪು ವಿವಿಯ ಅರ್ಥಶಾಸ್ತ್ರ ಉಪನ್ಯಾಸಕರ ಅಸೋಸಿಯೇಷನ್ ಆಯೋಜಿಸಿದ್ದ ಅರ್ಥಶಾಸ್ತ್ರದಲ್ಲಿ ಗಣಿತದ ಉಪಯೋಗದ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ದೇಶದ ಅಭಿವೃದ್ಧಿಗೆ ಆಯಾ ದೇಶದ ಆರ್ಥಿಕ ಸ್ಥಿತಿ ಅಧ್ಯಯನ ಅಗತ್ಯ. ವಿಜ್ಞಾನ, ತಂತ್ರಜ್ಞಾನ ಬಳಸಿಕೊಳ್ಳಲು ಆರ್ಥಿಕತೆ ಮುಖ್ಯವಾಗಿದೆ. ಮುಂದುವರಿದ ಅಮೆರಿಕಾ ದೇಶದಲ್ಲಿ ಆರ್ಥಿಕ ಸ್ಥಿತಿ ಏರಿಳಿತ ಕಂಡರೂ ಭಾರತದ ಆರ್ಥಿಕ ಸ್ಥಿತಿ ಹಿಡಿತದಿಂದ ದೇಶ ಆರ್ಥಿಕವಾಗಿ ಸದೃಢವಾಗಿತ್ತು. ಸಂಪತ್ತು ಆದಾಯದ ಮೂಲಕವೇ ಬರಬೇಕಿದ್ದು, ಗಳಿಕೆಯಲ್ಲಿ ಖರ್ಚು ಮತ್ತು ಉಳಿತಾಯ ಎಷ್ಟು ಎಂಬುದರ ವಿಚಿತ ಮಾಹಿತಿ ಅಗತ್ಯ. ಇಂತಹ ಕಾರ್ಯಾಗಾರಗಳು ಅರ್ಥ ಶಾಸ್ತ್ರದ ಮತ್ತಷ್ಟು ಉಪಯೋಗ ತಿಳಿಸುತ್ತವೆ ಎಂದರು.

ಕುವೆಂಪು ವಿವಿಯ ಡಾ.ಜಯರಾಮ ಭಟ್ ಮಾತನಾಡಿ, ಅರ್ಥಶಾಸ್ತ್ರ ಮತ್ತು ಜೀವನ ಒಂದಕ್ಕೊಂದು ಪೂರಕವಾಗಿದೆ. ಯೋಜನೆಗಳನ್ನು ರೂಪಿಸುವಾಗ ಮತ್ತು ಅನುಷ್ಠಾನಗೊಳಿಸುವಾಗಲೂ ಅರ್ಥಶಾಸ್ತ್ರ ಮುಖ್ಯ ಎಂದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಚಾರ್ಯ ಡಾ.ಎಚ್.ಸಿ.ವೀರಪ್ಪಗೌಡ ಮಾತನಾಡಿ, ಮುಂಬರುವ ಶೈಕ್ಷಣಿಕ ವರ್ಷದಿಂದಲೇ ಸ್ನಾತೋಕೊತ್ತರ ವಿಭಾಗ ಆರಂಭಿಸುತ್ತಿದ್ದು, ಸ್ಥಳೀಯ ವಿದ್ಯಾರ್ಥಿಗಳಿಗೆ ಸಹಾಯಕವಾಗಲಿದೆ ಎಂದರು.

ಸಮಾರಂಭದಲ್ಲಿ ಪ್ರೊ.ರಾಜಪ್ಪ, ಡಾ.ಎಂ.ಎಸ್.ಮಂಜುನಾಥ್ ಹಾಜರಿದ್ದರು.

ಉದ್ಘಾಟನಾ ಕಾರ್ಯಕ್ರಮದ ನಂತರ ಮಂಗಳೂರು ವಿವಿಯ ಡಾ.ಪಿ.ಎ.ರೆಗೋ ಮತ್ತು ಕುವೆಂಪು ವಿವಿಯ ಡಾ.ಎಸ್.ಎನ್.ಯೋಗೇಶ್ ಸಂಪನ್ಮೂಲ ವ್ಯಕ್ತಿಗಳಾಗಿ ವಿವಿಧ ವಿಷಯಗಳ ಬಗ್ಗೆ ವಿಚಾರ ಮಂಡಿಸಿದರು.

ವಿಜಯ ಕರ್ನಾಟಕ ದಿನಾಂಕ 21 ಜುಲೈ 2013

Scanned by CamScanner

ಒಂದು ದಿನದ ಕಾರ್ಯಾಗಾರ

ತೃಂಗೇರಿ, ಏ. 17: ನಗರದ ಜೆಸಿಬಿಎಂ ಕಾಲೇಜಿನಲ್ಲಿ ಕುವೆಂಪು ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರ ಅಧ್ಯಾಪಕರ ಸಂಘದಿಂದ ಆಯೋಜಿಸಿರುವ ಅರ್ಥಶಾಸ್ತ್ರದಲ್ಲಿ ಗಣಿತದ ಉಪಯೋಗ ವಿಷಯ ಕುರಿತ ಒಂದು ದಿನದ ಕಾರ್ಯಾಗಾರವು ಇದೇ ದಿ.20 ರಂದು ಪೂರ್ವಾಹ್ನ ನಡೆಯಲಿದೆ.

ವಿವಿಯ ರಿಜಿಸ್ಟ್ರಾರ್ ಡಾ. ಾಮೇಗೌಡರು ಕಾರ್ಯಾಗಾರ ಉದ್ಘಾಟಿಸುವರು. ಡಾ.ಬಿ. ಯರಾಮೆ ಭಟ್, ಅರ್ಥಶಾಸ್ತ್ರ ಅಧ್ಯಾಪಕರ ಸಂಘದ, ಪ್ರೊ.ಹೆಚ್.ಾಚಪ್ಪ ಹಾಗೂ ಡಾ.ಎಂ.ಎಸ್. ಂಜುನಾಥ ಅತಿಥಿಗಳಾಗಿ ಭಾಗವಹಿಸುವರು.

ಮಂಗಳೂರು ವಿ.ವಿ.ಯ ಡಾ.ಪಿ.ಎ. ರೇಗೋ ಮತ್ತು ಕುವೆಂಪು ವಿ.ವಿ.ಯ ಡಾ.ಎಸ್.ಎನ್. ಯೋಗೀಶ್ ಕಾರ್ಯಾಗಾರದ ಸಂಪನ್ಮೂಲ ವ್ಯಕ್ತಿಯಾಗಿ ಪಾಲ್ಗೊಳ್ಳಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

Scanned by CamScanner

ಅಭಿಯಾನ

ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ಬುಧವಾರ ನಡೆದ ಮತದಾರರ ಜಾಗೃತಿ ಅಭಿಯಾನದಲ್ಲಿ ಶಿಕ್ಷಕ ಶಿವಕುಮಾರ್ ಮಾತನಾಡಿದರು.



Scanned by CamScanner

'ವಿದ್ಯೆ ಉಪದೇಶವೇ ಉಪನಿಷತ್‌ನ ಉದ್ದೇಶ'

ಶೃಂಗೇರಿ: ವಿದ್ಯೆಯನ್ನು ಉಪದೇಶಿಸುವುದು ಉಪನಿಷತ್ತುಗಳ ಪ್ರಧಾನ ಉದ್ದೇಶವಾಗಿದ್ದು, ಶಿಕ್ಷಣದ ಅನೇಕ ಅಂಶಗಳು ಇದರಲ್ಲಿ ಕಂಡುಬರುತ್ತದೆ ಎಂದು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯದ ಕುಲಪತಿ ಡಾ.ಮಲ್ಲೇಪುರಂ ಜಿ.ವೆಂಕಟೇಶ್ ಹೇಳಿದರು.

ಜೆಸಿಬಿಎಂ ಕಾಲೇಜಿನಲ್ಲಿ ಯುಜಿಸಿ ವತಿಯಿಂದ ಇತ್ತೀಚೆಗೆ ಆಯೋಜಿಸಿದ್ದ ಸಂಸ್ಕೃತ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

ಇದೇ ಸಂದರ್ಭದಲ್ಲಿ ತಿರುಪತಿ, ಮುಂಬೈ, ಹೈದರಾಬಾದ್, ಗುರುವಾಯೂರ್, ಹರಿಹರಪುರ, ಮಂಗಳೂರಿನಿಂದ ಆಗಮಿಸಿದ್ದ ಸಂಸ್ಕೃತ ಉಪನ್ಯಾಸಕರು ಮತ್ತು ಶೃಂಗೇರಿ ರಾಷ್ಟ್ರೀಯ ಸಂಸ್ಕೃತ ಸಂಸ್ಥಾನದ ಸಂಶೋಧನಾ ವಿದ್ಯಾರ್ಥಿಗಳು ಉಪನಿಷತ್ತುಗಳಲ್ಲಿ ಪ್ರತಿಪಾದಿತವಾಗಿರುವ ಬೋಧನಾ ರೀತಿ, ವಿದ್ಯಾರ್ಥಿಗಳಲ್ಲಿನ ವಿಧಗಳು, ಶಿಕ್ಷಣದ ಸ್ವರೂಪ ಮತ್ತು ಲಕ್ಷಣ, ವ್ಯಕ್ತಿತ್ವ ವಿಕಾಸ, ಮೌಲ್ಯಶಿಕ್ಷಣ, ಅಧ್ಯಯನ ರೀತಿಗಳು, ವ್ಯಕ್ತಿತ್ವ ಪರೀಕ್ಷಾ ತಂತ್ರಗಳು, ಮನೋವೈಜ್ಞಾನಿಕ ವಿಧಗಳು, ಚರ್ಚಾ ಪದ್ಧತಿ, ಗುರು-ಶಿಷ್ಯ ಸಂಬಂಧ, ಶಿಕ್ಷಣೋದ್ದೇಶ ಮೊದಲಾದ ವಿಚಾರಗಳ 18 ಪ್ರಬಂಧಗಳನ್ನು ಮಂಡಿಸಿದರು.

ಕಾಲೇಜಿನ ಪ್ರಾಂಶುಪಾಲ ಎಚ್.ಸಿ.ವೀರಪ್ಪಗೌಡ ಅಧ್ಯಕ್ಷತೆ ವಹಿಸಿದ್ದರು. ತಿರುಪತಿ ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠದ ಪ್ರಾಧ್ಯಾಪಕ ಡಾ. ಮುರಳೀಧರ ಶರ್ಮ, ರಾಜೀವಗಾಂಧಿ ಸಂಸ್ಕೃತ ಕಾಲೇಜಿನ ಪ್ರಾಂಶುಪಾಲ ಎನ್.ಆರ್.ಕಣ್ಣನ್ ಮತ್ತಿತರರು ಇದ್ದರು.

Scanned by CamScanner



ಶೃಂಗೇರಿಯ ವಿ.ಆರ್. ಗೌರೀಶಂಕರ್ ಸಭಾಂಗಣದಲ್ಲಿ ಬುಧವಾರ ನಡೆದ ವಿಶ್ವರಂಗಭೂಮಿ ದಿನಾಚರಣೆಯಲ್ಲಿ ಜೆಸಿಬಿಎಂ ಕಾಲೇಜಿನ ಎಸ್.ಎಸ್.ಎಸ್ ವಿದ್ಯಾರ್ಥಿಗಳಿಂದ 'ಅರಮನೆ ಕಥಾಪ್ರಸಂಗ ನಾಟಕ' ಪ್ರದರ್ಶಿಸಲಾಯಿತು.

'ರಂಗಭೂಮಿ ವಿಶಿಷ್ಟ ಮಾಧ್ಯಮ'

ಪ್ರಜಾವಾಣಿ ವಾರ್ತೆ

ಶೃಂಗೇರಿ: ಅಭಿನಯ, ಸಂಗೀತ, ವಸ್ತ್ರವಿನ್ಯಾಸದಿಂದ ಕೂಡಿದ ರಂಗಭೂಮಿಯು ವಿಶಿಷ್ಟ ಸಂವಹನ ಮಾಧ್ಯಮವಾಗಿದೆ ಎಂದು ನಿನಾಸಂ ಕಲಾವಿದ ತೋರಣಗದ್ದೆ ನಟರಾಜರಾವ್ ಹೇಳಿದರು.

ಪಟ್ಟಣದ ವಿ.ಆರ್.ಗೌರೀಶಂಕರ್ ಸಭಾಂಗಣದಲ್ಲಿ ಬುಧವಾರ ಭಾರತೀ ತೀರ್ಥ ಸಾಂಸ್ಕೃತಿಕ ಟ್ರಸ್ಟ್ ಆಯೋಜಿಸಿದ್ದ ವಿಶ್ವರಂಗಭೂಮಿ ದಿನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಆಧುನಿಕ ಜೀವನದ ಭರಾಟೆಯಲ್ಲಿ ಹಲವು ದಶಕಗಳ ಕಾಲ ರಂಗಭೂಮಿಯನ್ನು ಮುನ್ನಡೆಸಿದ ಹಿರಿಯ ಕಲಾವಿದರು ಅಪರಿಚಿತರಂತೆ ಭಾಸವಾಗುತ್ತಿದ್ದರೂ, ಬದಲಾದ ಅಭಿರುಚಿಗೆ ತಕ್ಕಂತೆ ರಂಗಭೂಮಿಯನ್ನೂ ಮಾರ್ಪಾಡು ಮಾಡಿಕೊಂಡಲ್ಲಿ ಹಿಂದಿನ ರಂಗವೈಭವವನ್ನು ಪುನಃ ಕಾಣಲು ಸಾಧ್ಯ ಎಂದರು.

ಶೈಲಜಾ ರತ್ನಾಕರ ಹೆಗ್ಡೆ ಅಧ್ಯಕ್ಷತೆ ವಹಿಸಿದ್ದರು. ಕಿರುತೆರೆ ಕಲಾವಿದ ರಮೇಶ್ ಬೇಗಾರ್, ಜೆಸಿಬಿಎಂ ಕಾಲೇಜಿನ ಎಸ್.ಎಸ್.ಎಸ್ ಅಧಿಕಾರಿ ಲಕ್ಷ್ಮಿ ನಾರಾಯಣ್, ರಂಗನಟ ಯಡದಾಳು ಸುರೇಂದ್ರಗೌಡ, ಉಮೇಶ್, ಸುರೇಂದ್ರ ಮತ್ತಿತರರು ಇದ್ದರು.

ಇದೇ ಸಂದರ್ಭದಲ್ಲಿ ಎಸ್.ಎಸ್.ಎಸ್ ನ ಯುವರಂಗಸೇನೆ ವತಿಯಿಂದ ಅರಮನೆ ಕಥಾ ಪ್ರಸಂಗ ನಾಟಕ ಪ್ರದರ್ಶಿಸಲಾಯಿತು. ಸಂತ ತುಕಾರಾಂ ನಾಟಕದಿಂದ ಆಯ್ದ ರಂಗಗೀತೆಗಳನ್ನು ಕಣದಮನೆ ಜಗದೀಶ್ ಪ್ರಸ್ತುತ ಪಡಿಸಿದರು.

Scanned by CamScanner

ಉಪನಿಷತ್ತುಗಳಲ್ಲಿ ಶಿಕ್ಷಣದ ಅಂಶಗಳು



Scanned by CamScanner

ವಿಜಯ ಕರ್ನಾಟಕ - ೩೦-೩-೧೩

ಉಪನಿಷತ್‌ನಲ್ಲಿ ಶಿಕ್ಷಣದ ಅಂಶಗಳಿವೆ

ಶೃಂಗೇರಿ: ಉಪನಿಷತ್‌ಗಳಲ್ಲಿ ಶಿಕ್ಷಣದ ಅನೇಕ ಉತ್ತಮ ಅಂಶಗಳು ಕಂಡು ಬರುತ್ತವೆ ಎಂದು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿ ಡಾ. ಮಲ್ಲೇಪುರಂ ಜಿ. ವೆಂಕಟೇಶ್ ಹೇಳಿದರು.

ಪಟ್ಟಣದ ಜೆಸಿಬಿಎಂ ಕಾಲೇಜಿನಲ್ಲಿ ಯುಜಿಸಿ ಪ್ರಾಯೋಜಿತ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದರು.

ಬ್ರಹ್ಮವಿದ್ಯೆಯನ್ನು ಉಪದೇಶಿಸುವುದೇ ಉಪನಿಷತ್‌ಗಳ ಪ್ರಧಾನ ಉದ್ದೇಶ. ಇಲ್ಲಿ ವಿಶೇಷವಾಗಿ ಸತ್ಕಾಮ, ಉಪಮನ್ಯು ಭೃಗು, ಉದ್ದಾಲಕ ಮೊದಲಾದ ಬಾಲಕರು ಶಿಷ್ಯರಾಗಿ ನಡೆದುಕೊಂಡ ರೀತಿ, ಅವರಿಗೆ ಗುರುಗಳು ಶಿಕ್ಷಣ ನೀಡಿದ ಪರಿ ಗಮನಾರ್ಹವಾಗಿದೆ. ಇವುಗಳಲ್ಲಿ ಪ್ರತಿಪಾದಿತವಾಗಿರುವ ಗುಣಗಳನ್ನು ಶಿಕ್ಷಕರು ಹಾಗೂ ವಿದ್ಯಾರ್ಥಿಗಳಿಬ್ಬರೂ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ತಿರುಪತಿಯ ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠದ ಪ್ರಾಧ್ಯಾಪಕ ಡಾ. ಮುರಳೀಧರ ಶರ್ಮಾ ಮಾತನಾಡಿ, ವ್ಯಕ್ತಿತ್ವ ವಿಕಾಸ, ಗುರು-ಶಿಷ್ಯ ಸಂಬಂಧ, ಗುರು-ಶಿಷ್ಯರ ಲಕ್ಷಣಗಳು ಮುಂತಾದ ವಿಚಾರ ಕುರಿತು ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಚಾರ್ಯ ಡಾ. ಎಚ್.ಸಿ. ವೀರಭದ್ರಗೌಡ ಮಾತನಾಡಿ, ಶಿಷ್ಯರಿಗೆ ಇರಬೇಕಾದ ವಿನಯ, ಪ್ರಶ್ನೆ ಮಾಡುವ ಸ್ವಭಾವ, ಸೇವಾ ಮನೋಭಾವ ಮತ್ತು ಮನಸ್ಸಿನ ನಿಗ್ರಹಗಳ ಬಗೆಗೆ ಉಪನಿಷತ್‌ಗಳು ನೀಡಿರುವ ಮಹತ್ವವನ್ನು ಉಲ್ಲೇಖಿಸಿದರು.

ತಿರುಪತಿ, ಮುಂಬೈ, ಹೈದರಾಬಾದ್, ಗುರುವಾಯೂರ್, ಪರಿಪರಮರ, ಮಂಗಳೂರುನಿಂದ ಬಂದಿದ್ದ ವಿದ್ವಾಂಸರು, ಶೃಂಗೇರಿ ರಾಷ್ಟ್ರೀಯ ಸಂಸ್ಕೃತ ಸಂಸ್ಥಾನದ ವಿದ್ವಾಂಸರು ಮತ್ತು ಸಂಶೋಧನಾ ವಿದ್ಯಾರ್ಥಿಗಳು ಉಪನಿಷತ್‌ಗಳಲ್ಲಿ ಪ್ರತಿಪಾದಿತವಾಗಿರುವ ಬೋಧನಾ ರೀತಿ, ವಿದ್ಯಾರ್ಥಿಗಳಲ್ಲಿನ ವಿಧಗಳು, ಶಿಕ್ಷಣದ ಸ್ವರೂಪ ಮತ್ತು ಲಕ್ಷಣ, ವ್ಯಕ್ತಿತ್ವ ವಿಕಾಸ, ಮೌಲ್ಯಶಿಕ್ಷಣ, ಅಧ್ಯಯನ ರೀತಿ, ವ್ಯಕ್ತಿತ್ವ ಪರೀಕ್ಷಾ ತಂತ್ರಗಳು ಶಿಕ್ಷಣ, ಮನೋವೈಜ್ಞಾನಿಕ ವಿಧಗಳು, ಚರ್ಚಾ ಪದ್ಧತಿ, ಗುರು-ಶಿಷ್ಯ ಸಂಬಂಧ, ಶಿಕ್ಷಣೋದ್ದೇಶ ಮೊದಲಾದ ವಿಚಾರಗಳ ಬಗೆಗೆ ಪ್ರಬಂಧ ಮಂಡಿಸಿದರು. ಪ್ರೊ. ಎನ್. ಆರ್. ಕಣ್ಣನ್ ಉಪಸ್ಥಿತರಿದ್ದರು.



ಶೃಂಗೇರಿ ಜೆಸಿಬಿಎಂ ಕಾಲೇಜಿನಲ್ಲಿ ಯುಜಿಸಿ ಪ್ರಾಯೋಜಿತ ವಿಚಾರ ಸಂಕಿರಣವನ್ನು ಸಂಸ್ಕೃತ ವಿವಿ ಕುಲಪತಿ ಡಾ. ಮಲ್ಲೇಪುರಂ ಜಿ. ವೆಂಕಟೇಶ್ ಉದ್ಘಾಟಿಸಿದರು.

Scanned by CamScanner

ತಿಳುವಳಿಕೆಯ ಜ್ಞಾನ ಪರಿಪೂರ್ಣಗೊಳ್ಳುವುದೇ ಶಿಕ್ಷಣ-ಡಾ. ಹೆಚ್. ಶಾಂತಾರಾಮ್



ಶೃಂಗೇರಿ: ನಿಜವಾದ ಶಿಕ್ಷಣವು ಶಾಲಾ ಕಾಲೇಜಿನ ಕೊಠಡಿಯೊಳಗಿನ ಕಲಿಕೆಗಿಂತ ಭಿನ್ನವಾಗಿದ್ದು ಅದು ಆರೋಗ್ಯವಂತ ಜೀವನ ಮತ್ತು ಪರಸ್ಪರರೊಳಗಿನ ತಿಳುವಳಿಕೆಯ ಜ್ಞಾನದಿಂದಾಗಿ ಪರಿಪೂರ್ಣಗೊಳ್ಳುವುದೆಂದು ಮಣಿಪಾಲದ ಅಕಾಡೆಮಿ ಆಫ್ ಜನರಲ್ ಎಜುಕೇಶನ್‌ನ ಆಡಳಿತಾಧಿಕಾರಿ ಡಾ. ಹೆಚ್.ಶಾಂತಾರಾಮ್ ಅಭಿಪ್ರಾಯಪಟ್ಟಿದ್ದಾರೆ. ಅವರು, ಭಾನುವಾರ ಶೃಂಗೇರಿಯ ಶ್ರೀಜೆಸಿಬಿಎಂ ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಮೂಲಕ ಸಂಘಟಿಸಲಾಗಿದ್ದ ರಾಷ್ಟ್ರೀಯ ಭಾವೈಕ್ಯತಾ ಶಿಬಿರದ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು.ಸಂಪದ್ಭರಿತ ಮತ್ತು ಸುಖೀ ಜೀವನದ ರಾಮರಾಜ್ಯವಿದ್ದ ವರ್ಣನೆಯನ್ನು ಕೇಳಿ ತಿಳಿದುಕೊಂಡಿದ್ದೇವೆ.ಮತ್ತೊಮ್ಮೆ ಇದನ್ನು ಸಾಕಾರಗೊಳಿಸುವ ಶಕ್ತಿ ದೇಶದ ಯುವಜನಾಂಗಕ್ಕೆ ಇದೆ ಎಂದ ಶಾಂತಾರಾಮ್ ಈ ದಿಕ್ಕಿನಲ್ಲಿ ಮುನ್ನಡೆಯಿರಿ ಎಂದು ಶಿಬಿರಾರ್ಥಿಗಳಿಗೆ ಕರೆ ನೀಡಿದರು.

ರಾ.ಸೇವಾ ಯೋಜನೆಯ ಕಾರ್ಯಕ್ರಮ ಸಲಹೆಗಾರ ಕೆ.ವಿ. ಭಾದ್ರಿ ನರಸಿಂಹಯ್ಯ ಮಾತನಾಡಿ, ವೈವಿಧ್ಯಮಯ ಜಾತಿ ಪಂಥಗಳನ್ನೊಳಗೊಂಡ ಭಾರತದಲ್ಲಿ ಧಾರ್ಮಿಕ ಮೂಲಭೂತವಾದವು ಅಂತರ್ಗತವಾದ ಸಹಜ ಮನೋಭಾವವಾಗಿದೆ. ಇಂತಹ ಶಿಬಿರಗಳು ಎಲ್ಲಾ ಜಾತಿ ಧರ್ಮವನ್ನು ಗೌರವಿಸುವ ಮನೋಭಾವದ ಕಡೆಗೆ ಸ್ವಯಂಸೇವಕರನ್ನು ಕೊಂಡೊಯ್ಯುವುದಾಗಿ ಹೇಳಿದರು.

ರಾಜ್ಯ ಸಂಪರ್ಕಾಧಿಕಾರಿ ಡಾ. ಕೆ.ಜಿ.ಧನಂಜಯ ಮಾತನಾಡಿ, ರಾಷ್ಟ್ರಮಟ್ಟದಲ್ಲಿ 33 ಲಕ್ಷ ಎನ್‌ಎಸ್ಸೆಸ್ ಕಾರ್ಯಕರ್ತರಿದ್ದು, ರಾಜ್ಯದಲ್ಲಿ 3 ಲಕ್ಷ ಯುವಜನರ ಪಡೆ ಇದೆ. ಈ ಸಮೂಹದಿಂದ ಒಳ್ಳೆಯ ನಾಯಕನನ್ನು ಮತ್ತು ಒಳ್ಳೆಯ ಅನುಯಾಯಿಗಳನ್ನು ತಯಾರು ಮಾಡುವುದು ನಮ್ಮ ಗುರಿಯಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಡಾ.ಹೆಚ್.ಸಿ.ವೀರಪ್ಪಗೌಡರು ಮಾತನಾಡಿ, ಆದಿ ಶಂಕರಾಚಾರ್ಯರು ರಾಷ್ಟ್ರೀಯ ಭಾವೈಕ್ಯತೆಯನ್ನು ಪ್ರತಿಪಾದಿಸಿದ ಅತ್ಯಂತ ಪುರಾತನ ದೃಷ್ಟಾರರಾಗಿದ್ದಾರೆ.ಚತುರಾಮ್ನಾಯ ಪೀಠ ಸ್ಥಾಪನೆಯೊಂದಿಗೆ ಧರ್ಮಾನುಷ್ಠಾನಕ್ಕಾಗಿ ಉತ್ತರದವರನ್ನು ದಕ್ಷಿಣಕ್ಕೂ ಪೂರ್ವ ರಾಜ್ಯದವರನ್ನು ಪಶ್ಚಿಮಕ್ಕೂ ನಿಯುಕ್ತಿ ಮಾಡಿದ ಚತುರರಾಗಿದ್ದಾರೆ. ಇಂತಹ ಕ್ಷೇತ್ರದಲ್ಲಿ ಒಂದೊಂದು ರಾಜ್ಯಗಳಿಂದ ಬಂದ ಸ್ವಯಂ ಸೇವಕರು ಈ ಶಿಬಿರದ ಮೂಲಕ ಬಹಳಷ್ಟನ್ನು ಕಲಿಯಲು ಸಾಧ್ಯವಿದೆ ಎಂದು ತಿಳಿಸಿದರು.

ಕ್ಷೇತ್ರದ ವಿಧಾನ ಸಭಾ ಸದಸ್ಯ ಡಿ.ಎನ್.ಜೀವರಾಜ್ ಶಿಬಿರ ಉದ್ಘಾಟಿಸಿ ಶುಭ ಕೋರಿದರು. ಕುಂದನ್ ಬಸವರಾಜ್ ಪ್ರಾಸ್ತಾವಿಕ ನುಡಿಗೈದರು.ಎನ್.ಹೆಚ್.ಲಕ್ಷ್ಮೀನಾರಾಯಣ ಸ್ವಾಗತಿಸಿದರು. ಸಿ.ವಿ.ಗಿರಿಧರಶಾಸ್ತ್ರಿ ನಿರೂಪಿಸಿ ಎಂ.ಸ್ವಾಮಿ ಧನ್ಯವಾದ ಸಮರ್ಪಿಸಿದರು. ಉದ್ಘಾಟನಾ ಕಾರ್ಯಕ್ರಮದ ತರುವಾಯ ಪಟ್ಟಣದ ಬೀದಿಗಳಲ್ಲಿ ಪಾರಂಪರಿಕ ಕಲಾ ಮೆರವಣಿಗೆಯು ನಡೆಯಿತು.ಈ ಶಿಬಿರದಲ್ಲಿ ಕರ್ನಾಟಕ, ಅಸ್ಸಾಂ,ಗುಜರಾತ್, ಆಂಧ್ರಪ್ರದೇಶ, ತಮಿಳುನಾಡು ಮತ್ತು ಕೇರಳ ರಾಜ್ಯಗಳಿಂದ ಬಂದ 200 ಕ್ಕೂ ಅಧಿಕ ಸ್ವಯಂ ಸೇವಕರುಗಳು ಭಾಗವಹಿಸಿದ್ದಾರೆ. ಏಳು ದಿನಗಳ ಈ ಶಿಬಿರದ ಸಮಾರೋಪವು ಫೆ.18ರಂದು ನಡೆಯುವುದು.

Scanned by CamScanner